

# ದ್ವಿತೀಯ ದೈವಗ್ರಂಥದಲ್ಲಿ

# ರತ್ನ ವಾಕ್ಯಗಳು


ಗ್ರಂಥಕರ್ತ : **ತ್ರಿಮತ ಏಕೈಕ ಗುರುವು**

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (100) ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**


---


ಗ್ರಂಥ ಮುದ್ರಣ

**ಸುವಾರ್ತ ಕ್ರೈಸ್ತವ ಸಂಘ**

(Regd.No.: 159/2015)

ತ್ರೈತ ಶಕ : 44 ಪ್ರಥಮ ಮುದ್ರಣ : ಜನವರಿ–2023

ಪ್ರತಿಗಳು : 1000 ಬೆಲೆ. /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ-ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ಯಾವುದು ಸತ್ಯ-ಯಾವುದು ಅಸತ್ಯ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಖುರ್‌ಆನ್, ಹದೀಸ್ ಯಾವುದು ಮುಖ್ಯ?
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ಸಮಾಧಿ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು–ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ–ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ – ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನ ವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರ ವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು–ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ–ರಾವಣಬ್ರಹ್ಮ–ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ದ್ಯಾನ – ಪ್ರಾರ್ಥನೆ – ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಭಕ್ತಿಯಲ್ಲಿ ನೀವು ಸಂಸಾರಿಗಳಾ? ವ್ಯಭಿಚಾರಿಗಳಾ?
100. ಶತ

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು, 02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ, 09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗುಡ್ಡಿವಿದ್ಯ.
19. ಬಟ್ಟತಲ, 20. ಭಗವಂತುಡು.
21. ದ್ರಾವಿಡುಲು–ಆರ್ಯುಲು.
22. ಪ್ರಭುವು–ಪ್ರಭುತ್ವಂ.
23. ಭೂತಂ–ಮಹಾಭೂತಂ, 24. ಪ್ರಭು–ಪ್ರಜ.
25. ಯಾದವ್, 26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು, 28. ಪ್ರಕೃತಿ–ವಿಕೃತಿ.
29. ಮಾಟ–ಮಂದು, 30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–ಮಾಯ ಮಹತ್ಯಮು.
46. ಸಮಾಧಿ. 47. ತಲ್ಲಿ ತಂಡ್ರಿ–ಗುರುವು ದೈವಮು.
48. ಕಲಿಯುಗಮು. 49. ಮತಮು–ಪಥಮು.
50. ದಿವ್ಯಖುರಾನ್–ಹದೀಸು, 51. ತಲ್ಲಿ.
52. ಪುಟ್ಟುಟ–ಗಿಟ್ಟುಟ.
53. ಗೋರು – ಗುರು. 54. ಆತ್ಮ,
55. ಕರ್ಮ ಮರ್ಮಮು.
56. ತಾತ, 57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು–ಹಿಂದುವು.
61. ಸ್ತ್ರೀ–ಪು/ಲಿಂಗಮು, 62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ–ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ.
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ–ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ,
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು– ಕರ್ಮವುನ್ನ ಕೃಷ್ಣುಡು.
79. ಭಯಂ, 80. ಸುಖಮು–ಆನಂದಮು.
81. ದಶ–ದಿಶಲು, 82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು– ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ ಮಹೇಂದ್ರಜಾಲ,ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ. (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು– ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು? 88. 6–3=6.
89. ತೆಲುಗುಲೋ ಮೂಡು–ಆರು ತೊಮ್ಮಿದಿ.
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!

**DVD's**

92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ-ಭಯಮು, 99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು-ಅಪಾರ್ಥಮು.
102. ತೋಲೇವಾಡು, 103. ಗುರು ಚಿಹ್ನಂ.
104. ಭಕ್ತಿ-ಶ್ರದ್ಧಲು, 105. ಮತದ್ವೇಷಮು.
106. ದೇವುಡು ಇದ್ದರಾ! ಒಕ್ಕರಾ!!
107. ಪುರುಷೋತ್ತಮ.
108. ನೀ ವೆನುಕವಾಡು.
109. ಗ್ರಂಥಮು-ಬೋಧ.
110. ಆಟ–ದೋಬೂಚುಲಾಟ.
111. ಪ್ರಜಲು–ಮಾನವುಲು.
112. ಆಸ್ತಿ–ದೋಸ್ತಿ
113. ದಂತಮು-ಅಂತಮು.
114. ಮಾಯ ಮರ್ಮಮು-ಆತ್ಮ ಧರ್ಮಮು.
115. ಶ್ರೀಕೃಷ್ಣುಡು ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು.
117. ಅದುರು-ಬೆದುರು
118. ಶವಮು-ಶಿವಮು.
119. ಧರ್ಮಚಕ್ರಮು, 120. ಗ್ರಾಹಿತಶಕ್ತಿ
121. ಭೌತಿಕಮು-ಅಭೌತಿಕಮು.
122. ದೇವುನಿ ಆಜ್ಞ ಮರಣಂ.
123. ಮತ ಸಾಮರಸ್ಯಂ.
124. ಮೋಕ್ಷಮು-ಮೋಸಮು.
125. ಅಕ್ಷರ ಜ್ಞಾನಮು, 126. ಲಲಾಜಲಮು.
127. ದೈವ ಧರ್ಮಗಳು– ಮತಸಾಂಪ್ರದಾಯಗಳು.
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ-ಮಂದು, 130. ಕಾಲಚಕ್ರಂ.
131. ಬ್ರಹ್ಮವಿದ್ಯ, 132. ಶಕ್ತಿ.
133. ಆಧ್ಯಾತ್ಮಿಕ ಪ್ರಶ್ನಲು-ಜವಾಬುಲು.
134. ಪೌರ್ಣಮಿ-ಅಮಾವಾಸ್ಯ.
135. ಈಶ್ವರ-ಪರಮೇಶ್ವರ.
136. ಪುರುಷೋತ್ತಮ-ಶ್ರೀರಾಮ.
137. ದೇವುನಿಕಿ ಒಕ್ಕಡೇ ಕುಮಾರುಡು- ದೇವುನಿಕಿ ಅನೇಕಮಂದಿ ಕುಮಾರುಲು.
138. ಜಲಂ, 139. ಅಧಿಪತಿ.
140. ಗ್ರಹಾಂತರವಾಸುಲು.
141. ದೇವುಡು ದ್ವಿತೀಯುಡಾ? ಅದ್ವಿತೀಯುಡಾ?
142. ಮನಿಷಿ ಚೇತಿಲೋ ಭಗವಂತುಡು- ದೇವುನಿ ಚೇತಿಲೋ ಮನಿಷಿ.
143. ಶರೀರಮುಲೋ ರಕ್ತಮು- ಗ್ರಂಥಮುಲೋ ಜ್ಞಾನಮು.
144. ಗ್ರಂಥಮುಲೋ ಜ್ಞಾನಮು- ಮನಿಷಿಲೋ ರಕ್ತಮು.
145. ತ್ರೈತ ಸಿದ್ಧಾಂತ ಚರಿತ್ರ.
146. ಕುಶಾಲ್ ಕುಶಾಲ್ ಲಂಜಮ್ಮ ನಾ ನೆತ್ತಿ ಮೀದ ರೆಂಡು ತನ್ನಮ್ಮ.
147. ರಾಜಾಧಿ ರಾಜಾ-ದೇವಾಧಿ ದೇವಾ.
148. ಎನಿಮಿದಿ ಮಂದಿ ಭಾರ್ಯಲುನ್ನ ಶ್ರೀ ಕೃಷ್ಣುನಿಕಿ ಗೋಪಿಕಲ ಮೀದ ಧ್ಯಾಸ ಎಂದುಕು?
149. ಕುಲಂ-ಮತಂ.
150. ಗುರುಪೌರ್ಣಮಿ ಸಂದರ್ಭಮುಗಾ.
151. ಭಗವಂತುಡು ಎವರು?
152. ವಿಶ್ವದಾಭಿರಾಮ ವಿನುರ ವೇಮಾ.
153. ಕಾಲಂ, 154. ಯಮಧರ್ಮ.
155. ಕುಡಿ ಧರ್ಮಮು-ಎಡಮ ಧರ್ಮಮು.
156. ಗುಡಿ.
157. ಇಂದುತ್ವಮು ಅಂದರಿಲೋ ಕಲದು -ಹಿಂದುತ್ವಮು ಕೊಂದರಿಲೋ ಕಲದು.
158. ಧರ್ಮಮುಲು ಮೂಡೇ ವುನ್ನವಿ- ಅಧರ್ಮಮುಲು ಆರು ಅಯಿನವಿ.
159. ನೇನು, ನಾ ತಂಡ್ರಿ, ನಾ ತಾತ- ನೇನು, ನಾ ಅಮ್ಮ, ನಾ ಅವ್ವ.
160. ಆದ್ಯ ಆತ್ಮೀಕಮು-ಆಧ್ಯಾತ್ಮಿಕಮು, ಆದ್ಯ ದೇವೀಕಮು-ಆಧ್ಯೈವೀಕಮು.
161. ವಿತ್ತನಮು ಲೇನಿ ಚೆಟ್ಟು ಶಿವುಡಾ! ಈಶ್ವರುಡಾ!!
162. ಮನಿಷಿನಿ ಜಂತುವು ಅಂಟೇ ಅವಮಾನಿಂಚಿನಟ್ಲು ಕಾದಾ!
163. ದೇವುಡು ಕರುಣಾಮಯುಡು ದೇವುಡು ಕಠಿನಾತ್ಮುಡು.

**ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)**
ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P
Cell : **ಲಕ್ಷ್ಮಿನಾರಾಯಣಾಚಾರಿ**–9440556968, 6305035254, 7981892957.

## ಇಂದೂ ಜ್ಞಾನ ವೇದಿಕೆ ಸದಸ್ಯರು

R. **ಶ್ರೀದೇವಿ**
ಹೊಸಪೇಟೆ, ವಿಜಯನಗರ (ಜಿಲ್ಲೆ)
Cell:9611133635, 8050309963.

B. **ಸುಧಾಕರ**
ತೋರಣಗಲ್ಲು, ಬಳ್ಳಾರಿ (ಜಿಲ್ಲೆ)
Cell:7348934963.

**ಶಿವರಾಜ**
ಕುಕನೂರು, ರಾಯಚೂರು (ಜಿಲ್ಲೆ),
Cell:9844369516,9632418716.

B. **ವಾತ್ಸಲ್ಯ – ರವೀಂದ್ರಾಚಾರಿ**
ದಾವಣಗೆರೆ.
Cell:9901534677,8880666529.

K. **ಭರತ್ ಕುಮಾರ್**
ಮೇಲಾಗಣಿ, ಮುಳಬಾಗಿಲು (ತಾ),
ಕೋಲಾರ (ಜಿಲ್ಲೆ), Cell:8095009014.

M. **ನಾರಾಯಣರೆಡ್ಡಿ**
ರಾಮಗುಂಡನಲ್ಲಿ ಪೋಸ್ಟ್,
ಬೆಂಗಳೂರು. Cell : 9741890089.

**ವೇಣುಗೋಪಾಲ್**
N.G.R. Layout, ರೂಪೇನ ಅಗ್ರಹಾರ,
ಬೆಂಗಳೂರು. Cell : 8970772028.

**ರಾಘವೇಂದ್ರ**
ತುಮಕೂರು, Cell:9886399426.

G. **ಮನೋಹರ್**
ಯಲಹಂಕ, ಮಾರುತಿನಗರ, ಬೆಂಗಳೂರು.
Cell:7411459912,9448452963.

G. **ರಾಧಾಕೃಷ್ಣಾ ರೆಡ್ಡಿ**
ಮರಲೂರು, ತುಮಕೂರು (ಜಿಲ್ಲೆ).
Cell:9448177812.

C. **ಲೀಲಾವತಿ–ಮುರಳಿಧರ**
ಜನತಾನಗರ, ಮೈಸೂರ್.
Cell:9141109799, 9986369118.

R. **ಚಂದ್ರಶೇಖರ್**
ಕೀಲುಕೋಟೆ, ಕೋಲಾರ.
Cell:9741827901.

T. **ನಾಗರಾಜು**
ವೀವರ್ಸ್‌ಕಾಲೋನಿ,
ನೆಲಮಂಗಲಟೌನ್, ಬೆಂಗಳೂರು.
Cell:9449434963, 8494801963.

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ಪಾವಗಡ (ತಾ), ತುಮಕೂರು (ಜಿಲ್ಲೆ).
Cell:8762523963,9740744424.

N. **ವೆಂಕಟರಾಯಪ್ಪ**
ಕಾರಂಜಿ ಕಟ್ಟೆ, ಕೋಲಾರ.
Cell:8147158272.

S. **ಸೂರಪನಾಯುಡು**
ಹಾರುಗಿರಿ (ಗ್ರಾ), ರಾಯಬಾಗ (ತಾ)
ಬೆಳಗಾವಿ (ಜಿಲ್ಲೆ) Cell: 9632300916

**www.thraithashakam.org**
**Youtube : thraitha siddantham**

## ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

(578 ಶ್ಲೋಕಗಳ ವಚನ ಗ್ರಂಥ)

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ, ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚನಕಾರ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಸಮಾಚಾರ ಸೂಚಿಕೆ




| ಕ್ರ.ಸಂ. | (ಸುವಾರ್ತೆ ಹೆಸರು, ಅ–ವ) ಗ್ರಂಥದಲ್ಲಿನ ಜ್ಞಾನ ಸಮಾಚಾರ | ಪುಟ.ಸಂ |
|---|---|---|
| | ದೇವರ ಮಾರ್ಗ | 15 |
| | ಸೃಷ್ಠಿ ರಹಸ್ಯ | 38 |
| 01) | **(ಮತ್ತಾಯ, 3–7)** ಸರ್ಪಸಂತಾನವೇ, ಮುಂಬರುವ ಉಗ್ರತೆಯನ್ನು | 47 |
| 02) | (ಮತ್ತಾಯ, 3–11) ಮಾರು ಮನಸ್ಸು ನಿಮಿತ್ತ | 52 |
| 03) | (ಮತ್ತಾಯ, 3–12) ಆತನ ಮೊರ ಆತನ ಕೈಯ್ಯಲ್ಲಿ ಇದೆ | 56 |
| 04) | (ಮತ್ತಾಯ, 3–16, 17) ಏಸು ಬಾಪ್ತಿಸ್ಮ ಪಡೆದ ಕೂಡಲೇ | 60 |
| 05) | (ಮತ್ತಾಯ, 4–10) ಸಾತಾನು! ಹೋಗು ಪ್ರಭುವಾದ ನಿನ್ನ ದೇವರಿಗೆ | 62 |
| 06) | (ಮತ್ತಾಯ, 5–10) ನೀತಿ (ಜ್ಞಾನ) ನಿಮಿತ್ತ ಹಿಂಸಿಸಲ್ಪಡುವ | 65 |
| 07) | (ಮತ್ತಾಯ, 5–17) ಧರ್ಮಶಾಸ್ತ್ರವನ್ನಾಗಲೀ, ಪ್ರವಕ್ತರ ಪ್ರವಚನ | 67 |
| 08) | (ಮತ್ತಾಯ, 5–18) ಆಕಾಶವು, ಭೂಮಿಯೂ ಗತಿಸಿ ಹೋದರೂ | 68 |
| 09) | (ಮತ್ತಾಯ, 5–19) ಈ ಆಜ್ಞೆಗಳಲ್ಲಿ ಬಹಳ ಅಲ್ಪವಾದ ಒಂದು ಆಜ್ಞೆ | 74 |
| 10) | (ಮತ್ತಾಯ, 5–20) ಶಾಸ್ತ್ರಿಗಳ ನೀತಿಗಿಂತಲೂ, ಪರಿಶಯ್ಯರ | 76 |
| 11) | (ಮತ್ತಾಯ, 5–28) ಒಬ್ಬ ಸ್ತ್ರೀಯನ್ನು ಮೋಹದ ದೃಷ್ಠಿಯಿಂದ ನೋಡುವ | 76 |
| 12) | (ಮತ್ತಾಯ, 5–29, 30) ನಿನ್ನ ಬಲಗಣ್ಣು ನಿನ್ನನ್ನು ಅಭ್ಯಂತರ ಪಡಿಸಿದರೆ | 79 |
| 13) | (ಮತ್ತಾಯ, 6–3, 4) ನೀನು ಧರ್ಮ ಮಾಡುವಾಗ | 84 |
| 14) | (ಮತ್ತಾಯ, 6–6) ನೀನು ಪ್ರಾರ್ಥನೆ ಮಾಡುವಾಗ ಕೋಣೆಯೊಳಗೆ | 86 |
| 15) | (ಮತ್ತಾಯ, 6–7, 8) ನೀವು ಪ್ರಾರ್ಥನೆ ಮಾಡುವಾಗ | 87 |
| 16) | (ಮತ್ತಾಯ, 7–13, 14) ಇಕ್ಕಟ್ಟಾದ ದ್ವಾರದಲ್ಲಿ ಪ್ರವೇಶಿಸು | 88 |
| 17) | (ಮತ್ತಾಯ, 7–7, 8) ಕೇಳಿರಿ ನಿಮಗೆ ಕೊಡಲಾಗುವುದು, ಹುಡುಕಿರಿ | 91 |
| 18) | (ಮತ್ತಾಯ, 7–15) ಅಸತ್ಯ ಪ್ರವಕ್ತರನ್ನು ಕುರಿತು ಜಾಗ್ರತೆಯಾಗಿರಿ | 94 |
| 19) | (ಮತ್ತಾಯ, 7–21) ಪ್ರಭುವಾ ಪ್ರಭುವಾ ಎಂದು ನನ್ನನ್ನು ಕರೆಯುವ | 96 |
| 20) | (ಮತ್ತಾಯ, 7–22, 23) ಪ್ರಭುವಾ, ನಾವು ನಿನ್ನ ನಾಮದಿಂದ | 97 |
| 21) | (ಮತ್ತಾಯ, 8–22) ಮೃತರು, ತಮ್ಮ ಮೃತರನ್ನು ಊತಿಟ್ಟು | 103 |
| 22) | (ಮತ್ತಾಯ, 9–12,13) ರೋಗಿಗಳಿಗೇ ಹೊರತು ಆರೋಗ್ಯದಿಂದಿರುವವರಿಗೆ | 104 |
| 23) | (ಮತ್ತಾಯ, 8–23, 24, 25, 26) ಅಲ್ಪ ವಿಶ್ವಾಸಿಗಳೇ! | 105 |
| 24) | (ಮತ್ತಾಯ, 9–6) ಪಾಪಗಳನ್ನು ಕ್ಷಮಿಸುವುದಕ್ಕೆ ಭೂಮಿ ಮೇಲೆ | 108 |

25) (ಮತ್ತಾಯ, 10–20) ನಿಮ್ಮ ತಂದೆ ಆತ್ಮ ನಿಮ್ಮಲ್ಲಿದ್ದು 109

26) (ಮತ್ತಾಯ, 10–30) ನಿಮ್ಮ ತಲೆ ಕೂದಲುಗಳೆಲ್ಲವೂ ಲೆಕ್ಕಿಸಲ್ಪಟ್ಟಿವೆ 111

27) (ಮತ್ತಾಯ, 10–34,35,36) ನಾನು ಭೂಮಿಮೇಲಕ್ಕೆ ಸಮಾಧಾನ 113

28) (ಮತ್ತಾಯ, 10–37) ತಂದೆಯನ್ನಾದರೂ, ತಾಯಿಯನ್ನಾದರೂ ನನಗಿಂತಲೂ 114

29) (ಮತ್ತಾಯ, 10–38) ತನ್ನ ಶಿಲುಬೆಯನ್ನು ಎತ್ತಿಕೊಂಡು ನನ್ನನ್ನು 115

30) (ಮತ್ತಾಯ, 10–40) ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು 118

31) (ಮತ್ತಾಯ, 11–9) ಪ್ರವಕ್ತಗಿಂತಲೂ ದೊಡ್ಡವನನ್ನು 119

32) (ಮತ್ತಾಯ, 11–28) ಪ್ರಯಾಸ ಪಟ್ಟು ಭಾರವನ್ನು ಹೋರುತ್ತಿರುವ 120

33) (ಮತ್ತಾಯ, 12–17, 18, 19, 20, 21) ಇಗೋ ಈತನು ನನ್ನ ಸೇವಕನು 121

34) (ಮತ್ತಾಯ, 12–31) ಆತ್ಮ ದೂಷಣೆಗೆ ಕ್ಷಮಾಪಣೆ ಇಲ್ಲ 126

35) (ಮತ್ತಾಯ, 12–32) ಮನುಷ್ಯ ಕುಮಾರನಿಗೆ ವಿರೋಧವಾಗಿ 127

36) (ಮತ್ತಾಯ, 12–36, 37) ಮನುಷ್ಯರು ನುಡಿಯುವ ವ್ಯರ್ಥವಾದ 129

37) (ಮತ್ತಾಯ, 12–40) ಏನಾ ಮೂರು ರಾತ್ರಿ ಹಗಲುಗಳು 131

38) (ಮತ್ತಾಯ, 13–13, 14, 15) ಈ ಪ್ರಜೆಗಳು ಕಣ್ಣಾರೆ ನೋಡಿ 137

39) (ಮತ್ತಾಯ, 15–7, 8, 9) ಈ ಪ್ರಜೆಗಳು ತಮ್ಮ ತುಟಿಗಳಿಂದ ನನ್ನನ್ನು 138

40) (ಮತ್ತಾಯ, 15–11) ಬಾಯಲ್ಲಿ ಬೀಳುವುದು ಮನುಷ್ಯನನ್ನು ಅಪವಿತ್ರ 140

41) (ಮತ್ತಾಯ, 15–12, 13) ನನ್ನ ತಂದೆ ನಾಟದ ಪ್ರತಿಯೊಂದು ಸಸಿಯೂ 142

42) (ಮತ್ತಾಯ, 15–14) ಕುರುಡನಿಗೆ ಕುರುಡನು ದಾರಿ ತೋರಿಸಿದಂತೆ 144

43) (ಮತ್ತಾಯ, 16–21, 22) ಹಿರಿಯರಿಂದಲೂ, ಶಾಸ್ತ್ರಿಗಳಿಂದಲೂ 146

44) (ಮತ್ತಾಯ, 19–23, 24) ಧನವಂತನು ಪರಲೋಕ ರಾಜ್ಯದಲ್ಲಿ 148

45) (ಮತ್ತಾಯ, 22–36,37,38,39,40) ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಆಜ್ಞೆ 150

46) (ಮತ್ತಾಯ, 23–8,9,10) ಭೂಮಿ ಮೇಲೆ ಯಾರಿಗಾದರೂ ತಂದೆಯೆಂದು 158

47) (ಮತ್ತಾಯ, 23–15) ಒಬ್ಬನನ್ನು ನಿನ್ನ ಮತದಲ್ಲಿ ಸೇರಿಸಿಕೊಳ್ಳುವುದಕ್ಕೆ 161

48) (ಮತ್ತಾಯ, 24–35) ಆಕಾಶ ಭೂಮಿಯು ಗತಿಸುವುದು ಆದರೆ 162

49) (ಮತ್ತಾಯ, 24–42) ಯಾವ ದಿನದಂದು ನಿಮ್ಮ ಪ್ರಭು ಬರುತ್ತಾನೋ 163

| ಕ್ರ.ಸಂ. (ಸುವಾರ್ತೆ ಹೆಸರು, ಅ–ವ) ಗ್ರಂಥದಲ್ಲಿನ ಜ್ಞಾನ ಸಮಾಚಾರ | ಪುಟ.ಸಂ |
|---|---|
| 50) (ಮತ್ತಾಯ, 26–26,27,28) ಏಸು ಒಂದು ರೊಟ್ಟಿಯನ್ನು ಹಿಡಿದುಕೊಂಡು | 164 |
| 51) (ಮತ್ತಾಯ, 28–18) ಪರಲೋಕದಲ್ಲಿಯೂ, ಭೂಮಿ ಮೇಲೆಯೂ | 169 |
| 52) (ಮತ್ತಾಯ, 28–19, 20) ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರು | 171 |
| 53) **(ಮಾರ್ಕ, 2–19, 20)** ಮದು ಮಗನು ತಮ್ಮೊಂದಿಗೆ ಸಹಾ | 177 |
| 54) (ಮಾರ್ಕ, 4–38, 39) ಆತನು ಎದ್ದು ಗಾಳಿಯನ್ನು ಗದರಿಸಿ ನಿಶ್ಶಬ್ದವಾಗಿ | 178 |
| 55) (ಮಾರ್ಕ, 5–38, 39, 40, 41, 42, 43) ಸಮಾಜದ ಮಂದಿರ | 180 |
| 56) (ಮಾರ್ಕ, 7– 15, 16, 17, 18, 19, 20, 21, 22, 23) ಹೊರಗಿನಿಂದ ಒಳಗೆ ಹೋಗಿ ಮನುಷ್ಯನನ್ನು ಅಪವಿತ್ರನಾಗಿ | 188 |
| 57) (ಮಾರ್ಕ, 3–35) ದೇವರ ಚಿತ್ತಾನುಸಾರ ಜರುಗಿಸುವವನೇ | 191 |
| 58) (ಮಾರ್ಕ, 4–17) ಸ್ವಲ್ಪ ಕಾಲ ಅವರು ನಿಲ್ಲುವರು ಆದರೆ | 191 |
| 59) (ಮಾರ್ಕ, 4–21, 22) ದೀಪವು, ದೀಪ ಸ್ಥಂಭದ ಮೇಲೆ ಇಡುವುದಕ್ಕೆ | 194 |
| 60) (ಮಾರ್ಕ, 6–4) ಪ್ರವಕ್ತ ತನ್ನ ದೇಶದಲ್ಲಿಯೂ, ತನ್ನ ಬಂಧುಗಳಲ್ಲಿಯೂ | 195 |
| 61) (ಮಾರ್ಕ, 8–38) ನನ್ನನ್ನು ಕುರಿತೂ, ನನ್ನ ಮಾತನ್ನು ಕುರಿತೂ | 196 |
| 62) (ಮಾರ್ಕ, 9–7) ಮೇಘವೊಂದು ಬಂದು ಅವರನ್ನು ಕವಿದುಕೊಂಡಾಗ | 199 |
| 63) (ಮಾರ್ಕ, 10–17, 18) ನನ್ನನ್ನು ಸತ್ಪುರುಷನೆಂದು ಏಕೆ ಹೇಳು | 200 |
| 64) (ಮಾರ್ಕ, 16–15, 16) ನೀವು ಸರ್ವಲೋಕಕ್ಕೆ ಹೋಗಿ | 203 |
| 65) **(ಲೂಕಾ, 2–49)** ನೀವೇಕೆ ನನ್ನನ್ನು ಹುಡುಕುತ್ತಿರುವಿರಿ? | 205 |
| 66) (ಲೂಕಾ, 11–37, 38, 39, 40, 41) ಅವಿವೇಕಿಗಳೇ! ಹೊರಗಿನ | 207 |
| 67) (ಲೂಕಾ, 12–4, 5) ಯಾರಿಗೆ ನೀವು ಭಯಪಡಬೇಕೋ ನಿಮಗೆ | 209 |
| 68) (ಲೂಕಾ, 12–25) ನಿಮ್ಮಲ್ಲಿ ಯಾರು ಚಿಂತಿಸುವುದರಿಂದ ತನ್ನ | 210 |
| 69) (ಲೂಕಾ, 12–33, 34) ನಿಮಗೆ ಇರುವವುಗಳನ್ನು ಮಾರಿ | 210 |
| 70) (ಲೂಕಾ, 12–49) ನಾನು ಭೂಮಿ ಮೇಲೆ ಅಗ್ನಿ ಹಾಕಲು ಬಂದಿದ್ದೇನೆ | 212 |
| 71) (ಲೂಕಾ, 12–51, 52, 53) ನಾನು ಭೂಮಿ ಮೇಲೆ ಸಮಾಧಾನ | 213 |
| 72) (ಲೂಕಾ, 13–3) ನೀವು ಮಾರು ಮನಸ್ಸು ಹೊಂದದೆ ಹೋದರೆ | 214 |

73) (ಲೂಕಾ, 14–26) ಯಾರಾದರೂ ನನ್ನ ಹತ್ತಿರಕ್ಕೆ ಬಂದು ತನ್ನ ತಾಯಿಯನ್ನು 215

74) (ಲೂಕಾ, 14–27) ಯಾರಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು 216

75) (ಲೂಕಾ, 18–29) ದೇವರ ರಾಜ್ಯದ ನಿಮಿತ್ತ ಮನೆಯನ್ನಾದರೂ 218

76) (ಲೂಕಾ, 21–15) ನಿಮ್ಮ ವಿರೋಧಿಗಳು ಎದುರಾಡುವುದಕ್ಕೆ ಸಾಧ್ಯವಾಗದ 221

77) (ಲೂಕಾ, 21–17) ನನ್ನ ನಾಮದ ನಿಮಿತ್ತ ನೀವು ಮನುಷ್ಯರ 222

78) **(ಯೋಹಾನ್, 1–1)** ಆದಿಯಲ್ಲಿ ವಾಕ್ಯವಿತ್ತು, ವಾಕ್ಯ 224

79) (ಯೋಹಾನ್, 1–9) ನಿಜವಾದ ಬೆಳಕು ಇತ್ತು. ಅದು ಲೋಕ 237

80) (ಯೋಹಾನ್, 1–10) ಆತನು ಲೋಕದಲ್ಲಿ ಇದ್ದನು 238

81) (ಯೋಹಾನ್, 1–11) ಆತನು ತನ್ನ ಸ್ವಕೀಯರ ಹತ್ತಿರಕ್ಕೆ ಬಂದನು 239

82) (ಯೋಹಾನ್, 1–12) ತನ್ನನ್ನು ಎಷ್ಟು ಜನ ಅಂಗೀಕರಿಸಿದರೋ 239

83) (ಯೋಹಾನ್, 1–13) ದೇವರಿಂದ ಹುಟ್ಟಿದವರೇ ಆದರೇ, ರಕ್ತ 240

84) (ಯೋಹಾನ್, 1–14) ಆ ವಾಕ್ಯ ಶರೀರಧಾರಿಯಾಗಿ, ಕೃಪಾಸತ್ಯ 240

85) (ಯೋಹಾನ್, 1–18) ಯಾರೂ ಎಂದಿಗೂ ದೇವರನ್ನು ನೋಡಲಿಲ್ಲ 240

86) (ಯೋಹಾನ್, 1–51) ನೀವು ಆಕಾಶ ತೆರೆಯುವುದನ್ನು ದೇವರ 242

87) (ಯೋಹಾನ್, 3–3) ಒಬ್ಬನು ಹೊಸದಾಗಿ ಹುಟ್ಟಿದರಾಗಲಿ ಆತನು 243

88) (ಯೋಹಾನ್, 3–4, 5, 6, 7, 8) ಗಾಳಿ ಅದಕ್ಕೆ ಇಷ್ಟವಾದ ಕಡೆ 244

89) (ಯೋಹಾನ್, 3–13) ಪರಲೋಕದಿಂದ ಇಳಿದುಬಂದವನೇ ಅಂದರೆ 246

90) (ಯೋಹಾನ್, 3–15) ವಿಶ್ವಾಸಿಸುವ ಪ್ರತಿಯೊಬ್ಬನು ನಶಿಸದೆ 247

91) (ಯೋಹಾನ್, 3–17) ಲೋಕ ತನ್ನ ಕುಮಾರನ ಮೂಲಕ ರಕ್ಷಣೆ 249

92) (ಯೋಹಾನ್, 3–18) ಆತನಲ್ಲಿ ವಿಶ್ವಾಸ ಇಡುವವನಿಗೆ 250

93) (ಯೋಹಾನ್, 3–19, 20, 21) ಆ ತೀರ್ಪು ಇದೇ. ಬೆಳಕು ಲೋಕ 252

94) (ಯೋಹಾನ್, 5–19) ತಂದೆ ಏನು ಮಾಡುವುದು ಕುಮಾರನು 254

95) (ಯೋಹಾನ್, 5–20) ತಂದೆ ಕುಮಾರನನ್ನು ಪ್ರೀತಿಸುತ್ತಾ 255

96) (ಯೋಹಾನ್, 5–21, 22, 23) ತಂದೆ ಮೃತರನ್ನು ಹೇಗೆ 256

97) (ಯೋಹಾನ್, 5–24) ನನ್ನ ಮಾತು ಕೇಳಿ ನನ್ನನ್ನು ಕಳುಹಿಸಿರುವ 258

98) (ಯೋಹಾನ್, 5–26) ತಂದೆ ಹೇಗೂ ತನ್ನಷ್ಟಕ್ಕೆ ತಾನೇ ಜೀವ 259

| ಕ್ರ.ಸಂ. (ಸುವಾರ್ತೆ ಹೆಸರು, ಅ–ವ) ಗ್ರಂಥದಲ್ಲಿನ ಜ್ಞಾನ ಸಮಾಚಾರ | ಪುಟ.ಸಂ |
|---|---|
| 99) (ಯೋಹಾನ್, 5–37) ನೀವು ಯಾವ ಕಾಲದಲ್ಲಾದರೂ ಆತನ ಸ್ವರ | 259 |
| 100) (ಯೋಹಾನ್, 5–38) ಆತನು ಯಾರನ್ನು ಕಳುಹಿಸಿದನೋ ಆತನನ್ನು | 260 |
| 101) (ಯೋಹಾನ್, 6–25, 26, 27) ಕ್ಷಯವಾದ ಆಹಾರಕ್ಕೋಸ್ಕರ | 262 |
| 102) (ಯೋಹಾನ್, 6–32) ಪರಲೋಕದಿಂದ ಬರುವ ಆಹಾರವನ್ನು | 264 |
| 103) (ಯೋಹಾನ್, 6–47) ದೇವರ ಹತ್ತಿರದಿಂದ ಬಂದಿರುವವನು ಹೊರತು | 267 |
| 104) (ಯೋಹಾನ್, 7–37, 38) ಯಾರಾದರೂ ಬಾಯರಿಕೆಕೊಂಡರೆ | 268 |
| 105) (ಯೋಹಾನ್, 8–12) ನಾನು ಲೋಕಕ್ಕೆ ಬೆಳಕು | 269 |
| 106) (ಯೋಹಾನ್, 8–14) ನಾನು ಎಲ್ಲಿಂದ ಬಂದೆನೋ, ಎಲ್ಲಿಗೆ | 271 |
| 107) (ಯೋಹಾನ್, 8–19) ಅವರು ನಿನ್ನ ತಂದೆ ಎಲ್ಲಿದ್ದಾನೆಂದು | 274 |
| 108) (ಯೋಹಾನ್, 8–21) ನಾನು ಹೊರಟು ಹೋಗುತ್ತಿದ್ದೇನೆ. ನೀವು ನನ್ನನ್ನು | 279 |
| 109) (ಯೋಹಾನ್, 8–23,24) ನೀವು ಕೆಳಗಿನವರು ನಾನು ಮೇಲೆ ಇರುವವನು | 283 |
| 110) (ಯೋಹಾನ್, 8–24) ನಾನು ಆತನೇ ಎಂದು ನೀವು ವಿಶ್ವಾಸಿಸದ | 288 |
| 111) (ಯೋಹಾನ್, 8–28) ನೀವು ಮನುಷ್ಯ ಕುಮಾರನನ್ನು ಮೇಲಕ್ಕೆತ್ತಿದ್ದಾಗ | 289 |
| 112) (ಯೋಹಾನ್, 8–29) ನನ್ನನ್ನು ಕಳುಹಿಸಿರುವವನು ನನಗೆ ಜೊತೆಯಾಗಿ | 293 |
| 113) (ಯೋಹಾನ್, 8–53, 54) ನಿನ್ನನ್ನು ನೀನು ಯಾರೆಂದು ಹೇಳಿಕೊಳ್ಳುತ್ತಿದ್ದೀಯೆಂದು | 294 |
| 114) (ಯೋಹಾನ್, 8–55) ನೀವು ಆತನನ್ನು ತಿಳಿದಿಲ್ಲ, ನಾನು | 295 |
| 115) (ಯೋಹಾನ್, 8–57, 58) ನಿನಗಿನ್ನೂ ಐವತ್ತು ವರ್ಷಗಳು | 297 |
| 116) (ಯೋಹಾನ್, 9–39) ನೋಡದವರು ನೋಡಬೇಕು. ನೋಡುವವರು | 299 |
| 117) (ಯೋಹಾನ್, 9–41) ನೀವು ಕುರುಡರಾದರೆ ನಿಮಗೆ ಪಾಪವಿಲ್ಲದೆ | 301 |
| 118) (ಯೋಹಾನ್, 10–18) ಯಾರೂ ನನ್ನ ಪ್ರಾಣವನ್ನು ತೆಗೆದುಕೊಳ್ಳುವುದಿಲ್ಲ | 303 |
| 119) (ಯೋಹಾನ್, 10–30) ನಾನು ತಂದೆಯೂ ಏಕವಾಗಿದ್ದರೂ | 305 |
| 120) (ಯೋಹಾನ್, 11–25) ಪುನರುತ್ಥಾನವು ಜೀವವು ನಾನೇ | 306 |
| 121) (ಯೋಹಾನ್, 11–26) ಬದುಕಿ ನನ್ನಲ್ಲಿ ವಿಶ್ವಾಸವಿಡು | 306 |
| 122) (ಯೋಹಾನ್, 12–25) ತನ್ನ ಪ್ರಾಣವನ್ನು ಪ್ರೀತಿಸುವವನು | 306 |
| 123) (ಯೋಹಾನ್, 12–40) ಅವರು ಕಣ್ಣುಗಳಿಂದ ನೋಡಿ, ಹೃದಯ | 308 |
| 124) (ಯೋಹಾನ್, 12–47, 48) ತೀರ್ಪು ನಿರ್ಣಯಿಸುವುದಕ್ಕೆ ಬರಲಿಲ್ಲ ಆದರೆ | 310 |

125) (ಯೋಹಾನ್, 12–49, 50) ನನ್ನಷ್ಟಕ್ಕೆ ನಾನೇ ಮಾತನಾಡಲಿಲ್ಲ 311
126) (ಯೋಹಾನ್, 14–7) ನೀವು ನನ್ನನ್ನು ತಿಳಿದಿದ್ದರೇ ನನ್ನ ತಂದೆಯನ್ನು 312
127) (ಯೋಹಾನ್, 14–8, 9) ಪ್ರಭುವಾ ತಂದೆಯನ್ನು ನನಗೆ ತೋರಿಸು 312
128) (ಯೋಹಾನ್, 14–10) ತಂದೆಯಲ್ಲಿ ನಾನು, ನನ್ನಲ್ಲಿ 313
129) (ಯೋಹಾನ್, 14–6) ನಾನೇ ಮಾರ್ಗವು, ಸತ್ಯವು, ಜೀವವು 314
130) (ಯೋಹಾನ್, 14–16) ನಾನು ತಂದೆಯನ್ನು ಬೇಡಿಕೊಳ್ಳುವೆನು. ನಿಮ್ಮ ಹತ್ತಿರ 315
131) (ಯೋಹಾನ್, 14–17) ಲೋಕ ಆತನನ್ನು ನೋಡುವುದಿಲ್ಲ 316
132) (ಯೋಹಾನ್, 14–20) ನಾನು ನನ್ನ ತಂದೆಯಲ್ಲಿಯೂ, ನೀವು 317
133) (ಯೋಹಾನ್, 14–25, 26) ನಾನು ನಿಮ್ಮ ಹತ್ತಿರ ಇರುವಾಗಲೇ 318
134) (ಯೋಹಾನ್, 15–23) ನನ್ನನ್ನು ದ್ವೇಷಿಸುವವನು ನನ್ನ ತಂದೆಯನ್ನು 319
135) (ಯೋಹಾನ್, 15–24, 25) ಯಾರೂ ಮಾಡದ ಕ್ರಿಯೆಗಳು ನಾನು 320
136) (ಯೋಹಾನ್, 15–26, 27) ತಂದೆ ಹತ್ತಿರದಿಂದ ನಿಮ್ಮ ಹತ್ತಿರಕ್ಕೆ 321
137) (ಯೋಹಾನ್, 16–7) ನಾನು ಹೊರಟು ಹೋಗುವುದರಿಂದ
ನಿಮಗೆ ಪ್ರಯೋಜನ 322
138) (ಯೋಹಾನ್, 16–8) ಆತನು ಬಂದು ಪಾಪವನ್ನು ಕುರಿತು 323
139) (ಯೋಹಾನ್, 16–12) ನಾನು ನಿಮ್ಮೊಂದಿಗೆ ಹೇಳಬೇಕಾಗಿರುವವು ಇನ್ನೂ 325
140) (ಯೋಹಾನ್, 16–13) ಸತ್ಯ ಸ್ವರೂಪಿಯಾದ ಆತ್ಮ ಬಂದಾಗ 326
141) (ಯೋಹಾನ್, 16–14, 15) ಆತನು ನನ್ನವುಗಳಲ್ಲಿನವು ತೆಗೆದುಕೊಂಡು 327
142) (ಯೋಹಾನ್, 16–16) ಸ್ವಲ್ಪ ಕಾಲ ಕಳೆದ ನಂತರ ನೀವಿನ್ನು 328
143) (ಯೋಹಾನ್, 16–17, 18, 19, 20, 21, 22) ನೀವು ಅಳುತ್ತಾ
ಗೋಳಾಡುತ್ತಾ ಇರುವಿರಿ ಆದರೆ ಲೋಕವು ಸಂತೋಷಿಸುವುದು 329
144) (ಯೋಹಾನ್, 16–25) ಈ ಸಂಗತಿಗಳು ಗೂಡಾರ್ಥವಾಗಿ ನಿಮ್ಮೊಂದಿಗೆ 331
145) **(ಯೋಹಾನ್ ಪ್ರಕಟನೆ, 9–4, 5, 6)** ಹಣೆಯಲ್ಲಿ ದೇವರ ಮುದ್ರೆ
ಮನುಷ್ಯರಿಗೇ ಹೊರತು ಭೂಮಿಗಾದರೂ, ಉಲ್ಲಿಗಾದರೂ, ಸಸಿಗಳ 332
146) ಮೂರು ಬೆರಳುಗಳು 337
147) ಶುಭ ಶುಕ್ರವಾರವಾ–ಅಶುಭ ಶುಕ್ರವಾರವಾ 342
148) ಒಂದು ಹಿಂದೂ ಲೇಖನ 345

# ದೇವರ ಮಾರ್ಗ

ಏಸು ಪ್ರಭು ಭೂಮಿ ಮೇಲಕ್ಕೆ ಬರುವ ಪೂರ್ವವೇ ಸ್ವಲ್ಪ ಚರಿತ್ರೆ ಇದೆ. ಆತನು ಮರಣಿಸಿದ ನಂತರ ಕೂಡಾ ಸ್ವಲ್ಪ ಚರಿತ್ರೆ ಇದೆ. ಆತನು ಬರುವ ಮೊದಲೇ ಬರೆಯಲ್ಪಟ್ಟ ಚರಿತ್ರೆಯನ್ನು **'ಹಳೆಯ ನಿಬಂಧನ'** ಎನ್ನುತ್ತಿದ್ದೇವೆ. ಆತನು ಬಂದ ನಂತರ ಬರೆಯಲ್ಪಟ್ಟಿರುವುದನ್ನು **'ಹೊಸ ನಿಬಂಧನ'** ಎನ್ನುತ್ತಿದ್ದೇವೆ. ಆತನ ಜನನಕ್ಕೆ ಪೂರ್ವವಿದ್ದ ಹಳೆಯ ನಿಬಂಧನ, ಜನನದ ನಂತರ ಹೊಸ ನಿಬಂಧನದಲ್ಲಿರುವ ಆತನ ಜೀವನ ಮತ್ತು ಮರಣದ ನಂತರ ಆತನ ಭಕ್ತರು ಕ್ರೈಸ್ಥ ಸಂಘವನ್ನು ಪ್ರಚಾರ ಮಾಡಿರುವ ವಿಧಾನವು, ಎರಡೂ ಕ್ರೈಸ್ಥ ಸಂಘದವರಿಗೆ ಮುಖ್ಯವಾದವುಗಳಾಗಿವೆ. ಈ ಹಳೆಯ ಹೊಸದರ ಎರಡು ಚರಿತ್ರೆಗಳು ಬರೆಯಲಾಗಿರುವ ಗ್ರಂಥವನ್ನೇ **'ಪರಿಶುದ್ಧ ಬೈಬಲ್'** ಎನ್ನುತ್ತಿದ್ದೇವೆ. ಕ್ರೈಸ್ಥವರ ಬೈಬಲ್ಲಾಗಲೀ, ಹಿಂದೂಗಳ ಭಗವದ್ಗೀತೆಯಾಗಲೀ ಮಾನವನನ್ನು ಉದ್ಧರಿ ಸುವುದಕ್ಕೆ, ದೇವರ ಕಡೆ ನಡೆಸುವುದಕ್ಕೆ ಉದ್ದೇಶಿಸಲ್ಪಟ್ಟಿರುವವಾದರೂ ಬೈಬಲ್‌ಗೂ, ಭಗವದ್ಗೀತೆಗೂ ಸ್ವಲ್ಪ ವ್ಯತ್ಯಾಸವಿದೆ. ಭಗವದ್ಗೀತೆಯಲ್ಲಿ ಕೃಷ್ಣನ ಹಿಂದಿನ ಚರಿತ್ರೆ ಯಾಗಲೀ, ಮುಂದಿನ ಚರಿತ್ರೆಯಾಗಲೀ ಏನೂ ಇಲ್ಲ. ಕೃಷ್ಣನ ಬೋಧನೆ ಮಾತ್ರ ಗೀತೆಯಲ್ಲಿ ಇದೆ. ಪರಿಶುದ್ಧ ಬೈಬಲ್‌ನಲ್ಲಿ ಹಾಗಲ್ಲದೇ ಪ್ರಭುವಿಗಿಂತಲೂ ಮೊದಲ ಚರಿತ್ರೆ, ಪ್ರಭು ನಂತರ ಚರಿತ್ರೆ ಎರಡೂ ಇವೆ. ಕ್ರೈಸ್ಥವ ಬೋಧಕರ ಬೋಧನೆಗಳಲ್ಲಿ ಪ್ರಭುವಿಗಿಂತಲೂ ಮೊದಲಿರುವ ಹಳೆಯ ನಿಬಂಧನದಲ್ಲಿನ ಮಾತುಗಳು, ಹೊಸ ನಿಬಂಧನದಲ್ಲಿನ ಪ್ರಭು ನಂತರ ಆತನ ಭಕ್ತರ ಪ್ರಚಾರಗಳು ಸ್ಥಳ ಮಾಡಿಕೊಂಡಿವೆ. ಇದರಲ್ಲಿ ತಪ್ಪೇನು ಇಲ್ಲ ಆದರೇ ನಾವು ಚೆನ್ನಾಗಿ ಆಲೋಚಿಸಿದರೆ ಮನುಷ್ಯ ದೇವರ ಮಾರ್ಗದಲ್ಲಿ ನಡೆಯುವುದಕ್ಕೆ ಬೈಬಲ್‌ನಲ್ಲಿ ಸ್ವಲ್ಪ ಭಾಗವೇ ಚೆನ್ನಾಗಿ ಉಪಯೋಗಪಡಬಲ್ಲದೆಂದು ತಿಳಿಯುತ್ತಿದೆ. ಒಂದು ನಾಟಕದಲ್ಲಿ ಎಷ್ಟೋ ಜನ ಪಾತ್ರದಾರಿಗಳು ನಟಿಸಿದರೂ, ಎಲ್ಲರಲ್ಲಿ ಒಂದು ಪಾತ್ರ ಉಳಿದವರಿಗಿಂತಲೂ ಹೆಚ್ಚಾಗಿ ಇಷ್ಟವಾಗುವುದು, ನಾಟಕದಲ್ಲಿನ ಹಂತಗಳಲ್ಲಿ ಯಾವುದೋ ಒಂದು ಹಂತವು ಬಹಳ ಚೆನ್ನಾಗಿ ಇಷ್ಟವಾಗುವುದು ನಡೆಯುತ್ತಿದೆ. ಹಾಗೆಯೇ ಒಟ್ಟಾರೆ ಬೈಬಲ್ ತೆಗೆದುಕೊಂಡರೆ ಅದರಲ್ಲಿ ಹೊಸ ನಿಬಂಧನದಲ್ಲಿ

ಏಸು ಪ್ರಭು ಭೂಮಿ ಮೇಲಕ್ಕೆ ಬಂದಾಗಿನಿಂದ ತಿರುಗಿ ಆತನು ಹೊರಟು ಹೋಗುವವರೆಗು ಇರುವ ಭಾಗವು ಪರಮ ಪವಿತ್ರವು, ಮಾನವನು ದಡ ಸೇರುವುದಕ್ಕೆ ಉನ್ನತವಾದ ಘಟ್ಟವೆಂದು ಹೇಳಬಹುದು. ಬೈಬಲ್‌ನಲ್ಲಿ ಅತಿ ಸಾರಾಂಶವಾದ ಭಾಗ ಏಸುಪ್ರಭುವಿನ ಚರಿತ್ರೆ ಮಾತ್ರವೆ ಎಂದು ಪ್ರತಿ ಮನುಷ್ಯ ಗ್ರಹಿಸಬಹುದು. ಯೇಸುಪ್ರಭು ನುಡಿದಿರುವ ಮಾತುಗಳು ಒಟ್ಟಾರೆ ಬೈಬಲ್‌ನಲ್ಲಿ ವಜ್ರಗಳ ಮೂಟೆಯಂಥವುಗಳು. ಬೈಬಲ್‌ನಲ್ಲಿ ಮಾನವನು ಗ್ರಹಿಸಬೇಕಾಗಿರುವುದೆಲ್ಲಾ ಪ್ರಭುವಿನ ಮಾತುಗಳೊಂದಿಗೆ ಕೂಡಿಕೊಂಡಿರುವ **ಮತ್ತಾಯ ಸುವಾರ್ತೆ, ಮಾರ್ಕು ಸುವಾರ್ತೆ, ಲೂಕಾ ಸುವಾರ್ತೆ, ಯೋಹಾನ್ ಸುವಾರ್ತೆ** ಈ ನಾಲ್ಕನ್ನು ನೋಡಿದರೆ ಸಾಕು. ಮಾನವನಿಗೆ ಬೇಕಾಗಿರುವ ದೈವಸನ್ನಿಧಿಯು ಈ ನಾಲ್ಕು ಸುವಾರ್ತೆಗಳಲ್ಲಿಯೇ ದೊರೆಯುತ್ತದೆ. ಈ ನಾಲ್ಕು ಸುವಾರ್ತೆಗಳಲ್ಲಿ ಜ್ಞಾನಗಳೆಲ್ಲದಕ್ಕಿಂತ ಜ್ಞಾನವು ಒಂದು ಯೋಹಾನ್ ಸುವಾರ್ತೆಯಲ್ಲಿಯೇ ಇದೆ ಎಂದು ಘಂಟಾ ಘೋಷವಾಗಿ ಹೇಳಬಹುದು. ಮಾನವನ ಮೆದುಳು ಗ್ರಹಿಸಿಕೊಳ್ಳಲಾರದಷ್ಟು ಜ್ಞಾನವು 'ಯೋಹಾನ್ ಸುವಾರ್ತೆ'ಯಲ್ಲಿ ಕಾಣಿಸುತ್ತಿದೆ. ಎಷ್ಟೋ ದೊಡ್ಡದಾದ ಬೈಬಲ್ ಗ್ರಂಥವು 1029 ಪುಟಗಳ ಪುಸ್ತಕವಾದರೆ, ಅದರಲ್ಲಿ ಹೊಸ ನಿಬಂಧನದಲ್ಲಿನ ಏಸು ಚರಿತ್ರೆ ಕೇವಲ 102 ಪುಟಗಳು ಮಾತ್ರವೇ ಇದೆ. ಬೈಬಲ್ ಗ್ರಂಥವನ್ನು ಹತ್ತು ಭಾಗಗಳಾಗಿ ಮಾಡಿದರೆ, ಅದರಲ್ಲಿ ಒಂದು ಭಾಗ ಮಾತ್ರ ಒಂಭತ್ತು ಭಾಗಗಳಿಗಿಂತಲೂ ದೊಡ್ಡದೆಂದು ಹೇಳಬಹುದು. ಏಸು ಪ್ರಭುವಿನ ಮಹತ್ವ ತಿಳಿದವರು, ನಿಜ ಜ್ಞಾನವನ್ನು ಈ ಒಂದು ಭಾಗದಲ್ಲಿಯೇ ಗ್ರಹಿಸುತ್ತಾರೆ.

ಎಷ್ಟೋ ದೊಡ್ಡ ಜ್ಞಾನವಿರುವ ಮತ್ತಾಯ, ಮಾರ್ಕು, ಲೂಕಾ, ಯೋಹಾನ್ ಸುವಾರ್ತೆಗಳಲ್ಲಿನ ಪ್ರಭು ಮಾತುಗಳನ್ನು ಕೆಲವನ್ನು ವಿವರಿಸುತ್ತಾ ನಾವು ಬರೆಯುವುದು ನಡೆದಿದೆ. ಎಷ್ಟೋ ಜನ ಫಾದರ್‌ಗಳು, ಪಾಸ್ಟರುಗಳು, ಬಿಷಪ್‌ಗಳು ಪ್ರಭು ಮಾತುಗಳನ್ನು ಕುರಿತು ಹೇಳುತ್ತಿದ್ದಾರೆ ಅಲ್ಲವೆ! ನೀವು ವಾಕ್ಯಗಳಿಗೆ ವಿವರ ಬರೆಯುವುದೇನು ಎಂದು ಕೆಲವರು ಕೇಳಬಹುದು. ಅದಕ್ಕೆ

ನಮ್ಮ ಉತ್ತರ ಏನೆಂದರೆ! ಹಳೆಯ ನಿಬಂಧನದಲ್ಲಿಯೂ ಮತ್ತು ಹೊಸ ನಿಬಂಧನದಲ್ಲಿ ನಾಲ್ಕು ಸುವಾರ್ತೆಗಳನ್ನು ಬಿಟ್ಟು ಉಳಿದ ಭಾಗಗಳಲ್ಲಿ ಯಾರು ಏನು ಹೇಳಿದರೂ ಕೇಳಬಹುದು. ಅವುಗಳನ್ನು ಎಲ್ಲರೂ ಸಾಮರ್ಥ್ಯದಿಂದಲೇ ಬೋಧಿಸುತ್ತಿದ್ದಾರೆಂದು ಹೇಳಬಹುದು. ಆದರೇ ಪ್ರಭು ಚರಿತ್ರೆ ಹೊಂದಿರುವ ನಾಲ್ಕು ಸುವಾರ್ತೆಗಳಲ್ಲಿನ ಮಾತುಗಳು ವಿವರಿಸುವುದರಲ್ಲಿ ಸ್ವಲ್ಪ ಲೋಪವಿದೆ ಯೆಂದೇ ಹೇಳಬಹುದು. ಯಾವ ವಿಧವಾಗಿ ಹಿಂದೂಗಳಿಗೆ ಭಗವದ್ಗೀತೆಯಲ್ಲಿನ ರಹಸ್ಯಗಳು ಇಲ್ಲಿಯವರೆಗೂ ಅರ್ಥವಾಗಲಿಲ್ಲವೆಂದು ಹೇಳಿದ್ದೇವೋ, ಆ ವಿಧವಾಗಿಯೆ ಏಸುಪ್ರಭು ಚರಿತ್ರೆಯಿರುವ ನಾಲ್ಕು ಸುವಾರ್ತೆಗಳಲ್ಲಿಯೂ ಕ್ರೈಸ್ಥರಿಗೆ ಅರ್ಥವಾಗದ ರಹಸ್ಯಗಳು ಎಷ್ಟೋ ಉಳಿದಿವೆಯೆಂದೇ ಹೇಳಬಹುದು. ನಾನು ಈ ಮಾತನ್ನು ಬೋಧಕರ ಮೇಲೆ ಅಸೂಯೆಯಿಂದ ಹೇಳುತ್ತಿಲ್ಲ. ಆದರೆ ಪ್ರಭು ಮೇಲಿನ ವಿಶ್ವಾಸದಿಂದ ಹೇಳುತ್ತಿದ್ದೇವೆ. ಪ್ರಭು ಪ್ರಜೆಗಳಿಗೆ ಹತ್ತಿರವಾಗಿ ಅರ್ಥವಾಗಬೇಕೆಂದು, **ಆತನು** ಎಷ್ಟು ದೊಡ್ಡವನೋ, ಆತನ **ಶಕ್ತಿ** ಏನೋ ತಿಳಿಯಬೇಕೆಂದು ನಾವು ಯಥಾರ್ಥವನ್ನು ವಿವರಿಸುವುದು ನಡೆದಿದೆ.

ಪ್ರಭು ಹೆಸರಿರುವ ನಮ್ಮ ಗ್ರಂಥಗಳನ್ನು ನೋಡಿ ಹಿಂದೂಗಳೇನೋ ಇವು ಕ್ರೈಸ್ಥರ ಪುಸ್ತಕಗಳು ಅವುಗಳನ್ನು ಓದಬಾರದೆಂದು ಅಂದುಕೊಳ್ಳುತ್ತಿದ್ದಾರೆ. ಇನ್ನು ಕ್ರೈಸ್ಥವರೇನೋ ಹಿಂದೂಗಳ ಗುರು ಬರೆದಿರುವವುಗಳನ್ನು ಓದಬಾರ ದೆಂದು, ನಮ್ಮ ಕ್ರೈಸ್ಥವರು ಬರೆದಿರುವವೆ ಓದಬೇಕೆಂದು ಅಂದುಕೊಳ್ಳುತ್ತಿದ್ದಾರೆ. ಕ್ರೈಸ್ಥವ ಪುಸ್ತಕಗಳನ್ನು ಬರೆದಿರುವವನು ಹಿಂದೂವೇ ಅಲ್ಲವೆಂದು, ಹಿಂದೂಗಳು ನಮ್ಮನ್ನು ಸಹಿಸಿಕೊಳ್ಳದೇ ಇರುವಾಗ, ಹಿಂದೂಮತದೊಳಗೆ ಬದಲಿಸುವುದಕ್ಕೆ ಈ ಪುಸ್ತಕಗಳು ಬರೆದಿದ್ದಾರೆ, ಅವುಗಳನ್ನು ಓದಬೇಡಿರೆಂದು ಕೆಲವರು ಕ್ರೈಸ್ಥರು ಇತರ ಕ್ರೈಸ್ಥರಿಗೆ ಹೇಳಿಕೊಳ್ಳುತ್ತಿದ್ದಾರೆ. ಕ್ರೈಸ್ಥರನ್ನು ಹಿಂದೂಗಳಾಗಿ ಮತಾಂತರ ಗೊಳಿಸುತ್ತಿದ್ದಾರೆಂದು ಕ್ರೈಸ್ಥರು, ಹಿಂದೂಗಳನ್ನು ಕ್ರೈಸ್ಥವರನ್ನಾಗಿ ಮತಾಂತರ ಗೊಳಿಸುತ್ತಿದ್ದಾರೆಂದು ಹಿಂದೂಗಳು ನಮ್ಮನ್ನು ಅನ್ನುತ್ತಿದ್ದಾರೆ. ವಾಸ್ತವವಾಗಿ ಯಾರನ್ನೂ ನಾವು ಬದಲಾಯಿಸಲಿಲ್ಲ (ಮತಾಂತರಗೊಳಿಸಲಿಲ್ಲ) ಆದರೇ,

ನಿಜವಾದ ದೇವರನ್ನು ತಿಳಿದುಕೊಳ್ಳಿರೆಂದು ಮಾತ್ರ ಹೇಳುತ್ತಿದ್ದೇವೆ. ದೇವರನ್ನು ಕುರಿತು ಹೇಳುವ **ಹಕ್ಕು** ದೇವರ ಸಂತತಿಯಾದ ಪ್ರತಿ ಮನುಷ್ಯನಿಗೂ ಇದೆ. ಆದಕಾರಣ ಯಾರು ಏನೆಂದರೂ ನಾವು ಸಹನೆಯಿಂದ ದೇವರ ವಿಷಯಗಳನ್ನು ತಿಳಿಸುತ್ತಲೆ ಹೋಗುತ್ತಿದ್ದೇವೆ.

ನನ್ನನ್ನು ನೋಡಿ ಅಸೂಯೆಪಡುವವರೆಲ್ಲರಿಗೂ ನಾನೊಂದು ಪ್ರಶ್ನೆ ಹಾಕುತ್ತಿದ್ದೇನೆ. **ದೇವರು ಮನುಷ್ಯನಾಗಿ ಭೂಮಿ ಮೇಲಕ್ಕೆ ಬಂದಿದ್ದಾನೆ ಹೋಗಿದ್ದಾನೆ. ಹೋಗುವಾಗ ಮರಳಿ ಬರುತ್ತೇನೆಂದು ಕೂಡಾ ಹೇಳಿದ್ದಾನೆ. ಒಂದು ಬಾರಿಯೆ ಬಂದಿದ್ದಾನೆ ಮರಳಿ ಒಂದು ಬಾರಿಯೇ ಬರುತ್ತಾನೆಂದು ಯಾರಾದರೂ ಹೇಳಬಲ್ಲಿರಾ?** ಜ್ಞಾನವಿರುವ ಯಾರೂ ಆ ವಿಧವಾಗಿ ಹೇಳಲಾರನು. ನನ್ನ ಅವಶ್ಯಕತೆ ಭೂಮಿಮೇಲೆ ಇರುವಾಗಲೆಲ್ಲಾ ಬರುತ್ತೇನೆ ಎಂದಿದ್ದಾನೆ. ಧರ್ಮಗಳಿಗೆ ಹಾನಿ ಉಂಟಾದಾಗ ಬರುತ್ತೇನೆ ಎಂದಿದ್ದಾನೆ. ಭಗವದ್ಗೀತೆಯಲ್ಲಿ ಆ ಮಾತನ್ನೇ ಹೇಳಿದ್ದಾನೆ. ಬೈಬಲ್‌ನಲ್ಲಿ ಆ ಮಾತನ್ನೇ ಹೇಳಿದ್ದಾನೆ. ದೇವರು ಯಾವಾಗ ಯಾವ ರೂಪದಲ್ಲಾದರೂ ಭೂಮಿ ಮೇಲಕ್ಕೆ ಬಂದು ತನ್ನ ಧರ್ಮಗಳನ್ನು ತಿಳಿಸಿ ಹೋಗುತ್ತಾನೆ. **ಗೀತೆಯಲ್ಲಿ ಬರುತ್ತೇನೆಂದ ಹಾಗೆ ಕೃಷ್ಣನು ಕೃಷ್ಣನಾಗಿಯೇ ಬರಬೇಕೆಂದು, ಬರುತ್ತಾನೆಂದೂ ಅಂದುಕೊಳ್ಳುವುದು ಹಿಂದೂಗಳ ತಪ್ಪು** ಹಾಗೆಯೇ ಬೈಬಲ್‌ನಲ್ಲಿ ಬರುತ್ತೇನೆಂದು ಹೇಳಿದ್ದಾನೆ ಅಲ್ಲವೇ! ಎಂದು **ಏಸು ಏಸನಾಗಿ ಬರಬೇಕೆಂದು, ಹಾಗೆಯೇ ಬರುತ್ತಾನೆಂದು ಅಂದುಕೊಳ್ಳುವುದು ಅವರ ತಪ್ಪು.** ದೇವರು ಬರಬೇಕೆಂದುಕೊಂಡರೇ ಯಾವಾಗ, ಎಲ್ಲಿ, ಯಾವ ರೂಪವೆಂಬ ನಿಬಂಧನೆ ಇರುವುದಿಲ್ಲ. ಆತನನ್ನು ಯಾರೂ ಗುರುತಿಸಲಾರದಂತೆ ಹೊಸ ರೂಪಗಳೊಂದಿಗೆ ಬರುತ್ತಾನೆ. ಆದರೆ ಹಳೆಯ ಜ್ಞಾನವನ್ನೇ ಬೋಧಿಸುತ್ತಾನೆ. ಏಕೆಂದರೆ! ಕಾಲಾನುಗುಣವಾಗಿ ಧರ್ಮಗಳು ಬದಲಾಗುವವಲ್ಲ. ಧರ್ಮಗಳು ಎಂದಿಗೂ ಬದಲಾವಣೆ ಹೊಂದದೆ ಇರುವವು ಶಾಸ್ತ್ರಬದ್ಧವಾದವು. ಆದಕಾರಣ ಯಾವಾಗ ಯಾವ ಹೆಸರಿನೊಂದಿಗೆ, ಯಾವ ರೂಪದೊಂದಿಗೆ, ಯಾವ ಮತದಲ್ಲಿ ಹುಟ್ಟಿದರೂ ಒಂದೇ ಧರ್ಮಗಳನ್ನು ತಿಳಿಸುತ್ತಿರುತ್ತಾನೆ.

ಆತನು ಬಂದಾಗಲೆಲ್ಲಾ ಭೂಮಿ ಮೇಲೆ ಒಂದು ಮತವನ್ನು ಯಾವಾಗಲೂ ಸೃಷ್ಠಿಸಲಿಲ್ಲ. ಮತವನ್ನು ಕುರಿತು ಬೋಧಿಸಲೂ ಇಲ್ಲ. ದೇವರು ಯಾವ ಒಂದು ಮತಕ್ಕೂ ಸಂಬಂಧಿಸಿದವನಲ್ಲ. ಆತನ ಧರ್ಮಗಳನ್ನೇ ಆತನು ತಿಳಿಸಿದ್ದಾನೆ ಹೊರತು, ಯಾವ ಮತವನ್ನು ಕುರಿತು ತಿಳಿಸಲಿಲ್ಲ. ಮಾನವರು ಸೃಷ್ಠಿಸಿಕೊಂಡಿರುವವೇ ಮತಗಳು. ದೇವರದ್ದೆಲ್ಲವೂ ಮತಗಳಿಗೆ ಅತೀತವಾದ ಬೋಧನೆಯಾಗಿ ಇರುತ್ತದೆ. ಮತಗಳಲ್ಲಿ ತಪ್ಪು ಮಾಡುವವರನ್ನು ನೋಡಿ, ಅವರ ತಪ್ಪನ್ನು ಬೆರಳೆತ್ತಿ ತೋರಿಸಿ, ನೀವು ಯಾವ ಮತಸ್ಥನಾದರೂ **ದೇವರ ಮಾರ್ಗ** ಇದು, ಅದನ್ನು ಸಕ್ರಮವಾಗಿ ಆಚರಿಸಿರೆಂದೆ ದೇವರು ತಿಳಿಸಿದ್ದಾನೆ. ಆದರೆ ಯಾವ ಒಂದು ಮತವನ್ನು ಆತನು ಸಮ್ಮತಿಸಲಿಲ್ಲ. ಮನುಷ್ಯರು ತಿಳಿದುಕೊಂಡ ಜ್ಞಾನವನ್ನು ಅನುಸರಿಸಿ, ಮಾತನಾಡಿಕೊಳ್ಳುವ ಭಾಷೆಯನ್ನು ಅನುಸರಿಸಿ, ನಡೆದುಕೊಳ್ಳುವ ಪದ್ಧತಿಯನ್ನು ಅನುಸರಿಸಿ ಮತಗಳನ್ನು ಏರ್ಪಡಿಸಿಕೊಂಡಿದ್ದಾರೆ ಹೊರತು, ಧರ್ಮಗಳಿಂದ ಮತಗಳು ಏರ್ಪಟ್ಟಿಲ್ಲ.

ಪ್ರತಿ ಮತಕ್ಕೂ ಒಂದು ಪದ್ಧತಿ, ಒಂದು ನಿಯಮಿತ ದೇವರ ಆರಾಧನೆ ಇರುತ್ತದೆ. ಆಯಾ ಮತಗಳಲ್ಲಿ ಇರುವವರು ಆ ವಿಧವಾಗಿಯೆ ಆಚರಿಸುವುದು ರೂಢಿಯಾಗಿದೆ. ಇವೆಲ್ಲವೂ ಮನುಷ್ಯರ ಆರಾಧನೆ ಕ್ರಮಗಳು ಆಗಿರುವಾಗ, ದೇವರು ಮನುಷ್ಯನಾಗಿ ಬಂದಾಗ ಆತನಿಗೆ ಮತಗಳ ಅಭ್ಯಾಸಗಳು, ಆಚಾರಗಳು ಇರುವುದಿಲ್ಲ. ಹಾಗೆಯೇ ಆತನು ಮತ್ತೊಂದು ದೇವರನ್ನು ಆರಾಧಿಸುವುದು ಕೂಡಾ ಇರುವುದಿಲ್ಲ. ಮತಗಳು, ಮತಗಳ ಆಚಾರಗಳು, ಮನುಷ್ಯರಿಗೆ ಹೊರತು ದೇವರಿಗಲ್ಲ. ಮನುಷ್ಯರ ಭಕ್ತಿಯಲ್ಲಿರುವ ಲೋಪಗಳನ್ನು ತಿಳಿಸಿ **ಸಕ್ರಮ ಮಾರ್ಗದಲ್ಲಿ** ನಡೆಸುವುದು ದೇವರ ಕರ್ತವ್ಯ. ಆದ್ದರಿಂದ ಆತನು ಮಾನವನಾಗಿ ಬಂದಾಗ ದೇವರನ್ನು ಕುರಿತು, ದೇವರ ಧರ್ಮಗಳನ್ನು ಕುರಿತಾಗಿಯೇ ಹೇಳುತ್ತಾನೆ. ಹಾಗಲ್ಲದೆ ಎಲ್ಲ ಮನುಷ್ಯರ ಹಾಗೆ ಮತ್ತೊಂದು ದೇವರ ಪೂಜೆಗಳಲ್ಲಾಗಲೀ, ಆರಾಧನೆಗಳಲ್ಲಾಗಲೀ ಮುಳುಗಿ ಹೋಗುವುದಿಲ್ಲ.

ದ್ವಾಪರ ಯುಗದಲ್ಲಿ ದೇವರು ಕೃಷ್ಣನಾಗಿ ಬಂದಾಗ ಆತನು ಯಾರನ್ನೂ ಪೂಜಿಸಲಿಲ್ಲ. ಸಮಯ ಬಂದಾಗ ಪರಮಾತ್ಮ ಜ್ಞಾನವನ್ನು ಸಂಪೂರ್ಣವಾಗಿ ತಿಳಿಸಿದ್ದಾನೆ. ಹಾಗೆಯೆ ಕಲಿಯುಗದಲ್ಲಿ ಏಸುಪ್ರಭುವಾಗಿ ಬಂದಾಗ ಆತನು ಸಹ ಯಾರನ್ನೂ ಪೂಜಿಸುತ್ತಾ ಕುಳಿತುಕೊಳ್ಳಲಿಲ್ಲ. ಆತನು ಬೋಧಿಸಬೇಕಾಗಿರುವುದು ಮಾನವರಿಗೆ ತಿಳಿಸಿ ಹೋಗಿದ್ದಾನೆ. ಒಂದು **ಜ್ಞಾನ** ತಿಳಿಸುವುದರಲ್ಲಿಯೇ ಆತನ ಒಂದು ಮಹತ್ವ, ಆತನಲ್ಲಿನ ದೈವತ್ವವು ತಿಳಿಯುತ್ತದೆ. ಉಳಿದ ಸಮಯಗಳಲ್ಲಿ ಎಲ್ಲರೊಂದಿಗೆ ಸಮಾನವಾದ ಮನುಷ್ಯನ ಹಾಗೆಯೇ ಕಾಣಿಸುತ್ತಿರುತ್ತಾನೆ. ಜ್ಞಾನ ತಿಳಿಯದವರು ಆತನನ್ನು ಮನುಷ್ಯನನ್ನಾಗಿ ಲೆಕ್ಕಿಸಿಕೊಳ್ಳುತ್ತಾರೆ. ಜ್ಞಾನವಿರುವವರು ಆತನನ್ನು ದೇವರಂತೆ ಗುರುತಿಸುತ್ತಾರೆ. ಸಂಪೂರ್ಣ ಜ್ಞಾನವಿರುವವರು ಆತನು ಭೂಮಿ ಮೇಲಕ್ಕೆ ಯಾವಾಗ ಬಂದರೂ ಗುರುತಿಸಬಲ್ಲರು. ಮಾಯ ಪ್ರಭಾವವಿರುವವರು ಆತನನ್ನು ಯಾವ ಪರಿಸ್ಥಿತಿಯಲ್ಲಿಯೂ ಗುರುತಿಸಲಾರರು. ಅಷ್ಟೇ ಅಲ್ಲದೆ ಸಾಧಾರಣ ಮಾನವನನ್ನಾಗಿ ತಿಳಿದು ಆತನನ್ನು ಸಹ ಅವಮಾನ ಪಾಲು ಮಾಡುತ್ತಾರೆ, ಕಷ್ಟಕೊಡುತ್ತಾರೆ.

ದೇವರು ಮನುಷ್ಯನ ರೂಪದಲ್ಲಿ ಕೆಲವು ಸಾವಿರ ವರ್ಷಗಳಿಗೊಮ್ಮೆ ಭೂಮಿ ಮೇಲಕ್ಕೆ ಬಂದರೆ ಸರ್ಪಸಂತಾನವಾದ ಮನುಷ್ಯರು ಆತನನ್ನು ಗುರುತಿಸಲಾರರು. ಗುರುತಿಸಲಾರದೆ ಹೋದರೂ ಫರವಾಗಿಲ್ಲ ಆದರೆ, ಆತನನ್ನೇ ಹಿಂಸಿಸುವುದಕ್ಕೆ ಆರಂಭಿಸುತ್ತಾರೆ. ಗುರುತಿಸಲಾರದಷ್ಟು ಮಾತ್ರಕ್ಕೆ ಏಕೆ ಹಿಂಸಿಸುತ್ತಾರೆಂದು ಕೆಲವರಿಗೆ ಪ್ರಶ್ನೆ ಬರಬಹುದು. ಸಾಟಿ ಮಾನವರನ್ನು ಯಾರೂ ಹಿಂಸಿಸಲಿಲ್ಲವೆ ಎಂದು ಕೇಳಬಹುದು. ಅದಕ್ಕೆ ಸಮಾಧಾನವೇನೆಂದರೆ! ದೇವರು ಮನುಷ್ಯನಾಗಿ ಬಂದರೆ ಸಾಟಿ ಮಾನವನಂತೆ ಆತನು ಜೀವಿಸುವುದಿಲ್ಲ. ಆತನು ಜ್ಞಾನ ತಿಳಿಸುವುದಕ್ಕೆ ಬಂದಿರುತ್ತಾನೆ ಆದ ಕಾರಣ ದೈವಜ್ಞಾನವನ್ನು ಧರ್ಮಸಹಿತವಾಗಿ ತಿಳಿಸುತ್ತಾನೆ. ಹಾಗಿರುವಾಗ ಅಧರ್ಮವರರಿಗೆ, ಅಜ್ಞಾನಿಗಳಿಗೆ, ಮಾಯಾ ಜ್ಞಾನ ಇರುವವರಿಗೆ ಆತನ ಮೇಲೆ

ದ್ವೇಷವೇರ್ಪಡುತ್ತದೆ. ಆ ದ್ವೇಷವೇ ಮನುಷ್ಯರಿಂದ ಆತನನ್ನು ಹಿಂಸಿಸುವಂತೆ ಮಾಡುತ್ತಿದೆ. ಏನೂ ಹೇಳದೇ ಹೋದರೆ ಯಾವ ವಿರೋಧವಿರುವುದಿಲ್ಲ. ಮನುಷ್ಯರಲ್ಲಿನ ಅಧರ್ಮಗಳನ್ನು ಬೆರಳೆತ್ತಿ ತೋರಿಸುವುದರಿಂದ ತಾವು ಧರ್ಮವರರೆಂದುಕೊಳ್ಳುವ ಅಧರ್ಮವರರೆಲ್ಲರಿಗೂ ಕೋಪವೆ ಬರುತ್ತದೆ. ಆದ ಕಾರಣ ಆತನು ಬಂದಿರುವ ಪ್ರತಿ ಜನ್ಮದಲ್ಲಿಯೂ ಮಾನವರಿಂದ ಅವಮಾನಿ ಸಲ್ಪಟ್ಟಿದ್ದಾನೆ. ಏಸು ಜನ್ಮದಲ್ಲಿ ಆತನು ಬೋಧಿಸುವ ಜ್ಞಾನವನ್ನು ನೋಡಿ ಸಹಿಸಿಕೊಳ್ಳಲಾರದವರು ಈತನು ನಮಗಿಂತಲೂ ದೊಡ್ಡವನಾ! ಎಂದು ಕೊನೆಗೆ ಮರಣ ಶಿಕ್ಷೆಯನ್ನೇ ವಿಧಿಸಿದ್ದಾರೆ. ಜ್ಞಾನಿಗಳೆಂದುಕೊಳ್ಳುವ ಮತಾಚಾರರಿಂದ ಅಲ್ಲವೇ ಆತನು ಮರಣಿಸಿರುವುದು. ಸರ್ಪಸಂತಾನವು ಅಜ್ಞಾನವೆನ್ನುವ ವಿಷವನ್ನು ಹೊಂದಿರುತ್ತದೆ. ಆದ್ದರಿಂದ ಪ್ರಭು ಜನ್ಮ ಸರ್ಪಸಂತಾನ ಕೈಯಿಂದಲೆ ಅಂತ್ಯವಾಗಿದೆ.

ದೇವರ ವಿಷಯ ದೇವರಿಗೇ ಗೊತ್ತು, ಮನುಷ್ಯರಿಗೆ ಏನೂ ತಿಳಿದಿಲ್ಲ. ದೇವರು ತಿಳಿಸಿದರೇನೇ ಮನುಷ್ಯನಿಗೆ ದೇವರ ಧರ್ಮಗಳು ತಿಳಿದುಬರುತ್ತವೆ. ಯಾವ ಮನುಷ್ಯ ಸ್ವತಃವಾಗಿ ದೇವರ ವಿಷಯಗಳನ್ನು ತಿಳಿಯಲಾರನು. ಆದ್ದರಿಂದ ವಿಶ್ವವೆಲ್ಲಾ ಅಣುವಣುವಿನಲ್ಲೂ ವ್ಯಾಪಿಸಿರುವ ದೈವದಿಂದ ಸ್ವಲ್ಪ ಭಾಗ ಅಥವಾ ಸ್ವಲ್ಪ ಸಾಂದ್ರತೆ ಬಂದು ಮನುಷ್ಯನಾಗಿ ಹುಟ್ಟುತ್ತಿದೆ. ಪ್ರಪಂಚದಲ್ಲಿ ಸ್ವಲ್ಪ ಕಾಲ ಬದುಕುವುದಕ್ಕೆ ಒಂದು ವಿಧಾನ ಬೇಕು ಅದನ್ನೆ 'ಕರ್ಮ' ಎನ್ನುತ್ತಿದ್ದೇವೆ. ಮನುಷ್ಯ ಜನ್ಮಕ್ಕೆ ಕಾರಣವಾದ ಅದನ್ನೆ ಕರ್ಮ ಎನ್ನುತ್ತಿದ್ದೇವೆ. ದೇವರಿಗೆ ಕರ್ಮ ಇರುವುದಿಲ್ಲ. ಆದಕಾರಣ ದೇವರೆ ಒಂದು ಜನ್ಮಕ್ಕೆ ಬೇಕಾಗಿರುವ ಕರ್ಮವನ್ನು ಸೃಷ್ಟಿಸಿಕೊಂಡು ಹುಟ್ಟುತ್ತಿದ್ದಾನೆ. ಅಂಥವನನ್ನೆ **ಸ್ವಯಂಭು** ಎನ್ನುತ್ತಿದ್ದೇವೆ. ಸ್ವಯಂಭು ಎಂದರೇ ಕರ್ಮದಿಂದ ಅಲ್ಲದೆ ತನಗೆ ತಾನಾಗಿ ಹುಟ್ಟಿದವನೆಂದು ಅರ್ಥ. ಆ ವಿಧವಾಗಿ ಹುಟ್ಟಿರುವವನನ್ನೆ **ಭಗವಂತನೆಂದು, ಆದರಣಕರ್ತ ಎಂದು** ಆಧ್ಯಾತ್ಮಿಕ ಭಾಷೆಯಲ್ಲಿ ಕರೆಯುತ್ತಿದ್ದೇವೆ. ಎಷ್ಟೋ ಬಾರಿ ದೇವರು ಭಗವಂತನಾಗಿ ಭೂಮಿ ಮೇಲಕ್ಕೆ ಬಂದು ಹೋಗಿರಬಹುದು. ಭೂಮಿ

ಮೇಲೆ ಧರ್ಮಗಳ ಪುನರುದ್ಧಾರಣೆ ಎಷ್ಟು ಬಾರಿ ನಡೆದಿದೆಯೊ ತಿಳಿದಿಲ್ಲ. ಪೂರ್ವವು ಲಕ್ಷ ವರ್ಷಗಳ ಮೊದಲು ನಮಗೆ ತಿಳಿಯದ ರಹಸ್ಯಗಳು ಎಷ್ಟೋ ಕಳೆದು ಹೋಗಿವೆ. ಕೆಲವು ಸಾವಿರ ವರ್ಷಗಳಿಂದ ಮಾತ್ರವೆ ಚರಿತ್ರೆಗಳು ಬರೆಯಲಾಗಿದೆ. ಆದ್ದರಿಂದ ಕೆಲವು ಗತ ವಿಷಯಗಳು, ಕೆಲವರ ಚರಿತ್ರೆಗಳನ್ನು ತಿಳಿದುಕೊಳ್ಳುತ್ತಿದ್ದೇವೆ. ಚರಿತ್ರೆಯನ್ನು ಪರೀಕ್ಷಿಸಿ ನೋಡಿದರೆ ದೇವರು ಮನುಷ್ಯನಾಗಿ ಭೂಮಿ ಮೇಲಕ್ಕೆ ಬಂದ ಸಂದರ್ಭಗಳು ಕಾಣಿಸುತ್ತಿವೆ.

**ದೇವರು ಭೂಗೋಳದ ಮೇಲೆ ಆಗಾಗ ಮನುಷ್ಯನಾಗಿ ಉದಯಿಸುತ್ತಿದ್ದಾನೆಂದು ಮನುಷ್ಯನಾಗಿಯೆ ಅಸ್ತಮಿಸುತ್ತಿದ್ದಾನೆಂದು** ತಿಳಿಯುತ್ತಿದೆ. ನಮಗಿರುವ ಜ್ಞಾನದಿಂದ ಆಳವಾಗಿ ಯೋಚಿಸಿ ನೋಡಿದರೆ ಐದು ಸಾವಿರ ವರ್ಷಗಳ ಪೂರ್ವವು ಭಾರತ ದೇಶದಲ್ಲಿಯೂ, ಎರಡು ಸಾವಿರ ವರ್ಷಗಳ ಪೂರ್ವವು ಇಸ್ರಾಯಿಲ್ ದೇಶದಲ್ಲಿಯೂ ದೇವರು ಹುಟ್ಟಿದ ಹಾಗೆ ತಿಳಿಯುತ್ತಿದೆ. ಆಗಿನ ದಿನಗಳ ಇಸ್ರಾಯಿಲ್ ದೇಶದಲ್ಲಿ ದೈವವು ಏಸುಪ್ರಭುವಾಗಿ ಹುಟ್ಟಿದೆ. ಮೊದಲೆ ತಾನು ನಿರ್ಣಯಿಸಿಕೊಂಡಿರುವ ಕರ್ಮದ ಪ್ರಕಾರ ಕೇವಲ ಮೂವತ್ತುಮೂರು ವರ್ಷಗಳು ಭೂಮಿಮೇಲೆ ಇದ್ದು, ಮನುಷ್ಯರ ಮಧ್ಯೆ ಸಂಚರಿಸಿ ದೈವಾಂಶ ಹೊರಟು ಹೋಗಿದೆ. ಮೂವತ್ತುಮೂರು ವರ್ಷಗಳಲ್ಲಿ ಮೂವತ್ತು ವರ್ಷಗಳು ಸಾಧಾರಣ ಜೀವಾತ್ಮವಾಗಿ ಜೀವಿಸಿರುವ ಪ್ರಭು, ನಂತರ ಮೂರು ವರ್ಷಗಳು ಆಗಾಗ ಆತ್ಮವಾಗಿ ಜೀವಿಸುತ್ತಾ ಆತ್ಮಜ್ಞಾನವನ್ನು ಬೋಧಿಸಿದ್ದಾನೆ.

ಇಲ್ಲಿ ಕೆಲವರಿಗೆ ಒಂದು ಪ್ರಶ್ನೆ ಬರಬಹುದು. ಅದೇನೆಂದರೇ! ದೈವವು ಭೂಮಿ ಮೇಲೆ ಮನುಷ್ಯನಾಗಿ ಜನ್ಮಿಸಿದೆ ಎನ್ನುತ್ತಿದ್ದೀರ. ದೈವವು (ದೇವರು) ವಿಶ್ವವೆಲ್ಲಾ ಅಣುವಣುವಿನಲ್ಲೂ ವ್ಯಾಪಿಸಿ ಇದ್ದಾನೆಂದು ಹೇಳುತ್ತಿದ್ದೀರ. ಮನುಷ್ಯನಾಗಿ ಜನ್ಮಿಸಿದಾಗ ವಿಶ್ವವೆಲ್ಲಾ ಇಲ್ಲದೇ ಹೋಗುತ್ತಿದ್ದಾನಾ? ಎನ್ನುವುದು ಪ್ರಶ್ನೆ. ಅಷ್ಟೇ ಅಲ್ಲದೆ ಎಲ್ಲರಲ್ಲಿಯೂ ಕೂಡಾ ಇದ್ದಾನೆನ್ನುವ ದೇವರು ಭೂಮಿಮೇಲೆ ಭಗವಂತನಾಗಿ ಹುಟ್ಟಿದ ನಂತರ ಎಲ್ಲರಲ್ಲಿ ಇಲ್ಲದೆ ಹೋಗುತ್ತಾನಾ? ಎನ್ನುವುದು ಕೂಡಾ ಪ್ರಶ್ನೆ. ಇವುಗಳಿಗೆ ಉತ್ತರವನ್ನು ನೋಡೋಣ. ಸಮುದ್ರದಲ್ಲಿ

ನೀರು ಅಖಂಡವಾಗಿ ಇದೆ. ಅದೇ ನೀರನ್ನು ಒಂದು ಚೆಂಬಿನೊಳಗೊ ಇಲ್ಲವೆ ಒಂದು ಪಾತ್ರೆಯೊಳಗೊ ತೆಗೆದುಕೊಂಡಿದ್ದೇವೆಂದುಕೊಳ್ಳಿ. ತೆಗೆದುಕೊಂಡ ಪಾತ್ರೆಯೊಳಗೆ ನೀರಿದೆ. ಅಷ್ಟು ಮಾತ್ರಕ್ಕೆ ಸಮುದ್ರದಲ್ಲಿ ನೀರಿಲ್ಲದೆ ಹೋಗಲಿಲ್ಲ ಅಲ್ಲವೇ! ಪಾತ್ರೆಯಲ್ಲಿನ ನೀರನ್ನು ಖಂಡವಾದ ನೀರು ಎನ್ನುತ್ತಿದ್ದೇವೆ. ಸಮುದ್ರ ದಲ್ಲಿನ ನೀರನ್ನು ಅಖಂಡವಾದ ನೀರು ಎನ್ನುತ್ತಿದ್ದೇವೆ. ಪಾತ್ರೆಯೊಳಗಿನದು ನೀರೇ ಸಮುದ್ರದೊಳಗಿನವು ನೀರೇ. ನೀರಲ್ಲಿ ಖಂಡಿಸಲ್ಪಟ್ಟಿರುವುದು, ಖಂಡಿಸಲ್ಪಡದೆ ಇರುವುದೆಂಬ ವ್ಯತ್ಯಾಸ ಹೊರತು ನೀರಲ್ಲಿನ ಧರ್ಮಗಳಲ್ಲಿ ಯಾವ ವ್ಯತ್ಯಾಸ ಇಲ್ಲ. ಹಾಗೆಯೆ ದೇವರು ಸಮುದ್ರದಂಥವನನ್ನಾಗಿ ಭಾವಿಸಿಕೊಳ್ಳೋಣ. ಸಮುದ್ರದಿಂದ ಪಾತ್ರೆಯೊಳಗೆ ನೀರು ಬೇರೆಯಾದಂತೆ ದೇವರಿಂದ ಭಗವಂತನು ಬೇರೆಯಾಗಿದ್ದಾನೆ. ಸಮುದ್ರದಲ್ಲಿನ ನೀರು ಪಾತ್ರೆಯೊಳಗಿನ ನೀರು ಒಂದೇ ಆದಂತೆ ದೇವರು, ಭಗವಂತನು ಇಬ್ಬರೂ ಒಂದೇ ಆಗುತ್ತಾರೆ. ಪಾತ್ರೆಯೊಳಗೆ ನೀರು ತೆಗೆದುಕೊಂಡಷ್ಟು ಮಾತ್ರಕ್ಕೆ ಸಮುದ್ರದಲ್ಲಿ ಬದಲಾವಣೆ ಬರುವುದಿಲ್ಲ. ಸಮುದ್ರದಲ್ಲಿ ನೀರಿಲ್ಲದೆ ಹೋಗುವುದಿಲ್ಲ. ಹಾಗೆಯೆ ದೇವರಲ್ಲಿನ ಸ್ವಲ್ಪ ಅಂಶ ಭಗವಂತನಾಗಿ ಹುಟ್ಟಿದಾಗ ದೇವರು ಮೊದಲು ಹೇಗೆ ವ್ಯಾಪಿಸಿದ್ದಾನೊ ಹಾಗೆಯೆ ಇರುತ್ತಾನೆ. ದೇವರು ಭಗವಂತನಾಗಿ ಬಂದಾಗ ದೇವರಲ್ಲಾಗಲೀ, ದೇವರ ಧರ್ಮಗಳಲ್ಲಾಗಲೀ, ದೇವರ ವ್ಯಾಪ್ತಿಯಲ್ಲಾಗಲೀ ಯಾವ ಬದಲಾವಣೆ ಇರುವುದಿಲ್ಲವೆಂದು ತಿಳಿಯಬೇಕು. ದೇವರ ಅಂಶ ಭಗವಂತನಾಗುತ್ತಿದೆ ಆದರೆ ದೇವರೆಲ್ಲವೂ ಭಗವಂತನಾಗಲಿಲ್ಲ ಅಲ್ಲವೇ! ಅಂಶ ಎಂದರೆ ಸ್ವಲ್ಪ ಭಾಗ ಮಾತ್ರ, ದೇವರೆಲ್ಲವೂ ಅಲ್ಲ. ಸ್ವಲ್ಪ ಭಾಗವಾದರೂ, ಎಲ್ಲಾ ಆದರೂ ಒಂದೇ ಧರ್ಮ ಹೊಂದಿದೆ. ಆದಕಾರಣ ದೇವರ ಅಂಶ ಭೂಮಿ ಮೇಲೆ ಹುಟ್ಟಿದಾಗ ದೇವರೇ ಹುಟ್ಟಿದ್ದಾನೆನ್ನುವುದರಲ್ಲಿ ತಪ್ಪಿಲ್ಲ. ಆದ್ದರಿಂದ ಏಸು ಪ್ರಭುವನ್ನು 'ದೇವರು' ಎನ್ನುವುದರಲ್ಲಿ ತಪ್ಪಿಲ್ಲ.

ಇಲ್ಲಿ ಇನ್ನು ಕೆಲವರಿಗೆ ಮತ್ತೊಂದು ಪ್ರಶ್ನೆ ಬರಬಹುದು. ಅದೇನೆಂದರೇ! ಏಸುಪ್ರಭು ದೇವರೆಂದು ನೀವಂದ ಹಾಗೆ ದೇವರಾದರೆ ಆತನನ್ನು ಮನುಷ್ಯರು

ಬಾಧಿಸಿದಾಗ ಯಾಕೆ ಬಾಧೆಪಟ್ಟಿದ್ದಾನೆ? ಮನುಷ್ಯರಿಂದ ಯಾಕೆ ಹಿಂಸಿಸಲ್ಪಟ್ಟಿದ್ದಾನೆ? ಮನುಷ್ಯರಿಂದ ಯಾಕೆ ಅವಮಾನಿಸಲ್ಪಡಬೇಕು? ಮನುಷ್ಯರು ತನ್ನ ಬಗ್ಗೆ ಕೆಟ್ಟದಾಗಿ ಪ್ರವರ್ತಿಸಿದಾಗ ತಾನ್ಯಾರೋ ತಿಳಿಸಿ, ತನ್ನ ಮಹಿಮೆಯಿಂದ ಅವರನ್ನು ಶಿಕ್ಷಿಸಬಹುದು ಅಲ್ಲವೇ! ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೆ! ಈ ವಿಷಯವು ಅರ್ಥವಾಗಬೇಕೆಂದರೆ ಮೊದಲು ನಾವೊಂದು ದೈವ ರಹಸ್ಯವನ್ನು ತಿಳಿದುಕೊಳ್ಳಬೇಕು. ಒಬ್ಬ ಸಾಧಾರಣ ವ್ಯಕ್ತಿಯ ಶರೀರದಲ್ಲಿ ಮೂರು ಆತ್ಮಗಳಿವೆ. ಒಂದು ಜೀವಾತ್ಮ, ಎರಡು ಆತ್ಮ, ಮೂರು ಪರಮಾತ್ಮ. ಈ ಮೂರು ಆತ್ಮಗಳಲ್ಲಿ ಜೀವಾತ್ಮ, ಆತ್ಮ ಎರಡೂ ಶರೀರದೊಳಗೆ ನಿವಾಸಿಸುತ್ತಿವೆ. ಈ ಎರಡೂ ಆತ್ಮಗಳು ಶರೀರದ ಹೊರಗೆ ಸ್ವಲ್ಪವೂ ಇಲ್ಲ. ಮೂರನೆಯದಾದ ಪರಮಾತ್ಮ ಶರೀರದ ಒಳಗೆ ಮತ್ತು ಶರೀರದ ಹೊರಗೆ ಎಲ್ಲೆಡೆ ಅಣುವಣುವಿನಲ್ಲೂ ವ್ಯಾಪಿಸಿದೆ. ಪರಮಾತ್ಮ ಶರೀರದ ಹೊರಗಾಗಲೀ, ಶರೀರದ ಒಳಗಾಗಲೀ ಯಾವ ರೀತಿಯ ಕೆಲಸ ಮಾಡದೆ ಸುಮ್ಮನಿದೆ. ಎರಡನೆಯದಾದ ಆತ್ಮ ಶರೀರದಲ್ಲಿ ನಡೆಯುವ ಕಾರ್ಯಗಳೆಲ್ಲವನ್ನೂ ಮಾಡುತ್ತಿದೆ. ಮೊದಲನೆಯದಾದ ಜೀವಾತ್ಮ ಯಾವ ಕೆಲಸವೂ ಮಾಡದೆ ಕೇವಲ ಸುಖ, ದುಃಖ ಎಂಬ ಎರಡು ಅನುಭೂತಿಗಳನ್ನು ಮಾತ್ರ ಅನುಭವಿಸುತ್ತಿದೆ. ಬಹಳ ಜನ ಜೀವಾತ್ಮಗಳಾದ ನಾವೇ ಎಲ್ಲಾ ನೋಡುತ್ತಿದ್ದೇವೆ, ಮಾಡುತ್ತಿದ್ದೇವೆಂದು ಅಂದುಕೊಳ್ಳುತ್ತಿದ್ದೇವೆ. ಹಾಗೆ ಯಾವ ಶರೀರದಲ್ಲಿಯೂ ನಡೆಯುತ್ತಿಲ್ಲ. ನಮಗೆ ತಿಳಿಯದೆ ನಮ್ಮ ಶರೀರದಲ್ಲಿ ನಮ್ಮೊಂದಿಗೆ (ನಮ್ಮಜೊತೆ) ಇರುವ **ಆತ್ಮವೆ** ಎಲ್ಲಾ ಕೆಲಸಗಳು ಮಾಡುತ್ತಿದೆ. ಆತ್ಮ ಕೂಡಾ ತನ್ನ ಇಷ್ಟಾನುಸಾರವಾಗಿ ಕೆಲಸ ಮಾಡುತ್ತಿಲ್ಲ. **ಕರ್ಮ** ಎಂಬ ಒಂದು ಲೆಕ್ಕಾಚಾರದ ಪ್ರಕಾರ ಮಾಡುತ್ತಿದೆ. ಕೆಲಸಗಳಿಗೆ ಕಾರಣ ಕರ್ಮ ಎಂಬ ಒಂದು ವಿಧಾನವಿದೆ. ಕರ್ಮ ಎನ್ನುವುದರ ಪ್ರಕಾರ ಜೀವಿಯು ಸುಖ, ದುಃಖ ಎಂಬ ಅನುಭೂತಿಗಳನ್ನು ಅನುಭವಿಸಬೇಕು. ಜೀವಿಯು ಒಳಗೆ ಸುಖದುಃಖಗಳನ್ನು ಅನುಭವಿಸಬೇಕೆಂದರೆ ಹೊರಗಿನವರೆಗು ಇರುವ ಆತ್ಮ ಕೆಲಸ ಮಾಡುತ್ತಿದೆ. ಅಷ್ಟೇ ಅಲ್ಲದೆ ಶರೀರದೊಳಗೆ

ಆಹಾರವನ್ನು ಜೀರ್ಣ ಮಾಡುವುದು, ಗುಂಡಿಗೆಯನ್ನು ಕದಲಿಸುವುದು, ರಕ್ತದಿಂದ ಮೂತ್ರವನ್ನು, ಬೆವರನ್ನು ಬೇರೆ ಮಾಡುವುದು ಮುಂತಾದ ಶರೀರಾಂತರ್ಗತ ಕಾರ್ಯಗಳೆಲ್ಲವನ್ನೂ ಮಾಡುತ್ತಿದೆ. ಆತ್ಮ ಎಲ್ಲ ಕಾರ್ಯಗಳನ್ನು ಮಾಡುವುದರಿಂದ ಜೀವಾತ್ಮ ಶರೀರದಲ್ಲಿ ಇರಲು ಸಾಧ್ಯ ವಾಗುತ್ತಿದೆ. ಶರೀರದೊಳಗೆ ಇರುವ ಜೀವಿಗೆ ಯಾವ ಕೆಲಸವೂ ಇಲ್ಲದೆ ಕೇವಲ ಅನುಭವಗಳನ್ನು ಮಾತ್ರ ಅನುಭವಿಸುತ್ತಿದೆ. ಇದೆಲ್ಲವೂ ಪ್ರತಿ ಮನುಷ್ಯನ ಶರೀರದಲ್ಲಿ ಎಂದಿಗೂ ಬದಲಾವಣೆ ಹೊಂದದೆ ಶಾಸನ ಬದ್ಧವಾದ ವಿಧವಾಗಿ ಇದೆ.

ದೇವರು ಮನುಷ್ಯನಾಗಿ ಜನ್ಮಿಸಿದ್ದರೂ ಆ ಮನುಷ್ಯನ ಶರೀರದಲ್ಲಿ ಕೂಡಾ ಎಲ್ಲರಲ್ಲಿರುವ ವಿಧಾನವೆ ನಡೆಯುತ್ತಿರುತ್ತದೆ. ಉಳಿದ ಶರೀರಗಳಲ್ಲಿ ಇರುವ ಹಾಗೆ ಆ ಶರೀರದಲ್ಲಿ ಪರಮಾತ್ಮ ಇರಬೇಕಾದ್ದೆ, ಆತ್ಮ ಎಲ್ಲ ಕೆಲಸಗಳು ಮಾಡಬೇಕಾದ್ದೆ, ಜೀವಾತ್ಮ ಅನುಭವಿಸಬೇಕಾದ್ದೆ. ದೇವರು ಮನುಷ್ಯನಾಗಿ ಬಂದಿರುವ ಶರೀರದೊಳಗೆ ನಡೆಯುವ ವಿಧಾನವು ಅದೇ. ದೇವರು ಏಸುವಾಗಿ ಬಂದಾಗ ನಡೆದಿರುವುದಷ್ಟೆ. ಸಾಧಾರಣ ಮನುಷ್ಯನಿಗೂ, ಆತನಿಗೂ ಶರೀರ ಯಂತ್ರಾಂಗದಲ್ಲಿ ಎಂತಹ ವ್ಯತ್ಯಾಸವಿಲ್ಲ. ಆದ್ದರಿಂದ ಆತನು ಎಲ್ಲಾ ಬಾಧೆಗಳನ್ನು, ಸುಖಗಳನ್ನು ಜೀವಿಯಾಗಿಯೇ ಅನುಭವಿಸಿದ್ದಾನೆ. ಏಸುಪ್ರಭುವಿಗೆ ಜೀವನದಲ್ಲಿ ಅನೇಕ ಕಷ್ಟಗಳು ಎದುರಾದರೂ ಎಲ್ಲವನ್ನು ಜೀವಾತ್ಮವಾಗಿ ಆತನು ಅನುಭವಿಸಬೇಕಾಗಿ ಬಂದಿದೆ. ಆ ಕೆಲಸಗಳು ನಡೆಯುವುದಕ್ಕೆ ಆ ವಿಧವಾಗಿ ಅನುಭವಿಸುವುದಕ್ಕೆ ತಕ್ಕ ಕರ್ಮವನ್ನು ಆತನೇ ಸೃಷ್ಟಿಸಿಕೊಂಡು ಭೂಮಿ ಮೇಲಕ್ಕೆ ಒಬ್ಬ ಮನುಷ್ಯನಾಗಿ ಬಂದಿದ್ದಾನೆ. ಇದು ಆತನ ಸಾಧಾರಣ ಜೀವನವಾದಾಗ ಆತನಿಗು ನಮಗು ಏನು ವ್ಯತ್ಯಾಸ? ಎಂದು ಕೇಳಿದರೆ ಒಂದೇ ಒಂದು ವ್ಯತ್ಯಾಸ ಇದೆ. ಅದೇನೆಂದರೆ! ಶರೀರದಲ್ಲಿ ಕೆಲಸ ಮಾಡುವುದು ಒಂದೇ ಒಂದು ಆತ್ಮ ಎಂದು ತಿಳಿದುಕೊಂಡಿದ್ದೇವೆ ಅಲ್ಲವೇ! ಮನುಷ್ಯನಾಗಿ ಬಂದಿರುವ ಭಗವಂತನ ಶರೀರದಲ್ಲಿ ಕೂಡಾ ಹಾಗೆಯೇ ಇರುತ್ತದೆಂದು ಅಂದುಕೊಂಡಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಚಿತ್ರವಾದ ವ್ಯತ್ಯಾಸ ಇದೆ. ಭಗವಂತನ

ಶರೀರದಲ್ಲಿ ಕೆಲವು ಸಮಯಗಳಲ್ಲಿ ಸಾಧಾರಣ ಶರೀರದಲ್ಲಿ ಇರುವ ಹಾಗೆ ಮೂರು ಆತ್ಮಗಳು ತಮ್ಮ ತಮ್ಮ ಕೆಲಸ ಮಾಡದೆ ಬೇರೆ ವಿಧಾನವಾಗಿ ಬದಲಾಗಿ ಹೋಗುವುದು. ಜೀವಾತ್ಮ ತಟಸ್ಥನಾಗಿ ಯಾವ ಅನುಭವಗಳು ಅನುಭವಿಸುವ ಸ್ಥಿತಿಯಲ್ಲಿ ಇಲ್ಲದೆ ನಿಂತುಹೋಗಿ, ಜೀವಾತ್ಮ ಸ್ಥಿತಿಯಲ್ಲಿ ಆತ್ಮ ಇದ್ದು ಹೋಗುತ್ತದೆ. ಆಗ ಆತ್ಮವಾಗಿ ಮಾತನಾಡಿರುವ ಮಾತುಗಳು ಪೂರ್ತಿ ಆಧ್ಯಾತ್ಮಿಕವಾಗಿ ಇರುತ್ತವೆ. ನಿಜವಾದ ಆಧ್ಯಾತ್ಮಿಕ ವಿಷಯಗಳು, ದೇವರ ಧರ್ಮಗಳು ಆತ್ಮ ಸ್ವತಃವಾಗಿ ಹೇಳಿದಾಗಲೆ ತಿಳಿಯುತ್ತವೆ. ಕೆಲವು ಸಂದರ್ಭಗಳಲ್ಲಿ ಭಗವಂತನ ಶರೀರದಲ್ಲಿ ಆತ್ಮ ಸ್ವತಃವಾಗಿ ಜ್ಞಾನವನ್ನು ನುಡಿಯುತ್ತದೆ. ಅಷ್ಟೇ ಅಲ್ಲದೆ ಬಹು ಅಪರೂಪವಾಗಿ ಶರೀರದಲ್ಲಿ ಆತ್ಮ, ಜೀವಾತ್ಮಗಳು ತಟಸ್ಥವಾಗಿ ನಿಂತುಹೋಗಿ ಪರಮಾತ್ಮನೆ ನುಡಿಯುವುದು ಸಹ ಇದೆ. ಭಗವಂತನ ಜೀವನದಲ್ಲಿ ಒಂದು ಇಲ್ಲವೇ ಎರಡು ಬಾರಿ ಅಂತಹ ಸಂದರ್ಭಗಳು ನಡೆಯಬಹುದು. ಏಸುಪ್ರಭು ಜೀವನದಲ್ಲಿ, ಕೃಷ್ಣನ ಜೀವನದಲ್ಲಿ, ರಾವಣಬ್ರಹ್ಮ ಜೀವನದಲ್ಲಿ ಪರಮಾತ್ಮನೆ ಮಾತನಾಡಿರುವ ಸಂದರ್ಭಗಳಿವೆ. ಪರಮಾತ್ಮ ನುಡಿಯುವಾಗ ಆ ನುಡಿಗಳಿಗೆ ಪ್ರಕೃತಿಯೆಲ್ಲಾ ಅಧೀನವಾಗಿರುತ್ತದೆ. ಹಾಗೆಯೇ ಆತ್ಮ ನುಡಿಯುವಾಗ ನಿಜವಾದ ಜ್ಞಾನವೆಲ್ಲಾ ಆತನಿಗೆ ಅಧೀನವಾಗಿರುತ್ತದೆ. **1) ಆದ್ದರಿಂದ ಇವರ ಜೀವನದಲ್ಲಿ ಪ್ರಕೃತಿಯನ್ನೇ ಶಾಸಿಸಿರುವ ಪರಮಾತ್ಮ ನುಡಿಗಳಿವೆ. 2) ಆತ್ಮ ಜ್ಞಾನವನ್ನು ನಿಖರವಾಗಿ ನಿರ್ಣಯಿಸಿ ಹೇಳಿರುವ ಆತ್ಮ ಮಾತುಗಳಿವೆ. 3) ಸುಖ ದುಃಖಗಳನ್ನು ಅನುಭವಿಸಿರುವ ಜೀವಾತ್ಮ ಅನುಭವಗಳು ಇವೆ.** ಪ್ರಭು ಜೀವನದಲ್ಲಿ ಸಮುದ್ರದಲ್ಲಿ ಬಿರುಗಾಳಿಯಿಂದ ಉಂಟಾಗಿರುವ ಚಂಡಮಾರುತವನ್ನು ಅಣಗಿ ಹೋಗು ಎಂದಾಗ ಸ್ವತಃವಾಗಿ ಪರಮಾತ್ಮನೇ ನುಡಿದಿದ್ದಾನೆಂದು ತಿಳಿಯುತ್ತಿದೆ. ಆ ಮಾತುಗಳನ್ನು ಅನುಸರಿಸಿ ಪ್ರಕೃತಿ ಕೂಡಾ ನಡೆದುಕೊಂಡಂತೆ ಕೂಡಾ ತಿಳಿಯುತ್ತಿದೆ. ಆತನು ಆತ್ಮವಾಗಿ ಸ್ವಚ್ಛವಾದ ಜ್ಞಾನವನ್ನು ಪ್ರಕಟಿಸಿದಂತೆ ಇದೆ. ಅದೇ ವಿಧವಾಗಿ ಜೀವಾತ್ಮವಾಗಿ ಅನೇಕ ಸುಖ ದುಃಖಗಳು ಅನುಭವಿಸಿದಂತೆ ಕೂಡಾ ಇದೆ. ಈ ವಿಧವಾಗಿ ಶ್ರೀಕೃಷ್ಣನ ಜೀವನದಲ್ಲಿ ಕೂಡಾ ನಡೆದಿದೆ. ಸೂರ್ಯನನ್ನು ಶಾಸಿಸಿ ಸೈಂಧವನನ್ನು

ಕೊಂದಿದ್ದಾನೆ. ವಿಶ್ವರೂಪವನ್ನು ತೋರಿಸಿ ತಾನು ಪರಮಾತ್ಮನೆಂದು ತಿಳಿಸಿರುವ ಸಂದರ್ಭ ಕೂಡಾ ಇದೆ. ಆತ್ಮವಾಗಿ ಸಂಪೂರ್ಣ ಜ್ಞಾನವಾದ ಗೀತೆಯನ್ನೇ ಬೋಧಿಸಿದ್ದಾನೆ. ಉಳಿದ ಸಮಯಗಳಲ್ಲಿ ಜೀವಾತ್ಮವಾಗಿ ಎಲ್ಲಾ ಅನುಭವಗಳನ್ನು ಅನುಭವಿಸಿದ್ದಾನೆ. ಕೇವಲ ಒಬ್ಬ ಭಗವಂತನ ಶರೀರದಲ್ಲಿ ಮಾತ್ರವೇ ಕೆಲವು ಸಮಯಗಳಲ್ಲಿ ಮೂರು ಆತ್ಮಗಳ ಆಟ ಬಿಡಿಬಿಡಿಯಾಗಿ ಸಾಗುತ್ತಿದೆ. ದೈವವು ಶರೀರ ಧರಿಸುವುದು ಬಹು ಅಪರೂಪವಾಗಿ ಸಾವಿರ ವರ್ಷಗಳಿಗೋ, ಲಕ್ಷಗಳ ವರ್ಷಗಳಿಗೋ ನಡೆಯುತ್ತಿದೆ. ದೇವರು ಭೂಮಿ ಮೇಲೆ ಶರೀರವನ್ನು ಧರಿಸಿ ಹುಟ್ಟಿದಾಗ ಹೆಚ್ಚಿನ ಕಾಲ ಜೀವಾತ್ಮದ ಹಾಗೆ ಎಲ್ಲರ ಹಾಗೆ ಇದ್ದು, ಅವಶ್ಯಕತೆ ಬಂದಾಗ ಯಾವುದೋ ಕೆಲವು ಸಮಯದಲ್ಲಿ ಮಾತ್ರ ವರ್ಷದಲ್ಲಿ ಕೆಲವು ಬಾರಿ ಆತ್ಮವಾಗಿ ಮಾತನಾಡುತ್ತದೆ. ಭಗವಂತನ ಜೀವನದಲ್ಲಿ ಒಂದು ಅಥವಾ ಎರಡುಬಾರಿ ಬಹು ಅಪರೂಪವಾಗಿ ಮಾತನಾಡಬಹುದು ಇಲ್ಲವೆ ಮಾತನಾಡದೆ ಹೋಗಬಹುದು. ಆತನು ಧರ್ಮಗಳನ್ನು ತಿಳಿಸುವುದಕ್ಕೆ ಬಂದಿದ್ದಾನೆ ಆದಕಾರಣ ಆತ್ಮವಾಗಿ ತಪ್ಪದೇ ಮಾತನಾಡುತ್ತಾನೆ. ಇದು ದೇವರ ವಿಧಾನವಾದರೇ ಮಾಯೆ ವಿಧಾನವು ಮತ್ತೊಂದು ವಿಧವಾಗಿದೆ.

ದೇವರು ಸಾಧಾರಣ ಮನುಷ್ಯನಾಗಿ ಇರುವವರೆಗು ಎಂತಹ ತೊಂದರೆಯು ಇಲ್ಲ. ಆತ್ಮವಾಗಿ ಜ್ಞಾನ ಹೇಳಿದಾಗಲೆ ಮಾಯೆ ವಿರುದ್ಧತೆ ಉಂಟಾಗುತ್ತಿದೆ. ದೇವರ ಜ್ಞಾನವೆಲ್ಲವೂ ಮಾಯೆಗೆ ವಿರುದ್ಧವಾದುದೆ, ಆದಕಾರಣ ಮಾಯೆ (ಸಾತಾನ್) ಮನುಷ್ಯರನ್ನು ತನ್ನ ಕಡೆಯಿಂದ ದೇವರ ಜ್ಞಾನದ ಕಡೆ ಹೋಗದಂತೆ ನೋಡಿಕೊಳ್ಳುವುದರಲ್ಲಿ ಬಹಳ ಜಾಗ್ರತೆಯಾಗಿ ಇರುತ್ತದೆ. ಅಷ್ಟೇ ಅಲ್ಲದೇ ದೇವರ ಜ್ಞಾನದಮೇಲೆ ಶ್ರದ್ಧೆ ಉಂಟಾಗಿ ಸ್ವಲ್ಪ ಜ್ಞಾನವನ್ನು ತಿಳಿದುಕೊಂಡವರನ್ನು ಗುರುತಿಸಿಕೊಂಡು ತನ್ನ ಕಡೆಗೆ ಸೆಳೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುತ್ತದೆ. ಆದ್ದರಿಂದ ಮಾಯೆ ಪ್ರಭಾವದಿಂದ ನಿಜವಾದ ಆತ್ಮ ಜ್ಞಾನದ ಮೇಲೆ ಆಸಕ್ತಿ ಇರುವವರು ಬಹಳ ಕಡಿಮೆ ಎಂದು ಹೇಳಬಹುದು. ಒಂದು ವೇಳೆ ಯಾರಾದರೂ ಸ್ವಲ್ಪ ತಿಳಿದುಕೊಂಡವರು ಇದ್ದರೂ ಅವರು ಆ

ಮಾರ್ಗದಿಂದ ತಪ್ಪಿಹೋಗುವುದು ನಡೆಯುತ್ತಿದೆ. ಇಲ್ಲೊಂದು ಪ್ರಶ್ನೆ ಕೆಲವರಿಗೆ ಬರಬಹುದು. ಅದೇನೆಂದರೇ! ಈ ದಿನ ಎಷ್ಟೋಜನ ಭಕ್ತಿ ಇರುವವರಿದ್ದಾರೆ ಅಲ್ಲವೇ! ಎಷ್ಟೋ ಜನರನ್ನು ಗುರುಗಳನ್ನಾಗಿ ಆಶ್ರಯಿಸಿ ಅವರ ಬಳಿಯಿಂದ ಜ್ಞಾನವನ್ನು ತಿಳಿದುಕೊಳ್ಳುತ್ತಿದ್ದಾರೆ ಅಲ್ಲವೇ! ಎಷ್ಟೋ ಜನ ದೇವತೆಗಳಿಗೆ ಶ್ರದ್ಧೆಯಿಂದ ಪೂಜೆಗಳು ಮಾಡುತ್ತಿದ್ದಾರೆ ಅಲ್ಲವೇ! ಸ್ವಲ್ಪಮಟ್ಟಿನ ನಾಸ್ತಿಕರು ಹೊರತು ದೇವರ ಮೇಲೆ ಭಕ್ತಿ ಇಲ್ಲದವರು ಇದ್ದಾರಾ? ನೀವು ಹೇಳಿದ ಹಾಗೆ ಏನೂ ಇಲ್ಲವೇ! ಸಾಯಿ ಭಕ್ತರನ್ನಾಗಲೀ, ಅಯ್ಯಪ್ಪ ಸ್ವಾಮಿ ಭಕ್ತರನ್ನಾಗಲೀ ಯಾರಾದರೂ ಬದಲಾಯಿಸಬಲ್ಲರಾ? ದೇಶದಲ್ಲಿ ಇರುವ ಹಳೆಯ ದೇವರುಗಳ ಗುಡಿಗಳಲ್ಲದೆ ಷಿರಿಡಿ ಸಾಯಿ ಗುಡಿಗಳು, ಅಯ್ಯಪ್ಪಸ್ವಾಮಿ ಗುಡಿಗಳು ವಿಪರೀತವಾಗಿ ತಯಾರಾಗುತ್ತಿವೆ ಅಲ್ಲವೇ! ಅಲ್ಲಿ ಮಾಯೆ ಯಾರನ್ನೂ ಆತಂಕ ಪಡಿಸಲಿಲ್ಲ ಅಲ್ಲವೆ! ನಿಮ್ಮ ಮಾತು ಹೇಗೆ ನಂಬಬೇಕು? ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೇ!

ಮಾಯೆ ದೇವರ ಮಾರ್ಗಕ್ಕು, ದೈವಜ್ಞಾನಕ್ಕು ಪೂರ್ತಿ ವಿರುದ್ಧವಾದುದು. ಎಷ್ಟೋ ಮಹತ್ವವಾದ ದೇವರ ಜ್ಞಾನವನ್ನೆ ವಿರೋಧಿಸುವುದು ಮಾಯೆ. ಆದಕಾರಣ ಮಾಯೆ ಕೂಡಾ ಬಹಳ ದೊಡ್ಡದಾಗಿರುತ್ತದೆ ಎಂದು ತಿಳಿಯುತ್ತಿದೆ. ಆದ್ದರಿಂದಲೆ ಭಗವದ್ಗೀತೆಯಲ್ಲಿ **"ಮಾಯಾ ದುರತ್ಯಯಾ"** ಎಂದಿದ್ದಾರೆ. **"ಮಾಯೆಯನ್ನು ಜಯಿಸುವುದು ದುಸ್ಸಾಧ್ಯವಾದ ಕೆಲಸ"** ಎಂದು ಒಂದುಕಡೆ ದೇವರೆ ಹೇಳಿದ್ದಾನೆಂದರೆ **ಊಹೆಗು ತಿಳಿಯದ ರೀತಿಯಲ್ಲಿ** ಮಾನವನನ್ನು **ಮಾಯೆ ಮೋಸ** ಮಾಡುತ್ತದೆ ಎಂದು ತಿಳಿಯುತ್ತಿದೆ. ಇಲ್ಲಿಯವರೆಗು ಇದು ಮಾಯೆ ಕೆಲಸವೆಂದಾಗಲೀ, ಮಾಯೆ ಕೆಲಸ ಹೀಗಿರುತ್ತದೆಂದಾಗಲೀ ಯಾರೂ ತಿಳಿದುಕೊಳ್ಳಲಾರದೆ ಹೋಗಿದ್ದಾರೆ. ಆದ್ದರಿಂದ ಮಾಯೆ ದೇವರ ಮಾರ್ಗದಲ್ಲಿ ಎಲ್ಲರನ್ನು ಮೋಸ ಮಾಡುತ್ತಿದೆ. ದೇವರ ಜ್ಞಾನದ ಹಾಗೆ ತನ್ನ ಜ್ಞಾನವನ್ನು ತಯಾರಿ ಮಾಡಿದೆ. ದೇವರು ಭಗವಂತನಾಗಿ ಸಾವಿರ ವರ್ಷಗಳಿಗೆ ಒಂದುಬಾರಿ ಅಪರೂಪವಾಗಿ ಭೂಮಿ ಮೇಲಕ್ಕೆ ಬಂದರೆ, ಆತನನ್ನು ಯಾರೂ ಗುರುತು

ಹಿಡಿಯದ ಹಾಗೆ ಮಾಯೆ ತನ್ನ ಪ್ರತಿರೂಪಗಳನ್ನು ಭಗವಂತರಾಗಿ ಎಷ್ಟೋ ಜನರನ್ನು ಭೂಮಿ ಮೇಲಕ್ಕೆ ತಂದಿದೆ. ಮಾಯೆ ಪ್ರವೇಶವಿಟ್ಟಿರುವ ಎಷ್ಟೋ ಜ್ಞಾನಗಳಲ್ಲಿ ಯಾವುದು ನಿಜ ದೈವಜ್ಞಾನವೊ ಯಾರಿಗೂ ಅರ್ಥವಾಗದೇ ಎಲ್ಲಾ ಜ್ಞಾನಗಳು ದೇವರವೆ ಎಂದು ಬಹಳಜನ ತಪ್ಪಾಗಿ ತಿಳಿಯುತ್ತಿದ್ದಾರೆ. ಹಾಗೆಯೆ ಮಾಯೆಯೊಂದಿಗೆ ಕೂಡಿಕೊಂಡಿರುವ ಭಗವಂತರು ಎಷ್ಟೋ ಜನ ಭೂಮಿ ಮೇಲಿದ್ದರೆ, ಯಾವಾಗಲೋ ಒಂದುಬಾರಿ ಬರುವ ಭಗವಂತನನ್ನು ಪ್ರತ್ಯೇಕವಾಗಿ ಯಾರು ಗುರುತಿಸುತ್ತಾರೆ? ಎಷ್ಟೋ ಮಹಿಮೆಗಳನ್ನು ತೋರಿಸುವ ಭಗವಂತರು ಇದ್ದರೇ ಜೀವನದಲ್ಲಿ ಒಂದೋ ಎರಡೋ ಮಹಿಮೆಗಳನ್ನು ತೋರಿಸುವವನನ್ನು ಯಾರು ಗುರುತಿಸುತ್ತಾರೆ? ಎಷ್ಟೋ ಜನ ಮಾಯೆ ಭಗವಂತರಲ್ಲಿ ನಿಜವಾದ ಒಬ್ಬ ಭಗವಂತನನ್ನು ಯಾರು ಗುರುತಿಸಬಲ್ಲರು? ಈ ವಿಧವಾಗಿ ದೇವರ ಜ್ಞಾನವನ್ನಾಗಲೀ, ಭಗವಂತನನ್ನಾಗಲೀ ಗುರುತಿಸುವುದು ದುಸ್ಸಾಧ್ಯವಾದ ಕೆಲಸವಾಗಿ ಇದೆ. ಇಲ್ಲಿಯವರೆಗು ಯಾರೂ ನೋಡದಿರುವ, ನಂತರ ಕೂಡಾ ಯಾರೂ ತಿಳಿದುಕೊಳ್ಳಲಾರದ್ದು ಎಂದು ತನ್ನ ನಿಜ ಸ್ಥಿತಿಯನ್ನು ದೇವರು ವಿಶ್ವರೂಪವಾಗಿ ತೋರಿಸಿದರೆ, ಆ ವಿಧವಾಗಿ ಕೂಡಾ ಗುರುತಿಸದ ಹಾಗೆ ಬಹಳಜನ ದೇವತೆಗಳು ವಿಶ್ವರೂಪ ತೋರಿಸಿದಹಾಗೆ, ಕೊನೆಗೆ ಸಾಯಿಬಾಬಾನನ್ನು, ವೀರಬ್ರಹ್ಮಯ್ಯನವರು ಕೂಡಾ ಎರಡು ಮೂರು ಬಾರಿ ವಿಶ್ವರೂಪ ತೋರಿಸಿದಹಾಗೆ ಕೆಲವರ ಕೈಯಿಂದ ಮಾಯೆ ಬರೆಯಿಸಿದೆ. ಇಷ್ಟು ಜನ ತೋರಿಸಿರುವ ಇಷ್ಟು ವಿಶ್ವರೂಪಗಳಲ್ಲಿ ಭಗವದ್ಗೀತೆಯಲ್ಲಿ ಕೃಷ್ಣನು ತೋರಿಸಿದ ವಿಶ್ವರೂಪವೇ ದೊಡ್ಡದೆಂದು ಯಾರಂದುಕೊಳ್ಳುತ್ತಾರೆ? ಆದ್ದರಿಂದ ಕ್ರೈಸ್ಥರಲ್ಲಿ ಕೃಷ್ಣನನ್ನು, ಹಿಂದೂಗಳಲ್ಲಿ ಏಸುಪ್ರಭುವನ್ನು ಭಗವಂತನನ್ನಾಗಿ ಗುರುತಿಸಲಾರದೇ ಹೋಗಿದ್ದಾರೆ. ಒಂದುವೇಳೆ ಹಿಂದೂಗಳಲ್ಲಿ ಕೃಷ್ಣನನ್ನು ಯಾರಾದರೂ ನಿಜವಾದ ದೇವರನ್ನಾಗಿ ಗುರುತಿಸಿದ್ದಾರಾ ಎಂದರೆ ಅದೂ ಇಲ್ಲ. ಉಳಿದ ಅಷ್ಟು ಜನ ದೇವರುಗಳಲ್ಲಿ ಕೃಷ್ಣನನ್ನು ಕೊನೆಯವನನ್ನಾಗಿ ಕೆಲವರು ಭಾವಿಸಿದರೇ, ಆತನವೆಲ್ಲಾ ತುಂಟತನದ ಕೆಲಸಗಳೇ ಆತನು ಹೇಗೆ ದೇವರಾಗುತ್ತಾನೆಂದು ಬಹಳಜನ ಚಿಕ್ಕ ದೇವರನ್ನಾಗಿ ಕೂಡಾ ಗುರುತಿಸಲಿಲ್ಲ. ಷಿರಿಡಿ ಸಾಯಿಬಾಬಾನ ಮುಂದೆ

ಕೃಷ್ಣನನ್ನು ಒಬ್ಬ ದೇವರನ್ನಾಗಿ ಕೂಡಾ ಯಾರೂ ಲೆಕ್ಕಿಸುತ್ತಿಲ್ಲ. ಇನ್ನು ಕ್ರೈಸ್ಥರೊಳಗೆ ಹೋಗಿ ಪ್ರಭುವನ್ನು ಅವರು ಯಾವ ವಿಧವಾಗಿ ಭಾವಿಸುತ್ತಿದ್ದಾರೆಂದು ನೋಡಿದರೆ, ಆತನನ್ನು ದೈವಕುಮಾರನನ್ನಾಗಿ ಕೆಲವರು ಲೆಕ್ಕಿಸಿದರೂ ಆತನ ವಾಕ್ಯಗಳ ಸಾರಾಂಶವು ಅವರಿಗೆ ಅರ್ಥವಾಗಲಿಲ್ಲವೆಂದೇ ಹೇಳಬಹುದು. ಮಾಯೆ ಪ್ರಭಾವದಿಂದ ಆತನನ್ನು ಬಿಟ್ಟು, ಆತನು ಮರಣಿಸಿರುವ ಸಿಲುಬೆಯನ್ನು ಮುಗಿಯುತ್ತಿದ್ದಾರೆ. **'ಪ್ರಭು ಆಕಾರ'** ವನ್ನು ಇಟ್ಟುಕೊಂಡರೆ ಹಿಂದೂಗಳಹಾಗೆ ಲೆಕ್ಕಿಸಲ್ಪಡುತ್ತೇವೆಂದು ಸಿಲುಬೆ ಬೊಂಬೆಯನ್ನು ಇಟ್ಟುಕೊಂಡಿದ್ದಾರೆ. **"ನನ್ನನ್ನು ನೋಡಿದವನು ನನ್ನ ತಂದೆಯನ್ನು ನೋಡಿದಂತೇಯೆಂದು"** ಪ್ರಭು ಹೇಳಿದಾಗ ಕನಿಷ್ಟ **"ಆತನ ಆಕಾರ"** ವನ್ನಾದರೂ ನೋಡದೆ ಆತನ ಮರಣಕ್ಕೆ ಕಾರಣವಾದ ಸಿಲುಬೆಯನ್ನು ನೋಡುವುದು ಮಾಯೆ ಕೆಲಸ ಅಲ್ಲವೇ! ಈ ವಿಧವಾಗಿ ಹೇಳುತ್ತಾ ಹೋದರೇ, ದೇವರ ಮಾರ್ಗದಲ್ಲಿ ಇದ್ದೇವೆಂದುಕೊಳ್ಳುವ ಹಾಗೆ ಮಾಡಿರುವ ಮಾಯೆ (ಸಾತಾನ್) ದೇವರ ಮಾರ್ಗಕ್ಕೆ ಎಷ್ಟೋ ದೂರವಾಗಿ ಮನುಷ್ಯನನ್ನು ಕಳುಹಿಸುತ್ತಿದೆ. ತಿಳಿದವನು ಹೇಳಿದರೂ, ಅವನನ್ನೆ ತಿಳುವಳಿಕೆ ಇಲ್ಲದವನನ್ನಾಗಿ ತೋರಿಸಿ ಅವನ ಮಾತನ್ನು ಕೇಳದಹಾಗೆ ಮಾಡುತ್ತಿದೆ. ಮಾಯೆ ಮತಗಳನ್ನು ಕಲ್ಪಿಸಿ ದೇವರೆ ಬೇರೆಬೇರೆಯೆನ್ನುವಂತೆ ಮಾಡಿದೆ. ವಿಶ್ವಕ್ಕೆ ಅಧಿಪತಿ ಒಬ್ಬನೇ ಆದರೂ ಮತಗಳನ್ನು ತೋರಿಸಿ ಮತಕ್ಕೊಬ್ಬ ದೇವರೆಂದು ಮನುಷ್ಯರಿಗೆ ತಿಳಿಯುವ ಹಾಗೆ ಮಾಯೆ ಮಾಡಿದೆ. ಆ ಮಾಯೆ ಪ್ರಭಾವವು ಮನುಷ್ಯರಲ್ಲಿ ಎಷ್ಟೋ ಅಡಗಿದೆ. ಆದಕಾರಣ ಎಷ್ಟೋಜನ ದೇವರುಗಳು, ಎಷ್ಟೋ ಮತಗಳು ತಯಾರಾಗಿವೆ. ಕ್ರೈಸ್ಥಮತ ಒಂದೇ ಆಗಿದ್ದರೂ ಅದರಲ್ಲಿ ಮೇರಿ ಮಾತಾ ಭಕ್ತರು ಕೆಲವರು, ಪ್ರಭು ಭಕ್ತರು ಕೆಲವರು ಇದ್ದಾರೆ. ಹಾಗೆಯೇ ಹಿಂದೂ ಮತ ಒಂದೇ ಆಗಿದ್ದರೂ ದೇವರುಗಳು ಅನೇಕವಾಗಿ ಇದ್ದಾರೆ. ಇಷ್ಟು ಮತಗಳಲ್ಲಿ, ಇಷ್ಟು ದೇವರುಗಳಲ್ಲಿ ಯಾರು ಎಲ್ಲರಿಗೂ ಅಧಿಪತಿಯೋ ಇಂದಿಗಾದರೂ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿರೆಂದು ತಿಳಿಸುತ್ತಿದ್ದೇವೆ. ಹಾಗೆ ತಿಳಿದುಕೊಳ್ಳುವುದು ಅಷ್ಟು ಸುಲಭವಾಗಿ ಇಲ್ಲ. **ಮೊದಲು ಮಾಯೆಯನ್ನು** ಕುರಿತು, ಅದರ ಇರುವಿಕೆಯನ್ನು ಕುರಿತು ತಿಳಿದುಕೊಂಡರೆ **ನಂತರ ದೇವರ**

**ಮಾರ್ಗವನ್ನು** ಕುರಿತು ತಿಳಿದುಕೊಳ್ಳಬಲ್ಲರು. ಆದ್ದರಿಂದ ಈಗ ನೀವಿರುವ ಮಾರ್ಗವು ದೇವರ ಮಾರ್ಗವೋ, ಮಾಯೆ ಮಾರ್ಗವೋ ಒಂದುಬಾರಿ ಹಿಂತಿರುಗಿ ನೋಡಿಕೊಳ್ಳಿ.

ರೂಪ, ಹೆಸರಿಲ್ಲದ ಇಂತಹದೆಂದು ನಿರ್ಣಯಿಸಲಾರದ ಅನಂತವಾದ ಅತೀತವಾದ ಶಕ್ತಿ ಒಂದಿದೆ. ಅದನ್ನು ನಾವು ಗುರುತಿಗಾಗಿ 'ಪರಮಾತ್ಮ' ಎನ್ನುತ್ತಿದ್ದೇವೆ. ಸರ್ವಕ್ಕೂ ಮೂಲವಾದ ಪರಮಾತ್ಮ ವಿಷಯವು ಮಾನವರಿಗೆ ಯಾರಿಗೂ ತಿಳಿದಿಲ್ಲ. ಅಂತಹ ಸ್ಥಿತಿಯಲ್ಲಿ ಆ ಪರಮಾತ್ಮನೇ ಬಂದು ತನ್ನ ವಿಷಯ ಇಂತಹದೆಂದು ತಿಳಿಸಬೇಕಾಗಿದೆ. ಪರಮಾತ್ಮವೇನೋ ಅಣುವಣು ವಿನಲ್ಲೂ ವ್ಯಾಪಿಸಿ ಇದ್ದಾನೆ, ನಾವೇನೋ ಶರೀರವನ್ನು ಧರಿಸಿ ಪಂಚ ಭೂತಗಳನ್ನು ಹೊರತುಪಡಿಸಿ ಉಳಿದವುಗಳನ್ನು ತಿಳಿಯುವ ಸ್ಥಿತಿಯಲ್ಲಿ ಇಲ್ಲ. ಇಂದ್ರಿಯಗಳಿಗೆ ತಿಳಿಯುವುದನ್ನೆ ನೋಡಬಲ್ಲೆವು, ಕೇಳಬಲ್ಲೆವು. ಇಂದ್ರಿಯಾತೀತ ವಾದುದನ್ನು ಏನೂ ತಿಳಿಯಲಾರೆವು. ಪರಮಾತ್ಮ ಇಂದ್ರಿಯಗಳಿಗೆ ಗೋಚರವಾಗದೆ ಇರುವುದು. ಹಾಗಿರುವಾಗ ಆ ಪರಮಾತ್ಮನೇ ಮಾನವ ರೂಪ ಧರಿಸಿ ಬಂದು, ಇಂದ್ರಿಯಗಳಿಗೆ ಗೋಚರಿಸಿ **ಆತನ ವಿಷಯವನ್ನು ಆತನು ತಿಳಿಸಿದರೇನೇ ನಮಗೆ ತಿಳಿಯುವುದು**. ಇಲ್ಲದೇ ಹೋದರೆ ಯಾರೂ ಆತನ ವಿಷಯವನ್ನು ತಿಳಿದವರಿಲ್ಲ, ತಿಳಿಸುವವರಿಲ್ಲ. ಆದ್ದರಿಂದ ಆ ಪರಮಾತ್ಮನೇ ಮಾನವ ರೂಪ ಧರಿಸಿ, ತನ್ನ ವಿಷಯಗಳನ್ನು ಪ್ರಕಟಿಸಿಕೊಳ್ಳಬೇಕಾಗಿ ಬಂದಿದೆ. ಒಂದುಬಾರಿ ಆತನು ತನ್ನ ಧರ್ಮಗಳನ್ನು ತಿಳಿಸಿ ಹೋಗಿದ್ದಾನೆಂದು ಕೊಳ್ಳೋಣ. ಅವು ಸ್ವಲ್ಪ ಕಾಲಕ್ಕೆ ಮರೆಯಾಗಿ ಹೋದರೆ ಮರಳಿ ಆತನೇ ಬಂದು ಪುನರುದ್ಧರಿಸಿ ಹೋಗಬೇಕಾಗಿದೆ. ಹೀಗೆ ಎಷ್ಟೋ ಬಾರಿ ಈ ಪ್ರಪಂಚವನ್ನೆ ಸೃಷ್ಠಿಸಿರುವ ಪರಮಾತ್ಮನೇ ತನ್ನನ್ನು ತಾನು ಮಾನವನನ್ನಾಗಿ ಸೃಷ್ಠಿಸಿಕೊಂಡು ಮಾನವನ ಹಾಗೆ ಸಂಚರಿಸಿ, ಮಾನವನ ಹಾಗೆ ಕರ್ಮಗಳನ್ನು ಅನುಭವಿಸಿ ಯಾವುದೊ ವಿಧವಾಗಿ ತನ್ನ ಉದ್ದೇಶವನ್ನು ತಾನು ನೆರವೇರಿಸಿಕೊಂಡು ಹೋಗುತ್ತಾನೆ. ಆ ವಿಧವಾಗಿ ಬಂದಿರುವ ಪರಮಾತ್ಮನನ್ನು ಗುರುತಿಸುವುದು ಬಹಳ ಕಷ್ಟ.

ಪರಮಾತ್ಮ ಎಷ್ಟೋ ಬಾರಿ ಭೂಮಿ ಮೇಲಕ್ಕೆ ಬಂದಿದ್ದಾನೆ, ಹೋಗಿದ್ದಾನೆ. ಹಾಗಿದ್ದರೂ ಮಾನವನು ಅಂದಿಗೂ, ಇಂದಿಗೂ ಗುರುತಿಸಲಾರದ ಸ್ಥಿತಿಯಲ್ಲಿಯೇ ಇದ್ದಾನೆ.

ಇರುವಾಗ ಗುರುತಿಸಲಾರದವರು ಭಗವಂತನು ಬಂದು ಹೋದ ನಂತರ ಅವರನ್ನು ದೊಡ್ಡದಾಗಿ ನೆನಪಿಸಿಕೊಂಡು ಪೂಜಿಸಲು ಪ್ರಾರಂಭಿಸುತ್ತಾರೆ. ಅದುವೆ ಪರಮಾತ್ಮ ಎಂದಲ್ಲ. ಜ್ಞಾನದಲ್ಲಿ ದೊಡ್ಡವನೆಂದೋ, ಇಲ್ಲದೆ ಹೋದರೆ ಆತನನ್ನು ಮುಗಿದರೇ ಕೋರಿಕೆಗಳು ನೆರವೇರುತ್ತವೆಂದೋ, ಯಾವುದೋ ಒಂದು ಉದ್ದೇಶದಿಂದ ಪೂಜಿಸುತ್ತಾ ಇರುತ್ತಾರೆ. ಆದರೆ ನಿಜವಾದ ಪರಮಾತ್ಮ ಎಂದು ಆಗಲೂ ಅವರು ತಿಳಿದಿರುವುದಿಲ್ಲ. ನಾವು ಆಲೋಚಿಸಿದರೆ ಕೆಲವು ಸೂತ್ರಗಳ ಮೂಲಕ ಪರಮಾತ್ಮ ಅವತರಿಸಿರುವ ಜನ್ಮಗಳನ್ನು ಗುರುತಿಸಬಹುದು. ಆ ವಿಧವಾಗಿ ಇಂದಿಗೂ ನಮಗೆ ತಿಳಿದಿರುವಷ್ಟರಲ್ಲಿ ದ್ವಾಪರಯುಗ ಅಂತ್ಯದಲ್ಲಿ ಶ್ರೀಕೃಷ್ಣನಾಗಿ, ನಂತರ ಕಲಿಯುಗದಲ್ಲಿ ಏಸುವನ್ನಾಗಿ ಗುರುತಿಸಬಹುದು. ನಂತರ ಕೂಡಾ ಬಂದಿರಬಹುದು ಆದರೆ ನಮಗೆ ತಿಳಿಯಲಿಲ್ಲ.

ಪರಮಾತ್ಮ ಎಷ್ಟು ಜನ್ಮಗಳೆತ್ತಿ ಬಂದರೂ ಒಂದು ಜನ್ಮಕ್ಕು ಮತ್ತೊಂದು ಜನ್ಮಕ್ಕು ಆತನ ಧರ್ಮಗಳಲ್ಲಿ ಹೊರತುಪಡಿಸಿ ಉಳಿದವುಗಳಲ್ಲಿ ಯಾವ ಹೊಂದಾಣಿಕೆ ಇರುವುದಿಲ್ಲ. ದ್ವಾಪರಯುಗದಲ್ಲಿ ಜನ್ಮಿಸಿರುವ ಕೃಷ್ಣನಲ್ಲಿಯು, ಕಲಿಯುಗದಲ್ಲಿ ಜನ್ಮಿಸಿರುವ ಏಸುನಲ್ಲಿಯೂ ಒಂದೇ ಅಂಶ ಇದ್ದರೂ ಮೇಲ್ನೋಟದ ಜೀವನಗಳು ಮಾತ್ರ ಎಷ್ಟೋ ವ್ಯತ್ಯಾಸ ಹೊಂದಿವೆ. ಶ್ರೀಕೃಷ್ಣನು ಎಂಟುಜನ ಸ್ತ್ರೀಯರನ್ನು ಹೆಂಡತಿಯರನ್ನಾಗಿ ಮಾಡಿಕೊಂಡು ಅಷ್ಟೈಶ್ವರ್ಯ ಗಳನ್ನು ಅನುಭವಿಸುವುದೆ ಅಲ್ಲದೆ ಮೊದಲ ಹೆಂಡತಿಯನ್ನು ಆಕೆ ಇಷ್ಟದಿಂದಲೆ ಅಪಹರಿಸಿ ತಂದುಕೊಳ್ಳುವುದೆ ಅಲ್ಲದೇ ಶತ್ರುಗಳನ್ನು ಸಹಿತ ವಧಿಸುವುದು ನಡೆದಿದೆ. ಆತನ ಜೀವನದಲ್ಲಿ ಅಸತ್ಯ, ಮೋಸ ಎಲ್ಲಾ ಸ್ಥಳ ಮಾಡಿಕೊಂಡಿವೆ. ಇವುಗಳೆಲ್ಲವನ್ನು ಗಮನಿಸಿದ ಪಕ್ಷದಲ್ಲಿ ಆತನನ್ನು ಪರಮಾತ್ಮ ಅಂಶ ತುಂಬಿರುವ ಭಗವಂತನನ್ನಾಗಿ ಯಾರೂ ಗುರುತಿಸಲಾರರು.

ಕಲಿಯುಗದಲ್ಲಿ ಜನ್ಮಿಸಿರುವ ಏಸುಪ್ರಭು ಜೀವನದಲ್ಲಿ ಅಸತ್ಯಗಳು ಮೋಸಗಳು ಇಲ್ಲ. ಶತ್ರು ಒಂದು ಕೆನ್ನೆಗೆ ಹೊಡೆದರೇ ಮತ್ತೊಂದು ಕೆನ್ನೆ ತೋರಿಸಿರೆಂದು ಹೇಳಿದ ಸಾತ್ವಿಕನು. ಸ್ತ್ರೀಯರ ಬಗ್ಗೆ ಕಾಮ ದೃಷ್ಠಿ ಇಲ್ಲದವನು. ಕೃಷ್ಣನಿಗೆ ಏಸುಪ್ರಭುವಿಗೆ ನೂರಕ್ಕೆ ನೂರು ಪಾಲು ಪ್ರಪಂಚ ವಿಷಯಗಳಲ್ಲಿ ವ್ಯತ್ಯಾಸ ಇದೆ. ಇಬ್ಬರ ವಿಷಯಗಳಲ್ಲಿ ಎರಡು ಮತಗಳಲ್ಲಿ ಗುರುಗಳಾಗಿ ಇರುವವರಿಗೂ ಸಹಿತ ಅರ್ಥವಾಗಿಲ್ಲ. ಇಂದೂ ಗುರುಗಳು ಏಸು ಪ್ರಭುವನ್ನು ವಿಮರ್ಶಿಸುವುದು ಪ್ರಪಂಚ ಸಂಬಂಧ ವಿಷಯಗಳನ್ನು ತೋರಿಸುತ್ತಾ "ದೇವರಾದರೆ ತನ್ನನ್ನು ತಾನು ರಕ್ಷಿಸಿಕೊಳ್ಳದೆ ಸಾಮಾನ್ಯರ ಕೈಯಲ್ಲಿ ಸಿಲುಕಿ ಸಾಯುವುದೇಕೆಂದು, ಆತನ ಹತ್ತಿರ ದೈವಶಕ್ತಿ ಇದ್ದು ಸತ್ತು ಹೋದವನನ್ನು ಎಬ್ಬಿಸಿದಾಗ ಆತನು ಯಾಕೆ ಮರಣಿಸಬೇಕಾಗಿ ಬಂದಿದೆಯೆಂದು, ಕೈಗೆ ಮೊಳೆಗಳು ಹೊಡೆಯುವಾಗ ಬಾಧೆ ಯಾಕೆ ಉಂಟಾಗಿದೆಯೆಂದು" ಕೇಳುತ್ತಿದ್ದಾರೆ. ಹಾಗೆಯೇ ಕ್ರೈಸ್ಥ ಮತದಲ್ಲಿನ ಫಾದರ್‌ಗಳು, ಪಾಸ್ಟರ್‌ಗಳು ಶ್ರೀಕೃಷ್ಣನನ್ನು ಕುರಿತು ವಿಮರ್ಶಿಸುತ್ತಾ "ಅಷ್ಟುಜನ ಹೆಂಡತಿಯರು ಇರುವವನು ದೇವರು ಹೇಗಾಗುತ್ತಾನೆಂದು" ವಾದಿಸುತ್ತಿದ್ದಾರೆ. ಈ ವಿಧವಾಗಿ ಇಬ್ಬರ ಜೀವನಗಳಲ್ಲಿರುವ ಪ್ರಪಂಚ ವಿಷಯಗಳನ್ನು ಪ್ರತಿಪಾದಕವಾಗಿ ತೆಗೆದುಕೊಂಡು ಮಾತನಾಡುತ್ತಿದ್ದಾರೇ ಹೊರತು, ಅವರ ಜೀವನಗಳಲ್ಲಿ ಅಂತಹ ಸಂಘಟನೆಗಳು ಯಾಕೆ ಸ್ಥಳ ಮಾಡಿಕೊಂಡಿವೆ ಎಂದು ಯಾರೂ ಯೋಚಿಸುತ್ತಿಲ್ಲ. ಪರಮಾತ್ಮ ಭೂಮಿಮೇಲಕ್ಕೆ ಬಂದಾಗ ಆತನನ್ನು ಯಾರೂ ಗುರುತಿಸಲಾರರೆಂದು ಆತನೇ ಹೇಳಿದ್ದಾನೆ. ಗುರುತಿಸಲಾರದಂತೆ ನಟಿಸುವುದೆ ಆತನ ಕೆಲಸ. ಆತನು ನಮ್ಮ ಮಧ್ಯೆ ಗುರುತಿಲ್ಲದೆ ಕಳ್ಳನಹಾಗೆ ಇದ್ದು ನಮ್ಮ ಅಜ್ಞಾನವನ್ನು ದೋಚಿಕೊಂಡು ಹೋಗುವುದೆ ಆತನ ಕೆಲಸ.

ಪ್ರಪಂಚ ವಿಷಯಗಳನ್ನು ನೋಡಿದರೆ ದೇವರು ಯಾರಿಗೂ ಅರ್ಥವಾಗುವುದಿಲ್ಲವೆಂದು ಮೊದಲಿಗೆ ಹೇಳಿಕೊಂಡಿದ್ದೇವೆ. **ದೇವರನ್ನು ದೇವರ ವಿಷಯಗಳಲ್ಲಿಯೇ ನೋಡಬೇಕು**. ಹಾಗಾದರೇನೇ ಆತನನ್ನು ಗುರುತಿಸಲಾಗುತ್ತದೆ.

ಈ ಸೂತ್ರ ತಿಳಿಯದೆ ಗುರುಗಳೆಂದು ಹೇಳಿಕೊಳ್ಳುವವರು ಕೂಡಾ ಪ್ರಪಂಚ ವಿಷಯಗಳೊಂದಿಗೆ ದೇವರನ್ನು ಅಳತೆಮಾಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದಕಾರಣ ದೇವರು ಭೂಮಿ ಮೇಲಕ್ಕೆ ಬಂದಿದ್ದರೂ ಯಾರಿಗೂ ತಿಳಿಯದೆ ಇದ್ದಾನೆ. ಪ್ರಪಂಚ ವಿಷಯಗಳೊಂದಿಗೆ ನೋಡುವುದರಿಂದ ಪ್ರಪಂಚದಲ್ಲಿ ಕಣ್ಣಿಗೆ ಕಾಣಿಸುವ ಮಹಿಮೆಗಳನ್ನು ಮಾಡುವವರೆ ದೊಡ್ಡದಾಗಿ ಕಾಣಿಸುತ್ತಾ ಅವರೇ ದೇವರುಗಳಾಗಿ ಅರ್ಥವಾಗುತ್ತಿದ್ದಾರೆ. ಹಾಗಿರುವಾಗ ನಿಜವಾದವನನ್ನು ವಿಸ್ಮರಿಸುವುದು ನಡೆಯುತ್ತಿದೆ. ಆದ್ದರಿಂದಲೆ ಯಾರೂ ಗುರುತಿಸುವುದಕ್ಕೆ ಸಾಧ್ಯವಾಗದೆ ಇದೆ. ಬಾಹ್ಯ ಪ್ರಪಂಚ ವಿಷಯಗಳನ್ನು ಅನುಸರಿಸಿ ನೋಡಿದರೆ ಸ್ವಲ್ಪವೂ ದೇವರ ಜನ್ಮಗಳನ್ನು ಗುರುತಿಸಲಾರೆವು. ಧರ್ಮಗಳನ್ನು ಅನುಸರಿಸಿ ಮಾತ್ರ ಗುರುತಿಸಲು ಸಾಧ್ಯವಾಗುವುದು. ಭಗವದ್ಗೀತೆಯಲ್ಲಿಯೂ, ಏಸು ವಾಕ್ಯಗಳಲ್ಲಿಯೂ ಒಂದೇ ಧರ್ಮ ಕಾಣಿಸುತ್ತಿದೆ. ಆದಕಾರಣ ಅವರಿಬ್ಬರನ್ನು ಒಬ್ಬರನ್ನಾಗಿ ಗುರುತಿಸಬಹುದು. ಆದರೆ ಬಾಹ್ಯ ವಿಷಯಗಳಲ್ಲಿ ಸ್ವಲ್ಪವಾದರೂ ಹೊಂದಾಣಿಕೆ ಇರುವುದಿಲ್ಲ.

ಪ್ರಪಂಚವೆಲ್ಲದಕ್ಕೂ ಸರ್ವಮಾನವರಿಗೂ ಇರುವುದು ಒಂದೇ ಒಂದು ದೇವರೆಂದೂ, ಆ ದೇವರೆ ಮಾನವನನ್ನು ತನ್ನಕಡೆ ಮರಳಿಸುವುದಕ್ಕೆ ಮಾನವನಾಗಿ ಅನೇಕಬಾರಿ, ಅನೇಕ ಹೆಸರುಗಳೊಂದಿಗೆ, ಅನೇಕ ರೂಪಗಳೊಂದಿಗೆ ಬರುತ್ತಿದ್ದಾನೆಂದು ಗ್ರಹಿಸದ ಮಾನವರು ಮತಗಳನ್ನು ಸೃಷ್ಠಿಸಿಕೊಂಡು ನಮ್ಮ ದೇವರು, ನಿಮ್ಮ ದೇವರು ಎಂದು ವಾದಿಸಿಕೊಳ್ಳುತ್ತಿದ್ದಾರೆ. ನಮ್ಮ ಮತದಲ್ಲಿ ಇರುವ ದೇವರು ಇತರ ಮತಗಳಲ್ಲಿ ಹೇಳಿಕೊಳ್ಳುವ ದೇವರು ಒಬ್ಬನೇ ಎಂದು ತಿಳಿಯದೆ, ನಿಜ ದೇವರು ನಮ್ಮ ದೇವರೇ ಎಂದು, ಇಲ್ಲ ನಮ್ಮ ದೇವರೇ ನಿಜ ದೇವರೆಂದು ವಾದಿಸಿಕೊಳ್ಳುತ್ತಿದ್ದಾರೆ. ಮಾನವರಲ್ಲಿ ಮತಗಳ ಮೇಲಿರುವ ಮಮಕಾರ ದೇವರ ಮೇಲಿಲ್ಲದೆ ಹೋಗುತ್ತಿದೆ. ಅಂತಹ ಅಜ್ಞಾನದಲ್ಲಿ ಮಾನವನು ಬೀಳಬಾರದು. ನಾವು ಬೇರೆಬೇರೆಯಾಗಿ ಹೇಳುತ್ತಿರುವ ದೇವರು ಒಬ್ಬನೆ ಎಂದು ತಿಳಿಯಬೇಕು. ಸಮಯ ಸಂದರ್ಭವನ್ನು ಅನುಸರಿಸಿ, ದೇಶವನ್ನು ಮನುಷ್ಯರನ್ನು ಅನುಸರಿಸಿ

ತನ್ನ ಪಾತ್ರ ಹೇಗೆ ಇರಬೇಕೋ ತಾನೇ ನಿರ್ಣಯಿಸಿಕೊಂಡು, ಪರಮಾತ್ಮ ಭೂಮಿಮೇಲಕ್ಕೆ ಭಗವಂತನಾಗಿ ಬರುತ್ತಿದ್ದಾನೆ. ಹಾಗಿರುವಾಗ ಜನ್ಮ ಜನ್ಮಕ್ಕು ಯಾವ ಹೋಲಿಕೆ ಇರುವುದಿಲ್ಲ. ಆದರೆ ತಾನು ಬಂದಿರುವ ಯಾವ ಜನ್ಮದಲ್ಲಾದರೂ ತನ್ನ ಧ್ಯೇಯ ಒಂದೇ ಇರುತ್ತದೆ. ಅದುವೇ ತನ್ನ ಧರ್ಮಗಳನ್ನು ತಿಳಿಸುವುದು. ಪ್ರಭುವಾಗಿ ಬಂದರೂ, ಅದಕ್ಕೂ ಮೊದಲು ಕೃಷ್ಣನಾಗಿ ಬಂದರೂ, ಆತನು ಮಾನವರಿಗೆ ತಿಳಿಸಿರುವ ಧರ್ಮಗಳು ಒಂದೇ. ಆದರೆ ವ್ಯಕ್ತಿಯನ್ನು ಅನುಸರಿಸಿ, ಹೆಸರನ್ನು ಅನುಸರಿಸಿ, ಆತನು ಇರುವ ದೇಶವನ್ನು ಅನುಸರಿಸಿ, ಎಲ್ಲ ಬೇರೆ ಬೇರೆಯಾಗಿ ಇರುವುದರಿಂದ ದೇವರು ಕೂಡಾ ಬೇರೆ ಬೇರೆಯಾಗಿಯೇ ಕಾಣಿಸುತ್ತಿದ್ದಾನೆ. ಹೆಸರು, ವ್ಯಕ್ತಿ, ದೇಶವು ಬೇರೆ ಬೇರೆ ಯಾಗಿರುವುದರಿಂದ ಆತನ ಧರ್ಮವು ಕೂಡಾ ಬೇರೆ ಬೇರೆಯಾಗಿ ಕಾಣಿಸುತ್ತಾ ಇದೆ.

ಉದಾಹರಣೆಗೆ ಪರಮಾತ್ಮ ತಿಳಿಸಿರುವ ಒಂದು ಧರ್ಮವನ್ನು ತೆಗೆದುಕೊಳ್ಳೋಣ. ಶ್ರೀಕೃಷ್ಣನು ಗೀತೆಯಲ್ಲಿ **"ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್" ಸಾಧು ಜನರನ್ನು ವೃದ್ಧಿಸುತ್ತೇನೆ, ದುಷ್ಟರನ್ನು ನಾಶ ಮಾಡುತ್ತೇನೆ ಎಂದಿದ್ದಾನೆ**. ಆ ಮಾತನ್ನು ಹಿಡಿದುಕೊಂಡು ಕ್ರೈಸ್ಥ ಮತದಲ್ಲಿ ಕೆಲವು ಬೋಧಕರು, ನಿಮ್ಮ ಇಂದೂ ಮತದಲ್ಲಿ ನಿಮಗೆ ರಕ್ಷಣೆ ಇಲ್ಲ. ನಿಮ್ಮ ಮತದಲ್ಲಿ ನಿಮ್ಮ ದೇವರು ಪಾಪಾತ್ಮರನ್ನು ಸಂಹರಿಸುತ್ತೇನೆಂದು ಹೇಳುತ್ತಿದ್ದಾನೆ. ನಮ್ಮ ಮತದಲ್ಲಿ ಎಂತಹ ಪಾಪಾತ್ಮನಿಗಾದರೂ ರಕ್ಷಣೆ ಇದೆ. ಪಾಪಿಗಳನ್ನು ರಕ್ಷಿಸುವ ನಿಮಿತ್ತವೇ ಏಸುಪ್ರಭು ಭೂಮಿಮೇಲಕ್ಕೆ ಬಂದಿದ್ದೇನೆಂದು ಹೇಳಿದ್ದಾನೆ. ಆದ್ದರಿಂದ ನೀವು ಎಷ್ಟು ಪಾಪಿಗಳಾದರೂ, ಎಷ್ಟು ದುರ್ಮಾರ್ಗದವರಾದರೂ ನಮ್ಮ ಮತದಲ್ಲಿ ನಿಮಗೆ ರಕ್ಷಣೆ ಇದೆ. ನಿಮ್ಮ ಮತದಲ್ಲಿ ನಿಮ್ಮ ದೇವರು ಪಾಪಾತ್ಮರನ್ನು, ದುರ್ಮಾರ್ಗರನ್ನು ವಿನಾಶ ಮಾಡುತ್ತೇನೆಂದರೆ, ನಮ್ಮ ದೇವರು ನಿನಗೆ ರಕ್ಷಣೆ ಕೊಡುತ್ತೇನೆಂದಿದ್ದಾನೆ. ಆದಕಾರಣ ನಮ್ಮ ದೇವರೇ ನಿಜವಾದ ದೇವರೆಂದು ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಏಸುಪ್ರಭು ಹೇಳಿರುವ ನಿಜವಾದ

ಅರ್ಥ ಕ್ರೈಸ್ಥರಿಗಾಗಲೀ, ಗೀತೆಯಲ್ಲಿ ಕೃಷ್ಣನು ಹೇಳಿರುವ ಆ ಶ್ಲೋಕಕ್ಕೆ ಅರ್ಥ ಇಂದೂಗಳಿಗಾಗಲೀ ಅರ್ಥವಾಗದೇ, ಆತನ ಮಾತು ಬೇರೆ, ಈತನ ಮಾತು ಬೇರೆ ಎಂದಂತೆ ಕಾಣಿಸುತ್ತಿದೆ. ಅದರಿಂದ ಇಬ್ಬರೂ ಬೇರೆಬೇರೆ ಎಂದು ಅವರಿಗೆ ಗಾಢವಾಗಿ ಅರ್ಥವಾಗಿದೆ. ಆದರೆ ಇಬ್ಬರೂ ಒಬ್ಬರೇಯೆಂದು ಇಬ್ಬರಲ್ಲಿ ಒಂದೇ ಅಂಶ ಇದೆಯೆಂದು, ಅವರು ಇಬ್ಬರೂ ಹೇಳಿರುವ ಆ ಎರಡು ವಾಕ್ಯಗಳು ಒಂದೇ ಅರ್ಥ ಕೊಡುತ್ತಿವೆಯೆಂದು ತಿಳಿಯಲಾರದೆ ಹೋಗಿದ್ದಾರೆ. ಇಬ್ಬರ ಮಾತುಗಳಲ್ಲಿ ಇರುವ ಅರ್ಥ ಪಾಪಿಗಳನ್ನು, ದುರ್ಮಾರ್ಗರನ್ನು ಇಲ್ಲದೆ ಮಾಡುವುದು ಎನ್ನುವುದರಲ್ಲಿ **'ಬೋಧ'** ಎನ್ನುವ ಆಯುಧದಿಂದ 'ಪಾಪವು, ದುಷ್ಟತ್ವ' ಎಂಬ ಕರ್ಮವನ್ನು ಇಲ್ಲದೆ ಮಾಡಿ ಪವಿತ್ರರನ್ನಾಗಿ ಮಾಡುವುದೇ ಯೆಂದು, ದುರ್ಮಾರ್ಗರು ಪವಿತ್ರರಾಗಿ ಬದಲಾಗುವುದರಿಂದ ಪಾಪಗಳಲ್ಲಿ ಸಿಲುಕಿಕೊಳ್ಳದೆ ಸನ್ಮಾರ್ಗರಾಗಿ ಬದಲಾಗುವು ದರಿಂದ, ದುಷ್ಟರು ಇಲ್ಲದೆ ಹೋಗುವುದು ನಡೆಯುತ್ತಿದೆ. ಗೀತೆಯಲ್ಲಿ ದುಷ್ಟರನ್ನು ಇಲ್ಲದಂತೆ ಮಾಡುತ್ತೇ ನೆಂದು, ಬೈಬಲ್‌ನಲ್ಲಿ ಪಾಪಗಳು ನಿಮ್ಮನ್ನು ಅಂಟದಂತೆ, ಪಾಪಗಳಿಂದ ರಕ್ಷಣೆ ಕಲ್ಪಿಸುತ್ತೇನೆಂದು ಹೇಳಿರುವುದು ಒಂದೇ ಅಲ್ಲವೇ!

ಭಾಷೆ ಬೇರೆಯಾದರೂ ಭಾವವೊಂದೇಯೆಂದು, ಹೆಸರುಗಳು ವ್ಯಕ್ತಿಗಳು ಬೇರೆಯಾದರೂ ಅವರು ಹೇಳಿದ ಮಾತುಗಳಲ್ಲಿ ಉದ್ದೇಶ ಒಂದೇಯೆಂದು ತಿಳಿಯದೆ, ಆತನ ಭಾವವನ್ನು ಅವಗಾಹನೆ ಮಾಡಿಕೊಳ್ಳಲಾರದೆ ಯಾರಿಗೆ ಇಷ್ಟಬಂದ ಪದ್ಧತಿಯಲ್ಲಿ ಅವರು ಹೇಳಿಕೊಂಡು, ಧರ್ಮವನ್ನು ಹೇಳಿದವನನ್ನೆ ಬೇರೆಬೇರೆ ಎಂದು ವಿಂಗಡಿಸಿದ್ದಾರೆ. ಇಂದೂಗಳು ಏಸುಪ್ರಭುವನ್ನು ವಿಮರ್ಶಿ ಸಿದಾಗ, ಕ್ರೈಸ್ಥರು ಕೃಷ್ಣನನ್ನು ದೇವರು ಅಲ್ಲವೆಂದಾಗ, ಪರಮಾತ್ಮನಾದವನು ಪರಲೋಕ ರಾಜ್ಯವನ್ನಾಳುವವನು, ಪರಲೋಕ ತಂದೆ, ವಿಶ್ವಾಧಿಪತಿ, ಪುರುಷೋತ್ತಮನಾಗಿ ವಿಶ್ವವೆಲ್ಲಾ ವ್ಯಾಪಿಸಿ ನಮ್ಮಲ್ಲಿ ಜೊತೆಯಾಗಿರುವ ಆ ದೇವರು ಈ ಪ್ರಜೆಗಳು ಕಣ್ಣಿರುವ ಕುರುಡರೆಂದುಕೊಂಡು ನಗಾಡಿಕೊಳ್ಳುತ್ತಿದ್ದಾನೆ. 'ಅಧರ್ಮಗಳು ಉದ್ಭವಿಸಿದಾಗ ಧರ್ಮಗಳಿಗೆ ಗ್ಲಾನಿ ಉಂಟಾದಾಗ ಬರುತ್ತಿರುತ್ತೇ

ನೆಂದು' ಗೀತೆಯಲ್ಲಿ ಕೃಷ್ಣನು ಹೇಳಿದ್ದಾನಲ್ಲವೇ, ಹಾಗೆಯೇ ನವಿಲು ಗರಿಯೊಂದಿಗೆ, ಮುರಳಿಯೊಂದಿಗೆ, ಚಕ್ರದೊಂದಿಗೆ ಮೊದಲ ಹಾಗೆ ಬಂದರೇನೇ ಈತನು ಆ ದೇವರೆಂದು ಇಂದೂಗಳು ಗ್ರಹಿಸುತ್ತಾರೆ. ಹಾಗಲ್ಲದೇ ಬೇರೆ ರೂಪದೊಂದಿಗೆ ಜನ್ಮಿಸಿದರೇ ದೇವರನ್ನು ಸಹ ನೀನು ನಮ್ಮ ದೇವರಲ್ಲ ಹೋಗು! ಎನ್ನುತ್ತಾರೆ. ಬೈಬಲ್‌ನಲ್ಲಿ ಮರಳಿ ನನ್ನ ಎರಡನೆಯ ಬರುವಿಕೆ ಇದೆಯೆಂದು ಹೇಳಿರುವ ಪ್ರಭು 'ಪೂರ್ವವು ಜನ್ಮಿಸಿದ್ದ ಹಾಗೆಯೇ ಜನ್ಮಿಸಿ, ಕೈಯಲ್ಲಿ ಮೊಳೆಗಳ ಗಾಯದ ಗುರುತುಗಳು, ಪಕ್ಕೆಯಲ್ಲಿ ಶೂಲದಿಂದ ಇರಿದಿರುವ ಗಾಯದ ಗುರುತು ಇದ್ದರೇನೆ' ಪ್ರಭುವೆಂದು ಕ್ರೈಸ್ಥರು ಗುರುತಿಸುತ್ತಾರೆ. ಹಾಗಲ್ಲದೇ ಬೇರೆ ರೂಪದಿಂದ ಇರುವ ನೀನು ನಮ್ಮ ಪ್ರಭು ಅಲ್ಲ ಹೋಗು! ಎನ್ನುತ್ತಾರೆ. ಹೋಲಿಕೆಗಳು, ಪ್ರವರ್ತನೆಗಳು ಬೇರೆಯಾಗಿ ಇರುವುದರಿಂದ ಶ್ರೀಕೃಷ್ಣನೇ ಪ್ರಭುವೆಂದು ಇಂದೂಗಳು, ಪ್ರಭುವೇ ಕೃಷ್ಣನೆಂದು ಕ್ರೈಸ್ಥರು ಗುರುತಿಸಲಾರದೇ ಹೋಗಿದ್ದಾರೆ. ಆದ್ದರಿಂದಲೆ ಗೀತೆಯಲ್ಲಿ ದೇವರು **"ನನ್ನನ್ನು ನನ್ನ ಮಹಿಮೆ ತಿಳಿಯದೆ ಪ್ರಜೆಗಳು ನನ್ನನ್ನು ಅವಮಾನಿಸುತ್ತಾರೆಂದು"** ಹೇಳಿದ್ದಾನೆ. ಪ್ರಭುವಾಗಿ ಬಂದಾಗ ಪ್ರಜೆಗಳು ಅದೇ ಕೆಲಸವನ್ನು ಮಾಡಿದ್ದಾರೆ. ಧರ್ಮಗಳನ್ನು ಬೋಧಿಸುವ ನಿಮಿತ್ತ ಬರುತ್ತೇನೆಂದು ಹೇಳಿರುವ ಕೃಷ್ಣನು ಬಂದರೂ, ನಿನಗೆ ಜ್ಞಾನ ಹೇಳಿ ಉಪದೇಶ ಕೊಡುತ್ತೇವೆನ್ನುವ ಇಂದೂ ಗುರುಗಳು, ಪ್ರಭುವಿನ ಎರಡನೆಯ ಬರುವಿಕೆ ನಡೆದರೂ ಯಾರೂ ಗುರುತಿಸಲಾರದೆ ಬೇರೆ ಆಕಾರದಲ್ಲಿರುವ ಪ್ರಭುವಿಗೆ ಬಾಪ್ತಿಸ್ಮ (ಉಪದೇಶ) ಕೊಡುತ್ತೇವೆನ್ನುವ ಕ್ರೈಸ್ಥ ಬೋಧಕರು ಇದ್ದಾರೆ. ಕೃಷ್ಣನು ರೂಪವನ್ನು, ಹೆಸರನ್ನು ಬದಲಾಯಿಸಿಕೊಂಡು ಬಂದರೆ ಆತನಿಗೇ ಜ್ಞಾನವನ್ನು ಕಲಿಸುವ ಗುರುಗಳಿರುವವರೆಗು ಇಂದೂ ಮತದಲ್ಲಿ ಅಜ್ಞಾನ ವಿದೆಯೆಂದು, ಹಾಗೆಯೇ ಶರೀರ ಬದಲಾಯಿಸಿಕೊಂಡು ಪ್ರಭು ಎದುರಿಗೆ ಬಂದರೂ ಆತನಿಗೇ ವಾಕ್ಯಗಳ ಕುರಿತು ಹೇಳುವ ಕ್ರೈಸ್ಥವರಿರುವವರೆಗೂ ಅವರಿಗೆ ದೇವರ ವಿಷಯವು ಪೂರ್ತಿ ಅವಗಾಹನೆ ಆಗಲಿಲ್ಲವೆಂದೇ ಹೇಳಬಹುದು.

ದೇವರು ಭೂಮಿ ಮೇಲಕ್ಕೆ ಬಂದರೂ ಎಷ್ಟೋ ಜ್ಞಾನಿಗಳಾದವರು ಕೂಡಾ ಆತನನ್ನು ಗುರುತಿಸಲಾಗದೆ ಹೋಗುವುದಕ್ಕೆ ಆತನ ಜ್ಞಾನವನ್ನು ಅರ್ಥ ಮಾಡಿಕೊಳ್ಳಲಾಗದೆ ಹೋಗುವುದಕ್ಕೆ ಬಲವಾದ ಕಾರಣವಿದೆ. ಆ ಕಾರಣವೇನೆಂದು ತಿಳಿಯುವುದಕ್ಕೆ ಮೊದಲು ಕಣ್ಣಿಗೆ ಕಾಣಿಸುವ **ಸೃಷ್ಟಿಯನ್ನು** ಕುರಿತು ತಿಳಿದುಕೊಳ್ಳಬೇಕು. ದೇವರು ಅರ್ಥವಾಗದೆ ಹೋಗುವುದಕ್ಕೆ ದೇವರಿಗೆ ವಿರುದ್ಧವಾದ ಪ್ರಧಾನ ಪ್ರತಿಪಕ್ಷವೊಂದು ಇದೆ. ಅದನ್ನೇ ಕ್ರೈಸ್ಥರು **'ಸಾತಾನ್'** ಎಂದು, ಇಂದೂಗಳು **'ಮಾಯೆ'** ಎಂದು, ಇಸ್ಲಾಮ್ ಮತದವರು **'ಸೈತಾನ್'** ಎಂದು ಹೇಳುತ್ತಿದ್ದಾರೆ. ಮಾಯೆ, ಸೈತಾನ್, ಸಾತಾನ್ ಎಂಬ ಹೆಸರುಗಳು ಹೊಂದಿರುವುದೇನೋ ಅದರ ರಹಸ್ಯವು ತಿಳಿಯಬೇಕೆಂದರೆ ಮೊದಲು **ಸೃಷ್ಟಿ ರಹಸ್ಯವು** ತಿಳಿಯಬೇಕು. ಅದರ ವಿವರವನ್ನು ಕೆಳಗೆ ನೋಡೋಣ.

## ಸೃಷ್ಟಿ ರಹಸ್ಯ

ಜಗತಿ ಇಲ್ಲದ ಮೊದಲು ಪರಮಾತ್ಮ (ದೇವರು) ಸ್ತ್ರೀ ಅಲ್ಲ, ಪುರುಷನು ಅಲ್ಲ. ಯಾವುದೂ ಅಲ್ಲದ ಪರಮಾತ್ಮ ಜಗತ್ತನ್ನು ಸೃಷ್ಟಿಸಬೇಕೆಂದುಕೊಂಡು ಸ್ತ್ರೀ ತತ್ತ್ವ ಹೊಂದಿರುವ ಪ್ರಕೃತಿಯನ್ನು, ಮಾಯೆಯನ್ನು ಇಲ್ಲವೇ ಸಾತಾನ್‌ನನ್ನು ತಯಾರಿ ಮಾಡಿದ್ದಾನೆ. ಅದಕ್ಕಿರಬೇಕಾದ ಲಕ್ಷಣಗಳನ್ನು, ಇರಬೇಕಾದ ಪದ್ಧತಿಗಳನ್ನು ಎಲ್ಲವನ್ನೂ ನಿರ್ಣಯಿಸಿದ್ದಾನೆ. ಪ್ರಕೃತಿ ಸ್ತ್ರೀ ಸ್ವರೂಪವಾದುದು ಆದ್ದರಿಂದ ಅದಕ್ಕಿಂತಲೂ ಪೂರ್ತಿ ವಿಲಕ್ಷಣವಾಗಿ ನಿಂತಿದ್ದಾನೆ. ಆ ಲಕ್ಷಣವೇ ಪುರುಷನು. ತನಗೆ ಪ್ರಕೃತಿ, ಪ್ರಕೃತಿಗೆ ತಾನು ಪೂರ್ತಿ ವಿರುದ್ಧ ದಿಶೆಯಲ್ಲಿ ಇರುವ ಹಾಗೆ ತಿಳಿದ ಪರಮಾತ್ಮ ಇಬ್ಬರೂ ಸರಿಜೋಡಿಯಾಗಿ ಇದ್ದಾಗಲೇ ತಾನು ಆಡುವ ಆಟ ರಸವತ್ತಾಗಿ ಇರುವುದೆಂದು, ತನಗೆ ಸಮಾನವಾಗಿ ಪ್ರಕೃತಿಗೆ ಅಧಿಕಾರಗಳು ಕೊಟ್ಟಿದ್ದಾನೆ. ಪ್ರಕೃತಿ (ಸಾತಾನ್) ಪರಮಾತ್ಮನಿಗೆ ವಿರುದ್ಧವೆ ಹೊರತು ಶತ್ರುವಲ್ಲ. ದೇವರು, ಸಾತಾನ್ (ಪರಮಾತ್ಮ, ಪ್ರಕೃತಿ)

ಕೈಯಲ್ಲಿ ವಿರೋಧವನ್ನು ಎದುರಾಡುವುದು ಸಹಜವೆ ಆದರೂ ಒಬ್ಬರಿಗೊಬ್ಬರು ಶತ್ರುಗಳಲ್ಲ.

ಒಂದು ಸಮಯದಲ್ಲಿ ಪ್ರಕೃತಿಯನ್ನು ಹುಟ್ಟಿಸಿರುವ ಪರಮಾತ್ಮ, ಪುನಃ ಒಂದು ಸಮಯದಲ್ಲಿ ತನ್ನಲ್ಲೆ ಲೀನಮಾಡಿಕೊಂಡು ಪ್ರಕೃತಿಯನ್ನು ಇಲ್ಲದೇ ಮಾಡುತ್ತಾನೆ. ಪ್ರಕೃತಿಯನ್ನು ಹುಟ್ಟಿಸಿರುವವನು, ಪೋಷಿಸುವವನು, ಪುನಃ ಇಲ್ಲದೇ ಮಾಡುವವನು ಪರಮಾತ್ಮನೆ. ಹುಟ್ಟಿಸಿರುವ ತಂದೆಯಾಗಿ, ಭರಿಸುವ ಭರ್ತ(ಗಂಡ)ನಾಗಿ, ನಾಶಮಾಡುವ ಕಾಲನಾಗಿ ಪ್ರಕೃತಿಗೆ ಎಲ್ಲಾ ತಾನಾಗಿದ್ದು ಪ್ರಕೃತಿಯಲ್ಲಿನ ಶಕ್ತಿಯಾಗಿ ಕೂಡಾ ತಾನಾಗಿ ಪರಮಾತ್ಮ ಇದ್ದಾನೆ. ಎಷ್ಟೋ ವಿಶಾಲವಾಗಿ ಇರುವವನು ಸ್ವಲ್ಪ ವಿಶಾಲವಾದ ಪ್ರಕೃತಿಯನ್ನು ತಯಾರಿ ಮಾಡಿ **'ಜಗತಿ'** ಎಂಬ ಆಟವನ್ನು ಆಡುತ್ತಿದ್ದಾನೆ. ಈ ಆಟದಲ್ಲಿ ಯಾವುದೂ ಅಲ್ಲದ ಪರಮಾತ್ಮ ಪುರುಷನ ವೇಷಧಾರಿಯಾಗಿ ಹೋಗಿದ್ದಾನೆ. **'ಜಗತಿ'** ಎಂಬ ನಾಟಕದ ಪ್ರಕಾರ ಪರಮಾತ್ಮ ಪುರುಷನು. ನಾಟಕಕ್ಕೆ ಅತೀತವಾಗಿ ನೋಡಿದರೆ ಸ್ತ್ರೀ, ಪುರುಷ ಯಾವುದೂ ಅಲ್ಲದವನು. ಪ್ರಕೃತಿಯನ್ನು ಪಂಚಭೂತಗಳನ್ನಾಗಿ ಮಾಡಿ ಪ್ರಪಂಚ ಎಂದಿದ್ದೇವೆ. ಪ್ರಪಂಚವನ್ನು ಸೃಷ್ಠಿಸಿರುವ ಪರಮಾತ್ಮ, ಸಾವು ಹುಟ್ಟುಗಳಿರುವ ಜಗತಿಯನ್ನು ಸೃಷ್ಠಿಸಬೇಕೆಂದುಕೊಂಡಿದ್ದಾನೆ. ಹುಟ್ಟು ಸಾವುಗಳು ಇರುವ ಜೀವರಾಶಿಗಳನ್ನು ಆತ್ಮದಿಂದ ಸೃಷ್ಠಿಸಿ ಪ್ರಪಂಚದಲ್ಲಿ ಜಗತಿಯನ್ನು ನಿರ್ಮಿಸಿದ್ದಾನೆ. **'ಜ'** ಎಂದರೇ ಹುಟ್ಟುವುದು **'ಗತಿ'** ಎಂದರೆ ಸಾಯುವುದು ಎಂದು, ಜಗತಿ ಎಂದರೆ ಹುಟ್ಟು, ಸಾವುಗಳು ಇದೆಯೆಂದು ತಿಳಿಯುವಹಾಗೆ ಜೀವ ಸಮುದಾಯಕ್ಕೆ **'ಜಗತಿ'** ಎಂದು ಹೆಸರಿಟ್ಟಿದ್ದಾರೆ.

ಪ್ರಕೃತಿಯೆಂಬ ಪ್ರಪಂಚವನ್ನು ತಯಾರು ಮಾಡಿರುವ ಪರಮಾತ್ಮ, ಪ್ರಕೃತಿಯಲ್ಲಿ ಜಗತಿ ಎಂಬ ಜೀವರಾಶಿಗಳನ್ನು ತಯಾರು ಮಾಡಿದ್ದಾನೆ. ಪ್ರಕೃತಿ, ಪುರುಷರು ಸಮಾನವಾದವರಾದಾಗ, ಅಂದರೆ ಪ್ರಪಂಚ, ಪರಮಾತ್ಮ ಸಮಾನರಾದಾಗ, ನಂತರ ಪ್ರತ್ಯೇಕವಾಗಿ ಹುಟ್ಟಿ ಬಂದಿರುವುದು ಜಗತಿ. ಇಂದಿಗೂ

ಪರಮಾತ್ಮ ಪ್ರಪಂಚವನ್ನು, ಜಗತಿಯನ್ನು ಎರಡನ್ನೂ ಸೃಷ್ಠಿಸಿದ್ದಾನೆ. ತನ್ನೊಂದಿಗೆ ಬೆರೆಸಿಕೊಂಡರೆ ಮೂರಾಗುತ್ತವೆ. ಮೊದಲಿಗೆ ಏನೂ ಅಲ್ಲದ ಪರಮಾತ್ಮ, ಪ್ರಕೃತಿಯನ್ನು ತಯಾರಿ ಮಾಡಿ, ತಾನು ಪುರುಷನಾಗಿ ಆತ್ಮವಾಗಿ ಇದ್ದೂ ಪ್ರಕೃತಿಯನ್ನು ಹೆಂಡತಿಯನ್ನಾಗಿ ಮಾಡಿಕೊಂಡು, ತಾನು ಗಂಡನಾಗಿ ಇದ್ದು ಜಗತಿ ಎಂಬ ಪ್ರತ್ಯೇಕವಾದ ಸಂತಾನವನ್ನು ತಯಾರು ಮಾಡಿದ್ದಾನೆ. ಈ ವಾವಿವರಸೆಗಳು (ಸಂಬಂಧಗಳು) ಇಲ್ಲದೆ ನೋಡಿದರೆ ಯಾವುದೂ ಅಲ್ಲದ ಪರಮಾತ್ಮ ತನ್ನಿಂದ ಮೂರು ಭಾಗಗಳನ್ನು ಸೃಷ್ಠಿಸಿದ್ದಾನೆ. ಪ್ರಕೃತಿಯನ್ನು, ಪುರುಷನನ್ನು, ಜಗತಿಯನ್ನು. ಪ್ರಕೃತಿಯನ್ನು ಸ್ತ್ರೀ, ಪರಮಾತ್ಮನನ್ನು ಪುರುಷನು, ಜಗತಿಯನ್ನು ನಪುಂಸಕನೆಂದು ತಿಳಿಯಬೇಕು. ಮಧ್ಯದಲ್ಲಿ ಇರುವ ನಪುಂಸಕನನ್ನು ಇತ್ತ ಪ್ರಕೃತಿ ತನ್ನ ಕಡೆ ಸೆಳೆದುಕೊಳ್ಳುವುದು, ಅತ್ತ ಪರಮಾತ್ಮ ತನ್ನಕಡೆ ಸೆಳೆದುಕೊಳ್ಳುವುದು ಮುಖ್ಯವಾದ ಆಟವಾಗಿ ಇದೆ. ಆಟಕ್ಕಂತೂ ಒಂದು ಪದ್ಧತಿ ಇರುತ್ತದೆ. ಆಟ ಪದ್ಧತಿಗಳನ್ನು ನಿರ್ಣಯಿಸಿ ಆಟವನ್ನು ಇಟ್ಟಿರುವ ಪರಮಾತ್ಮ ತಾನು ಎಲ್ಲದಕ್ಕೂ ಸೃಷ್ಠಿಕರ್ತ, ದೊಡ್ಡವನಾದರೂ ಆತ್ಮನನ್ನು ಸೃಷ್ಠಿಸಿ ತಾನು ನಿರ್ಣಯಿಸಿದ ಪದ್ಧತಿಗಳ ಪ್ರಕಾರ ಆಟ ಆಡುತ್ತಿದ್ದಾನೆ. ಈ ಆಟಕ್ಕೆ ಉಳಿದ ಆಟಗಳ ಹಾಗೆ ಸ್ವಲ್ಪ ಕಾಲ ನಿರ್ಣಯವಿದೆ. ಫುಟ್‌ಬಾಲ್‌ಗೆ ಒಂದೂವ ರೆಗಂಟೆ, ಕ್ರಿಕೆಟ್‌ಗೆ ಐವತ್ತು ಓವರ್‌ಗಳು ಎನ್ನುವಂತೆ, ಜಗತಿ ಎನ್ನುವ ಆಟಕ್ಕೆ ಸಾವಿರ ಯುಗಗಳು ಇಲ್ಲವೇ 108 ಕೋಟಿ ವರ್ಷಗಳ ಪರಿಮಿತಿ ಇದೆ. ರಾತ್ರಿಹೊತ್ತು ವಿರಾಮ, ಹಗಲು ಆಟ ಸಾಗುವುದು ನಡೆಯುತ್ತಿದೆ. ಆಟದ ಸಮಯವು 108 ಕೋಟಿ ವರ್ಷಗಳು, ವಿರಾಮವು ಕೂಡಾ ಅಷ್ಟೇ ಸಮಯ.

ಏನೂ ಅಲ್ಲದವನು, ಇಂತಹವನು ಎಂದು ಯಾರಿಂದಲೂ ಹೇಳಲ್ಪಡದ ವನು, ಮೊದಲು ಪ್ರಪಂಚವನ್ನು, ನಂತರ ಜೀವರಾಶಿಗಳನ್ನು ತಯಾರು ಮಾಡಿದ್ದಾನೆ ಅಲ್ಲವೇ! ಪ್ರಕೃತಿಯನ್ನು ತಯಾರು ಮಾಡಿ ತಾನು 'ಪುರುಷನು' ಎಂಬ ಗುರುತು ತಂದುಕೊಂಡಿದ್ದಾನೆ. ಪುರುಷನಾಗಿ ಆತ್ಮನನ್ನು ಸೃಷ್ಠಿಸಿ ಆತ್ಮ

ಬೀಜವನ್ನು ಭರಿಸಲ್ಪಟ್ಟು ಗರ್ಭವನ್ನು ಧರಿಸುವ ಪ್ರಕೃತಿಯನ್ನು ಐದು ಭಾಗಗಳು ಮಾಡಿದ್ದಾನೆ. ಅಂತಹ ಪ್ರಕೃತಿಯನ್ನೇ ಪಂಚಭೂತಗಳೆಂದು, ಪ್ರಪಂಚವೆಂದು ಕರೆಯುತ್ತಿದ್ದೇವೆ. ತನ್ನಿಂದಲೇ ತಯಾರಿ ಮಾಡಲ್ಪಟ್ಟಿರುವ ಆತ್ಮನನ್ನು, ಜೀವಾತ್ಮ ನನ್ನು ಮೂರನ್ನಾಗಿ ವಿಂಗಡಿಸಿದ್ದಾನೆ. ಜೀವರೂಪವಾದ ಜಗತಿ ಜೀವಾತ್ಮ ಯೆಂದೂ, ಆತ್ಮ ಎಂದೂ, ಪರಮಾತ್ಮಯೆಂದೂ, ಮೂರು ವಿಧಗಳಾಗಿ ವಿಂಗಡಿಸಿದವನು, ಜೀವಾತ್ಮಗಳನ್ನು, ಆತ್ಮನನ್ನು ತಯಾರಿ ಮಾಡಿ ತಾನು ಪರಮಾತ್ಮನೆಂಬ ಗುರುತು ತಂದುಕೊಂಡಿದ್ದಾನೆ. ಪ್ರಕೃತಿ ಪಕ್ಕದಲ್ಲಿ ಪುರುಷನಾಗಿ ಆತ್ಮಗಳ ಪಕ್ಕದಲ್ಲಿ ಪರಮಾತ್ಮನಾಗಿ ಗುರುತು ತಂದುಕೊಂಡಿದ್ದಾನೆ. ಪ್ರಕೃತಿ ಇರುವಾಗ, ಆತ್ಮಗಳು ಇರುವಾಗ ಮಾತ್ರವೇ ಪುರುಷ ಮತ್ತು ಪರಮಾತ್ಮ ಎಂದು ಕರೆಯುವುದಕ್ಕೆ ಆಧಾರವಿದೆ. ಅವು ಇಲ್ಲದಿದ್ದರೆ ಆತನನ್ನು ಏನೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಏನೂ ಅಲ್ಲದವನು ಪ್ರಪಂಚದಿಂದ ಪುರುಷನೆಂದು, ಆತ್ಮಗಳಿಂದ ಪರಮಾತ್ಮನೆಂದು ಅರ್ಥವಾಗಿದೆಯೆಂದು ಕೊಳ್ಳುತ್ತೇನೆ. ಪ್ರಕೃತಿ, ಪುರುಷನಾದ ಆತ್ಮಕ್ಕೆ ಹುಟ್ಟಿರುವುದು ಜೀವ ಸಮುದಾಯವಾದ ಜಗತಿ. ಜಗತಿಯಲ್ಲಿ ತಾಯಿ ತಂದೆಯರಾದ ಪ್ರಕೃತಿ, ಪುರುಷರ ಲಕ್ಷಣಗಳು ಇರುವ ಹಾಗೆ ಪರಮಾತ್ಮನಿಂದ ಜೋಡಣೆ ಮಾಡಲ್ಪಟ್ಟಿದೆ.

ಪ್ರಕೃತಿಯಲ್ಲಿ ಪುರುಷನಿಗಿಂತಲೂ ವಿರುದ್ಧ ಲಕ್ಷಣಗಳಿರುವ ಹಾಗೆ ಜೋಡಣೆ ಇದೆ. ಜಗತಿಯಲ್ಲಿ ಮಾತ್ರ ಪ್ರಕೃತಿ ಪುರುಷರ ಎರಡರ ಲಕ್ಷಣಗಳು ಮಿಳಿತವಾಗಿ ಇವೆ. ಜೀವರೂಪವಾದ ಜಗತಿಯಲ್ಲಿ ಪರಮಾತ್ಮ ಸಂಬಂಧಿತ ಜೀವಾತ್ಮ, ಆತ್ಮಗಳು, ಪ್ರಕೃತಿ ಸಂಬಂಧಿತವಾದ ಶರೀರಗಳು, ಗುಣಗಳು ಎರಡೂ ಇವೆ. ಅಷ್ಟೇ ಅಲ್ಲದೆ ದೇವರಿದ್ದಾನೆ ಎನ್ನುವ ನಂಬಿಕೆ ಆತ್ಮಕಡೆ, ಇಲ್ಲವೆಂದು ದೇವರಿಗೆ ವಿರುದ್ಧತೆ ಪ್ರಕೃತಿ ಕಡೆ ಎರಡೂ ಇವೆ. ಜಗತಿಯಾಗಿ ಇರುವ ಮಾನವರಲ್ಲಿ ಪ್ರಕೃತಿ, ಪುರುಷರ ಲಕ್ಷಣಗಳಿರುವ ಪ್ರಕೃತಿ, ಪುರುಷರು ಹೀಗಿರುತ್ತಾರೆಂದು ತಿಳಿಸುವ ನಿಮಿತ್ತ ಪ್ರಕೃತಿಗೆ ಪ್ರತಿರೂಪವಾಗಿ ಸ್ತ್ರೀ ಶರೀರಗಳು,

ಪರಮಾತ್ಮನಿಗೆ ಪ್ರತಿರೂಪವಾಗಿ ಪುರುಷನ ಶರೀರಗಳು ತಯಾರಾಗಿವೆ. ಪ್ರಕೃತಿ ಪರಮಾತ್ಮರೇ ಅಲ್ಲದೇ ಜಗತ್ತು ಕೂಡಾ ಇದೆಯೆಂದು ತಿಳಿಯುವಹಾಗೆ ಜಗತ್ತಿಗೆ ಪ್ರತಿರೂಪವಾಗಿ ನಪುಂಸಕರು ಕೂಡಾ ತಯಾರಾಗಿದ್ದಾರೆ. ಸ್ತ್ರೀಯರು, ಪುರುಷರು, ನಪುಂಸಕರು ಎಂಬ ಮೂವರು ಪ್ರಕೃತಿ, ಪರಮಾತ್ಮ, ಜಗತಿ ಎನ್ನುವವುಗಳ ಪ್ರತಿರೂಪಗಳಾಗಿ ಇದ್ದಾರೆ. ಪ್ರಕೃತಿ=ಸ್ತ್ರೀ, ಜಗತಿ=ನಪುಂಸಕನು, ಪರಮಾತ್ಮ= ಪುರುಷನು (ಗಂಡಸು). ಹುಟ್ಟಿರುವ ಪ್ರಪಂಚಕ್ಕೆ ಹೆಂಗಸರು, ಜಗತ್ತಿಗೆ ನಪುಂಸಕರು, ಪರಮಾತ್ಮನಾಗಿ ಇರುವವನಿಗೆ ಗಂಡಸನನ್ನು ಗುರುತಾಗಿ ಇಟ್ಟು ತನ್ನ ಸೃಷ್ಠಿ ಹೀಗಿದೆ ಎಂದು ಎಲ್ಲರಿಗೂ ತಿಳಿಯುವಹಾಗೆ ಮಾಡಿದ್ದಾನೆ. ಅಷ್ಟೇ ಅಲ್ಲದೇ ಆತ್ಮಗು, ಪ್ರಕೃತಿಗು ಎರಡರಿಂದಲೆ ಜಗತ್ತು ಹುಟ್ಟಿದೆಯೆಂದು ತಿಳಿಯುವ ಹಾಗೆ ಹೆಣ್ಣು, ಗಂಡಿಗೆ ಸಂತಾನ ಹುಟ್ಟುವ ಹಾಗೆ ಮಾಡಿದ್ದಾನೆ. ಎಲ್ಲರಿಗೂ ಕಾಣಿಸುವ ತಾಯಿ, ತಂದೆ, ಸಂತಾನವು ಆದಿಯಲ್ಲಿ ಸೃಷ್ಠಿ ವಿಧಾನವಾಗಿ ಇದೆ. ಎಲ್ಲದರಲ್ಲಿ ಬುದ್ಧಿಯನ್ನು ಉಪಯೋಗಿಸುವ ಮಾನವನು ಸ್ತ್ರೀಗೆ ಭಿನ್ನವಾಗಿ ಇರುವ ಪುರುಷನ ಕುರಿತು, ಅವರಿಗೆ ಉಂಟಾಗುವ ಸಂತಾನವನ್ನು ಕುರಿತು ಯಾಕೆ ಹೀಗೆ ಇದೆಯೆಂದು ಸ್ವಲ್ಪವಾದರೂ ಯೋಚಿಸುತ್ತಿಲ್ಲ. ಆಧ್ಯಾತ್ಮಿಕ ವಿದ್ಯೆಯಲ್ಲಿ ಅಕ್ಷರಭ್ಯಾಸ ವಾದ **"ಸೃಷ್ಠಿ ರಹಸ್ಯ"**ವನ್ನು ತಿಳಿಯದೆ ಹೋದರೆ ಆಧ್ಯಾತ್ಮಿಕವೇ ತಿಳಿಯದೆ ಹೋಗುವುದು.

ಇದು ಒಂದು ಆಟವೆಂದು ದೇವರಿಗು, ಪ್ರಕೃತಿಗು ಮಧ್ಯದಲ್ಲಿ ನಡೆಯುವ ಶತ್ರುತ್ವ ರಹಿತ ಹೋರಾಟವೆಂದು ತಿಳಿಯಬೇಕು. ಪ್ರಕೃತಿ, ಪರಮಾತ್ಮರ ಆಟದಲ್ಲಿ ಜೀವಿಯನ್ನು ಅವರಕಡೆ ಅವರು ಸೆಳೆದುಕೊಳ್ಳುವುದಕ್ಕೆ ನೋಡುತ್ತಿರುತ್ತಾರೆ. ಪರಮಾತ್ಮ ತನ್ನ ಜ್ಞಾನವನ್ನು ಬೋಧಿಸಿ ತನ್ನ ಕಡೆ ಬರುವ ಹಾಗೆ ಮಾಡಿಕೊಳ್ಳುವುದು ತನ್ನ ಆಟದಲ್ಲಿ ಕರ್ತವ್ಯವಾದಾಗ, ಪ್ರಕೃತಿ ಮಾಯೆಯಾಗಿ ಇದ್ದು ತನ್ನ ಆಯುಧಗಳಾದ ಗುಣಗಳಿಂದ ಮನುಷ್ಯನಿಗೆ ಸಮಯ, ಸಹನೆ ಇಲ್ಲದಂತೆ ಮಾಡಿ ದೇವರನ್ನು ಕುರಿತು ಯೋಚಿಸುವ ಅವಕಾಶವೇ ಮಾನವನಿಗೆ

ಇಲ್ಲದಂತೆ ಮಾಡುತ್ತಿದೆ. ಎಲ್ಲರನ್ನೂ ಅವರವರ ಕೆಲಸಗಳಲ್ಲಿ ಸಿಲುಕಿಸಿ, ಗಮನವನ್ನೆಲ್ಲಾ ಆ ಕೆಲಸಗಳ ಮೇಲಕ್ಕೆ ಮರಳಿಸಿ, ಆಸೆಯಿಂದ ಅದಕ್ಕೆ ಅನುಬಂಧ ಗುಣಗಳಿಂದ, ಮನುಷ್ಯನನ್ನು ದೇವರಕಡೆ ಹೋಗದಂತೆ ಮಾಡುತ್ತಿದೆ. ಸೃಷ್ಠಿಯಲ್ಲಿ ಪರಮಾತ್ಮ, ಪ್ರಕೃತಿ ಮಧ್ಯೆ ನಡೆಯುವ ಅತಿದೊಡ್ಡ ಈ ಆಟಕ್ಕೆ ಹೆಸರಿಲ್ಲ. ಪ್ರಕೃತಿ ಮಾಯೆ ರೂಪದಲ್ಲಿ ತನ್ನನ್ನು ಯಾರೂ ಗುರುತಿಸದಂತೆ ಆಡುತ್ತಾ, ಎಲ್ಲರನ್ನೂ ತನ್ನಕಡೆ ಸೆಳೆದುಕೊಳ್ಳುತ್ತಿದೆ. ಜಗತ್ತಿನಲ್ಲಿ ಯಾರಾದರೂ ದೇವರ ಧ್ಯಾಸ ಹೊಂದಿರುವವರಾದರೇ ದೇವರನ್ನು ಕುರಿತು ತಿಳಿದುಕೊಳ್ಳಬೇಕೆಂದು ಪ್ರಯತ್ನಿಸಿದವನನ್ನು, ಮಾಯೆ (ಪ್ರಕೃತಿ) ಪ್ರತ್ಯೇಕವಾಗಿ ಅವನ ಮೇಲೆ ದೃಷ್ಠಿ ಹರಿಸಿ ಅವನನ್ನು ಕೂಡಾ ತನ್ನ ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಿದೆ. ದೇವರು, ಮಾಯೆ (ಸಾತಾನ್) ಒಂದರ ಹೋರಾಟದಲ್ಲಿ ಪ್ರಸ್ತುತ ಕಾಲದಲ್ಲಿ ಮಾಯೆಗೆ ಹೆಚ್ಚು ಬಲವಿರುವ ಹಾಗೆ ಅದರ ಕಡೆಗೆ ಶೇಕಡ 99 ರಷ್ಟು ಮನುಷ್ಯರಿರುವ ಹಾಗೆ ತಿಳಿಯುತ್ತಿದೆ. ಇಂತಹ ಸಂದರ್ಭಗಳಲ್ಲಿ ದೇವರ ಸೋಲು ತಪ್ಪುವು ದಿಲ್ಲವೇನೋ ಅನಿಸುವ ಸಮಯದಲ್ಲಿ ಪರಮಾತ್ಮ ಕೂಡಾ ತಾನು ಚೆನ್ನಾಗಿ ಆಡಿ ಗೆಲ್ಲುವುದಕ್ಕೆ ಪ್ರಯತ್ನಿಸಬೇಕು ಅಲ್ಲವೇ!

ಆದ್ದರಿಂದ ಆತನ ಪ್ರಯತ್ನದಲ್ಲಿನ ಭಾಗವಾಗಿ ಮನುಷ್ಯನಾಗಿ, ಮನುಷ್ಯರ ಮಧ್ಯದಲ್ಲಿ ಬಂದು ತನ್ನನ್ನು ಕುರಿತು ತಾನೇ ಹೇಳಿಕೊಂಡು ತನ್ನಕಡೆ ಮರಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾನೆ. ಆಟ ಎಂದರೆ ಗೆಲುವು, ಸೋಲುಗಳ ಮಧ್ಯೆ ಸಾಗುವ ಹೋರಾಟ ಅಲ್ಲವೇ! ಮೊದಲೇ ಹೇಳಿಕೊಂಡಿದ್ದೇವೆ ಇದು ಶತ್ರುತ್ವ ರಹಿತ ಯುದ್ಧವೆಂದು. ಈ ಹೋರಾಟದಲ್ಲಿ ಯಾರ ವ್ಯೂಹ ಅವರದ್ದು. ಮನುಷ್ಯನಲ್ಲಿಯೇ ಸಾತಾನ್ (ಮಾಯೆ) ದೇವರು ಇಬ್ಬರೂ ಇದ್ದರೂ ಅವರ ವಿಷಯವು ಮನುಷ್ಯನಿಗೆ ತಿಳಿಯದೆ ಇದೆ. ಆದ್ದರಿಂದ ಮನುಷ್ಯ ದೇವರನ್ನಾಗಲೀ, ಮಾಯೆಯನ್ನಾಗಲೀ ಗುರುತಿಸಲಾರದೇ ಇದ್ದಾನೆ. ತಾನು ಯಾವಕಡೆ ಇದ್ದಾನೆಂದು ಕೂಡಾ ತಿಳಿದಿಲ್ಲ. ತಮಗೆ ತಿಳಿಯದಿದ್ದರೂ ಮಾಯೆ ಕೈಯಲ್ಲಿ

ಸಿಲುಕಿರುವ ಮನುಷ್ಯರನ್ನು ಅದರಿಂದ ಬಿಡಿಸಬೇಕೆಂದು ದೇವರು ಕೂಡಾ ಪ್ರಯತ್ನಿಸುತ್ತಿರುತ್ತಾನೆ. ಆ ಪ್ರಯತ್ನದಲ್ಲಿಯೇ ಪರಮಾತ್ಮ ಮಾರುವೇಷದಲ್ಲಿ ದೇವರ ಕುಮಾರನಾಗಿ ಭೂಮಿಮೇಲೆ ಹುಟ್ಟಬೇಕಾಗಿ ಬರುತ್ತಿದೆ. ಆದರೇ ಆಟ ನಿಯಮಗಳ ಪ್ರಕಾರ ತಾನು ದೇವರ ಕುಮಾರನೆಂದು ಮನುಷ್ಯರಿಗೆ ತಿಳಿಯಬಾರದು. ತಿಳಿಯದೇ ತಾನು ಮನುಷ್ಯನ ಹಾಗೆ ಪರಮಾತ್ಮನನ್ನು (ಯೆಹೋವಾ) ಕುರಿತು ತಾನೇ ಹೇಳಬೇಕಾಗಿ ಬರುತ್ತಿದೆ. ತನ್ನ ವಿಷಯ ತಾನೇ ಹೇಳುತ್ತಿದ್ದರೂ, ತನ್ನ ಧರ್ಮಗಳನ್ನು ಪುನರುದ್ಧರಿಸುತ್ತಿದ್ದರೂ, ಸಾತಾನ್ (ಮಾಯೆ) ತಾನು ಕೂಡಾ ತನ್ನ ವ್ಯೂಹದ ಪ್ರಕಾರ ಬಂದು ದೇವರ ಕುಮಾರನನ್ನು ಮನುಷ್ಯರಲ್ಲಿ ಅಧಮನನ್ನಾಗಿ, ಅಜ್ಞಾನಿಯನ್ನಾಗಿ ತೋರಿಸುತ್ತಿದೆ. ಆತನ ಮಾತುಗಳು ಅಧರ್ಮಗಳೆಂದೂ, ತಮ್ಮವೇ ನಿಜವಾದ ಧರ್ಮಗಳೆಂದು ಬೋಧಿಸುವಂತೆ ಗುರುಗಳನ್ನೆ (ಕೈಪಾದಂತವರನ್ನು) ತಯಾರಿ ಮಾಡಿಟ್ಟಿದೆ. ಮಾಯೆಯೇ ಸ್ವತಃವಾಗಿ ಗುರುಗಳು, ಸ್ವಾಮಿಗಳ ರೂಪದಲ್ಲಿ ದೇವರ ಕುಮಾರನಿಗೆ ಪೋಟಿಯಾಗಿ ಬರುತ್ತಿದೆ. ತನ್ನ ಸಿಹಿಯಾದ ಮಾತುಗಳನ್ನು ದೈವಜ್ಞಾನವಾಗಿ ವರ್ಣಿಸಿ, ದೇವರ ಜ್ಞಾನವನ್ನು ನಂಬದ ಹಾಗೆ, ತಾನು ಹೇಳುವ ಜ್ಞಾನವನ್ನೇ ನಂಬುವಂತೆ ಮಾಡುತ್ತಿದೆ. ಯಾವುವು ದೇವರ ಧರ್ಮಗಳೋ ತಿಳಿಯದ ಹಾಗೆ ತಾನು ಕೂಡಾ ಪರಮಾತ್ಮ, ಮೋಕ್ಷ, ಜ್ಞಾನ, ಸಾಧನೆ ಎಂಬ ಪದಗಳನ್ನು ಉಪಯೋಗಿಸಿ ಹೇಳುತ್ತಲೇ ತನ್ನ ಅಧರ್ಮಗಳನ್ನು ಮಾನವರಿಗೆ ಅಂಟಿಸುತ್ತಿದೆ. ಸಾತಾನ್ ಒಂದರ ಅಧರ್ಮಗಳ ಮುಂದೆ ದೇವರ ಧರ್ಮಗಳಿಗೆ ಯಾವ ಗುರುತು ಇಲ್ಲದಂತೆ ಮಾಡುತ್ತಿದೆ.

ದೇವರ ಕಡೆ ಹೋಗಬೇಕೆಂದುಕೊಂಡವನಿಗೆ ಯಾವುವು ಧರ್ಮಗಳೋ, ಯಾವುವು ಅಧರ್ಮಗಳೋ ತಿಳಿಯದ ಹಾಗೆ ಮಾಡಿ, ಯಾರು ಏನು ಹೇಳಿದರೂ ನಂಬುವಂತೆ ಮಾಡುತ್ತಿದೆ. “ಮಾಯೆ (ಸಾತಾನ್), ದೇವರು ಇಬ್ಬರಲ್ಲಿ ಯಾರು ಅವತರಿಸಿದರೂ ಅವರ ಇರುವಿಕೆಯನ್ನು ಹೇಳಿಕೊಳ್ಳಬಾರದು”

ಎನ್ನುವುದು ಆಟದ ನಿಯಮ. ಪರಮಾತ್ಮ ಭೂಮಿ ಮೇಲೆ ಭಗವಂತನಾಗಿ ಅವತರಿಸಿ, ತಾನು ಪರಮಾತ್ಮನೆಂದು ಹೇಳಿಕೊಳ್ಳಬಾರದು. ನಿಯಮದ ಪ್ರಕಾರ ಪ್ರಕೃತಿ ಕೂಡಾ ಭೂಮಿ ಮೇಲೆ ಜನ್ಮಿಸಿ ತಾನು ಮಾಯೆ ಎಂದು ಹೇಳಿ ಕೊಳ್ಳುವುದಿಲ್ಲ. ಮಾಯೆ ಅವತರಿಸಿದರೂ ನಾನು ಭಗವಂತನೆಂದು ಹೇಳಿಕೊಳ್ಳ ಬಹುದು, ಆ ಸೂತ್ರದ ಪ್ರಕಾರ ಮಾನವನಿಗೆ ತಾನೇ ಭಗವಂತನೆಂದು (ದೇವರ ಕುಮಾರನೆಂದು) ತಿಳಿಸುತ್ತಾ ಎಷ್ಟೋ ಮಹಿಮೆಗಳನ್ನು ತೋರಿಸುತ್ತಾ, ಎಷ್ಟೋ ಜನ ಸ್ವಾಮೀಜಿಗಳಾಗಿ ಮಾಯೆ (ಸಾತಾನ್) ಅವತರಿಸುತ್ತಿದೆ. ಪರಮಾತ್ಮ ಭೂಮಿಮೇಲೆ ಒಂದು ಕಡೆ ಭಗವಂತನಾಗಿ ಅವತರಿಸಿದರೇ, ಪ್ರಕೃತಿ ಭೂಮಿ ಮೇಲೆ ಎಷ್ಟೋ ಜನರನ್ನು ಭಗವಂತ ಎನ್ನುವ ಹೆಸರಿನಿಂದ ತಯಾರಿ ಮಾಡುತ್ತಿದೆ. ತನ್ನ ಧರ್ಮಗಳನ್ನು ತಿಳಿಸುವುದಕ್ಕೆ ಪರಮಾತ್ಮ ಒಂದು ಕಡೆ ಹುಟ್ಟಿ ತಾನು ಭಗವಂತನೆಂಬ ಯಾವ ಗುರುತು ಇಲ್ಲದೇ ಇದ್ದರೇ, ಮಾಯೆ ಮಾತ್ರ ಆತನ ಜನ್ಮಕ್ಕು ಮೊದಲಿನಿಂದಲೇ ಎಷ್ಟೋ ಜನರನ್ನು ಭಗವಂತನೆಂಬ ಹೆಸರು ಇರುವವ ರನ್ನು ತಯಾರಿ ಮಾಡಿ, ಅವರ ಮಾತುಗಳನ್ನೇ ಕೇಳುವಂತೆ ನಿಜವಾದ ಭಗವಂತನು ಹೇಳಿರುವ ಮಾತುಗಳನ್ನು ಕೂಡಾ ಕೇಳದಂತೆ ಮಾಡುತ್ತಿದೆ. ಯಾರ ಪ್ರಯತ್ನ ಅವರದೆನ್ನುವಂತೆ ಮಾಯೆ ಕೆಲಸ ಮಾಯೆ, ದೇವರ ಕೆಲಸ ದೇವರು ಮಾಡಿಕೊಳ್ಳುತ್ತಾ ಹೋಗುತ್ತಿದ್ದಾರೆ.

ಮಾಯೆ ಯಾವಾಗಲೂ ಗುಣಗಳ ರೂಪದಲ್ಲಿ ಮನುಷ್ಯನ ಶರೀರದಲ್ಲಿ ಇರುವಾಗ, ದೇವರು ಕೂಡಾ ಆತ್ಮ ರೂಪವಾಗಿ ಇದ್ದಾನೆ. ಮಾಯೆ, ಪರಮಾತ್ಮರು ಭೂಮಿ ಮೇಲೆ ಮನುಷ್ಯರ ರೂಪದಲ್ಲಿ ಬರುತ್ತಾರೆಂದುಕೊಂಡಿದ್ದೇವೆ ಅಲ್ಲವೇ! ಹಾಗೆ ಬರುವವರು ಯಾವ ಶರೀರಗಳು ಧರಿಸಿ ಬರುತ್ತಾರೆಂದು ತಿಳಿಯಬೇ ಕಾಗಿದೆ. ಮಾಯೆ ಭೂಮಿ ಮೇಲೆ ಪುರುಷ ಶರೀರವನ್ನು ಧರಿಸಿ ಭಗವಂತನಾಗಿ, ಹಾಗೇ ಸ್ತ್ರೀ ಶರೀರವನ್ನು ಧರಿಸಿ ಭಗವತಿಯಾಗಿ ಬರುತ್ತಿದೆ. ಪರಮಾತ್ಮ ಮಾತ್ರ ಪುರುಷ ಶರೀರವನ್ನು ಧರಿಸಿ ಬರುತ್ತಿದ್ದಾನೆ. ಪರಮಾತ್ಮ ವಾಸ್ತವವಾಗಿ

ಪುರುಷನೇ ಆದಕಾರಣ ಪುರುಷ ಶರೀರವನ್ನು ಮಾತ್ರ ಧರಿಸುತ್ತಿದ್ದಾನೆ, ಪ್ರಕೃತಿ ಸ್ತ್ರೀ ಆದಕಾರಣ ಸ್ತ್ರೀ ಶರೀರವನ್ನು ಧರಿಸುತ್ತಿದೆ. ಹಾಗೆಯೇ ತಾನು ಕೂಡಾ ಪುರುಷನೇ ಎಂದು ಭ್ರಮಿಸುವಂತೆ ಪುರುಷ ಶರೀರವು ಸಹ ಧರಿಸುತ್ತಿದೆ. ಭಗವತಿ, ಭಗವಂತರಲ್ಲಿ ಯಾರು ನಿಜವಾದ ಭಗವಂತನೋ ಅರ್ಥವಾಗದೇ ಹೋಗುತ್ತಿದೆ. ಒಟ್ಟಾರೆ ಭಗವಂತನು ಪುರುಷನಾಗಿಯೇ ಜನ್ಮಿಸುತ್ತಾನೆಂದು ತಿಳಿಯಬೇಕು. ಪರಲೋಕ ತಂದೆಯಾದ ಪರಮಾತ್ಮ ಪುರುಷಾಕಾರದಲ್ಲಿಯೇ ಏಸುವಾಗಿ ಹುಟ್ಟಿದ್ದಾನೆ. ಆತನು ಸ್ವತಃವಾಗಿ ಜನ್ಮಿಸುವವನು, ಆತನನ್ನು ಹುಟ್ಟಿಸುವವನು ಮತ್ತೊಬ್ಬನು ಇಲ್ಲ. ಆದ್ದರಿಂದ ಪುರುಷ ವೀರ್ಯದಿಂದ ಸಂಬಂಧವಿಲ್ಲದೇ ಕನ್ಯೆ ಗರ್ಭದಲ್ಲಿ ಜನ್ಮಿಸಿದ್ದಾನೆ. ಪರಮಾತ್ಮ ತನ್ನ ಅವಶ್ಯಕತೆ ಭೂಮಿ ಮೇಲೆ ಇದೆ ಎಂದಾಗ ತಾನೇ ಸ್ವತಃವಾಗಿ ಆಗಾಗ ಜನ್ಮಿಸುತ್ತಿದ್ದಾನೆ. ಹಾಗೆ ಜನ್ಮಿಸಿರುವವನೇ **ಏಸು**. ನಂತರ ಕೂಡಾ ಹುಟ್ಟಿ ಬರುತ್ತಾನೆ.

ಒಂದೇ ಪರಮಾತ್ಮ ಎಷ್ಟು ಅವತಾರಗಳಾಗಿ ಜನ್ಮಿಸಿದ್ದರೂ ಒಂದೇ ಧರ್ಮಗಳನ್ನು ತಿಳಿಸಿದ್ದಾನೆಂದು ತಿಳಿಸುವುದಕ್ಕೇ ನಾವು ಈ ಗ್ರಂಥವನ್ನು ಬರೆದಿದ್ದೇವೆ. ಬೈಬಲ್ ಹೊಸ ನಿಬಂಧನದಲ್ಲಿ ಬರೆಯಲ್ಪಟ್ಟಿರುವ ಏಸು ವಾಕ್ಯಗಳಲ್ಲಿ ಸಾರಾಂಶ ವಾದವುಗಳನ್ನು ಆಯ್ಕೆಮಾಡಿ, ಗೀತೆಗೆ ಸಮನ್ವಯಪಡಿಸಿ ಓದುವವರಿಗೆ ಅರ್ಥವಾಗುವ ಹಾಗೆ ಈ ಗ್ರಂಥವನ್ನು ಬರೆಯಲಾಗಿದೆ. ಇದನ್ನು ಓದುವುದರಿಂದ ಏಸು ಪ್ರಭುವಲ್ಲಿನ ಔನ್ನತ್ಯವನ್ನು, ಶ್ರೀ ಕೃಷ್ಣನಲ್ಲಿನ ಅಂತರಾತ್ಮವನ್ನು ತಿಳಿದು ಕೊಳ್ಳಬಲ್ಲಿರೆಂದು ಆಶಿಸುತ್ತಾ ಮುಗಿಸುತ್ತಿದ್ದೇವೆ.

ಇಂತಿ

**ತ್ರಿಮತ ಏಕೈಕ ಗುರುವು**

**ತ್ರೈತ ಸಿದ್ಧಾಂತ ಆದಿಕರ್ತ, (100) ಶತಾಧಿಕ ಗ್ರಂಥಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಮತ್ತಾಯ ಸುವಾರ್ತೆ

1) **ಮತ್ತಾಯ ಸುವಾರ್ತೆ, 3ನೇ ಅಧ್ಯಾಯ, 7ನೇ ವಚನ.**

**(7) ಸರ್ಪಸಂತಾನವೇ, ಮುಂಬರುವ ಉಗ್ರತೆಯನ್ನು ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಬುದ್ಧಿ ಹೇಳಿರುವವನು ಯಾರು?**

ಈ ವಾಕ್ಯದಲ್ಲಿ **'ಸರ್ಪ ಸಂತಾನವೇ'** ಎಂಬ ಮಾತು ಹೊಸದಾಗಿ ಕೇಳಿಸುತ್ತಿದೆ. ಇದು ಮನುಷ್ಯರನ್ನು ಉದ್ದೇಶಿಸಿ ಹೇಳಿರುವುದು. ಆದರೇ ಮನುಷ್ಯರಲ್ಲಿ ಸರ್ಪ ಸಂತಾನ ಇರುತ್ತದಾ! ಎಂದು ಅನುಮಾನ ಬಾರದೇ ಇರುವುದಿಲ್ಲ. ಆದ್ದರಿಂದ ಈ ವಾಕ್ಯವನ್ನು ಓದುವ ಪ್ರತಿಯೊಬ್ಬನಿಗು ಇದು ಪ್ರಶ್ನೆಯಾಗಿ ಇರುತ್ತದೆ. ಇನ್ನೂ ಈ ವಾಕ್ಯದಲ್ಲಿ **'ಮುಂಬರುವ ಉಗ್ರತೆ'** ಎಂದರೆ ಏನೋ ವಿವರವಾಗಿ ತಿಳಿಯಬೇಕಾಗಿದೆ. ಅಷ್ಟೇ ಅಲ್ಲದೇ **'ಮನುಷ್ಯರಿಗೆ ಬುದ್ಧಿ ಹೇಳಿದವನು ಯಾರು?'** ಎಂಬ ಮಾತು ಕೂಡಾ ಇದೆ. ಇದು ಕಳೆದು ಹೋಗಿರುವ ಕಾಲವನ್ನು ಸೂಚಿಸುತ್ತಿದೆ. ಆದ್ದರಿಂದ ಗತದಲ್ಲಿ ಮನುಷ್ಯರಿಗೆ ಬುದ್ಧಿ ಹೇಳಿರುವ ವನು ಯಾರು? ಎನ್ನುವ ವಿಷಯವು ಕೂಡಾ ತಿಳಿಯಬೇಕಾಗಿದೆ. ಒಟ್ಟಾರೆ ಈ ವಾಕ್ಯದಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರ ತಿಳಿಯಬೇಕಾಗಿದೆ.

ಹಾವಿಗೆ ವಿರೋಧಿ ಪಕ್ಷಿ, ಪಕ್ಷಿ ಹಾವನ್ನು ಕೊಂದು ಇಲ್ಲದಂತೆ ಮಾಡಬಲ್ಲದು. ಆದರೇ ಹಾವು ಮೊದಲು ಬುಸಗುಟ್ಟಿ ಪಕ್ಷಿಯನ್ನು ಭಯ ಪಡಿಸಬಹುದು. ಆದರೂ ಪಕ್ಷಿ ಭಯಪಡುವುದಿಲ್ಲ. ಪಕ್ಷಿ ಹಾವನ್ನೇ ಆಹಾರವಾಗಿ ತಿನ್ನಬಲ್ಲದು. ಇದು ಎಲ್ಲರಿಗೂ ತಿಳಿದಿರುವ ಸತ್ಯ. ಹಾವನ್ನು, ಪಕ್ಷಿಯನ್ನು ಆಧ್ಯಾತ್ಮಿಕ ವಿದ್ಯೆಯೊಂದಿಗೆ ಹೋಲಿಸಿ ಹೇಳಿಕೊಳ್ಳುವುದು ನಡೆಯುತ್ತಿದೆ. ಪಕ್ಷಿಗಳಲ್ಲಿ

ಪಾರಿವಾಳವನ್ನು ಆತ್ಮವಾಗಿ, ಹಾವುಗಳಲ್ಲಿ ಹೆಬ್ಬಾವನ್ನು ಮಾಯೆಗೆ ಹೋಲಿಸಿ ಹೇಳುವುದು ನಡೆಯುತ್ತಿದೆ. ಮೇಲಿನ ವಾಕ್ಯದಲ್ಲಿ ಸರ್ಪ ಎಂದರೇ ಹೆಬ್ಬಾವು ಮಹಾ ಸರ್ಪ (ದೊಡ್ಡ ಶಿಲುಬೆ) ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ವಾಕ್ಯದಲ್ಲಿ ಪಕ್ಷಿಯನ್ನು ಹೇಳಲಿಲ್ಲ ಆದರೇ, ಹಾವನ್ನು ಮಾತ್ರ ಹೇಳುವುದು ನಡೆದಿದೆ. ಸರ್ಪವನ್ನು ಮಾಯೆಗೆ ಹೋಲಿಸಿದಾಗ **'ಸರ್ಪಸಂತಾನವೇ'** ಎಂಬ ಮಾತನ್ನು ಅನುಸರಿಸಿ **'ಮಾಯೆ ಸಂತಾನವೇ'** ಎಂದು ಹೇಳಬಹುದು. ಅದನ್ನು ಇನ್ನು ವಿವರವಾಗಿ ಹೇಳಿಕೊಂಡರೇ 'ಮಾಯೆದಿಂದ ಕೂಡಿರುವ ಮನುಷ್ಯರೇ' ಎಂಬ ಮಾತನ್ನು **'ಸರ್ಪ ಸಂತಾನವಾ ಯೆಂದು'** ಹೇಳಿದ್ದಾರೆ ಎಂದು ತಿಳಿಯುತ್ತಿದೆ.

ಮಾಯೆ ಎಂದರೇ **ಗುಣಗಳ ಸಮೂಹ** ಎಂದು ತಿಳಿಯುತ್ತಿದೆ. ಯಾವಾಗಲೂ ಗುಣಗಳ ಚಿಂತೆ ಹೊಂದಿರುವವರನ್ನು, ದೇವರ ಚಿಂತೆ ಸ್ವಲ್ಪವೂ ಇಲ್ಲದವರನ್ನು ಸರ್ಪಸಂತಾನವಾ ಎಂದು ಸಂಬೋಧಿಸುವುದು ನಡೆದಿದೆ. ಮಾಯೆದಿಂದ ಕೂಡಿರುವ ಮನುಷ್ಯರಿಗೆ ಮುಂಬರುವ ಉಗ್ರತೆ ಇದೆಯೆಂದು ತಿಳಿಯುತ್ತಿದೆ. **ಉಗ್ರತೆ ಎಂದರೇ ಭಯಂಕರವಾದುದು ಎಂದು, ಭರಿಸಲು ಕಷ್ಟವಾದುದೆಂದೂ ಹೇಳಬಹುದು.** ಇಲ್ಲದ್ದು ಮುಂಬರುವುದು ಆದ್ದರಿಂದ ಮುಂಬರುವ ಉಗ್ರತೆ ಎಂದು ಹೇಳಿದ್ದಾರೆ. ಮನುಷ್ಯನಿಗೆ ಮೊದಲು ಇಲ್ಲದಿರುವುದು, ಮಾಯೆದಿಂದ (ಗುಣಗಳಿಂದ) ಮುಂಬರುವುದು ಯಾವುದೆಂದು ನೋಡಿದಂತಾದರೇ ಎಲ್ಲಾ ವಿಧಗಳಲ್ಲಿ ಪಾಪಪುಣ್ಯ ಕರ್ಮವೆಂದು ತಿಳಿಯುತ್ತಿದೆ. ಪಾಪವೆಂಬ ಕರ್ಮವನ್ನು ಅನುಭವಿಸುವುದಕ್ಕೆ ಭಯಂಕರವಾಗಿ ಇರುತ್ತದೆ. ಆದ್ದರಿಂದ ಮನುಷ್ಯನಿಗೆ ಜೀವನದಲ್ಲಿ **ಮುಂಬರುವ ಕರ್ಮವನ್ನು ಮುಂಬರುವ ಉಗ್ರತೆ** ಎಂದು ಹೇಳಿದ್ದಾರೆ. ಕರ್ಮ ಎನ್ನುವುದು ಹುಟ್ಟಿರುವ ಪ್ರತೀ ಮನುಷ್ಯನಿಗೂ ಬರುವುದೇ ಆದ್ದರಿಂದ ಮನುಷ್ಯರನ್ನು ಎಚ್ಚರಿಸುತ್ತಾ **'ಸರ್ಪ ಸಂತಾನವೇ, ಮುಂಬರುವ ಉಗ್ರತೆಯನ್ನು ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಬುದ್ಧಿ ಹೇಳಿರುವ ವನ್ಯಾರು?'** ಎಂದು ಹೇಳಿದ್ದಾರೆ.

ನಿಮಗೆ ಬುದ್ಧಿ ಹೇಳಿರುವವನು ಯಾರು? ಎಂದು ಹೇಳಿದಾಗ ಗತದಲ್ಲಿ ಮನುಷ್ಯರಿಗೆ ಕರ್ಮದಿಂದ ತಪ್ಪಿಸಿಕೊಳ್ಳುವುದಕ್ಕೆ ತಕ್ಕ ಬುದ್ಧಿಯನ್ನು ಜ್ಞಾನರೂಪದಲ್ಲಿ ಯಾರೋ ಹೇಳಿದ್ದಾರೆಂದು ತಿಳಿಯುತ್ತಿದೆ. ಮುಂಬರುವ ಕರ್ಮಗಳಿಂದ ಹೊರಬೀಳುವುದಕ್ಕೆ ಗತದಲ್ಲಿ ಯಾವುದೋ ಉಪಾಯವನ್ನು ಹೇಳಿದವನಿದ್ದಾನೆಂದು ಈ ವಾಕ್ಯದಿಂದ ತಿಳಿಯುತ್ತಿದೆ. ಆದ್ದರಿಂದ ಹಾಗೆ ಹೇಳಿರುವವನು ಯಾರೋ ಮನುಷ್ಯರು ತಪ್ಪದೇ ತಿಳಿಯಬೇಕಾಗಿದೆ. ಗತದಲ್ಲಿ ಮುಂಬರುವ ಉಗ್ರತೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಯಾರು ಬುದ್ಧಿ ಹೇಳಿದ್ದಾನೋ, ಅವನು ಎಂಥವನೋ, ಅವನು ಏನು ಹೇಳಿದ್ದಾನೋ, ಯಾವಾಗ ಹೇಳಿದ್ದಾನೋ ನಾವು ತಿಳಿಯಬೇಕಾದ ಅವಶ್ಯಕತೆ ಇದೆ. ಗತದಲ್ಲಿ ನಡೆದು ಹೋಗಿರುವ ವಿಷಯವನ್ನು ತಿಳಿಯುವುದು ಕಷ್ಟವೇ ಆದರೂ ಈ ವಿಷಯವು ತಿಳಿಯದೆ ಹೋದರೇ, ನಾಲ್ಕು ಸುವಾರ್ತೆಗಳಲ್ಲಿ ಮೊದಲ ಅಧ್ಯಾಯದಲ್ಲಿ ಮೊದಲು ಬಂದಿರುವ ಪ್ರಶ್ನೆಗೆ ಉತ್ತರ ತಿಳಿಯದೆ ಹೋದರೇ, ಮೊದಲಿಗೇ ದ್ವಿತೀಯ ದೈವಗ್ರಂಥದಲ್ಲಿನ ವಿಷಯವು ಅರ್ಥವಾಗದೇ ಹೋಗುವುದರಿಂದ ನಂತರ ತಿಳಿಯಬೇಕಾಗಿರುವ ವಾಕ್ಯಗಳಿಗೆ ವಿವರ ತಿಳಿಯದೇ ಹೋಗುತ್ತದೆ. ಆದ್ದರಿಂದ ಮೊದಲ ಪ್ರಶ್ನೆಯಾಗಿ ಬಂದಿರುವ ವಾಕ್ಯಕ್ಕೆ ತಪ್ಪದೇ ವಿವರ ತಿಳಿಯಬೇಕಾಗಿದೆ. ಇದನ್ನು ಕುರಿತಾದ ಸತ್ಯ ತಿಳಿಯುವುದಕ್ಕೆ ಮೊದಲು ಈ ದ್ವಿತೀಯ ದೈವಗ್ರಂಥವೊಂದರ ವಿಶಿಷ್ಠತೆಯನ್ನು ತಿಳಿದುಕೊಳ್ಳೋಣ.

ದೇವರು ಹೇಳಿರುವ ಜ್ಞಾನವು ಒಂದು ಬಾರಿ ಐದುಸಾವಿರ ವರ್ಷಗಳಿಗೂ ಮೊದಲೇ ಗ್ರಂಥರೂಪವಾಗಿ ತಯಾರಾಗಿದೆ. ಅದು 'ಮಹಾಭಾರತ' ಎಂಬ ಗ್ರಂಥದಲ್ಲಿರುವ 18 ಪರ್ವಗಳ ಗ್ರಂಥದ ಮಧ್ಯದಲ್ಲಿ ಸ್ವಲ್ಪಭಾಗವಾಗಿ ಬರೆಯಲಾಗಿರುವ 18 ಅಧ್ಯಾಯಗಳ ಗ್ರಂಥವಾಗಿ ಇದೆ. ಆ ಹದಿನೆಂಟು ಅಧ್ಯಾಯಗಳನ್ನು ಪ್ರಥಮ ದೈವಗ್ರಂಥವಾಗಿ ಹೇಳುತ್ತಿದ್ದೇವೆ. ಸೃಷ್ಠಿ ಆದಿಯಲ್ಲಿ ದೇವರು **'ಆಕಾಶವಾಣಿ'** ಮೂಲಕ ಜ್ಞಾನವನ್ನು ಹೇಳಿದ್ದಾನೆ. ಆಗ ಆ ಜ್ಞಾನವನ್ನು **ಜಪರ** ಜ್ಞಾನವೆಂದು ಹೇಳಿದ್ದಾರೆ. **"ಪರ"** ಎಂದರೇ ಬೇರೆಯಾಗಿರುವುದು

ಎಂದು ಅರ್ಥವಾದಾಗ **"ಜ"** ಎಂದರೇ ಜನ್ಮಿಸಿರುವುದೆಂದು ಅರ್ಥ. ಜನ್ಮಿಸಿರುವುದಕ್ಕಿಂತಲೂ ಬೇರೆಯಾಗಿರುವುದೆಂದು ಜಪರ ಒಂದರ ಅರ್ಥ. ಜನನ ಇಲ್ಲದಿರುವುದು ದೇವರೇ ಆದ್ದರಿಂದ ದೇವರ ಜ್ಞಾನವನ್ನು ಜಪರ ಜ್ಞಾನವೆಂದು ಹೇಳಿದ್ದಾರೆ. ಜಪರ ಜ್ಞಾನವು ಮೊದಲು ಪ್ರಥಮ ದೈವಗ್ರಂಥವಾಗಿ ತಯಾರಾದಾಗ, ನಂತರ ಮೂರು ಸಾವಿರ ವರ್ಷಗಳಿಗೆ ಅಂದರೇ ಇಂದಿಗೆ ಎರಡು ಸಾವಿರ ವರ್ಷಗಳ ಪೂರ್ವವು ದ್ವಿತೀಯ ದೈವ ಗ್ರಂಥವಾಗಿ ಬರೆಯಲ್ಪಟ್ಟಿದೆ. ಅದೇ ಜ್ಞಾನವೇ 1400 ವರ್ಷಗಳ ಪೂರ್ವವು ಮೂರನೆಯ ದೈವಗ್ರಂಥವಾಗಿ ಕೂಡಾ ಬರೆಯಲ್ಪಟ್ಟಿದೆ. ದ್ವಿತೀಯ ದೈವಗ್ರಂಥವಾಗಿ ಬರೆಯಲಾಗಿರುವುದನ್ನೇ ನಾವು ಈಗ ಹೇಳಿಕೊಳ್ಳುತ್ತಿದ್ದೇವೆ. ಅದರಲ್ಲಿನ ವಾಕ್ಯವನ್ನೇ ಈಗ ಬರೆಯುತ್ತಿದ್ದೇವೆ.

ನಿಮಗೆ ಬುದ್ಧಿ ಹೇಳಿರುವವನು ಯಾರು? ಎಂದಾಗ ಗತದಲ್ಲಿ ಜ್ಞಾನವನ್ನು ಹೇಳಿರುವವನನ್ನೇ ಹೇಳಿಕೊಳ್ಳಬೇಕು. ಇದರ ಪ್ರಕಾರ ಪ್ರಥಮ ದೈವಗ್ರಂಥದಲ್ಲಿ ಜ್ಞಾನ ಹೇಳಿರುವವನು ಯಾರೋ ಅವನೇ ಮೊದಲು ಬುದ್ಧಿ ಹೇಳಿರುವವನೆಂದು ಹೇಳಬಹುದು. ಗತದಲ್ಲಿ ಹೇಳಿರುವವನೊಂದಿಗೆ ನಮಗೇನು ಕೆಲಸ? ಎಂದು ಪ್ರಶ್ನಿಸಿಕೊಂಡರೇ ಪ್ರಪಂಚದಲ್ಲಿ ದೇವರ ಜ್ಞಾನವನ್ನು ದೇವರೇ ಹೇಳಬೇಕು ಆದ್ದರಿಂದ ಯಾವಾಗ ಹೇಳಿದರೂ ಎಲ್ಲಿ ಹೇಳಿದರೂ ಒಬ್ಬ ದೇವರೇ ಹೇಳಬೇಕು. ಆದ್ದರಿಂದ ಮೊದಲು ಹೇಳಿರುವವನೇ ಈಗಲೂ ಕೂಡಾ ವಾಕ್ಯರೂಪದಲ್ಲಿ ಹೇಳುತ್ತಾನೆಂದು ತಿಳಿಯಬಹುದು. ಈಗ ದ್ವಿತೀಯ ದೈವಗ್ರಂಥದಲ್ಲಿ ಜ್ಞಾನವನ್ನು ಹೇಳಿರುವವನನ್ನು ತಿಳಿಯುವ ನಿಮಿತ್ತ ಮೊದಲು ಗತದಲ್ಲಿ ಜ್ಞಾನವನ್ನು ಹೇಳಿರುವವನನ್ನು ತಿಳಿಯಬೇಕಾಗಿದೆ. ಆದಕಾರಣ ನಿಮಗೆ ಬುದ್ಧಿ ಹೇಳಿರುವವನು ಯಾರು? ಎಂದು ಪ್ರಶ್ನೆ ಹಾಕಿ ಕೇಳಬೇಕಾಗಿ ಬಂದಿದೆ. ಗತದಲ್ಲಿ ಹೇಳಿರುವವನನ್ನು ಗುರುತಿಸಿದರೇ ಈಗ ಹೇಳುವವನನ್ನು ಗುರುತಿಸುವುದಕ್ಕೆ ಅವಕಾಶ ದೊರೆಯುತ್ತದೆ. ಪ್ರಥಮ ದೈವಗ್ರಂಥವನ್ನು ಹೇಳಿದವನೇ ದ್ವಿತೀಯ ದೈವಗ್ರಂಥವಾದುದನ್ನು ಹೇಳುತ್ತಿದ್ದಾನೆಂಬ **ನಂಬಿಕೆಯಿಂದ** ಈ ಗ್ರಂಥವನ್ನು ಓದಬೇಕೆಂದು ಮೊದಲೇ ನಾವು ತಿಳಿಸುತ್ತಿದ್ದೇವೆ.

ದ್ವಿತೀಯ ದೈವಗ್ರಂಥವನ್ನು ಓದುವುದಕ್ಕು ಮೊದಲು ಈ ಗ್ರಂಥದಲ್ಲಿ ಪ್ರಥಮ ದೈವಗ್ರಂಥವನ್ನು ಹೇಳಿರುವ ದೇವರು ಎಲ್ಲಿ ಯಾವ ವಾಕ್ಯವನ್ನು ಹೇಳಿದ್ದಾನೋ ತಿಳಿಯಬೇಕಾಗಿದೆ. ಈ ಗ್ರಂಥವು ಒಟ್ಟಾರೆ ಅರವತ್ತಾರು (66) ಭಾಗಗಳಾಗಿ ಇರುವಾಗ, ಅದರಲ್ಲಿ ಕೇವಲ ನಾಲ್ಕು ಭಾಗಗಳಲ್ಲಿ ಮಾತ್ರವೇ ದೇವರು ಹೇಳಿರುವ ವಾಕ್ಯಗಳಿರುವಾಗ, ಉಳಿದ (62) ಭಾಗಗಳಲ್ಲಿ ಇತರ ಜ್ಞಾನಿಗಳು ಹೇಳಿರುವ ವಾಕ್ಯಗಳಿವೆ. ದೇವರು ಮನುಷ್ಯನಾಗಿ ಅವತರಿಸಿದಾಗ ಪ್ರತ್ಯಕ್ಷವಾಗಿ ಹೇಳಿರುವ ವಾಕ್ಯಗಳು ನಾಲ್ಕು ಭಾಗಗಳಲ್ಲಿ ಇವೆ. ನಾಲ್ಕು ಭಾಗಗಳ ಹೆಸರುಗಳು 1) ಮತ್ತಾಯ, 2) ಮಾರ್ಕು, 3) ಲೂಕಾ, 4) ಯೋಹಾನ. ಈ ನಾಲ್ಕು ಭಾಗಗಳು ಗ್ರಂಥದಲ್ಲಿ ಮಧ್ಯೆ ಭಾಗದಲ್ಲಿ ಇವೆ. ಇದನ್ನು ಅನುಸರಿಸಿದರೆ ಗ್ರಂಥವನ್ನು ಮೂರು ಭಾಗಗಳಾಗಿ ವಿಂಗಡಿಸಿ ಹೇಳಬಹುದು. ಮೊದಲ 39 ಭಾಗಗಳನ್ನು ಒಂದು ಭಾಗವಾಗಿ, ನಾಲ್ಕು ಸುವಾರ್ತೆಗಳನ್ನು ಎರಡನೆಯ ಭಾಗವಾಗಿ, ಉಳಿದ ಕೊನೆಯಲ್ಲಿನ 23 ಭಾಗಗಳನ್ನು ಮೂರನೆಯ ಭಾಗವಾಗಿ ಹೇಳಬಹುದು. ಏಸುಪ್ರಭುವಿನ ಜೀವನ ಕಾಲದಲ್ಲಿ ಹೇಳಿರುವ ನಾಲ್ಕು ಭಾಗಗಳಿಗೆ ಪ್ರತ್ಯೇಕವಾಗಿ **'ಸುವಾರ್ತೆ'**ಗಳೆಂದು ಹೆಸರು ಇಟ್ಟಿರುವುದನ್ನು ಗಮನಿಸಬಹುದು.

**ಪ್ರಥಮ ಭಾಗವು 39 ಭಾಗಗಳಾಗಿ ಇದೆ.**

**ದ್ವಿತೀಯ ಭಾಗವು 4 ಸುವಾರ್ತೆಗಳಾಗಿ ಇದೆ.**

**ತೃತೀಯ ಭಾಗವು 23 ಭಾಗಗಳಾಗಿ ಇದೆ.**

ಪ್ರಥಮ ಮತ್ತು ತೃತೀಯ ಭಾಗಗಳಲ್ಲಿ ದೇವರ ಜ್ಞಾನವನ್ನೇ ಇತರೆ ಜ್ಞಾನಿಗಳು ಹೇಳಿರುವಾಗ, ಮಧ್ಯದಲ್ಲಿರುವ ನಾಲ್ಕು ಸುವಾರ್ತೆಗಳಲ್ಲಿನ ವಾಕ್ಯಗಳನ್ನು **ಪ್ರಥಮ ದೈವ ಗ್ರಂಥವನ್ನು ಹೇಳಿರುವವನೇ** ಪುನಃ ಏಸು ಅವತಾರದಲ್ಲಿ ಬಂದು ಹೇಳಿದ್ದಾನೆಂದು ತಿಳಿಯುತ್ತಿದೆ. ಆದ್ದರಿಂದ ಈ ವಿಷಯವನ್ನು ತಿಳಿಯುವುದಕ್ಕಾಗಿ ಮೇಲಿನ ವಾಕ್ಯದಲ್ಲಿ **"ಮುಂಬರುವ ಉಗ್ರತೆಯನ್ನು ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಬುದ್ಧಿ ಹೇಳಿರುವವನು ಯಾರು?"** ಎಂದು ಪ್ರಶ್ನಿಸಿ ಹೇಳಿದ್ದಾರೆ. ಆದ್ದರಿಂದ

ಎಲ್ಲದಕ್ಕಿಂತಲೂ ಮೊದಲು ಬರೆಯಲ್ಪಟ್ಟ ಈ ವಾಕ್ಯವು ಎಷ್ಟೋ ವಿಶಿಷ್ಟತೆಯನ್ನು ಹೊಂದಿದೆಯೆಂದು ಹೇಳಬಹುದು.

**2) ಮತ್ತಾಯ ಸುವಾರ್ತೆ, 3ನೇ ಅಧ್ಯಾಯ, 11ನೇ ವಚನ.**

**(11) ಮಾರುಮನಸ್ಸು ನಿಮಿತ್ತ ನಾನು ನೀರಿನಿಂದ ನಿಮಗೆ ಬಾಪ್ತಿಸ್ಮ ಕೊಡುತ್ತಿದ್ದೇನೆ. ಆದರೇ ನನ್ನ ಹಿಂದೆ ಬರುತ್ತಿರುವವನು ನನಗಿಂತಲೂ ಶಕ್ತಿವಂತನು. ಆತನ ಪಾದರಕ್ಷೆಗಳನ್ನು ಹೊರುವುದಕ್ಕೂ ನಾನು ಯೋಗ್ಯನಲ್ಲ. ಆತನು ಪರಿಶುದ್ಧಾತ್ಮದಿಂದಲೂ, ಅಗ್ನಿಯಿಂದಲೂ ನಿಮಗೆ ಬಾಪ್ತಿಸ್ಮ ಕೊಡುತ್ತಾನೆ.**

ಈ ವಾಕ್ಯದಲ್ಲಿ **"ಮಾರುಮನಸ್ಸು"** ಎಂಬ ಮಾತು, ಹಾಗೆಯೇ **"ಬಾಪ್ತಿಸ್ಮ"** ಎಂಬ ಮಾತು ಕೇಳಿಸುವುದೇ ಅಲ್ಲದೆ 'ನೀರಿನಿಂದಲೂ, ಅಗ್ನಿಯಿಂದಲೂ' ಎಂಬ ಎರಡು ಮಾತುಗಳು ಕೂಡಾ ಇವೆ. ಈ ನಾಲ್ಕು ಪದಗಳಿಗೆ ವಿವರವನ್ನು ತಿಳಿದುಕೊಂಡರೇ ಈ ವಾಕ್ಯವು ಸಂಪೂರ್ಣವಾಗಿ ಅರ್ಥವಾಗಬಲ್ಲದು. ಈ ನಾಲ್ಕು ಪದಗಳಲ್ಲಿ ಒಂದು ಪದ ಅರ್ಥವಾಗದಿದ್ದರೂ ವಾಕ್ಯದಲ್ಲಿನ ಸಾರಾಂಶವು ತಿಳಿಯದೇ ಹೋಗಬಲ್ಲದು. ಆದ್ದರಿಂದ ಈ ನಾಲ್ಕು ಪದಗಳಿಗೆ ಮೊದಲು ವಿವರವನ್ನು ತಿಳಿದುಕೊಳ್ಳೋಣ. ಮೊದಲನೆಯದು ಮಾರುಮನಸ್ಸು ಎಂದು ಇದೆ. ಮಾರುಮನಸ್ಸು ಎಂದರೇ ಇರುವ ಮನಸ್ಸಲ್ಲದೇ ಬೇರೆ ಮನಸ್ಸು ಎಂದು ಅರ್ಥ. ನಮ್ಮ ಶರೀರದಲ್ಲಿ ಮನಸ್ಸು ಎನ್ನುವುದು ಇದೆ. ಮನಸ್ಸು ಎಂದರೇ ಮನನ ಮಾಡುವುದು ಎಂದು ಅರ್ಥ. ಒಂದು ಜೀವನದಲ್ಲಿನ ವಿಷಯಗಳನ್ನು ಜ್ಞಾಪಕ ಇಟ್ಟುಕೊಳ್ಳುವುದು ಮನಸ್ಸು ಮಾತ್ರವೇ. ಮೊದಲನೆ ಮನಸ್ಸು ಬದಲಾಗಿ ಹೋದರೇ ಎರಡನೆಯ ಮನಸ್ಸು ಬಂದರೇ ಮೊದಲನೆ ಮನಸ್ಸಿಗಿರುವ ಜ್ಞಾಪಕಗಳೆಲ್ಲಾ ಅದರೊಂದಿಗೇ ಹೋಗುತ್ತವೆ. ಎರಡನೆಯ ಮನಸ್ಸಿಗೆ ಮೊದಲನೆ ಮನಸ್ಸು ಒಂದರ ಜ್ಞಾಪಕಗಳು ಒಂದು ಕೂಡಾ ಗೊತ್ತಿಲ್ಲ. ಮೊದಲನೆಯ ಮನಸ್ಸು ಮರಣದೊಂದಿಗೆ ಹೋಗುತ್ತದೆ. ಎರಡನೆಯ ಮನಸ್ಸು ಜನನದೊಂದಿಗೆ

ಬರುತ್ತದೆ. ಮೊದಲನೆ ಮನಸ್ಸು ಹೋಗಿ ಎರಡನೇ ಮನಸ್ಸು ಬರುವುದನ್ನು 'ಮಾರುಮನಸ್ಸು' ಎಂದು ಹೇಳಬಹುದು. ಮರಣದಲ್ಲಿ ಪ್ರತಿ ಒಬ್ಬರಿಗೂ ಹಳೆಯ ಮನಸ್ಸು ಹೋಗಿ ಹೊಸ ಮನಸ್ಸು ಬರುತ್ತಿದೆ. ಹಾಗೆ ಜನ್ಮ ಬದಲಾಗುವಾಗ ಮನಸ್ಸು ಬದಲಾಗುವುದು ಸಹಜವಾಗಿ ನಡೆಯುತ್ತಿರುತ್ತದೆ. ಜನ್ಮದಲ್ಲಿ 'ಮಾರು ಮನಸ್ಸು' ಹೊಂದುವುದಕ್ಕೆ ಬಾಪ್ತಿಸ್ಮ ಅವಶ್ಯಕತೆ ಇಲ್ಲ.

ಮನುಷ್ಯ ಮರಣವನ್ನೊಂದಿ ಪುನಃ ಹುಟ್ಟುವುದನ್ನು ಜನ್ಮಿಸುವುದು ಎಂದು ಅನ್ನುತ್ತೇವೆ. ಜನನದಿಂದ ಮನುಷ್ಯನ ಒಂದು ಹಳೆಯ ಶರೀರ ಹೋಗಿ ಹೊಸ ಶರೀರ ಲಭ್ಯವಾಗುತ್ತಿದೆ. ಅದರಿಂದ ನಡೆಯುವ ಭೌತಿಕ ಬದಲಾವಣೆಯನ್ನು ಜನನ ಎನ್ನುತ್ತಿದ್ದೇವೆ. ಭೌತಿಕ ಎಂದರೇ ಕಾಣಿಸುವ ಶರೀರ. ಮನುಷ್ಯನಿಗೆ ಕಾಣಿಸುವ ಶರೀರ, ಕಾಣಿಸದ ಶರೀರ ಎಂದು ಎರಡು ವಿಧಗಳ ಶರೀರಗಳಿವೆ. ಕಾಣಿಸುವ ಶರೀರವು ಹಳೆಯದು ಹೋಗಿ ಹೊಸದು ಬಂದರೇ ಜನನ ಎನ್ನುವ ಹಾಗೆ, ಕಾಣಿಸದ ಸೂಕ್ಷ್ಮ ಶರೀರವು ಹಳೆಯದು ಹೋಗಿ ಹೊಸದು ಬಂದರೇ ಅದನ್ನು **'ಬಾಪ್ತಿಸ್ಮ'** ಎಂದು ಕ್ರೈಸ್ಥರು, **'ಉಪದೇಶ'** ಎಂದು ಹಿಂದೂಗಳು (ಇಂದೂಗಳು) ಹೇಳುತ್ತಿದ್ದಾರೆ. ಈ ವಾಕ್ಯದಲ್ಲಿ ಹೇಳಿರುವಹಾಗೆ ಬಾಪ್ತಿಸ್ಮ ಎಂದರೇ ಸೂಕ್ಷ್ಮವಾಗಿರುವ ಮನಸ್ಸು ಬದಲಾಗಿ ಹೋಗುತ್ತಿದೆಯೆಂದು ಅರ್ಥ. ಜನನದಲ್ಲಿ ಹಳೆಯ ಜ್ಞಾಪಕಗಳ ಮನಸ್ಸು ಹೋಗಿ ಹೊಸ ಮನಸ್ಸು ಹೇಗೆ ಬರುತ್ತಿದೆಯೋ, ಹಾಗೆಯೇ ಜೀವನದಲ್ಲಿ ಇದ್ದ ಮನಸ್ಸು ಬದಲಾವಣೆ ಹೊಂದಿ ಅಜ್ಞಾನ ಜ್ಞಾಪಕಗಳನ್ನು ಉಂಟುಮಾಡದೇ **ಜ್ಞಾನ ಸಂಬಂಧ, ದೈವ ಸಂಬಂಧ ಜ್ಞಾಪಕಗಳನ್ನೇ** ಬಾಪ್ತಿಸ್ಮದಲ್ಲಿ ಉಂಟು ಮಾಡುತ್ತದೆ. ಬದುಕಿದ್ದಾಗಲೇ ಅಜ್ಞಾನ ಜ್ಞಾಪಕಗಳ ಮನಸ್ಸು ಹೋಗಿ **ಜ್ಞಾನಸಂಬಂಧ ಮನಸ್ಸು ಉಂಟಾಗುವುದನ್ನು** ವಾಸ್ತವವಾಗಿ **"ಬಾಪ್ತಿಸ್ಮ"** ಎಂದು ಹೇಳಬಹುದು. ಅಜ್ಞಾನ ಜೀವನವಿರುವ ಮನುಷ್ಯ ಬದುಕಿರುವಾಗಲೇ **ಗುರು** ಉಪದೇಶದಿಂದ ಮಾರುಮನಸ್ಸು ಹೊಂದುವುದನ್ನು 'ಬಾಪ್ತಿಸ್ಮ' ಎಂದು ಹೇಳಬಹುದು.

**ಮಾರುಮನಸ್ಸು = ಅಜ್ಞಾನದಿಂದ ಜ್ಞಾನದ ಕಡೆ ಹೋಗುವುದು.**

**ಬಾಪ್ತಿಸ್ಮ = ಗುರು ಉಪದೇಶವನ್ನು ಹೊಂದುವುದು.**

'ಯೋಹಾನ್' ಎಂಬ ಗುರುವು ನೀರಿನಿಂದ ಉಪದೇಶವನ್ನು ನೀಡುತ್ತಾ, "ನಾನು ನಿಮಗೆ ನೀರಿನಿಂದ ಬಾಪ್ತಿಸ್ಮ ಕೊಡುತ್ತಿದ್ದೇನೆ. ಆದರೇ ನನ್ನ ಹಿಂದೆ ಬರುತ್ತಿರುವವನು ನನಗಿಂತಲೂ ಶಕ್ತಿವಂತನು ಆತನು ಪರಿಶುದ್ಧಾತ್ಮದಿಂದಲೂ, ಅಗ್ನಿಯಿಂದಲೂ ನಿಮಗೆ ಬಾಪ್ತಿಸ್ಮ ಕೊಡುವನು" ಎಂದು ಹೇಳಿದ್ದಾನೆ. ಇದಕ್ಕು ಮೊದಲು 'ಮಾರುಮನಸ್ಸು' ಎಂದರೆ ಏನು? ಬಾಪ್ತಿಸ್ಮ ಎಂದರೆ ಏನು ಎಂದು ವಿವರವಾಗಿ ತಿಳಿದುಕೊಂಡಿದ್ದೇವೆ. ಈಗ 'ನೀರು' ಎಂದರೆ ಏನು? ನೀರಿಗೆ ವಿರುದ್ಧವಾದ 'ಅಗ್ನಿ' ಎಂದರೇ ಏನು? ಎಂದು ತಿಳಿಯಬೇಕಾಗಿದೆ. ಬಾಪ್ತಿಸ್ಮ ಗುರುವಿನಿಂದ ಪಡೆಯುತ್ತಿದ್ದೇವೆ. ಆದರೇ ಗುರುಗಳು ಎರಡು ವಿಧದವರು ಇದ್ದಾರೆ. ಜ್ಞಾನಶಕ್ತಿ ಎಂಬ ಅಗ್ನಿ ಇರುವವರು ಕೆಲವರು. ಜ್ಞಾನಶಕ್ತಿ ಇಲ್ಲದ ಗುರುಗಳು ಕೆಲವರು ಇದ್ದಾರೆ. ಸಾಧಾರಣವಾಗಿ ಬಾಪ್ತಿಸ್ಮ ಕಾರ್ಯಕ್ರಮದಲ್ಲಿ ಅಂದರೇ ಗುರು ಉಪದೇಶ ಕಾರ್ಯದಲ್ಲಿ ಬಹಳ ಜನ ಗುರುಗಳು ನೀರಿನಿಂದಲೂ, ಕೆಲವರು ಹಾಲಿನಿಂದಲೂ ಉಪದೇಶ ನೀಡುತ್ತಿರುತ್ತಾರೆ. ನೀರು, ಹಾಲು ಎರಡೂ ಕಾಣಿಸುವ ದ್ರವ ಪದಾರ್ಥಗಳೇ. ಇನ್ನೂ ಕೆಲವರು ವಿಭೂತಿಯಿಂದಲೂ, ಇನ್ನೂ ಕೆಲವರು ಹೊಗೆ ಬರುವ ಧೂಪದಿಂದಲೂ ಉಪದೇಶ ಕೊಡುತ್ತಿರುತ್ತಾರೆ. ಹಾಗೆ ಒಂದು ಬಾರಿ ಗುರು ಹತ್ತಿರ ಯಾವುದೋ ಒಂದು ವಿಧಾನದಿಂದ ಮಂತ್ರವನ್ನೋ, ವಾಕ್ಯವನ್ನೋ, ದೃಶ್ಯವನ್ನೋ ಹೊಂದುತ್ತಿರುತ್ತಾರೆ. ಈ ವಿಧವಾಗಿ ಪಡೆಯುವ ಉಪದೇಶಗಳು ಅನೇಕವು ಇವೆ, ಹಾಗೇ ನೀಡುವವರು ಅನೇಕ ಗುರುಗಳು ಇದ್ದಾರೆ. ಅವರಲ್ಲಿ ಯೋಹಾನ್ ಒಬ್ಬನು ಆಗಿರುವಾಗ ಆತನು ತನ್ನ ವಿಧಾನವನ್ನು ಒಪ್ಪಿಕೊಳ್ಳುತ್ತಾ "ನಾನು ನೀರಿನಿಂದ ಬಾಪ್ತಿಸ್ಮ ಕೊಡುವವನು" ಎಂದು ಹೇಳಿದ್ದಾನೆ. ಆದರೇ ನನ್ನ ಹಿಂದೆ ಬರುವವನು "ಪರಿಶುದ್ಧಾತ್ಮದಿಂದಲೂ, ಅಗ್ನಿಯಿಂದಲೂ ಬಾಪ್ತಿಸ್ಮ ನೀಡುವವನು" ಎಂದು ಹೇಳಿದ್ದಾನೆ. ಬಾಪ್ತಿಸ್ಮ ಎಂದರೇ ಮಾರುಮನಸ್ಸು

ಹೊಂದುವ ಮಾರ್ಗವೆಂದು ಹೇಳಿಕೊಂಡಿದ್ದೇವೆ. ಬಾಪ್ತಿಸ್ಮದಿಂದ ಅಜ್ಞಾನದಿಂದ ಜ್ಞಾನದೊಳಗೆ ಬದಲಾಗಿ ಹೋದರೇ ಅದರಿಂದ ಮನುಷ್ಯನಲ್ಲಿನ ಪಾಪಕರ್ಮಗಳು ಎಲ್ಲವೂ ಸುಟ್ಟುಹೋಗುವವು. ಹಾಗೆ ಪಾಪಗಳು ಸುಟ್ಟುಹೋಗುವುದಕ್ಕೆ ತಕ್ಕ ಅಗ್ನಿಯನ್ನು ಗುರುವು ತನ್ನ ಬಾಪ್ತಿಸ್ಮ ಮೂಲಕ ನೀಡುತ್ತಾನೆ. ಗುರುವು ದೈವತ್ವವೆನ್ನುವ ಅಗ್ನಿ ಹೊಂದಿರಬೇಕು. **"ಅಗ್ನಿ ಇಲ್ಲದವನು, ಕೆಲಸಗಳು ಬಿಟ್ಟು ಹಾಕಿರುವವನು ಯೋಗಿ (ಗುರು) ಅಲ್ಲ"** ಎಂದು ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಆತ್ಮ ಸಂಯಮ ಯೋಗವೆಂಬ ಅಧ್ಯಾಯದಲ್ಲಿ ಮೊದಲ ಶ್ಲೋಕದಲ್ಲಿ **"ಸ ಯೋಗೀಚ ನನಿ ರಗ್ನಿ ನಚಾಕ್ರಿಯಃ"** ಎಂದು ಹೇಳಿದ್ದಾರೆ.

ನಿಜವಾದ ಯೋಗಿ ಆದವನು ಅಂದರೇ ನಿಜವಾದ ಗುರು ಆದವನು ಕೆಲಸಗಳನ್ನು ಮಾಡದೇ ಇರುವುದಿಲ್ಲ. ಹಾಗೆಯೇ ಅಗ್ನಿ ಇಲ್ಲದೇ ಇರುವುದಿಲ್ಲ ಎಂದು ಹೇಳಿದ್ದಾರೆ. ಅಗ್ನಿ ಎಂದರೇ **ಜ್ಞಾನಾಗ್ನಿ** ಎಂದು ಅರ್ಥ. ಇಲ್ಲಿ ಮೇಲಿನ ವಾಕ್ಯದಲ್ಲಿ ಕೂಡಾ **"ಅಗ್ನಿಯಿಂದ ಬಾಪ್ತಿಸ್ಮ"** ಎಂದು ಹೇಳಿದ್ದಾರೆ. ಇಲ್ಲಿ ಕೂಡಾ ಅಗ್ನಿ ಎಂದರೇ **ದೈವಶಕ್ತಿ**ಯಿಂದ ಕೂಡಿಕೊಂಡ ಅಗ್ನಿ ಎಂದು ತಿಳಿಯಬೇಕು. ಆದ್ದರಿಂದ ವಾಕ್ಯದಲ್ಲಿ ಪರಿಶುದ್ಧಾತ್ಮದೊಂದಿಗೆ ಕೂಡಿರುವ ಅಗ್ನಿ ಎಂದಹಾಗೆ **"ಪರಿಶುದ್ಧಾತ್ಮದಿಂದಲೂ ಅಗ್ನಿಯಿಂದಲೂ ನಿಮಗೆ ಬಾಪ್ತಿಸ್ಮ ಕೊಡುತ್ತಾನೆ"** ಎಂದು ಹೇಳಿದ್ದಾರೆ. ದೈವಸಂಬಂಧವಾದ ಅಗ್ನಿ ಕಣ್ಣಿಗೆ ಕಾಣಿಸುವುದಿಲ್ಲ. ಆದರೇ ಗುರು ಮೂಲಕ ಅಂತಹ ಅಗ್ನಿಯನ್ನು ಹೊಂದುವುದರಿಂದ ಕರ್ಮಗಳು ಸುಟ್ಟುಹೋಗುವ ಶಕ್ತಿ ಮನುಷ್ಯನಲ್ಲಿ ಏರ್ಪಡುತ್ತದೆ. ಅಂದರೇ ಜ್ಞಾನವೆಂಬ ಅಗ್ನಿ ಬಾಪ್ತಿಸ್ಮ ಹೊಂದಿದವನಲ್ಲಿ ಸೇರಿ ಅವನ ಕರ್ಮಗಳನ್ನು ಸುಟ್ಟು ಹಾಕುವುದಕ್ಕೆ ಪ್ರಾರಂಭಿಸುತ್ತದೆ. ಯೋಹಾನ್ ಎನ್ನುವ ಗುರು ಮನುಷ್ಯರು ಮಾರುಮನಸ್ಸು ಹೊಂದುವ ನಿಮಿತ್ತ ಬಾಪ್ತಿಸ್ಮ ಕೊಟ್ಟರೂ ಅದರಲ್ಲಿ ಕರ್ಮಗಳನ್ನು ಸುಡುವ ಶಕ್ತಿಯಾದ **ಜ್ಞಾನಾಗ್ನಿ ಇಲ್ಲ** ಆದ್ದರಿಂದ ನಾನು **ನೀರಿನಿಂದ ಬಾಪ್ತಿಸ್ಮ** ಕೊಡುವವನು ಮಾತ್ರವೇ ಎಂದು ಹೇಳಿದ್ದಾನೆ. "ನನ್ನ ಬಾಪ್ತಿಸ್ಮದಿಂದ ನಿಮ್ಮ ಕರ್ಮಗಳು ಕ್ಷಮಿಸಲ್ಪಡುವುದಿಲ್ಲ, ಸ್ವಲ್ಪವೂ ಸುಟ್ಟು ಹೋಗುವುದಿಲ್ಲ ನನ್ನ ನಂತರ ಬರುವವನು

ಕೊಡುವ ಬಾಪ್ತಿಸ್ಮದಿಂದ ನಿಮ್ಮ ಕರ್ಮಗಳು ಸುಟ್ಟುಹೋಗುವವು" ಎಂದು ಯೋಹಾನ್ ಅಲ್ಲಿನ ಪ್ರಜೆಗಳಿಗೆ ಹೇಳಿದನು.

**ನೀರಿನಿಂದ ಬಾಪ್ತಿಸ್ಮ = ಕರ್ಮಗಳು ಸುಟ್ಟುಹೋಗದ ಉಪದೇಶ**

**ಅಗ್ನಿಯಿಂದ ಬಾಪ್ತಿಸ್ಮ = ಕರ್ಮಗಳು ಸುಟ್ಟುಹೋಗುವ ಉಪದೇಶ**

**3) ಮತ್ತಾಯ ಸುವಾರ್ತೆ, 3ನೇ ಅಧ್ಯಾಯ, 12ನೇ ವಚನ.**

**(12) ಆತನ ಮೊರ ಆತನ ಕೈಯಲ್ಲಿದೆ. ಆತನು ತನ್ನ ಕಣವನ್ನು ಚೆನ್ನಾಗಿ ಶುಭ್ರಗೊಳಿಸಿ ಗೋಧಿಯನ್ನು ಉಗ್ರಾಣದಲ್ಲಿ ಸುರಿದು, ಆರದ ಅಗ್ನಿಯಿಂದ ಹೊಟ್ಟನ್ನು ಸುಟ್ಟು ಹಾಕುತ್ತಾನೆಂದು ಅವರೊಂದಿಗೆ ಹೇಳಿದ್ದಾನೆ.**

ಈ ಮಾತು ಯೋಹಾನ್ ಎಂಬ ಒಬ್ಬ ಗುರು ಹೇಳಿರುವುದು. ಆ ಕಾಲದಲ್ಲಿ ಜನರಿಗೆ ಉಪದೇಶ (ಬಾಪ್ತಿಸ್ಮ) ಕೊಡುವ ಗುರು ಯೋಹಾನ್. ಅಂದಿನ ಕಾಲದಲ್ಲಿ ದೊಡ್ಡ ಜ್ಞಾನಿಯಾದ ಯೋಹಾನ್ ಏಸು ಬರುವಿಕೆಯನ್ನು ಕುರಿತು ಮೊದಲೇ ಹೇಳಿದ್ದಾನೆ. ದೇವರ ಕುಮಾರನಾದ (ಭಗವಂತನಾದ) ಏಸುಪ್ರಭುವಿಗೆ ಉಪದೇಶ ಕೊಟ್ಟಿರುವವನು ಯೋಹಾನ್. ಪ್ರಭುವಿಗೇ ಗುರುವಾದವನೆಂದು ಕೂಡಾ ಯೋಹಾನ್‌ನನ್ನು ಹೇಳಬಹುದು. ಅಂದಿನ ಕಾಲದಲ್ಲಿ ಗುರುಸ್ಥಾನದಲ್ಲಿ ಇದ್ದು ಎಷ್ಟೋ ಜನರಿಗೆ ಬಾಪ್ತಿಸ್ಮ (ಗುರೂಪದೇಶ) ಕೊಡುವ ಯೋಹಾನ್, ತನ್ನನ್ನು ತಾನು ತಗ್ಗಿಸಿಕೊಳ್ಳುತ್ತಿದ್ದನು. ಅಹಂಕಾರವು ಆತನಲ್ಲಿ ಬಹಳ ಕಡಿಮೆ ಎಂದು ಹೇಳಬಹುದು. ಏಸುಪ್ರಭುವಿಗೆ ಉಪದೇಶ ಕೊಡುವುದಕ್ಕೆ ಸ್ವಲ್ಪಕಾಲ ಮುಂಚೆ ನನ್ನ ಹತ್ತಿರಕ್ಕೆ ಬರುವವನು ನನಗಿಂತಲೂ ದೊಡ್ಡವನೆಂದು, ಆತನ ಚಪ್ಪಲಿಗಳನ್ನು ಹೊರುವುದಕ್ಕು ಕೂಡಾ ನಾನು ಅರ್ಹನು ಅಲ್ಲವೆಂದು ತನ್ನನ್ನು ತಾನು ತಗ್ಗಿಸಿಕೊಂಡು ಹೇಳಿಕೊಂಡ ಗುರು. ಪ್ರಭು ಸ್ವತಃವಾಗಿ ಆತನ ಹತ್ತಿರಕ್ಕೆ ಬಂದು ತನಗೆ ಬಾಪ್ತಿಸ್ಮ ನೀಡಿರೆಂದು ಕೇಳಿದಾಗ ಯೋಹಾನ್ **"ನಾನು ನಿನ್ನ ಹತ್ತಿರ ಬಾಪ್ತಿಸ್ಮ ಹೊಂದಬೇಕಾಗಿರುವವನು, ನಾನು**

**ನಿನಗೆ ಬಾಪ್ತಿಸ್ಮ ಕೊಡುವವನಾ!"** ಎಂದನು. ಅಂತಹ ಯೋಹಾನ್ ತನ್ನ ಹತ್ತಿರಕ್ಕೆ ಬರುತ್ತಿರುವ ಪ್ರಭುವನ್ನು ಕುರಿತು ಮೊದಲೇ ಹೇಳಿದಾಗ ಮೇಲಿನ ವಾಕ್ಯವನ್ನು ಕೂಡಾ ಹೇಳಿದ್ದಾನೆ. ಆ ವಾಕ್ಯದಲ್ಲಿ ಧಾನ್ಯಗಳನ್ನು ಎತ್ತಿಕೊಳ್ಳುವ **ಮೊರ** ಮತ್ತು **ಗೋಧಿಯನ್ನು** ನಂತರ ನಿತ್ಯವು ಉರಿಯುವ **ಅಗ್ನಿ** ಎಂದು ಇದೆ. ಇದರಲ್ಲಿ ಏನು ದೊಡ್ಡತನವಿದೆ? ಮೊರದಿಂದ ಗೋಧಿಯನ್ನ ಎತ್ತಿಕೊಂಡು ಹಿಟ್ಟು ಮಾಡಿಕೊಂಡು ಅಗ್ನಿಯಿಂದ ಸುಟ್ಟುಕೊಂಡರೇ ರೊಟ್ಟಿ ಆಗುತ್ತದೆ ಅಲ್ಲವೇ! ನಾವೆಲ್ಲಾ ಮೊರವನ್ನು, ಗೋಧಿಯನ್ನು, ಒಲೆಯಲ್ಲಿನ ಅಗ್ನಿಯನ್ನು ನೋಡುತ್ತಲೇ ಇದ್ದೇವೆ ಅಲ್ಲವೇ! ಇದು ಏನು ದೊಡ್ಡ ವಾಕ್ಯವೆಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರವೇನೆಂದರೇ! ಇದು ದ್ವಿತೀಯ ದೈವಗ್ರಂಥದಲ್ಲಿನ ವಾಕ್ಯ. ಗ್ರಂಥದಲ್ಲಿನ ಪ್ರತೀ ವಾಕ್ಯವು ದೈವಜ್ಞಾನವನ್ನು ತಿಳಿಸುವುದಾಗಿ ಇರುತ್ತದೆ. ಆ ಪದ್ಧತಿ ಪ್ರಕಾರ ಮೇಲಿನ ವಾಕ್ಯವನ್ನು ಜ್ಞಾನದೃಷ್ಟಿಯಿಂದ ನೋಡಿದಂತಾದರೇ ಅದರಲ್ಲಿ ವಿಶೇಷ ಜ್ಞಾನ ಅಡಗಿದೆ ಎಂದು ತಿಳಿಯುತ್ತಿದೆ. ಈ ವಾಕ್ಯವು ಏಸುಕ್ರೀಸ್ತನ ಔನತ್ಯವನ್ನು ತಿಳಿಸುವುದಾಗಿದೆ.

ಪೂರ್ವವು ಹುಟ್ಟಿರುವ ಮಕ್ಕಳನ್ನು ಮೊದಲು ಮೊರದಲ್ಲಿ ಮಲಗಿಸಿಟ್ಟು ತೆಗೆದುಕೊಳ್ಳುತ್ತಿದ್ದರು. ಮಗು ಹುಟ್ಟಿದ ಕೂಡಲೇ ಮೊರದಲ್ಲಿ ಅಕ್ಕಿಯನ್ನು ಚದುರವಾಗಿ ಹರಡಿ ಅದರಲ್ಲಿ ಮಲಗಿಸುವುದು ಮೊದಲು ಒಂದು ಆಚಾರವಾಗಿ ಇರುತ್ತಿತ್ತು. ಬಡವರಾಗಲೀ, ಧನಿಕರಾಗಲೀ, ತಿಳಿದವರಾಗಲೀ, ತಿಳಿಯದವ ರಾಗಲೀ ಹುಟ್ಟಿರುವ ಶಿಶುವನ್ನು ಮೊದಲು ಹಾಗೆ ಮಲಗಿಸಿ ತೆಗೆದುಕೊಳ್ಳುತ್ತಿದ್ದರು. ಕನಿಷ್ಠ ಎರಡು ನಿಮಿಷಗಳಾದರೂ ಮೊರದಲ್ಲಿ ಮಲಗಿಸಿಟ್ಟಾಗ ಬ್ರಹ್ಮ **'ಶಿಶು ಹಣೆಯ'** ಮೇಲೆ ಬರಹ ಬರೆದು ಹೋಗುತ್ತಾನೆಂದು ಅವರ ನಂಬಿಕೆ. **'ಕರ್ಮಲಿಖಿತ'** ಎಂಬ ಮಾತನ್ನು **'ಬ್ರಹ್ಮಬರಹ'** ಎಂದು ಕೂಡಾ ಅನ್ನುತ್ತಾರೆ. ಮೊರದಲ್ಲಿ ಬಿದ್ದಾಗ ಕರ್ಮಲಿಖಿತ ಹಾಗೆ ಇರುತ್ತಿತ್ತು ಎಂದು ಕೂಡಾ ಕೆಲವರನ್ನುತ್ತಿರುತ್ತಾರೆ. ಯಾರು ಹೇಗೆ ಅಂದುಕೊಂಡರೂ, ಯೋಹಾನ್ ಮಾತ್ರ ಏಸು ಪ್ರಭು ವಿಷಯದಲ್ಲಿ ಎಷ್ಟೋ ಸತ್ಯವನ್ನು ಹೇಳಿದ್ದಾನೆಂದೇ ಅರ್ಥವಾಗುತ್ತಿದೆ.

ಯೋಹಾನ್ ಭಾವನೆಯಲ್ಲಿ ಗೋಧಿಯನ್ನು ಕಾರ್ಯಗಳೊಂದಿಗೆ ಹೋಲಿಸಿದ್ದಾನೆ. ಗೋಧಿ ಆಹಾರವೆಂದು ಎಲ್ಲರಿಗೂ ತಿಳಿದಿದೆ. ಮಾನವನು ಆಹಾರವನ್ನು ತಿಂದು ಜೀವಿಸುತ್ತಿದ್ದಾನೆ. ಆಹಾರವನ್ನು ತಿನ್ನುತ್ತಾ ಇದ್ದರೇ ಖಾಲಿಯಾಗುತ್ತಿರುತ್ತದೆ. ಹಾಗೆಯೇ ಕರ್ಮವನ್ನು ಜೀವಿಯು ಕಾರ್ಯರೂಪದಲ್ಲಿ ಅನುಭವಿಸುತ್ತಾ ಇದ್ದಾನೆ. ಕರ್ಮವನ್ನು ಅನುಭವಿಸುತ್ತಿದ್ದಷ್ಟು ಅದು ಕಳೆದು ಹೋಗುತ್ತಲೇ ಇರುತ್ತದೆ. ಅನುಭವಿಸುವ ಕರ್ಮಗಳ ಕಾರ್ಯಗಳನ್ನು ಗೋಧಿಯನ್ನಾಗಿ ವರ್ಣಿಸಿ ಯೋಹಾನ್ ಹೇಳಿದ್ದಾನೆ. ನಾವು ಅನುಭವಿಸುವ ಕರ್ಮಗಳು ನಮ್ಮ ಶರೀರದಲ್ಲಿಯೇ ಲಿಖಿಸಲ್ಪಟ್ಟಿವೆ. ಅವುಗಳನ್ನೇ ಕರ್ಮಬರಹ, ಹಣೆಬರಹ, ದೇವರ ತೀರ್ಪು ಎಂದು ಅನ್ನುತ್ತಿರುತ್ತೇವೆ. ನಮ್ಮಲ್ಲಿ ಇರುವ ಹಣೆಬರಹದಿಂದಲೇ ನಮ್ಮ ಕರ್ಮಗಳನ್ನು ನಾವು ಅನುಭವಿಸುತ್ತಿದ್ದೇವೆ. ಆದಕಾರಣ ಕರ್ಮಾನುಭವಗಳನ್ನು ಗೋಧಿಯನ್ನಾಗಿ ವರ್ಣಿಸಿದ್ದಾರೆ, ಕರ್ಮನಿಲಯ ಪ್ರಾರಬ್ಧವಿರುವ ತಲೆಯನ್ನು ಮೊರವಾಗಿ ವರ್ಣಿಸಿದ್ದಾರೆ. ನಾವು ತಿನ್ನುವ ಧಾನ್ಯವನ್ನು ಬೇಯಿಸುವುದಕ್ಕೆ ಕೊನೆಯದಾಗಿ ಮೊರದಿಂದಲೇ ತೆಗೆದುಕೊಳ್ಳುತ್ತೇವೆ. ಆದಕಾರಣ ಅನುಭವಿಸಬೇಕಾಗಿರುವ ಕರ್ಮಗಳಿರುವ ತಲೆಯನ್ನು ಮೊರವನ್ನಾಗಿ ವರ್ಣಿಸಿದ್ದಾರೆ.

ಮನುಷ್ಯರೆಲ್ಲರಿಗೂ ಅವರಿಗೆ ತಿಳಿಯದಂತೆ ಅವರ ತಲೆಯಲ್ಲಿ ಕರ್ಮ ಲಿಖಿಸಲ್ಪಟ್ಟು ಇರುತ್ತದೆ. ಆದ್ದರಿಂದ ಮುಂದೆ ಏನು ನಡೆಯುತ್ತದೋ ಯಾರಿಗೂ ತಿಳಿದಿಲ್ಲ. ಪ್ರತೀ ಮನುಷ್ಯ ಅವರ ಕರ್ಮದಿಂದ ತಪ್ಪಿಸಿಕೊಳ್ಳಲಾರದ ಸ್ಥಿತಿಯಲ್ಲಿ ಇದ್ದಾರೆ. ಕರ್ಮದ ಕೈಯಲ್ಲಿ ಕೈಗೊಂಬೆಯಾಗಿ ಆಡುತ್ತಿರುವುದು ಮಾನವರ ಕೆಲಸವಾದರೇ, ಕರ್ಮಕ್ಕೆ ಅತೀತವಾದ ಪರಮಾತ್ಮ, ಪರಿಶುದ್ಧಾತ್ಮ, ಜಗದ್ಭರ್ತನಾದ ದೇವರು ಮನುಷ್ಯನಾಗಿ ಹುಟ್ಟಬೇಕಾಗಿ ಬಂದಾಗ ಆತನೇ ತನಗೆ ತಾನಾಗಿ ಕರ್ಮವನ್ನು ಸೃಷ್ಟಿಸಿಕೊಂಡು, ಅಂದರೇ ತನ್ನ ಹಣೆಬರಹವನ್ನು ತಾನೇ ಬರೆದುಕೊಂಡು ಭೂಮಿಮೇಲಕ್ಕೆ ಬರುತ್ತಾನೆ. ಕರ್ಮವೇ ಇಲ್ಲದವನು ಕರ್ಮವನ್ನು ತಾನೇ ಬರೆದುಕೊಂಡು ಬರುವುದು ಮಾನವರಿಗೆ ಜ್ಞಾನವನ್ನು ತಿಳಿಸುವ ನಿಮಿತ್ತ

ಎಂದು ಜ್ಞಾಪಕವಿಟ್ಟುಕೊಳ್ಳಬೇಕು. ತನ್ನ ಕರ್ಮವನ್ನು ತಾನೇ ಬರೆದುಕೊಳ್ಳುವ ದೇವರನ್ನು ಕುರಿತು ಗುರುವಾದ ಯೋಹಾನ್ **"ಆತನ ಮೊರ ಆತನ ಕೈಯಲ್ಲಿದೆ"** ಎಂದಿದ್ದಾನೆ. ಪ್ರಪಂಚದಲ್ಲಿ ಯಾರ ಮೊರ ಅವರ ಕೈಯಲ್ಲಿ ಇರುವುದಿಲ್ಲ. ಮಾನವರ ಪರಿಸ್ಥಿತಿ ಹೀಗಿರುವಾಗ, ಮಾನವರಿಗೆ ಜ್ಞಾನ ತಿಳಿಸುವ ನಿಮಿತ್ತ ದೇವರೇ ಭೂಮಿಮೇಲೆ ಮನುಷ್ಯನಾಗಿ ಹುಟ್ಟಿದಾಗ ಆತನ ಕರ್ಮವನ್ನು ಆತನೇ ತಯಾರು ಮಾಡಿಕೊಂಡು ಬರುವನು. ಪ್ರಭು ಹುಟ್ಟಿದಾಗಿನಿಂದ ಕೊನೆಗೆ ಸಾಯುವವರೆಗು ಅನುಭವಿಸುವವು ಆತನೇ ಸ್ವತಃವಾಗಿ ನಿರ್ಮಿಸಿಕೊಂಡಿರುವ ಕರ್ಮ ಎಂದು ತಿಳಿದುಕೊಳ್ಳಿ. ಪ್ರಭು ದನದ ಕೊಟ್ಟಿಗೆಯಲ್ಲಿ ಜನ್ಮಿಸುವುದಾಗಲೀ, ಕೊನೆಯಲ್ಲಿ ಚಿತ್ರಹಿಂಸೆಗಳ ಪಾಲಾಗುವುದಾಗಲೀ, ಶಿಲುಬೆ ಮೇಲೆ ಮರಣ ವಾಗಲೀ ಸ್ವತಃವಾಗಿ ಆತನು ಸೃಷ್ಠಿಸಿಕೊಂಡಿರುವವೇ. ಆತನಿಗೆ ತಿಳಿಯದೇ ಆತನನ್ನು ಹುಟ್ಟಿಸುವ ಶಕ್ತಿಯಾಗಲೀ, ಬಾಧಿಸುವ ಕರ್ಮವಾಗಲೀ ಯಾವುದೂ ಇಲ್ಲ. ಆತನು ಭೂಮಿಮೇಲೆ ನಡೆಯಬೇಕಾಗಿರುವ ವಿಧಾನವು ಆತನು ನಿರ್ಣಯಿಸಿಕೊಂಡಿರುವವೇ. ಆದಕಾರಣ ಆತನ ಮೊರ ಆತನ ಕೈಯಲ್ಲಿ ಇದೆಯೆನ್ನುವುದು ಸತ್ಯವಾದ ವಾಕ್ಯವು.

ಸಾಧಾರಣ ಮನುಷ್ಯರಿಗೆ ನಡೆಯುವ ಪ್ರತಿ ಕೆಲಸದಲ್ಲೂ ಹೊಸ ಕರ್ಮ ಬರುತ್ತಿರುತ್ತದೆ. ಹೀಗೆ ಭೂಮಿಮೇಲೆ ಪ್ರತೀ ಕೆಲಸಕ್ಕೂ ಕರ್ಮ ತಯಾರಾಗುತ್ತಿರುತ್ತದೆ. ಅಗ್ನಿ ಜ್ವಾಲೆಗೆ ಹೊಗೆ ಅನುಬಂಧವಾದ ಹಾಗೆ, ಕಾರ್ಯಗಳಿಗೆ ಕರ್ಮ ಅನುಬಂಧವಾಗಿ ಇದೆ. ಎಲ್ಲಾ ಕೆಲಸಗಳಿಗೂ ಕರ್ಮ ಇರುವುದು ಪ್ರಕೃತಿ ವಿಧಾನ. ದೇವರು ಅವತರಿಸಿ ದೇವರ ಕುಮಾರನಾಗಿ (ಭಗವಂತನಾಗಿ) ಭೂಮಿ ಮೇಲಕ್ಕೆ ಬಂದಾಗ ಆತನು ಮಾಡುವ ಕಾರ್ಯಗಳಲ್ಲಿ ಕೂಡಾ ಕರ್ಮ ಅಂಟಿಕೊಂಡು ಬರುತ್ತಿರುತ್ತದೆ. ಸಾಧಾರಣ ಮಾನವನು ಬರುವ ಕರ್ಮವನ್ನು ತಪ್ಪಿಸಿಕೊಳ್ಳಲಾರನು. ಆದರೇ ಭಗವಂತನಾದ ಪ್ರಭು ಆ ಕರ್ಮಗಳಿಂದ ತಪ್ಪಿಸಿಕೊಳ್ಳುತ್ತಾನೆ. ಭಗವಂತನ ಹತ್ತಿರ ಜ್ಞಾನವೆಂಬ ಅಗ್ನಿ ಸಂಪೂರ್ಣವಾಗಿ ಇರುತ್ತದೆ. ಕೆಲಸಗಳಲ್ಲಿ ಸಹಜವಾಗಿ ಬರುತ್ತಿರುವ ಕರ್ಮವನ್ನು ಜ್ಞಾನಾಗ್ನಿಯಿಂದ ಆತನು ಸುಟ್ಟು ಹಾಕುತ್ತಾನೆ. ಸಂಪೂರ್ಣ ಜ್ಞಾನಿಯಾದ

ಪ್ರಭು ಹತ್ತಿರ ಯಾವಾಗಲೂ ಸಂಪೂರ್ಣವಾಗಿ ಜ್ಞಾನಾಗ್ನಿ ಇರುತ್ತದೆ. ಜ್ಞಾನವೆಂಬ ಆರದ ಅಗ್ನಿಯಲ್ಲಿ ಬರುವ ಸರ್ವ ಕರ್ಮಗಳು ಸುಟ್ಟುಹೋಗುತ್ತಿರುತ್ತವೆ. ಕೆಲಸಗಳಿಗೆ ಅನುಬಂಧವಾದುದು ಕರ್ಮ, ಹಾಗೆಯೇ ಧಾನ್ಯಗಳಿಗೆ ಅನುಬಂಧ ವಾದುದು ಹೊಟ್ಟು. ಕಾರ್ಯಗಳನ್ನು ಅಂಟಿಕೊಂಡು ಬರುವ ಕರ್ಮಗಳನ್ನು ತನ್ನ ಜ್ಞಾನಾಗ್ನಿಯಿಂದ ಪ್ರಭು ಸುಟ್ಟುಹಾಕಿ ಕರ್ಮ ಅಂಟದ ಹಾಗೆ ಇರುವುದರಿಂದ **"ಆರದ ಅಗ್ನಿಯಲ್ಲಿ ಹೊಟ್ಟನ್ನು ಸುಟ್ಟುಹಾಕುತ್ತಾನೆ"** ಎಂದು ಯೋಹಾನ್ ಹೇಳಿದ್ದಾನೆ. ಏಸುಪ್ರಭು ತನ್ನ ಶರೀರವೆಂಬ ಕಣವನ್ನು, ಗುಣಗಳ ಕೊಳೆಯಿಂದ ಶುಭ್ರಗೊಳಿಸಿ, ಕಾರ್ಯಗಳಲ್ಲಿರುವ ಕರ್ಮವನ್ನು ಸುಟ್ಟು ಹಾಕುತ್ತಿದ್ದಾನೆ. ಆದ್ದರಿಂದ ಶರೀರವನ್ನು ಕಣವೆಂದು, ಗುಣಗಳ ಪ್ರಭಾವವು ತನ್ನಮೇಲೆ ಇಲ್ಲದೇ ಮಾಡಿಕೊಳ್ಳುವುದನ್ನು ಕಣವನ್ನು ಶುಭ್ರಗೊಳಿಸಿದ ಹಾಗೆಂದೂ, ಅನುಭವಿಸುವ ಕಾರ್ಯಗಳು ಗೋಧಿಯೆಂದು, ಅವುಗಳನ್ನು ಅಂಟಿಕೊಂಡು ಇರುವ ಕರ್ಮವನ್ನು ಹೊಟ್ಟು ಎಂದೂ, ಕರ್ಮವನ್ನು ಸುಡುವ ಅಗ್ನಿಯನ್ನು ಆರದ ಅಗ್ನಿ ಎಂದೂ ಯೋಹಾನ್ ಎಷ್ಟೋ ದೊಡ್ಡದಾಗಿ ವರ್ಣಿಸಿ ಹೇಳಿದ್ದಾನೆ. ಯೋಹಾನ್ ಪ್ರಭುವಿನ ದೊಡ್ಡತನವನ್ನು ಒಂದೇ ವಾಕ್ಯದಲ್ಲಿ ಹೇಳಿರುವಾಗ, ಅದು ಇಲ್ಲಿಯವರೆಗೂ ನಮಗೆ ಅರ್ಥವಾಗದೇ ಹೋಗಿರುವುದು ನಮ್ಮ ದುರದೃಷ್ಟ.

ಈ ವಾಕ್ಯವು ಸ್ಥೂಲವಾಗಿ ಕಾಣಿಸಿದರೂ ಇದರಲ್ಲಿ ಸೂಕ್ಷ್ಮ ಭಾವವು ಎಷ್ಟೋ ಒಳಗೊಂಡಿದೆಯೆಂದು ಈ ವಾಕ್ಯದ ವಿವರದಲ್ಲಿ ತಿಳಿದಿದೆ. ಈ ವಿಧವಾದ ಸೂಕ್ಷ್ಮ ಭಾವಗಳು ಇರುವ ಎಷ್ಟೋ ವಾಕ್ಯಗಳನ್ನು ನಾಲ್ಕು ಸುವಾರ್ತೆಗಳಲ್ಲಿ ತಿಳಿಯಬಲ್ಲವು. ನನ್ನ ಜ್ಞಾನವು ಸ್ವಲ್ಪ ಪರಿಮಿತಿಯೊಂದಿಗಿರುವುದೇ ಆದ್ದರಿಂದ ಬೈಬಲ್ ಒಟ್ಟಾರೆ 66 ಭಾಗಗಳಿಗೆ ವಿವರವನ್ನು ಬರೆಯದೆ ಮುಖ್ಯವಾದ ನಾಲ್ಕು ಸುವಾರ್ತೆಗಳು ಮತ್ತು ಎಲ್ಲಾದರೂ ಅಪರೂಪವಾಗಿ ಉಳಿದ ಭಾಗಗಳಲ್ಲಿನ ವಾಕ್ಯಗಳನ್ನು ಬರೆದಿದ್ದೇನೆಂದು ತಿಳಿಸುತ್ತಿದ್ದೇನೆ.

### 4) ಮತ್ತಾಯ ಸುವಾರ್ತೆ, 3ನೇ ಅಧ್ಯಾಯ, 16, 17 ವಚನಗಳು.

**(16) ಏಸು ಬಾಪ್ತಿಸ್ಮ ಪಡೆದ ಕೂಡಲೇ ನೀರಿನಿಂದ ದಡಕ್ಕೆ**

**ಬಂದನು. ಇಗೋ ಆಕಾಶವು ತೆರೆಯಿತು. ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲಕ್ಕೆ ಬರುವುದನ್ನು ನೋಡಿದನು.**

**(17) ಇಗೋ ಈತನೇ ನನ್ನ ಪ್ರಿಯ ಕುಮಾರನು. ಈತನಲ್ಲಿ ನಾನು ಆನಂದಿಸುತ್ತಿದ್ದೇನೆಂದು ಒಂದು ಶಬ್ಧವು ಆಕಾಶದಿಂದ ಬಂದಿತು.**

ಏಸು ಯೋಹಾನ್ ಮೂಲಕ ನೀರಿನಿಂದ ಉಪದೇಶ (ಬಾಪ್ತಿಸ್ಮ) ಪಡೆದಿದ್ದಾನೆ. ಬಾಪ್ತಿಸ್ಮವನ್ನೇ ಉಪದೇಶ ಎನ್ನುತ್ತಿದ್ದೇವೆ ಅಲ್ಲವೇ! ಉಪದೇಶ ಅಂದರೇ ಈ ದೇಶಕ್ಕೆ ಇರುವ ಪಕ್ಕದ ದೇಶವೆಂದು ಅರ್ಥ. ಇನ್ನೊಂದು ವಿಧವಾಗಿ ಹೇಳಿದರೇ ಪರದೇಶ ಎಂದು ಕೂಡಾ ಹೇಳಬಹುದು. ಪಕ್ಕದವ ನಿರುವುದು ಪಕ್ಕದ ದೇಶ. ನಿನ್ನ ಶರೀರದಲ್ಲಿ ಪರ(ನೆರೆ, ಪಕ್ಕದ) ದೇಶವಿದೆ. ಹಾಗೆಯೇ ನಿನ್ನ ಶರೀರದಲ್ಲಿನ ಪಕ್ಕದ ದೇಶದಲ್ಲಿ ಪಕ್ಕದವನಿದ್ದಾನೆ. ಪ್ರತೀ ಮನುಷ್ಯನಿಗೂ ಪಕ್ಕದ ದೇಶವಿದೆ, ಪ್ರತೀ ಮನುಷ್ಯನಿಗು ಪಕ್ಕದವನಿದ್ದಾನೆ. ಮನುಷ್ಯನಲ್ಲಿನ ಪಕ್ಕದ ದೇಶ ಕಾಣಿಸುವುದಿಲ್ಲ, ಹಾಗೆಯೇ ಮನುಷ್ಯನಲ್ಲಿನ ಪಕ್ಕದವನು ಕಾಣಿಸುವುದಿಲ್ಲ. ಕಾಣಿಸದ ಪಕ್ಕದ ದೇಶವನ್ನು ಗುರುವು ತೋರಿಸುವುದನ್ನು ಬಾಪ್ತಿಸ್ಮ ಅಥವಾ ಉಪದೇಶ ಎಂದು ಕರೆಯುತ್ತಿದ್ದೇವೆ. ಯೋಹಾನ್ ಕೊಟ್ಟಿರುವ ಉಪದೇಶ ಕಾರ್ಯವು ನೀರಿನಿಂದ ಕೊಟ್ಟಿರುವುದು. ಅದರಲ್ಲಿ ಅಗ್ನಿ ಇಲ್ಲ, ಆದ್ದರಿಂದ ಅದು ಹೆಸರಿಗೆ ಮಾತ್ರ ಉಪದೇಶ ಆದರೆ ಅದರಲ್ಲಿ ಪಕ್ಕದ ದೇಶವಿಲ್ಲ, ಪಕ್ಕದವನು ಇಲ್ಲ. ಆದರೂ ಉಪದೇಶ ಕಾರ್ಯಕ್ರಮವು ಹಾಗೆಯೇ ನಡೆಯಬೇಕಾಗಿದೆ. ಆದ್ದರಿಂದ **(3–15) ಏಸು "ಈ ಸಮಯಕ್ಕೆ ನಡೆಯಲಿ ನೀತಿ(ಜ್ಞಾನವು) ಹೀಗೆ ಎಲ್ಲಾ ನೆರವೇರಿಸುವುದು ನಮಗೆ ಯೋಗ್ಯವಾಗಿದೆ ಎಂದು ಆತನಿಗೆ ಉತ್ತರ ಕೊಟ್ಟನು."**

ಏಸು ನೀರಿನಿಂದ ಉಪದೇಶ ತೆಗೆದುಕೊಂಡಿದ್ದರೂ ಆತನ ಶರೀರದಲ್ಲಿನ ಪಕ್ಕದದೇಶ ಆತನಿಗೆ ತಿಳಿದಿದೆ. ಆತನು ಆಗಲೇ ಅಲ್ಲದೇ ಯಾವಾಗಲೂ

ಕಾಣಿಸುವ ಹೊರಗಿನ ದೇಶವನ್ನು, ಕಾಣಿಸದ ಪಕ್ಕದ ದೇಶವನ್ನು ನೋಡುತ್ತಲೇ ಇದ್ದಾನೆ. ಆದ್ದರಿಂದ ಆತನಿಗೆ ಯೋಹಾನ್ ನೀಡಿರುವುದು ಹೆಸರಿಗೆ ಉಪದೇಶವೇ ಆದರೂ ಅದು ಆತನಿಗೆ ನಿಜವಾದ ಉಪದೇಶವಾಗಿ ಲೆಕ್ಕಿಸಲ್ಪಟ್ಟಿದೆ. ಏಸು ಸಾಧಾರಣ ಜೀವಾತ್ಮನಂತೆ ಮೂವತ್ತು ವರ್ಷಗಳು ಇದ್ದ ನಂತರ ಬಾಪ್ತಿಸ್ಮವನ್ನು ಹೊಂದಿದ್ದಾನೆ. ಅಂದಿನಿಂದ ತನ್ನ ಶರೀರದಲ್ಲಿ ಜೀವಾತ್ಮನಂತೆ ಅಲ್ಲದೆ, ಆತ್ಮದ ಹಾಗೆ ದೈವಸಂಬಂಧ ವಿಷಯಗಳನ್ನು ಜ್ಞಾನರೂಪದಲ್ಲಿ ಹೇಳುವುದನ್ನು ಪ್ರಾರಂಭಿಸಿದನು. ಏಸು ಬಾಪ್ತಿಸ್ಮ ಹೊಂದಿದ ನಂತರ ಆತ್ಮವಾಗಿದ್ದು ಪರಮಾತ್ಮ ಜ್ಞಾನವನ್ನು ಹೇಳಿದ್ದಾನೆನ್ನುವುದಕ್ಕೆ ಸಾಕ್ಷಿಯಾಗಿ ಏಸು ಯೋಹಾನ್ ಹತ್ತಿರ ಬಾಪ್ತಿಸ್ಮವನ್ನು ಪಡೆದ ಕೂಡಲೇ ನೀರಿನಿಂದ ಹೊರಗೆ ಬರುತ್ತಲೇ ಆಕಾಶದಿಂದ ಆತ್ಮ ಪಾರಿವಾಳದ ಹಾಗೆ ಆತನ ಮೇಲಕ್ಕೆ ಬರುವುದು ಕಾಣಿಸಿದೆ. ಅಷ್ಟೇ ಅಲ್ಲದೇ ಪರಮಾತ್ಮ (ಪರಿಶುದ್ಧಾತ್ಮ) **"ಇಗೋ ಈತನೇ ನನ್ನ ಪ್ರಿಯಕುಮಾರನು, ಈತನಿಂದ ನಾನು ಆನಂದಿಸುತ್ತಿದ್ದೇನೆ ಎಂದು ಆಕಾಶದಿಂದ ಒಂದು ಶಬ್ಧವು ಕೇಳಿಸಿತು."** ಹಾಗೆ ಕೇಳಿಸುವುದರಿಂದ ಪರಿಶುದ್ಧಾತ್ಮನಾದ ದೇವರು ಆತ್ಮ ತನ್ನ ಪ್ರಿಯಕುಮಾರನೆಂದು ಹೇಳಿ ನನ್ನ ಪ್ರಿಯ ಕುಮಾರನಾದ ಏಸುವಿನಿಂದ ನಾನು ಆನಂದಿಸುತ್ತಿದ್ದೇನೆಂದು ಹೇಳಿದ್ದಾನೆ. ಇದರಿಂದ ಪರಿಶುದ್ಧಾತ್ಮ ತಂದೆಯಾಗಿ, ಆತ್ಮ ಏಸು ಎನ್ನಲ್ಪಡುವ ಕುಮಾರನಾಗಿ ಇದ್ದಾನೆಂದು ತಿಳಿಯುತ್ತಿದೆ. ಇದೆಲ್ಲವೂ ಗಮನಿಸಿದರೇ ಪರಿಶುದ್ಧಾತ್ಮ ಎನ್ನಲ್ಪಡುವ ಪರಮಾತ್ಮ ಆತ್ಮನಂತೆ ಕಾಣಿಸದೆ, ಜೀವಾತ್ಮದಹಾಗೆ ಸಾಧಾರಣ ಮನುಷ್ಯನಾಗಿ ಕಾಣಿಸುತ್ತಾ ಈ ಲೋಕದಲ್ಲಿ ನಿವಾಸಿಸುತ್ತಾನೆ ಎಂದು ತಿಳಿಯುತ್ತಿದೆ. ಈ ಮಾತು ಕ್ರೈಸ್ತರನ್ನು ಹೊಗಳುವು ದಕ್ಕಾಗಲೀ, ಕ್ರೈಸ್ಥ ಮತ ಪ್ರಚಾರಕ್ಕಾಗಲೀ ಹೇಳಿರುವುದಲ್ಲ. ನೂರಕ್ಕೆ ನೂರುಪಾಲು ನಡೆದಿರುವ ಸತ್ಯವನ್ನು, ದೇವರು ಭೂಮಿ ಮೇಲಕ್ಕೆ ಬಂದಿರುವ ವಿಧಾನವನ್ನು ತಿಳಿಸುತ್ತಿದ್ದೇವೆ.

**(5) ಮತ್ತಾಯ ಸುವಾರ್ತೆ, 4ನೇ ಅಧ್ಯಾಯ, 10ನೇ ವಚನ.**

**(10) ಏಸು ಅವನೊಂದಿಗೆ "ಸಾತಾನು, ಹೋಗು! ಪ್ರಭುವಾದ**

**ನಿನ್ನ ದೇವರಿಗೆ ನಮಸ್ಕರಿಸಿ ಆತನನ್ನು ಮಾತ್ರವೇ ಆರಾಧಿಸಬೇಕು" ಎಂದು ಬರೆಯಲ್ಪಟ್ಟಿದೆ ಎಂದನು.**

ಈ ವಾಕ್ಯದಲ್ಲಿ **ಸಾತಾನು** ಎಂಬ ಮಾತು ಹೊಸದಾಗಿ ಕೇಳಿಸುತ್ತಿದೆ. ಈ ವಾಕ್ಯಕ್ಕಿಂತಲೂ ಹಿಂದಿನ ವಾಕ್ಯಗಳಲ್ಲಿ ಸಾತಾನನ್ನು ಒಂದು ಕಡೆ 'ಶೋಧಕನು' ಎಂದು, ಮತ್ತೊಂದು ಕಡೆ 'ಅಪವಾದಿ' ಎಂದು ಹೇಳಿದ್ದಾರೆ. ಅಪವಾದಿ ಎಂದರೇ ತಪ್ಪಾಗಿ ವಾದಿಸುವವನು, ತಪ್ಪಾಗಿ ಹೇಳುವವನೆಂದು ಅರ್ಥ. ಹಾಗೇ ಶೋಧಕನೆಂದರೇ ನಿನ್ನಲ್ಲಿ ಏನಾದರೂ ಕೆಟ್ಟದು ಇದೆಯೇನೋ ಎಂದು ಹುಡುಕುವವನು. ಕೆಟ್ಟದಿದ್ದರೇ ಅದನ್ನು ಹೊರಗೆ ತರುವವನು ಎಂದು ಅರ್ಥ. ಅಪವಾದಿ ಅಥವಾ ಶೋಧಕನು ಎನ್ನುವವನನ್ನೇ ಈ ವಾಕ್ಯದಲ್ಲಿ ಸಾತಾನು ಎಂದು ಹೇಳುತ್ತಿದ್ದಾರೆ. **ಅಪವಾದಿ, ಶೋಧಕನು** ಎಂಬ ಪದಗಳು ತೆಲುಗು ಭಾಷೆ ಪದಗಳಾಗಿರುವಾಗ, ಸಾತಾನು ಎಂಬ ಮಾತು ತೆಲುಗುಭಾಷೆ ಪದವಲ್ಲ. ಗ್ರಂಥದಲ್ಲಿ ಅನೇಕ ಕಡೆ ಸಾತಾನು ಎಂಬ ಪದವನ್ನೇ ಬಳಸಿದ್ದಾರೆ. ಸಾತಾನು ಎಂಬ ಪದವು ಆಧ್ಯಾತ್ಮಿಕ ವಿದ್ಯೆಯಲ್ಲಿ ನಾವು ಹೇಳಿಕೊಳ್ಳುವ **"ಮಾಯೆ"** ಎಂಬ ಪದಕ್ಕೆ ಬದಲಾಗಿ ಬಳಸಲಾಗಿದೆ ಎಂದು ತಿಳಿಯಬೇಕು. ಸಾತಾನು ಎಂದರೂ, ಮಾಯೆ ಎಂದರೂ ಒಂದೇ ಆಗಿರುವುದರಿಂದ ಮಾಯೆಯನ್ನು ಕುರಿತು ಹೇಳಿರುವ ವಿವರವು ಸಾತಾನಿಗೆ ಹೇಳಬಹುದು.

ಪ್ರಥಮ ದೈವಗ್ರಂಥದಲ್ಲಿ ಮಾಯೆ ಅಂದರೇ ಮನುಷ್ಯನ ತಲೆಯಲ್ಲಿರುವ ಗುಣಗಳ ಸಾರಾಂಶವೆಂದು ತಿಳಿಯುತ್ತಿದೆ. ಈ ವಿಷಯವಾಗಿ ಮೊದಲ ದೈವಗ್ರಂಥದಲ್ಲಿ **"ಗುಣಮಯಿ ಮಮಮಾಯಾ"** ಎಂದು ಹೇಳಿದ್ದಾರೆ. ಅದರ ಪ್ರಕಾರ ಗುಣಗಳ ಕೂಡಲಿಯನ್ನೇ **ಮಾಯೆ** ಎಂದು ಕರೆಯುತ್ತಿದ್ದಾರೆಂದು ಹೇಳಿದ್ದಾರೆ. ಇದರಲ್ಲಿ ಮಮಮಾಯಾ ಎಂದು ಇರುವುದರಿಂದ ದೇವರು **'ನನ್ನ ಮಾಯೆ'** ಎಂದು ಹೇಳಿದ್ದಾನೆಂದು ತಿಳಿಯುತ್ತಿದೆ. ದೇವರೇ ಸರ್ವವನ್ನೂ ಸೃಷ್ಟಿಸಿದ್ದಾನೆ. ಮಾಯೆಯನ್ನು ಕೂಡಾ ದೇವರೇ ಸೃಷ್ಟಿಸಿದ್ದಾನೆ. ಆದ್ದರಿಂದ ಆತನ ಮಾತಿನಲ್ಲಿ ನನ್ನ ಮಾಯೆ (ಮಮ ಮಾಯಾ) ಎಂದು ಹೇಳಿದ್ದಾನೆ.

ಮಾಯೆ ಎನ್ನುವುದು ಸ್ತ್ರೀ ಲಿಂಗದೊಂದಿಗೆ ಕೂಡಿಕೊಂಡಿದೆ. ದೇವರು, ದೇವರಿಂದ ವಿಂಗಡಿಸಲ್ಪಟ್ಟ ಉಳಿದ ಎರಡು ಆತ್ಮ, ಜೀವಾತ್ಮಗಳು ಒಟ್ಟು ಮೂರು ಹೊರತು ಉಳಿದ ಯಾವುದೂ ಪುರುಷನು ಅಲ್ಲ. ದೇವರಿಂದ ಸೃಷ್ಠಿಸಲ್ಪಟ್ಟಿರುವವೆಲ್ಲವೂ ಸ್ತ್ರೀ ಲಿಂಗಗಳೇ ಎಂದು ಹೇಳಬಹುದು. ಆದ್ದರಿಂದ ಮಾಯೆಯನ್ನು ಸ್ತ್ರೀ ಲಿಂಗವಾಗಿ ಹೇಳುತ್ತಿದ್ದೇವೆ. ಮಾಯೆ (ಸಾತಾನು) ಅಂದರೇ ಎಲ್ಲೋ ಇದೆಯೆಂದು ಅಂದುಕೊಳ್ಳಬಾರದು. ಏಸುವನ್ನು ಶೋಧಿಸಿರುವ ಮಾಯೆ ಏಸು ಶರೀರದಲ್ಲಿಯೇ, ಏಸು ತಲೆಯಲ್ಲಿಯೇ ಇದ್ದು ಏಸುವನ್ನು ಶೋಧಿಸಿದೆ, ಅಪವಾದಿಯಾಗಿ ವಾದಿಸಿದೆ. ಹಾಗೆಯೇ ಇಂದಿಗೂ ಕೂಡಾ ಪ್ರತೀ ಮನುಷ್ಯನ ತಲೆಯಲ್ಲಿರುವ ಗುಣಗಳೇ ಅವನಿಗೆ ಮಾಯೆಯಾಗಿ ಇದ್ದು ಅವನಿಗೆ ವಿರುದ್ಧವಾಗಿ ಶೋಧಿಸುವುದು, ವಾದಿಸುವುದು ಮಾಡುತ್ತಿದೆ. ಏಸು ಪ್ರಭುವನ್ನು ಬಾಪ್ತಿಸ್ಮ ಹೊಂದಿದ ನಂತರ ಮೊದಲಿಗೇ ಮೂರು ಬಾರಿ ಮಾಯೆ ಶೋಧಿಸುವುದು ನಡೆದಿದೆ. ಮೂರು ಬಾರಿ ಏಸು ತನ್ನ ಜ್ಞಾನದಿಂದ ಮಾಯೆಗೆ ಸಮಾಧಾನವನ್ನು ಹೇಳಿದ್ದಾನೆ.

ಏಸು ಅನುಸರಿಸಿದ ವಿಧಾನವನ್ನೇ ಈ ದಿನ ಮನುಷ್ಯರು ಕೂಡಾ ಅನುಸರಿಸಬೇಕೆಂಬ ವಿಧಾನವನ್ನು ಏಸು ತನ್ನ ಜೀವನದಲ್ಲಿ ತೋರಿಸಿದ್ದಾನೆ. ಏಸು ಪ್ರಭುವನ್ನು ಮಾಯೆ ಶೋಧಿಸಿರುವ ಪ್ರತೀ ಬಾರಿ ಆತನು ಜ್ಞಾನದಿಂದಲೇ ಸಮಾಧಾನವನ್ನು ಹೇಳಿದ್ದಾನೆ. ಆದಕಾರಣ ಪ್ರತೀ ಮನುಷ್ಯ ಹಾಗೆಯೇ ಮಾಡಬೇಕೆಂದು ತಿಳಿಯಬೇಕು. ಮೂರನೆಬಾರಿ ಏಸುವಿಗೆ ಮಾಯೆ ಎಂಬ ಸಾತಾನ್ ತನಗೆ ನಮಸ್ಕಾರ ಮಾಡೆಂದು ಹೇಳಿದಾಗ ಏಸು ತಕ್ಕ ಸಮಾಧಾನವನ್ನು ಸಾತಾನ್‌ಗೆ ಹೇಳಿದ್ದಾನೆ. ಆ ಮಾತನ್ನು ನೋಡಿದರೇ ಹೀಗಿದೆ. **"ಪ್ರಭುವಾದ ನಿನ್ನ ದೇವರಿಗೆ ನಮಸ್ಕರಿಸಿ ಆತನನ್ನು ಮಾತ್ರವೇ ಸೇವಿಸಬೇಕು"** ಎಂದು ಹೇಳಿದ್ದಾನೆ. ಮನುಷ್ಯನ ಹಾಗೆ ಕಾಣಿಸುವ ಏಸು ಹೇಳಿರುವ ಮಾತನ್ನು ಆತನ ಶರೀರದಲ್ಲಿ ಇರುವ ಆತ್ಮವೇ ಸ್ವತಃವಾಗಿ ಹೇಳಿರುವುದೆಂದು ತಿಳಿಯಬೇಕು. ಪರಿಶುದ್ಧಾತ್ಮನಾದ ದೇವರು ಅಂದರೇ ಪರಮಾತ್ಮ ಸ್ವತಃವಾಗಿ ಯಾರೊಂದಿಗೂ ಮಾತನಾಡುವುದಿಲ್ಲ. ಆದರೂ ತನ್ನ ಜ್ಞಾನವನ್ನು ಆತ್ಮದೊಂದಿಗೆ, ಆತ್ಮ ಮೂಲಕ

ಹೇಳಿಸುತ್ತಿರುತ್ತಾನೆ. ಆದ್ದರಿಂದ ಶರೀರದಲ್ಲಿನ ಆತ್ಮ ಹೇಳಿದರೂ ಅದು ಸ್ವತಃವಾಗಿ ಪರಮಾತ್ಮನೇ ಹೇಳುತ್ತಿದ್ದಾನೆಂದು ತಿಳಿಯಬೇಕಾಗಿರುತ್ತದೆ. ಮೂರನೆಯದಾದ ಅಂತಿಮ ದೈವಗ್ರಂಥದಲ್ಲಿ ಮೂರನೆ ಸೂರಾ, ಏಳನೆಯ ಆಯತ್‌ನಲ್ಲಿ ದೇವರು ಈ ವಿಧವಾಗಿ ಹೇಳಿದ್ದಾನೆ. **"ದೇವರ ಜ್ಞಾನವು ದೇವರಿಗೆ ಹೊರತು ಯಾವ ಇತರ ಮಾನವರಿಗೆ ತಿಳಿದಿಲ್ಲ"** ಎಂದು ಹೇಳಿದ್ದಾನೆ. ಇದನ್ನು ಅನುಸರಿಸಿ ಶರೀರದಲ್ಲಿನ ಆತ್ಮ ಮೂಲಕ ತಿಳಿಯಲ್ಪಡುವ ಜ್ಞಾನವೆಲ್ಲವೂ ಪರಮಾತ್ಮನಾದ ದೇವರು ಹೇಳುವುದೇಯೆಂದು ತಿಳಿಯಬೇಕು.

ಈ ದಿನ ಪ್ರಪಂಚದಲ್ಲಿ ಹನ್ನೆರಡು ಮತಗಳಿರುವಾಗ, ಅದರಲ್ಲಿ ಯಾವ ಮತದಲ್ಲಿ ಇಲ್ಲದ ದೇವತೆಗಳೆಲ್ಲರೂ ಒಂದು ಹಿಂದೂಮತದಲ್ಲಿಯೇ ಇದ್ದಾರೆ. ದೇವರು ದೇವತೆಗಳನ್ನು, ಮನುಷ್ಯರನ್ನು ಸೃಷ್ಟಿಸಿರುವಾಗ ಮನುಷ್ಯರು ಸೃಷ್ಟಿಕರ್ತನಾದ ದೇವರನ್ನು ಬಿಟ್ಟು, ದೇವರ ಜ್ಞಾನವನ್ನು ಸ್ವಲ್ಪವಾದರೂ ತಿಳಿಯದೇ ದೇವರನ್ನು ಬಿಟ್ಟು ದೇವತೆಗಳನ್ನು ಮುಗಿಯುತ್ತಿದ್ದಾರೆ. ಹಾಗೆ ಮುಗಿಯುವುದರಿಂದ ದೈವಗ್ರಂಥಗಳಲ್ಲಿ ಹೇಳಿರುವ ದೇವರ ಮಾತನ್ನು ಮನುಷ್ಯರು ಕಿಂಚಿತ್ತಾದರೂ ಲೆಕ್ಕಿಸುತ್ತಿಲ್ಲವೆಂದು ತಿಳಿಯುತ್ತಿದೆ. ದೇವರನ್ನು ಬಿಟ್ಟು ದೇವತೆಗಳನ್ನು ಆರಾಧಿಸುವವರು ಮಾಯೆ ಮಾತನ್ನು ಕೇಳಿ ಮಾಯೆಯಲ್ಲಿ ಇದ್ದಾರೆಂದು ತಿಳಿಯುತ್ತಿದೆ. ದೇವರ ಪಕ್ಷ, ಮಾಯೆ ಪಕ್ಷ ಎಂದು ಎರಡು ಪಕ್ಷಗಳೇ ಇವೆ. ಆದರೇ ಕೆಲವು ಮತಗಳಲ್ಲಿ ಆ ಮತದವರು ದೇವರ ಪಕ್ಷದಲ್ಲಿದ್ದು ಅನ್ಯದೇವತಾರಾಧನೆ ಮಾಡದೆ, ದೇವರನ್ನು ಒಬ್ಬನನ್ನೇ ಪ್ರಾರ್ಥಿಸುತ್ತಿದ್ದಾರೆ. ಕೇವಲ ಒಂದು ಹಿಂದೂ ಮತದಲ್ಲಿ ಮಾತ್ರವೇ ಮಾಯೆ (ಸಾತಾನ್) ಪಕ್ಷದಲ್ಲಿ ಮನುಷ್ಯರಿದ್ದೂ ದೇವರನ್ನು ಅಲ್ಲದೇ ಅನೇಕ ದೇವತೆಗಳನ್ನು ಆರಾಧಿಸುತ್ತಿದ್ದಾರೆ. ಹಾಗೆ ದೇವತೆಗಳನ್ನು ಆರಾಧಿಸುವವರು ಎಲ್ಲರೂ ಮಾಯೆ ಪಕ್ಷದಲ್ಲಿ ಇರುವ ಹಾಗೆ ತಿಳಿಯುತ್ತಿದೆ.

**(6) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 10ನೇ ವಚನ.**

**(10) ನೀತಿ (ಜ್ಞಾನ) ನಿಮಿತ್ತ ಹಿಂಸಿಸಲ್ಪಡುವವರು ಧನ್ಯರು. ಪರಲೋಕರಾಜ್ಯವು ಅವರದೇ.**

ನೀತಿ ಎಂದು ವಾಕ್ಯದಲ್ಲಿ ಬರೆದಿದೆ. ಆದರೇ ಅಲ್ಲಿ **ನೀತಿ ಬದಲು ಜ್ಞಾನ** ಎಂದು ಇರಬೇಕು. ಏಸು ಹೇಳಿದಾಗ ಹೆಬ್ರೀ ಭಾಷೆಯಲ್ಲಿ ಜ್ಞಾನ ಎಂದೇ ಹೇಳಿರುತ್ತಾನೆ. ಆದರೇ ಅನುವಾದಕರು ಕನ್ನಡ ಭಾಷೆಗೆ ಬರೆಯುವಾಗ ಹೆಬ್ರೀ ಭಾಷೆಯಲ್ಲಿನ ಪದಕ್ಕೆ ಸರಿಸಮಾನವಾದ ಪದವು ಬರೆಯಲಾರದೇ ಜ್ಞಾನದ ಬದಲು ನೀತಿಯೆಂದು ಬರೆದಿದ್ದಾರೆ. ವಾಸ್ತವವಾಗಿ ನೀತಿ ಬೇರೆ, ಜ್ಞಾನವು ಬೇರೆ. **ನೀತಿ, ನ್ಯಾಯ ಪ್ರಪಂಚ ಸಂಬಂಧವಾದವು. ಜ್ಞಾನವು, ಧರ್ಮವು ದೈವ ಸಂಬಂಧವಾದವು.** ನೀತಿ, ನ್ಯಾಯಗಳಿಂದ ಕರ್ಮಗಳು ಬರುತ್ತವೆ. ಜ್ಞಾನ, ಧರ್ಮದಿಂದ ಕರ್ಮಗಳು ಸುಟ್ಟುಹೋಗುವವು. ಆದ್ದರಿಂದ ನೀತಿ ಲೋಕ ಸಂಬಂಧವಾದುದೆಂದು, ಜ್ಞಾನವು ದೈವ ಸಂಬಂಧವಾದುದೆಂದು ತಿಳಿಯಬೇಕು. ಪ್ರಪಂಚದಲ್ಲಿ ನೀತಿ ಅವಿನೀತಿ, ನ್ಯಾಯ ಅನ್ಯಾಯಗಳು ಇವೆ. ನೀತಿಯಿಂದ ಪುಣ್ಯ, ಅವಿನೀತಿಯಿಂದ ಪಾಪ ಬರುತ್ತದೆ. ಹಾಗೇ ನ್ಯಾಯದಿಂದ ಪುಣ್ಯ, ಅನ್ಯಾಯದಿಂದ ಪಾಪವು ಬರುತ್ತದೆ. ಇದರ ಪ್ರಕಾರ ಮೇಲಿನ ವಾಕ್ಯದಲ್ಲಿ **ನೀತಿ ಎನ್ನುವ ಕಡೆ ಜ್ಞಾನ** ಎಂದು ಇರಬೇಕು.

ಜ್ಞಾನಕ್ಕಾಗಿ ಹಿಂಸಿಸಲ್ಪಡುವವನು, ಜ್ಞಾನಮಾರ್ಗದಲ್ಲಿ ಇರುವುದಕ್ಕೆ ಇತರರಿಂದ ಹಿಂಸೆ ಪಟ್ಟರೇ ಒಂದು ವಿಧವಾಗಿ ಅವನು ಧನ್ಯನೆಂದೇ ಹೇಳಬಹುದು. ಏಕೆಂದರೇ! ಜ್ಞಾನ ನಿಮಿತ್ತ ಹಿಂಸೆಯನ್ನು ಇತರರಿಂದ ಹೊಂದುವವನಿಗೆ ಫಲಿತವಾಗಿ ಮುಕ್ತಿ ಲಭ್ಯವಾಗುತ್ತದೆ. ಮುಕ್ತಿ ಎಂದರೇ ಕರ್ಮಗಳ ಬಂಧನದಿಂದ ಬಿಡುಗಡೆ ಹೊಂದುವುದು. ಯಾವಾಗಾದರೇ ಮುಕ್ತಿ ಲಭ್ಯವಾಗುವುದೋ ಆಗ ಮನುಷ್ಯ ಲೋಕದಲ್ಲಿ ಇಲ್ಲದೇ, ಲೋಕಕ್ಕಿಂತಲೂ ಬೇರೆಯಾದ ಸ್ಥಿತಿಯಲ್ಲಿ ಸೇರಿ ಹೋಗುತ್ತಾನೆ. ಹಾಗೆ ಇದ್ದು ಹೋಗಿರುವವನನ್ನು ಪರಲೋಕಕ್ಕೆ ಹೋಗಿದ್ದಾನೆಂದು ಹೇಳುತ್ತಾರೆ. ಪರಲೋಕ ಎಂದರೇ! ಯಾವ ಅನುಭವ ಇಲ್ಲದಿರುವುದೆಂದು ತಿಳಿಯಬೇಕು. ಕೆಲವರ ಜೀವನದಲ್ಲಿ ಮಾತ್ರ ಜ್ಞಾನ ನಿಮಿತ್ತ ಹಿಂಸಿಸಲ್ಪಡುವುದು ನಡೆಯುತ್ತಿರುತ್ತದೆ. ಎಲ್ಲರ ಜೀವನಗಳಲ್ಲಿ ಹಿಂಸೆ ಇರುತ್ತದೆ ಎಂದು ಅಂದುಕೊಳ್ಳಬಾರದು. ಕೆಲವರು ಯಾವ ಆತಂಕವಿಲ್ಲದೇ ಜ್ಞಾನವನ್ನು ತಿಳಿದು ಮೋಕ್ಷವನ್ನು (ಪರಲೋಕವನ್ನು) ಹೊಂದುವರು.

**(7) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 17ನೇ ವಚನ.**

**(17) ಧರ್ಮಶಾಸ್ತ್ರವನ್ನಾಗಲೀ, ಪ್ರವಕ್ತರ ಪ್ರವಚನಗಳನ್ನಾಗಲೀ ನಾಶಮಾಡುವುದಕ್ಕೆ ಬಂದಿದ್ದೇನೆಂದು ತಿಳಿಯಬೇಡ. ನೆರವೇರಿಸುವುದಕ್ಕಾಗಿಯೇ ಹೊರತು ನಾಶಮಾಡುವುದಕ್ಕೆ ನಾನು ಬರಲಿಲ್ಲ.**

ಧರ್ಮಶಾಸ್ತ್ರವನ್ನು ಯಾರೂ ಖಂಡಿಸಲಾರರು. ಅದು ಖಂಡಿಸಲ್ಪಡುವುದಲ್ಲ. ಧರ್ಮಶಾಸ್ತ್ರವು ಆದಿಯಲ್ಲಿಯೇ ಹುಟ್ಟಿರುವುದು. ಅದನ್ನು ಎಷ್ಟೋಜನ ಪ್ರವಕ್ತರು, ವಕ್ತರು ಬೋಧಿಸುತ್ತಾ ಬಂದಿದ್ದಾರೆ. ಪರಮಾತ್ಮ ಕೂಡಾ ಭಗವಂತನಾಗಿ ಭೂಮಿ ಮೇಲಕ್ಕೆ ಬಂದಾಗ ಆತನು ಅದನ್ನು ಆಚರಿಸಿ, ಎಲ್ಲರಿಗೂ ಅರ್ಥವಾಗುವಹಾಗೆ ಮಾಡುತ್ತಾನೆ. ಧರ್ಮಶಾಸ್ತ್ರದಲ್ಲಿನ ಧರ್ಮಗಳನ್ನು ದೇವರ ಕುಮಾರನಾದ ಭಗವಂತನು ತಿಳಿಸುತ್ತಿರುವಾಗ, ಆಚರಿಸುತ್ತಿರುವಾಗ ಅವು ಕೆಲವರಿಗೆ ಧರ್ಮಗಳೇ ಅಲ್ಲವೆಂದು ಅರ್ಥವಾಗುತ್ತದೆ. ಏಕೆಂದರೇ! ಅಧರ್ಮಗಳನ್ನು ಅವರು ಧರ್ಮಗಳೆಂದುಕೊಂಡು ನಂಬಿರುವುದರಿಂದ ಭಗವಂತನು ಹೇಳುವ ನಿಜವಾದ ಧರ್ಮಗಳು ಅಧರ್ಮಗಳಾಗಿ ಗೋಚರಿಸುವ ಅವಕಾಶವಿದೆ. ಆದಕಾರಣ ಪ್ರಭುವೇ ಮೇಲಿನ ವಾಕ್ಯದಲ್ಲಿ **"ಧರ್ಮಶಾಸ್ತ್ರವನ್ನು ನಾನು ನಾಶಮಾಡುವುದಕ್ಕೆ ಬಂದಿದ್ದೇನೆಂದು ತಿಳಿಯಬೇಡ ನೆರವೇರಿಸುವುದಕ್ಕೇ ಬಂದಿದ್ದೇನೆ"** ಎಂದು ಹೇಳಿದನು.

ಪ್ರಪಂಚದಲ್ಲಿ ಪ್ರಜೆಗಳು ಸಾತಾನ್ (ಮಾಯೆ) ಕೈಯಲ್ಲಿ ಸಿಲುಕಿದವರಾಗಿ ಅಧರ್ಮಗಳನ್ನೇ ಧರ್ಮಗಳೆಂದು ನಂಬಿದವರಾಗಿ ದೇವರಿಗೆ ವಿರುದ್ಧವಾಗಿ ಅನೇಕ ವಿಧಗಳ ಆರಾಧನೆಗಳು ಮಾಡುತ್ತಾ, ಅದುವೇ ನಿಜವಾದ ಭಕ್ತಿ ಎಂದು ಅಂದುಕೊಳ್ಳುತ್ತಿದ್ದಾರೆ. ಪ್ರಜೆಗಳಲ್ಲಿ **ದೇವರು** ಎಂಬ ಭಾವನೆಯನ್ನು ಮಾಯೆ ತನ್ನ ಕಡೆ ತಿರುಗಿಸಿಕೊಂಡು ನೀವು ದೇವರ ಕಡೆ ಹೋಗುತ್ತಿದ್ದೀರೆಂದು ನಂಬಿಸಿ ಧರ್ಮಗಳನ್ನು ಆಚರಿಸದೇ, ಅಧರ್ಮಗಳನ್ನು ಆಚರಿಸುವ ಹಾಗೆ ಮಾಡಿ, ದೇವರಿಗೆ ವಿರುದ್ಧ ದಿಕ್ಕಿನ ಕಡೆಗೆ ನಡೆಸುತ್ತಿದೆ. ಅಂತಹ ಸ್ಥಿತಿಯಲ್ಲಿ ದೇವರು

ಮನುಷ್ಯನಾಗಿ ಬಂದು ಧರ್ಮಗಳನ್ನು ಆಚರಿಸಿದರೂ ಅವು ಅವರಿಗೆ ತಪ್ಪು ನಡವಳಿಕೆಯಾಗಿ ಕಾಣಿಸುತ್ತದೆ. ಅವರು ಮಾಡುವುದೇ ನಿಜವಾದ ಧರ್ಮಗಳೆಂದು, ಅವರೇ ನಿಜವಾದ ಭಕ್ತರೆಂದುಕೊಂಡು ಮನುಷ್ಯನಾಗಿ ಬಂದಿರುವ ದೇವರನ್ನು ಕೂಡಾ ಅಧರ್ಮವರನೆಂದು ನಿಂಧನೆ ಮಾಡುತ್ತಿದ್ದಾರೆ. ದೈವ ದೂಷಕನೆಂದು ದೇವರನ್ನೇ ಪ್ರಚಾರ ಮಾಡುತ್ತಿದ್ದಾರೆ. ನಿಜ ದೈವವು ಏಸು ಪ್ರಭುವಾಗಿ ಭೂಮಿ ಮೇಲೆ ಸಂಚರಿಸುತ್ತಿದ್ದಾಗ ಆತನು ಹೇಳುವವು, ಆಚರಿಸುವಂಥವಾದ ಧರ್ಮಗಳು. ಅಂದಿನ ಪಂಡಿತರಿಗು, ಸ್ವಾಮಿಗಳಿಗು, ಗುರುಗಳಿಗು ವಿರುದ್ಧವಾಗಿ ಕಾಣಿಸಿವೆ. ಆದ್ದರಿಂದಲೇ ಅಂದಿನ ಕೈಪಾನಂತಹ ಗುರುಗಳು, ಶಾಸ್ತ್ರಿಗಳು, ಪರಿಷಯ್ಯರು ಎನ್ನುವವರು ಪ್ರಭುವನ್ನು ವಿರೋಧಿಸಿ ದೂಷಿಸಿದರು. ಆದ್ದರಿಂದಲೇ ಏಸುಪ್ರಭು ಮೇಲಿನ ವಾಕ್ಯದಲ್ಲಿ **"ಧರ್ಮಶಾಸ್ತ್ರವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ ಹೊರತು ನಾಶಮಾಡುವುದಕ್ಕೆ ಬರಲಿಲ್ಲ ಎಂದನು."**

**(8) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 18ನೇ ವಚನ.**

**(18) ಆಕಾಶವೂ, ಭೂಮಿಯೂ ಗತಿಸಿ ಹೋದರೂ ಸರಿ ಧರ್ಮಶಾಸ್ತ್ರವೆಲ್ಲವೂ ನೆರವೇರುವವರೆಗು ಅದರಿಂದ ಒಂದು ಒತ್ತಕ್ಷರವಾದರೂ ಒಂದು ಸೊನ್ನೆಯಾದರೂ ತಪ್ಪಿ ಹೋಗುವು ದಿಲ್ಲವೆಂದು ನಿಶ್ಚಯವಾಗಿ ನಿಮ್ಮೊಂದಿಗೆ ಹೇಳುತ್ತಿದ್ದೇನೆ.**

ಈ ವಾಕ್ಯದಲ್ಲಿ **'ಧರ್ಮಶಾಸ್ತ್ರ'** ಎಂಬ ಪದವು ಪ್ರತ್ಯೇಕವಾಗಿ ಹೇಳಲಾಗಿದೆ. ಧರ್ಮಶಾಸ್ತ್ರ ಎಂದರೇ ಏನು? ಎನ್ನುವ ಸಂಶಯ ಕೆಲವರಿಗೆ ಬರಬಹುದು. ಅಂತಹ ಸಂಶಯಗಳು ತೀರುವುದಕ್ಕೆ ಮೊದಲು ಶಾಸ್ತ್ರವೆಂದರೆ ಏನು? ಶಾಸ್ತ್ರಗಳು ಎಷ್ಟು ವಿಧಗಳಿವೆ? ಶಾಸ್ತ್ರಗಳಲ್ಲಿ ಧರ್ಮಶಾಸ್ತ್ರ ಒಂದರ ಪ್ರತ್ಯೇಕತೆ ಏನೆಂದು ತಿಳಿಯಬೇಕಾಗಿರುತ್ತದೆ. ಮೊದಲು ಶಾಸ್ತ್ರ ಎಂಬ ಪದಕ್ಕೆ ಅರ್ಥ ತಿಳಿದುಕೊಂಡರೇ ಸ್ವಲ್ಪಮಟ್ಟಿಗೆ ಶಾಸ್ತ್ರ ವಿಷಯವು ತಿಳಿಯುತ್ತದೆ. **ಶಾಸನ** ಎಂಬ ಪದದಿಂದ **ಶಾಸ್ತ್ರ** ಎಂಬ ಪದವು ಹುಟ್ಟಿದೆ. ಶಾಸನ ಎಂದರೇ **'ತಪ್ಪದೇ ನಡೆಯುತ್ತದೆ'** ಎಂದು

ಅರ್ಥ. ಅದೇ ವಿಧಾನದ ಪ್ರಕಾರ ಶಾಸ್ತ್ರ ಅಂದರೇ **'ಹೇಳಿರುವುದು ನಡೆದು ತೀರುವುದು'** ಎಂದು ಅರ್ಥ. ಶಾಸ್ತ್ರ ಎಂಬ ಪದದಿಂದ **ಶಾಪ** ಎಂಬ ಪದವು ಹುಟ್ಟಿರುವುದು. ಶಾಪ ಎಂದರೇ! **'ತಪ್ಪದೇ ಜಾರಿಗೆ ಬರುವುದೆಂದು'** ತಿಳಿಯಬೇಕು. **ಶಾಸನ, ಶಾಪ, ಶಾಸ್ತ್ರ** ಮೂರು ಸಮಾನ ಭಾವಾರ್ಥ ಇರುವವಾಗಿ ಇವೆ. ಹೇಳಿರುವುದು ಅಥವಾ ಬರೆದಿರುವುದು ನಿರೂಪಣೆಯಾಗಿ ನಡೆಯುವುದು ಶಾಸ್ತ್ರ ಆಗಿರುವಾಗ, ಶಾಸ್ತ್ರಗಳು ಒಟ್ಟು ಆರು ವಿಭಾಗಗಳಾಗಿ ಇವೆ. ಆರು ಶಾಸ್ತ್ರಗಳು ಎರಡು ವಿಧಗಳೆಂದು ಕೆಲವರು, ಅಲ್ಲ ಮೂರು ವಿಧಗಳೆಂದು ಕೆಲವರು ಹೇಳುತ್ತಿದ್ದಾರೆ. ಒಂದು ವಿಧವಾಗಿ ಹೇಳಿದರೇ ಶಾಸ್ತ್ರಗಳು ಎರಡು ವಿಧಗಳೆಂದು ಹೇಳಬಹುದು. ಇನ್ನೊಂದು ವಿಧವಾಗಿ ನೋಡಿದರೇ ಶಾಸ್ತ್ರಗಳು ಮೂರು ವಿಧಗಳೆಂದು ಹೇಳಬಹುದು. ಎರಡು ವಿಧಗಳು ಹೇಳಿದರೇ ಒಂದು ಪ್ರಪಂಚ ಸಂಬಂಧ, ಎರಡು ಪರಮಾತ್ಮ ಸಂಬಂಧ ಎಂದು ಹೇಳಬಹುದು. ಇನ್ನೊಂದು ವಿಧವಾಗಿ ಹೇಳಿದರೇ ನಾಲ್ಕು ಪ್ರಪಂಚ ಸಂಬಂಧ ಆಗಿರುವಾಗ ಒಂದು ಪರಮಾತ್ಮ ಸಂಬಂಧವಾಗಿ ಇರುವಾಗ, ಒಂದು ಮಾತ್ರ ಪ್ರಪಂಚ ಸಂಬಂಧಕ್ಕೆ, ಪರಮಾತ್ಮ ಸಂಬಂಧಕ್ಕೆ ಮಧ್ಯದಲ್ಲಿ ಇದ್ದು ಎರಡು ವಿಧಾನಗಳಿಗೆ ಅನುಸಂಧಾನವಾಗಿ ಸ್ವಲ್ಪ ಪರಮಾತ್ಮ ಕಡೆ, ಸ್ವಲ್ಪ ಪ್ರಪಂಚ ಕಡೆ ಇದೆಯೆಂದು ಹೇಳಬಹುದು.

ಶಾಸ್ತ್ರಗಳನ್ನು ಕ್ರಮವಾಗಿ ಹೇಳಿದರೇ ಹೀಗಿವೆ. **1) ಗಣಿತಶಾಸ್ತ್ರ, 2) ಖಗೋಳಶಾಸ್ತ್ರ, 3) ರಸಾಯನ ಶಾಸ್ತ್ರ, 4) ಭೌತ ಶಾಸ್ತ್ರ, 5) ಜ್ಯೋತಿಷ್ಯ ಶಾಸ್ತ್ರ, 6) ಬ್ರಹ್ಮವಿದ್ಯಾ ಶಾಸ್ತ್ರ.** ಇದರಲ್ಲಿ ಮೊದಲ ನಾಲ್ಕು ಪ್ರಪಂಚ ಸಂಬಂಧವಾದ ವುಗಳೆಂದೂ, ಐದನೆಯದಾದ ಜ್ಯೋತಿಷ್ಯ ಶಾಸ್ತ್ರವು ಆ ಕಡೆ ಪ್ರಪಂಚ, ಈ ಕಡೆ ಪರಮಾತ್ಮ ಸಂಬಂಧಕ್ಕೆ ಅನುಸಂಧಾನವಾಗಿ ಇದೆಯೆಂದೂ ಹೇಳಬಹುದು. ಹಾಗಲ್ಲದೇ ಜ್ಯೋತಿಷ್ಯವನ್ನು ಕೂಡಾ ಪ್ರಪಂಚದಲ್ಲಿ ಬೆರೆಸಿದರೇ ಐದು ಪ್ರಪಂಚ ಸಂಬಂಧ ಶಾಸ್ತ್ರಗಳಾಗಿರುವಾಗ, ಬ್ರಹ್ಮವಿದ್ಯಾ ಶಾಸ್ತ್ರ ಒಂದು ಮಾತ್ರವೇ ದೈವ ಸಂಬಂಧವಾಗಿ ಇದೆಯೆಂದು ಹೇಳಬಹುದು. ಒಟ್ಟು ಶಾಸ್ತ್ರಗಳು ಆರಾಗಿರುವಾಗ,

ಎಲ್ಲದಕ್ಕಿಂತಲೂ ದೊಡ್ಡದು ಬ್ರಹ್ಮವಿದ್ಯಾ ಶಾಸ್ತ್ರ. ಆದ್ದರಿಂದ ಅದನ್ನು ಬ್ರಹ್ಮವಿದ್ಯಾ ಶಾಸ್ತ್ರವೆಂದು ಕರೆದಿದ್ದಾರೆ. ಬ್ರಹ್ಮ ಅಂದರೇ ದೊಡ್ಡದು ಎಂದು ಅರ್ಥ. ಅಷ್ಟೇ ಹೊರತು ಬ್ರಹ್ಮ ಎನ್ನುವುದು ಹೆಸರಲ್ಲ. ದೇವರು ಎಲ್ಲದಕ್ಕಿಂತಲೂ ದೊಡ್ಡವನು, ಎಲ್ಲರಿಗಿಂತಲೂ ದೊಡ್ಡವನಾದ್ದರಿಂದ ಆತನನ್ನು ಬ್ರಹ್ಮ (ದೊಡ್ಡವ) ಎಂದು ಕರೆದಿದ್ದಾರೆ. **ದೇವರಿಗೆ ಸಂಬಂಧಿಸಿರುವ ಶಾಸ್ತ್ರ ಆಗಿರುವುದರಿಂದ ಅದನ್ನು ಬ್ರಹ್ಮವಿದ್ಯಾ ಶಾಸ್ತ್ರ ಎಂದು ಕರೆದಿದ್ದಾರೆ.** ಉಳಿದ ಐದು ಪ್ರಪಂಚ ಶಾಸ್ತ್ರಗಳಾದ ಗಣಿತ, ಖಗೋಳ, ರಸಾಯನ, ಭೌತ, ಜ್ಯೋತಿಷ್ಯ ಶಾಸ್ತ್ರಗಳ ಹೆಸರುಗಳಲ್ಲಿ **ವಿದ್ಯೆ** ಎನ್ನುವ ಪದವಿಲ್ಲದೇ ಕೇವಲ ಅವುಗಳ ಹೆಸರುಗಳು ಮಾತ್ರ ಇವೆ. ಒಂದೇ ಒಂದು ದೇವರ ಶಾಸ್ತ್ರದಲ್ಲಿ ಮಾತ್ರ ವಿದ್ಯೆ ಎಂಬ ಪದವಿದೆ. ಹಾಗೆ ಇರುವುದಕ್ಕೆ ಕಾರಣ ಏನೆಂದು ಕೆಲವರಿಗೆ ಪ್ರಶ್ನೆ ಬರಬಹುದು, ಅದಕ್ಕೆ ಈ ವಿಧವಾಗಿ ಉತ್ತರವಿದೆ ಎಂದು ಹೇಳಬಹುದು.

ಪ್ರಪಂಚ ಸಂಬಂಧ ಶಾಸ್ತ್ರಗಳು, ಪರಮಾತ್ಮ ಸಂಬಂಧ ಶಾಸ್ತ್ರ ಎಂದು ಎರಡು ವಿಧಗಳಾಗಿ ವಿಂಗಡಿಸಿ ಹೇಳಿದ್ದಾರೆ. ಪ್ರಪಂಚ ಸಂಬಂಧ ಐದು ಶಾಸ್ತ್ರಗಳನ್ನು ಯಾರಾದರೂ ಸಂಪೂರ್ಣವಾಗಿ ತಿಳಿಯಬಹುದು. ಆದರೇ ಕೊನೆಯದಾಗಿ ಇರುವುದು, ದೊಡ್ಡದೆಂದು ಹೆಸರುವಾಸಿಯಾಗಿರುವುದು, ದೇವರ ವಿಷಯವನ್ನು, ದೇವರ ಧರ್ಮಗಳನ್ನು ತಿಳಿಸುವುದು ಆಗಿರುವ ಅದರ ಹೆಸರಿನಲ್ಲಿ ಮಾತ್ರ ವಿದ್ಯೆ ಎಂಬ ಪದವಿದೆ. ಅದನ್ನೇ ದೊಡ್ಡ ವಿದ್ಯಾಶಾಸ್ತ್ರ ಎಂದು ಹೇಳುತ್ತಿದ್ದಾರೆ. **ವಿದ್ಯೆ** ಎಂಬ ಪದವು **ವಿತ್** ಎಂಬ ಶಬ್ಧದಿಂದ ಹುಟ್ಟಿದೆ. ವಿತ್ ಅಂದರೇ ತಿಳಿಯುವುದು ಎಂದು ಅರ್ಥ. ವಿದ್ಯೆ ಅಂದರೇ ತಿಳಿದುಕೊಳ್ಳುವುದು ಎಂದು ಅರ್ಥ. ವಿದ್ಯಾರ್ಥಿ ಅಂದರೇ ವಿದ್ಯೆಯನ್ನು ಅರ್ಥಿಸುವವನೆಂದು ಅರ್ಥ. ಅರ್ಥಿಸುವುದು ಎಂದರೇ ತನ್ನ ಹತ್ತಿರ ಇಲ್ಲದ್ದನ್ನು ಇತರರ ಹತ್ತಿರ ಇರುವುದನ್ನು ಕೇಳಿ ತೆಗೆದುಕೊಳ್ಳುವುದು ಎಂದು ಅರ್ಥ. ವಿದ್ಯಾರ್ಥಿಗಳು ತಿಳಿದಿರುವ ಬೋಧಕರಿಂದ ಕಲಿತುಕೊಳ್ಳುತ್ತಿರುತ್ತಾರೆ. ವಿದ್ಯೆ ಎಂದರೇ ತಿಳಿಯಲ್ಪಡುವುದೇ ಹೊರತು ಪೂರ್ತಿ ತಿಳಿದಿರುವುದು ಅಲ್ಲವೆಂದು ಅರ್ಥವಿರುವುದರಿಂದ ದೇವರ

ಸಮಾಚಾರವನ್ನು ಪೂರ್ತಿ ಯಾರೂ ತಿಳಿಯಲಾರರು. ಹಾಗೆಯೇ ತಿಳಿದಿರುವವರು ಇಲ್ಲ. ಯಾರಾದರಾಗಲಿ ಜೀವನವೆಲ್ಲವೂ ತಿಳಿದುಕೊಳ್ಳುತ್ತಾ ಇರಬೇಕಾದ್ದೇ ಹೊರತು, ಇದು ಗಟ್ಟು (ದಡ), ನಾನು ಸಂಪೂರ್ಣವಾಗಿ ತಿಳಿದವನೆಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದೇವರ ಸಮಾಚಾರವು ಮನುಷ್ಯರು ಎಂದಿಗಾದರೂ ತಿಳಿದುಕೊಳ್ಳುತ್ತಾ ಇರಬೇಕಾಗಿರುವುದೇ ಹೊರತು ಪೂರ್ತಿ ತಿಳಿದಿದ್ದೇವೆ ಎನ್ನುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದೇವರ ಶಾಸ್ತ್ರವನ್ನು ವಿದ್ಯಾಶಾಸ್ತ್ರವೆಂದು ಎಂದೆಂದಿಗೂ ಹೇಳುತ್ತಿದ್ದಾರೆ. ಆದ್ದರಿಂದ ಅದು ಎಂದೆಂದಿಗೂ ಬ್ರಹ್ಮವಿದ್ಯಾಶಾಸ್ತ್ರವೇ. ಉಳಿದ ಐದು ಶಾಸ್ತ್ರಗಳನ್ನು ಮನುಷ್ಯ ಸಂಪೂರ್ಣವಾಗಿ ತಿಳಿದುಕೊಳ್ಳುತ್ತಿದ್ದಾನೆ. ನಂತರ ಏನೂ ತಿಳಿಯಬೇಕಾಗಿರುವುದು ಇರುವುದಿಲ್ಲ. ಆದ್ದರಿಂದ ಅವುಗಳ ಹೆಸರುಗಳ ಹಿಂದೆ 'ವಿದ್ಯೆ' ಎಂಬ ಪದವನ್ನು ಇಡಲಿಲ್ಲ.

ಬ್ರಹ್ಮನಾದ ಅಂದರೇ ದೊಡ್ಡವನಾದ ದೇವರ ಸಮಾಚಾರವನ್ನು ಸಂಪೂರ್ಣವಾಗಿ ತಿಳಿದಿರುವವನೇ ಅದನ್ನು ಇತರರಿಗೆ ಹೇಳಬಹುದು. ಮಾನವನು ಆದವನು ದೇವರ ಸಮಾಚಾರವನ್ನು ತಿಳಿಯದೆ ಇರುವಾಗ ಅದನ್ನು ಕುರಿತು ಸಂಶಯವಿಲ್ಲದೇ ಹೇಳುವವನು ಯಾರು? ಎಂಬ ಪ್ರಶ್ನೆ ಬರಬಹುದು. ಅದಕ್ಕೆ ನಮ್ಮ ಸಮಾಧಾನ ಈ ವಿಧವಾಗಿ ಇದೆ ನೋಡಿರಿ. ದೇವರ ಜ್ಞಾನವನ್ನು ಕುರಿತು ದೇವರಿಗೆ ಹೊರತುಪಡಿಸಿ ಯಾರಿಗೂ ತಿಳಿದಿಲ್ಲ. ಆದ್ದರಿಂದ ದೇವರ ಸಮಾಚಾರವು ದೇವರೇ ಹೇಳಬೇಕಾಗಿರುತ್ತದೆ. ದೇವರು ನೇರವಾಗಿ ಯಾರೊಂದಿಗೂ ಮಾತನಾಡುವುದಿಲ್ಲ. ಆದ್ದರಿಂದ ದೇವರು ದೇವರ ಹಾಗೆ ಅಲ್ಲದೇ ಮನುಷ್ಯನ ಹಾಗೆ ಮಾರುವೇಷದಲ್ಲಿ ಇದ್ದು ತನ್ನ ಜ್ಞಾನವನ್ನು ತಾನೇ ಹೇಳುತ್ತಿದ್ದಾನೆ. ಹಾಗೆಂದು ದೇವರನ್ನು ಮನುಷ್ಯನೆಂದು ಹೇಳಲಾರೆವು. ದೇವರು ಮನುಷ್ಯನ ಹಾಗೆ ಬರುತ್ತಾನೆ ಆದರೇ ಮನುಷ್ಯ ಅಲ್ಲ. ಮನುಷ್ಯನ ಆಕಾರವನ್ನು ವೇಷವಾಗಿ ಧರಿಸಿ ಬಂದಿರುವ ದೇವರು ತನ್ನ ಜ್ಞಾನವನ್ನು ಸಂಪೂರ್ಣವಾಗಿ, ಶಾಸನಗಳೊಂದಿಗೆ ಕೂಡಿಕೊಂಡ ಒಂದು ಶಾಸ್ತ್ರವಾಗಿ

ಹೇಳಿಹೋಗಿದ್ದಾನೆ. ಹಾಗೆ ದೇವರಿಂದ ಹೇಳಲ್ಪಟ್ಟಿರುವುದನ್ನೇ ಬ್ರಹ್ಮವಿದ್ಯಾ ಶಾಸ್ತ್ರ ಎಂದು ಕರೆಯುತ್ತಿದ್ದೇವೆ. ಬ್ರಹ್ಮವಿದ್ಯಾ ಶಾಸ್ತ್ರವನ್ನು ಹೇಳಿರುವವನು ಸ್ವತಃವಾಗಿ ದೇವರೇ. ಅದನ್ನು ತಿಳಿಯಬೇಕಾಗಿರುವವನು ಮನುಷ್ಯ. ಮನುಷ್ಯ ದೇವರು ಹೇಳಿರುವ ಬ್ರಹ್ಮವಿದ್ಯೆಯನ್ನು ಸಂಪೂರ್ಣವಾಗಿ ತಿಳಿದ ದಿನ ಅವನ ಕರ್ಮಗಳೆಲ್ಲವೂ ಇಲ್ಲದಂತೆ ಹೋಗಿ ದೇವರಲ್ಲಿ ಐಕ್ಯವಾಗಿ ಹೋಗಬಲ್ಲನು. ಹಾಗೆ ಮನುಷ್ಯ ಮೋಕ್ಷ ಹೊಂದುವವರೆಗು ದೇವರ ಶಾಸ್ತ್ರವನ್ನು ತಿಳಿದುಕೊಳ್ಳುತ್ತಾ ಇರಬೇಕಾದ್ದೇ. ಆದ್ದರಿಂದ ಅದಕ್ಕೆ ಬ್ರಹ್ಮವಿದ್ಯೆ ಎಂಬ ಹೆಸರನ್ನು ಶಾಶ್ವತವಾಗಿ ಇಡುವುದು ನಡೆದಿದೆ. ಪ್ರಪಂಚದಲ್ಲಿನ ವಿದ್ಯೆಗಳಿಗೆಲ್ಲಾ ದೊಡ್ಡ ವಿದ್ಯೆ ಆಗಿರುವುದರಿಂದ ಇದನ್ನು ಬ್ರಹ್ಮವಿದ್ಯೆ ಎಂದು ಹೇಳುತ್ತಿದ್ದೇವೆ.

ದೇವರು ಹೇಳಿರುವ ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ದೇವರ ಧರ್ಮಗಳು ಹೇಳಲ್ಪಟ್ಟಿವೆ. ಆದ್ದರಿಂದ ಬ್ರಹ್ಮವಿದ್ಯಾ ಶಾಸ್ತ್ರವನ್ನು ಧರ್ಮಶಾಸ್ತ್ರವೆಂದು ದೈವಗ್ರಂಥಗಳಲ್ಲಿ ಹೇಳಿದ್ದಾರೆ. ದೇವರು ಶಾಸನಗಳೊಂದಿಗೆ ಕೂಡಿರುವ ತನ್ನ ಶಾಸ್ತ್ರವನ್ನು ಸೃಷ್ಟಿ ಆದಿಯಲ್ಲಿಯೇ ಹೇಳಿದ್ದಾನೆ. ಹಾಗೆ ಹೇಳಿರುವ ಶಾಸ್ತ್ರವನ್ನು ಅನುಸರಿಸಿ ಮೂರು ದೈವಗ್ರಂಥಗಳನ್ನು ಮೂರು ಬೇರೆ ಬೇರೆ ಕಾಲಗಳಲ್ಲಿ, ಮೂರು ಬೇರೆ ಬೇರೆ ಪ್ರದೇಶಗಳಲ್ಲಿ ಹೇಳುವುದಾಗಿದೆ. ಆ ವಿಧವಾಗಿ ಹೇಳಿರುವ ಮೂರು ದೈವಗ್ರಂಥಗಳನ್ನು ಮೂರು ಧರ್ಮಶಾಸ್ತ್ರಗಳಾಗಿ ಹೇಳಬಹುದು. ಧರ್ಮಶಾಸ್ತ್ರಗಳಲ್ಲಿ ಧರ್ಮಗಳೇ ಇರುತ್ತವೆ. ಆದ್ದರಿಂದ ಮೂರು ಧರ್ಮಶಾಸ್ತ್ರಗಳು ಒಂದೇ ವಿಧಾನ ಹೊಂದಿ, ದೇವರ ಧರ್ಮಗಳನ್ನೇ ಬೋಧಿಸಿವೆಯೆಂದು ಹೇಳಬಹುದು. ಮೂರು ಧರ್ಮಶಾಸ್ತ್ರಗಳು ಬ್ರಹ್ಮವಿದ್ಯೆಗೆ ಒಳಪಟ್ಟಿರುತ್ತವೆ. ದೇವರ ಧರ್ಮಗಳನ್ನು ತಿಳಿಸಿರುತ್ತವೆ. ಆದ್ದರಿಂದ ಮೂರು ಧರ್ಮಶಾಸ್ತ್ರಗಳು ಒಂದಕ್ಕೊಂದು ಸಾಕ್ಷ್ಯವಾಗಿ ಇರುತ್ತವೆ ಹೊರತು, ವಿಭೇದಗಳು ಹೊಂದಿರುವುದಿಲ್ಲ. ಆದ್ದರಿಂದ **ಪ್ರಥಮ ದೈವಗ್ರಂಥ ಎಂದು ಭಗವದ್ಗೀತೆಯನ್ನು, ದ್ವಿತೀಯ ದೈವಗ್ರಂಥ ಎಂದು ಬೈಬಲ್‌ನ್ನು, ಅಂತಿಮ ದೈವಗ್ರಂಥವಾದ ಮೂರನೆಯ ಗ್ರಂಥವನ್ನು ಖುರ್‌ಆನ್** ಎಂದು ಹೇಳಿರುವುದು ನಡೆದಿದೆ. ಈ ಮೂರು ಗ್ರಂಥಗಳ ಹೆಸರುಗಳು

ಬೇರೆ ಬೇರೆಯಾಗಿ ಇದ್ದರೂ, ಮೂರು ಗ್ರಂಥಗಳು ಧರ್ಮಶಾಸ್ತ್ರಗಳಾಗಿ ಇದ್ದೂ, ಮೂರೂ ಒಂದೇ ದೇವರ ಧರ್ಮಗಳನ್ನು ತಿಳಿಸಿವೆ.

ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ಮೂವರು ಪ್ರವಕ್ತರು ಹೇಳಿರುವ ಜ್ಞಾನವು ಮೂರು ದೈವಗ್ರಂಥಗಳಾಗಿ ತಯಾರಾಗಿವೆ. ಆ ಮೂರು ದೈವಗ್ರಂಥಗಳು ಬೇರೆ ಬೇರೆಯಾಗಿ ಇದ್ದರೂ ಒಂದೇ ದೇವರ ಧರ್ಮಗಳನ್ನು ಕುರಿತು ಮೂರು ಕೋನಗಳಿಂದ ಹೇಳಿವೆ. ಅದರಲ್ಲಿ ಹೇಳಿರುವ ಧರ್ಮಗಳು ಶಾಸ್ತ್ರಬದ್ಧವಾದವು ಗಳಾದ್ದರಿಂದ ಪ್ರತಿಯೊಂದು ಹೇಳಿರುವವು ಹೇಳಿದ ಹಾಗೆಯೆ ನೆರವೇರುತ್ತಿರುತ್ತವೆ. ಇಲ್ಲಿ ವಾಕ್ಯದಲ್ಲಿ **"ಭೂಮಿ, ಆಕಾಶ ಗತಿಸಿ ಹೋದರಾಗಲೀ"** ಎಂದು ಹೇಳಿದ್ದಾರೆ. ಹೊರಗೆ ಕಾಣಿಸುವ ಭೂಮಿ, ಆಕಾಶ ಎಂದಿಗೂ ನಶಿಸುವವಲ್ಲ. ಅವು ಶಾಶ್ವತವಾಗಿ ಇರುವ ಹಾಗೆ ದೇವರು ತಯಾರಿ ಮಾಡಿದ್ದಾನೆ. ಹೊರಗೆ ಕಾಣಿಸುವ ಭೂಮಿ, ಆಕಾಶ ಕಾಣಿಸದೇ ಮನುಷ್ಯನ ಶರೀರದಲ್ಲಿ ಇವೆ. ಅವು ಪೂರ್ತಿ ನಶಿಸಿ ಹೋಗಬಲ್ಲವು. ಆದ್ದರಿಂದ "ಭೂಮಿ, ಆಕಾಶ ನಾಶವಾಗಿ ಹೋದರೂ" ಎಂಬ ಮಾತನ್ನು ಮನುಷ್ಯ ಧರಿಸಿರುವ ಶರೀರವು ಮರಣ ಹೊಂದುವುದೆಂದು ಅರ್ಥ ಮಾಡಿಕೊಳ್ಳಬೇಕು. ಮನುಷ್ಯ ದೇವರ ಜ್ಞಾನಕ್ಕಾಗಿ ಪ್ರಯತ್ನ ಮಾಡುತ್ತಿರುವಾಗ ದೇವರು ಹೇಳಿರುವ ಧರ್ಮಗಳೆಲ್ಲವನ್ನೂ ಮನುಷ್ಯ ಆಚರಿಸಬೇಕಾಗಿರುತ್ತದೆ. ದೇವರ ಧರ್ಮಗಳನ್ನು ಪೂರ್ತಿ ಆಚರಿಸುವವರೆಗು ಮನುಷ್ಯ ಪರಲೋಕವನ್ನು ಹೊಂದಲಾರನು. ಧರ್ಮಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಅದನ್ನು ನೆರವೇರಿಸಿದಾಗಲೇ ಮನುಷ್ಯನಿಗೆ ಮೋಕ್ಷ ಲಭ್ಯವಾಗಬಲ್ಲದು. ಧರ್ಮಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಸ್ವಲ್ಪ ಆಚರಿಸದೇ ಹೋದರೂ ಮನುಷ್ಯನಿಗೆ ಮುಕ್ತಿ ಲಭಿಸುವುದಿಲ್ಲ. **'ಹೇಳಿರುವ ಧರ್ಮಗಳಿಂದ ಸ್ವಲ್ಪ ಆಚರಿಸದೇ ಹೋದರೂ'** ಎಂದು ಹೇಳುವುದಕ್ಕೆ **'ಅದರಿಂದ ಒಂದು ಒತ್ತು ಆದರೂ, ಒಂದು ಸೊನ್ನೆಯಾದರೂ'** ಎಂದು ಹೇಳಿದ್ದಾರೆ. ಅದನ್ನು ಅನುಸರಿಸಿ ಹೇಳಿರುವುದು ಸ್ವಲ್ಪವೂ ಕೂಡಾ ಬಿಡದಂತೇ ಆಚರಿಸಬೇಕೆಂದು ತಿಳಿಯುತ್ತಿದೆ. ಒತ್ತು, ಸೊನ್ನೆ ಎಂದರೇ ಗ್ರಂಥದ ಬರಹದಲ್ಲಿನ ಒತ್ತಕ್ಷರ, ಸೊನ್ನೆ ಅಲ್ಲವೆಂದು ತಿಳಿಯಬೇಕು.

**(9) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 19ನೇ ವಚನ.**

**(19) ಈ ಆಜ್ಞೆಗಳಲ್ಲಿ ಬಹಳ ಅಲ್ಪವಾದ ಒಂದನ್ನಾದರೂ ಮೀರಿ, ಮನುಷ್ಯರಿಗೆ ಹಾಗೆಯೇ ಮಾಡಬೇಕೆಂದು ಬೋಧಿಸುವವನು ಯಾರೋ ಅವನು ಪರಲೋಕ ರಾಜ್ಯದಲ್ಲಿ ಬಹಳ ಅಲ್ಪನೆಂದು ಕರೆಯಲ್ಪಡುತ್ತಾನೆ. ಆದರೇ ಅವುಗಳನ್ನು ಕೈಗೊಂಡು ಬೋಧಿಸುವವನು ಯಾರೋ ಅವನು ಪರಲೋಕ ರಾಜ್ಯದಲ್ಲಿ ದೊಡ್ಡವನೆಂದು ಕರೆಯಲ್ಪಡುತ್ತಾನೆ.**

ದೇವರು ಹೇಳಿರುವ ಧರ್ಮಶಾಸ್ತ್ರಗಳಲ್ಲಿ ಧರ್ಮಗಳು ಮುಖ್ಯವಾದವು ಕೆಲವು ಇರುವಾಗ ಅವುಗಳಿಗೆ ಅನುಸಂಧಾನವಾದವು ಅನೇಕವು ಇರುತ್ತವೆ. ದೇವರ ಧರ್ಮಗಳನ್ನು ಮನುಷ್ಯರಿಗೆ ಹೇಳಿರುವ **'ಆಜ್ಞೆಗಳು'** ಎಂದು ಕೂಡಾ ಹೇಳುತ್ತಿದ್ದಾರೆ. ದೇವರು ಹೇಳಿರುವ ಧರ್ಮಗಳು ಅಥವಾ ಆಜ್ಞೆಗಳು ಅತ್ಯಂತ ಮಹತ್ವವಾದವು, ದೊಡ್ಡವು **ಎರಡೇ** ಇರುವಾಗ ಅವುಗಳಿಗೆ ಅನುಸಂಧಾನವಾದವು ಇನ್ನೂ ಕೆಲವು ಇವೆ. ಹಾಗಿರುವ ಉಪಧರ್ಮಗಳಲ್ಲಿ ಬಹಳ ಚಿಕ್ಕದಾದ ಒಂದನ್ನಾದರೂ ಅತಿಕ್ರಮಿಸಿ ಹೇಳುವವನು ಅತ್ಯಂತ ನೀಚನು ಆಗುತ್ತಾನೆ. ದೇವರು ಹೇಳಿರುವ ಚಿಕ್ಕ ಧರ್ಮವಾದರೂ, ದೊಡ್ಡ ಧರ್ಮವಾದರೂ ಯಾವುದಾದರೂ ಮನುಷ್ಯ ಅತಿಕ್ರಮಿಸದೆ ತಪ್ಪದೆ ಆಚರಿಸಬೇಕಾಗಿರುತ್ತದೆ. ಚಿಕ್ಕ ಧರ್ಮವನ್ನು ಕೂಡಾ ಬಿಡದೆ ಮನುಷ್ಯ ಆಚರಿಸದೆ ದೊಡ್ಡದಾಗಿ ಹೇಳಿಕೊಳ್ಳಬೇಕಾಗಿರುವುದು ಬಿಟ್ಟು, ಅದನ್ನು ಲೆಕ್ಕಿಸದೆ ತಾನು ಕೆಟ್ಟುಹೋಗಿ ಅಧರ್ಮವರನು ಆಗುವುದೇ ಅಲ್ಲದೇ ತನಗೆ ತಿಳಿದಿರುವ ಅಧರ್ಮಗಳನ್ನು ಇತರರಿಗೆ ಬೋಧಿಸುವವರು ಇದ್ದಾರೆ. ಬೋಧಿಸುವವರು ಗುರುಗಳಾಗಿ ಚಲಾವಣೆ ಆಗುತ್ತಿದ್ದಾರೆ. ಲೋಕದಲ್ಲಿ ಗುರುಗಳಾಗಿದ್ದು ದೈವಗ್ರಂಥದಲ್ಲಿನ ದೇವರ ಆಜ್ಞೆಗಳಲ್ಲಿನ (ದೇವರ ಧರ್ಮಗಳಲ್ಲಿ) ಯಾವುದನ್ನಾದರೂ ಅರ್ಥ ಮಾಡಿಕೊಳ್ಳದೇ ಅಪಾರ್ಥವನ್ನು, ಅಧರ್ಮವಾಗಿ ಗ್ರಹಿಸಿ "ಕೋತಿ ತಾನು ಕೆಟ್ಟಿದ್ದಲ್ಲದೆ

ವನವನ್ನೆಲ್ಲಾ ಕೆಡಿಸಿತು" ಎನ್ನುವಂತೆ ತಾನು ಧರ್ಮಗಳಲ್ಲಿ ಕೆಟ್ಟವನಾಗಿದ್ದು, ದೈವಗ್ರಂಥವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಅಧರ್ಮವಾಗಿ ತಿಳಿದವನು ತಾನು ಸ್ವತಃವಾಗಿ ಅಧರ್ಮವರನಾಗಿ ಹೋಗುವುದೇ ಅಲ್ಲದೇ ಇತರರಿಗೂ ಕೂಡಾ ತನಗೆ ತಿಳಿದಿರುವ ಅಧರ್ಮಗಳನ್ನೇ ಬೋಧಿಸುವುದರಿಂದ ಪ್ರಜೆಗಳನ್ನು ಕೂಡಾ ತಪ್ಪುದಾರಿಯಲ್ಲಿ ಕಳುಹಿಸಿ, ಅವರು ಹೇಳಿರುವುದೇ ನಿಜವಾದ ಜ್ಞಾನವೆಂದು, ನಿಜವಾದ ದೇವರ ಧರ್ಮಗಳೆಂದು ಹೇಳುತ್ತಿರುತ್ತಾರೆ. ಹಾಗೆ ಹೇಳುವವರು ಪ್ರಜೆಗಳ ದೃಷ್ಠಿಯಲ್ಲಿ ದೊಡ್ಡ ಹೆಸರು ಪಡೆದಿರುವ ಗುರುಗಳಾಗಿ ಇದ್ದರೂ ದೇವರ ದೃಷ್ಠಿಯಲ್ಲಿ ಬಹಳ ಅಲ್ಪರು.

ದೇವರ ಧರ್ಮಗಳನ್ನು ಸಕ್ರಮವಾಗಿ ಅರ್ಥ ಮಾಡಿಕೊಂಡವನು ದೊಡ್ಡದಾಗಿ ಹೆಸರು ಪಡೆದಿರುವ ಗುರು ಆಗದಿದ್ದರೂ, ಜ್ಞಾನವನ್ನು ತಿಳಿಯಬೇಕೆಂದು ತನ್ನ ಬಳಿಗೆ ಬರುವ ಮನುಷ್ಯರಿಗೆ ತನಗೆ ತಿಳಿದಿರುವ ಧರ್ಮಗಳನ್ನು ಧರ್ಮಗಳಾಗಿಯೇ ಬೋಧಿಸುವವರು ಕೂಡಾ ಇದ್ದಾರೆ. ದೇವರು ತನ್ನ ಗ್ರಂಥದಲ್ಲಿ ಹೇಳಿರುವ ಧರ್ಮಗಳನ್ನು ಅಧರ್ಮಗಳಾಗಿ ಅರ್ಥ ಮಾಡಿಕೊಂಡು, ಅಧರ್ಮಗಳನ್ನೇ ಪ್ರಜೆಗಳಿಗೆ ಬೋಧಿಸುವವರು ಕೂಡಾ ಇದ್ದಾರೆ. ಹಾಗೆ ಅಧರ್ಮಗಳನ್ನು ಬೋಧಿಸುವವರು ಪರಲೋಕ ರಾಜ್ಯವನ್ನು ಹೊಂದಲಾರರು. ಪರಲೋಕ ರಾಜ್ಯವನ್ನು ಅಜ್ಞಾನಿಗಳೊಂದಿಗೆ ಹೋಲಿಸಿ ನೋಡಿದರೇ ಅಂಥವರು ಎಂದಿಗೂ ಪರಲೋಕವನ್ನು ಹೊಂದಲಾರರು. ಅವರಿಗಾಗಿ ಶಾಶ್ವತವಾಗಿ ಪರಲೋಕವು ಮುಚ್ಚಲ್ಪಟ್ಟಿರುತ್ತದೆ. ಅವನು ಪರಲೋಕರಾಜ್ಯವನ್ನು ಕಳೆದುಕೊಂಡಿರುವ ಅಲ್ಪನೆಂದು ಹೇಳಬಹುದು. ಅವನು ಲೋಕದಲ್ಲಿ ದೊಡ್ಡ ಗುರುವಾಗಿ ಚಲಾವಣೆ ಆದರೂ ಫರವಾಗಿಲ್ಲ ಆದರೇ, ಮೋಕ್ಷವೆಂಬ ಪರಲೋಕವು ಲಭಿಸುವುದಿಲ್ಲ. ದೈವಗ್ರಂಥದಿಂದ ದೇವರು ಹೇಳಿರುವ ಆಜ್ಞೆಗಳನ್ನು ಧರ್ಮಗಳನ್ನು ಗ್ರಹಿಸಿದವನು ಗುರು ಅಲ್ಲದೇ ಹೋದರೂ ತನಗೆ ತಿಳಿದಿರುವ ಧರ್ಮಗಳನ್ನು ಇತರರಿಗೆ ಬೋಧಿಸುವವನಿಗೆ ಪರಲೋಕದಲ್ಲಿ ದೊಡ್ಡ ಸ್ಥಾನ ಇರುತ್ತದೆ. ಅಂಥವನನ್ನು ಧರ್ಮವರನು ಎನ್ನುವುದೇ ಅಲ್ಲದೇ, ಅವನು ದೇವರ ದೃಷ್ಠಿಯಲ್ಲಿ ದೊಡ್ಡವನಾಗಿ ಲೆಕ್ಕಿಸಲ್ಪಡುತ್ತಾನೆ. ದೇವರ

ಧರ್ಮಗಳಲ್ಲಿ ಚಿಕ್ಕ ಧರ್ಮವನ್ನಾದರೂ ವಿವರವಾಗಿ ಬೋಧಿಸುವವನನ್ನು ನಿಜವಾದ ಧರ್ಮವರನೆಂದು ಹೇಳಬಹುದು.

**(10) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 20ನೇ ವಚನ.**

## (20) ಶಾಸ್ತ್ರಿಗಳ ನೀತಿಗಿಂತಲು, ಪರಿಶಯ್ಯರ ನೀತಿಗಿಂತಲೂ, ನಿಮ್ಮ ನೀತಿ ಅಧಿಕವಾಗದ ಪಕ್ಷದಲ್ಲಿ, ನೀವು ಪರಲೋಕ ರಾಜ್ಯದಲ್ಲಿ ಪ್ರವೇಶಿಸಲಾರರೆಂದು ನಿಮ್ಮೊಂದಿಗೆ ಹೇಳುತ್ತಿದ್ದೇನೆ.

ಲೋಕದಲ್ಲಿ ಶಾಸ್ತ್ರಿಗಳೆಂದು, ಭಕ್ತರೆಂದು, ಬೋಧಕರೆಂದು ಹೇಳಿಕೊಳ್ಳುವವರು ಅನೇಕರು ಇದ್ದಾರೆ. ಅವರಿಗೆ ತಿಳಿದಿರುವ ಜ್ಞಾನಕ್ಕಿಂತಲೂ ನೀವು ತಿಳಿದ ಜ್ಞಾನವು ಅಧಿಕವಾಗಿ ಇರಬೇಕು. ಹಾಗಲ್ಲದೇ ಅವರಿಗೆ ತಿಳಿದಿರುವ ಜ್ಞಾನಕ್ಕಿಂತಲೂ ಕಡಿಮೆ ಜ್ಞಾನ ತಿಳಿದವರು ಪರಲೋಕದಲ್ಲಿ ಪ್ರವೇಶಿಸಲಾರರೆಂದು ದೇವರು ಹೇಳಿದ್ದಾನೆ. ಇದನ್ನು ಅನುಸರಿಸಿ "ಪ್ರಪಂಚದಲ್ಲಿ ಸ್ವಾಮಿಗಳೆಂದು, ಶಾಸ್ತ್ರಿಗಳೆಂದು ಹೇಳುತ್ತಾ ಅನೇಕವಾಗಿ ಯಜ್ಞಯಾಗಾದಿಗಳನ್ನು ಮಾಡುತ್ತಾ, ದೇವರು ಹೇಳಿರುವುದಕ್ಕೆ ವಿರುದ್ಧವಾಗಿ ಪ್ರವರ್ತಿಸುವವರಿಗಿಂತ ನೀವು ಹೆಚ್ಚು ಜ್ಞಾನವನ್ನು ತಿಳಿದುಕೊಂಡಾಗ ನಿಮಗೆ ಪರಲೋಕ ಸುಲಭವಾಗಿ ಲಭ್ಯವಾಗ ಬಲ್ಲದು" ಎಂದು ಈ ವಾಕ್ಯದಲ್ಲಿ ಹೇಳಿದ್ದಾರೆ.

**(11) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 28ನೇ ವಚನ.**

## (28) ಒಬ್ಬ ಸ್ತ್ರೀಯನ್ನು ಮೋಹದ ದೃಷ್ಟಿಯಿಂದ ನೋಡುವ ಪ್ರತಿಯೊಬ್ಬನು ಆಗಲೇ ತನ್ನ ಹೃದಯದಲ್ಲಿ ಆಕೆಯೊಂದಿಗೆ ವ್ಯಭಿಚಾರ ಮಾಡಿದವನಾಗುತ್ತಾನೆ.

ಮನುಷ್ಯ ಎರಡು ವಿಧಗಳಾಗಿ ಕಾರ್ಯಗಳನ್ನು ಮಾಡುತ್ತಿದ್ದಾನೆ. ಒಂದು ಹೊರಗೆ ಪ್ರತ್ಯಕ್ಷವಾಗಿ ಮಾಡುವ ಕಾರ್ಯಗಳಾಗಿರುವಾಗ, ಎರಡನೆಯದು

ಪ್ರತ್ಯಕ್ಷವಾಗಿ ಅಲ್ಲದೇ ಹೊರಗೆ ಯಾರಿಗೂ ತಿಳಿಯದೇ ಅಂತರಂಗದಲ್ಲಿ ಭಾವಗಳಿಂದ ಮಾಡುವ ಕಾರ್ಯಗಳು ಇರುತ್ತವೆ. ಎರಡು ಕಾರ್ಯಗಳ ವಿಧಾನ ಪ್ರತಿ ಮನುಷ್ಯನಲ್ಲಿ ಇರುತ್ತದೆ. ಎಲ್ಲಾ ಗುಣಗಳಿಗು ಸಂಬಂಧಿಸಿದ ಕಾರ್ಯಗಳು ಮನುಷ್ಯನ ಒಳಗಿನ ಭಾವನೆಯಿಂದ ಮಾಡುವುದು ಒಂದು ವಿಧಾನವಾಗಿರುವಾಗ, ಅದೇ ಗುಣಗಳಿಂದ ಸ್ಥೂಲ ಶರೀರದ ಮೂಲಕ ಹೊರಗೆ ಮಾಡುವುದು ಒಂದು ವಿಧಾನವಾಗಿ ಇರುತ್ತದೆ. ಮನುಷ್ಯ ಮಾಡುವ ಕೆಲಸಗಳ ಮೂಲಕ ಪಾಪಪುಣ್ಯ ಕರ್ಮಗಳು ಬರುತ್ತಿರುತ್ತವೆ. ಆದರೇ ಆ ಕೆಲಸಗಳು ಕಾಣಿಸುವವು, ಕಾಣಿಸದೇ ಇರುವವು ಎಂದು ಎರಡು ವಿಧಗಳಾಗಿ ಇರುವುದರಿಂದ **ಸ್ಥೂಲ ಶರೀರದ ಮೂಲಕ ಮಾಡುವ ಕೆಲಸಗಳನ್ನು ಅನುಸರಿಸಿ ಅವನನ್ನು ಒಳ್ಳೆಯವನು ಅಥವಾ ಕೆಟ್ಟವನು ಎಂದು ಹೇಳಬಹುದು. ಕಾಣಿಸದಂತೆ ಅಂತರಂಗದಲ್ಲಿನ ಭಾವನೆಗಳಿಂದ ಮಾಡುವ ಕೆಲಸಗಳನ್ನು ಅನುಸರಿಸಿ ಯಾರನ್ನೂ ಒಳ್ಳೆಯವರನ್ನಾಗಿ ಆಗಲೀ, ಕೆಟ್ಟವರನ್ನಾಗಿ ಆಗಲೀ ಹೇಳಲು ಸಾಧ್ಯವಿಲ್ಲ**. ಯಾವ ಕಾರ್ಯ ಮಾಡುವುದು ತಿಳಿಯದೆ ಇರುವಾಗ ಒಬ್ಬನನ್ನು ಒಳ್ಳೆಯವನನ್ನಾಗಿ, ಕೆಟ್ಟವನನ್ನಾಗಿ ಗುರುತಿಸಲು ಸಾಧ್ಯವಿಲ್ಲ.

ಮನುಷ್ಯ ಮಾಡುವ ಸ್ಥೂಲಕಾರ್ಯಕ್ಕಾಗಲೀ, ಸೂಕ್ಷ್ಮಕಾರ್ಯಕ್ಕಾಗಲೀ ಮನುಷ್ಯನಲ್ಲಿನ **ಅಹಂಭಾವವೇ** ಕರ್ಮಗಳನ್ನು ತಂದಿಡುತ್ತಿದೆ. ಮನುಷ್ಯ ಪಾಪವನ್ನು ಹೊಂದುವುದಕ್ಕಾಗಲೀ, ಪುಣ್ಯವನ್ನು ಹೊಂದುವುದಕ್ಕಾಗಲೀ ಅವನ ಶರೀರದಲ್ಲಿ **ಅಹಂ** ಅನ್ನು ಅನುಸರಿಸಿ ಇರುತ್ತದೆ. ಮನುಷ್ಯ ಸ್ಥೂಲವಾಗಿ ಮಾಡುವ ಕಾರ್ಯಗಳಲ್ಲಿ ಶರೀರ ಬಾಹ್ಯ ಅವಯವಗಳು ಕೆಲಸ ಮಾಡುತ್ತಿರುತ್ತವೆ. ಆದರೇ ಆಗಲೂ ಕೂಡಾ ಒಳಗಿನ ಭಾವವಾದ ಅಹಂಭಾವ ಕೆಲಸ ಮಾಡುವುದರಿಂದ ನಡೆದಿರುವ ಆ ಕಾರ್ಯಗಳಲ್ಲಿನ ಕರ್ಮವೆಂಬ ಪಾಪಪುಣ್ಯಗಳು ಮನುಷ್ಯನ ಕರ್ಮ ಚಕ್ರದಲ್ಲಿ ಸೇರುತ್ತಿರುತ್ತವೆ. ಹಾಗೆಯೇ ಮನುಷ್ಯ ಸ್ಥೂಲ ಶರೀರದಿಂದ ಕೆಲಸ ಮಾಡದಿದ್ದರೂ ಮನುಷ್ಯ ಗುಣಗಳ ಭಾವಗಳನ್ನು ಬುದ್ಧಿಯಿಂದ ಯೋಚಿಸಿದಾಗಲೂ ಕೂಡಾ ಪಕ್ಕದಲ್ಲೇ ಇರುವ ಅಹಂ ಬುದ್ಧಿ ಯೋಚನೆಗಳಲ್ಲಿನ

ಭಾವವನ್ನು ಅನುಸರಿಸಿ ಅವನಿಗೆ ಕರ್ಮಗಳನ್ನು ಅಂಟಿಸುತ್ತಿರುತ್ತದೆ. ಅಹಂ ಇಲ್ಲದೇ ಸ್ಥೂಲವಾಗಿ ಆಗಲೀ, ಸೂಕ್ಷ್ಮವಾಗಿ ಆಗಲೀ ಕೆಲಸಗಳನ್ನು ಮಾಡುವುದರಿಂದ ಮನುಷ್ಯನಿಗೆ ಕರ್ಮಗಳು ಅಂಟುವುದಿಲ್ಲ. ಹಾಗಲ್ಲದೇ ಅಹಂ ಕೆಲಸ ಮಾಡುವುದರಿಂದ ಮಾಡದ ಕೆಲಸಗಳಲ್ಲಿ ಕೂಡಾ ಆಲೋಚನೆ ಕೆಲಸ ಮಾಡಿದಷ್ಟು ಮಾತ್ರಕ್ಕೆ ಪಾಪಪುಣ್ಯಗಳು ಬರುತ್ತಿವೆ. ಆದ್ದರಿಂದ ಪ್ರಥಮ ದೈವಗ್ರಂಥದಲ್ಲಿ **"ಯಾರ ಭಾವನೆಯಲ್ಲಿ ಅಹಂ ಇಲ್ಲವೋ ಅವನು ಲೋಕದಲ್ಲಿ ಇರುವವರೆಲ್ಲರನ್ನೂ ಕೊಂದರೂ ಅವನಿಗೆ ಹತ್ಯಾ ಪಾಪವು ಬರುವುದಿಲ್ಲ. ಅವನು ಹಂತಕನಾಗಿ ಲೆಕ್ಕಿಸಲ್ಪಡುವುದಿಲ್ಲ"** ಎಂದು ಕೊನೆಯ ಅಧ್ಯಾಯವಾದ ಮೋಕ್ಷ ಸನ್ಯಾಸ ಯೋಗವೆಂಬ ಅಧ್ಯಾಯದಲ್ಲಿ ಹದಿನೇಳನೆಯ (17) ಶ್ಲೋಕದಲ್ಲಿ ಹೇಳಿದ್ದಾರೆ. ಇಲ್ಲಿ ಅಹಂಭಾವವೇ ಮುಖ್ಯವಾಗಿರುವುದರಿಂದ ಅಹಂ ಭಾವವನ್ನು ಹೊಂದದೇ ಮಾಡುವ ಹತ್ಯೆಯಲ್ಲಿ ಕೂಡಾ ಹತ್ಯಾ ಪಾಪ ಅಂಟುವುದಿಲ್ಲವೆಂದು, ಹತ್ಯೆ ಮಾಡಿದವನನ್ನು ಹಂತಕನೆನ್ನುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಾಗಿದೆ. ಅದೇ ವಿಷಯವನ್ನೇ ಏಸು **"ಅಹಂ ಭಾವದಿಂದ ಮಾಡದ ಕೆಲಸದಲ್ಲಾದರೂ ಆಲೋಚನೆ ಮಾಡಿದಷ್ಟು ಮಾತ್ರಕ್ಕೆ ಪಾಪ ಬರುತ್ತದೆ"** ಎಂದು ಹೇಳಿದ್ದಾರೆ. ಇದನ್ನು ಅನುಸರಿಸಿ ಪ್ರಥಮ ದೈವಗ್ರಂಥದಲ್ಲಿ, ದ್ವಿತೀಯ ದೈವಗ್ರಂಥದಲ್ಲಿ, ಹೇಳಿರುವವನು ಒಬ್ಬನೇಯೆಂದು, ಹೇಳಲ್ಪಟ್ಟ ಜ್ಞಾನವು ಒಂದೇಯೆಂದೂ ತಿಳಿಯಲ್ಪಡುತ್ತಿದೆ. ಸ್ಥೂಲವಾಗಿ ಮಾಡಿರುವ ಕೆಲಸದಲ್ಲಿ ಅಹಂ ಇಲ್ಲದೆಹೋದರೇ ಆ ಕೆಲಸ ನಡೆಯದಂತೆ ಲೆಕ್ಕಿಸಲ್ಪಡುತ್ತದೆಂದು ಸೂಕ್ಷ್ಮವಾಗಿ ಯೋಚನೆ ಮಾಡಿದರೂ ಅದರಲ್ಲಿ 'ಕೆಲಸ ಮಾಡದಿದ್ದರೂ' **ಅಹಂ** ಇರುವುದರಿಂದ ಆ ಕೆಲಸ ನಡೆದಂತೇಯೆಂದು ಹೇಳುವುದರಿಂದ ಮನುಷ್ಯನ ಶರೀರದೊಳಗೆ ಅಹಂ ಎನ್ನುವುದೇ ಪಾಪಪುಣ್ಯ ಕರ್ಮಗಳನ್ನು ಜೀವಿಗೆ ಅಂಟಿಸುತ್ತಿದೆ ಎಂದು ತಿಳಿಯುತ್ತಿದೆ. ಆದ್ದರಿಂದ 'ಸ್ಥೂಲವಾಗಿ ಮಾಡಿರುವ ಕೆಲಸಗಳಲ್ಲಿ ಅಹಂಕಾರ ಭಾವವಿಲ್ಲದೇ ಮಾಡುವುದನ್ನು ಕರ್ಮಯೋಗ' ಎಂದು ಪೂರ್ವವು ಸೃಷ್ಠಿ ಆದಿಯಲ್ಲಿ ಹೇಳಲಾಗಿದೆ. ಅದನ್ನೇ ಪ್ರಥಮ ದೈವಗ್ರಂಥದಲ್ಲಿಯು, ದ್ವಿತೀಯ ದೈವಗ್ರಂಥದಲ್ಲಿಯು ಹೇಳಿದ್ದಾರೆ.

**(12) ಮತ್ತಾಯ ಸುವಾರ್ತೆ, 5ನೇ ಅಧ್ಯಾಯ, 29, 30ನೇ ವಚನಗಳು.**

**(29) ನಿನ್ನ ಬಲಗಣ್ಣು ನಿನ್ನನ್ನು ಅಭ್ಯಂತರ ಪಡಿಸಿದ ಪಕ್ಷದಲ್ಲಿ ಅದನ್ನು ಕಿತ್ತು ನಿನ್ನ ಬಳಿಯಿಂದ ಬಿಸಾಡು. ನಿನ್ನ ದೇಹವೆಲ್ಲವೂ ನರಕದಲ್ಲಿ ಬೀಳದಂತೆ ನಿನ್ನ ಅವಯವಗಳಲ್ಲಿ ಒಂದು ನಾಶವಾಗು ವುದು ನಿನಗೆ ಪ್ರಯೋಜನಕರ ಅಲ್ಲವೇ!**

**(30) ನಿನ್ನ ಬಲಗೈ ನಿನ್ನನ್ನು ಅಭ್ಯಂತರ ಪಡಿಸಿದ ಪಕ್ಷದಲ್ಲಿ ಅದನ್ನು ಕತ್ತರಿಸಿ ನಿನ್ನ ಬಳಿಯಿಂದ ಬಿಸಾಡು. ನಿನ್ನ ದೇಹವೆಲ್ಲವು ನರಕದಲ್ಲಿ ಬೀಳದಂತೆ ನಿನ್ನ ಅವಯವಗಳಲ್ಲಿ ಒಂದು ನಾಶವಾಗುವುದು ನಿನಗೆ ಪ್ರಯೋಜನಕರ ಅಲ್ಲವೇ!**

ಈ ಎರಡು ವಾಕ್ಯಗಳಲ್ಲಿ 29ನೇ ವಾಕ್ಯದಲ್ಲಿ **'ಕಣ್ಣನ್ನು'** ಕುರಿತು ಹೇಳಿದ್ದಾರೆ. 30ನೇ ವಾಕ್ಯದಲ್ಲಿ **'ಕೈ'**ಯನ್ನು ಕುರಿತು ಹೇಳಿದ್ದಾರೆ. ಇಲ್ಲಿ ಹೇಳಿರುವ ವಿಧಾನವನ್ನು ಅನುಸರಿಸಿ ಚೆನ್ನಾಗಿ ಗಮನಿಸಿದರೇ ಮನುಷ್ಯನಿಗೆ ಸ್ಥೂಲ ಶರೀರ, ಸೂಕ್ಷ್ಮ ಶರೀರ ಎಂಬ ಎರಡು ಶರೀರ ಭಾಗಗಳಿವೆ. ಅದರಲ್ಲಿ ಸ್ಥೂಲ ಶರೀರ ಭಾಗಗಳು ಹತ್ತು (10) ಆಗಿರುವಾಗ, ಸೂಕ್ಷ್ಮಶರೀರ ಭಾಗಗಳು ಹದಿನೈದು (15) ಇವೆ. ಒಟ್ಟು ಸ್ಥೂಲ, ಸೂಕ್ಷ್ಮ ಶರೀರ ಭಾಗಗಳು ಜೀವಿಯೊಂದಿಗೆ ಸಹ 25 ಇವೆ. ಶರೀರದಲ್ಲಿ ಪ್ರತ್ಯೇಕವಾದ ಕೆಲಸ ಮಾಡುವುದನ್ನು ಪ್ರತ್ಯೇಕ ಭಾಗವಾಗಿ ಗುರುತಿಸುತ್ತಿದ್ದಾರೆ. ಆ ವಿಧವಾಗಿ ನೋಡಿದರೇ ಹತ್ತು ಕಾಣಿಸುವ ಸ್ಥೂಲಶರೀರ ಭಾಗಗಳಿವೆ. ಅದರಲ್ಲಿ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದೆಂದು ಹೇಳಬಹುದು. ಸ್ಥೂಲವಾಗಿ ಕೆಲಸ ನಡೆಯುವುದರಲ್ಲಿ ಎರಡು ವಿಧಗಳ ಅವಯವಗಳು ಕೆಲಸ ಮಾಡುತ್ತವೆ. ಜ್ಞಾನೇಂದ್ರಿಯಗಳು ವಿಷಯವನ್ನು ಒಳಗಡೆಗೆ ತಿಳಿಸಿದರೇ, ಆ ವಿಷಯಗಳು ಮನಸ್ಸಿನ ಮೂಲಕ ಇಂದ್ರಿಯ ಭಾಗಗಳ ಬಳಿಯಿಂದ ಬುದ್ಧಿಗೆ ಸೇರುತ್ತವೆ. ಒಳಗಿನಿಂದ ಬುದ್ಧಿ ತಿಳಿಸಿರುವ ಸಮಾಚಾರ ವನ್ನು ಮನಸ್ಸು ಹೊರಗಿನ ಕರ್ಮೇಂದ್ರಿಯಗಳಾದ ಐದು ಭಾಗಗಳಿಗೆ

ತಿಳಿಸುತ್ತಿರುತ್ತದೆ. ಜ್ಞಾನೇಂದ್ರಿಯಗಳು ಐದು ಕ್ರಮವಾಗಿ ಹೀಗಿವೆ. **ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ** ಹಾಗೆಯೇ ಕರ್ಮೇಂದ್ರಿಯಗಳು ಐದು ಹೀಗಿವೆ. **ಕೈ, ಕಾಲು, ಬಾಯಿ, ಗುದ, ಗುಹ್ಯ (ಲಿಂಗ)** ಎಂದು ಹೇಳಬಹುದು. ಜ್ಞಾನೇಂದ್ರಿಯಗಳು ಹೊರಗಿನ ಸಮಾಚಾರವನ್ನು ಒಳಗಡೆಗೆ ಸೇರಿಸುತ್ತಿರುವಾಗ, ಅಂತರಂಗದಲ್ಲಿನ ಬುದ್ಧಿ ತಿಳಿಸಿದ ಸಮಾಚಾರವನ್ನು ಮನಸ್ಸಿನ ಮೂಲಕ ಕರ್ಮೇಂದ್ರಿಯಗಳಿಗೆ ಸೇರಿಸಲ್ಪಡುತ್ತದೆ. ಬುದ್ಧಿ ಹೇಳಿರುವುದನ್ನು ಕರ್ಮೇಂದ್ರಿಯ ಗಳು ಕಾರ್ಯವಾಗಿ ಆಚರಿಸುತ್ತವೆ.

ಜ್ಞಾನೇಂದ್ರಿಯ, ಕರ್ಮೇಂದ್ರಿಯ ಸಮನ್ವಯದಿಂದ ಮನುಷ್ಯ ಕಾರ್ಯಗಳನ್ನು ಮಾಡುತ್ತಿದ್ದಾನೆ. ಜ್ಞಾನೇಂದ್ರಿಯಗಳಲ್ಲಿ **ಕಣ್ಣು** ಪ್ರಧಾನ ವಾದುದೆಂದು, ಕರ್ಮೇಂದ್ರಿಯಗಳಲ್ಲಿ **ಕೈ** ಪ್ರಧಾನವಾದುದೆಂದು ಹೇಳುತ್ತಿರುತ್ತಾರೆ. ಆದ್ದರಿಂದ ಎರಡು ವಾಕ್ಯಗಳಲ್ಲಿ ಜ್ಞಾನೇಂದ್ರಿಯವಾದ ಕಣ್ಣನ್ನು, ಹಾಗೆಯೇ ಕರ್ಮೇಂದ್ರಿಯವಾದ ಕೈಯನ್ನು ಕುರಿತು ಹೇಳಿದ್ದಾರೆ. ಕಣ್ಣು ನೋಡುವುದರಿಂದ ಹೊರಗಿನ ಸಮಾಚಾರ ಒಳಗೆ ಹೋಗಿ, ಬುದ್ಧಿ ಆಲೋಚಿಸಿ ಹೊರಗಡೆ ಕರ್ಮೇಂದ್ರಿಯಗಳಿಗೆ ಸಮಾಚಾರವನ್ನು ತಿಳಿಸಿ ಕಾರ್ಯವನ್ನು ಮಾಡೆಂದು ಹೇಳದಿದ್ದರೂ ಕೇವಲ ಬುದ್ಧಿ ಆಲೋಚಿಸುವುದರಿಂದ, ಒಳಗಿನ ಬುದ್ಧಿಗೆ ಪಕ್ಕದಲ್ಲೇ ಅನುಸಂಧಾನವಾಗಿ ಇರುವ ಅಹಂ ಕೆಲಸ ಮಾಡುವುದರಿಂದ, ಹೊರಗೆ ಕಾರ್ಯ ನಡೆಯದಿದ್ದರೂ ಬುದ್ಧಿ ಆಲೋಚನೆಯ ಮೂಲಕ ಪಾಪ ಬರುವುದಕ್ಕೆ ಅವಕಾಶವಿದೆ. ಆದ್ದರಿಂದ ಮೊದಲು ಕಣ್ಣು ನೋಡುವುದರಿಂದಲೇ ಅಲ್ಲವೇ ಪಾಪ ಬರುವ ಅವಕಾಶವಿದೆ. ಒಬ್ಬ ಸ್ತ್ರೀಯನ್ನು ನೋಡುವುದರಿಂದ ಒಳಗಿನ ಕಾಮಗುಣದಿಂದ ಆಲೋಚಿಸುವುದರಿಂದ ಕಾರ್ಯರಹಿತವಾದರೂ, ಅಹಂಭಾವದಿಂದ ಕಾರ್ಯ ನಡೆದ ಹಾಗೆ ಲೆಕ್ಕಿಸಲ್ಪಡುವುದರಿಂದ ಪಾಪ ಬರುವುದಕ್ಕೆ ಅವಕಾಶ ಏರ್ಪಡುತ್ತಿದೆ. ನಡೆಯದ ಕಾರ್ಯಕ್ಕು ಕೂಡಾ ಪಾಪ ಬರುವ ಅವಕಾಶವನ್ನು ಮೊದಲಿಗೇ ಜ್ಞಾನೇಂದ್ರಿಯವಾದ ಕಣ್ಣು ಉಂಟು ಮಾಡುತ್ತಿದೆ. ಆದ್ದರಿಂದ ಜ್ಞಾನೇಂದ್ರಿಯವಾದ 'ಕಣ್ಣನ್ನು ಕಿತ್ತು ಬಿಸಾಡು' ಎಂದು

ಹೇಳಿದ್ದಾರೆ. ಹಾಗೆಂದು ವಾಕ್ಯದಲ್ಲಿ ಹೇಳಿದ ಹಾಗೆ ಸ್ಥೂಲವಾಗಿ ಇರುವ ಕಣ್ಣನ್ನು ಕಿತ್ತು ಹಾಕಬಾರದು. ವಾಕ್ಯದಲ್ಲಿ 'ನಿನ್ನ ಬಲಗಣ್ಣು' ಎಂದು ಹೇಳಿದ್ದಾರೆ ಪಾಪ ಬಲಗಣ್ಣಿನಿಂದ ಬರುತ್ತಿದೆಯೆಂದು ಹೇಳಲಾರೆವು. ಬಲಗಣ್ಣು ಮಾಡುವ ಕೆಲಸವನ್ನು ಎಡ ಕಣ್ಣು ಕೂಡಾ ಮಾಡುತ್ತಿದೆ ಅಲ್ಲವೇ! ಎರಡು ಕಣ್ಣುಗಳ ದೃಷ್ಠಿಯಿಂದಲೇ ಅಲ್ಲವೇ! ಪಾಪವು ಬರುತ್ತಿದೆ. ಹಾಗಿರುವಾಗ ವಾಕ್ಯದಲ್ಲಿ ಹೇಳಿರುವುದು ಬಲಗಣ್ಣನ್ನು ಮಾತ್ರವೇ ಅಲ್ಲವೇ! ಹಾಗೆ ಹೇಳುವುದರಿಂದ ನಾವು ಆಲೋಚಿಸಿ ಮಾಡಬೇಕಾಗಿದೆ.

ಅದು ಏನೆಂದರೇ! ಮನುಷ್ಯನ ಶರೀರದಲ್ಲಿ ಬಲ, ಎಡ ಎಂಬ ಎರಡು ಭಾಗಗಳಿವೆ. ಬಲಗಡೆ ಬಲವಾಗಿ, ಎಡಗಡೆ ಬಲ ಕಡಿಮೆಯಾಗಿ ಇರುವುದು ಸಹಜ. ಎಲ್ಲಾದರೂ ಬಲಗಡೆ ಶರೀರಭಾಗವು ಅಳತೆಯಲ್ಲಾಗಲೀ, ಬಲದಲ್ಲಾಗಲೀ ಎಡಗಡೆಗಿಂತಲೂ ಹೆಚ್ಚಾಗಿಯೇ ಇರುತ್ತದೆ. ಕಣ್ಣಾಗಲೀ, ಕೈಯಾಗಲೀ ಎರಡೂ ಬಲಗಡೆ ಭಾಗಗಳನ್ನೇ ವಾಕ್ಯದಲ್ಲಿ ಹೇಳಿದ್ದಾರೆ. ಅಷ್ಟೇ ಅಲ್ಲದೇ ಈ ವಾಕ್ಯದಲ್ಲಿ ಆಲೋಚಿಸತಕ್ಕ ಮತ್ತೊಂದು ವಿಷಯ ಇದೆ. ಅದೇನೆಂದರೇ! **'ನಿನ್ನ ದೇಹವೆಲ್ಲವೂ ನರಕದಲ್ಲಿ ಬೀಳದಂತೆ ನಿನ್ನ ಅವಯವಗಳಲ್ಲಿ ಒಂದು ನಾಶವಾಗುವುದು ನಿನಗೆ ಪ್ರಯೋಜನಕರ ಅಲ್ಲವೇ!'** ಎಂದು ಹೇಳಿದ್ದಾರೆ. ವಾಸ್ತವವಾಗಿ ಶರೀರದಲ್ಲಿನ ಕಣ್ಣಾಗಲೀ, ಹಾಗೆಯೇ ಕೈಯಾಗಲೀ ಬರುವ ಪಾಪಕ್ಕೆ ಕಾರಣವಲ್ಲ. ಬರುವ ಪಾಪಕ್ಕೆ ಕಾರಣವಾದುದು ನಿನ್ನ ಶರೀರದಲ್ಲಿನ **ಅಹಂ** ಎಂಬ ಭಾವವೇ ಎಂದು ತಿಳಿಯುತ್ತಿದೆ. ಅದೇ ವಿಷಯವನ್ನೇ ಪ್ರಥಮ, ದ್ವಿತೀಯ ದೈವಗ್ರಂಥಗಳು ತಿಳಿಸುತ್ತಿವೆ. ಆದ್ದರಿಂದ ಪಾಪವನ್ನು ಸಂಪಾದಿಸುವುದರಲ್ಲಾಗಲೀ, ಅನುಭವಿಸುವುದರಲ್ಲಾಗಲೀ ಶರೀರದ ಹೊರಗಿನ ಭಾಗಗಳಿಗೆ ಎಂತಹ ಸಂಬಂಧವಿಲ್ಲ. **ಪಾಪವನ್ನು ಸಂಪಾದಿಸುವುದು ಮನುಷ್ಯ ಶರೀರದಲ್ಲಿನ ಅಹಂಭಾವ. ಪಾಪವನ್ನು ಅನುಭವಿಸುವುದು ಶರೀರದಲ್ಲಿನ ಜೀವಿಯು.** ಕರ್ಮಗಳನ್ನು ಸಂಪಾದಿಸುವುದರಲ್ಲಿ ಅಹಂಭಾವಕ್ಕು, ಅನುಭವಿಸುವುದರಲ್ಲಿ ಜೀವಾತ್ಮಕ್ಕು ಸಂಬಂಧವಿರುವುದರಿಂದ ಹೊರಗಿನ ಜ್ಞಾನೇಂದ್ರಿಯವಾದ

ಕಣ್ಣಾಗಲೀ, ಕರ್ಮೇಂದ್ರಿಯವಾದ ಕೈಯಾಗಲೀ ಕರ್ಮಗಳಿಗೆ ಸಂಬಂಧವಿಲ್ಲದೇ ನಿಮಿತ್ತಮಾತ್ರವಾಗಿ ಕೆಲಸ ಮಾಡುತ್ತಿವೆ.

ಕಣ್ಣಿಗೆ, ಕೈಯಿಗೆ ಕರ್ಮಗಳೊಂದಿಗೆ ಸಂಬಂಧ ಇಲ್ಲದಿರುವಾಗ ಕಣ್ಣನ್ನು ಕಿತ್ತುಹಾಕು, ಕೈಯನ್ನು ಕತ್ತರಿಸಿ ಹಾಕು ಎಂದು ಏಸು ಯಾಕೆ ಹೇಳಿದ್ದಾನೆಂದು ಕೆಲವರಿಗೆ ಅನುಮಾನ ಬರಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೇ! ನಿನ್ನ ಕಣ್ಣು ಹೊರಗಿನ ಸಮಾಚಾರವನ್ನು ತಿಳಿಸಿದಾಗ ಅದು ಬುದ್ಧಿಗೆ ಸೇರುತ್ತದೆ. ಆಗ ಬುದ್ಧಿ ಗುಣಗಳಿಂದ ಆಲೋಚಿಸುತ್ತದೆ. ಅದರ ನಂತರ ಆ ವಿಷಯದಿಂದ ಅಹಂ ಸಂಬಂಧಪಡದೆ **ಅಹಂ ಅನ್ನು ಅಣಗಿಸಿ ಹಾಕುವುದರಿಂದ** ಕಣ್ಣು ತಿಳಿಸಿರುವ ದೃಶ್ಯದಲ್ಲಿ, ಬುದ್ಧಿ ಆಲೋಚಿಸಿದ ಗುಣಗಳಲ್ಲಿ ಯಾವ ಪಾಪವಾಗಲೀ, ಪುಣ್ಯವಾಗಲೀ ಬರದೇ ಹೋಗುತ್ತದೆ. ಹಾಗೆ ಮಾಡುವುದರಿಂದ ಅಂದರೇ ಕಣ್ಣು ತಿಳಿಸಿದ ಸಮಾಚಾರದಿಂದ ಒಳಗೆ ಅಹಂ ಸಂಬಂಧವಿಲ್ಲದೇ ಮಾಡುವುದರಿಂದ, ಕಣ್ಣಿನಿಂದ ಬರುವ ಪಾಪವು ನಿವಾರಿಸಲ್ಪಡುವುದರಿಂದ ಆತನು ಕಣ್ಣನ್ನು ಇಲ್ಲದಂತೆ ಮಾಡಿಕೊಂಡ ಹಾಗಾಗುತ್ತದೆ. ಹಾಗೆಯೇ ಕೇಳುವಿಕೆಯಿಂದ ಬರುವ ವಿಷಯದಿಂದ ಅಹಂ ಅನ್ನು ಸಂಬಂಧವಿಲ್ಲದಂತೆ ಮಾಡುವುದರಿಂದ ಕಿವಿಯನ್ನು ಇಲ್ಲದಹಾಗೆ ಮಾಡಿದಂತಾಗುತ್ತದೆ. ಒಂದು ಕಣ್ಣಿನಿಂದಲೇ ಪಾಪಪುಣ್ಯಗಳು ಬರುತ್ತಿಲ್ಲ. ಉಳಿದ ನಾಲ್ಕು ಜ್ಞಾನೇಂದ್ರಿಯಗಳಿಂದ ಕೂಡಾ ಬರುತ್ತಿವೆ. ಆದ್ದರಿಂದ ಜ್ಞಾನೇಂದ್ರಿಯಗಳಲ್ಲಿ ಕಣ್ಣು ಮುಖ್ಯವಾದುದು ಆಗಿರುವಾಗ, ಎರಡು ಕಣ್ಣುಗಳಲ್ಲಿ ಬಲಗಣ್ಣಿಗೆ ಸಹಜವಾಗಿ ಹೆಚ್ಚು ದೃಷ್ಟಿ ಇರುವುದರಿಂದ ವಾಕ್ಯದಲ್ಲಿ 'ಬಲಗಣ್ಣನ್ನು ಕಿತ್ತು ಹಾಕು' ಎಂದು ಹೇಳಿದ್ದಾನೆ. ಈ ವಾಕ್ಯವು ಸ್ಥೂಲವಾಗಿ ಕಾಣಿಸುತ್ತಿದ್ದರೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

ಅದೇ ವಿಧವಾಗಿ ಕರ್ಮೇಂದ್ರಿಯಗಳಲ್ಲಿ ಬಲಗೈಯನ್ನು ಕುರಿತು ಹೇಳಿದ್ದಾರೆ. ಒಂದು ಬಲಗೈಯಿಂದಲೇ ಅಲ್ಲದೇ ಉಳಿದ ಕರ್ಮೇಂದ್ರಿಯಗಳಿಂದ ಮಾಡುವ ಕೆಲಸಗಳಲ್ಲಿ ಕೂಡಾ ಕರ್ಮಗಳು ಬರುತ್ತಿವೆ. ಜ್ಞಾನೇಂದ್ರಿಯಗಳು ಕೆಲಸ ಮಾಡದಿದ್ದರೂ ಕರ್ಮಗಳು ಬರುತ್ತಿರುವಾಗ, ಕರ್ಮೇಂದ್ರಿಯಗಳು

ಕೆಲಸ ಮಾಡುವುದರಿಂದ ಕರ್ಮಗಳು ಬರುತ್ತಿವೆ. ಜ್ಞಾನೇಂದ್ರಿಯಗಳು ಐದು ಎಂದು ಹೇಳಿದಾಗ ಎರಡು ಕಣ್ಣುಗಳನ್ನು ಒಂದಾಗಿಯೇ ಲೆಕ್ಕಿಸಿ ಹೇಳಿದ್ದೇವೆ. ಹಾಗೆಯೇ ಎರಡು ಕಿವಿಗಳನ್ನು ಒಂದಾಗಿಯೇ ಹೇಳಿದ್ದೇವೆ. ಮೂಗಿನರಂಧ್ರಗಳು ಎರಡು ಇರುವಾಗ ಒಂದೇ ಮೂಗು ಎಂದು ಹೇಳಿದ್ದೇವೆ. ಉಳಿದ ಚರ್ಮವು, ನಾಲಿಗೆ ಒಂದಾಗಿಯೇ ಇವೆ. ಹಾಗೆಯೇ ಕರ್ಮೇಂದ್ರಿಯಗಳಲ್ಲಿ ಎರಡು ಕೈಗಳನ್ನು ಒಂದಾಗಿಯೇ ಲೆಕ್ಕಿಸಿದ್ದೇವೆ. ಹಾಗೆ ಎರಡು ಕಾಲುಗಳನ್ನು ಒಂದಾಗಿಯೇ ಹೇಳಿದ್ದೇವೆ. ಉಳಿದ ಮೂರು ಬಾಯಿ, ಗುದ, ಲಿಂಗ ಜೊತೆಯಾಗಿ ಇಲ್ಲದೇ ಒಂದಾಗಿಯೇ ಇವೆ. ಎರಡು ಜೊತೆಗಳಾಗಿ ಇರುವ ಅವುಗಳಲ್ಲಿ ಬಲಗಣ್ಣಿಗೆ, ಬಲಗೈಗೆ ಹೆಚ್ಚು ಬಲವಿರುವುದರಿಂದ, ಹೆಚ್ಚು ದೃಷ್ಠಿ ಬಲಗಣ್ಣಿಗೆ, ಹೆಚ್ಚು ಕಾರ್ಯಗಳು ಬಲಗೈಗೆ ಇರುವುದರಿಂದ "ಬಲಗಣ್ಣು, ಬಲಗೈ" ಎಂದು ವಾಕ್ಯದಲ್ಲಿ ಪ್ರತ್ಯೇಕವಾಗಿ ಹೇಳಿದ್ದಾರೆ. ವಾಕ್ಯದಲ್ಲಿ ಹೇಳಿರುವ ಸೂಕ್ಷ್ಮಭಾವದ ಪ್ರಕಾರ **ಕಣ್ಣಿನ ನೋಟದಿಂದ ಬರುವ ಪಾಪವನ್ನು, ಕೈ ಮಾಡುವ ಕಾರ್ಯದಿಂದ ಬರುವ ಪಾಪವನ್ನು ಇಲ್ಲದಂತೆ, ಬಾರದಂತೆ ಅಹಂ ಅನ್ನು ಅಣಗಿಸಿ ಹಾಕಿರಿ** ಎಂದು ಹೇಳಿದ್ದಾನೆ ಹೊರತು ಕಣ್ಣನ್ನು ಕಿತ್ತುಹಾಕುವುದರಿಂದಾಗಲೀ, ಕೈಯನ್ನು ಕತ್ತರಿಸಿ ಹಾಕುವುದರಿಂದಾಗಲೀ ಬರುವ ಕರ್ಮ ನಿಂತುಹೋಗುವುದಿಲ್ಲ. ಉಳಿದ ಅವಯವ ಭಾಗಗಳಿಂದ ಬರುತ್ತದೆ. ಪಾಪಕ್ಕೆ ಕಾರಣವಾದುದು ಕೊನೆಯದಾಗಿ ಅಹಂ ಇದೆ, ಆದ್ದರಿಂದ ಅದನ್ನು ಇಲ್ಲದಂತೆ ಮಾಡೆಂದು ಹೇಳುವುದೇ ವಾಕ್ಯದಲ್ಲಿ ಇದೆಯೆಂದು ತಿಳಿಯಬೇಕು. ಮುಖ್ಯವಾಗಿ ತಿಳಿಯಬೇಕಾದ್ದೇನೆಂದರೇ! ಶರೀರ ಅವಯವಗಳು ಪಾಪವನ್ನು ಸಂಪಾಧಿಸುವುದಿಲ್ಲ. ಶರೀರವು ಪಾಪವನ್ನು ಅನುಭವಿಸುತ್ತಿಲ್ಲ. ಶರೀರದೊಳಗೆ ಪಾಪವನ್ನು ಸಂಪಾಧಿಸುವುದು ಅಹಂ ಎನ್ನುವ ಭಾಗ. ಹಾಗೇ ಪಾಪವನ್ನಾಗಲೀ ಪುಣ್ಯವನ್ನಾಗಲೀ ಅನುಭವಿಸುವುದು ಶರೀರದಲ್ಲಿ ಒಂದು ಭಾಗವಾಗಿರುವ ಜೀವಾತ್ಮ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ವಾಯುಗಳು, ಐದು ಜ್ಞಾನೇಂದ್ರಿಯಗಳಿಗೆ ಇರುವ ಸಾಮರ್ಥ್ಯಗಳು, ಐದು ಅಂತಃಕರಣಗಳು. ಅಂತಃಕರಣಗಳಲ್ಲಿ ಜೀವಿಯು ಕೂಡಾ ಇದ್ದಾನೆ. ಆದ್ದರಿಂದ

ಜೀವಿಯೊಂದಿಗೆ ಸಹ ಶರೀರದಲ್ಲಿ ಇಪ್ಪತ್ತೈದು (25) ಭಾಗಗಳಿವೆಯೆಂದು ಹೇಳಬಹುದು. ಶರೀರ ಯಂತ್ರಾಂಗವನ್ನು ಚೆನ್ನಾಗಿ ತಿಳಿದರೇ ಇಲ್ಲಿ ಏಸು ಪ್ರಭು ಹೇಳಿರುವ ವಾಕ್ಯಗಳು ಅರ್ಥವಾಗುತ್ತವೆ. ಜ್ಞಾನಿಯಾದವನು ಶರೀರವು 25 ಭಾಗಗಳಾಗಿ ಇದೆಯೆಂದು ತಿಳಿದಿರುತ್ತಾನೆ. ಹಾಗೆ ತಿಳಿಯದವನನ್ನು ಜ್ಞಾನಿ ಎಂದು ಕರೆಯಲಾರೆವು ಎಂದು ಒಬ್ಬ ಆಧ್ಯಾತ್ಮಿಕ ನಿಪುಣ ತನ್ನ ಪದ್ಯದಲ್ಲಿ ಈ ವಿಧವಾಗಿ ಹೇಳಿದ್ದಾರೆ ನೋಡಿ.

**ಪಂಚತತ್ತ್ವಗಳನ್ನು ಪಂಚೀಕರಿಸದೆ**
**ಒಳ್ಳೆಯ ಯತಿಗಳೆಂಬ ಮಾತುಗಳು**
**ಪುಟ್ಟಿ ಕೆಳಗೆ ಆನೆ ಮೊಟ್ಟೆ ಇಟ್ಟ ವಿಧವಾಗಿ**
**ಅಖಿಲ ಜೀವಸಂಗ ಆತ್ಮಲಿಂಗ**

**(13) ಮತ್ತಾಯ ಸುವಾರ್ತೆ, 6ನೇ ಅಧ್ಯಾಯ, 3, 4ನೇ ವಚನಗಳು.**

**(3) ನೀನು ಧರ್ಮ ಮಾಡುವಾಗ ನಿನ್ನ ಧರ್ಮವು ರಹಸ್ಯವಾಗಿ ಇರುವ ನಿಮಿತ್ತ ನಿನ್ನ ಬಲಗೈ ಮಾಡುವುದು ನಿನ್ನ ಎಡಗೈಗೆ ತಿಳಿಯದೆ ಇರಬೇಕು.**

**(4) ಹಾಗಾದರೇ ರಹಸ್ಯವಾಗಿ ನೋಡುವ ನಿನ್ನ ತಂದೆ ನಿನಗೆ ಪ್ರತಿಫಲ ಕೊಡುತ್ತಾನೆ.**

ಈ ವಾಕ್ಯವನ್ನು ಕುರಿತು ಬಹಳ ಜನ ಬೋಧಕರು ವಕ್ರೀಕರಿಸಿ ಧರ್ಮವನ್ನು ದಾನವಾಗಿ ಹೇಳುತ್ತಿದ್ದಾರೆ. ಕೆಲವು ಪ್ರಾರ್ಥನಾಲಯಗಳಲ್ಲಿ ದೇವರ ಸೇವೆಗೆ ಕೊಡುವ ಹಣವನ್ನು ಯಾರಿಗೂ ಕಾಣಿಸದ ಹಾಗೆ ಬಲಗೈಯಿಂದ ಕೊಟ್ಟರೇ ಎಡಕೈಗೆ ಕೂಡಾ ತಿಳಿಯಬಾರದೆಂದು ಹೇಳುವುದು ನಡೆಯುತ್ತಿದೆ. ಹಾಗೆಯೇ ಕೈಯನ್ನು ಮುಚ್ಚಿಟ್ಟುಕೊಂಡು ಕಾಣಿಕೆಗಳು ಕೊಡುವುದು ಮಾಡುತ್ತಿದ್ದಾರೆ. ವಾಸ್ತವವಾಗಿ ವಾಕ್ಯದಲ್ಲಿ ಹೇಳಿರುವುದು ಧರ್ಮವನ್ನು

ಕುರಿತಾಗಿಯೇ ಹೊರತು, ದಾನವನ್ನು ಕುರಿತಲ್ಲ. ದಾನಕ್ಕು, ಧರ್ಮಕ್ಕು ನರಿಗೂ ನಾಗಲೋಕಕ್ಕೂ ಇರುವಷ್ಟು ವ್ಯತ್ಯಾಸ ಇದೆ. **ಒಬ್ಬರಿಗೆ ಕೊಡುವುದು ದಾನ. ಒಬ್ಬನು ಆಚರಿಸುವುದು ಧರ್ಮ**. ಮೊದಲು ಧರ್ಮಗಳು ಯಾವುವೊ ತಿಳಿದುಕೊಂಡರೇ ನಂತರ ಧರ್ಮಗಳನ್ನು ಮಾಡುವ ವಿಧಾನವು ಕೂಡಾ ತಿಳಿಯುತ್ತದೆ. ಈ ವಾಕ್ಯದಲ್ಲಿ ದಾನವನ್ನು ಕುರಿತು ಸ್ವಲ್ಪವಾದರೂ ಹೇಳಿಲ್ಲ, ಧರ್ಮವನ್ನು ಕುರಿತಾಗಿಯೇ ಹೇಳಿದ್ದಾರೆ. ದೇವರ ಧರ್ಮಗಳು ದೈವಗ್ರಂಥದಲ್ಲಿ ಹೇಳಿದ ಹಾಗೆ ಮುಖ್ಯವಾಗಿ ಎರಡೇ ಇವೆ. ಮತ್ತೊಂದು ಸ್ಥೂಲವಾದುದು ಇದೆ. ಆ ಮೂರು ಧರ್ಮಗಳಿಗೆ ಅನುಸಂಧಾನವಾದ ಧರ್ಮಗಳು ಕೆಲವು ಇವೆ. ಮನುಷ್ಯ ದೇವರನ್ನು ಸೇರುವುದಕ್ಕೆ ಕೆಲಸಕ್ಕೆ ಬರುವವು ಮೂರು ಮುಖ್ಯವಾದ ಧರ್ಮಗಳಾಗಿರುವಾಗ ದೇವರನ್ನು ಕುರಿತಿರುವವು ಇನ್ನೂ ಕೆಲವು ಇವೆ. ಆದರೇ ಮನುಷ್ಯ ಆಚರಿಸಬೇಕಾಗಿರುವವು, ದೇವರನ್ನು ಸೇರಿಕೊಳ್ಳುವುದಕ್ಕೆ ಅವಶ್ಯವಾದ ಮೂರು ಧರ್ಮಗಳೇ ಮುಖ್ಯವಾದವು.

ದೇವರನ್ನು ಸೇರುವುದಕ್ಕೆ ಬೇಕಾಗಿರುವ ಬ್ರಹ್ಮ, ಕರ್ಮ, ಭಕ್ತಿ ಯೋಗಗಳು ಮೂರು ಧರ್ಮಗಳಲ್ಲಿ ಎರಡು ಒಳಗಿನ ಭಾವನೆಗಳೊಂದಿಗೆ ಕೂಡಿರುವ ವಾಗಿದ್ದರೇ, ಒಂದು ಬಾಹ್ಯ ಆಚರಣೆಯಿಂದ ಕೂಡಿರುವುದಾಗಿ ಇದೆ. ಎರಡು ಧರ್ಮಗಳನ್ನು ಆಚರಿಸುವುದು ಇತರೆ ಮನುಷ್ಯರು ಗುರುತಿಸಲಾರರು. ಒಂದು ಧರ್ಮವನ್ನು ಆಚರಿಸುವುದು ಇತರರು ತಿಳಿಯುವುದಕ್ಕೆ ಅವಕಾಶವಿದೆ. ಆದ್ದರಿಂದ ವಾಕ್ಯದಲ್ಲಿ ಕೂಡಾ ಧರ್ಮ ಎಂದು ಏಕವಚನವಾಗಿ ಹೇಳಿದ್ದಾರೆ. ಒಂದು ಧರ್ಮವೇ ಇತರರು ಗುರುತಿಸುವ ಹಾಗೆ ಇರುವುದರಿಂದ ಆ ಒಂದು ಧರ್ಮವನ್ನು ಕುರಿತಾಗಿಯೇ ಏಕ ವಚನವಾಗಿ 'ಧರ್ಮ' ಎಂದು ಹೇಳಿದ್ದಾರೆ ಹೊರತು, 'ಧರ್ಮಗಳು' ಎಂದು ಹೇಳಲಿಲ್ಲವೆಂದು ಗ್ರಹಿಸಬೇಕು. ಇತರರು ತಿಳಿಯುವುದಕ್ಕೆ ಅವಕಾಶವಿರುವ ಒಂದು ಧರ್ಮವನ್ನು ಕೂಡಾ ಇತರರಿಗೆ ತಿಳಿಯದಂತೆ ಜಾಗ್ರತೆಯಾಗಿ ಮಾಡಬೇಕೆಂದು ತಿಳಿಸುವ ನಿಮಿತ್ತ **"ನಿನ್ನ ಬಲಗೈ ಮಾಡುವುದು ಎಡಗೈಗೆ ತಿಳಿಯದಂತೆ ಮಾಡಬೇಕೆಂದು"** ಹೇಳಿದ್ದಾರೆ. ಇತರರು

ನೀನು ಆಚರಿಸುವ ಧರ್ಮವನ್ನು ನೋಡಿ ಚೆನ್ನಾಗಿರುವುದಕ್ಕಿಂತಲೂ ಕೆಟ್ಟುಹೋಗುವ ಅವಕಾಶವೇ ಹೆಚ್ಚಾಗಿದೆ. ಆದ್ದರಿಂದ ನೀನು ಧರ್ಮವನ್ನು ಮಾಡುವಾಗ ಅಂದರೇ ಆಚರಿಸುವಾಗ ಇತರರಿಗೆ ತಿಳಿಯದಂತೆ ಮಾಡಬೇಕೆಂದು ಹೇಳಿದ್ದಾರೆ.

**(14) ಮತ್ತಾಯ ಸುವಾರ್ತೆ, 6ನೇ ಅಧ್ಯಾಯ, 6ನೇ ವಚನ.**

**(6) ನೀನು ಪ್ರಾರ್ಥನೆ ಮಾಡುವಾಗ ನಿನ್ನ ಕೋಣೆಯೊಳಗೆ ಹೋಗಿ ಬಾಗಿಲು ಮುಚ್ಚಿ ರಹಸ್ಯವಾಗಿರುವ ನಿನ್ನ ತಂದೆಯನ್ನು ಪ್ರಾರ್ಥನೆ ಮಾಡು. ಆಗ ರಹಸ್ಯವಾಗಿ ನೋಡುವ ನಿನ್ನ ತಂದೆ ನಿನಗೆ ಪ್ರತಿಫಲ ಕೊಡುತ್ತಾನೆ.**

ಮನುಷ್ಯ ದೇವರನ್ನು ಧರ್ಮದಿಂದ ಪ್ರಾರ್ಥಿಸಬೇಕು. ಪ್ರಾರ್ಥನೆ ಎಂದರೇ! ಧರ್ಮಬದ್ಧವಾಗಿ ಇರಬೇಕು. ಧರ್ಮದಿಂದ ಕೂಡಿರುವ ಪ್ರಾರ್ಥನೆ ಅಲ್ಲದೇ ಬಾಯಿಂದ ಮಾತುಗಳ ರೂಪದಲ್ಲಿ ಮಾಡುವುದು ಧರ್ಮಕ್ಕೆ ಸಂಬಂಧಿಸಿರುವುದು ಮತ್ತು ದೇವರನ್ನು ಸೇರುವುದು ಅಲ್ಲ. ಆದ್ದರಿಂದ ಇತರರಿಗೆ ತಿಳಿಯುವ ಹಾಗೆ ಇರುವ ಧರ್ಮದಿಂದ ಕೂಡಿಕೊಂಡಿರುವ ಪ್ರಾರ್ಥನೆ ಮಾಡುವಾಗ ಕೋಣೆಯೊಳಗೆ ಹೋಗಿ ಇತರರು ಬಾರದ ಹಾಗೆ ಬಾಗಿಲು ಹಾಕಿ ರಹಸ್ಯವಾಗಿರುವ ಆತ್ಮನನ್ನು ಪ್ರಾರ್ಥನೆ ಮಾಡಬೇಕು. ಮನುಷ್ಯರಿಗೆ ತಂದೆ ಮನುಷ್ಯರ ಶರೀರದಲ್ಲಿ ಇರುವ ಆತ್ಮವೇಯೆಂದು ತಿಳಿಯಬೇಕು. ಇತರರಿಗೆ ತಿಳಿಯುವ ಪ್ರಾರ್ಥನೆ ಯಾರಿಗೂ ತಿಳಿಯದಂತೆ ಮಾಡಬೇಕು. ಹಾಗೆ ಮಾಡುವುದರಿಂದ ಶರೀರದಲ್ಲಿ ರಹಸ್ಯವಾಗಿ ಇರುವ ಆತ್ಮ ನಿನಗೆ ಪ್ರತಿಫಲ ಕೊಡುತ್ತದೆ. ಆತ್ಮವನ್ನು ಆರಾಧಿಸುವ ಪ್ರಾರ್ಥನೆಯನ್ನು ಪ್ರಥಮ ದೈವಗ್ರಂಥದಲ್ಲಿ **'ದೊಡ್ಡ ಯೋಗ'** ಎಂದು ಹೇಳಿದ್ದಾರೆ. ಅದನ್ನೇ ಇನ್ನೊಂದು ವಿಧವಾಗಿ **'ಬ್ರಹ್ಮಯೋಗ'** ಎಂದು ಹೇಳಿದ್ದಾರೆ.

**(15) ಮತ್ತಾಯ ಸುವಾರ್ತೆ, 6ನೇ ಅಧ್ಯಾಯ, 7, 8ನೇ ವಚನಗಳು.**

**(7) ನೀವು ಪ್ರಾರ್ಥನೆ ಮಾಡುವಾಗ ಅನ್ಯ ಜನರ ಹಾಗೆ ವ್ಯರ್ಥವಾದ ಮಾತುಗಳನ್ನು ಆಡಬೇಡ. ವಿಸ್ತಾರವಾಗಿ ಮಾತನಾಡುವುದರಿಂದ ತಮ್ಮ ಮನವಿ ಕೇಳಿಸುವುದೆಂದು ಅವರು ತಿಳಿಯುತ್ತಿದ್ದಾರೆ.**

**(8) ನೀವು ಅವರ ಹಾಗೆ ಇರಬೇಡಿ, ನೀವು ನಿಮ್ಮ ತಂದೆಯನ್ನು ಕೇಳುವ ಮೊದಲೇ ನಿಮಗೆ ಅಕ್ಕರೆಯಾಗಿ ಇರುವವು ಯಾವುವೋ ಆತನಿಗೆ ತಿಳಿಯುತ್ತದೆ.**

ಇಂದಿನ ಸಮಾಜದಲ್ಲಿ ಬಹಳಜನ ದೇವರನ್ನು ಸೇರುವಂತಹ ಧರ್ಮಯುಕ್ತವಾದ **"ಯೋಗ"** ಎಂಬ ಪ್ರಾರ್ಥನೆ ಮಾಡದೆ ವ್ಯರ್ಥವಾದ ಮಾತುಗಳಿಂದ ಕೂಡಿಕೊಂಡಿರುವ ಪ್ರಾರ್ಥನೆ ಮಾಡುತ್ತಿದ್ದಾರೆ. ಹೆಚ್ಚಾಗಿ ಮಾತುಗಳ ರೂಪದಲ್ಲಿ ಕೇಳುವುದರಿಂದ ತಮ್ಮ ಕೋರಿಕೆಯನ್ನು ದೇವರು ತೀರಿಸುತ್ತಾನೆಂದು ಅಂದುಕೊಳ್ಳುತ್ತಿದ್ದಾರೆ. ಅವರ ಹಾಗೆ ನೀನು ಪ್ರಾರ್ಥನೆ ಮಾಡಬೇಡ. ನೀವು ದೇವರಲ್ಲಿ ಐಕ್ಯವಾಗಿ ಹೋಗುವ ಪ್ರಾರ್ಥನೆ ಮಾಡದೆ ಪ್ರಪಂಚ ಲಾಭಗಳು, ಪ್ರಪಂಚ ವಸ್ತುಗಳನ್ನು ಕೋರುವ ಪ್ರಾರ್ಥನೆ ಮಾಡುತ್ತಿದ್ದೀರಿ. ನೀವು ಕೇಳುವವು, ನೀವು ನಿಮ್ಮ ತಂದೆಯಾದ ಆತ್ಮನನ್ನು ಕೇಳುವ ಮೊದಲೇ ಆತನಿಗೆ ಎಲ್ಲ ತಿಳಿದಿದೆ. ನಿಮಗೆ ಕೊಡಬೇಕಾಗಿರುವವು ಯಾವುವೋ, ಕೊಡಬಾರದವು ಯಾವುವೋ ಮೊದಲೇ ಆತನಿಗೆ ತಿಳಿದಿದೆ. ಆದ್ದರಿಂದ ಪ್ರಪಂಚ ಸಂಬಂಧ ಲಾಭಗಳನ್ನು ಕುರಿತು ನೀವು ಕೇಳಿದರೂ, ಕೇಳದಿದ್ದರೂ ಒಂದೇ. ನಿಮಗೆ ತಂದೆಯಾಗಿರುವ ಆತ್ಮ ನಿಮ್ಮ ಕರ್ಮಗಳನ್ನು ಅನುಸರಿಸಿ ನಿಮ್ಮನ್ನು ನಡೆಸುತ್ತಿರುತ್ತಾನೆ. ಆದ್ದರಿಂದ ಗತಜನ್ಮದಲ್ಲಿ ನೀವು ಸಂಪಾದಿಸಿಕೊಂಡಿರುವ ಪ್ರಕಾರವೇ ಆತ್ಮ ನಿಮಗೆ ಕೊಡುತ್ತಿರುತ್ತದೆ. ಕೇಳಿದ್ದೀರೆಂದು ಕೊಡುವುದಾಗಲೀ, ಕೇಳಲಿಲ್ಲವೆಂದು ಕೊಡದೆ ಹೋಗುವುದಾಗಲೀ ಇರುವುದಿಲ್ಲ. ಎಲ್ಲಾ ಕರ್ಮವನ್ನು

ಅನುಸರಿಸಿ ಆತ್ಮ ಒದಗಿಸುತ್ತದೆಂದು ತಿಳಿಯಬೇಕು. ಆತ್ಮ ಮನುಷ್ಯರಿಗೆ ತಂದೆಯಾಗಿರುವಾಗ, ಆತ್ಮಗೆ ತಂದೆಯಾಗಿರುವ ಪರಿಶುದ್ಧಾತ್ಮ ಎಲ್ಲವನ್ನೂ ಸಾಕ್ಷಿ ಭೂತನಾಗಿ ನೋಡುತ್ತಾ ಇರುತ್ತಾನೆ.

**(16) ಮತ್ತಾಯ ಸುವಾರ್ತೆ, 7ನೇ ಅಧ್ಯಾಯ, 13, 14ನೇ ವಚನಗಳು.**

**(13) ಇಕ್ಕಟ್ಟಾದ ದ್ವಾರದಲ್ಲಿ ಪ್ರವೇಶಿಸು. ನಾಶಕ್ಕೆ ಹೋಗುವ ದ್ವಾರವು ಅಗಲವಾಗಿಯೂ, ಆ ದಾರಿ ವಿಶಾಲವಾಗಿಯೂ ಇದೆ. ಅದರ ಮೂಲಕ ಪ್ರವೇಶಿಸುವವರು ಅನೇಕರು ಇದ್ದಾರೆ.**

**(14) ಜೀವಕ್ಕೆ ಹೋಗುವ ದ್ವಾರವು ಇಕ್ಕಟ್ಟಾಗಿದ್ದು, ಸಂಕುಚಿತವಾಗಿ ಇದೆ. ಅದನ್ನು ಕಂಡುಕೊಳ್ಳುವವರು ಕೆಲವರೇ.**

ಅನುಭವಗಳಿರುವ ಈ ಲೋಕದಲ್ಲಿ ಎರಡು ಮಾರ್ಗಗಳಿವೆ. ಒಂದು ಪರಮಾತ್ಮ (ಪರಿಶುದ್ಧಾತ್ಮ) ಮಾರ್ಗ, ಎರಡನೆಯದು ಮಾಯೆ ಮಾರ್ಗವಾಗಿ ಇದೆ. ಆದರೇ ದೇವರನ್ನು ಕೋರಿಕೊಳ್ಳುವವರು ಅಪರೂಪವಾಗಿ ಇರುವಾಗ, ವಿಶಾಲವಾಗಿ ಇರುವ ಮಾಯೆ ಮಾರ್ಗವನ್ನು ಕೋರುವವರು ಅನೇಕರು ಇದ್ದಾರೆ. ಜೀವಕ್ಕೆ ಅಂದರೇ ಮೋಕ್ಷಕ್ಕೆ ಹೋಗುವ ದ್ವಾರವು ಇಕ್ಕಟ್ಟಾಗಿ ಸಂಕುಚಿತವಾಗಿ ಇದ್ದು ಆ ದಾರಿಯಲ್ಲಿ ಹೋಗುವುದಕ್ಕೆ ಬಹಳ ಕಷ್ಟವಾಗಿ ಇರುತ್ತದೆ. ಇಕ್ಕಟ್ಟಾದ ದಾರಿಯಾಗಿರುವ ದೇವರ ದಾರಿಯನ್ನು ಕಂಡುಕೊಳ್ಳುವವರು ಅಪರೂಪವಾಗಿ ಇದ್ದಾರೆ.

ಈ ವಾಕ್ಯದಲ್ಲಿ ಪ್ರಭುವು ದ್ವಾರ, ದಾರಿ ಎಂದು ಎರಡನ್ನು ತಿಳಿಸಿದ್ದಾನೆ. ಮೊದಲು ಪ್ರವೇಶಿಸುವುದೇ ದ್ವಾರ, ನಂತರ ಹೋಗುವುದೇ ದಾರಿ. ಒಟ್ಟಾರೆ ಮಾನವರೆಲ್ಲರಿಗೂ ಎರಡೇ ಎರಡು ದಾರಿಗಳಿವೆ. ಒಂದು ಇಕ್ಕಟ್ಟಾದ ದಾರಿ, ಎರಡನೆಯದು ವಿಶಾಲವಾದ ದಾರಿ. ಹಾಗೇ ಅವುಗಳ ದ್ವಾರಗಳು ಒಂದು ಇಕ್ಕಟ್ಟನ್ನು, ಎರಡನೆಯದು ಅಗಲವನ್ನು ಹೊಂದಿವೆ. ಮೊದಲು ದ್ವಾರವಾಗಲೀ,

ನಂತರ ಮಾರ್ಗವಾಗಲೀ ಪ್ರವೇಶಿಸುವವನ ಸೈಜಿಗಿಂತಲೂ ಕೆಲವು ಪಟ್ಟು ಹೆಚ್ಚಾಗಿರಬೇಕು. ಹಾಗಿರುವಾಗಲೇ ಆ ದ್ವಾರದಲ್ಲಿ ಆ ದಾರಿಯಲ್ಲಿ ಪ್ರವೇಶಿಸುವುದಕ್ಕೆ ಸಾಧ್ಯವಾಗುತ್ತದೆ. ಮೇಲೆ ಹೇಳಿರುವ ಇಕ್ಕಟ್ಟಾದ ದ್ವಾರದಲ್ಲಿ ಸಂಕುಚಿತ ದಾರಿಯಲ್ಲಿ ಪ್ರವೇಶಿಸುವವನು ಎಷ್ಟು ಸೈಜು ಇದ್ದಾನೋ ಅಷ್ಟೇ ಸೈಜಿನ ದ್ವಾರವು, ದಾರಿ ಇದೆ. ಎರಡನೆಯದಾದ ಅಗಲವಾದ ದ್ವಾರವು ವಿಶಾಲ ಮಾರ್ಗವನ್ನು ಪ್ರವೇಶಿಸುವವನ ಸೈಜಿಗಿಂತಲೂ ನೂರಾ ಎಂಟು ಪಟ್ಟು ದೊಡ್ಡದು. ಈ ವಿಧವಾಗಿ ನೂರಾ ಎಂಟು ಪಟ್ಟು ದೊಡ್ಡದಾದ ಮಾರ್ಗ ದ್ವಾರವು, ಒಂದು ಪಟ್ಟು ಕೂಡಾ ದೊಡ್ಡದಲ್ಲದ ದ್ವಾರವು, ಮಾರ್ಗವು ಪ್ರಪಂಚದಲ್ಲಿ ಎರಡೇ ಇವೆ. ಸರ್ವ ಮಾನವರಿಗು ಇರುವ ಈ ಎರಡು ದ್ವಾರಗಳನ್ನು ದಾರಿಗಳನ್ನು ಜ್ಞಾನ, ಅಜ್ಞಾನ ಮಾರ್ಗಗಳಾಗಿ ಹೋಲಿಸಿ ಪ್ರಭು ಹೇಳಿದ್ದಾನೆ. ಜ್ಞಾನ ಮಾರ್ಗವು ಬಹಳ ಇಕ್ಕಟ್ಟಾದುದೆಂದು, ಪ್ರವೇಶಿಸುವವನ ಸೈಜು ಮಾತ್ರವೇ ಇದೆಯೆಂದು ಆದ್ದರಿಂದ ಜ್ಞಾನಮಾರ್ಗದಲ್ಲಿ ನಡೆಯುವುದು ಬಹಳ ಕಷ್ಟವಾಗಿ ಇರುತ್ತದೆಂದು ತಿಳಿಯುತ್ತಿದೆ. ಅಜ್ಞಾನ ಮಾರ್ಗದಲ್ಲಿ ಹೋಗುವವನ ಸೈಜಿಗಿಂತಲೂ ಆ ಮಾರ್ಗವು 108 ಪಟ್ಟು ದೊಡ್ಡದಾಗಿ ಇದ್ದು ಇಷ್ಟ ಬಂದಹಾಗೆ ಹೋಗುವುದಕ್ಕೆ ಅವಕಾಶ ಇರುವುದಾಗಿ ಆತಂಕವು ಇಲ್ಲದ್ದಾಗಿದೆ. ಇಕ್ಕಟ್ಟಿನ ದಾರಿಯಾದ ಜ್ಞಾನಮಾರ್ಗವು ಆತಂಕಗಳು ಇರುವುದಾಗಿ ಇದ್ದರೂ ಅದರ ಗಮ್ಯವು ಪರಮಾತ್ಮ. ಅಗಲವಾದ ದ್ವಾರವು ವಿಶಾಲವಾದ ಮಾರ್ಗವಿರುವ ಅಜ್ಞಾನ ದಾರಿ ಯಾವ ಆತಂಕಗಳು ಇಲ್ಲದೆ ಇದ್ದರೂ ಅದರ ಗಮ್ಯವು ಸಾತಾನು. ಪರಮಾತ್ಮನ ಗಮ್ಯವು ಸಾವುಹುಟ್ಟುಗಳು ಇಲ್ಲದೆ, ನಾಶ ಇಲ್ಲದೆ, ಯಾವಾಗಲೂ ಒಂದೇ ಸ್ಥಿತಿಯಲ್ಲಿ ಇರುವುದಾಗಿ, ಬದಲಾವಣೆ ಇಲ್ಲದ್ದಾಗಿದೆ. ಸಾತಾನಿನ ಗಮ್ಯವು ಸಾವು ಹುಟ್ಟುಗಳು ಇರುವುದಾಗಿ, ನಾಶ ಇರುವುದಾಗಿ, ಯಾವಾಗಲು ಒಂದೇ ಸ್ಥಿತಿ ಇಲ್ಲದೆ, ಬದಲಾವಣೆ ಹೊಂದುವುದಾಗಿದೆ. ಪರಮಾತ್ಮನ ಗಮ್ಯವು ದೊಡ್ಡದಾಗಿದ್ದರೂ, ಸಾತಾನ್ ಗಮ್ಯವು ನೀಚವಾಗಿದ್ದರೂ ಎಲ್ಲರೂ ವಿಶಾಲ ಮಾರ್ಗವಾದ ಸಾತಾನ್ ಮಾರ್ಗದಲ್ಲಿಯೇ ಪಯಣಿಸುತ್ತಿದ್ದಾರೆ. ಪ್ರಪಂಚ ರೀತಿಯಲ್ಲಿ ಸಾತಾನ್ ಮಾರ್ಗದಲ್ಲಿ ಪ್ರವೇಶಿಸಿದವನಿಗೆ ಅವನ ಸುತ್ತಲೂ

ಸಂಬಂಧಿಕರೆಲ್ಲರೂ ಅನುಕೂಲವಾಗಿ ಇದ್ದು ಯಾವ ಆತಂಕವನ್ನು ಉಂಟು ಮಾಡುವುದಿಲ್ಲ. ಆರ್ಥಿಕವಾಗಿ ತೊಂದರೆಗಳು ಇರುವುದಿಲ್ಲ. ಜೀವನವು ಸುಖಮಯವಾಗಿ ಕಾಣಿಸಿದಂತಿರುತ್ತದೆ. ಅದೇ ಜ್ಞಾನ ಮಾರ್ಗದಲ್ಲಿ ಪ್ರವೇಶಿಸಿದವನಿಗೆ ಸುತ್ತಲೂ ಇರುವ ಬಂಧುಗಳು ಹೆಂಡತಿಯೊಂದಿಗೆ ಸಹ ವಿರುದ್ಧವಾಗಿ ಇದ್ದು, ಅವನ ಮಾರ್ಗಕ್ಕೆ ಆತಂಕಗಳು ಉಂಟುಮಾಡುತ್ತಿರುತ್ತಾರೆ. ಅವನ ಜೀವನವು ಕಷ್ಟವಾಗಿ ಸಾಗಿದಂತಿರುತ್ತದೆ. ಆದ್ದರಿಂದ ಜ್ಞಾನ ಮಾರ್ಗದಲ್ಲಿ ಪ್ರವೇಶಿಸುವವರು ಲಕ್ಷ ಸಂಖ್ಯೆಯಲ್ಲಿ ಒಬ್ಬನು ಕೂಡಾ ಕಾಣಿಸುವುದಿಲ್ಲ.

ಯಾರೂ ವಿರೋಧಿಸದ ಯಾವ ಆತಂಕಗಳು ಇಲ್ಲದ ಸುವಿಶಾಲವಾದ ಅಜ್ಞಾನ ಮಾರ್ಗದಲ್ಲಿ ಅನೇಕರು ಪ್ರಯಾಣಿಸುತ್ತಿದ್ದಾರೆ. ವಿಶೇಷವೇನೆಂದರೇ ಮೋಕ್ಷಕ್ಕೆ ಹೋಗುವುದು, ಪರಲೋಕ ತಂದೆ ಹತ್ತಿರಕ್ಕೆ ಸೇರಿಸುವುದಾದ ಜ್ಞಾನಮಾರ್ಗವಾದ ಇಕ್ಕಟ್ಟಾದ ದಾರಿ ಒಂದು ಇದೆಯೆಂದು ಕೂಡಾ ಬಹಳ ಜನರಿಗೆ ಗೊತ್ತಿಲ್ಲ. ಭಗವದ್ಗೀತೆಯಲ್ಲಿ ಕೂಡಾ ಈ ದಾರಿಯನ್ನು ಕುರಿತು ಹೇಳುತ್ತಾ ಈ ದಾರಿಯಲ್ಲಿ ಪ್ರಯಾಣಿಸಬೇಕೆಂದು ಅಂದುಕೊಳ್ಳುವವರು ಸಾವಿರಕ್ಕೊಬ್ಬನು ಕೂಡಾ ಇಲ್ಲವೆಂದು, ಎಲ್ಲಾದರೂ ಅಪರೂಪವಾಗಿ ಇದ್ದರೇ ಅವನು ಈ ದಾರಿಯಲ್ಲಿ ಪ್ರವೇಶಿಸುವುದು ಅಪರೂಪವಾಗಿ ಇರುವುದೆಂದು, ಒಂದು ವೇಳೆ ಪ್ರವೇಶಿಸಿದವನು ಮಾಯೆ ಆತಂಕದಿಂದ ಗಮ್ಯವು ಸೇರುವುದು ಇನ್ನೂ ಅಪರೂಪವಾಗಿ ಇರುವುದೆಂದು ಎಲ್ಲವನ್ನೂ ಅತಿಕ್ರಮಿಸಿ ಗಮ್ಯವನ್ನು ಸೇರುವವನು ಧನ್ಯನೆಂದು, ಅಂಥವನು ಸಾವು ಹುಟ್ಟುಗಳ ನಾಶವಿಲ್ಲದ ಪರಮಾತ್ಮನಲ್ಲಿ ಸೇರಿ ಹೋಗುತ್ತಾನೆಂದು ಶ್ರೀಕೃಷ್ಣನು ಹೇಳಿದ್ದಾನೆ. ಪರಮಾತ್ಮ ಪ್ರತಿನಿಧಿಗಳಾದ ಕೃಷ್ಣನು ದ್ವಾಪರಯುಗ ಅಂತ್ಯದಲ್ಲಿ ಭಗವದ್ಗೀತೆ ರೂಪದಲ್ಲಿಯೂ, ಪ್ರಭುವು ಕಲಿಯುಗ ಮೂರು ಸಾವಿರ ವರ್ಷಗಳು ಕಳೆದ ನಂತರ ಪರಿಶುದ್ಧ ಗ್ರಂಥದಲ್ಲಿಯು ಜ್ಞಾನ, ಅಜ್ಞಾನ ಮಾರ್ಗಗಳ ಕುರಿತು ಹೇಳಿದ್ದಾರೆ. ಪರಮಾತ್ಮ ಪ್ರತಿಬಿಂಬಗಳಾದ ಶ್ರೀಕೃಷ್ಣ, ಏಸು ಪ್ರಭು ರವರು ಹೇಳಿರುವ ಜ್ಞಾನ, ಅಜ್ಞಾನ ಮಾರ್ಗಗಳ ವಿವರ ತಿಳಿದವರು ಸೂಚಿಸಿರುವ ಜ್ಞಾನಮಾರ್ಗದ ಕಡೆ ಪ್ರಯಾಣಿಸಿ

ಎಷ್ಟು ಆತಂಕಗಳು ಎದುರಾದರೂ ಪ್ರಯಾಣ ಸಾಗಿಸಿ ಕೊನೆಗೆ ನಾಶವಿಲ್ಲದ ಮೋಕ್ಷವಾದ ಪರಮಾತ್ಮನನ್ನು ಸೇರಬೇಕೆಂದು ತಿಳಿಸುತ್ತಿದ್ದೇವೆ.

**(17) ಮತ್ತಾಯ ಸುವಾರ್ತೆ, 7ನೇ ಅಧ್ಯಾಯ, 7, 8ನೇ ವಚನಗಳು.**

**(7) ಕೇಳಿರಿ ನಿಮಗೆ ಕೊಡಲಾಗುತ್ತದೆ. ಹುಡುಕಿರಿ ನಿಮಗೆ ದೊರೆಯುತ್ತದೆ, ತಟ್ಟಿರಿ ನಿಮಗೆ ತೆರೆಯಲ್ಪಡುತ್ತದೆ.**

**(8) ಕೇಳುವ ಪ್ರತಿಯೊಬ್ಬನು ಹೊಂದುತ್ತಾನೆ. ಹುಡುಕುವವನಿಗೆ ದೊರೆಯುತ್ತದೆ, ತಟ್ಟುವವನಿಗೆ ತೆರೆಯುತ್ತದೆ.**

ಪ್ರಭು ಹೇಳಿರುವ ಈ ವಾಕ್ಯದಲ್ಲಿ **ಕೇಳು, ಹುಡುಕು, ತಟ್ಟು** ಎಂಬ ಮೂರು ಮುಖ್ಯವಾದ ಕ್ರಿಯೆಗಳು ಇವೆ. ಈ ಮೂರು ಕೆಲಸಗಳು ಆಧ್ಯಾತ್ಮಿಕವಾಗಿ ಮಾಡಿಕೊಳ್ಳಲು ಹೇಳಿದ್ದಾನೆಂದು ತಿಳಿದುಕೊಳ್ಳಬೇಕು. ಹಾಗಲ್ಲದೆ ಪ್ರಪಂಚದಲ್ಲಿನ ಸರ್ವರ ಹಾಗೆ ಪ್ರಪಂಚ ವಿಷಯಗಳು ಪ್ರಭು ಹೇಳಲಿಲ್ಲ. ಬಹಳ ಜನ ಈ ವಾಕ್ಯವನ್ನು ಪ್ರಪಂಚ ಸಂಬಂಧವಾಗಿ ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ವಾಕ್ಯವನ್ನು ಹೇಳಿರುವ ಪ್ರಭುವನ್ನೇ ಅವರವರಿಗೆ ಅವಶ್ಯಕತೆಯಾಗಿರುವ ಕೋರಿಕೆಗಳನ್ನು ಕೇಳಲು ಪ್ರಾರಂಭಿಸಿದ್ದಾರೆ. ಪರಿಶುದ್ಧ ಗ್ರಂಥವಾದ ಬೈಬಲ್ ಓದಿದ್ದರೂ, ಅಲ್ಲಿಯು ಸಹ ಸಾತಾನ್ ಪ್ರವೇಶಿಸಿ ಪ್ರಭು ಹೇಳಿರುವ ವಾಕ್ಯವನ್ನು ಅರ್ಥವಾಗದಂತೆ ಮಾಡಿ, ಪ್ರಪಂಚ ಕೋರಿಕೆಗಳನ್ನು ಕೇಳುವಂತೆ ಮಾಡಿದೆ. ದೇವರ ವಾಕ್ಯವನ್ನು ಅತಿಕ್ರಮಿಸಬಾರದೆಂಬ ನಿಯಮವನ್ನು ಅವಗಾಹನಾ ಲೋಪದಿಂದ ವಾಕ್ಯಕ್ಕೆ ಒಳಗಾಗಿ ಇರುವಂತೆ ಮಾನವನನ್ನು ನಂಬಿಸಿ ವಾಕ್ಯವನ್ನು ಅತಿಕ್ರಮಿಸುವ ಹಾಗೆ ಮಾಡುತ್ತಿದೆ. ದೇವರೆಲ್ಲಿ ಇದ್ದಾನೋ ದೇವರು ಹುಟ್ಟಿಸಿರುವ ಸಾತಾನ್ ಕೂಡಾ ಅಲ್ಲೇ ಇದೆ. ದೇವರ ವಾಕ್ಯವು ಎಲ್ಲಿದೆಯೋ ಸಾತಾನ್ ಪ್ರಭಾವವು ಕೂಡಾ ಅಲ್ಲೇ ಇರುತ್ತದೆ. ಆದ್ದರಿಂದ ದೇವರು ಹೇಳಿರುವ ವಾಕ್ಯಗಳನ್ನು ಜಾಗ್ರತೆಯಿಂದ ಅರ್ಥಮಾಡಿಕೊಳ್ಳಬೇಕು. ವಾಕ್ಯದ ವಿಷಯದಲ್ಲಿ ಸಾತಾನ್ ಪ್ರಭಾವವು ಇಲ್ಲದ ಹಾಗೆ ನೋಡಿಕೊಳ್ಳಬೇಕು.

ದೇವರಿಗಾಗಿ ಕೇಳಬೇಕು, ದೇವರಿಗಾಗಿ ಹುಡುಕಬೇಕು, ದೇವರಿಗಾಗಿ ತಟ್ಟಬೇಕು. ಆ ವಿಧವಾಗಿ ಮಾಡುವುದು ದೇವರ ಮಾರ್ಗವಾಗುವುದು. ಹಾಗಲ್ಲದೇ ಇತರೆ ಯಾವುದನ್ನು ಕೇಳಿದರೂ, ಯಾವುದನ್ನು ಹುಡುಕಿದರೂ ಯಾವುದಕ್ಕಾಗಿ ಕೇಳಿದರೂ ಅದು ಮಾಯೆ (ಸಾತಾನ್) ಮಾರ್ಗವಾಗುತ್ತದೆ. ದೇವರ ಮಾರ್ಗದಲ್ಲಿ ಪ್ರವೇಶಿಸುವವನು ದೇವರ ಜ್ಞಾನದ ನಿಮಿತ್ತ ಕೇಳುತ್ತಿರುತ್ತಾನೆ. ದೇವರು ಹೇಗೆ ಇರುತ್ತಾನೆಂದು, ದೇವರ ಸನ್ನಿಧಾನಕ್ಕೆ ಹೇಗೆ ಸೇರಬೇಕೆಂದು, ದೇವರನ್ನು ಕುರಿತಾದ ಸರ್ವ ಸಮಾಚಾರವನ್ನು ತಿಳಿದುಕೊಳ್ಳಬೇಕೆಂದುಕೊಂಡವನಿಗೆ ಸರಿಯಾದ ಉತ್ತರ ಕೊಡುವವರು ಭೂಮಿ ಮೇಲೆ ಇಲ್ಲವೇ ಎಂದುಕೊಳ್ಳಬೇಡ. ಎಲ್ಲರೂ ಸಾತಾನ್ ಪ್ರಭಾವದಲ್ಲಿ ಇದ್ದು ದೇವರ ಸಮಾಚಾರ ಹೇಳುವ ಮಾನವರೇ ಭೂಮಿಮೇಲೆ ಇಲ್ಲದಿರುವಾಗ ಸ್ವತಃವಾಗಿ ದೇವರೇ ಬಂದು ನಿಮಗೆ ಬೇಕಾಗಿರುವ ಸಮಾಧಾನ ಕೊಟ್ಟು ಹೋಗಬಲ್ಲನು. ನಿನ್ನ ಪ್ರಶ್ನೆಗಳಿಗೆ ಸಮಾಧಾನವಂತೂ ದೊರೆಯಬಲ್ಲದು ಆದರೇ ಬಂದು ಹೇಳುವವನು ಯಾರು? ಎನ್ನುವುದು ಮಾತ್ರ ತಿಳಿದಿಲ್ಲ. ಭೂಮಿ ಮೇಲೆ ದೇವರೇ ಹುಟ್ಟಿ ಬಂದು ನಮ್ಮನ್ನು ಸಮಾಧಾನಪಡಿಸಿದರೂ ದೇವರೆಂದು ಗುರುತಿಸದೆ ಮನುಷ್ಯನಂತೇ ಗುರುತಿಸಬಲ್ಲೆವು. ಕೇಳುವುದರಿಂದ ಸಂಪೂರ್ಣ ಜ್ಞಾನ ಲಭ್ಯವಾಗುವುದು. ಹುಡುಕುವುದರಿಂದ ಭೂಮಿ ಮೇಲೆ ಮನುಷ್ಯನಂತಿರುವ ದೇವರೇ ತಿಳಿಯ ಬಲ್ಲನು. ಭೂಮಿ ಮೇಲೆ ದೇವರು ಅವತರಿಸಿದಾಗ ತಾನು ಇಂಥವನೆಂದು ಹೇಳಿಕೊಳ್ಳುವುದಿಲ್ಲ ಮತ್ತು ಯಾರಿಗೂ ತಿಳಿಯುವವನಲ್ಲ. ಅದು ತನ್ನದಾದ ಒಂದು ನಿಯಮ. ಆ ನಿಯಮದ ಪ್ರಕಾರ ಹುಡುಕದವನಿಗೆ ಕಾಣಿಸುವುದಿಲ್ಲ, ಹುಡುಕುವವನಿಗೆ ಮಾತ್ರ ಕಾಣಿಸುತ್ತಾನೆ. ಪ್ರಭು ಮನುಷ್ಯನಾಗಿ ಇದ್ದಾಗ ಕೇಳುವವರು ಕೆಲವರಿದ್ದರು ಆದ ಕಾರಣ ಅವರಿಗೆ ಜ್ಞಾನ ಹೇಳಲ್ಪಟ್ಟಿದೆ. ಹುಡುಕುವವರು ಇಲ್ಲದಿರುವುದರಿಂದ ಆತನು ಆಗ ದೇವರಂತೆ ಯಾರಿಗೂ ಕಾಣಿಸಲಿಲ್ಲ. ಎಲ್ಲರಿಗೂ ಸಾಮಾನ್ಯ ಮಾನವನ ಹಾಗೆ ಕಾಣಿಸಿದ್ದಾನೆ. ಕೊನೆಗೆ ತನ್ನ ಹತ್ತಿರವಿದ್ದ ಹನ್ನೆರಡು ಜನ ಶಿಷ್ಯರಿಗೆ ಬೋಧಕನಾಗಿಯೇ ಅರ್ಥವಾಗಿದ್ದಾನೆ. ಸಾಕ್ಷ್ಯಾತ್ ವಿಶ್ವವೆಲ್ಲಾ ವ್ಯಾಪಿಸಿ ಇರುವ ಪರಮಾತ್ಮನೇ ಶರೀರಧಾರಿಯಾದ

ಪ್ರಭುವೆಂದು ಅವರಿಗೆ ತಿಳಿದಿಲ್ಲ. ಯಾರಿಗೂ ತಾನು ಇಂಥವನೆಂದು ಗುರುತಿಸದ ಹಾಗೆ ಆತನು ಸಹ ನಟಿಸಿ ಹೋಗಿದ್ದಾನೆ.

ಪರಲೋಕ ರಾಜ್ಯಾಧಿಪತಿಯಾದ ಪರಮಾತ್ಮ ಪ್ರಭುವಾಗಿ ಭೂಮಿ ಮೇಲೆ ಇದ್ದಾಗ ತಾನೇ ಸ್ವತಃವಾಗಿ ತನ್ನ ಶಿಷ್ಯರ ಕಾಲುಗಳನ್ನು ತೊಳೆದಿದ್ದಾನೆ. ಹಾಗೆ ಮಾಡುವುದರಿಂದ ಆ ಶಿಷ್ಯರು ಉಳಿದ ಪ್ರಜೆಗಳು ಆತನನ್ನು ಸ್ವಲ್ಪವಾದರೂ ಗುರುತಿಸುವುದಕ್ಕೆ ಅವಕಾಶವೇ ಇಲ್ಲದಂತೆ ಹೋಗಿದೆ. ಪ್ರಭು ಯಾರಾಗಿರುವುದು ಗುರುತಿಸಲಾರದ ಪ್ರಜೆಗಳು ಆತನನ್ನು, ಆತನ ಮಹಿಮೆಯನ್ನು ತಿಳಿದುಕೊಳ್ಳ ಲಾರದೇ ಸಾಧಾರಣ ಮಾನವನ ಬಳಿ ಪ್ರವರ್ತಿಸಿದ ಹಾಗೆ ಅಗೌರವವಾಗಿ ಪ್ರವರ್ತಿಸಿ, ಮುಖಕ್ಕೆ ಉಗುಳನ್ನು ಉಗುಳಿ, ತಲೆ ಮೇಲೆ ಮುಳ್ಳನ್ನು ಇಟ್ಟು, ಚಾಟಿಯಿಂದ ಹೊಡೆದು, ಕೊನೆಗೆ ಮೊಳೆಗಳನ್ನು ಹೊಡೆದು ಕೊಂದಿದ್ದಾರೆ. ಸತ್ತುಹೋದ ಏಸುಪ್ರಭು ಮರಳಿ ಮೂರನೆಯ ದಿನದಂದು ಅದೇ ಶರೀರದೊಂದಿಗೆ ಎದ್ದು ಬಂದರೇ ಶಿಷ್ಯರು ದೆವ್ವವೆಂದು ಭ್ರಮೆ ಪಟ್ಟಿದ್ದಾರೆ. ಇದನ್ನು ಅನುಸರಿಸಿ ನೋಡಿದರೇ ಆ ದಿನ ಶಿಷ್ಯರು ಕೂಡಾ ಕೇಳುವವರೇ ಹೊರತು, ಹುಡುಕುವವರು ಅಲ್ಲವೆಂದು ತಿಳಿಯುತ್ತಿದೆ. **"ಕೇಳುವಿಕೆಗಿಂತ ನೋಡುವುದು ಇನ್ನೂ ದೊಡ್ಡದು"** ಎನ್ನುವ ಹಾಗೆ ಆತನ ಜ್ಞಾನವನ್ನು ಕೇಳುವವರಿಗಿಂತಲೂ ಆತನನ್ನೇ ನೋಡಿರುವವರು ಬಹಳ ಅದೃಷ್ಟವಂತರು. ಪ್ರಪಂಚಕ್ಕೆಲ್ಲಾ ದೇವರಾದವನು ಏಸುಪ್ರಭುವಾಗಿ ಇರುವಾಗ ಪ್ರತ್ಯಕ್ಷವಾಗಿ ಆತನನ್ನು ನೋಡಿ ಇರಬಹುದು. ಆದರೇ ಆತನನ್ನು ನೋಡದ ಹಾಗೆಯೇ. ಈ ವಿಷಯದಲ್ಲಿ ಪ್ರಭುವೇ ತನ್ನ ಶಿಷ್ಯರನ್ನು ಕಣ್ಣಿದ್ದು ಕುರುಡರೆಂದಿದ್ದಾನೆ. ಹಾಗೆ ಕುರುಡರಂತಲ್ಲದೆ ಇರಬೇಕೆಂದರೇ ನೀನು ದೇವರನ್ನು ನೋಡಬೇಕೆಂದು ಹುಡುಕುವುದಕ್ಕೆ ಆರಂಭಿಸಬೇಕು. ಕೇಳುವವನಿಗೆ ಕೊಡಲಾಗುತ್ತದೆ ಎನ್ನುವವನು, ಹುಡುಕುವವನಿಗೆ ದೊರೆಯುತ್ತದೆ ಎಂದು ಕೂಡಾ ಹೇಳಿದ್ದಾನೆ. ಆದಕಾರಣ ಕೇಳುವವನಿಗೆ ದೇವರ ವಾಕ್ಯಗಳು ಕೊಟ್ಟ ಹಾಗೆ, ಹುಡುಕುವವನಿಗೆ ದೇವರ ಆಕಾರವೇ ದೊರೆಯುತ್ತದೆ, ಕೇಳುವವರಿಗಿಂತ ನೋಡುವವರು ದೊಡ್ಡವರಾದಂತೆ

ನೋಡುವವರಿಗಿಂತಲೂ ಅನುಭವಿಸುವವನು ಇನ್ನೂ ದೊಡ್ಡವನು. ಆ ಸೂತ್ರವನ್ನು ಅನುಸರಿಸಿ **'ತಟ್ಟುವವನಿಗೆ ತೆರೆಯಲಾಗುತ್ತದೆ'** ಎಂದಿದ್ದಾನೆ. ತಟ್ಟುವುದೆಂದರೇ ಎದುರು ಮನೆಯ ದ್ವಾರವನ್ನಾಗಲೀ, ಪಕ್ಕದ ಮನೆ ಬಾಗಿಲುಗಳನ್ನಾಗಲೀ ತಟ್ಟುವುದೆಂದು ಅರ್ಥ ಮಾಡಿಕೊಳ್ಳಬಾರದು. ಮೋಕ್ಷ ಸಾಮ್ರಾಜ್ಯ ದ್ವಾರವನ್ನು ತಟ್ಟಬೇಕು. ಪರಲೋಕ ರಾಜ್ಯ ಒಂದರ ಬಾಗಿಲನ್ನು ತಟ್ಟಬೇಕು. ಮೋಕ್ಷವನ್ನು ಕೋರುವವರು ಪರಮಾತ್ಮನೊಳಗೆ ಐಕ್ಯವಾಗಿ, ಆತನೊಂದಿಗೆ ಬೆರೆತು ಆತನವೊಂದು ಸಾರವನ್ನೇ ಅನುಭವಿಸುತ್ತಾರೆ. ಕೇಳುವುದಕ್ಕೆ, ಹುಡುಕುವುದಕ್ಕೆ ಅಭ್ಯಾಸವಾದವನು ತಪ್ಪದೇ ದೇವರಲ್ಲಿ ಐಕ್ಯವಾಗುವುದಕ್ಕೆ ಪ್ರಯತ್ನಿಸುತ್ತಾನೆ. ಅಂದರೇ ತಪ್ಪದೇ ತಟ್ಟುವವನಾಗುತ್ತಾನೆ. ಕೇಳುವುದರಿಂದ, ಹುಡುಕುವುದರಿಂದ, ತಟ್ಟುವುದರಿಂದ ಯಾರಾದರೂ ದೇವರಲ್ಲಿ ಸೇರಿ ಹೋಗುತ್ತಾನೆ. ಆದ್ದರಿಂದ ಪ್ರತೀ ಮನುಷ್ಯನಿಗು ಮುಖ್ಯವಾಗಿ ಮೇಲಿನ ವಾಕ್ಯದಲ್ಲಿ ದೇವರು ಹೇಳಿರುವ ಮೂರು ಲಕ್ಷಣಗಳಿರಬೇಕು. **ದೇವರ ವಾಕ್ಯದ ಪ್ರಕಾರ ಕೇಳುವವನಿಗೆ ಜ್ಞಾನ, ಹುಡುಕುವವನಿಗೆ ಭಗವಂತನು (ದೇವರ ಕುಮಾರನು), ತಟ್ಟುವವನಿಗೆ ಮೋಕ್ಷವೆನ್ನುವ ಮನೆ ಲಭ್ಯವಾಗುತ್ತದೆ.**

### (18) ಮತ್ತಾಯ ಸುವಾರ್ತೆ, 7ನೇ ಅಧ್ಯಾಯ, 15ನೇ ವಚನ.

## (15) ಅಸತ್ಯ ಪ್ರವಕ್ತರ ಕುರಿತು ಜಾಗ್ರತೆ ವಹಿಸಿರಿ. ಅವರು ಕುರಿಗಳ ಚರ್ಮಗಳನ್ನು ಹಾಕಿಕೊಂಡು ನಿಮ್ಮ ಹತ್ತಿರಕ್ಕೆ ಬರುತ್ತಾರೆ. ಆದರೇ ಒಳಗೆ ಅವರು ಕ್ರೂರವಾದ ತೋಳಗಳು.

ಒಬ್ಬ ಮನುಷ್ಯ ದೇವರ ಸನ್ನಿಧಾನವನ್ನು ಸೇರಬೇಕೆಂದರೇ ಅವನಿಗೆ ಮಾರ್ಗದರ್ಶಕತೆ ಅಗತ್ಯ. ಮಾರ್ಗದರ್ಶಕತೆ ಇತರರಿಂದಲೇ ಸಿಗಬೇಕು. ಒಬ್ಬ ಮನುಷ್ಯ ದೇವರ ಮಾರ್ಗದಲ್ಲಿ ನಡೆಯಬೇಕೆಂದರೇ ಬೇರೊಬ್ಬ ಮನುಷ್ಯನ ಮೇಲೆ ಆಧಾರ ಪಡಬೇಕಾಗಿ ಬರುತ್ತಿದೆ. ಮಾರ್ಗವನ್ನು ತೋರಿಸುವವನ ಕೈಯಲ್ಲಿ ಮಾರ್ಗವನ್ನು ನೋಡುವವನಿರುತ್ತಾನೆ. ಏಕೆಂದರೇ! ತೋರಿಸುವವನು

ತೋರಿಸುವ ದಾರಿಯನ್ನೇ ನೋಡುವವನು ನಡೆಯಬೇಕು. ಮಾರ್ಗದರ್ಶಕತೆ ಕೊಡುವವನನ್ನು ಅನುಸರಿಸಿ ಮಾರ್ಗದಲ್ಲಿ ನಡೆಯುವವನಿರುತ್ತಾನೆ. ಅವನ ದರ್ಶಕತ್ವ ಸರಿಯಾದುದಾದರೇ ನಡೆಯುವವನು ಸರಿಯಾದ ಮಾರ್ಗದಲ್ಲಿಯೇ ನಡೆಯುತ್ತಾನೆ. ದರ್ಶಕನೇ ಸರಿಯಿಲ್ಲದ ಪಕ್ಷದಲ್ಲಿ ನಡೆಯುವವನು ಕೂಡಾ ಸರಿಯಾದ ಮಾರ್ಗದಲ್ಲಿ ನಡೆಯಲಾರನು. ತೋರಿಸುವವನನ್ನು (ಬೋಧಕನನ್ನು) ಅನುಸರಿಸಿ ನೋಡುವ ಸಾಮಾನ್ಯನ ಜೀವನ ಧ್ಯೇಯವೇ ಆಧಾರಪಟ್ಟಿದೆ. ಒಂದು ಬಾರಿ ಗುರುವಿನಂತೆ ಒಬ್ಬ ವ್ಯಕ್ತಿಯನ್ನು ನಿರ್ಣಯಿಸಿಕೊಂಡ ನಂತರ ಜೀವನ ಪರ್ಯಂತ ಆತನು ಹೇಳಿರುವುದೇ ನಿಜವೆಂದು ನಂಬುವ ಅಭ್ಯಾಸ ಎಲ್ಲರಿಗೂ ಇದೆ. ಆದ್ದರಿಂದ ಮೊದಲ ಗುರುವೆಂದು (ದರ್ಶಕನೆಂದು) ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಜಾಗ್ರತೆ ಪಡಬೇಕಾಗಿರುತ್ತದೆ. ಆದ್ದರಿಂದಲೇ ಪ್ರಭುವು ಮೇಲಿನ ವಾಕ್ಯದಲ್ಲಿ **"ಅಸತ್ಯ ಪ್ರವಕ್ತರ ಕುರಿತು ಜಾಗ್ರತೆ ವಹಿಸಿರಿ"** ಎಂದಿದ್ದಾನೆ. ಪ್ರಸ್ತುತ ಕಾಲದಲ್ಲಿ ಗುರುಗಳಾಗಿರುವ ಕೆಲವರು ಗುರುಗಳೇ ಅಲ್ಲವೆಂದು, ಗುರುಗಳ ಹಾಗೆ ನಟಿಸುತ್ತಿರುವವರೆಂದು, ಆತನು ಹೇಳುತ್ತಾ ಅವರು ಕುರಿಗಳ ಚರ್ಮವನ್ನು ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ ಆದರೇ, ಅವರು ಕ್ರೂರವಾದ ತೋಳಗಳು ಎಂದಿದ್ದಾನೆ. ಪ್ರಭು ವಾಕ್ಯದ ಪ್ರಕಾರ ಎಷ್ಟೋ ಜನ ಗುರುಗಳು ಬಣ್ಣ ಬಳಿದುಕೊಂಡು ಬೋಧಿಸುತ್ತಿದ್ದಾರೆ ಆದರೇ ಅವರು ಗುರುಗಳು ಅಲ್ಲ, ಅವರು ತೋರಿಸುವ ಮಾರ್ಗವು ದೇವರ ಹತ್ತಿರಕ್ಕೆ ಸೇರಿಸಲಾರದು. ಅವರು ಹೇಳುವ ಬೋಧನೆಗಳಲ್ಲಿ ದೇವರು, ಜ್ಞಾನ, ಆತ್ಮ ಎಂಬ ಮಾತುಗಳಿರುವುದರಿಂದ ದೇವರ ಕುರಿತಾಗಿಯೇ ಹೇಳುತ್ತಿದ್ದಾರೆಂದು ಆ ಮಾತುಗಳನ್ನೇ ಕೇಳಬೇಕಾಗಿ ಬರುತ್ತಿದೆ. ಕುರಿಗಳ ಚರ್ಮವನ್ನು ಹೊದ್ದು ಕೊಂಡಷ್ಟು ಮಾತ್ರಕ್ಕೆ ತೋಳ ಕುರಿ ಆಗಲಾರದು ಎನ್ನುವಂತೆ ಅಂತಹ ಗುರುಗಳು ಎಷ್ಟೋ ಗುರುಗಳ ಹಾಗೆ ಕಾಣಿಸಿದರೂ ಅವರು ಗುರುಗಳು ಅಲ್ಲವೇ ಅಲ್ಲ. ಆದ್ದರಿಂದ ಅಂತಹ ಗುರುಗಳನ್ನು ನಂಬಿ ಜೀವನವನ್ನು ವ್ಯರ್ಥ ಮಾಡಿಕೊಳ್ಳ ಬಾರದೆಂದು ಪ್ರಭು ಅಸತ್ಯ ಪ್ರವಕ್ತರ ಕುರಿತು ಜಾಗ್ರತೆಯಾಗಿ ಇರಬೇಕೆಂದು ಹೇಳಿದ್ದಾನೆ.

**(19) ಮತ್ತಾಯ ಸುವಾರ್ತೆ, 7ನೇ ಅಧ್ಯಾಯ, 21ನೇ ವಚನ.**

**(21) ಪ್ರಭುವೇ ಪ್ರಭುವೇ ಎಂದು ನನ್ನನ್ನು ಕರೆಯುವ ಪ್ರತಿಯೊಬ್ಬನು ಪರಲೋಕರಾಜ್ಯದಲ್ಲಿ ಪ್ರವೇಶಿಸುವುದಿಲ್ಲ ಆದರೇ, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದ ಪ್ರಕಾರ ಮಾಡುವವನೇ ಪ್ರವೇಶಿಸುತ್ತಾನೆ.**

ಪರಮಾತ್ಮನಿಂದ ಬಂದವನು ಏಸುಪ್ರಭು. ಪ್ರಭು ಶರೀರವನ್ನು ಧರಿಸಿರುವ ಭಗವಂತನಾಗಿರುವಾಗ, ಪರಲೋಕ ತಂದೆ ಎನ್ನಲಾದ ಪರಮಾತ್ಮ ಶರೀರ ಇಲ್ಲದ ದೇವರು. ಶರೀರವಿಲ್ಲದ ದೇವರು ಪ್ರಪಂಚವೆಲ್ಲಾ ಅಣುವಣು ವಿನಲ್ಲೂ ವ್ಯಾಪಿಸಿ ಇರುವಾಗ, ಶರೀರವಿರುವ ಭಗವಂತನು ಪ್ರಭು ಹೆಸರಿನಿಂದ ಭೂಮಿ ಮೇಲೆ ಇರುವ ಸಮಯದಲ್ಲಿ ಕೆಲವರು ಪ್ರಭುವಿನ ಮಹತ್ವವನ್ನು ನೋಡಿ ಆತನ ಹತ್ತಿರ ಸೇರಿ ಭಕ್ತಿ ಪ್ರದರ್ಶಿಸುತ್ತಾ ಆ ಭಕ್ತಿ ತಮ್ಮ ಕೋರಿಕೆಗಳು ನಿಮಿತ್ತ ಇರುವ ಹಾಗೆ ಇರುತ್ತಾರೆ. ತಮಗೇನೋ ಲಾಭ ಉಂಟಾಗುವುದೆಂದು ಆತನನ್ನು ಪ್ರಭೂ ಪ್ರಭೂ ಎಂದು ಕರೆಯುತ್ತಿರುತ್ತಾರೆ. ಸಾಕಾರ ರೂಪದಲ್ಲಿರುವ ಪ್ರಭು ಹತ್ತಿರಕ್ಕೆ ಸೇರಿ ದೈವಜ್ಞಾನವಿಲ್ಲದೇ ಪ್ರಭುವನ್ನು ಎಷ್ಟು ದೊಡ್ಡದಾಗಿ ಕರೆದರೂ ಪ್ರಯೋಜನವಿಲ್ಲ. ಸಾಕಾರದಲ್ಲಿರುವವನು ನಿರಾಕಾರದಲ್ಲಿರುವವನು ಒಬ್ಬನೇ ಆಗಿದ್ದರೂ ಸಾಕಾರದಲ್ಲಿ ಇರುವವನಿಗೆ ಎಷ್ಟೋ ಪರಿಮಿತಿಗಳಿವೆ. ನಿರಾಕಾರದಲ್ಲಿರುವ ಪರಲೋಕ ತಂದೆಗೆ ಯಾವ ಪರಿಮಿತಿಗಳೂ ಇಲ್ಲ. ಪರಿಮಿತಿ ಇಲ್ಲದ ಪರಮಾತ್ಮ ಮಾನವರಿಗೆ ತನ್ನ ಧರ್ಮಗಳನ್ನು ತಿಳಿಸುವ ನಿಮಿತ್ತ ತನ್ನಿಂದ ಒಂದು ರೂಪವನ್ನು ಕಳುಹಿಸುತ್ತಾನೆ. ಹಾಗೆ ಕಳುಹಿಸಿರುವುದೇ ಏಸುಪ್ರಭು. ಏಸುಪ್ರಭು ಕಣ್ಣಿಗೆ ಕಾಣಿಸುವವನಾದರೂ ತಿಳಿಸುವ ವಾಕ್ಯಗಳು ಪರಲೋಕ ತಂದೆಯವೇ. ದೇವರ ಧರ್ಮಗಳನ್ನು ಪ್ರಕಟಿಸುವ ನಿಮಿತ್ತ ದೇವರೇ ಪ್ರಭು ರೂಪವಾಗಿ ಭೂಮಿ ಮೇಲಕ್ಕೆ ಬಂದು ಇದ್ದಾನೆ.

ಪ್ರಭು ಹೇಳುವ ಪರಲೋಕ ತಂದೆಯ ಚಿತ್ತಾನುಸಾರವಾದ ವಾಕ್ಯಗಳನ್ನು ಯಾರು ಆಚರಿಸುವುದಿಲ್ಲವೋ, ಆ ವಾಕ್ಯಗಳನ್ನು ಯಾರು ಗುರುತಿಸುವುದಿಲ್ಲವೋ

ಅವನು ಸಾಕಾರದಲ್ಲಿ ಇರುವ ಪ್ರಭುವನ್ನು "ಪ್ರಭುವೇ!" ಎಂದರೂ ಪ್ರಯೋಜನವಿಲ್ಲ. ದೇವರು ಹೇಳಿರುವ ಜ್ಞಾನದ ಪ್ರಕಾರ ಆಚರಿಸುವವನು ಪ್ರಭು ನಾಮವನ್ನು ಉಚ್ಛರಿಸುವವನಿಗಿಂತಲೂ ದೊಡ್ಡವನು. ದಾಸನ ಭಕ್ತಿ ನಮಸ್ಕಾರದಿಂದ ಸರಿ ಮಾಡುವವರಿಗಿಂತ ದೇವರ ವಾಕ್ಯದೊಂದಿಗೆ ಸೇರಿ ನಡೆಯುವವನು ಮುಖ್ಯವಾದವನು. ದೇವರ ಆಜ್ಞೆ ಪ್ರಕಾರ ನಡೆಯುವವನು ದೇವರ ಚಿತ್ತಾನುಸಾರ ನಡೆದಂತಾಗುತ್ತದೆ. ಅಂಥವನೇ ಮೋಕ್ಷವೆನ್ನಲ್ಪಡುವ ಪರಲೋಕದಲ್ಲಿ ಪ್ರವೇಶಿಸುತ್ತಾನೆ. ದೇವರು ಹೊಗಳಿಕೆಗೆ ಹಿಗ್ಗುವುದಿಲ್ಲ, ಕುಗ್ಗುವುದಿಲ್ಲ. ದೇವರು ತನ್ನ ಜ್ಞಾನವನ್ನು ಆಚರಿಸುವವರನ್ನು ನೋಡಿ ಹಿಗ್ಗಿ ಹೋಗಬಲ್ಲನು, ಅವರಿಗೆ ಸೆರೆಯಾಗಬಲ್ಲನು. ಆದಕಾರಣ ದೇವರನ್ನು ಹೊಗಳುವುದಕ್ಕಿಂತಲೂ ದೇವರ ವಾಕ್ಯವನ್ನು ಆಚರಿಸುವುದು ಉತ್ತಮ. ದೇವರಿಗೆ ಎಲ್ಲರಲ್ಲಿರುವ ಭಾವನೆಗಳು ತಿಳಿದಿದೆ. ಜ್ಞಾನ ತಿಳಿದವನಿಗೆ, ತಿಳಿಯದವನಿಗೆ ಇರುವ ಭಾವನೆಯಲ್ಲಿ ವ್ಯತ್ಯಾಸವನ್ನು ಗಮನಿಸಬಲ್ಲನು. ದೇವರ ಜ್ಞಾನವನ್ನು ತಿಳಿದು, ಅದರ ಭಾವದ ಪ್ರಕಾರ ನಡೆದುಕೊಳ್ಳುವವನು ಮುಖ್ಯವಾದವನು. ಜ್ಞಾನವನ್ನು ಮತ್ತೊಂದು ವಿಧವಾಗಿ ಅರ್ಥ ಮಾಡಿಕೊಂಡು ದೇವರ ಇಷ್ಟಪ್ರಕಾರ ಅಲ್ಲದೇ ನಡೆಯುವವನು ಮೋಕ್ಷವನ್ನು ಹೊಂದಲಾರನು.

**(20) ಮತ್ತಾಯ ಸುವಾರ್ತೆ, 7ನೇ ಅಧ್ಯಾಯ, 22, 23ನೇ ವಚನಗಳು.**

**(22) ಆ ದಿನದಂದು ಅನೇಕರು ನನ್ನನ್ನು ನೋಡಿ ಪ್ರಭೂ, ಪ್ರಭೂ ನಾವು ನಿನ್ನ ನಾಮದಲ್ಲಿ ಬೋಧನೆ ಹೇಳಲಿಲ್ಲವೇ! ನಿನ್ನ ನಾಮದಿಂದ ದೆವ್ವಗಳನ್ನು ಹೊಡೆದೋಡಿಸಲಿಲ್ಲವೇ! ನಿನ್ನ ನಾಮದಿಂದ ಅನೇಕವಾದ ಅದ್ಭುತಗಳು ಮಾಡಲಿಲ್ಲವೇ! ಎಂದು ಹೇಳುತ್ತಿರುತ್ತಾರೆ.**

**(23) ಆಗ ನಾನು ನಿಮ್ಮನ್ನು ಎಂದಿಗೂ ಅರಿತಿಲ್ಲ. ಅಕ್ರಮವನ್ನು ಮಾಡುವವರೇ! ನನ್ನ ಹತ್ತಿರದಿಂದ ಹೊರಟು ಹೋಗಿರೆಂದು ಅವರೊಂದಿಗೆ ಹೇಳುತ್ತೇನೆ.**

ಪ್ರಭುವಿನ ದೊಡ್ಡತನವನ್ನು ತಿಳಿದವರು ಕೆಲವರು ಪರಲೋಕ ರಾಜ್ಯಾಧಿಪತಿಯಾದ ಪರಮಾತ್ಮನನ್ನು ಮರೆತು ಪ್ರಭುವನ್ನು ಮಾತ್ರ ಸ್ಮರಿಸುತ್ತಿರುತ್ತಾರೆ. ಸರ್ವ ಪ್ರಪಂಚಕ್ಕು ತಂದೆಯಾದವನು, ಪರಮಪಿತನಾದವನು ತನ್ನಿಂದ ಕಳುಹಿಸಿರುವ ಭಾಗವೇ ಏಸುಪ್ರಭು. ಪರಮಾತ್ಮನಿಗೆ ಎಷ್ಟು ಶಕ್ತಿ ಇದೆಯೋ ಪ್ರಭುವಿಗು ಅಷ್ಟೇ ಶಕ್ತಿ ಇರುತ್ತದೆ. ಪ್ರಭುವನ್ನು ಸ್ಮರಿಸಿದರೆ ಪರಮ ಪಿತನನ್ನು ಸ್ಮರಿಸಿದಂತೆ. ಎಷ್ಟೋ ಜನ ಪ್ರಭುವನ್ನು ಸ್ಮರಿಸುತ್ತಿದ್ದಾರೆ. ಆದರೇ ಕೆಲವರು ಸ್ವಾರ್ಥಿಗಳಾಗಿ, ಕೆಲವರು ನಿಸ್ವಾರ್ಥಿಗಳಾಗಿ ದೇವರ ಬಗ್ಗೆ ಇದ್ದಾರೆ. ಪರಲೋಕ ಪಿತ ತನ್ನ ವಾಕ್ಯಗಳನ್ನು ತಾನು ಕಳುಹಿಸಿರುವವನ ಮೂಲಕ ಎಷ್ಟೋ ಬಾರಿ ಪ್ರಕಟಿಸಿಕೊಂಡಿದ್ದಾನೆ. ಪರಮ ತಂದೆಯೊಬ್ಬನ ವಾಕ್ಯಗಳು ತಿಳಿದು, ಆತನವೊಂದು ನಿಜತತ್ತ್ವವನ್ನು ತಿಳಿಯದವರು ಅನೇಕರು ಇದ್ದಾರೆ. ತಂದೆ ವಾಕ್ಯಗಳನ್ನು ಓದಿದಷ್ಟು ಮಾತ್ರಕ್ಕೆ, ಕೇಳಿದಷ್ಟು ಮಾತ್ರಕ್ಕೆ ಹಾಗೆಯೇ ಸ್ಮರಿಸಿದಷ್ಟು ಮಾತ್ರಕ್ಕೆ ತಂದೆಯ ಸ್ಥಿತಿಯನ್ನು ಭಾವವನ್ನು ಗ್ರಹಿಸುವ ಸ್ಥಿತಿಯಲ್ಲಿ ಲಕ್ಷ ಜನರಿಗೆ ಒಬ್ಬರು ಕೂಡಾ ಇಲ್ಲವೆಂದು ಹೇಳಬಹುದು. ಪ್ರಭು ಮೂಲಕ ಪ್ರಕಟಿಸಲ್ಪಟ್ಟಿರುವವು ದೇವರ ಒಂದು ಆಜ್ಞೆಗಳು, ದೇವರ ಒಂದು ಜ್ಞಾನ, ದೇವರ ಒಂದು ವಾಕ್ಯಗಳು, ದೇವರ ಒಂದು ಜ್ಞಾನವಾಗಲೀ, ಆಜ್ಞೆಗಳಾಗಲೀ, ವಾಕ್ಯಗಳಾಗಲೀ ಎಲ್ಲವೂ ಪ್ರಭು ವಾಕ್ಕು ಮೂಲಕವೇ ಪ್ರಕಟಿತವಾದವು. ಕಾಣಿಸುವ ಪ್ರಭುವು ಕಾಣಿಸದ ದೇವರ ಒಂದು ಚಿಹ್ನೆ. ದೇವರಿಗೆ ಪ್ರತಿರೂಪವಾದವನು ಪ್ರತಿನಿಧಿಯಾದವನು ಪ್ರಭುವು. ವಾಕ್ಯಗಳಲ್ಲಿರುವ ಜ್ಞಾನವನ್ನು, ಆಜ್ಞೆಗಳನ್ನು ಅರ್ಥ ಮಾಡಿಕೊಳ್ಳದವನು ಪ್ರಭುವನ್ನು ಸ್ಮರಿಸಿದರೂ ಪೂರ್ತಿ ಲಾಭವನ್ನು ಹೊಂದಲಾರನು.

ಪ್ರಭುವನ್ನು ದೊಡ್ಡವನೆಂದು ತಿಳಿದು ಆತನನ್ನು ಸ್ಮರಿಸುವುದರಿಂದ ಸ್ವಲ್ಪ ಲಾಭ ಮಾತ್ರ ಹೊಂದಬಲ್ಲರು. ಮಾನವನಿಗೆ ಪೂರ್ತಿ ಲಾಭವಾದುದು ಪರಲೋಕ ಪ್ರಾಪ್ತಿಯೇ ಎಂದು ತಿಳಿಯಿರಿ. ಈ ಸಾತಾನ್ (ಮಾಯೆ) ಲೋಕದಿಂದ ಬಿಡುಗಡೆ ಯಾಗಿ ದೇವರ ಲೋಕವನ್ನು ಪ್ರವೇಶಿಸುವುದೇ ಪ್ರತಿ

ಒಬ್ಬನಿಗೂ ಪೂರ್ತಿ ಫಲಿತವೆಂದು ತಿಳಿಯಬೇಕು. ಪ್ರಸ್ತುತವಿರುವ ಸಾತಾನ್ ನಿವಾಸವಿರುವ ಈ ಲೋಕದೊಳಗೆ ಎಂದಿಗೂ ಪ್ರವೇಶಿಸದೇ ದೇವರ ಲೋಕ ವಾದ ಪರಮ ಪದದಲ್ಲಿ ಸೇರಿಹೋಗುವುದು ಮಾನವನ ಒಂದು ದೊಡ್ಡ ಕೊನೆಯ ಲಾಭವೆಂದು ಹೇಳಬಹುದು. ಪರಲೋಕ ಪ್ರಾಪ್ತಿಗಿಂತಲೂ ಮಿಗಿಲಾದ ಲಾಭವು ಮನುಷ್ಯನಿಗೆ ಮತ್ತೊಂದು ಇಲ್ಲ. ಅಷ್ಟು ದೊಡ್ಡ ಲಾಭ ಬರಬೇಕೆಂದರೇ, ಸಾತಾನ್ ಸಂಬಂಧ ಅಂದರೇ ಪ್ರಕೃತಿ ಅಥವಾ ಮಾಯೆ ಒಂದರ ಸಂಬಂಧ ಇಲ್ಲದೇ ಹೋಗಬೇಕೆಂದರೇ ದೇವರ ಜ್ಞಾನವು ಪೂರ್ತಿ ಅರ್ಥವಾಗಿ ಇರಬೇಕು. ಆತನ ವಾಕ್ಯದಲ್ಲಿನ ಆಳವಾದ ಜ್ಞಾನವನ್ನು, ಆತನ ಆಜ್ಞೆಯಲ್ಲಿನ ಹದ್ದನ್ನು ತಿಳಿಯದವನು ಸ್ವಲ್ಪ ಭಕ್ತನೇ ಹೊರತು ಪೂರ್ತಿ ವಿಶ್ವಾಸಿಗನು ಅಲ್ಲವೆಂದು ತಿಳಿಯಬೇಕು. ಪ್ರಭು ಹೇಳಿರುವ ವಾಕ್ಯಗಳಲ್ಲಿನ ಸಂಪೂರ್ಣ ಜ್ಞಾನವನ್ನು ಆತನು ಹೇಳಿರುವ ಆಜ್ಞೆಗಳಲ್ಲಿನ ಹದ್ದು ಅಥವಾ ಗೆರೆಯನ್ನು ದಾಟದೇ ವರ್ತಿಸುವವನು ಧನ್ಯನಾಗುತ್ತಾನೆ. ಪರಮಾತ್ಮನ ಪೂರ್ತಿ ಜ್ಞಾನವು ತಿಳಿಯದವನು ಎಷ್ಟು ಬೋಧಕನಾದರೂ, ಎಷ್ಟು ಸ್ಮರಿಸುವವನಾದರೂ ಪೂರ್ತಿ ವಿಶ್ವಾಸಿ ಅಲ್ಲವೆಂದೇ ಹೇಳಬಹುದು. ಹಾಗೆಂದು ಆತನನ್ನು ತೆಗೆದು ಹಾಕುತ್ತಿಲ್ಲವೆಂದು ಗ್ರಹಿಸಬೇಕು. ಆತನು ದೇವರ ಮೇಲೆ ವಿಶ್ವಾಸವರನೇ ಆದರೇ ಸಂಪೂರ್ಣ ವಿಶ್ವಾಸವರನೆಂದು ಹೇಳುತ್ತಿಲ್ಲ. ದೇವರ ಜ್ಞಾನವು ಸಂಪೂರ್ಣವಾಗಿ ತಿಳಿಯುವ ವರೆಗು ಪ್ರಪಂಚದಲ್ಲಿ ಸ್ವಲ್ಪ ವಿಶ್ವಾಸ ಲೋಪವು ಮಾನವನಲ್ಲಿ ಅಡಗಿರುತ್ತದೆ. ಅದು ಪ್ರಸ್ತುತವಾಗಿ ಕಾಣಿಸದೆ ಹೋದರೂ ಯಾವಾಗಲೋ ಒಂದು ಬಾರಿ ಹೊರ ಬೀಳಬಹುದು. ಪೂರ್ತಿ ಪ್ರಭು ಭಕ್ತರೆಂದುಕೊಳ್ಳುವವರಿಗೆ ದೊಡ್ಡ ದೊಡ್ಡ ಬೋಧಕರಿಗು ಕೂಡಾ ಅವರಲ್ಲಿ ಸಂಪೂರ್ಣವಾಗಿ ದೇವರ ಜ್ಞಾನ ಇಲ್ಲದೇ ಹೋದರೆ ಯಾವುದೋ ಒಂದು ಕೋನದಲ್ಲಿ ಅವಿಶ್ವಾಸವು ಅಡಗಿರುತ್ತದೆ. ಆದ್ದರಿಂದ ಪ್ರಭು **"ನನ್ನನ್ನು ತುಟಿಗಳಿಂದ ಘನವಾಗಿ ಹೇಳಿಕೊಳ್ಳುವವನಿಗಿಂತಲೂ ಮನಸ್ಸಿನಿಂದ ಪೂರ್ತಿ ವಿಶ್ವಾಸಿಸುವವನು ಶ್ರೇಷ್ಠನೆಂದಿದ್ದಾನೆ."** ಪೂರ್ತಿ ವಿಶ್ವಾಸ ಬರಬೇಕೆಂದರೇ ಸಂಪೂರ್ಣವಾಗಿ ದೇವರ ಜ್ಞಾನವು ಅಗತ್ಯ.

ಪ್ರಭುವನ್ನು ಪ್ರಭುವಾಗಿಯೇ, ದೇವರನ್ನು ದೇವರ ಹಾಗೆಯೇ ಅರ್ಥ ಮಾಡಿಕೊಂಡವರು ಇಬ್ಬರೂ ಒಂದೇಯೆಂದು ತಿಳಿಯದವರು ಪ್ರಭು ಪುನಃ ಪ್ರಭುವಾಗಿಯೇ ಬರುತ್ತಾನೆಂದು ಅಂದುಕೊಳ್ಳುವವರು ದೇವರ ಒಂದು ವಿಶಾಲತೆಯನ್ನು ತಿಳಿಯದವರೆಂದು ಹೇಳಬಹುದು. ದೇವರು ಸನಾತನನೆಂದು, ಆತನಿಗೆ ಆದಿ ಅಂತ್ಯ ಇಲ್ಲವೆಂದು ತಿಳಿಯದವನು, ದೇವರು ಎಷ್ಟೋ ಬಾರಿ ಭೂಮಿ ಮೇಲಕ್ಕೆ ಬಂದು ಹೋಗಿದ್ದಾನೆಂದೂ, ಮರಳಿ ಬರುತ್ತಾನೆಂದೂ ಆತನಿಗೆ ಅಗತ್ಯವೆನಿಸಿದಾಗಲೆಲ್ಲಾ ತಪ್ಪದೇ ಬರುತ್ತಾನೆಂದು ತಿಳಿಯದವನು ಸಂಪೂರ್ಣ ಜ್ಞಾನಿ ಅಲ್ಲವೆಂದೇ ಹೇಳಬಹುದು. ಪರಿಪೂರ್ಣ ಜ್ಞಾನವಿರುವವನು ದೇವರ ಬರುವಿಕೆಯನ್ನು ಗುರುತಿಸಬಲ್ಲನು. ಸಂಪೂರ್ಣ ಜ್ಞಾನ ಇಲ್ಲದವನು ದೇವರ ಬರುವಿಕೆಯನ್ನು ಗುರುತಿಸಲಾರನು. ದೇವರು ಮಾನವನಾಗಿ ಬಂದು ಎದುರಿಗೆ ನಿಂತಿದ್ದರೂ ಮೇಲಿನ ರೂಪವನ್ನು, ಕೆಲಸಗಳನ್ನು ಮಾತ್ರ ನೋಡುವವನು ದೇವರನ್ನು ಗುರುತಿಸಲಾರನು. ಅಂಥವರು ಕ್ರೈಸ್ಥರಲ್ಲಿ ನಾವು ವಿಶ್ವಾಸಿಗಳೆಂದುಕೊಂಡು ಇದ್ದರೂ ಪ್ರಭು ಮಾರುವೇಷದಲ್ಲಿ ಬಂದರೇ, ಬಂದವನು ಪ್ರಭುವೆಂದು ಗುರುತಿಸಲಾರದೇ ಆತನಿಗು ಕೂಡಾ ಬಾಪ್ತಿಸ್ಮ ಕೊಡುತ್ತೇವೆಂದು ಹೇಳಬಲ್ಲರು.

ಭೂಮಿ ಮೇಲೆ ಅವಿಶ್ವಾಸಿಗಳಿಗಿಂತ ವಿಶ್ವಾಸಿಗಳು ಶ್ರೇಷ್ಠರು, ವಿಶ್ವಾಸಿ ಗಳಿಗಿಂತಲೂ ಪೂರ್ತಿ ವಿಶ್ವಾಸವಿರುವವರು ಪೂರ್ತಿ ಶ್ರೇಷ್ಠರು. ಸಂಪೂರ್ಣ ವಿಶ್ವಾಸಿಗಳಿಗೇ ಪರಲೋಕ ಪ್ರವೇಶ ಇದೆ. ಅಲ್ಲಿಯವರೆಗೂ ಅವರನ್ನು ದೇವರು ಒಪ್ಪಿಕೊಳ್ಳುವುದಿಲ್ಲ. ಸಂಪೂರ್ಣ ಜ್ಞಾನಿಗಳಾದವರನ್ನೇ ದೇವರು ಪರಲೋಕ ಪ್ರವೇಶದಲ್ಲಿ ಗುರುತಿಸುತ್ತಾನೆ. ಹಾಗಲ್ಲದವರನ್ನು ಕುರಿತು ನನಗೆ ತಿಳಿಯದೆಂದು ಹೇಳುತ್ತಾನೆ. ಆದ್ದರಿಂದ ಸಂಪೂರ್ಣ ಜ್ಞಾನಿಗಳಾಗುವುದಕ್ಕೆ ಪ್ರಯತ್ನಿ ಸಬೇಕು. ಬಹಳ ಜನ ದೇವರಿಗೆ ಹತ್ತಿರವಾಗಬೇಕೆಂದು, ದೇವರ ರಾಜ್ಯದಲ್ಲಿ ಪ್ರವೇಶಿ ಸಬೇಕೆಂದು ಅಂದುಕೊಳ್ಳುತ್ತಿರುತ್ತಾರೆ. ಆದರೇ ಅವರು ಸಾತಾನ್ ರಾಜ್ಯದಲ್ಲಿರುವುದರಿಂದ ಸಾತಾನ್ (ಮಾಯೆ) ಅವರನ್ನು ದೇವರ ಕಡೆ ಹೋಗದಂತೆ, ಪೂರ್ತಿ ಜ್ಞಾನಿಗಳು ಆಗದಂತೆ ತನ್ನ ಪ್ರಯತ್ನ ತಾನು ಮಾಡುತ್ತಲೇ

ಇರುತ್ತದೆ. ಸಾತಾನು ದೇವರಿಗೆ ವಿರುದ್ಧವಾದುದೆಂದು ತಿಳಿದ ಬೋಧಕರು ಕೂಡಾ ಸಾತಾನ್ ಕೆಲಸಗಳೇನೋ ತಿಳಿಯದೆ ಇದ್ದಾರೆ. ಸಾತಾನ್ ವಿವರವು ತಿಳಿಯದವರು ಎಷ್ಟೋ ಜನ ಅದರ ಮಾರ್ಗದಲ್ಲಿ ಇದ್ದೂ ನಾವು ದೇವರ ಮಾರ್ಗದಲ್ಲಿ ಇದ್ದೇವೆಂದು ಭ್ರಮಿಸುತ್ತಿದ್ದಾರೆ. ಆದ್ದರಿಂದಲೇ ದೇವರು ಬೋಧಕರನ್ನು ತನಗೆ ಹತ್ತಿರದಲ್ಲಿದ್ದಂತಿರುವವರನ್ನು ಕೂಡಾ ತನ್ನೊಳಗೆ ಪ್ರವೇಶವಿಲ್ಲ ಎಂದಿದ್ದಾನೆ.

ಮೇಲಿನ ವಾಕ್ಯದಲ್ಲಿ **"ನನ್ನ ನಾಮದಿಂದ ದೆವ್ವಗಳನ್ನು ಓಡಿಸಿದರೂ ನನ್ನ ನಾಮದಿಂದ ರೋಗಗಳನ್ನು ಗುಣಪಡಿಸಿ ಅದ್ಭುತಗಳು ಮಾಡಿದ್ದರೂ ಅವರನ್ನು ಅಕ್ರಮ ಮಾಡುವವರೆಂದು ಹೇಳುತ್ತಿದ್ದೇನೆಂದನು. ಅವರನ್ನು ನನ್ನ ಹತ್ತಿರದಿಂದ ಹೊರಟುಹೋಗಿರೆಂದು ಹೇಳುತ್ತೇನೆಂದನು."**

ಈ ದಿನ ಸಮಾಜದಲ್ಲಿ ದೇವರ ನಾಮದಿಂದ ಅದ್ಭುತಗಳು ಮಾಡುವವರನ್ನು ನಿಜವಾದ ಭಕ್ತರೆಂದು, ದೇವರಿಗೆ ಹತ್ತಿರ ಇರುವವರೆಂದು ಪ್ರಜೆಗಳು ತಿಳಿಯುತ್ತಿದ್ದಾರೆ. ಅದ್ಭುತಗಳು ಮಾಡುವವರು ಕೂಡಾ ತಾವು ಪ್ರಭುವಿಗೆ ಹತ್ತಿರದವರೆಂದುಕೊಳ್ಳುತ್ತಿದ್ದಾರೆ. ಪ್ರಭು ಮಹಿಮೆಗಳು ತಮ್ಮ ಮೂಲಕ ಹೊರಬೀಳುತ್ತಿವೆಯೆಂದು ಆದ್ದರಿಂದ ತಾವು ಪ್ರಭುವಿಗೆ ಸನ್ನಿಹಿತರೆಂದೂ, ಪ್ರಭು ವಾಕ್ಯವನ್ನು ಸ್ಮರಿಸಿ ರೋಗಿಯನ್ನು ತಾಕಿದ ರೋಗಿ ಒಬ್ಬನ ರೋಗ ಕ್ಷಮಿಸಲ್ಪಟ್ಟು ಹೋಗುತ್ತಿದೆಯೆಂದು ಅದು ನಮ್ಮ ಮೂಲಕ ನಡೆಯುವುದರಿಂದ ಪ್ರಭು ಮಹಿಮೆ ನಮ್ಮ ಮೂಲಕ ನಡೆಯುತ್ತಿದೆಯೆಂದು ತಿಳಿಯುತ್ತಿದ್ದಾರೆ. ಮಹಿಮೆಗಳು ನಡೆಯುವುದು ನಿಜ, ಅದರ ಮೂಲಕ ಪ್ರಭು ಎಲ್ಲರಿಗೂ ತಿಳಿಯುವುದು ನಿಜ, ಆದರೇ ಮೇಲಿನ ವಾಕ್ಯದ ಪ್ರಕಾರ ನಾವು ಪ್ರಭುವಿಗೆ ಏಕೆ ಸರಿಹೋಗಲಿಲ್ಲವೆಂದು ಯೋಚಿಸಲಿಲ್ಲ. ಈ ವಿಷಯದಲ್ಲಿ ಪ್ರಭು ವಾಕ್ಯಗಳೇ ಮರೆತುಹೋಗಿದ್ದಾರೆ. ತಾವು ಮಾಡುತ್ತಿರುವುದು ಒಳ್ಳೆಯ ಕೆಲಸವಾದರೇ, ಅದು ಪ್ರಭು ಮಹಿಮೆಯೇ ಆದರೇ ಪ್ರಭು ಏಕೆ ಕೋಪಿಸಿಕೊಳ್ಳುತ್ತಿದ್ದಾನೆ? ಪ್ರಭು ಏಕೆ ನೀವು ಅಕ್ರಮ ಮಾರ್ಗದಲ್ಲಿ ನಡೆಯುತ್ತಿದ್ದೀರೆಂದಿದ್ದಾನೆ? ಪ್ರಭು

ತನ್ನ ವಾಕ್ಯದಲ್ಲಿ ಹಾಗೆ ಹೇಳಿದ್ದಾನೆಂದರೇ ಆ ಮಾತು ನೂರಕ್ಕೆ ನೂರರಷ್ಟು ನಿಜವಾಗಿ ಇರುತ್ತದೆ.

ಪ್ರಭು ಮಾತಿನಲ್ಲಿನ ನಿಜವೇನೆಂದು ಯೋಚಿಸಿ ನೋಡಿದಂತಾದರೇ ನಂಬಲಾರದ ಸತ್ಯಗಳು ಹೊರಬೀಳುತ್ತಿವೆ. ಅವು ಏನೆಂದರೇ ಪ್ರಭು ನಾಮದಿಂದ ಮಾಡುವ ಮಹಿಮೆಗಳು ದೇವರವಾ ಇಲ್ಲವೇ ಸಾತಾನಿನವಾ ಎಂದು ಮಾನವನು ಗ್ರಹಿಸಲಾರದೇ ಹೋಗುವುದು ದೊಡ್ಡ ತಪ್ಪು. ಪ್ರಜೆಗಳ ದೃಷ್ಠಿಯಲ್ಲಿ ಗುರುಗಳಂತೆ, ಬೋಧಕರಂತೆ, ದೇವರಿಗೆ ಪ್ರತಿಬಿಂಬಗಳಾಗಿ ಇರುವ ಹಾಗೆ ಕಾಣಿಸುವವರು ಕೂಡಾ ದೇವರ ಮಾರ್ಗದಲ್ಲಿರುವ ಹಾಗೆ ಭ್ರಮಿಸುತ್ತಾ, ಮಾಯೆ ಮಾರ್ಗದಲ್ಲಿ ಇದ್ದಾರೆಂದು ತಿಳಿಯುತ್ತಿದೆ. ಇದು ಬಹಳ ಬಾಧೆಯಾಗುವ ವಿಷಯವು. ಈ ನಮ್ಮ ಮಾತಿನಿಂದ ಬಹಳ ಜನ ಬೋಧಕರಿಗು ಕೂಡ ಕೋಪಬರುತ್ತದೆ. ಆದರೇ ನಾನು ನಿಮಿತ್ತ ಮಾತ್ರನು ಇದು ನನ್ನ ವಾಕ್ಯವಲ್ಲ ದೇವರ ವಾಕ್ಯವೆಂದೇ ನೀವು ಮೇಲೆ ಬರೆಯಲಾಗಿರುವ ಮತ್ತಾಯ ಏಳನೆಯ ಅಧ್ಯಾಯದಲ್ಲಿನ 22ನೇ ವಾಕ್ಯ ನೆನಪು ಮಾಡಿಕೊಳ್ಳಿ. **"ದೇವರೇ ಅಕ್ರಮಗಳು ಎಂದಿದ್ದಾನೆ, ದೇವರೇ ನೀವು ಯಾರೋ ನನಗೆ ತಿಳಿದಿಲ್ಲ ಹೋಗು"** ಎಂದಿದ್ದಾನೆ. ಆದ ಕಾರಣ ನಾವೆಲ್ಲಾ ಈಗ ಆಲೋಚಿಸಬೇಕಾಗಿರುವುದು ಏನೆಂದರೇ! ಆ ದಿನ ಪ್ರಭುವನ್ನೇ ಶೋಧಿಸಿರುವ ಮಾಯೆ ಈ ದಿನ ಯಾವ ರೂಪದಲ್ಲಿ ನಮ್ಮನ್ನು ಶೋಧಿಸುತ್ತಿದೆಯೋ ಎಂದು ಯೋಚಿಸಬೇಕು. ದೇವರ ಜ್ಞಾನದಲ್ಲಿ ಮಾಯೆ ಯನ್ನು (ಸಾತಾನನ್ನು) ತಿಳಿಯುವುದು ಕೂಡಾ ಒಂದು ಭಾಗವೇ. ಅದನ್ನು ತಿಳಿಯದೆ ಹೋದರೇ ದೇವರು ಅಲ್ಲದಿದ್ದರೂ ದೇವರ ರೂಪದಲ್ಲಿರುವ ಸಾತಾನನ್ನು ಅನುಸರಿಸುತ್ತಾ ದೇವರನ್ನು ಅನುಸರಿಸುತ್ತಿದ್ದೇವೆಂದು ಅಪಾರ್ಥ ಮಾಡಿಕೊಳ್ಳಬಲ್ಲರು. ಅದೇ ರೀತಿಯಲ್ಲಿಯೇ ಈ ದಿನ ಬಹಳ ಜನ ವಕ್ತರು, ಗುರುಗಳು, ಬೋಧಕರು ತಪ್ಪು ಮಾಡುತ್ತಿದ್ದಾರೆ. ಎಷ್ಟು ರೂಪಗಳನ್ನಾದರೂ ಬದಲಾಯಿಸಬಲ್ಲ ಮಾಯೆ (ಸಾತಾನ್) ದೇವರ ನಾಮದಿಂದ ಮಹಿಮೆಗಳು ಅದ್ಭುತಗಳು ಮಾಡಿಸುತ್ತಿದೆ. ಇದು ದೇವರಿಗೆ ಇಷ್ಟವಿರುವುದಿಲ್ಲವೆಂದು ತಿಳಿಯದವರು ಅದನ್ನೇ ನಿಜವಾದ ಭಕ್ತಿಯೆಂದು ತಿಳಿದು ಮುಂದಕ್ಕೆ

ಸಾಗದಂತಿದ್ದಾರೆ. ಭಯಂಕರ ಸತ್ಯವೇನೆಂದರೇ, ದೇವರೆಂದು ಮಾಯೆಯನ್ನು ಆಶ್ರಯಿಸಿದ ಕುರುಡರು ಭೂಮಿ ಮೇಲೆ ಬಹಳಜನ ಇದ್ದಾರೆ. ತಾವು ಆಶ್ರಯಿಸಿರುವುದು ದೇವರ ಮಾರ್ಗವಲ್ಲ ಸಾತಾನ್ ಮಾರ್ಗವೆಂದು ಅವರು ತಿಳಿಯಲಾರದ ಸ್ಥಿತಿಯಲ್ಲಿ ಇದ್ದಾರೆ. ಸಾತಾನ್ ಪ್ರಭಾವದಿಂದ ಹೊರಬೀಳುವ ಅವಕಾಶವೇ ಇಲ್ಲದಂತಿದೆ. ಈ ವಿಷಯವಾಗಿ ದೇವರೇ ಸ್ವತಃವಾಗಿ ಇಳಿದು ಬಂದು ಹೇಳಿದರೂ ದೇವರನ್ನೇ ನಿಂದಿಸಿ ದೂಷಿಸಬಲ್ಲರು ಆದರೇ, ತಾವು ಬದಲಾಗುವುದಿಲ್ಲ. ಅವರಲ್ಲಿ ಮಾಯೆಯೇ ದೇವರಂತೆ ಕಾಣಿಸುತ್ತಿರುವಾಗ ದೇವರು ಅವರಿಗೆ ಮನುಷ್ಯನಾಗಿಯೇ ಕಾಣಿಸುತ್ತಾನೆ.

ದೇವರ ರಾಜ್ಯದಲ್ಲಿ ಪ್ರವೇಶಿಸಲು ಕೋರುವವರು, ಸಾವು ಹುಟ್ಟುಗಳಿಲ್ಲದ ದೇವರಲ್ಲಿ ಐಕ್ಯವಾಗಿ ಆತನಲ್ಲಿಯೇ ಇರಲು ಬಯಸುವವರು ದೇವರ ಮೇಲೆ ವಿಶ್ವಾಸ ಇರಬೇಕೆಂದುಕೊಳ್ಳುವವರು ಮೇಲಿನ ವಾಕ್ಯವನ್ನು ನೆನಪು ಮಾಡಿಕೊಂಡು ಅದ್ಭುತಗಳನ್ನು ಮಾಡುವವರನ್ನು ಸಹಿತ ಏಕೆ ಅಸಹಿಸಿಕೊಂಡಿದ್ದಾನೋ, ಯಾಕೆ ಅಕ್ರಮಗಳೆಂದಿದ್ದಾನೋ ಸ್ವಲ್ಪ ಆಲೋಚಿಸಿರಿ. ದೇವರಿಗೆ ಇಷ್ಟವಿಲ್ಲದವರು ಯಾರೋ, ಇಷ್ಟವಿರುವವರು ಯಾರೋ ಯೋಚಿಸಿರಿ. ದೇವರ ವಾಕ್ಯವನ್ನು ತಿಳಿದುಕೊಂಡು ಅದರಲ್ಲಿನ ದೇವರ ಜ್ಞಾನವನ್ನು, ಆತನ ಆಜ್ಞೆಗಳನ್ನು ತಿಳಿದುಕೊಂಡು ಜ್ಞಾನವನ್ನು ಸಂಪೂರ್ಣವಾಗಿ ಗ್ರಹಿಸಿಕೊಂಡು, ಆಜ್ಞೆಯನ್ನು ತಮ್ಮ ಬಗ್ಗೆ ಗೀಚಿರುವ ಗೆರೆಯೆಂದು ತಿಳಿದು ಅದನ್ನು ದಾಟಬಾರದೆಂದು ತಿಳಿಯಬೇಕು. ಗೆರೆ ಒಳಗಿದ್ದರೇ ದೇವರ ರಾಜ್ಯ, ಗೆರೆ ದಾಟಿದರೇ ಸಾತಾನ್ ರಾಜ್ಯವೆಂದು ತಿಳಿಯಬೇಕು. ಆತನು ಪರಿಶುದ್ಧ ಗ್ರಂಥದಲ್ಲಿ ಸರ್ವ ಮಾನವರ ಬಗ್ಗೆ ಗೀಚಿರುವ ಗೆರೆಯನ್ನು ಜ್ಞಾಪಕ ಮಾಡಿಕೊಂಡು ಸಾತಾನ್ ಬಗ್ಗೆ ಜಾಗ್ರತೆಯಾಗಿ ಇರಬೇಕು.

**(21) ಮತ್ತಾಯ ಸುವಾರ್ತೆ, 8ನೇ ಅಧ್ಯಾಯ, 22ನೇ ವಚನ.**

**(22) ಏಸು ಆತನನ್ನು ನೋಡಿ "ನನ್ನನ್ನು ಹಿಂಬಾಲಿಸು. ಮೃತರು ತಮ್ಮ ಮೃತರನ್ನು ಊತಿಟ್ಟುಕೊಳ್ಳಲಿ ಎಂದು ಹೇಳಿದ್ದಾನೆ."**

ಏಸುಪ್ರಭು ಶಿಷ್ಯರಲ್ಲಿ ಒಬ್ಬನು ನನ್ನ ತಂದೆ ಸತ್ತುಹೋಗಿದ್ದಾನೆ, ನನ್ನ ತಂದೆಯನ್ನು ಹೂತಿಡುವುದಕ್ಕೆ ಹೋಗಿ ಬರುತ್ತೇನೆ ನೀವು ಅನುಮತಿ ಕೊಡಿ ಎಂದು ಕೇಳಿದಾಗ ಏಸು ಆತನೊಂದಿಗೆ ಹೇಳಿದ ಮಾತು ಮೇಲಿನ ವಾಕ್ಯದಲ್ಲಿ ಇದೆ. ಏಸು ಹೇಳಿದ ಮಾತು ಅರ್ಥವಾಗದ ವಿಧವಾಗಿ ಇದೆ. ಆದ್ದರಿಂದ ಏಸು ಹೇಳಿರುವುದೇನೆಂದು ಕೆಲವರು ಆಲೋಚಿಸುತ್ತಿದ್ದಾರೆ. ಈ ವಿಷಯವಾಗಿ ನಾವು ಆಲೋಚಿಸಿದರೇ ಪ್ರಪಂಚದಲ್ಲಿ ಮನಷ್ಯರನ್ನು ಎರಡು ವಿಧಗಳಾಗಿ ವಿಂಗಡಿಸಬಹುದೆಂದು ಹೇಳಬಹುದು. ಜ್ಞಾನವನ್ನು ತಿಳಿದು ಅದನ್ನು ಯೋಗವಾಗಿ ಆಚರಿಸಿದವರು ನಿತ್ಯ ಜೀವವನ್ನು ಹೊಂದುತ್ತಿದ್ದಾರೆ. ಅಂಥವರು ಭೂಮಿ ಮೇಲೆ ಅಪರೂಪವಾಗಿ ಇರುತ್ತಾರೆ. ನಿತ್ಯ ಜೀವನಕ್ಕೆ ಅರ್ಹರಾದವರು ಮೃತರಂತೆ ಲೆಕ್ಕಿಸಲ್ಪಡುವುದಿಲ್ಲ. ನಿತ್ಯ ಜೀವನವನ್ನು ಹೊಂದಿದವನು ಎಂದಿಗೂ ಮೃತನಾಗದೇ ಇರುತ್ತಾನೆ. ಅಂಥವನನ್ನು ಮೋಕ್ಷ ಹೊಂದಿದವನೆಂದು ಹೇಳಬಹುದು. ಜ್ಞಾನ ತಿಳಿಯದವರನ್ನು, ಯೋಗ ಮಾಡದವರನ್ನು ಮೃತರೆಂದು ಹೇಳಬಹುದು. ಅಂಥವನಿಗೆ ನಿತ್ಯ ಜೀವನವು ಇರುವುದಿಲ್ಲ. ಅವನನ್ನು ಮೃತನು ಎಂದು ಹೇಳಬಹುದು. ಅವನು ಎಂದಿಗಾದರೂ ಸತ್ತು ಹೋಗುವವನೆಂದು ಮೃತ್ಯು ಹೊಂದುವವನೆಂದು ಹೇಳಬಹುದು. ಅಜ್ಞಾನಿಗಳು ಅಜ್ಞಾನಿಗಳನ್ನು ಹೂತಿಟ್ಟುಕೊಳ್ಳುತ್ತಿರುತ್ತಾರೆ. ಆದ್ದರಿಂದ ಮೃತರು ಮೃತರನ್ನು ಹೂತಿಟ್ಟುಕೊಳ್ಳಲಿ ಎಂದು ವಾಕ್ಯದಲ್ಲಿ ಹೇಳಿದ್ದಾನೆ. ಜ್ಞಾನ ತಿಳಿಯದವರೆಲ್ಲರನ್ನು ಮೃತ್ಯುವಾತ ಪಡುವವರಂತೆ ಲೆಕ್ಕಿಸಿ ಮೃತರೆಂದು ಎಲ್ಲರನ್ನೂ ಸೇರಿಸಿ ಹೇಳುವುದಾಗಿದೆ. ಜ್ಞಾನ ತಿಳಿದವನು ಜ್ಞಾನ ತಿಳಿಯದವರೊಂದಿಗೆ ಸಂಬಂಧ ಇಟ್ಟುಕೊಳ್ಳಬಾರದು. ಆದ್ದರಿಂದ ಏಸು ತನ್ನ ಶಿಷ್ಯನೊಂದಿಗೆ ನೀನು ಜ್ಞಾನ ತಿಳಿದಿರುವವನು, ನನ್ನ ಹಿಂದೆ ಹಿಂಬಾಲಿಸು ಎಂದು ಹೇಳಿದ್ದಾನೆ. ಜ್ಞಾನ ತಿಳಿಯದವನು ಜ್ಞಾನ ತಿಳಿಯದವರನ್ನು ಹೂತಿಟ್ಟುಕೊಳ್ಳಲಿ ಎಂದು ಹೇಳಿದ್ದಾನೆ.

**(22) ಮತ್ತಾಯ ಸುವಾರ್ತೆ, 9ನೇ ಅಧ್ಯಾಯ, 12, 13ನೇ ವಚನಗಳು.**

## (12) ರೋಗಿಗಳಿಗೇ ಹೊರತು ಆರೋಗ್ಯದಿಂದಿರುವವರಿಗೆ ವೈದ್ಯನ ಅಗತ್ಯ ಇಲ್ಲವಲ್ಲ!

**(13) ನಾನು ಪಾಪಿಗಳನ್ನು ಕರೆಯಲು ಬಂದಿದ್ದೇನೆ ಹೊರತು ನೀತಿವಂತರನ್ನು ಕರೆಯಲು ಬರಲಿಲ್ಲ.**

ದೇವರು ಭೂಮಿ ಮೇಲೆ ಆಗಾಗ ಧರ್ಮ ಸಂಸ್ಥಾಪನೆಗಾಗಿ ಬರುತ್ತಾನೆಂದು ಮೊದಲೇ ಹೇಳಿಕೊಂಡಿದ್ದೇವೆ. ಹಾಗೆಯೇ ಏಸು ನಾನು ಅಜ್ಞಾನವಂತರನ್ನು ಜ್ಞಾನ ಮಾರ್ಗದೊಳಗೆ ಕಳುಹಿಸುವುದಕ್ಕೆ ಬಂದಿದ್ದೇನೆಂದು ಹೇಳಿದ್ದಾನೆ. ನಾನು ಪಾಪಿಗಳನ್ನು ಕರೆಯಲು ಬಂದಿದ್ದೇನೆ ಆದರೆ ನೀತಿವಂತರನ್ನಲ್ಲ ಎಂದಿದ್ದಾನೆ. ಪಾಪಿಗಳು ಅಂದರೇ ಇಲ್ಲಿ ಜ್ಞಾನ ತಿಳಿಯದ ಅಜ್ಞಾನಿಗಳೆಂದು ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ನೀತಿವಂತರು ಎಂದರೇ ಜ್ಞಾನ ತಿಳಿದವರೆಂದು ಅರ್ಥ. ಅಜ್ಞಾನ ಎಂಬ ಅನಾರೋಗ್ಯ ಇರುವವರಿಗೆ ಮಾತ್ರವೇ ಜ್ಞಾನ ಎನ್ನುವ ಔಷಧಿ ಕೊಟ್ಟು ಅವನ ರೋಗವನ್ನು ವಾಸಿಮಾಡುವುದಕ್ಕೆ ದೇವರು ಬೋಧಕನು ಎಂಬ ವೈದ್ಯನ ರೂಪದಲ್ಲಿ ಭೂಮಿ ಮೇಲಕ್ಕೆ ಬಂದು ಅಜ್ಞಾನ ರೋಗವನ್ನು ಇಲ್ಲದೇ ಮಾಡುತ್ತಾನೆ. ಜ್ಞಾನ ಎಂಬ ಆರೋಗ್ಯ ಇರುವವರಿಗೆ ವೈದ್ಯನೆಂಬ ಬೋಧಕನ ಅಗತ್ಯವಿಲ್ಲ. ಲೋಕದಲ್ಲಿ ಅಜ್ಞಾನ ರೋಗವು ಪೂರ್ತಿಯಾಗಿ ವ್ಯಾಪಿಸಿ ಮನುಷ್ಯರೆಲ್ಲರೂ ರೋಗಿಗಳಾದಾಗ ದೇವರು ಭೂಮಿ ಮೇಲೆ ಅವರಿಗಾಗಿಯೇ ಅವತರಿಸಿ ತನ್ನ ಧರ್ಮಗಳೆಂಬ ಔಷಧಿಯನ್ನು ಕೊಟ್ಟು ಅಜ್ಞಾನಿಗಳಾಗಿ ಇರುವವರನ್ನು ಜ್ಞಾನಿಗಳನ್ನಾಗಿ ಬದಲಾಯಿಸುತ್ತಾನೆ. ದೇವರು ವೈದ್ಯನಾಗಿ ಅವತರಿಸದೆ ಹೋದರೇ ಲೋಕವೆಲ್ಲ ಅಜ್ಞಾನವೆಂಬ ಅನಾರೋಗ್ಯವಾಗಿ ಹೋಗುತ್ತದೆ. ಆದ್ದರಿಂದ ದೇವರು ಅವತರಿಸಿ ತನ್ನ ಜ್ಞಾನವನ್ನು ಅಜ್ಞಾನಿಗಳಿಗೆ ತಿಳಿಸುತ್ತಾನೆ.

**(23) ಮತ್ತಾಯ ಸುವಾರ್ತೆ, 8ನೇ ಅಧ್ಯಾಯ, 23, 24, 25, 26 ವಚನಗಳು.**

**(23) ಆತನು ದೋಣಿಯನ್ನು ಹತ್ತಿದಾಗ ಆತನ ಶಿಷ್ಯರು ಆತನ ಹಿಂದೆ ಹೋದರು.**

**(24) ಅಷ್ಟರಲ್ಲಿ ಸಮುದ್ರದ ಮೇಲೆ ತುಫಾನು ಎದ್ದ ಕಾರಣ ಆ ದೋಣಿ ಅಲೆಗಳಿಂದ ಮುಚ್ಚಲ್ಪಟ್ಟಿತು. ಆಗ ಆತನು ನಿದ್ರಿಸುತ್ತಿರುವಾಗ!**

**(25) ಅವರು ಆತನ ಬಳಿಗೆ ಬಂದು ಪ್ರಭೂ ನಾಶವಾಗಿ ಹೋಗುತ್ತಿದ್ದೇವೆ ನಮ್ಮನ್ನು ರಕ್ಷಿಸೆಂದು ಹೇಳಿ ಆತನನ್ನು ಎಬ್ಬಿಸಿದರು.**

**(26) ಅದಕ್ಕೆ ಆತನು "ಅಲ್ಪ ವಿಶ್ವಾಸಿಗಳೇ! ಯಾಕೆ ಭಯಪಡುತ್ತಿದ್ದೀರೆಂದು" ಅವರೊಂದಿಗೆ ಹೇಳಿ ಎದ್ದು ಗಾಳಿಯನ್ನು ಸಮುದ್ರವನ್ನು ಗದರಿಸಿದಾಗ ಶಾಂತವಾಯಿತು.**

ಇದು ಏಸು ಜೀವನದಲ್ಲಿ ನಡೆದ ಒಂದು ಸಂಘಟನೆ. ಇದರಲ್ಲಿ ಏಸು ಬೋಧಿಸಿರುವುದು ಏನೂ ಇಲ್ಲ ಆದರೇ, ಈ ಸಂಘಟನೆಯಲ್ಲಿ ನಾವು ತಿಳಿಯಬೇಕಾಗಿರುವುದು ಎಷ್ಟೋ ಇದೆ. ಇಲ್ಲಿ ಸಮುದ್ರ, ತುಫಾನು ಎರಡೂ ಪ್ರಕೃತಿಗೆ ಸಂಬಂಧಿಸಿರುವವು. ತುಫಾನಲ್ಲಿನ ಗಾಳಿಯಾಗಲೀ, ಸಮುದ್ರದಲ್ಲಿನ ನೀರಾಗಲೀ ಎರಡೂ ಪ್ರಕೃತಿಯಲ್ಲಿನ ಭಾಗಗಳೇ. ಪ್ರಕೃತಿ ಪರಮಾತ್ಮನ ಅಧೀನದಲ್ಲಿ ಮಾತ್ರವಿರುತ್ತದೆ. ಹೊರಗಿನ ಪ್ರಕೃತಿಯಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎಂಬ ಐದು ಭಾಗಗಳು ಒಂದು ಪರಿಶುದ್ಧಾತ್ಮವಾದ ದೇವರ ಅಧೀನದಲ್ಲಿ ಇವೆ. ಪರಮಾತ್ಮ ನಂತರ ದೈವತ್ವವಿರುವ ಆತ್ಮಗೆ ಕೂಡಾ ಪ್ರಕೃತಿ ಮೇಲೆ ಅಧಿಕಾರವಿಲ್ಲ. ಶರೀರದಲ್ಲಿರುವ ಆತ್ಮಗೆ ಶರೀರ ರೂಪದಲ್ಲಿರುವ ಚರ ಪ್ರಕೃತಿ ಮೇಲೆ ಮಾತ್ರ ಅಧಿಕಾರವಿರುತ್ತದೆ. ಬದಲಾವಣೆಯಾಗದ ಅಚರ ಪ್ರಕೃತಿ ಮೇಲೇ ಆತ್ಮಗೆ ಅಧಿಕಾರ ಇರುವುದಿಲ್ಲ. ಆತ್ಮ ಮಾತನ್ನು ಪ್ರಕೃತಿ ಕೇಳುವುದಿಲ್ಲ. ಹೊರಗೆ ಕಾಣಿಸುವ ಪ್ರಕೃತಿಯು ಪರಮಾತ್ಮನಾದ ದೇವರ ಮಾತನ್ನು ಮಾತ್ರ ಕೇಳಬಲ್ಲದು. ಪ್ರಕೃತಿ ಐದು ಭೂತಗಳೊಂದಿಗೆ ಕೂಡಿಕೊಂಡಿದೆ. ಭೂತ ಎಂದರೇ ಜೀವಿಯು ಎಂದು ಅರ್ಥ. ಪ್ರಕೃತಿಯಲ್ಲಿನ ಐದು ಭಾಗಗಳು ಐದು ಜೀವಿಗಳಾಗಿ ಇರುವುದರಿಂದ ದೇವರು ಹೇಳಿರುವ ಮಾತನ್ನು ಐದು ಭೂತಗಳು ಗೌರವಿಸುತ್ತಿವೆ. ಪರಮಾತ್ಮ ಹೇಳಿದ ಹಾಗೆ ನಡೆದುಕೊಳ್ಳುತ್ತವೆ.

ಏಸು ಸಾಮಾನ್ಯವಾದ ಮನುಷ್ಯನಂತಿರುವ ಪರಿಶುದ್ಧಾತ್ಮ ಆಗಿರುವುದರಿಂದ ಏಸು ಹೇಳಿರುವ ಮಾತನ್ನು ಗೌರವಿಸಿ ಸಮುದ್ರದಲ್ಲಿ ಎದ್ದ ತುಫಾನು ನಿಂತುಹೋಗಿದೆ. ಹೊರಗಿನ ಪ್ರಕೃತಿಯನ್ನು ಶಾಶಿಸುವ ಶಕ್ತಿ ದೇವರಿಗೊಬ್ಬನಿಗೇ ಇದೆ ಆದ್ದರಿಂದ ಏಸುಪ್ರಭುವನ್ನು ದೇವರ ಅವತಾರವೆಂದು ಹೇಳಬಹುದು. ದೇವರು ಮನುಷ್ಯನ ಹಾಗೆ ಭೂಮಿ ಮೇಲಕ್ಕೆ ಬಂದು ತನ್ನ ಜ್ಞಾನವನ್ನು ಹೇಳಿ ಹೋಗುತ್ತಾನೆಂದು ಪ್ರಥಮ ದೈವಗ್ರಂಥ ಭಗವದ್ಗೀತೆಯಲ್ಲಿನ ಜ್ಞಾನಯೋಗವೆಂಬ ಅಧ್ಯಾಯದಲ್ಲಿ ಏಳು, ಎಂಟು, ಒಂಭತ್ತನೇ ಶ್ಲೋಕಗಳಲ್ಲಿ ಹೇಳಿದ್ದಾರೆ. ಆದರೇ ದೇವರು ಮನುಷ್ಯನ ಆಕಾರದಲ್ಲಿ ಬಂದರೇ ಆತನು ಸಾಧಾರಣ ಮನುಷ್ಯನಲ್ಲದಿದ್ದರೂ, ಸಾಧಾರಣ ಮನುಷ್ಯನ ಹಾಗೆ ಕಾಣಿಸುವುದರಿಂದ, ದೇವರ ಅವತಾರವಾದ ಭಗವಂತನನ್ನು ನೋಡಿದರೂ ಆತನು ಸಾಧಾರಣ ಮನುಷ್ಯನ ಹಾಗೆ ಇರುವುದರಿಂದ, ಆತನನ್ನು (ದೇವರನ್ನು) ಯಾರೂ ಗುರುತಿಸುವುದಕ್ಕೆ ಸಾಧ್ಯವಿಲ್ಲ. ದೇವರು ಮನುಷ್ಯನಾಗಿ ಬಂದರೇ ಆತನನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗದಿದ್ದರೂ ಕೊನೆಗೆ ದೇವರನ್ನು ತಿಳಿಯುವುದಕ್ಕೆ ಎರಡು ಆಧಾರಗಳು ಇವೆಯೆಂದು ಹೇಳಬಹುದು. **ಒಂದು ಎಲ್ಲಿ ದೈವ ಧರ್ಮಗಳು ಬೋಧಿಸಲ್ಪಡುತ್ತಿವೆಯೋ ಅಲ್ಲಿ ದೇವರ ಅವತಾರವು ಇರಬಹುದೆಂದು ತಿಳಿಯಬಹುದು. ಎರಡನೆಯದು ಎಲ್ಲಿ ಪ್ರಕೃತಿ ಯಾರ ಮಾತನ್ನು ಕೇಳುತ್ತಿದೆಯೋ ಅಲ್ಲಿ ಆತನನ್ನು ದೇವರ ಅವತಾರವೆಂದು ಗುರುತಿಸಬಹುದು.** ಮನುಷ್ಯನ ರೂಪದಲ್ಲಿರುವ ದೇವರನ್ನು ಗುರುತಿಸುವುದಕ್ಕೆ ಎರಡು ಅವಕಾಶಗಳಿವೆ ಎಂದು ತಿಳಿಯುತ್ತಿದೆ. ಅದರಲ್ಲಿ ಏಸುಪ್ರಭು ಸಮುದ್ರವನ್ನು ಅಣಗಿ ಹೋಗೆಂದು ಹೇಳಿದಾಗ ತುಫಾನು ಅಣಗಿ ಹೋಗುವುದನ್ನು ನೋಡಿದರೇ ಅಲ್ಲಿ ತುಫಾನನ್ನು ಶಾಶಿಸಿರುವುದು ದೇವರೆಂದೇ ತಿಳಿಯಬಹುದು. ಹೀಗೆ ಧರ್ಮಗಳನ್ನು ತಿಳಿಸಿದಾಗ, ಪ್ರಕೃತಿಯನ್ನು ಶಾಶಿಸಿದಾಗ ಮನುಷ್ಯನ ರೂಪದಲ್ಲಿ ಇರುವ ದೇವರನ್ನು ಗುರುತಿಸಬಹುದು. ಆದ್ದರಿಂದ ಏಸುಪ್ರಭು ದೈವಜ್ಞಾನವನ್ನು ಬೋಧಿಸಿದ್ದಾನೆ, ಹಾಗೆಯೇ ಆಚರಿಸಿ ತೋರಿಸಿದ್ದಾನೆ. ಪ್ರಕೃತಿಯನ್ನು ಶಾಶಿಸಿದ್ದಾನೆ. ಆದ್ದರಿಂದ ಏಸುಪ್ರಭುವನ್ನು ದೇವರು ಮಾರು

ವೇಷದಲ್ಲಿ ಬಂದಿರುವ ದೇವರೆಂದು ತಿಳಿಯಬಹುದು. ಸಮುದ್ರದ ಮೇಲೆ ಪ್ರಯಾಣದಲ್ಲಿ ತುಫಾನನ್ನು ಅಣಗಿ ಹೋಗೆಂದು ಹೇಳುವುದರಿಂದ, ಹೇಳಿದ ಕೂಡಲೇ ತುಫಾನು ನಿಂತುಹೋಗಿರುವು ದರಿಂದ ಏಸು ದೇವರೇಯೆಂದು ನಿರೂಪಣೆಗೆ ಬಂದಿದೆ.

**(24) ಮತ್ತಾಯ ಸುವಾರ್ತೆ, 9ನೇ ಅಧ್ಯಾಯ, 6ನೇ ವಚನ.**

**(6) ಪಾಪಗಳನ್ನು ಕ್ಷಮಿಸುವುದಕ್ಕೆ ಭೂಮಿ ಮೇಲೆ ಮನುಷ್ಯ ಕುಮಾರನಿಗೆ ಅಧಿಕಾರ ಇದೆಯೆಂದು ನೀವು ತಿಳಿದುಕೊಳ್ಳಬೇಕೆಂದು ಹೇಳಿ ಆತನು ಪಾರ್ಶ್ವವಾಯುವು ಇರುವವನನ್ನು ನೋಡಿ ನೀನು ಎದ್ದು ನಿನ್ನ ಮಂಚವನ್ನು ಎತ್ತಿಕೊಂಡು ನಿನ್ನ ಮನೆಗೆ ಹೋಗೆಂದು ಹೇಳಿದಾಗ ಅವನು ಎದ್ದು ತನ್ನ ಮನೆಗೆ ಹೋದನು.**

ಪಾಪವನ್ನು ಕ್ಷಮಿಸುವುದಕ್ಕೆ ಭೂಮಿ ಮೇಲೆ ಮನುಷ್ಯ ಕುಮಾರನಿಗೆ ಅಧಿಕಾರವಿದೆ ಎಂದು ಸ್ವತಃವಾಗಿ ಏಸು ಹೇಳಿದ್ದಾನೆ. ಪಾರ್ಶ್ವವಾಯುವು ಬಂದಿರುವವನನ್ನು ಏಸು ಬಳಿಗೆ ಕರೆದುಕೊಂಡು ಬಂದಾಗ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು ಪಾರ್ಶ್ವವಾಯು ಇರುವವನಿಗೆ ಹೇಳಿದನು. ಆಗ ಅಲ್ಲೇ ಇದ್ದ ಶಾಸ್ತ್ರಿಗಳು ಕೆಲವರು ಏಸು ದೈವದೂಷಣೆ ಮಾಡುತ್ತಿದ್ದಾನೆಂದು ಅವರು ತಮ್ಮೊಂದಿಗೆ ತಾವು ಅಂದುಕೊಂಡಾಗ ಏಸು ಅವರ ಯೋಚನೆಗಳನ್ನು ಗ್ರಹಿಸಿ "ನೀವು ಯಾಕೆ ನಿಮ್ಮ ಹೃದಯಗಳಲ್ಲಿ ದುರಾಲೋಚನೆ ಮಾಡುತ್ತಿದ್ದೀರಾ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳುವುದು ಸುಲಭವೇ? ಎದ್ದು ಓಡಾಡಲು ಹೇಳುವುದು ಸುಲಭವೇ?" ಎಂದು ಪ್ರಶ್ನಿಸಿ ಅವರಿಗೆ ಅರ್ಥವಾಗುವ ಹಾಗೆ ಪಾಪಗಳನ್ನು ಕ್ಷಮಿಸುವುದಕ್ಕೆ ಭೂಮಿ ಮೇಲೆ ಮನುಷ್ಯ ಕುಮಾರನಿಗೆ ಅಧಿಕಾರವಿದೆ ಎಂದು ನೀವು ತಿಳಿದುಕೊಳ್ಳಿರೆಂದು ಹೇಳಿ, ಪಾರ್ಶ್ವವಾಯುವು ಬಂದಿರುವವನನ್ನು ನೋಡಿ ನೀನು ಎದ್ದು ನಿನ್ನ ಮಂಚವನ್ನು ಎತ್ತಿಕೊಂಡು ನಿನ್ನ ಮನೆಗೆ ಹೋಗು ಎಂದು ಹೇಳಿದಾಗ, ಅವನು ಎದ್ದು ತನ್ನ ಮಂಚವನ್ನು ಎತ್ತಿಕೊಂಡು ತನ್ನ ಮನೆಗೆ ಹೊರಟನು.

ಇದೆಲ್ಲವನ್ನು ಗಮನಿಸಿದರೇ ನಮಗೆ ಎಲ್ಲಾ ಗೊತ್ತು ಅಂದುಕೊಂಡ ಶಾಸ್ತ್ರಿಗಳು ಏಸುವನ್ನು ಕೆಟ್ಟದಾಗಿ ಅಂದುಕೊಳ್ಳುವುದರಿಂದ ಏಸು ಹಾಗೆ ಮಾಡಿ ತೋರಿಸಿದ್ದಾನೆ. ಅಷ್ಟೇ ಅಲ್ಲದೇ ಪಾಪ ಕ್ಷಮಾಪಣೆ ಭೂಮಿ ಮೇಲೆ ಮನುಷ್ಯಕುಮಾರನಿಗೆ ಇದೆಯೆಂದು ಹೇಳಿದ್ದಾನೆ. ಆತನು ದೇವರ ಕುಮಾರನಾಗಿ ಭೂಮಿ ಮೇಲಕ್ಕೆ ಬಂದಿದ್ದರೂ ತನ್ನನ್ನು ತಾನು ತಗ್ಗಿಸಿಕೊಂಡು ತನ್ನನ್ನು ಮನುಷ್ಯ ಕುಮಾರನಾಗಿಯೇ ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲದೇ ಪಾಪ ಕ್ಷಮಾಪಣೆ ಭೂಮಿಮೇಲೆ ತನಗೊಬ್ಬನಿಗೇ ಇದೆಯೆಂದು ಹೇಳುವುದೇ ಅಲ್ಲದೆ, ಮಾಡಿ ತೋರಿಸಿದ್ದಾನೆ. ಪಾಪಗಳನ್ನು ಕ್ಷಮಿಸುವ ಅಧಿಕಾರ ದೇವರಿಗೆ (ಪರಿಶುದ್ಧಾತ್ಮಗೆ) ಒಬ್ಬನಿಗೇ ಇದೆಯೆಂದು ತಿಳಿದವನು ಏಸುಪ್ರಭುವಾಗಿ ಬಂದಿರುವವನು ಯಾರೋ ತಿಳಿದುಕೊಳ್ಳಬಲ್ಲನು. ಆತನು ಪರಿಶುದ್ಧಾತ್ಮದಿಂದ ಬಂದಿರುವ ದೇವರಾದರೂ ತನ್ನನ್ನು ಯಾರೂ ಗುರುತಿಸದ ಹಾಗೆ ಮನುಷ್ಯ ಕುಮಾರನಾಗಿ ಹೇಳುವುದು ನಡೆದಿದೆ. ಕಾಲುಗಳು ಕೈಗಳು ಕೆಲಸ ಮಾಡದ ಪಾರ್ಶ್ವವಾಯು ಇರುವವನು ಏಸು ಹೇಳಿದ ಕೂಡಲೇ ಎದ್ದು ತನ್ನ ಮಂಚವನ್ನು ತಾನೇ ಎತ್ತಿಕೊಂಡು ಹೋದನು. ಅದನ್ನು ನೋಡಿದ ಪ್ರಜೆಗಳು ಆಶ್ಚರ್ಯಪಟ್ಟರು. ಅಷ್ಟು ದೊಡ್ಡ ಕಾರ್ಯವನ್ನು ಮಾಡಿದ ಏಸುವನ್ನು ಕೊನೆಗೆ ಸಾಧಾರಣ ಮನುಷ್ಯನ ಹಾಗೆಯೇ ಲೆಕ್ಕಹಾಕಿದ್ದಲ್ಲದೇ ತಪ್ಪು ಮಾಡಿರುವ ಆರೋಪಿಯೆಂದು ನ್ಯಾಯ ಸ್ಥಾನದಲ್ಲಿ ನಿಲ್ಲಿಸಿದರು. ಆದ್ದರಿಂದ ಮನುಷ್ಯರು "ಮಾಡಿರುವ ಉಪಕಾರವನ್ನು ಮರೆಯುವವರೆಂದು" ಹೇಳಬಹುದು.

**(25) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 20ನೇ ವಚನ.**

## (20) ನಿಮ್ಮ ತಂದೆ ಆತ್ಮ ನಿಮ್ಮಲ್ಲಿದ್ದು ಮಾತನಾಡುತ್ತಿದ್ದಾನೇ ಹೊರತು ಮಾತನಾಡುವವರು ನೀವಲ್ಲ.

ಈ ವಾಕ್ಯವು ಸರ್ವ ಸಾಧಾರಣ ಜ್ಞಾನವಾಗಿ ಕಾಣಿಸಿದರೂ ಬಹಳ ಮುಖ್ಯವಾದ ವಾಕ್ಯವೆಂದು ಹೇಳಬಹುದು. ಆಧ್ಯಾತ್ಮಿಕ ವಿದ್ಯೆಯಲ್ಲಿ ಅತಿ

ರಹಸ್ಯವಾದ ಜ್ಞಾನವು ಇದರಲ್ಲಿ ಒಳಗೊಂಡಿದೆ. ಇದನ್ನು ವಿವರಿಸಿಕೊಂಡು ನೋಡಿದರೇ ವಾಕ್ಯದಲ್ಲಿ ಹೇಳಿರುವ **'ನಿಮ್ಮ ತಂದೆ'** ಎನ್ನುವವನು ಹೊರಗೆ ಭೌತಿಕ ದೇಹಕ್ಕೆ ತಂದೆಯಾದವನಲ್ಲ ಎಂದೂ, ಅಭೌತಿಕವಾದ ಜೀವಾತ್ಮಗೆ ತಂದೆಯಾದವನನ್ನೆ ಹೇಳಿಕೊಳ್ಳಬೇಕೆಂದು ತಿಳಿಯಬೇಕು. ಜೀವಾತ್ಮಗೆ ತಂದೆಯಾದವನು ಶರೀರದಲ್ಲಿ ಇದ್ದು ಶರೀರವನ್ನು ಎಲ್ಲಾ ವಿಧಗಳಲ್ಲಿ ನಡೆಸುವ ಆತ್ಮ ಎಂದು ತಿಳಿಯಬೇಕು. **ಜೀವಾತ್ಮಕ್ಕೆ ಆತ್ಮ ತಂದೆಯಾಗಿರುವಾಗ, ಆತ್ಮಗೆ ಪರಮಾತ್ಮ ತಂದೆಯಾಗಿ ಇದ್ದಾನೆಂದು ಮರೆಯಬಾರದು**. ಮನುಷ್ಯನಾಗಿ ಜೀವಾತ್ಮ ಇರುವಾಗ, ಜೀವಾತ್ಮನಾದ ಮನುಷ್ಯನನ್ನು ಜೀವಿಯು ಮಾಡಿಕೊಂಡಿರುವ ಕರ್ಮಪ್ರಕಾರ ಎಲ್ಲಾ ವಿಧಗಳಲ್ಲಿ ಆಡಿಸುತ್ತಾ ಜೀವಿಯಿಂದ ಕರ್ಮಗಳನ್ನು (ಪಾಪಪುಣ್ಯಗಳನ್ನು) ಆತ್ಮ ಅನುಭವಿಸುವ ಹಾಗೆ ಮಾಡುತ್ತಿದೆ. ಶರೀರದಲ್ಲಿ ಪ್ರತೀ ಕಾರ್ಯವನ್ನು ಕಾರ್ಯಕರ್ತನ ಹಾಗೆ ಇದ್ದು ಮಾಡುತ್ತಾ, ಶರೀರದಿಂದ ಮಾಡಿಸುತ್ತಾ ಜೀವಾತ್ಮನನ್ನು ಸುಖ ದುಃಖಗಳನ್ನು ಅನುಭವಿಸುವ ಹಾಗೆ ಮಾಡುತ್ತಿದೆ.

ಜೀವಿಯು ಶರೀರದಲ್ಲಿ ಯಾವ ಕಾರ್ಯವನ್ನು ಮಾಡದವನಾಗಿ ಸುಮ್ಮನಿದ್ದಾನೆ. ಕಾರ್ಯಗಳನ್ನು ಮಾಡದೇ ಹೋದರೂ ನಡೆದ ಕೆಲಸಗಳಲ್ಲಿ ಇರುವ ಸುಖ ದುಃಖಗಳನ್ನು ಮಾತ್ರ ಮೌನವಾಗಿ ಅನುಭವಿಸುತ್ತಿದ್ದಾನೆ. ಶರೀರದಲ್ಲಿ ಮನುಷ್ಯನಾಗಿ ಜೀವಾತ್ಮನನ್ನೇ ಹೇಳುತ್ತಿದ್ದರೂ, ಜೀವಾತ್ಮ ಯಾವ ಕಾರ್ಯವನ್ನು ಮಾಡದೆ, ಮಾಡುವುದಕ್ಕೆ ಕೈಲಾಗದೆ ಸುಮ್ಮನಿದ್ದರೂ, ಶರೀರದಲ್ಲಿ ನಡೆಯುವ ಕಾರ್ಯಗಳೆಲ್ಲವನ್ನು ಆತ್ಮವೇ ಮಾಡುತ್ತಿದ್ದರೂ, ಜೀವಿಯು ಅಜ್ಞಾನದಿಂದ ಆತ್ಮ ಮಾಡಲಿಲ್ಲವೆಂದು, ಎಲ್ಲ ಕಾರ್ಯಗಳನ್ನು ನಾನೇ ಮಾಡುತ್ತಿದ್ದೇನೆಂದು ಅಹಂ ಹೇಳಿರುವ ಮಾತನ್ನು ಕೇಳಿ, ತನ್ನನ್ನೇ ಕಾರ್ಯಕರ್ತನಾಗಿ ಭಾವಿಸಿಕೊಳ್ಳುತ್ತಿದ್ದಾನೆ. ವಾಸ್ತವವಾಗಿ ಕಾರ್ಯಕರ್ತ ಆತ್ಮ ಆಗಿದ್ದರೂ ಆತ್ಮನನ್ನು ಲೆಕ್ಕಿಸದೆ, ಆತ್ಮವು ಒಂದಿದೆಯೆಂದು ಮರೆತವನಾಗಿ ತನ್ನನ್ನೇ ಎಲ್ಲ ಕಾರ್ಯಗಳಿಗು ಕರ್ತನಾಗಿ ಅಂದುಕೊಳ್ಳುತ್ತಿದ್ದಾನೆ. ಅಂತಹ

ಅಜ್ಞಾನ ಮನುಷ್ಯನಿಗೆ ಜ್ಞಾನ ಉಂಟಾಗುವ ಹಾಗೆ ಏಸು ತನ್ನ ಮಾತುಗಳಲ್ಲಿ ಮೇಲಿನ ವಾಕ್ಯವನ್ನು ಹೇಳಿದ್ದಾನೆ. **"ನಿಮ್ಮ ತಂದೆ ಆತ್ಮ ನಿಮ್ಮಲ್ಲಿ ಇದ್ದು ಮಾತನಾಡುತ್ತಿದೆಯೇ ಹೊರತು, ಮಾತನಾಡುವವರು ನೀವಲ್ಲ"** ಎಂದು ಹೇಳಿದ್ದಾನೆ. ಈ ವಾಕ್ಯವನ್ನು ಅನುಸರಿಸಿ ಮಾಡುವ ಕೆಲಸವೇ ಅಲ್ಲದೇ, ಮಾತನಾಡುವ ಮಾತು ಕೂಡಾ ಜೀವಾತ್ಮ ಮಾತನಾಡಲಿಲ್ಲವೆಂದು, ಮಾತುಗಳು ಕೂಡಾ ಆತ್ಮವೇ ಮಾತನಾಡುತ್ತಿದೆಯೆಂದು, ನಾವು ಮಾತನಾಡುತ್ತಿದ್ದೇವೆಂದು ಮನುಷ್ಯರು ಅಂದುಕೊಳ್ಳುವುದು ಪೂರ್ತಿ ಅಜ್ಞಾನವಾಗುತ್ತದೆಂದು ಏಸು ಹೇಳಿದ್ದಾನೆ. ದಶೇಂದ್ರಿಯಗಳು ಮಾಡುವ ಯಾವ ಕಾರ್ಯವಾಗಲೀ ಜೀವಾತ್ಮ ಮಾಡಲಿಲ್ಲವೆಂದು, ಇಂದ್ರಿಯ ಭಾಗಗಳಿಂದ ಆತ್ಮವೇ ಮಾಡುತ್ತಿದೆಯೆಂದು ತಿಳಿಯುತ್ತಿದೆ. ಈ ಸತ್ಯವನ್ನು ತಿಳಿಯುವುದು ಜ್ಞಾನಗಳೆಲ್ಲದಕ್ಕಿಂತಲೂ ಉತ್ತಮವಾದ ಜ್ಞಾನ.

### (26) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 30ನೇ ವಚನ.

## (30) ನಿಮ್ಮ ತಲೆ ಕೂದಲುಗಳೆಲ್ಲವೂ ಲೆಕ್ಕಿಸಲ್ಪಟ್ಟಿವೆ.

ಮನುಷ್ಯ ತನ್ನ ಮನಸ್ಸಿನಲ್ಲಿ ಎಷ್ಟೋ ವಿಷಯಗಳನ್ನು ದೇವರಲ್ಲಿ ಹೇಳಿಕೊಳ್ಳುತ್ತಿರುತ್ತಾನೆ. ದೇವರಿಗೆ ಹೇಳಿಕೊಳ್ಳುತ್ತಿದ್ದಾನೆಂದರೇ ದೇವರಿಗೆ ತಿಳಿಯದೆಂದೇ ಅವನ ಉದ್ದೇಶ. ಮನುಷ್ಯರೆಲ್ಲರಲ್ಲೂ ಆ ಭಾವನೆ ಇರುವುದರಿಂದ ದೇವರ ಗುಡಿಯಲ್ಲಿ ದೇವರ ಎದುರು ಭಯ, ಭಕ್ತಿ ಪ್ರದರ್ಶಿಸಿದವನು ಹೊರಗೆ ಬಂದ ನಂತರ ಏನು ಮಾಡಿದರೂ ದೇವರಿಗೆ ತಿಳಿಯದೆಂಬ ಭಾವದಿಂದಲೇ ಪ್ರವರ್ತಿಸುತ್ತಿರುತ್ತಾನೆ. ದೇವಾಲಯದಲ್ಲಿ ಭಕ್ತಿಯಾಗಿದ್ದವನು ಆಲಯದ ಹೊರಗೆ ಬಂದ ನಂತರ ರೈಲಿನಲ್ಲಿ ಇಬ್ಬರ ಸೀಟು ತನಗೊಬ್ಬನಿಗೇ ಬೇಕೆಂದು ಆಕ್ರಮಿಸಿಕೊಂಡು ಇತರ ಪ್ರಯಾಣಿಕರಿಗೆ ಜಾಗ ಬಿಡದೆ ಹೊಡೆದಾಡುತ್ತಿರುತ್ತಾನೆ. ಅದು ಒಳ್ಳೆಯ ಪದ್ಧತಿ ಅಲ್ಲದಿದ್ದರೂ ಹಾಗೆ ಮಾಡುತ್ತಿದ್ದಾನೆಂದರೇ ಗುಡಿಯಲ್ಲಿಯೇ ದೇವರಿಗೆ ತಿಳಿಯುವುದು, ರೈಲಿನಲ್ಲಿ ತಿಳಿಯುವುದಿಲ್ಲ

ಎಂದುಕೊಳ್ಳುವುದರಿಂದಲೇ ಹಾಗೆ ಮಾಡಿದ್ದಾನೆ. **ದೇವರಿಗೆ ಎಲ್ಲಾ ತಿಳಿಯುವುದೆಂದು, ದೇವರು ಸೂಜಿ ಮೊನೆಯಷ್ಟು ಕೂಡಾ ಸಂದಿಲ್ಲದೇ ಪ್ರಪಂಚವೆಲ್ಲೆಡೆ ವ್ಯಾಪಿಸಿದ್ದಾನೆಂದು, ಯಾರೂ ಇಲ್ಲದ ನಿರ್ಜನ ಪ್ರದೇಶದಲ್ಲಿ ತಾನು ಒಬ್ಬನು ಮಾಡಿದ ತಪ್ಪನ್ನು ಕೂಡಾ ದೇವರು ಅಲ್ಲಿದ್ದು ನೋಡುತ್ತಿದ್ದಾನೆಂದು ಅವನಿಗೆ ತಿಳಿದಿಲ್ಲ**. ಮಾನವನು ದೇವರಿಗೆ ಎಲ್ಲಾ ತಿಳಿಯುವುದಿಲ್ಲ ಎಂಬ ಭಾವದಲ್ಲಿದ್ದಾನೆ ಆದ ಕಾರಣ ದೇವರ ಮಹಿಮೆಯನ್ನು ಕುರಿತು ಪ್ರಭು ತಿಳಿಸುತ್ತಾ ಮೇಲಿನ ವಾಕ್ಯವನ್ನು ಹೇಳಿದ್ದಾನೆ.

ಮೇಲಿನ ವಾಕ್ಯದಲ್ಲಿ ದೇವರು ಮಾನವರ ಬಗ್ಗೆ ಎಷ್ಟು ಜಾಗ್ರತೆಯಾಗಿ ಇರುವುದು ಅರ್ಥವಾಗುತ್ತದೆ. ದೇವರು ಮಾನವರ ಬಗ್ಗೆ ಒಂದು ವಿಧಾನವನ್ನು ಏರ್ಪಡಿಸಿ, ಅದರ ಮೂಲಕ ಪ್ರತಿಯೊಂದನ್ನು ಗುರುತಿಸುತ್ತಿದ್ದಾನೆ, ನೆರವೇರುವಂತೆ ಮಾಡುತ್ತಿದ್ದಾನೆ. **'ಕರ್ಮವಿಸರ್ಗ'**ವೆಂಬ ಚಿಕ್ಕ ಚಿಕ್ಕ ಲೆಕ್ಕಾಚಾರಗಳು ಕೂಡಾ ದೇವರ ಹತ್ತಿರ ಇವೆ. ಅದರಿಂದಲೇ ಮನುಷ್ಯ ತನ್ನ ಜೀವನದಲ್ಲಿ ಕಣ್ಣರೆಪ್ಪೆಗಳು ಎಷ್ಟು ಬಾರಿ ಮುಚ್ಚಿ ತೆರೆಯಬೇಕೆನ್ನುವುದು ನಿರ್ಣಯಿಸಿ ಹಾಗೆಯೇ ಒಂದು ಕೂಡಾ ಹೆಚ್ಚು ಕಡಿಮೆ ಇಲ್ಲದೇ ನೆರವೇರುವ ಹಾಗೆ ಮಾಡುತ್ತಿದ್ದಾನೆ. ಕರ್ಮ ವಿಸರ್ಗದ ಮೂಲಕ ನಮ್ಮ ತಲೆಯಲ್ಲಿ ಎಷ್ಟು ಕೂದಲುಗಳು ಇರಬೇಕೋ, ಯಾವುದು ಯಾವಾಗ ಉದುರಿ ಹೋಗಬೇಕೋ ಕೂಡಾ ಲೆಕ್ಕಿಸಲ್ಪಟ್ಟಿದೆ. ತಲೆ ಕೂದಲುಗಳಿಂದ ಸಹ ಲೆಕ್ಕಚಾರವಿರುವಾಗ ಮನುಷ್ಯನಿಗೆ ನಡೆಯುವ ದೊಡ್ಡ ಚಿಕ್ಕ ಕಾರ್ಯಗಳೆಲ್ಲವು ದೇವರಿಂದ ಗುರುತಿಸಲ್ಪಟ್ಟೇ ಇವೆ. ಯಾರಿಗೆ ಯಾವ ಸಮಯದಲ್ಲಿ ಯಾವ ಆಪತ್ತು ಬರುತ್ತದೆ, ಅದರಲ್ಲಿ ಎಷ್ಟು ಬಾಧೆಪಡಬೇಕಾಗಿರುವುದು ಎಲ್ಲವೂ ಸೂಕ್ಷ್ಮಾತಿ ಸೂಕ್ಷ್ಮವಾಗಿ ದೇವರಿಂದ ಗುರುತಿಸಲ್ಪಟ್ಟಿವೆ. ದೇವರಿಗೆ ಭೂಮಿ ಮೇಲೆ ನಡೆದಿರುವವು, ನಡೆಯುತ್ತಿರುವವು, ನಡೆಯುವವು ಎಲ್ಲಾ ತಿಳಿದಿದೆ ಎಂದು ಭಗವದ್ಗೀತೆಯಲ್ಲಿ ಕೂಡಾ ಪ್ರಭು ಹೇಳುವುದು ನಡೆದಿದೆ. ಇದನ್ನು ಅನುಸರಿಸಿ ದೇವರಿಗೆ ತಿಳಿಯದಿರುವುದು ಯಾವುದೂ ಇಲ್ಲವೆಂಬ ವಿಷಯವು ಸ್ಪಷ್ಟವಾಗುತ್ತಿದೆ.

**(27) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 34, 35, 36 ವಚನಗಳು.**

**(34) ನಾನು ಭೂಮಿ ಮೇಲಕ್ಕೆ ಸಮಾಧಾನವನ್ನು ಕಳುಹಿಸಲು ಬಂದಿದ್ದೇನೆಂದು ತಿಳಿಯಬೇಡಿ. ಖಡ್ಗವನ್ನೇ ಹೊರತು ಸಮಾಧಾನ ವನ್ನು ಕಳುಹಿಸುವುದಕ್ಕೆ ನಾನು ಬರಲಿಲ್ಲ.**

**(35) ಒಬ್ಬ ಮನುಷ್ಯನಿಗು ಅವನ ತಂದೆಗು, ಹೆತ್ತ ಮಗಳಿಗು ಆಕೆಯ ತಾಯಿಗು, ಸೊಸೆಗು ಆಕೆಯ ಅತ್ತೆಗು ವಿರೋಧವನ್ನು ಇಡಲು ಬಂದಿದ್ದೇನೆ.**

**(36) ಒಬ್ಬ ಮನುಷ್ಯನ ಮನೆಯವರೇ ಆತನಿಗೆ ಶತ್ರುಗಳು ಆಗುತ್ತಾರೆ.**

ಈ ಮೂರು ವಾಕ್ಯಗಳು ಲೋಕ ವಿರುದ್ಧವಾಗಿ ಕಾಣಿಸುವ ಹಾಗೆ ಇವೆ. ಏಸುಪ್ರಭು ಮನುಷ್ಯರ ಮಧ್ಯೆ ವಿವಾದ ಮತ್ತು ವಿರೋಧ ಇಡಲು ಬಂದಿದ್ದಾನೆಂದು ಹೇಳುವುದು ಒಳ್ಳೆಯದಾಗಿ ಕಾಣಿಸದಿದ್ದರೂ, ಆ ವಿಧವಾಗಿ ನಡೆಯುತ್ತಿರುವುದು ಮಾತ್ರ ವಾಸ್ತವವೇ. ಹಾಗೆಂದು ಏಸು ಉದ್ದೇಶ ಪೂರ್ವಕವಾಗಿ ಮನುಷ್ಯರ ಮಧ್ಯೆ ವಿವಾದಗಳು ಸೃಷ್ಟಿಸಲಿಲ್ಲ. ಆತನು ಬಂದಿರುವುದು ಮನುಷ್ಯರನ್ನು ಅಜ್ಞಾನದಿಂದ ಜ್ಞಾನದ ಕಡೆ ನಡೆಸುವುದಕ್ಕಾಗಿಯೇ ಹೊರತು ವಿವಾದಗಳನ್ನು ಇಡುವುದಕ್ಕಾಗಿ ಅಲ್ಲ. ಆತನು ಒಳ್ಳೆಯ ಉದ್ದೇಶದಿಂದ ಪ್ರಜೆಗಳಿಗೆ ಜ್ಞಾನವನ್ನು ಹೇಳಿದರೇ ಅದು ಮನುಷ್ಯರ ಮಧ್ಯೆ ವಿವಾದವಾಗಿ ಬದಲಾಗುತ್ತಿದೆ. ತಣ್ಣಗಿರಬೇಕೆಂದು ನೀರನ್ನು ಚೆಲ್ಲಿದರೇ ಮರಳು ತಣ್ಣಗಾಗುತ್ತದೆ ಆದರೇ ಸುಣ್ಣದ ಕಲ್ಲು ಇನ್ನೂ ಬಿಸಿಯಾಗಿ ತನ್ನ ರೂಪವನ್ನು ಬದಲಾಯಿಸಿ ಕೊಂಡು ಸುಣ್ಣವಾಗಿ ತಯಾರಾಗುತ್ತದೆ. ಹಾಗೆಯೇ ಏಸು ಹೇಳಿರುವ ಜ್ಞಾನದಿಂದ ಜ್ಞಾನ ಸಂಸ್ಕಾರರು ಸಂತೋಷಿಸುವಾಗ, ಜ್ಞಾನ ಸಂಸ್ಕಾರ ಇಲ್ಲದವರಲ್ಲಿ ವಿವಾದಗಳು ಹುಟ್ಟಿಬರುತ್ತಿವೆ. ಗಂಡ ಜ್ಞಾನ ತಿಳಿಯುವುದಕ್ಕೆ ಪ್ರಯತ್ನಿಸಿದರೇ

ಹೆಂಡತಿ ಒಪ್ಪಿಕೊಳ್ಳುತ್ತಿಲ್ಲ. ಹಾಗೆಯೇ ಕೆಲವು ಕಡೆಗಳಲ್ಲಿ ಹೆಂಡತಿ ಜ್ಞಾನ ತಿಳಿಯುವುದಕ್ಕೆ ಪ್ರಯತ್ನಿಸಿದರೇ ಗಂಡ ಒಪ್ಪಿಕೊಳ್ಳುತ್ತಿಲ್ಲ. ಈ ವಿಧವಾಗಿ ಏಸು ಜ್ಞಾನವನ್ನು ಅರ್ಥ ಮಾಡಿಕೊಳ್ಳದ ಕೆಲವರು ಅರ್ಥ ಮಾಡಿಕೊಂಡಿರುವವರೊಂದಿಗೆ ತೊಂದರೆ ಪಡುತ್ತಿದ್ದಾರೆ. ಹಾಗೆ ಊಹಿಸದ ಪರಿಣಾಮದಿಂದ ತಂದೆಗು ಮಗನಿಗು, ತಾಯಿಗು ಮಗಳಿಗು, ಅತ್ತೆಗು ಸೊಸೆಗು ಸರಿ ಹೋಗದೆ ಒಂದೇ ಮನೆಯಲ್ಲಿಯೇ ಒಬ್ಬರಿಗೊಬ್ಬರು ಶತ್ರುಗಳಾಗಿ ಬದಲಾಗುತ್ತಿದ್ದಾರೆ. ಏಸು ಉದ್ದೇಶವು ಒಳ್ಳೆಯದೇ ಆದರೂ ಅದು ಊಹಿಸದ ಪರಿಣಾಮದಿಂದ ಮನುಷ್ಯರಲ್ಲಿ ಬಂಧುತ್ವವನ್ನು ಕೂಡಾ ಮರೆತು ಶತ್ರುತ್ವವನ್ನು ಉಂಟು ಮಾಡುತ್ತಿದೆ. ಆದ್ದರಿಂದ ಏಸು ಹೂವನ್ನು ಕೊಟ್ಟರೇ ಅದು ಮುಳ್ಳಿನಂತೆ ಬದಲಾಗುತ್ತಿದೆ. ಆತನು ಬಾಗುವ ಕೋಲನ್ನು ಕೊಟ್ಟರೇ ಅದು ಗಟ್ಟಿಯಾಗಿರುವ ಕತ್ತಿಯಂತೆ ಬದಲಾಗುತ್ತಿದೆ. ಇದೆಲ್ಲಾ ಮನುಷ್ಯರಲ್ಲಿನ ಗುಣಗಳ ಲೋಪವೇ ಹೊರತು ಆತನ ತಪ್ಪು ಏನೂ ಇಲ್ಲ.

## (28) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 37ನೇ ವಚನ.

**(37) ತಂದೆಯನ್ನಾದರೂ, ತಾಯಿಯನ್ನಾದರೂ ನನಗಿಂತಲೂ ಹೆಚ್ಚಾಗಿ ಪ್ರೀತಿಸುವವನು ನನಗೆ ಪಾತ್ರನಲ್ಲ. ಕುಮಾರನನ್ನಾದರೂ, ಮಗಳನ್ನಾದರೂ ನನಗಿಂತಲೂ ಹೆಚ್ಚಾಗಿ ಪ್ರೀತಿಸುವವನು ನನಗೆ ಪಾತ್ರನಲ್ಲ.**

ತಾಯಿ ತಂದೆಯರು ತಮ್ಮ ಮಕ್ಕಳ ಮೇಲೆ ಪ್ರೀತಿ ತೋರಿಸುವುದು ಸಹಜ. ಹಾಗೆಯೇ ಮಕ್ಕಳು ತಮ್ಮ ತಾಯಿತಂದೆಯರ ಮೇಲೆ ಪ್ರೀತಿ ತೋರಿಸುವುದು ಕೂಡಾ ಸಹಜವೇ. ಹೆಚ್ಚು ಪ್ರೀತಿ ಅವರ ಮಧ್ಯೆ ಇರುತ್ತದೆ. ತಾಯಿ ತಂದೆಯರಿಗೆ ತಮ್ಮ ಸಂತಾನದ ಮೇಲೆ ಇರುವ ಪ್ರೀತಿ ಪ್ರಪಂಚದಲ್ಲಿ ಯಾವುದರ ಮೇಲೂ ಇರುವುದಿಲ್ಲ. ಮನುಷ್ಯನ ಮೆದುಳಿನಲ್ಲಿರುವ ಗುಣಗಳ ಪ್ರಭಾವವು ಹಾಗೆಯೇ ಇರುತ್ತದೆ. ಆದರೇ ಪ್ರಪಂಚದಲ್ಲಿ ಅತ್ಯಂತ ಪ್ರೀತಿ

**ಜ್ಞಾನದ ಮೇಲೆ, ದೇವರ ಮೇಲೆ** ಇದ್ದಾಗಲೇ ಮನುಷ್ಯ ಪ್ರಪಂಚದ ಕಡೆ ಹೋಗದೇ ಜ್ಞಾನದ ಕಡೆ ಹೋಗಬಲ್ಲನು. ಹಾಗಲ್ಲದೇ ಜ್ಞಾನಕ್ಕಿಂತಲೂ ಹೆಚ್ಚು ಪ್ರೀತಿ ಯಾವುದರ ಮೇಲೆ ಇದ್ದರೂ ಅವನು ಜ್ಞಾನದ ಕಡೆ ಹೋಗಲಾರನು. ಮನುಷ್ಯನಲ್ಲಿ ಆರು ಒಳ್ಳೆಯ ಗುಣಗಳು, ಆರು ಕೆಟ್ಟ ಗುಣಗಳು ಇರುತ್ತವೆ. ಒಳ್ಳೆಯ ಕೆಟ್ಟ ಗುಣಗಳು ಎರಡೂ ಬಂಗಾರ ಕಬ್ಬಿಣ ಬೇಡಿಗಳಂಥವು. 'ಬೇಡಿಗಳು ಯಾವ ಲೋಹದಿಂದ ತಯಾರಾದರೂ ಮನುಷ್ಯನನ್ನು ಬಂಧಿಸುವುದಕ್ಕೇ' ಎನ್ನುವಂತೆ ಗುಣಗಳಲ್ಲಿ ಒಳ್ಳೆಯದಾದ ಪ್ರೀತಿ, ಕೆಟ್ಟದಾದ ಅಸೂಯೆ ಎರಡೂ ಮನುಷ್ಯನನ್ನು ಜ್ಞಾನದ ಕಡೆ ಹೋಗಲು ಬಿಡುವುದಿಲ್ಲ. ಗುಣಗಳಿಗಿಂತಲೂ ಮೀರಿರುವುದು ಜ್ಞಾನದ ಮೇಲೆ ಶ್ರದ್ಧೆ ಎಂದು ತಿಳಿಯಬೇಕು. ಗುಣಗಳಲ್ಲಿ ಆರು ಕೆಟ್ಟ ಗುಣಗಳು ಹೀಗಿವೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ. ಹಾಗೆ ಒಳ್ಳೆಯ ಗುಣಗಳು ಕ್ರಮವಾಗಿ ಹೀಗಿವೆ. ದಾನ, ದಯೆ, ಔದಾರ್ಯ, ವೈರಾಗ್ಯ, ವಿನಯ, ಪ್ರೇಮಗಳು ಎಂದು ತಿಳಿಯಬೇಕು.

### (29) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 38ನೇ ವಚನ.

## (38) ತನ್ನ ಶಿಲುಬೆಯನ್ನು ಎತ್ತಿಕೊಂಡು ನನ್ನನ್ನು ಹಿಂಬಾಲಿಸದವನು ನನಗೆ ಪಾತ್ರನಲ್ಲ.

ಶಿಲುಬೆ ಎಂಬ ಮಾತನ್ನು ಕ್ರೈಸ್ಥವರು ಆಗಾಗ ನುಡಿಯುತ್ತಿರುತ್ತಾರೆ ಮತ್ತು ಕೇಳುತ್ತಿರುತ್ತಾರೆ. ಪ್ರತಿ ಕ್ರೈಸ್ಥವನು ಶಿಲುಬೆಯನ್ನು ಕೊರಳಲ್ಲಿ ಧರಿಸಿರುತ್ತಾನೆ. ಅಷ್ಟೇ ಅಲ್ಲದೇ ಶಿಲುಬೆಯನ್ನು ಎಲ್ಲರೂ ಗೌರವಿಸುತ್ತಿರುತ್ತಾರೆ. ಶಿಲುಬೆ ಮೇಲೆ ಏಸು ಮರಣಿಸಿದ್ದಾನೆಂದು, ಶಿಲುಬೆ ಮೇಲೆ ಏಸು ಶಿಕ್ಷಿಸಲ್ಪಟ್ಟಿದ್ದಾನೆಂದು ಎಲ್ಲರಿಗೂ ತಿಳಿದಿದೆ. ಏಸು ಮರಣಕ್ಕೆ ಆಯುಧವಾಗಿ ಉಪಯೋಗಪಟ್ಟಿರುವ ಶಿಲುಬೆ ಮೇಲೆ ಕ್ರೈಸ್ಥರಿಗೆ ಯಾಕಿಷ್ಟು ಪ್ರೇಮವೋ ಎಂದು ಆಲೋಚಿಸಿ ನೋಡಿದರೇ. ತಮಗಿಂತಲೂ ದೊಡ್ಡವನು ಏನು ಮಾಡಿದರೇ ಆತನನ್ನು ಅನುಸರಿಸಿ ಎಲ್ಲರೂ ಸಹಜವಾಗಿ ಮಾಡುತ್ತಿರುತ್ತಾರೆ. ಹಾಗೆಯೇ ಯಾರೋ ಶಿಲುಬೆಯನ್ನು

ಗೌರವಿಸಿದರೇ ತಮ್ಮ ದೇವರಾದ ಪ್ರಭು ಮರಣಕ್ಕೆ ಆಯುಧವಾಗಿ ಉಪಯೋಗಪಟ್ಟ ಶಿಲುಬೆಯನ್ನು ದೊಡ್ಡದಾಗಿ ಯಾಕೆ ನೋಡಬೇಕೆಂದು ಯಾರೂ ಆಲೋಚಿಸಲಿಲ್ಲ. ತಿಳಿದೋ ತಿಳಿಯದೇನೋ ಇಲ್ಲಿಯವರೆಗು ನಡೆದು ಹೋಗಿದೆ. ಇನ್ನಾದರೂ ಶಿಲುಬೆ ವಿಷಯದಲ್ಲಿ ಸ್ವಲ್ಪ ವಿಚಕ್ಷಣದಿಂದ ಶಿಲುಬೆ ಒಂದರ ವಿವರವನ್ನು ತಿಳಿದುಕೊಳ್ಳೋಣ.

ವಾಕ್ಯದಲ್ಲಿ **ಶಿಲುಬೆಯನ್ನು ನೀನು ಎತ್ತಿಕೊಂಡರೇ ದೇವರ ಮಾರ್ಗದಲ್ಲಿ** ನಡೆಯಬಲ್ಲೆ ಎಂದು, **ನಿನ್ನನ್ನು ಶಿಲುಬೆ ಎತ್ತಿಕೊಂಡರೇ ನೀನು ಸಾತಾನ್ ಮಾರ್ಗದಲ್ಲಿ** ನಡೆಯಬಲ್ಲೆ ಎಂದು ಏಸು ತನ್ನ ವಾಕ್ಯದಲ್ಲಿ ಎಚ್ಚರಿಸಿದ್ದಾನೆ. ಅದೇ ವಿಷಯವನ್ನೇ ತಿಳಿಸುತ್ತಾ **"**ಶಿಲುಬೆಯನ್ನು ಎತ್ತಿಕೊಂಡು ನನ್ನನ್ನು ಹಿಂಬಾಲಿಸದವನು ನನಗೆ ಪಾತ್ರನಲ್ಲ**"** ಎಂದು ಹೇಳಿದ್ದಾನೆ. ಅದರ ಅರ್ಥವು ಶಿಲುಬೆಯನ್ನು ಎತ್ತಿಕೊಳ್ಳದವನು ದೇವರಿಗೆ ಇಷ್ಟವಾದವನಲ್ಲ ಎಂದು ಹೇಳುವುದಾಗಿದೆ. ಶಿಲುಬೆ ಎನ್ನುವುದು ಸಾತಾನು ಎಂದು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಈ ವಿಷಯವನ್ನು ವಿವರವಾಗಿ ತಿಳಿಯುವುದಕ್ಕೆ ನಮ್ಮ ರಚನೆಗಳಲ್ಲಿನ **"ಶಿಲುಬೆ ದೇವರಾ?"** ಎಂಬ ಗ್ರಂಥವನ್ನು ಓದಿರಿ.

ಶಿಲುಬೆ ಎಂದರೇ ಹಾವು ಎಂದರ್ಥ. ಹಾವನ್ನು ಮಾಯೆಗೆ (ಸಾತಾನಾಗಿ) ಪಕ್ಷಿಯನ್ನು (ಪಾರಿವಾಳವನ್ನು) ಆತ್ಮವಾಗಿ ಹೋಲಿಸುವುದು ಆಧ್ಯಾತ್ಮಿಕದಲ್ಲಿ ಇರುವ ವಿಷಯವೇ. ಸಾತಾನ್ ಅಥವಾ ಮಾಯೆ ಎನ್ನುವುದು ಮನುಷ್ಯನ ಶರೀರದಲ್ಲಿಯೇ ಇದೆ. ಸಾತಾನ್ ಮನುಷ್ಯನನ್ನು ಎತ್ತಿಕೊಂಡು ಅಜ್ಞಾನ ಮಾರ್ಗದಲ್ಲಿ ಪಯಣಿಸುತ್ತಿದೆ. ಸಾತಾನ್ ಮನುಷ್ಯನನ್ನು ಎತ್ತಿಕೊಂಡಿದೆಯೆಂದರೇ ಮನುಷ್ಯ ಬಲಹೀನನು ಸಾತಾನ್ ಬಲವಾದುದೆಂದು ಅರ್ಥ. ಅದೇ ವಿಧವಾಗಿ ಮನುಷ್ಯ ಶಿಲುಬೆಯನ್ನು ಎತ್ತಿಕೊಂಡು ಪ್ರಯಾಣಿಸುತ್ತಿದ್ದಾನೆಂದರೆ ಮನುಷ್ಯನ ಬಲ ಹೆಚ್ಚು ಸಾತಾನ್ ಬಲ ಕಡಿಮೆ ಎಂದು ಅರ್ಥ. ಆದ್ದರಿಂದ ಏಸು ತನ್ನ ಜೀವನದಲ್ಲಿ ಸ್ವಲ್ಪ ಸಮಯ ಶಿಲುಬೆಯನ್ನು ಹೊತ್ತು ತೋರಿಸಿದ್ದಾನೆ. ಹಾಗೆ ತೋರಿಸುವುದು ಸಾತಾನನ್ನು ಮನುಷ್ಯ ಜಯಿಸಿದ ಹಾಗೆಂದು

ಹೇಳಬಹುದು. ಅದೇ ಏಸುವೇ ಸ್ವಲ್ಪ ಹೊತ್ತು ಶಿಲುಬೆ ಮೇಲೆ ಹತ್ತಿದ್ದಾನೆ. ಅಂದರೇ ಶಿಲುಬೆ ಏಸುವನ್ನು ಹೊರುತ್ತಿದೆಯೆಂದು ತಿಳಿಯುತ್ತಿದೆ. ಅದರ ಅರ್ಥ ಎಂಥವರನ್ನಾದರೂ ಸಾತಾನ್ ತನ್ನ ಮಾರ್ಗದಲ್ಲಿ ಕರೆದುಕೊಂಡು ಹೋಗಬಲ್ಲದೆಂದು ಹೇಳಬಹುದು. ಮನುಷ್ಯ ಜ್ಞಾನ ಮಾರ್ಗದಲ್ಲಿ ಹೋಗಬೇಕೆಂದರೇ ಮನುಷ್ಯನೇ ಶಿಲುಬೆಯನ್ನು ಹೊರಬೇಕು. ಆದಕಾರಣ ವಾಕ್ಯದಲ್ಲಿ "ತನ್ನ ಶಿಲುಬೆಯನ್ನು ಎತ್ತಿಕೊಂಡು ನನ್ನನ್ನು ಹಿಂಬಾಲಿಸದವನು ನನಗೆ ಪಾತ್ರನಲ್ಲ" ಎಂದು ಏಸುಪ್ರಭು ಹೇಳಿದ್ದಾನೆ.

ಸಾತಾನನ್ನು ಶಿಲುಬೆ ರೂಪದಲ್ಲಿ ತೋರಿಸುತ್ತಿದ್ದೇವೆ. ಶಿಲುಬೆ ಎಂದರೇ ಹಾವು ಎಂದು ಹೆಬ್ಬಾವು ಎಂದರೆ ದೊಡ್ಡ ಹಾವು ಎಂದು ಹೇಳಬಹುದು. ದೊಡ್ಡಹಾವು ಎಂದರೇ ದೊಡ್ಡ ಮಾಯೆ ಎಂದು ಕೂಡಾ ಹೇಳಬಹುದು. ಮಾಯೆ ಮನುಷ್ಯನನ್ನು ತನ್ನ ಇಷ್ಟ ಬಂದ ದಾರಿಯಲ್ಲಿ ನಡೆಸಿ ಮನುಷ್ಯನನ್ನು ದೇವರಿಗೆ ದೂರವಾಗಿ ಕಳುಹಿಸುತ್ತಿದೆ. ಅಂತಹ ಸಾತಾನನ್ನು (ಮಾಯೆಯನ್ನು) ಜಯಿಸಬೇಕೆಂದರೇ ಮಾಯೆಯನ್ನು ವಿಶ್ಲೇಷಿಸಿ ನೋಡಬೇಕು. ಹಾಗೆ ನೋಡಿದರೆ ಮನುಷ್ಯನ ತಲೆಯಲ್ಲಿನ ಗುಣಗಳ ಗುಂಪನ್ನೇ ಮಾಯೆ ಎಂದು ಕರೆಯುತ್ತಿದ್ದೇವೆ. ಗುಣಗಳ ಪ್ರಕಾರ ನಡೆಯುವವನು ಅಜ್ಞಾನ ಮಾರ್ಗದಲ್ಲಿ ಹೋಗುತ್ತಿರುತ್ತಾನೆ. ಅಂಥವನನ್ನು ಮಾಯೆ ತನ್ನ ಬಲದಿಂದ ಮನುಷ್ಯನನ್ನು ಹೊರುತ್ತಾ ಹೋಗುತ್ತಿದೆಯೆಂದು ಹೇಳಬಹುದು. ಯಾರಾದರೇ ಗುಣಗಳನ್ನು ಜಯಿಸಿ ಅವುಗಳ ಮಾತು ಕೇಳುವುದಿಲ್ಲವೋ ಅವನು ಮಾಯೆಯನ್ನು (ಸಾತಾನ್) ನನ್ನು ಜಯಿಸಿದವನೆಂದು ಅವನೇ ತನ್ನ ಬಲದಿಂದ ಮಾಯೆಯನ್ನು ಹಿಡಿದು ಎತ್ತಿಕೊಂಡು ಜ್ಞಾನ ಮಾರ್ಗದಲ್ಲಿ ಹೋಗುತ್ತಿದ್ದಾನೆಂದು ತಿಳಿಯುತ್ತಿದೆ. ಆ ವಿಧವಾಗಿ ಶಿಲುಬೆ ಎಂದು ಹೇಳಲ್ಪಡುವ ಮಾಯೆಯನ್ನು ಜಯಿಸಿ ಅದನ್ನು ಮನುಷ್ಯನೇ ಎತ್ತಿಕೊಂಡು ಜ್ಞಾನ ಮಾರ್ಗದಲ್ಲಿ ಹೋಗುವವನು ದೇವರ ಕೃಪೆಗೆ ಪಾತ್ರನಾಗುತ್ತಾನೆ. ಆ ವಿಷಯವನ್ನೇ ವಾಕ್ಯದಲ್ಲಿ ಹೇಳಿದ್ದಾನೆ. ಶಿಲುಬೆ ಎಂದರೇ ಕಟ್ಟಿಗೆಗಳಿಂದ ಮಾಡಲ್ಪಟ್ಟಿರುವುದೆಂದು ಅಂದುಕೊಳ್ಳಬಾರದು.

ಸಾತಾನಿಗೆ ಗುರುತಾದ ಹೆಬ್ಬಾವಿನಂತೆ (ಪೈತಾನ್‌ನಂತೆ) ಲೆಕ್ಕಿಸಬೇಕು. ಆಂಗ್ಲದಲ್ಲಿ ಪೈತಾನ್ ಎನ್ನುವ ಮಾತನ್ನು ಕೆಲವರು ತೆಲುಗು ಭಾಷೆಯಲ್ಲಿ ಸೈತಾನ್ ಎಂದು ಹೇಳಿದಾಗ, ಸೈತಾನ್ ಎನ್ನುವ ಮಾತೇ ಸಾತಾನಾಗಿ ಬದಲಾಗಿದೆ ಎಂದು ತಿಳಿಯಬೇಕು. ಶಿಲುಬೆಯನ್ನು (ಹಾವನ್ನು) ಮಾಯೆಗೆ ಗುರುತಾಗಿ, ಪಕ್ಷಿಯನ್ನು ಆತ್ಮಗೆ ಗುರುತಾಗಿ ಹಿರಿಯರು ಹೇಳುತ್ತಿರುತ್ತಾರೆ. ಏಸು ಯೋಹಾನ್ ಬಳಿ ಬಾಪ್ತಿಸ್ಮ ಹೊಂದಿ ಹೊರಗೆ ಬಂದಾಗ ಆತ್ಮ ಪಾರಿವಾಳದ ಹಾಗೆ ಬಂದು ಏಸು ಶರೀರದೊಳಗೆ ಸೇರಿದೆಯೆಂದು ಕೂಡಾ ಹೇಳಿದ್ದಾರೆ. ಆತ್ಮಗೆ ವಿರುದ್ಧ ವಾದುದು ಶಿಲುಬೆ. ಆದ್ದರಿಂದ ಮನುಷ್ಯ ತನ್ನ ಜ್ಞಾನ ಬಲದಿಂದ ಶಿಲುಬೆಯನ್ನು ಕದಲದಂತೆ ಮಾಡಿ ಅದನ್ನು ಎತ್ತಿಕೊಂಡು ನಡೆಯುವವನು ದೇವರ ಕೃಪೆಗೆ ಪಾತ್ರನಾಗ ಬಲ್ಲನೆಂದು, ಪರಲೋಕಕ್ಕೆ ಅರ್ಹನಾಗಬಲ್ಲನೆಂದು ಹೇಳುತ್ತಾ ಏಸು ಮೇಲಿನ ವಾಕ್ಯವನ್ನು ಹೇಳಿದ್ದಾನೆ.

### (30) ಮತ್ತಾಯ ಸುವಾರ್ತೆ, 10ನೇ ಅಧ್ಯಾಯ, 40ನೇ ವಚನ.

## (40) ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುತ್ತಾನೆ. ನನ್ನನ್ನು ಸೇರಿಸಿಕೊಳ್ಳುವವನು, ನನ್ನನ್ನು ಕಳುಹಿಸಿದವನನ್ನು ಸೇರಿಸಿ ಕೊಳ್ಳುತ್ತಾನೆ.

ಮನುಷ್ಯರು ಜೀವಾತ್ಮಗಳಾಗಿರುವಾಗ, ಮನುಷ್ಯರನ್ನು ಸೃಷ್ಠಿಸಿರುವವನು ಆತ್ಮ ಆಗಿರುವಾಗ, ಆತ್ಮನನ್ನು ಪ್ರಕೃತಿಯನ್ನು ಸೃಷ್ಠಿಸಿರುವವನು ಪರಿಶುದ್ಧಾತ್ಮ ಎನ್ನಲ್ಪಡುವ ಪರಮಾತ್ಮ ಎಂದು ತಿಳಿಯಬೇಕು. ಆದರೇ ಪರಮಾತ್ಮ ಮನುಷ್ಯನಾಗಿ ಬಂದರೇ ಆತನನ್ನು ಆತ್ಮ ಎಂದು ಕರೆಯಬೇಕಾ ಇಲ್ಲವೇ ಜೀವಾತ್ಮ ಎಂದು ಕರೆಯಬೇಕಾ? ಎಂಬ ಪ್ರಶ್ನೆ ಬರಬಹುದು. ದೇವರು ಮನುಷ್ಯನಾಗಿ ಬಂದರೇ ಹೊರಗೆ ಜೀವಾತ್ಮವಾಗಿಯೇ ಲೆಕ್ಕಿಸಬೇಕಾಗಿದೆ. ಮನುಷ್ಯರಾದ ಜೀವಾತ್ಮಗಳನ್ನು ಆತ್ಮ ಸಾವಿನಲ್ಲಿ ತನ್ನಲ್ಲಿ ಸೇರಿಸಿಕೊಳ್ಳುತ್ತಿದ್ದಾನೆ. ಆತ್ಮ ಮನುಷ್ಯರನ್ನು ಸೇರಿಸಿಕೊಂಡ ಹಾಗೆಯೇ ಜೀವಾತ್ಮನ ಹಾಗೆ ಇರುವ ಮನುಷ್ಯನಾಗಿ ಬಂದಿರುವ ದೇವರನ್ನು

ಕೂಡಾ ಸೇರಿಸಿಕೊಳ್ಳುತ್ತಾನೆ. ಅದೇ ವಿಷಯವನ್ನೇ **"ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುತ್ತಾನೆ"** ಎಂದು ವಾಕ್ಯದಲ್ಲಿ ಹೇಳಿದ್ದಾರೆ. ಮನುಷ್ಯನ ಹಾಗೆ ಜೀವಾತ್ಮನಾಗಿ ಬಂದವನು ಸಾಕ್ಷಾತ್ತು ದೇವರೇ ಆದ್ದರಿಂದ ದೇವರು ಮನುಷ್ಯನಾಗಿ ಬಂದವನನ್ನು ಕಳುಹಿಸಿದ್ದಾನೆ ಆದ್ದರಿಂದ, ಆತ್ಮ ಜೀವಾತ್ಮನಂತಿರುವ ಮನುಷ್ಯನನ್ನು ಸೇರಿಸಿಕೊಂಡಾಗ ಮನುಷ್ಯನನ್ನಾಗಿ ಕಳುಹಿಸಿದವನಾದ ದೇವರೇ ಸೇರಿಸಿಕೊಂಡ ಹಾಗೆ ಆದ್ದರಿಂದ **"ನನ್ನನ್ನು ಸೇರಿಸಿಕೊಂಡವನು ನನ್ನನ್ನು ಕಳುಹಿಸಿದವನನ್ನು ಸೇರಿಸಿಕೊಳ್ಳುತ್ತಾನೆ"** ಎಂದು ವಾಕ್ಯದಲ್ಲಿ ಹೇಳಿದ್ದಾನೆ.

**(31) ಮತ್ತಾಯ ಸುವಾರ್ತೆ, 11ನೇ ಅಧ್ಯಾಯ, 9ನೇ ವಚನ.**

## (9) ನೀವು ಏನನ್ನು ನೋಡಲು ಹೋಗಿದ್ದೀರಿ? ಪ್ರವಕ್ತನನ್ನಾ? ಹೌದು ಆದರೇ ಪ್ರವಕ್ತಗಿಂತಲೂ ದೊಡ್ಡವನೆಂದು ನಿಮ್ಮೊಂದಿಗೆ ಹೇಳುತ್ತಿದ್ದೇನೆ.

**'ಪ್ರವಕ್ತ'** ಎಂದರೇ ಯಾರೂ ಹೇಳದ ಜ್ಞಾನವನ್ನು ಬೋಧಿಸುವವನೆಂದು ಹೇಳಬಹುದು. ಬಿಡಿಸಿ ಹೇಳಿದರೇ **'ಪ್ರ'** ಎಂದರೇ ಮುಖ್ಯವಾದುದೆಂದೂ, **'ವಕ್ತ'** ಎಂದರೇ ಹೇಳುವವನು ಎಂದು ಅರ್ಥ. ಜ್ಞಾನದಲ್ಲಿ ಮುಖ್ಯವಾದ ಜ್ಞಾನವನ್ನು ಹೇಳುವವನು ಪ್ರವಕ್ತ ಎಂದು ಕರೆಯಲ್ಪಡುತ್ತಾನೆ. ಆದರೇ ಏಸು ತನ್ನನ್ನು ಪ್ರವಕ್ತಗಿಂತಲೂ ದೊಡ್ಡವನೆಂದು ಹೇಳಿದ್ದಾನೆ. ಪ್ರವಕ್ತಗಿಂತಲೂ ದೊಡ್ಡವನು, ಪ್ರವಕ್ತಗಿಂತಲೂ ದೊಡ್ಡ ಜ್ಞಾನವನ್ನು ಹೇಳುವವನು ಒಬ್ಬನೇ ಒಬ್ಬನು ಇದ್ದಾನೆ. **"ದೇವರು ತನ್ನ ಜ್ಞಾನವನ್ನು ಯಾವ ಮಾನವನ ಮೇಲೆ ಪ್ರಸಾರಮಾಡಲಿಲ್ಲ. ದೇವರ ಜ್ಞಾನವು ದೇವರಿಗೆ ಹೊರತುಪಡಿಸಿ ಯಾವ ಇತರ ಮಾನವನಿಗೂ ತಿಳಿದಿಲ್ಲ"**. ಆದ್ದರಿಂದ ದೇವರ ಜ್ಞಾನವನ್ನು ದೇವರೇ ಹೇಳಬೇಕು ಎಂದು ಅಂತಿಮ ದೈವಗ್ರಂಥದಲ್ಲಿ ಸೂರಾ ಮೂರು, ಆಯತ್ ಏಳು (3–7) ರಲ್ಲಿ ಹೇಳಿದ್ದಾರೆ. ಇದೆಲ್ಲವನ್ನು ಅನುಸರಿಸಿ ನೋಡಿದರೇ ದೇವರು ಪ್ರವಕ್ತನ ಹಾಗೆ ಬಂದು ಜ್ಞಾನವನ್ನು ಹೇಳಿದರೂ, ಆತನು ಪ್ರವಕ್ತಗಿಂತಲೂ ದೊಡ್ಡವನಾಗಿ

ಇರುತ್ತಾನೆ. **"ದೇವರು ಮನುಷ್ಯರೊಂದಿಗೆ ಪ್ರತ್ಯಕ್ಷವಾಗಿ ಮಾತನಾಡುವುದಿಲ್ಲ"** ಎಂದು ಅಂತಿಮ ದೈವಗ್ರಂಥದಲ್ಲಿ ಸೂರಾ 42, ಆಯತ್ 51ರಲ್ಲಿ ಹೇಳಿದ್ದಾರೆ. ದೇವರು ಮಾರುವೇಷದಲ್ಲಿ ಮನುಷ್ಯನಾಗಿ ಬಂದು ಮಾತನಾಡಬಹುದು. ಹಾಗೆ ದೇವರು ಯಾವಾಗ ಮನುಷ್ಯನ ರೂಪದಲ್ಲಿ ಬಂದರೂ, ಆತನು ಪ್ರವಕ್ತನಾಗಿ ಕರೆಯಲ್ಪಟ್ಟರೂ, ಆತನು ಪ್ರವಕ್ತಗಿಂತಲೂ ದೊಡ್ಡವನಾಗಿ ಇರುತ್ತಾನೆ. ಈ ವಾಕ್ಯದಲ್ಲಿ ಏಸು ಹೇಳಿರುವುದನ್ನು ಅನುಸರಿಸಿದಾಗ ಏಸು ಪ್ರವಕ್ತರಿಗಿಂತಲೂ ದೊಡ್ಡವನಾದ ದೇವರ ಅವತಾರವೆಂದು ಹೇಳದೇನೆ ತಿಳಿಯುತ್ತಿದೆ. ಏಸು ಅನೇಕ ಸಂದರ್ಭಗಳಲ್ಲಿ ತಾನು ಯಾರಾಗಿರುವುದು ಹೇಳಿದರೂ ಮನುಷ್ಯರು ಆತನನ್ನು ಗುರುತಿಸಲಾರದೇ ಹೋಗಿದ್ದಾರೆ.

### (32) ಮತ್ತಾಯ ಸುವಾರ್ತೆ, 11ನೇ ಅಧ್ಯಾಯ, 28ನೇ ವಚನ.

## (28) ಪ್ರಯಾಸ ಬಿದ್ದು ಭಾರವನ್ನು ಹೊರುತ್ತಿರುವ ಸರ್ವ ಮಾನವರೇ! ನನ್ನ ಹತ್ತಿರಕ್ಕೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಯನ್ನುಂಟು ಮಾಡುತ್ತೇನೆ.

ಮನುಷ್ಯರು ಪ್ರಯಾಸ ಪಡುವುದು ಭಾರವನ್ನು ಹೊರುವಾಗಲೇ ಎಂದು ಎಲ್ಲರಿಗೂ ತಿಳಿದಿದೆ. ಆದರೇ ಮನುಷ್ಯ ಯಾವಾಗಲೂ ಭಾರವನ್ನು ಹೊರದಿದ್ದರೂ ಪ್ರಯಾಸ ಬೀಳುತ್ತಿದ್ದಾನೆ. ಕಾಣಿಸದ ಭಾರವು ಪಾಪ (ಕರ್ಮ). ಕರ್ಮಗಳನ್ನು ಅನುಭವಿಸುವ ಪ್ರತಿಯೊಬ್ಬನು ಯಾವುದೋ ಒಂದು ವಿಧವಾಗಿ ಪ್ರಯಾಸ ಬೀಳುತ್ತಲೇ ಇದ್ದಾನೆ. ಕರ್ಮಗಳು ಯಾವಾಗಲೂ ಮನುಷ್ಯನಿಗೆ ಅನುಭವಕ್ಕೆ ಬರುತ್ತಿವೆ. ಮನುಷ್ಯ ಕರ್ಮಗಳು ಅನುಭವಿಸದ ಸಮಯವು ನಿದ್ರೆ ಮಾಡುವ ಸಮಯ ಮಾತ್ರವೇ. ಮನುಷ್ಯ ಎಚ್ಚರಿಕೆಯಲ್ಲಿ ಇರುವಾಗಾಗಲೀ, ಸ್ವಪ್ನದಲ್ಲಿ ಇರುವಾಗಾಗಲೀ ಯಾವುದೋ ಒಂದು ವಿಧವಾಗಿ ಕರ್ಮ ಅನುಭವದಲ್ಲಿ ಇದ್ದಾನೆ. ಅಂದರೇ ಯಾವಾಗಲೂ ಪ್ರಯಾಸ ಪಡುತ್ತಲೇ ಇದ್ದಾನೆಂದು ತಿಳಿಯುತ್ತಿದೆ. ಇವನು, ಅವನು ಎನ್ನದೇ ಎಲ್ಲರೂ ಕರ್ಮಗಳನ್ನು

ಅನುಭವಿಸುತ್ತಾ ಬಾಧೆ ಬೀಳುತ್ತಿದ್ದಾರೆ ಆದ್ದರಿಂದ **'ಸಮಸ್ತ ಜನಗಳೇ'** ಎಂದು ಸಂಬೋಧಿಸಿ ಏಸು ಪ್ರಜೆಗಳನ್ನು ತನ್ನ ಹತ್ತಿರಕ್ಕೆ ಬರಲು ಹೇಳಿದ್ದಾನೆ. ತನ್ನ ಹತ್ತಿರಕ್ಕೆ ಬಂದರೇ ವಿಶ್ರಾಂತಿ ದೊರೆಯುತ್ತದೆ ಎಂದಿದ್ದಾನೆ.

ಯಾವಾಗಲೂ ಕರ್ಮಗಳು ಅನುಭವಿಸುವವನಿಗೆ ಏಸು ಹತ್ತಿರಕ್ಕೆ ಹೋದಾಗ ಹೇಗೆ ವಿಶ್ರಾಂತಿ ದೊರೆಯುತ್ತದೆ? ಎಂಬ ಪ್ರಶ್ನೆ ಬರಬಹುದು. ಅದಕ್ಕೆ ನಮ್ಮ ಉತ್ತರ ಈ ರೀತಿಯಾಗಿ ಇದೆ. ಏಸು ತನ್ನ ಹತ್ತಿರಕ್ಕೆ ಬಂದ ಪ್ರಜೆಗಳಿಗೆ ದೈವಜ್ಞಾನವನ್ನು ಬೋಧಿಸುವುದರಿಂದ, ಅದನ್ನು ತಿಳಿದುಕೊಂಡ ವರಿಗೆಲ್ಲರಿಗೂ ಜ್ಞಾನವೆಂಬ ಅಗ್ನಿಯಲ್ಲಿ ಕರ್ಮಗಳು ಸುಟ್ಟುಹೋಗುವುದರಿಂದ, ಕರ್ಮ ಒಂದರ ಅನುಭವ ಇಲ್ಲದೇ ಹೋಗುವುದರಿಂದ, ಮನುಷ್ಯನಿಗೆ ಬಾಧೆಗಳಿಂದ ಪಡುವ ಪ್ರಯಾಸ ಕಡಿಮೆಯಾಗಿ ವಿಶ್ರಾಂತಿ ದೊರೆಯುತ್ತದೆ. ಇದು ಕುಲ ಮತ ಬೇಧವಿಲ್ಲದೇ ಮನುಷ್ಯರೆಲ್ಲರಿಗೂ ಒಳಿತಾಗುವುದರಿಂದ ಏಸು **'ಸಮಸ್ತ ಜನಗಳೇ! ನನ್ನ ಹತ್ತಿರಕ್ಕೆ ಬನ್ನಿರಿ ಎಂದು'** ಕರೆದಿದ್ದಾನೆ. ಇಲ್ಲಿ ಚೆನ್ನಾಗಿ ಗಮನಿಸಿದರೇ ಏಸು ಕ್ರೈಸ್ಥರ ಗುರುವೆಂದು, ಕ್ರೈಸ್ಥ ಪ್ರವಕ್ತನೆಂದು ಬಹಳ ಜನ ಹೇಳುತ್ತಿರುತ್ತಾರೆ. ಆತನು ಕೇವಲ ಕ್ರೈಸ್ಥವರನ್ನು ಮಾತ್ರ ಕರೆದಿದ್ದರೇ ಏಸು ಕ್ರೈಸ್ಥವರ ಗುರು ಎನ್ನುವುದಕ್ಕೆ ಅವಕಾಶವಿರುತ್ತಿತ್ತು. ಹಾಗೆ ಕ್ರೈಸ್ಥವರನ್ನು ಮಾತ್ರ ಕರೆಯದೆ ಸಮಸ್ತ ಜನರನ್ನು ಕರೆದಿದ್ದಾನೆ, ಆದ್ದರಿಂದ ಏಸುವನ್ನು ಕ್ರೈಸ್ಥವನನ್ನಾಗಿ ಹೇಳುವುದು ಅನ್ಯಾಯವಾಗುತ್ತದೆ. ಆತನ ಮಾತುಗಳನ್ನು ವಿಶ್ವಾಸಿಸಿ ಆತನ ಹತ್ತಿರಕ್ಕೆ ಹೋದವರು ಕ್ರೈಸ್ಥವರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ದೇವರು ಎಲ್ಲರಿಗೂ ಬೇಕಾದವನೇ, ದೇವರ ಜ್ಞಾನವು ಎಲ್ಲರಿಗೂ ಅಗತ್ಯವಾದುದೇ ಆದ್ದರಿಂದ **"ಸಮಸ್ತ ಜನಗಳೇ"** ಎಂದು ಏಸು ಸಂಬೋಧಿಸಿ ಕರೆದಿದ್ದಾನೆ.

**(33) ಮತ್ತಾಯ ಸುವಾರ್ತೆ, 12ನೇ ಅಧ್ಯಾಯ 17, 18, 19, 20, 21 ವಚನಗಳು.**

## (17) ಪ್ರವಕ್ತನಾದ ಯೆಷಯಾ ಮೂಲಕ ಹೇಳಿರುವುದು ನೆರವೇರಿದಂತೆ ಹೀಗೆ ನಡೆದಿದೆ, ಅದೇನೆಂದರೇ!

**(18) ಇಗೋ ಈತನೇ ನನ್ನ ಸೇವಕನು.**
**ಈತನನ್ನು ನಾನು ಏರ್ಪಡಿಸಿಕೊಂಡೆನು.**
**ಈತನು ನನ್ನ ಪ್ರಾಣಕ್ಕೆ ಇಷ್ಟನಾದ ನನ್ನ ಪ್ರಿಯನು.**
**ಈತನ ಮೇಲೆ ನನ್ನ ಆತ್ಮವನ್ನು ಇರಿಸುವೆನು.**

**(19) ಈತನು ಅನ್ಯ ಜನಗಳಿಗೆ ನ್ಯಾಯವಿಧಿಯನ್ನು ತೋರಿಸುತ್ತಾನೆ. ಈತನು ಜಗಳವಾಡುವುದಿಲ್ಲ, ಕೇಕೆ ಹಾಕುವುದಿಲ್ಲ.**

**(20) ಈತನ ಶಬ್ಧವು ಬೀದಿಗಳಲ್ಲಿ ಯಾರಿಗೂ ಕೇಳಿಸುವುದಿಲ್ಲ. ವಿಜಯವನ್ನು ಹೊಂದುವುದಕ್ಕೆ ನ್ಯಾಯ ವಿಧಿಯನ್ನು ಪ್ರಬಲ ಮಾಡುವವರೆಗು ಈತನು ನಲುಗಿದ ಪುಳ್ಳೆಯನ್ನಾದರು ಬಿಡುವುದಿಲ್ಲ.**

**(21) ಕಾಂತಿ ಹೀನವಾಗುತ್ತಿರುವ ಅಗಸೆಯನಾರನ್ನು**
**ನಂದಿಸುವುದಿಲ್ಲ.**
**ಈತನ ನಾಮದಲ್ಲಿ ಅನ್ಯ ಜನರು ನಿರೀಕ್ಷಿಸುತ್ತಾರೆ.**

ಈ ಮಧ್ಯೆ ಕಾಲದಲ್ಲಿ ಸುಮಾರು 350 ವರ್ಷಗಳ ಹಿಂದೆ ವೀರಬ್ರಹ್ಮಯ್ಯ ನವರು ಎಂಬ ಒಬ್ಬ ಮಹಾತ್ಮನು ಮುಂದೆ ನಡೆಯುವ ವಿಷಯಗಳನ್ನು, ಸಂಭವಿಸುವ ಪ್ರಕೃತಿ ವೈಪರಿತ್ಯಗಳನ್ನು 'ಕಾಲಜ್ಞಾನವಾಗಿ' ಮೊದಲೇ ಭವಿಷ್ಯತ್ತನ್ನು ಕುರಿತು ಹೇಳಿದ್ದಾನೆ. ಅದೇ ವಿಧವಾಗಿ ಪೂರ್ವದಲ್ಲಿ ಯೆಷಯಾ ಎಂಬ ದೊಡ್ಡ ವ್ಯಕ್ತಿ ಮುಂಬರುವ ಏಸುವನ್ನು ಕುರಿತು ಮೊದಲೇ ಹೇಳಿದ್ದಾನೆ. ಅದೇ ವಿಷಯವನ್ನು ಮೇಲಿನ ವಾಕ್ಯಗಳಾಗಿ ಹೇಳಿದ್ದಾರೆ. ಯೆಷಯಾ ಹೇಳಿರುವ ವಾಕ್ಯಗಳನ್ನು ವಿವರವಾಗಿ ಹೇಳಿಕೊಂಡರೆ ಆತನ ವಾಕ್ಯಗಳಲ್ಲಿನ ದೊಡ್ಡತನವು ಮನುಷ್ಯರಿಗೆ ತಿಳಿದು ಹೋಗುತ್ತದೆ. ಹೇಳಿರುವವನು ಯಾರು, ಯಾರನ್ನು ಕುರಿತು ಹೇಳಿದ್ದಾನೆ ಎಂದು ತಿಳಿಯಬಲ್ಲದು. ಯೆಷಯಾ ಎಂಬ ವ್ಯಕ್ತಿ ಏಸು

ಜನ್ಮಿಸುವುದಕ್ಕಿಂತ ಮುಂಚೆ ಬಹಳ ವರ್ಷಗಳ ಪೂರ್ವವು ಇದ್ದವನು. ಯೆಷಯಾ 13ನೇ ಅಧ್ಯಾಯದಲ್ಲಿ ಕೂಡಾ ಕೆಲವು ವಿಷಯಗಳನ್ನು ಹೇಳಿದ್ದಾರೆ. ಈಗ ಹೇಳಿರುವ ವಾಕ್ಯಗಳನ್ನು ಕುರಿತು ನೋಡಿದರೆ ಪರಿಶುದ್ಧಾತ್ಮನಾದ ದೇವರು ಏಸುವನ್ನು ಕುರಿತು ಹೇಳಿದ್ದಾನೆಂದು ತಿಳಿಯುತ್ತಿದೆ. ಗ್ರಂಥವನ್ನು ಪೂರ್ತಿ ನೋಡಿದ ನಂತರ ಅಲ್ಲಲ್ಲಿ ಏಸು ತನ್ನನ್ನು ಕುರಿತು ಹೇಳಿರುವುದನ್ನು ಅನುಸರಿಸಿ ನೋಡಿದರೇ ಏಸುವನ್ನು ಕುರಿತು ಪರಿಶುದ್ಧಾತ್ಮ ಹೇಳಿದ್ದರೂ, ಹೇಳಿದವನು, ಹೇಳಲ್ಪಡುವವನು ಇಬ್ಬರೂ ಒಬ್ಬರೇ ಎಂದು ತಿಳಿಯುತ್ತಿದೆ.

**"ಇಗೋ ಈತನೇ ನನ್ನ ಸೇವಕನು"** ಎಂದು ಮೊದಲ ವಾಕ್ಯದಲ್ಲಿ ಹೇಳಿದ್ದಾರೆ. ಸೇವೆ ಎಂದರೆ ಅನೇಕ ವಿಧಗಳ ಪ್ರಪಂಚ ಸೇವೆ ಇದೆ. ಆದರೇ ಇಲ್ಲಿ ಪ್ರಪಂಚ ಸೇವೆಯನ್ನು ಕುರಿತು ಹೇಳಲಿಲ್ಲ. ಪರಮಾತ್ಮ ಸೇವೆಯನ್ನು ಕುರಿತು ಹೇಳಲಾಗಿದೆ. ಪರಮಾತ್ಮ ಸೇವೆ ಒಂದೇ ಇದೆ. **ದೇವರ ಜ್ಞಾನವನ್ನು, ದೇವರನ್ನು ಕುರಿತು ಪ್ರಚಾರ ಮಾಡಿ ಇತರರಿಗೆ ತಿಳಿಸುವುದೇ ನಿಜವಾದ ಪರಮಾತ್ಮ ಸೇವೆ ಆಗುತ್ತದೆ.** ಏಸು ದೇವರ ಜ್ಞಾನವನ್ನು ಕುರಿತು ಪ್ರಚಾರ ಮಾಡುತ್ತಿರುವು ದರಿಂದ ಪರಮಾತ್ಮ, ಏಸುವನ್ನು 'ಈತನು ನನ್ನ ಸೇವಕನು' ಎಂದು ಹೇಳುವುದು ನಡೆದಿದೆ. ಯಾರಾದರೇ ದೇವರನ್ನು, ಆತನ ಜ್ಞಾನವನ್ನು ಕುರಿತು ಪ್ರಚಾರ ಮಾಡುತ್ತಿದ್ದಾನೋ, ಆತನು ದೇವರಿಗೆ **ಅತ್ಯಂತ ಇಷ್ಟವಾದ ವನಾಗುತ್ತಾನೆ.** ಆದ್ದರಿಂದ ಪರಮಾತ್ಮ ಏಸುವನ್ನು, **'ಈತನು ನನಗಿಷ್ಟವಾದ ನನ್ನ ಪ್ರಿಯನು'** ಎಂದು ಹೇಳಿದ್ದಾನೆ. ಪರಿಶುದ್ಧಾತ್ಮ ಮಣ್ಣಿನಿಂದ ಒಂದು ಮಾನವ ಆಕಾರವನ್ನು ತಯಾರಿಮಾಡಿ, ಆ ಬೊಂಬೆಯಲ್ಲಿ ತನ್ನ ಆತ್ಮವನ್ನೇ ಊದಿ ಕಳುಹಿಸುತ್ತಾನೆ ಎಂದು, ಹಾಗೆ ಬಂದಿರುವವನನ್ನು 'ದೇವ ದೂತರು ನೋಡಿ ದೇವರೆಂದು ಗುರುತಿಸಿ ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಾರೆಂದು' ಅಂತಿಮ ದೈವಗ್ರಂಥದಲ್ಲಿ **15ನೇ ಸೂರಾದಲ್ಲಿ 28, 29, 30 ಆಯತ್‌ಗಳಲ್ಲಿ** ಹೇಳಲ್ಪಟ್ಟಿದೆ. ಆದ್ದರಿಂದ ಇಲ್ಲಿ ಯೆಷಯಾ ಹೇಳಿರುವ ವಾಕ್ಯಗಳಲ್ಲಿ 'ಪರಮಾತ್ಮ ಈತನ ಮೇಲೆ ನನ್ನ ಆತ್ಮವನ್ನು ಇರಿಸುತ್ತೇನೆ' ಎಂದು ಹೇಳಿದ್ದಾನೆ. ಈ ವಾಕ್ಯದ

ಪ್ರಕಾರ ಮಾನವ ಅವತಾರದಲ್ಲಿ ಇರುವ ಏಸು ಪರಮಾತ್ಮನವೊಂದು ಆತ್ಮವೇ ಎಂದು ತಿಳಿಯುತ್ತಿದೆ.

ಇಲ್ಲಿ 19ನೇ ವಾಕ್ಯದಲ್ಲಿ 'ನ್ಯಾಯವಿಧಿಯನ್ನು ಪ್ರಚಾರ ಮಾಡುತ್ತಾನೆ' ಎಂದು ಹೇಳಿದ್ದಾರೆ. ಬೈಬಲ್ ಗ್ರಂಥವನ್ನು ತೆಲುಗಿನೊಳಕ್ಕೆ ಅನುವಾದಿಸುವವರು ಸರಿಯಾದ ಪದಗಳು ಉಪಯೋಗಿಸಿ ಬರೆಯಲಿಲ್ಲವೆಂದು ತಿಳಿಯುತ್ತಿದೆ. **ಜ್ಞಾನನಿಧಿ** ಎಂದು ಬರೆಯಬೇಕಾದ ಕಡೆ, **ನ್ಯಾಯವಿಧಿ** ಎಂದು ಬರೆದಿದ್ದಾರೆ. ನ್ಯಾಯವು ಪ್ರಪಂಚ ಸಂಬಂಧವಾದುದು ಆಗುತ್ತದೆ. ಆದ್ದರಿಂದ ನ್ಯಾಯ ಎನ್ನುವ ಪದವನ್ನು ಉಪಯೋಗಿಸಬಾರದು. **ನೀತಿ, ನ್ಯಾಯವು ಪ್ರಪಂಚ ಸಂಬಂಧ ವಾಗಿರುವಾಗ, ಜ್ಞಾನ, ಧರ್ಮ, ಪರಮಾತ್ಮ ಸಂಬಂಧವಾದವು**. ಆದರೆ ಜ್ಞಾನವೆಂದು ಹೇಳಬೇಕಾಗಿರುವ ಕಡೆ ನೀತಿ ಎಂದು, ಕೆಲವು ಕಡೆ ನ್ಯಾಯ ಎಂದು ಹೇಳುವುದು ಅನುವಾದ ಲೋಪವಾಗಿ ಕಾಣಿಸುತ್ತಿದೆ. ಆದ್ದರಿಂದ ನಾವು ಕೆಲವು ಕಡೆ ತಿದ್ದಿಕೊಂಡು ಓದಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಹಾಗೆಯೇ ಹೆಸರುಗಳು ಬಂದಿರುವ ಕಡೆ ಮತ್ತು ಪದವನ್ನು ಪ್ರಾರಂಭ ಮಾಡುವ ಕಡೆ ಸ್ವರಗಳನ್ನೇ ಬರೆಯಬೇಕು, ವ್ಯಂಜನಗಳನ್ನು ಬರೆಯಬಾರದು. ಏಸು ಎಂದು ಹೇಳಬೇ ಕಾಗಿರುವ ಕಡೆ ಯೇಸು ಎಂದು ಬರೆಯುವುದು ಭಾಷೆಯಲ್ಲಿ ತಪ್ಪಾಗಿರುತ್ತದೆ. ಹಾಗೆಯೇ ಶಿಲುಬೆ ಎಂದು ಇರಬೇಕಾಗಿರುವ ಕಡೆ ಸಿಲುಬೆ ಎಂದು ಬರೆಯುವುದು ಕೂಡಾ ತಪ್ಪೇ. ಶಿಲುಬೆ ಎಂದರೇ ಹಾವು ಎಂದು ಅರ್ಥವಿದೆ. ಆದರೆ, ಸಿಲುಬೆ ಎಂದರೆ ಅರ್ಥ ಇರುವುದಿಲ್ಲ. ಈ ವಿಧವಾಗಿ ಅನೇಕ ಕಡೆ ಅನೇಕ ಅನುವಾದ ತಪ್ಪುಗಳು ಕಾಣಿಸುತ್ತಿವೆ. ಅವುಗಳನ್ನು ತಿದ್ದಿ ಬರೆಯುವುದು ನಡೆದಿದೆ.

19ನೇ ವಾಕ್ಯದಲ್ಲಿ ನ್ಯಾಯವಿಧಿಯನ್ನು ಪ್ರಕಟನೆ ಮಾಡುವನು ಎಂದು ಇದೆ. ಪ್ರಕಟನೆ ಎಂದರೆ ಅಚ್ಚುಹಾಕುವುದು (ಮುದ್ರಿಸುವುದು) ಎಂದು ಅರ್ಥ ಬರುತ್ತದೆ. ಅದನ್ನು ಸರಿಪಡಿಸಿಕೊಂಡು 'ಪ್ರಚಾರ' ಎಂದರೇ ಇತರರಿಗೆ 'ಬೋಧಿಸುವುದು' ಎಂದು ಅರ್ಥ ಬರುತ್ತದೆ. ಆದಕಾರಣ ಈ ವಾಕ್ಯವನ್ನು

ಸರಿಪಡಿಸಿ ಹೇಳಿಕೊಂಡರೇ **"ಈತನು ಅನ್ಯ ಜನರಿಗೆ ಜ್ಞಾನನಿಧಿಯನ್ನು ಪ್ರಚಾರ ಮಾಡುತ್ತಾನೆ"** ಎಂದು ಹೇಳಿಕೊಳ್ಳಬೇಕಾಗಿದೆ. ಏಸು ತನ್ನ ಜೀವನದಲ್ಲಿ ಮೂವತ್ತು ವರ್ಷಗಳು ಕಳೆದುಹೋದ ನಂತರ ತನ್ನಲ್ಲಿರುವ ಜ್ಞಾನನಿಧಿಯನ್ನು ಸುಮಾರು ಎರಡು ವರ್ಷ ಮೂರು ತಿಂಗಳ ಕಾಲ ಪ್ರಜೆಗಳಿಗೆ ಬೋಧಿಸಿದ್ದಾನೆ ಆದ್ದರಿಂದ ಏಸುವನ್ನು ಕುರಿತು ಈ ವಾಕ್ಯವನ್ನು ಹೇಳಿದ್ದಾರೆ. ಆತನು ಜ್ಞಾನವನ್ನು ಅನೇಕ ಕಡೆಗಳಲ್ಲಿ ತಿರುಗಾಡಿ ನಿಸ್ವಾರ್ಥವಾಗಿ ಯಾರನ್ನು ಏನೂ ಆಶಿಸದೇ ಬೋಧಿಸುವುದು ನಡೆದಿದೆ. ಅಷ್ಟೇ ಅಲ್ಲದೇ ತನ್ನ ಬಳಿಗೆ ಬಂದಿರುವ ಅನೇಕ ರೋಗಗಳು ಇರುವವರನ್ನು ಸ್ವಸ್ಥಪಡಿಸುವುದು ನಡೆದಿದೆ. ಕುರುಡನಿಗೆ ದೃಷ್ಠಿ ಯನ್ನು, ಕುಂಟನಿಗೆ ನಡಿಗೆಯನ್ನು, ಕುಷ್ಟರೋಗಿಗಳನ್ನು ಗುಣಪಡಿಸುವುದು, ಸತ್ತುಹೋದವ ರನ್ನು ಬದುಕಿಸುವುದು ನಡೆದಿದೆ. ಆಗ ಏಸುವನ್ನು ಕೆಲವರು ಮಂತ್ರಗಾರನೆಂದು ಹೇಳುವುದೇ ಅಲ್ಲದೇ, ದೈವವಿರುದ್ಧವಾದ ಕೆಲಸಗಳನ್ನು ಮಾಡುತ್ತಿದ್ದಾನೆಂದು ದೂಷಿಸುವುದು ಕೂಡಾ ನಡೆದಿದೆ. ಆಗಲೂ ಕೂಡಾ ಆತನು ಯಾರೊಂದಿಗೂ ಜಗಳವಾಡುವುದಾಗಲೀ, ಕೂಗಾಡುವುದಾಗಲೀ ಮಾಡಲಿಲ್ಲ. ಅದೇ ವಿಷಯವನ್ನೇ **"ಈತನು ಜಗಳವಾಡುವುದಿಲ್ಲ, ಕೂಗಾಡುವುದಿಲ್ಲ"** ಎಂದು ಬರೆದಿದ್ದಾರೆ.

ಏಸು ತನ್ನ ಜ್ಞಾನವನ್ನು ಕೆಲವರಿಗೆ ಮಾತ್ರ ಅವಕಾಶ ಬಂದಾಗ ಮತ್ತು ತನ್ನ ಹತ್ತಿರಕ್ಕೆ ಬಂದಾಗ ಹೇಳಿದ್ದಾನೆ ಹೊರತು, ಬೀದಿಗಳಲ್ಲಿ ನಿಂತು ಜೋರಾಗಿ ಕೂಗಿ ಹೇಳಲಿಲ್ಲ. ಆದ್ದರಿಂದ ವಾಕ್ಯದಲ್ಲಿ **"ಈತನ ಶಬ್ಧವು ಬೀದಿಗಳಲ್ಲಿ ಯಾರಿಗೂ ಕೇಳಿಸುವುದಿಲ್ಲ"** ಎಂದು ಬರೆದಿದ್ದಾರೆ. ಅಷ್ಟೇ ಅಲ್ಲದೆ ಜ್ಞಾನ ನಿಧಿಯನ್ನು ಪ್ರಜೆಗಳಲ್ಲಿ ಸೇರಿಸುವವರೆಗು ಒಣಗಿದ ಕಡ್ಡಿಯನ್ನಾದರೂ ಮುರಿಯಲಿಲ್ಲ. ಇದನ್ನು ಅನುಸರಿಸಿದರೆ ಆತನು ಜ್ಞಾನ ಪ್ರಚಾರ ಹೊರತು ಇತರೆ ಯಾವ ಕೆಲಸವನ್ನು ಮಾಡಲಿಲ್ಲವೆನ್ನುವುದಕ್ಕೆ, ವಾಕ್ಯದಲ್ಲಿ ತಾನು ಅಂದುಕೊಂಡ ಕೆಲಸವನ್ನು ಸಾಧಿಸುವುದಕ್ಕೆ, ಅಂದರೆ ವಿಜಯ ಹೊಂದುವುದಕ್ಕೆ ಜ್ಞಾನನಿಧಿಯನ್ನು ಪ್ರಬಲ ಮಾಡುವವರೆಗು 'ಈತನು ನಲುಗಿದ ಪುಳ್ಳೆಯನ್ನಾದರೂ ಬಿಡನು' ಎಂದು

ಹೇಳಿದ್ದಾರೆ. ಅಷ್ಟೇ ಅಲ್ಲದೇ ಯಾರಲ್ಲಿ ಜ್ಞಾನಾಗ್ನಿ ಅಂಟಿಕೊಳ್ಳುವುದೋ ಅವನ ಕರ್ಮವೆಲ್ಲವೂ ಸುಟ್ಟುಹೋಗುವವರೆಗು ಅದನ್ನು ಆರಿ ಹೋಗದಂತೆ ನೋಡುತ್ತಾನೆ. ಕರ್ಮಗಳು ಅನೇಕ ವಿಧಗಳಾಗಿ ಇರುತ್ತವೆ ಆದಕಾರಣ ಕರ್ಮಗಳನ್ನು ಅನೇಕ ಭಾಗಗಳಾಗಿರುವ ಅವಿಸೆನಾರಿಗೆ ಹೋಲಿ ಸಿದ್ದಾರೆ. ಅದೇ ವಿಷಯವನ್ನೇ ವಾಕ್ಯದಲ್ಲಿ **"ಕಾಂತಿ ಹೀನತೆ ಆಗುತ್ತಿರುವ ಅವಿಸೆನಾರನ್ನು ನಂದಿಸುವುದಿಲ್ಲ (ಆರಿಸುವುದಿಲ್ಲ)"** ಎಂದು ಹೇಳಿದ್ದಾರೆ. ಕೆಲವರು ಆತನ ಜ್ಞಾನಕ್ಕಾಗಿ ಕಾದುಕೊಂಡು ಇರುತ್ತಾರೆ ಆದ್ದರಿಂದ **"ಈತನ ನಾಮದಲ್ಲಿ ಅನ್ಯ ಜನರು ನಿರೀಕ್ಷಿಸುತ್ತಾರೆ"** ಎಂದು ವಾಕ್ಯದಲ್ಲಿ ಹೇಳಿದ್ದಾರೆ.

### (34) ಮತ್ತಾಯ ಸುವಾರ್ತೆ, 12ನೇ ಅಧ್ಯಾಯ, 31ನೇ ವಚನ.

## (31) ಆದ್ದರಿಂದ ನಾನು ನಿಮ್ಮೊಂದಿಗೆ ಹೇಳುವುದೇನೆಂದರೇ! ಮನುಷ್ಯರು ಮಾಡುವ ಪ್ರತಿ ಪಾಪವು ದೂಷಣೆಯು ಅವರಿಗೆ ಕ್ಷಮಿಸಲ್ಪಡುತ್ತದೆ ಆದರೇ, ಆತ್ಮ ವಿಷಯವಾದ ದೂಷಣೆಗೆ ಪಾಪಕ್ಷಮಾಪಣೆ ಇಲ್ಲ.

ಈ ವಾಕ್ಯವು ದೈವಗ್ರಂಥದಲ್ಲಿ ಉಳಿದ ವಾಕ್ಯಗಳಿಗಿಂತಲೂ ಬಹಳ ಮುಖ್ಯವಾದುದು. ಮನುಷ್ಯರು ಅನೇಕ ವಿಧಗಳಾದ ಪಾಪಗಳು ದೈವಜ್ಞಾನವನ್ನು ತಿಳಿಯುವುದರಿಂದ ಮನುಷ್ಯ ತಿಳಿದುಕೊಂಡ ಜ್ಞಾನವು ಶಕ್ತಿಯಾಗಿ ಬದಲಾಗಿ ಅದು ಅಗ್ನಿಯಾಗಿ ಇದ್ದು ಕರ್ಮಗಳನ್ನು (ಪಾಪಗಳನ್ನು) ಸುಟ್ಟುಹಾಕುತ್ತಿದೆ. ಪ್ರಪಂಚ ಸಂಬಂಧ ಯಾವ ಪಾಪವಾಗಲೀ ಅದು ಮನುಷ್ಯ ತಿಳಿಯುವ ಜ್ಞಾನದಿಂದ ಇಲ್ಲದೇ ಹೋಗುವ ಅವಕಾಶವಿದೆ. ಆದರೇ ಮನುಷ್ಯ ಆತ್ಮ ಸಂಬಂಧವಾಗಿ ಮಾಡಿರುವ ದೂಷಣೆಯಿಂದ, ಮಾಡಿರುವ ವಿರುದ್ಧ ಕಾರ್ಯ ಗಳಿಂದ ಬರುವ ಪಾಪವು ಜ್ಞಾನಾಗ್ನಿಯಲ್ಲಿ ಕೂಡಾ ಸುಡುವುದಿಲ್ಲ. ಅಂದರೇ ಅದು ಕ್ಷಮಿಸಲ್ಪಡುವುದಿಲ್ಲ.

**(35) ಮತ್ತಾಯ ಸುವಾರ್ತೆ, 12ನೇ ಅಧ್ಯಾಯದಲ್ಲಿ 32ನೇ ವಚನ.**

## (32) ಮನುಷ್ಯ ಕುಮಾರನಿಗೆ ವಿರೋಧವಾಗಿ ಮಾತನಾಡುವವನಿಗೆ ಪಾಪ ಕ್ಷಮಾಪಣೆ ಇದೆ ಆದರೆ, ಪರಿಶುದ್ಧಾತ್ಮಗೆ ವಿರುದ್ಧವಾಗಿ ಮಾತನಾಡುವವರಿಗೆ ಈ ಯುಗದಲ್ಲಾದರೂ, ಮುಂಬರುವ ಯುಗದಲ್ಲಾದರೂ ಪಾಪಕ್ಷಮಾಪಣೆ ಇಲ್ಲ.

ಮನುಷ್ಯರೆಲ್ಲರನ್ನು ಮನುಷ್ಯ ಕುಮಾರರೆಂದು ಹೇಳಬಹುದು. ಸರ್ವಸಾಧಾರಣ ಮನುಷ್ಯರೆಲ್ಲರೂ ತಮ್ಮ ತಾಯಿತಂದೆಯರನ್ನು ಮನುಷ್ಯರೆಂದೇ ಹೇಳುತ್ತಿರುತ್ತಾರೆ. ನಾನು ಇಂತಹ ಮನುಷ್ಯ ಕುಮಾರನೆಂದು ಹೇಳುತ್ತಿರುವುದರಿಂದ ಮನುಷ್ಯನನ್ನು ಮನುಷ್ಯ ಕುಮಾರನೆಂದೇ ಹೇಳಬಹುದು. ಆದರೇ ಸಾಧಾರಣ ಮನುಷ್ಯನ ಹಾಗೆ ಕಾಣಿಸುವ ಏಸುವನ್ನು ಮನುಷ್ಯ ಕುಮಾರನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಸು ಕೂಡಾ ತನ್ನ ತಂದೆಯನ್ನು ಕುರಿತು ಹೇಳುವಾಗ 'ನನ್ನ ತಂದೆ ಪರಲೋಕದಲ್ಲಿ ಇದ್ದಾನೆಂದು' ಹೇಳಿದ್ದಾನೆ ಹೊರತು, ಇಹಲೋಕದಲ್ಲಿ ಇರುವ ಮನುಷ್ಯನನ್ನು ತನ್ನ ತಂದೆಯೆಂದು ಹೇಳಲಿಲ್ಲ. ಆದ್ದರಿಂದ ಏಸುವನ್ನು ದೇವರ ಕುಮಾರನೆಂದು ಹೇಳಬಹುದು. ಇದನ್ನು ಅನುಸರಿಸಿ ಪ್ರಜೆಗಳೆಲ್ಲರನ್ನು ಮನುಷ್ಯ ಕುಮಾರರೆಂದು ಹೇಳಿದರೂ, ಸಾಧಾರಣ ಮನುಷ್ಯನ ಹಾಗೆ ಇರುವವನು, ಸಾಧಾರಣ ಮನುಷ್ಯನ ಹಾಗೆ ಹೆಸರು ಇರುವವನು, ಸಾಧಾರಣ ಮನುಷ್ಯನ ಹಾಗೆ ಕಷ್ಟಸುಖಗಳನ್ನು ಹೊಂದುವವನಾದ ಏಸುವನ್ನು ಸಾಧಾರಣ ವಾಗಿ ಮನುಷ್ಯ ಕುಮಾರನು ಎಂದು ಕರೆಯದೆ **'ದೇವರ ಕುಮಾರನು'** ಎಂದು ಹೇಳುತ್ತಿದ್ದೇವೆ.

ಸಾಧಾರಣ ಮನುಷ್ಯರಿಗೆ ಬೀಜದಾತ ಆದವನು ಮನುಷ್ಯನಲ್ಲ. ಯಾವ ಮನುಷ್ಯನೂ ತನ್ನ ಸಂತತಿಯೆಂದು ಹೇಳಿಕೊಳ್ಳುವವರಿಗೆ ವಾಸ್ತವವಾಗಿ ತಂದೆ ಅಲ್ಲ. ಸಮಸ್ತ ಮಾನವರಿಗೇ ಅಲ್ಲದೇ ಸಮಸ್ತ ಜೀವರಾಶಿಗಳಿಗೆ ಬೀಜದಾತ ಆದವನು, ಶರೀರದಲ್ಲಿ ಅಧಿಪತಿಯಾಗಿ ಇದ್ದು ಶರೀರವನ್ನು ನಡೆಸುತ್ತಾ ಪ್ರತಿ

ಕಾರ್ಯವನ್ನು ಮಾಡುವವನು ಆತ್ಮವೇ. ಆದರೇ ಆ ವಿಷಯವು ಮನುಷ್ಯರಿಗೆ ತಿಳಿದಿಲ್ಲ. ಆದ್ದರಿಂದ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ತಂದೆಯಾಗಿ ಹೇಳಿಕೊಳ್ಳುತ್ತಿದ್ದಾನೆ. ಮನುಷ್ಯ ಹೇಳಿಕೊಂಡ ಹಾಗೆ ಮನುಷ್ಯನನ್ನು ಮನುಷ್ಯ ಕುಮಾರನನ್ನಾಗಿಯೇ ಎಲ್ಲರೂ ಹೇಳುತ್ತಿದ್ದಾರೆ. ಮನುಷ್ಯ ತಾನು ಯಾವ ಕೆಲಸವನ್ನೂ ಮಾಡಲಿಲ್ಲ. ಎಲ್ಲಾ ಕೆಲಸಗಳನ್ನು ಮಾಡುವುದು ಆತ್ಮವೇ ಎಂದು ಪ್ರಥಮ, ದ್ವಿತೀಯ ದೈವಗ್ರಂಥಗಳಲ್ಲಿ ಅನೇಕ ಕಡೆ ಹೇಳಲ್ಪಟ್ಟಿದೆ. ಮನುಷ್ಯ ಸ್ವತಃವಾಗಿ ಯಾವ ಕೆಲಸವನ್ನೂ ಮಾಡಲಿಲ್ಲ ಆದ್ದರಿಂದ ಮನುಷ್ಯ ಸ್ವತಃವಾಗಿ ಯಾವ ಪಾಪವನ್ನೂ ಮಾಡಲಿಲ್ಲವೆಂದೇ ಹೇಳಬೇಕು. ಆದರೇ ಮನುಷ್ಯ ತಾನು ಪ್ರತೀ ಕೆಲಸವನ್ನು ಮಾಡುತ್ತಿದ್ದೇನೆಂದು ಅಂದುಕೊಳ್ಳುತ್ತಿರುವುದರಿಂದ, ನಡೆದ ಕಾರ್ಯಗಳಿಂದ ಬಂದಿರುವ ಪಾಪವು ಜೀವಿಯ (ಮನುಷ್ಯ) ಖಾತೆಯೊಳಗೆ ಸೇರುತ್ತಿದೆ. ಈ ವಿಧವಾಗಿ ಮಾಡದ ಪಾಪಕ್ಕೆ ಮನುಷ್ಯ ತಾನೇ ಹೊಣೆಯಾಗುತ್ತಿದ್ದಾನೆ. ಹಾಗೇ ಮನುಷ್ಯನಿಗೆ ತಂದೆ ಆತ್ಮವಾದರೂ, ತನ್ನ ತಂದೆ ಮನುಷ್ಯನೆಂದು ಹೇಳುವುದರಿಂದ ಆತನು ಮನುಷ್ಯ ಕುಮಾರನಾಗಿಯೇ ಲೆಕ್ಕಿಸಲ್ಪಡುತ್ತಿದ್ದಾನೆ.

ಏಸು ವಾಸ್ತವವಾಗಿ ತನ್ನ ತಂದೆ ಪರಲೋಕದ ತಂದೆಯೆಂದು ಆತನಿಗೆ ತಿಳಿದಿದೆ. ಏಸು ಎಲ್ಲರ ಹಾಗೆ ಆತ್ಮದಿಂದ ಹುಟ್ಟಿದವನಲ್ಲ. ಏಸು ಪರಿಶುದ್ಧಾತ್ಮನಾದ ದೇವರ ಕುಮಾರನೆಂದು ಆತನಿಗೆ ತಿಳಿದಿದೆ. ಅಷ್ಟೇ ಅಲ್ಲದೇ ಎಲ್ಲಾ ಕಡೆ ತನ್ನ ತಂದೆ ಪರಿಶುದ್ಧಾತ್ಮನಾದ ಪರಲೋಕದ ತಂದೆಯೆಂದು ಏಸು ಹೇಳುವುದರಿಂದ ಏಸುವನ್ನು ದೇವರ ಕುಮಾರನೆಂದು, ಮನುಷ್ಯನನ್ನು ಮನುಷ್ಯ ಕುಮಾರನೆಂದು ಗ್ರಂಥದಲ್ಲಿ ಹೇಳಿದ್ದಾರೆ. ಸಾಧಾರಣ ಮನುಷ್ಯನನ್ನು ವಿರುದ್ಧವಾಗಿ ದೂಷಿಸಿದರೂ, ಆ ದೂಷಣೆಯಿಂದ ಬರುವ ಪಾಪವು ದೇವರ ಜ್ಞಾನದಿಂದ ಕ್ಷಮಿಸಲ್ಪಡುತ್ತದೆ. ಆದರೇ ದೇವರ ಕುಮಾರನಿಗೆ ವಿರುದ್ಧವಾಗಿ ಮಾತನಾಡಿದರೇ ಬರುವ ಪಾಪವು ಎಂದಿಗೂ ಕ್ಷಮಿಸಲ್ಪಡುವುದಿಲ್ಲ. ಈ ಯುಗದಲ್ಲಾಗಲೀ, ಮುಂಬರುವ ಯುಗದಲ್ಲಾಗಲೀ ಕ್ಷಮಿಸಲ್ಪಡುವುದಿಲ್ಲವೆಂದು ಹೇಳಿರುವುದರಿಂದ ದೈವ

ದೂಷಣೆಯಿಂದ ಬಂದಿರುವ ಪಾಪವು ಈ ಯುಗದಲ್ಲೂ, ಮುಂಬರುವ ಯುಗದಲ್ಲೂ ಒಟ್ಟು **ಎರಡು ಯುಗಗಳಲ್ಲಿಯೂ** ಪಾಪವನ್ನು ಅನುಭವಿಸಬೇಕಾಗಿರುತ್ತದೆ.

**(36) ಮತ್ತಾಯ ಸುವಾರ್ತೆ, 12ನೇ ಅಧ್ಯಾಯ, 36, 37 ವಚನಗಳು.**

**(36) ನಾನು ನಿಮ್ಮೊಂದಿಗೆ ಹೇಳುವುದು ಏನೆಂದರೇ! ಮನುಷ್ಯ ನುಡಿಯುವ ವ್ಯರ್ಥವಾದ ಪ್ರತಿ ಮಾತನ್ನು ಕುರಿತು ವಿಮರ್ಶೆ ದಿನದಂದು ಲೆಕ್ಕ ಹೇಳಬೇಕಾಗಿರುತ್ತದೆ.**

**(37) ನಿನ್ನ ಮಾತುಗಳನ್ನು ಅನುಸರಿಸಿ ನೀತಿವಂತನೆಂದು ತೀರ್ಪನ್ನು ಹೊಂದುವೆ. ನಿನ್ನ ಮಾತುಗಳನ್ನು ಅನುಸರಿಸಿಯೇ ಅಪರಾಧಿ ಎಂದು ತೀರ್ಪು ಹೊಂದುವೆ.**

ಮನುಷ್ಯ ಹುಟ್ಟಿದಾಗಿನಿಂದ ಅನೇಕವಾದ ಕೆಲಸಗಳು ಮಾಡುತ್ತಿರುತ್ತಾನೆ. ಹಾಗೆಯೇ ಅನೇಕವಾದ ಮಾತುಗಳನ್ನು ಮಾತನಾಡಬೇಕಾಗಿರುತ್ತದೆ. ಮನುಷ್ಯ ಮಾಡಿರುವ ಪ್ರತೀ ಚಿಕ್ಕ ಕೆಲಸವಾಗಲೀ, ಚಿಕ್ಕ ಮಾತಾಗಲೀ ಮನುಷ್ಯ ಮಾತನಾಡುತ್ತಿಲ್ಲ, ಮನುಷ್ಯ ಮಾಡುತ್ತಿಲ್ಲ. ಶರೀರದಲ್ಲಿರುವ ಆತ್ಮವೇ ಎಲ್ಲವನ್ನೂ ಮಾಡುತ್ತಿದೆ. ಆದರೂ ಆ ವಿಷಯವನ್ನು ತಿಳಿಯದ ಮನುಷ್ಯ ಎಲ್ಲಾ ತಾನೇ ಮಾಡುತ್ತಿದ್ದೇನೆಂದೂ, ಎಲ್ಲಾ ತಾನೇ ಮಾತನಾಡುತ್ತಿದ್ದೇನೆಂದು ಅಂದು ಕೊಳ್ಳುವುದು ನಡೆಯುತ್ತಿದೆ. ಆಗ ನಡೆದಿರುವ ಕಾರ್ಯದಲ್ಲಾಗಲೀ, ಮಾತನಾಡಿರುವ ಮಾತುಗಳಲ್ಲಾಗಲೀ ಇರುವ ಕರ್ಮ ಯಾವುದಾದರೂ ಅದು ಆ ಮನುಷ್ಯನನ್ನೇ ಸೇರುತ್ತದೆ. ಹಾಗೆ ಜೀವನದಲ್ಲಿ ಏರ್ಪಟ್ಟಿರುವ ಕರ್ಮಗಳೆಲ್ಲವೂ ಆತ್ಮದಿಂದಲೇ ಕರ್ಮಚಕ್ರದಲ್ಲಿ ಶೇಖರಣೆ ಮಾಡಲ್ಪಡುತ್ತಿರುತ್ತದೆ. ಮನುಷ್ಯ ಮರಣಿಸಿದ ದಿನ ಜೀವನದಲ್ಲಿ ಸಂಪಾದಿಸಲ್ಪಟ್ಟ ಕರ್ಮವೆಲ್ಲವೂ ವಿಚಾರಿಸಲ್ಪಡುತ್ತದೆ. ಆಗ ಮಾತನಾಡಿರುವ ಪ್ರತೀ ಮಾತಿಗೂ, ಮಾಡಿರುವ ಪ್ರತಿ ಕೆಲಸಕ್ಕೂ ನಿರ್ಣಯಿಸಲ್ಪಟ್ಟಿರುವ ಕರ್ಮವೆಲ್ಲವನ್ನು ತೀರ್ಪು ಮಾಡುವವನು

ಆತ್ಮವೇ. ಆಗ ಮನುಷ್ಯ ಮಾತನಾಡಿರುವ ಪ್ರತಿ ಮಾತಿನಲ್ಲಿನ ಪಾಪವನ್ನಾಗಲೀ, ಪುಣ್ಯನ್ನಾಗಲೀ ತೀರ್ಪು ದಿನದಂದು ಲೆಕ್ಕಿಸಿ ನೋಡಿ, ಆತನು ಜ್ಞಾನವಂತನಾ ಇಲ್ಲವೇ ಅಜ್ಞಾನದೊಂದಿಗೆ ಕೂಡಿರುವವನಾ ಎಂದು ಕೂಡಾ ಲೆಕ್ಕಿಸಿ ನೋಡಲಾಗುವುದು. ಆತನು ಅಂದರೆ ಮನುಷ್ಯ ಮಾಡಿಕೊಂಡಿರುವ ಪ್ರತಿ ಪಾಪವನ್ನು ಅನುಸರಿಸಿ, ಹಾಗೇ ಪ್ರತಿ ಪುಣ್ಯವನ್ನು ಅನುಸರಿಸಿ ತೀರ್ಪು ನಿರ್ಣಯಿಸಲ್ಪಡುತ್ತದೆ. ಮನುಷ್ಯ ತನ್ನ ಜೀವನದಲ್ಲಿ ಸಂಪಾದಿಸಿಕೊಂಡ ಜ್ಞಾನವನ್ನು ಅನುಸರಿಸಿ ಜ್ಞಾನವಂತನೆಂದು, ಹಾಗೇ ಆತನು ಮಾಡಿರುವ ಅಜ್ಞಾನವನ್ನು ಅನುಸರಿಸಿ ಅಜ್ಞಾನಿ ಎಂದು ಲೆಕ್ಕಿಸಿ, ಅದರ ಪ್ರಕಾರ ನಂತರ ಜನ್ಮದಲ್ಲಿ ಜೀವನವನ್ನು ಆತ್ಮವೇ ನಿರ್ಣಯಿಸುತ್ತದೆ. ಪರಿಶುದ್ಧಾತ್ಮ ಮನುಷ್ಯ ಮಾಡಿಕೊಂಡಿರುವುದನ್ನು ಅನುಸರಿಸಿ ತೀರ್ಪು ನಿರ್ಣಯಿಸುವುದಿಲ್ಲ. ಮನುಷ್ಯನ ಶರೀರದಲ್ಲಿ ಕರ್ತನಾಗಿರುವ ಆತ್ಮವೇ ಮರಣ ದಿನದಂದು, ಅಂದರೇ ತೀರ್ಪು ದಿನದಂದು ತೀರ್ಪು ನಿರ್ಣಯಿಸಿ ಮುಂದಿನ ಜನ್ಮಕ್ಕೆ ಜೀವಿಯನ್ನು ಕಳುಹಿಸುತ್ತಾನೆ. ಮರಣ ದಿನವನ್ನೇ **'ತೀರ್ಪು ದಿನ'** ಎಂದು ಹೇಳುತ್ತಿದ್ದೇವೆ. ಹಾಗೆಯೇ ಮರಣ ದಿನವನ್ನು **'ಅಂತಿಮ ದಿನ'** ಎಂದು ಅನ್ನುವುದೇ ಅಲ್ಲದೇ, ಆ ದಿನವನ್ನೇ ಜೀವನದಲ್ಲಿ ಪ್ರಥಮ ದಿನ ಎಂದು ಕೂಡಾ ಹೇಳುತ್ತಿದ್ದೇವೆ. ಅಂತಿಮ ದಿನಕ್ಕಾಗಲೀ, ಪ್ರಥಮ ದಿನಕ್ಕಾಗಲೀ ಅಧಿಪತಿ ಆತ್ಮವೇಯೆಂದು, ಪರಿಶುದ್ಧಾತ್ಮ ಯಾವುದನ್ನು ಮಾಡದವನೆಂದು ತಿಳಿಯಬೇಕು. ಈ ವಾಕ್ಯದಲ್ಲಿ ಅಂತಿಮ ದಿನವನ್ನು **'ವಿಮರ್ಶೆದಿನ'** ಎಂದು ಹೇಳಿದ್ದಾರೆ. ವಿಮರ್ಶೆ ದಿನ ಎಂದರೆ **'ಮನುಷ್ಯನ ಕರ್ಮಗಳನ್ನು ವಿವರಿಸಿ ನೋಡುವ ದಿನ'** ಎಂದು ಅರ್ಥ ಮಾಡಿಕೊಳ್ಳಬೇಕು. ಅಂತಿಮ ದಿನವನ್ನು ವಿಮರ್ಶೆ ದಿನವೆಂದು ಬರೆಯುವುದು ಅನುವಾದ ಲೋಪವೆಂದು ಹೇಳಬಹುದು. ಕರ್ಮಗಳನ್ನು ಲೆಕ್ಕಿಸುವ ದಿನವೆಂದು ಹೇಳಬಹುದು. ಮನುಷ್ಯನ ಶರೀರದಲ್ಲಿ ಕಾರ್ಯಗಳನ್ನು ಮಾಡುವವನು ಆತ್ಮನೇ. ಆ ವಿಷಯವನ್ನು ತಿಳಿದು ತಾನು ಮಾಡಲಿಲ್ಲವೆಂದು ಅಂದುಕೊಳ್ಳುವುದರಿಂದ, ಮನುಷ್ಯ ಪಾಪಾತ್ಮನಾಗಿ, ಪುಣ್ಯಾತ್ಮನಾಗಿ ಲೆಕ್ಕಿಸಲ್ಪಡುತ್ತಾನೆ. ಮಾಡುವವನು ಆತ್ಮವೇ ತಾನು ಮಾಡಿರುವ ಕೆಲಸಗಳಲ್ಲಿನ ಕರ್ಮಗಳನ್ನು ನಿರ್ಣಯಿಸಿ

ಮನುಷ್ಯನನ್ನು ಜನ್ಮಕ್ಕೆ ಕಳುಹಿಸುವವನು ಆತ್ಮವೇಯೆಂದು ತಿಳಿಯಬೇಕು. ಶರೀರದಲ್ಲಿ ಪ್ರತಿ ಚಿಕ್ಕ ದೊಡ್ಡ ಕಾರ್ಯಗಳನ್ನು ಮಾಡುತ್ತಾ, ಕಾರ್ಯಗಳಲ್ಲಿನ ಫಲಿತಗಳಾದ ಪಾಪಪುಣ್ಯಗಳನ್ನು ತನಗೆ ಅಂಟೀ ಅಂಟದ ಹಾಗೆ ಮಾಡುತ್ತಿದೆ. **ಭಾವನೆಯಿಂದ** ಮನುಷ್ಯ ಜ್ಞಾನಿಯಾಗಿ ಅಥವಾ ಅಜ್ಞಾನಿಯಾಗಿ, ಹಾಗೆಯೇ ಪಾಪಾತ್ಮನಾಗಿ, ಪುಣ್ಯಾತ್ಮನಾಗಿ ಲೆಕ್ಕಿಸಲ್ಪಡುತ್ತಿದ್ದಾನೆ.

### (37) ಮತ್ತಾಯ ಸುವಾರ್ತೆ 12ನೇ ಅಧ್ಯಾಯ, 40ನೇ ವಚನ.

## (40) ಏನಾ ಎನ್ನುವಾತನು ಮೂರು ರಾತ್ರಿ ಹಗಲು ತಿಮಿಂಗಲ ಹೊಟ್ಟೆಯಲ್ಲಿ ಹೇಗಿದ್ದನೋ, ಹಾಗೆಯೇ ಮನುಷ್ಯ ಕುಮಾರನು ಮೂರು ರಾತ್ರಿ ಹಗಲು ಭೂಗರ್ಭದಲ್ಲಿ ಇರುವನು.

ಏಸುಗಿಂತಲೂ ಹಿಂದಿನ ಕಾಲದಲ್ಲಿ ನಡೆದು ಹೋಗಿರುವ ವಿಷಯವನ್ನು ಸಮಾನವಾಗಿ ಹೋಲಿಸುತ್ತಾ, ನಡೆಯುವ ವಿಷಯವನ್ನು ಹೇಳುವುದು ನಡೆದಿದೆ. "ತಿಮಿಂಗಲ ಎಂಬ ದೊಡ್ಡ ಮೀನು, ಏನಾ ಎನ್ನುವಾತನನ್ನು ನುಂಗಿದಾಗ ಆತನು ತಿಮಿಂಗಲದ ಹೊಟ್ಟೆಯಲ್ಲಿ ಮೂರು ರಾತ್ರಿಗಳು, ಮೂರು ಹಗಲು ಸಜೀವವಾಗಿ ಇದ್ದಂತೆ" ವಾಕ್ಯದಲ್ಲಿ ಹೇಳಿದ್ದಾರೆ. ಹಾಗೆಯೇ ಏಸು ಕೂಡಾ ಮೂರು ರಾತ್ರಿ ಹಗಲು ಭೂಗರ್ಭದಲ್ಲಿ ಇರುತ್ತಾನೆಂದು ಹೇಳಿದಂತೆ ತಿಳಿಯುತ್ತಿದೆ. ಏನಾ ಎನ್ನುವಾತನು ಮೂರು ರಾತ್ರಿಗಳು, ಮೂರು ಹಗಲು ತಿಮಿಂಗಲ ಹೊಟ್ಟೆಯಲ್ಲಿ ಇರುವುದು ನಿಜವೇ, ಆದರೂ "ಮನುಷ್ಯ ಕುಮಾರನು" ಎಂದು ಕರೆಯಲ್ಪಟ್ಟಿರುವ ಏಸು ಭೂಗರ್ಭದಲ್ಲಿ ಮೂರು ರಾತ್ರಿಗಳು, ಮೂರು ಹಗಲು ಇದ್ದಾನೆನ್ನುವುದು ಪೂರ್ತಿ ಅಸತ್ಯವಾಗುತ್ತದೆ. ಈ ವಿಷಯವಾಗಿ ವಿಚಾರಿಸಿದರೇ ಏಸು ಶಿಲುಬೆ ಮೇಲೆ ಶುಕ್ರವಾರ ಸಾಯಂಕಾಲ ಸತ್ತುಹೋದ ಹಾಗೆ ಹೇಳುತ್ತಿದ್ದಾರೆ. ಮರಳಿ ಆತನು ಆದಿವಾರ (ಭಾನುವಾರ) ಬೆಳಗಾಗುವ ಮೊದಲೇ ಸೂರ್ಯೋದಯ ಸಮಯದಲ್ಲಿ ಭೂಸಮಾಧಿಯಿಂದ ಹೊರಗೆ ಬಂದಹಾಗೆ ಹೇಳುತ್ತಿದ್ದಾರೆ. ಆ ವಿಧವಾಗಿ ನೋಡಿದರೇ ಶುಕ್ರವಾರ ಹಗಲು ಸಾಯಂಕಾಲ

ಮೂರುವರೆಯಿಂದ ನಾಲ್ಕು ಗಂಟೆಗಳ ಒಳಗೆ ಏಸು ಶಿಲುಬೆ ಮೇಲೆ ಸತ್ತುಹೋಗಿರಬಹುದು. ಆತನು ಸತ್ತುಹೋದ ನಂತರ ಸಾಯಂಕಾಲ ಸಂಧ್ಯಾ ವೇಳೆಯಲ್ಲಿ ಅಂದರೇ ಹಗಲು ಮುಗಿದು ಹೋಗಿ ರಾತ್ರಿ ಪ್ರಾರಂಭವಾಗುವ ಸಂಧಿ ಕಾಲದಲ್ಲಿ ಆತನ ಶರೀರವನ್ನು ಭೂಸಮಾಧಿಯಲ್ಲಿ ಇಡುವುದು ನಡೆದಿದೆ. ಹಾಗೆ ನಡೆದಿರುವುದನ್ನು ಲೆಕ್ಕಿಸಿದರೆ ಶುಕ್ರವಾರ ಹಗಲು ಏಸು ಭೂಸಮಾಧಿಯಲ್ಲಿ ಇಲ್ಲವೆಂದು ತಿಳಿಯುತ್ತಿದೆ. ಶುಕ್ರವಾರ ರಾತ್ರಿ ಭೂಸಮಾಧಿಯಲ್ಲಿ ಇರುವ ಹಾಗೆ ಹೇಳಬಹುದು. ಹಾಗೆಯೇ ಶನಿವಾರ ಹಗಲು, ರಾತ್ರಿ ಎರಡು ಹೊತ್ತು ಭೂಸಮಾಧಿಯಲ್ಲಿ ಇರುವಂತೆ ತಿಳಿಯುತ್ತಿದೆ. ಆದಿವಾರ ಬೆಳಗಿನ ಜಾವದಲ್ಲಿ ಏಸು ಭೂಸಮಾಧಿಯಿಂದ ಹೊರಗೆ ಬಂದ ಹಾಗೆ ಹೇಳಿದ್ದಾರೆ. ಆದಕಾರಣ ಏಸು ಭೂಸಮಾಧಿಯಲ್ಲಿ ಶುಕ್ರವಾರ ರಾತ್ರಿ ಮತ್ತು ಶನಿವಾರ ರಾತ್ರಿ ಹಗಲು ಇದ್ದು, ಆದಿವಾರ ಬೆಳಗಾಗುವ ಮೊದಲೇ ಹೊರಗೆ ಬರುವುದು ನಡೆದಿದೆ.

ಅದರ ಪ್ರಕಾರ ಏಸು ಎರಡು ರಾತ್ರಿಗಳು, ಒಂದು ಹಗಲು ಮಾತ್ರವೇ ಭೂಗರ್ಭದಲ್ಲಿ ಇರುವ ಹಾಗೆ ತಿಳಿಯುತ್ತಿದೆ. ಆದ್ದರಿಂದ ದೈವ ಗ್ರಂಥದಲ್ಲಿ ಹೇಳಿರುವ ವಾಕ್ಯವು ಅಸತ್ಯವಾಗಿ ಕಾಣಿಸುತ್ತಿದೆ. ದೈವಗ್ರಂಥದಲ್ಲಿನ ವಾಕ್ಯವು ಅಸತ್ಯವಾಗಿ ಎಂದಿಗೂ ಇರುವುದಿಲ್ಲ. ಆದರೂ ಇಲ್ಲಿ ಈ ವಾಕ್ಯವು ಅಸತ್ಯವಾಗಿ ಇರುವ ಹಾಗೆ ಇತರರು ಕೇಳಿದ್ದಾರೆ ಮತ್ತು ನನಗೂ ಕಾಣಿಸಿದೆ. ಈ ವಾಕ್ಯದಲ್ಲಿ ಸತ್ಯವು ಹೊರತು ಅಸತ್ಯಕ್ಕೆ ದಾರಿ ಇಲ್ಲ ಎಂದು ಹೇಳಿರುವ ನಾನು, ಇತರರು ಕೇಳಿರುವುದಕ್ಕೆ ತಪ್ಪದೇ ಉತ್ತರ ಹೇಳಬೇಕಾಗಿ ಬಂದಿದೆ. **"ನೀವು ಮಾತನಾಡುವ ಪ್ರತಿ ಮಾತು ನಿಮ್ಮಲ್ಲಿರುವ ನಿಮ್ಮ ತಂದೆಯೇ ಮಾತನಾಡುತ್ತಿದ್ದಾನೆ, ನೀವಲ್ಲ"** ಎಂದು ಇದೇ ಮತ್ತಾಯ ಸುವಾರ್ತೆಯಲ್ಲಿ ಹತ್ತನೆಯ ಅಧ್ಯಾಯದಲ್ಲಿ, 20ನೇ ವಾಕ್ಯದಲ್ಲಿ ಹೇಳಿರುವ ವಿಷಯವು ನನಗೆ ಆಗಲೂ ಈಗಲೂ ಯಾವಾಗಲೂ ಜ್ಞಾಪಕ ಇರುವುದರಿಂದ ಯಾವುದಕ್ಕಾದರೂ ಉತ್ತರ ಹೇಳುತ್ತಿರುವಾಗ ನನಗೇಕೆ ಭಯವೆಂದು ಅಂದುಕೊಂಡಿದ್ದೇನೆ. ಪ್ರಶ್ನೆ ಕೇಳುವವನು ಆತ್ಮವೇ, ಪ್ರಶ್ನೆಗೆ ಉತ್ತರ ಹೇಳುವವನು ಆತ್ಮವೇ, ಹೇಳುವುದನ್ನು ಕೇಳಿ ತಿಳಿದುಕೊಳ್ಳಬೇಕಾದವರು ಜೀವಿಗಳಾದ ನಾವೇ.

ಮನುಷ್ಯ ಕುಮಾರನು ಎಂದು ಕರೆಯಲ್ಪಟ್ಟವನು ದೇವರ ಕುಮಾರನೇ. ದೇವರ ಕುಮಾರನೆಂದು ನಾವು ಹೇಳಿದರೂ, ವಾಸ್ತವವಾಗಿ ಆತನು ಯಾರ ಕುಮಾರನು, ಆದರೆ ದೇವರೇಯೆಂದು ನಾನು ನಂಬುತ್ತಿದ್ದೇನೆ ಎಂದು ಹೇಳಿದರೂ, ಆ ವಿಷಯವು ನನಗೆ ಪೂರ್ತಿಯಾಗಿ ತಿಳಿದಿದೆಯೆಂದು ಹೇಳುತ್ತಿದ್ದೇನೆ. ದೇವರಿಗೆ ಮರಣವಿದೆಯಾ? ಎಂದು ಪ್ರಶ್ನಿಸಿಕೊಂಡು ನೋಡಿದರೇ, ದೇವರು ಧರಿಸಿರುವ ಶರೀರಕ್ಕೆ ಮರಣವಿದೆ, ಆದರೇ ದೇವರಿಗೆ ಮರಣವಿಲ್ಲ. ವಾಸ್ತವವಾಗಿ ಮರಣಗಳು ನಾಲ್ಕು ವಿಧಗಳು ಇವೆ. ಮನುಷ್ಯರಾದ ನಮಗೆ ಮರಣವೆಂದರೆ ಒಂದೇ ಎಂದು ತಿಳಿದಿದ್ದರೂ, ಕೆಲವು ಜನ ಜ್ಞಾನಿಗಳಾದವರಿಗೆ ನಾಲ್ಕು ಮರಣಗಳಿರುವ ಹಾಗೆ ತಿಳಿಯುತ್ತದೆ. ಅವು ಕ್ರಮವಾಗಿ 1) ಕಾಲ ಮರಣ 2)ಅಕಾಲ ಮರಣ 3) ತಾತ್ಕಾಲಿಕ ಮರಣ 4) ಅಂತಿಮ ಮರಣ ಎಂದು ಇರುವ ನಾಲ್ಕು ವಿಧಗಳ ಮರಣಗಳಲ್ಲಿ ದೇವರು ಮನುಷ್ಯನಾಗಿ ಹುಟ್ಟಿದಾಗಾಗಲೀ, ಮನುಷ್ಯ ಮೋಕ್ಷವನ್ನು ಹೊಂದಿ ದೇವರಲ್ಲಿ ಐಕ್ಯವಾಗು ವಾಗಾಗಲೀ ಬರುವ ಮರಣ ಅಂತಿಮ ಮರಣ ಎಂದು ಹೇಳುತ್ತಿದ್ದೇವೆ. ಏಸು ಶಿಲುಬೆ ಮೇಲೆ ಸತ್ತುಹೋಗಿದ್ದಾನೆಂದು ಪ್ರಜೆಗಳೆಲ್ಲರೂ ಹೇಳುತ್ತಿದ್ದಾರೆ. ಆದರೇ ಆತನು ನಾಲ್ಕು ಮರಣಗಳಲ್ಲಿ ಯಾವ ಮರಣವನ್ನು ಹೊಂದಿದ್ದಾನೋ ಯಾರಿಗೂ ತಿಳಿದಿಲ್ಲ.

ಈಗ ಅಸಲು ವಿಷಯಕ್ಕೆ ಬಂದರೆ ಏಸು ಮೂರು ರಾತ್ರಿಗಳು, ಮೂರು ಹಗಲು ಭೂಗರ್ಭದಲ್ಲಿ ಇದ್ದು ಬಂದಿದ್ದಾನೆ ಎಂದು ಹೇಳಿದ್ದಾರೆ ಹೊರತು, ಆತನು ಸತ್ತುಹೋಗಿದ್ದಾನೆಂದು ಹೇಳಲಿಲ್ಲ. ಏಸುವನ್ನು ಶಿಲುಬೆಗೆ ಹಾಕಿದಾಗ ಆತನು ಶಿಲುಬೆ ಮೇಲೆ ಮರಣಿಸಿದ್ದಾನೆಂದು ಎಲ್ಲರೂ ಅಂದುಕೊಂಡರೂ, ಆದಿವಾರ ಬೆಳಗ್ಗೆ ಭೂಸಮಾಧಿಯಿಂದ ಹೊರಗೆ ಬಂದಿರುವ ಆತನು 'ನಾನು ಸತ್ತುಹೋಗಲಿಲ್ಲ' ಎಂದು ಹೇಳುವುದು ನಡೆದಿದೆ. ಎದುರಿಗೆ ಕಾಣಿಸುತ್ತಿದ್ದರೂ ತನ್ನನ್ನು ನಂಬಲಾರದ ಶಿಷ್ಯರಿಗೆ ತನ್ನ ಶರೀರಕ್ಕಿರುವ ಮೊಳೆಗಳು ಹೊಡೆದಿರುವ ಗುರುತುಗಳನ್ನು, ಶೂಲದಿಂದ ಹೊಟ್ಟೆಗೆ ಇರಿದ ಗುರುತನ್ನು ಕೂಡಾ

ತೋರಿಸಿದ್ದಾನೆ. ಅದರಿಂದ ಆತನು ಸಾಯಲಿಲ್ಲ ಎಂದು ನಮಗು ಕೂಡಾ ರೂಢಿಯಾಗಿ ತಿಳಿದುಹೋಗಿದೆ. ಆದರೇ ಶುಕ್ರವಾರ ಸಾಯಂಕಾಲ ಏಸು ಸತ್ತುಹೋದಂತೆ ತಿಳಿದಾಗ, ಆತನ ಶರೀರವನ್ನು ಕೆಳಗೆ ಇಳಿಸಿ ಭೂಸಮಾಧಿಯಲ್ಲಿ ಇಟ್ಟಿರುವುದು ಕೂಡಾ ಸತ್ಯವೇ. ಆದರೇ ಆತನು ಸತ್ತು ಹೋದಹಾಗೆ ಶುಕ್ರವಾರ ಕಾಣಿಸಿದರೂ, ಆದಿವಾರ ಸಾಯಲಿಲ್ಲ ಎನ್ನುವ ಹಾಗೆ ಆತನು ಕಾಣಿಸುವುದರಲ್ಲಿ ರಹಸ್ಯವೇನು? ಎಂದು ಪ್ರಶ್ನಿಸಿಕೊಂಡು ನೋಡಿದರೇ, ಈಗ ಹೇಳಿರುವ 40ನೇ ವಾಕ್ಯದಲ್ಲಿ **“ಮನುಷ್ಯ ಕುಮಾರನು ಮೂರು ದಿನಗಳು, ಮೂರು ರಾತ್ರಿಗಳು, ಮೂರು ಹಗಲು ಭೂಗರ್ಭದಲ್ಲಿ ಇರುತ್ತಾನೆ”** ಎಂದು ಬರೆದಿರುವುದನ್ನು ನೋಡಿದರೇ ಭೂಗರ್ಭದಲ್ಲಿ ಮೂರು ದಿನಗಳು ಇಲ್ಲ ಇದ್ದದ್ದು ಎರಡು ದಿನಗಳೇ, ಅದೂ ಎರಡು ರಾತ್ರಿಗಳು, ಒಂದು ಹಗಲು ಮಾತ್ರವೇ ಎಂದು ತಿಳಿಯುತ್ತಿದೆ. ಹೀಗೆ ಅಸತ್ಯವನ್ನು ಕಾಣಿಸುವ ಹಾಗೆ ಹೇಳುವುದರಲ್ಲಿ ಇರುವ ರಹಸ್ಯವೇನು? ಎಂದು ಪ್ರಶ್ನಿಸಿಕೊಂಡು ನೋಡಿದರೇ, ಎರಡೂ ಸತ್ಯಗಳೇ ಎಂದು ತಿಳಿಯುತ್ತಿದೆ. ಕಾಣಿಸುವ ಅಸತ್ಯದಲ್ಲಿ ಕಾಣಿಸದ ಸತ್ಯವು ಹೇಗೆ ಅಡಗಿದೆಯೋ ಈಗ ನೋಡೋಣ.

ಏಸು ಶಿಲುಬೆ ಮೇಲೆ ಸತ್ತುಹೋಗಿರುವುದು ವಾಸ್ತವವೇ ಆದರೂ ಅದು **ತಾತ್ಕಾಲಿಕ ಮರಣ** ಎಂದು ಯಾರಿಗೂ ತಿಳಿದಿಲ್ಲ. ನಾಲ್ಕು ವಿಧಗಳಲ್ಲಿ ತಾತ್ಕಾಲಿಕ ಮರಣವನ್ನು ಹೊಂದಿ, ಮರಳಿ ಆದಿವಾರ ಬೆಳಗಾಗುವ ಮುನ್ನವೇ, ಬೆಳಗಿನ ಜಾವದಲ್ಲಿ ತಾತ್ಕಾಲಿಕ ಮರಣದಿಂದ ಎದ್ದು ಹೊರಗೆ ಬಂದು ‘ನಾನು ಸಾಯಲಿಲ್ಲ’ ಎಂದು ಹೇಳಿದ್ದಾನೆ. ಏಸು ಕಾಲ ಮರಣವನ್ನು ಹೊಂದಿದ್ದರೇ ಪುನಃ ಎದ್ದು ಬರಲಾರನು. ಆತನು ಹೊಂದಿರುವುದು ‘ತಾತ್ಕಾಲಿಕ ಮರಣವು’ ಆದ್ದರಿಂದ ಮೂರನೆಯ ದಿನ ಎದ್ದು ಬಂದಿದ್ದಾನೆ. ಆದ್ದರಿಂದ ಏಸು ಸತ್ತು ಹೋಗಿದ್ದಾನೆ ಎನ್ನುವುದು ಭ್ರಮೆಯೇ ಹೊರತು ಸತ್ಯವಲ್ಲ. ಹಾಗೆಯೇ ಏಸು ಮೂರು ದಿನಗಳು ಭೂಗರ್ಭದಲ್ಲಿ ಇದ್ದಾನೆಂದು ಹೇಳಿರುವ ವಾಕ್ಯವು ಪೂರ್ತಿ ಸತ್ಯವೇ ಆದರೂ, ನಾವು ಇದರಲ್ಲಿ ತಿಳಿಯಬೇಕಾಗಿರುವುದು ಎಷ್ಟೋ ಇದೆ.

ಏಸು ಶರೀರದಲ್ಲಿ ಜೀವಾತ್ಮನಾಗಿ ನಿವಾಸಿಸುತ್ತಿದ್ದಾನೆ. ಹಾಗೆಯೇ ಎಲ್ಲರಿಗೂ ತಂದೆಯಾದ ಆತ್ಮ ಶರೀರದಲ್ಲಿ ನಿವಾಸಿಸುತ್ತಿದ್ದಾನೆ. ಪ್ರತಿ ಮನುಷ್ಯನ ಶರೀರದಲ್ಲಿ ಜೀವಾತ್ಮ ಕರ್ಮಗಳನ್ನು ಅನುಭವಿಸುತ್ತಾ ಇರುವಾಗ, ಆತ್ಮ ಕರ್ಮಪ್ರಕಾರ ಅಗತ್ಯವಾದ ಕೆಲಸಗಳನ್ನು ಕಾರ್ಯಕರ್ತನಾಗಿ ಮಾಡುತ್ತಿದೆ. ಶರೀರದಲ್ಲಿ ಜೀವಾತ್ಮ ತಲೆ ಒಳಗೆ ಇರುವಾಗ, ಆತ್ಮ ಶರೀರದ ಹೊರಗಿನ ಅಂಚಿನವರೆಗು ವ್ಯಾಪಿಸಿ ಇದೆ. ಹೊರಗೆ ಇರುವ ಹತ್ತು ಇಂದ್ರಿಯ ಭಾಗಗಳನ್ನು ಕೆಲಸ ಮಾಡಿಸುತ್ತಾ, ಶರೀರವನ್ನು ಕದಲಿಸುತ್ತಿರುವುದು ಆತ್ಮವೇ ಎಂದು ತಿಳಿಯಬೇಕು. ಶರೀರವು ಕದಲುತ್ತಿದ್ದರೇ ಮನುಷ್ಯ ಬದುಕಿದ್ದಾನೆ ಎಂದು ಅಂದುಕೊಳ್ಳುತ್ತೇವೆ. ಮನುಷ್ಯನ ಶರೀರದಲ್ಲಿ ಹತ್ತು ಭಾಗಗಳು, ಅವಯವಗಳು ಕೆಲಸ ಮಾಡದೆ, ಶ್ವಾಸ ಆಡದೇ ಹೋದರೇ ಮನುಷ್ಯ ಸತ್ತು ಹೋಗಿದ್ದಾನೆ ಎಂದು ಹೇಳುತ್ತೇವೆ. ಮನುಷ್ಯ ಮರಣದಲ್ಲಿ ಅಂದರೇ ಕಾಲ ಮರಣದಲ್ಲಿ ಆತ್ಮ, ಆತ್ಮದೊಂದಿಗೆ ಜೀವಾತ್ಮ ಎರಡೂ ಶರೀರದಿಂದ ಹೊರಗೆ ಹೋಗುತ್ತವೆ. ಆಗ ಶರೀರವು ಆತ್ಮ ಇಲ್ಲದಿರುವುದರಿಂದ ಕದಲದೆ ಬಿದ್ದು ಹೋಗುತ್ತಿದೆ.

ತಾತ್ಕಾಲಿಕ ಮರಣದಲ್ಲಿ ಆತ್ಮವಾಗಲೀ, ಜೀವಾತ್ಮವಾಗಲೀ ಶರೀರವನ್ನು ಬಿಟ್ಟು ಹೊರಗೆ ಹೋಗುವುದಿಲ್ಲ. ಆತ್ಮ ಶರೀರದ ಹೊರಗಿನ ಅಂಚಿನಿಂದ ಒಳಗೆ ಮುದುರಿಕೊಂಡು ಜೀವಾತ್ಮದ ಹಾಗೆ ಶರೀರದಲ್ಲಿ ತಲೆಯಲ್ಲಿ ಸೇರಿ ಹೋಗುತ್ತಿದೆ. ಆತ್ಮ ಕೆಲಸ ಮಾಡದೆ ಹೋಗುವುದರಿಂದ ಎಲ್ಲಾ ಅವಯವಗಳು ಕೆಲಸ ಮಾಡುವುದಿಲ್ಲ, ಹಾಗೆಯೇ ಶ್ವಾಸ ಕೂಡಾ ಆಡುವುದಿಲ್ಲ. ಶರೀರದಲ್ಲಿನ ಹೊರಗಿನ ಕೆಲಸಗಳಾಗಲೀ, ಹಾಗೆಯೇ ಶರೀರದಲ್ಲಿನ ಒಳಗಿನ ಕೆಲಸಗಳಾಗಲೀ ನಿಂತು ಹೋಗುವುದರಿಂದ ಮನುಷ್ಯ ಮರಣಿಸಿದ್ದಾನೆಂದು ಹೊರಗಿನವರೆಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಹಾಗೆ ಶರೀರದಲ್ಲಿ ಆತ್ಮ ನಿಂತು ಹೋಗಿ ಸ್ವಲ್ಪ ಕಾಲವಾದ ನಂತರ ಯಾವಾಗಾದರೂ ಹೊರಗೆ ಬಂದು ಸರ್ವ ಸಾಧಾರಣವಾಗಿ ಕೆಲಸ ಮಾಡಿದಾಗ, ಆ ಮನುಷ್ಯ ಪುನಃ ಬದುಕಿದ್ದಾನೆಂದು ಹೇಳಬಹುದು. ಏಸು ವಿಷಯದಲ್ಲಿ ಇದೇ ನಡೆದಿದೆ. ಶಿಲುಬೆ ಮೇಲೆ ಆತ್ಮ

ಶರೀರದೊಳಗೆ ಅಣಗಿ ಹೋಗಿ, ಶುಕ್ರವಾರ ರಾತ್ರಿ, ಶನಿವಾರ ಹಗಲು, ರಾತ್ರಿ ಒಳಗೇ ಇದ್ದು ಆದಿವಾರ ಬೆಳಗಿನ ಜಾವದಲ್ಲಿಯೇ ಶರೀರವು ಹೊರಗೆ ಬಂದು, ಪುನಃ ಬದುಕಿ ಭೂಗರ್ಭದಿಂದ ಬರುವುದು ನಡೆದಿದೆ. ಮೂರು ಹೊತ್ತು ಮಾತ್ರ **ತಾತ್ಕಾಲಿಕ ಮರಣವನ್ನು** ಹೊಂದುವುದಾಗಿದೆ. ಏಸು ಶರೀರದಲ್ಲಿನ ಆತ್ಮ ಆ ವಿಧವಾಗಿ ಮೂರು ಹೊತ್ತು ಮಾತ್ರವೇ ಇರುವಾಗ, ಶರೀರದಲ್ಲಿ ಜೀವಾತ್ಮವಾಗಿ ಇದ್ದು ಏಸು ಆರು ಹೊತ್ತು ಭೂಗರ್ಭದಲ್ಲಿ ಇದ್ದು ಹೋಗಿದ್ದಾನೆ ಎಂದು ಹೇಳುವುದು ಕೂಡಾ ಸತ್ಯವೇ. ನಮಗೆ ತಿಳಿಯದ ಒಂದು ವಿಧಾನವು ಏಸು ಬಗ್ಗೆ ಶರೀರದಲ್ಲಿ ನಡೆದಿದೆ ಅದೇ ಏನೆಂದರೇ!

ಏಸು ಶರೀರದಲ್ಲಿ ಆತ್ಮ ಮಾಡಿರುವ ವಿಧಾನವನ್ನು ಅನುಸರಿಸಿ, ಆತನು ಸತ್ತುಹೋಗಿ ಪುನಃ ಎದ್ದಿದ್ದಾನೆ ಎಂದು ಹೇಳುತ್ತಿದ್ದರೂ, ಆತ್ಮ ಶಿಲುಬೆ ಮೇಲೆ ಸಾಯುವ ಮುನ್ನವೇ ಶರೀರದಲ್ಲಿನ ಜೀವಾತ್ಮ ಶರೀರದಲ್ಲಿಯೇ ಸಮಾಧಿ ಮಾಡಲ್ಪಟ್ಟಿದ್ದಾನೆ. ಗುರುವಾರ ದಿನದಂದೇ ಆತನು ಬಂಧಿ ಸಲ್ಪಡುತ್ತಾನೆಂದು ತಿಳಿದ ನಂತರ ಏಸು ಶರೀರದಲ್ಲಿನ ಜೀವಾತ್ಮಗೆ, ಬುದ್ಧಿಗೆ ಸಂಬಂಧ ಕಿತ್ತು ಹೋಗಿದೆ. ಏಸುಗೆ ಏನೂ ತಿಳಿಯದ ಸ್ಥಿತಿ ಏರ್ಪಟ್ಟಿದೆ. ಆಗಿನಿಂದ ಏಸುವನ್ನು ಬಂಧಿಸಿರುವುದೂ, ನ್ಯಾಯ ಸ್ಥಾನಕ್ಕೆ ಕರೆದುಕೊಂಡು ಹೋಗಿರುವುದೂ, ಚಾಟಿಯಿಂದ ಹೊಡೆದು ಶಿಲುಬೆಯನ್ನು ಹೊರಿಸಿರುವುದೂ, ಶಿಲುಬೆ ಮೇಲೆ ನೇತಾಕಿರುವುದೂ ಏನೂ ಏಸುವಿಗೆ ತಿಳಿದಿಲ್ಲ. ಆತನು ಶರಿರವೆಂಬ ಭೂಮಿಯಲ್ಲಿಯೇ ಸಮಾಧಿ ಮಾಡಲ್ಪಟ್ಟಿದ್ದಾನೆ. ಸಮಾಧಿ ಮಾಡಿದವನಿಗೆ ಹೇಗೆ ಏನು ತಿಳಿಯದೋ ಅದೇ ವಿಧವಾಗಿ ಏಸು ಏನೂ ತಿಳಿಯದ ಸ್ಥಿತಿಯಲ್ಲಿ ಮೂರು ದಿನಗಳಿದ್ದಾನೆ. ಏಸುವಿಗೆ ಏನೂ ತಿಳಿಯದೆ ಹೋದ ನಂತರವೂ ಕೂಡಾ ಆತ್ಮ ಶರೀರವನ್ನು ಆಡಿಸಿದೆ ಆದರೇ ಏನು ನಡೆದಿರುವುದು ಏಸುವಿಗೆ ತಿಳಿದಿಲ್ಲ. ಏಸು ಯಾವ ಅನುಭವವನ್ನು ಅನುಭವಿ ಸದಂತೆ, ಏಸು ಆತ್ಮವೇ ಏಸುವನ್ನು ತಿಳಿಯದ ಸ್ಥಿತಿಯೊಳಗೆ ಕಳುಹಿಸಿದೆ. ಏಸು ನಿದ್ರೆಯಂತಹ ತಿಳಿಯದ ಸ್ಥಿತಿಯೊಳಗೆ ಹೋದ ನಂತರ ಮನುಷ್ಯರು

ಹೊಡೆದಿರುವ ಹೊಡೆತಗಳಾಗಲಿ, ಶಿಲುಬೆ ಮೇಲೆ ನೇತಾಕಿರುವ ಅನುಭವ ವಾಗಲೀ ತಿಳಿಯದೇ ಹೋಗಿದೆ. ಹಾಗೆ ಶರೀರದಲ್ಲಿ ಸಮಾಧಿ ಸ್ಥಿತಿಯೊಳಗೆ ಹೊರಟುಹೋದ ಜೀವಾತ್ಮ ಆದಿವಾರ ಬೆಳಗ್ಗೆ ಆತ್ಮ ಎಬ್ಬಿಸುವವರೆಗು ಜ್ಞಾಪಕದೊಳಗೆ ಬರಲಿಲ್ಲ. ಆದಕಾರಣ ಏಸುವನ್ನು "ಆರು ಹೊತ್ತು ಭೂಸಮಾಧಿಯೊಳಗೆ ಹೋಗಿದ್ದಾನೆ" ಎಂದು ಹೇಳಿದ್ದಾರೆ. ಏಸು ಶರೀರವು ಹೊರಗಿನ ಭೂಸಮಾಧಿಯೊಳಗೆ ಹೋದ ಹಾಗೆ ಪ್ರಜೆಗಳಿಗೆ ತಿಳಿದರೂ, ಅದಕ್ಕಿಂತಲೂ ಮೊದಲು ಏಸು ಶರೀರದಲ್ಲಿ ಜೀವಾತ್ಮ ತಿಳಿಯದ ಸ್ಥಿತಿಯೊಳಗೆ ಹೋದರೇ, ನಂತರ ಶುಕ್ರವಾರ ಸಾಯಂಕಾಲ ಏಸು ಆತ್ಮ ತಾತ್ಕಾಲಿಕ ಮರಣದೊಳಗೆ ಹೋಗುವುದು ನಡೆದಿದೆ. ಮೇಲ್ನೋಟಕ್ಕೆ ಮಾತ್ರ ನೋಡಬಲ್ಲ ದೃಷ್ಟಿಯುಳ್ಳ ಮನುಷ್ಯರಿಗೆ ಏಸು ಶರೀರದೊಳಗೆ ನಡೆದ ಆತ್ಮ, ಜೀವಾತ್ಮಗಳ ಕಾರ್ಯಗಳು ತಿಳಿಯದಂತೆ ಹೋಗಿವೆ. ಏಸು ಆರು ಹೊತ್ತು, ಆತ್ಮ ಮೂರು ಹೊತ್ತು ಸಮಾಧಿಯೊಳಗೆ ಹೋಗಿರುವುದು ವಾಸ್ತವ.

**(38) ಮತ್ತಾಯ ಸುವಾರ್ತೆ, 13ನೇ ಅಧ್ಯಾಯ, 13, 14, 15 ವಚನಗಳು.**

**(13) ಈ ಪ್ರಜೆಗಳು ಕಣ್ಣಾರೆ ನೋಡಿ, ಕಿವಿಯಾರೆ ಕೇಳಿ ಹೃದಯದಿಂದ ಗ್ರಹಿಸಿ**

**(14) ಮನಸ್ಸು ತಿರುಗಿಸಿಕೊಂಡು ನನ್ನಿಂದ ಸ್ವಸ್ಥತೆ ಹೊಂದದ ಹಾಗೆ ಅವರ ಹೃದಯವು ಕೊಬ್ಬಿದೆ. ಅವರ ಕಿವಿಗಳು ಕೇಳುವುದಕ್ಕೆ ಮಂದವಾಗಿವೆ. ಅವರು ತಮ್ಮ ಕಣ್ಣುಗಳು ಮುಚ್ಚಿಕೊಂಡಿದ್ದಾರೆ.**

**(15) ಆದ್ದರಿಂದ ನೀವು ಕೇಳಿಸಿಕೊಳ್ಳುವುದಕ್ಕೇನೊ ಕೇಳಿಸಿಕೊಳ್ಳುವಿರಿ ಆದರೇ, ಗ್ರಹಿಸುವುದೇ ಇಲ್ಲ. ನೋಡುವುದಕ್ಕೇನೊ ನೋಡುತ್ತೀರಿ ಆದರೇ ಸ್ವಲ್ಪವೂ ತಿಳಿದುಕೊಳ್ಳುವುದಿಲ್ಲ.**

ಈ ವಿಷಯವನ್ನು 'ಎಷಯಾ' ಎಂಬ ಪ್ರವಕ್ತ ಎಷ್ಟೋ ಕಾಲದ

ಹಿಂದೆ ಹೇಳಿರುವುದೆಂದು ತಿಳಿದಿದೆ. ಅಜ್ಞಾನ ಪ್ರಜೆಗಳು ಆ ದಿನ ಇದ್ದಾರೆ, ಈ ದಿನ ಇದ್ದಾರೆ. ಅಜ್ಞಾನ ಪ್ರಜೆಗಳು ಕೆಲವರು ಕಣ್ಣುಗಳಿಂದ ನೋಡಿ, ಕಿವಿಗಳಿಂದ ಕೇಳಿ ಹೃದಯದಿಂದ (ಬುದ್ಧಿಯಿಂದ) ಗ್ರಹಿಸಿ ಕೂಡಾ ಮನಸ್ಸನ್ನು ತಿರುಗಿಸಿ ಕೊಳ್ಳುತ್ತಿದ್ದಾರೆ. ನೋಡಿರುವುದನ್ನು, ಕೇಳಿರುವುದನ್ನು ತಿಳಿದಿರುವುದರ ಮೇಲೆ ಆಸಕ್ತಿಯನ್ನು ತೋರಿಸದೇ ಹೋಗುವುದರಿಂದ ಏಸು ಪ್ರಭುವಿನಿಂದ ಅವರ ಕರ್ಮಗಳನ್ನು ಹೋಗಲಾಡಿಸಿಕೊಳ್ಳದೆ ಇರುವಂತೆ ಅವರ ಬುದ್ಧಿ ಮಂದವಾಗಿದೆ. ಅವರ ಕಿವಿಗಳು ಜ್ಞಾನದ ಬಗ್ಗೆ ಕಿವುಡಾಗಿ ಹೋಗಿವೆ. ಅವರು ಹೇಳಿರುವುದನ್ನೆಲ್ಲಾ ಕೇಳುತ್ತಾರೆ, ಆದರೇ ಕೇಳಿರುವುದನ್ನು ಗ್ರಹಿಸದೇ ಬಿಟ್ಟು ಹಾಕಿ ಪ್ರಪಂಚ ವಿಷಯಗಳಲ್ಲಿ ಮಗ್ನರಾಗಿದ್ದಾರೆ. ಅವರ ದೃಷ್ಠಿಯಲ್ಲಿ ಧನಾರ್ಜನೆ ಹೊರತು ಏನೂ ಕಾಣಿಸುತ್ತಿಲ್ಲ. ಅಂತಹವರ ದೃಷ್ಠಿಯಲ್ಲಿ ಜ್ಞಾನವನ್ನು ತಿಳಿದವರು ಕೂಡಾ ತಿಳುವಳಿಕೆ ಇಲ್ಲದವರಂತೆ ಕಾಣಿಸುತ್ತಿರುತ್ತಾರೆ.

**(39) ಮತ್ತಾಯ ಸುವಾರ್ತೆ, 15ನೇ ಅಧ್ಯಾಯ, 7, 8, 9 ವಚನಗಳು.**

**(7) ವೇಷಧಾರಿಗಳೇ!**

**(8) ಈ ಪ್ರಜೆಗಳು ತಮ್ಮ ತುಟಿಗಳಿಂದ ನನ್ನನ್ನು ಗೌರವ ಪಡಿಸುತ್ತಾರೆ. ಆದರೇ ಅವರ ಹೃದಯವು ನನಗೆ ಬಹಳ ದೂರವಾಗಿ ಇದೆ.**

**(9) ಮನುಷ್ಯರು ಕಲ್ಪಿಸಿರುವ ಪದ್ಧತಿಗಳು ದೈವೋಪದೇಶಗಳೆಂದು ಬೋಧಿಸುವವರು ನನ್ನನ್ನು ವ್ಯರ್ಥವಾಗಿ ಆರಾಧಿಸುತ್ತಿದ್ದಾರೆ.**

"ದೇವರ ವಿಷಯವು ದೇವರಿಗೇ ತಿಳಿದಿದೆಯೆಂದು ಮಾನವರಿಗೆ ತಿಳಿಯದೆಂದು" ನಾವು ಬಹಳ ಬಾರಿ ಹೇಳಿದ್ದೇವೆ. ದೇವರ ವಿಷಯವು ದೇವರೇ ತಿಳಿಸಬೇಕಾಗಿದೆ. ದೇವರ ಆರಾಧನೆ ವಿಷಯವು ಕೂಡಾ ದೇವರು ಹೇಳಿದರೇನೇ ಮಾನವನಿಗೆ ತಿಳಿಯುವುದು. ಮಾನವನು ಸ್ವತಃವಾಗಿ ದೇವರ

ಆರಾಧನೆಯನ್ನು ಕುರಿತು ಹೇಳಿದರೇ ಅದು ಸರಿಯಾದ ಮಾರ್ಗವಲ್ಲ ಎಂದು ತಿಳಿಯಬೇಕು. ತನ್ನನ್ನು ಯಾವ ವಿಧವಾಗಿ ಆರಾಧಿಸಬೇಕಾಗಿರುವುದು ದೇವರು ಮೊದಲೇ ತಿಳಿಸಿರುವಾಗ, ಆತನು ಹೇಳಿರುವ ಮಾರ್ಗವನ್ನು ಅಲ್ಲಗಳೆದು ಬೇರೆ ಪದ್ಧತಿಯನ್ನು ತಿಳಿಸುವವರು ಕೂಡಾ ಅನೇಕರಿದ್ದಾರೆ. ಎಷ್ಟೋ ಜನ ಸ್ವಾಮೀಜಿಗಳು, ಗುರುಗಳು ದೈವೋಪದೇಶಗಳೆಂದು, ದೈವಾರಾಧನೆಗಳೆಂದು, ಅವರು ಕಲ್ಪಿಸಿಕೊಂಡಿರುವ ಪದ್ಧತಿಗಳನ್ನು ಪ್ರಜೆಗಳಿಗೆ ಬೋಧಿಸುತ್ತಿದ್ದಾರೆ. ಅಂತಹ ಉಪದೇಶಗಳು, ಆರಾಧನೆಗಳು ವ್ಯರ್ಥಗಳೆಂದು, ಅವು ತನ್ನ ಹತ್ತಿರ ಸೇರಿಸಲಾರವೆಂದು' ದೇವರೇ ತಿಳಿಸುತ್ತಿದ್ದಾನೆ. ಎಷ್ಟೋ ಜನ ಸ್ವಾಮೀಜಿಗಳು, ಗುರುಗಳು ತಮ್ಮ ತಮ್ಮ ಉಪನ್ಯಾಸಗಳಲ್ಲಿ ದೇವರನ್ನು ಕುರಿತು ಹೇಳುತ್ತಾ ದೇವರಿಗೆ ವಿರುದ್ಧವಾದ, ದೇವರು ಹೇಳದ ಆರಾಧನೆಗಳನ್ನು, ಉಪದೇಶಗಳನ್ನು ಹೇಳುತ್ತಿದ್ದಾರೆ. ಮೇಲಿನ ಮಾತುಗಳವರೆಗು ದೇವರು, ಜ್ಞಾನ ಎಂದು ಹೇಳುವ ಗುರುಗಳು, ಸ್ವಾಮಿಗಳು ಅವರ ಅಂತರಂಗದಲ್ಲಿ ದೇವರ ಜ್ಞಾನ ತಿಳಿಯದೆ, ವ್ಯರ್ಥವಾದ ಆರಾಧನೆಗಳು ಅವರು ಮಾಡುತ್ತಾ, ಇತರರಿಂದ ಮಾಡಿಸುತ್ತಿದ್ದಾರೆ. ಉದಾಹರಣೆಗೆ ದೇವರ ಆರಾಧನೆಗೂ, ಉಪವಾಸಕ್ಕೂ ಸಂಬಂಧವಿಲ್ಲ. ಉಪವಾಸದಿಂದ ಅವರು ಶ್ರಮ ಪಡುವುದೇ ಅಲ್ಲದೇ ಒಳಗಿರುವ ದೇವರಿಗು ಕೂಡಾ ತೊಂದರೆ ಕೊಡುತ್ತಿದ್ದಾರೆ. ಅದರಿಂದ ದೇವರಿಗೇ ಅಪಕಾರ ಮಾಡಿದವರಾಗುತ್ತಿದ್ದೇವೆ. ಹಾಗೆಯೇ **"ದಾನಗಳು ಮಾಡುವುದು, ವೇದಮಂತ್ರಗಳು ಓದುವುದು, ಯಜ್ಞಗಳು ಮಾಡುವುದು, ತಪಸ್ಸುಗಳು ಮಾಡುವುದರಿಂದ ನನ್ನನ್ನು ಸೇರಲಾರರೆಂದು ನಾನು ಅವರಿಗೆ ತಿಳಿಯುವುದಿಲ್ಲವೆಂದು"** ಭಗವದ್ಗೀತೆಯಲ್ಲಿ ಕೂಡಾ ಐದು ಸಾವಿರ ವರ್ಷಗಳ ಪೂರ್ವವೇ ಹೇಳಿದ್ದಾನೆ. ಎಷ್ಟೋ ಜನ ನನ್ನನ್ನು ದೊಡ್ಡದಾಗಿ ಹೇಳಿಕೊಂಡು, ಅಧರ್ಮ ಪದ್ಧತಿಯಲ್ಲಿ ವ್ಯರ್ಥವಾಗಿ ಆರಾಧಿಸುತ್ತಿದ್ದಾರೆಂದು ಕೂಡಾ ಗೀತೆಯಲ್ಲಿ ಹೇಳಿದ್ದಾನೆ. ಈಗ ಪರಿಶುದ್ಧ ಗ್ರಂಥದಲ್ಲಿ ಕೂಡಾ ಪ್ರಭು ಅದೇ ವಿಷಯವನ್ನು ಹೇಳಿದ್ದಾನೆ.

ಬಾಯಿಂದ ಬರುವವು ಮಾತುಗಳು. ಹೃದಯದಿಂದ ಬರುವವು ಭಾವಗಳು. ಬಾಯಿ ಮಾತುಗಳು ಎಷ್ಟು ದೊಡ್ಡದಾಗಿ ದೇವರನ್ನು ಕುರಿತು

ಹೇಳಿದರೂ ಹೃದಯದಲ್ಲಿನ ಭಾವಗಳು ದೇವರಿಗೆ ಅನುಕೂಲವಾಗಿ ಇಲ್ಲದೇ ವಿರುದ್ಧವಾಗಿ ಇರಬಾರದು. ಈ ದಿನ ಭೂಮಿ ಮೇಲೆ ಬಹಳ ಜನರ ಮಾತುಗಳು ದೇವರನ್ನು ಘನಪಡಿಸುವ ಹಾಗೆ ಇದ್ದರೂ, ಅವರ ಹೃದಯದಲ್ಲಿ ದೇವರ ಧರ್ಮಗಳು ಇಲ್ಲ. ಮಾಯೆ ಧರ್ಮಗಳು ಸ್ಥಳ ಮಾಡಿಕೊಂಡಿವೆ. ಹೇಳುವವು ದೇವರ ಮಾತುಗಳು, ಮಾಡುವವು ಮಾಯೆ (ಸಾತಾನ್) ಪ್ರಭಾವದಲ್ಲಿ ದೈವ ವಿರುದ್ಧ ಆರಾಧನೆಗಳು. ಎಷ್ಟೋ ಜನ ಗುರುಗಳು ದೈವಜ್ಞಾನವೆಂದು ಅವರು ಹೇಳುವ ಮಾತುಗಳಿಗೆ ಹೆಸರಿಟ್ಟು, ದೇವರು **"ನನ್ನನ್ನು ಸೇರಿಸಲಾರವೆಂದು"** ಹೇಳಿರುವ ಆರಾಧನೆಗಳನ್ನೇ ಮಾಡುತ್ತಿದ್ದಾರೆ. ಈ ಆರಾಧನೆಗಳು ಮಾರ್ಗ ತಪ್ಪಿರುವವಾಗಿ ಇವೆಯೆಂದು ಗೀತೆಯಲ್ಲಿ ಕೂಡಾ ಎಚ್ಚರಿಸಿದ್ದಾನೆ. ಆದರೂ ಪೀಠಾಧಿಪತಿಗಳೆಂದು ಹೆಸರುವಾಸಿಯಾಗಿರುವವರು ಕೂಡಾ ಆತನು ವ್ಯರ್ಥವೆಂದು ಹೇಳಿರುವ ಯಜ್ಞಯಾಗಾದಿಗಳು, ದಾನಗಳು, ಉಪವಾಸಗಳು, ವೇದಮಂತ್ರ ಪಠಣಗಳು, ತಪಸ್ಸುಗಳು ಮಾಡುತ್ತಿದ್ದಾರೆ. ಅಂತಹವರು ನನಗೆ ದೂರವಾಗಿರುವವರೇ ಎಂದು ಪರಿಶುದ್ಧ ಬೈಬಲ್‌ನಲ್ಲಿಯೂ, ಭಗವದ್ಗೀತೆಯಲ್ಲೂ ದೇವರು ತಿಳಿಸಿದ್ದಾನೆ. ಆದ್ದರಿಂದ ಇಂದಿನಿಂದ ನಾವು ನಮ್ಮ ಮಾತುಗಳಲ್ಲಿ ದೇವರನ್ನು ಗೌರವಿಸುವುದೇ ಅಲ್ಲದೇ, ಆತನು ವ್ಯರ್ಥವೆಂದು ಹೇಳಿರುವ ಆರಾಧನೆಗಳನ್ನು, ಆತನಿಗೆ ವಿರುದ್ಧವಾದ ಆರಾಧನೆಗಳನ್ನು ಬಿಟ್ಟು ಆತನು ಹೇಳಿರುವ ಪದ್ಧತಿಯನ್ನೇ ಅನುಸರಿಸೋಣ.

### (40) ಮತ್ತಾಯ ಸುವಾರ್ತೆ, 15ನೇ ಅಧ್ಯಾಯ, 11ನೇ ವಚನ.

## (11) ಬಾಯಲ್ಲಿ ಹೋಗುವುದು ಮನುಷ್ಯನನ್ನು ಅಪವಿತ್ರ ಪಡಿಸುವುದಿಲ್ಲ ಆದರೇ, ಬಾಯಿಂದ ಬರುವುದೇ ಮನುಷ್ಯನನ್ನು ಅಪವಿತ್ರ ಪಡಿಸುತ್ತದೆ.

ಬಾಯಲ್ಲಿ ಬೀಳುವುದು ಮನುಷ್ಯನು ತಿನ್ನುವ ಆಹಾರ. ಮನುಷ್ಯನ ಆಹಾರವು ಒಂದೇ ಪದಾರ್ಥವಲ್ಲದೆ ಅನೇಕ ಪದಾರ್ಥಗಳಾಗಿ ಇದೆ. ಕೆಲವರು

ಶಾಖಾಹಾರಿಗಳು, ಕೆಲವರು ಮಾಂಸಾಹಾರಿಗಳು ಎನ್ನುವ ಎರಡು ವಿಧಗಳಾಗಿ ಮನುಷ್ಯರು ಇದ್ದಾರೆ. ದೇವರ ಜ್ಞಾನವನ್ನು ತಿಳಿಯುವವರು ಶಾಖಾಹಾರಿಗಳಾಗಿ ಇರಬೇಕೆಂದು, ಮಾಂಸಾಹಾರಿಗಳಾಗಿ ಇರಬಾರದೆಂದು ಕೆಲವರು ಸ್ವಾಮೀಜಿಗಳು, ಗುರುಗಳು ಹೇಳುತ್ತಿರುತ್ತಾರೆ. ಇಲ್ಲಿ ಪ್ರಭು **"ಬಾಯಲ್ಲಿ ಬೀಳುವ ಯಾವ ಆಹಾರವು ಮನುಷ್ಯನನ್ನು ಅಪವಿತ್ರ ಮಾಡುವುದಿಲ್ಲವೆಂದು ಹೇಳುವುದೇ ಅಲ್ಲದೆ, ಬಾಯಿಂದ ಬರುವುದೇ ಮನುಷ್ಯನನ್ನು ಅಪವಿತ್ರ ಮಾಡುತ್ತದೆಂದು"** ಹೇಳಿದ್ದಾನೆ. ಆಹಾರ ವಿಷಯದಲ್ಲಿ ಕೆಲವರಿಗೆ ಅಭಿಪ್ರಾಯ ಬೇಧಗಳಿವೆ. ಮುಖ್ಯವಾಗಿ ಮಾಂಸಾಹಾರ ತಿನ್ನಬಾರದೆಂದು ಕೆಲವರ ವಾದ, ಕೆಲವರೇನೋ ಜ್ಞಾನಮಾರ್ಗದಲ್ಲಿ ಇರುವವರು ಅಗ್ನಿಯಿಂದ ಬೇಯಿಸದೆ ಇರುವುದನ್ನು, ಬಿಸಿ ಮಾಡದ ಅಪಕ್ವಾಹಾರವನ್ನು ತಿನ್ನಬೇಕೆಂದು ಹೇಳುತ್ತಿದ್ದಾರೆ. ಕೆಲವರು ಶಾಖಾಹಾರವನ್ನು ದಿನದಲ್ಲಿ ಒಂದು ಹೊತ್ತು ಮಾತ್ರವೇ ತಿನ್ನಬೇಕೆಂದು, ಉಳಿದ ಆಹಾರವನ್ನು ತೆಗೆದುಕೊಳ್ಳಬಾರ ದೆಂದು ಹೇಳುತ್ತಿದ್ದಾರೆ. ಹೀಗೆ ಕೆಲವರು ಆಹಾರ ನಿಯಮಗಳು ಇಟ್ಟುಕೊಂಡು ಇದ್ದಾರೆ. ಯಾವ ವಿಧವಾಗಿ ಯಾವ ಆಹಾರವನ್ನು ತೆಗೆದುಕೊಂಡರೂ ಅದು ಶರೀರ ಆರೋಗ್ಯ, ಅನಾರೋಗ್ಯಗಳಿಗೆ ಸಂಬಂಧಿಸಿರುವುದೇ ಹೊರತು ಪವಿತ್ರತೆ, ಅಪವಿತ್ರತೆಗಳಿಗೆ ಸಂಬಂಧಿಸಿರುವುದು ಅಲ್ಲ. ಯಾವ ಮನುಜನನ್ನು, ಯಾವ ಆಹಾರವೂ ಪವಿತ್ರನನ್ನಾಗಲೀ, ಅಪವಿತ್ರನನ್ನಾಗಲೀ ಮಾಡುವುದಿಲ್ಲ. ಮನುಷ್ಯನ ಆಹಾರವು ಜ್ಞಾನಮಾರ್ಗಕ್ಕೆ ಆತಂಕವಲ್ಲ. ಮನುಷ್ಯ ಬಾಯಿಂದಲೇ ತಿನ್ನುತ್ತಿದ್ದಾನೆ, ಬಾಯಿಂದಲೇ ಮಾತನಾಡುತ್ತಿದ್ದಾನೆ. ಇಲ್ಲಿ ಗಮನಿಸಬೇಕಾದ್ದೇನೆಂದರೇ! ಬಾಯಿ ಮಾಡುವ ಎರಡು ಕೆಲಸಗಳಲ್ಲಿ ಬಾಯಿಯ ಮೂಲಕ ಶರೀರದೊಳಗೆ ಹೋಗುವ ಆಹಾರದಿಂದ ಸಮಸ್ಯೆ ಇಲ್ಲ ಆದರೇ, ಶರೀರದಿಂದ ಬಾಯಿಯ ಮೂಲಕ ಹೊರಗೆ ಬರುವ ಮಾತುಗಳ ವಿಷಯವೇ ಮನುಷ್ಯನನ್ನು ಅಪವಿತ್ರ ಮಾಡುತ್ತಿದೆ. ಮನುಷ್ಯನು ಮೇಲ್ನೋಟಕ್ಕೆ ಯಾವ ವಿಧವಾಗಿ ನಟಿಸಿ ಮಾತನಾಡಿದರೂ, ಅವನ ಸ್ವಭಾವವು ಮಾತುಗಳ ಮೂಲಕ ಹೊರಬೀಳುತ್ತಲೇ ಇರುತ್ತದೆ. **ಜ್ಞಾನವಿರುವವನೇ ಪವಿತ್ರನೆಂದು, ಜ್ಞಾನವಿಲ್ಲದವನು ಅಪವಿತ್ರನೆಂದು ದೊಡ್ಡವರ ಅಭಿಪ್ರಾಯ**. ಜ್ಞಾನವಿರುವವನು ಪವಿತ್ರನೆಂದು ಅವನ ಮಾತುಗಳನ್ನು ಅನುಸರಿಸಿ

ತಿಳಿಯುತ್ತಿದೆ. ಆ ವಿಧವಾಗಿಯೇ ಜ್ಞಾನ ಇಲ್ಲದವನ ಮಾತುಗಳಲ್ಲಿ ಅವನ ಅಜ್ಞಾನವು ಹೊರಬೀಳುತ್ತಿರುತ್ತದೆ. ಮಾತನಾಡುವುದನ್ನು ಅನುಸರಿಸಿ ಅವನ ಅಪವಿತ್ರತೆ ಹೊರಬಿದ್ದಂತೇ ಅಲ್ಲವೇ! ಆದ್ದರಿಂದ ಪ್ರಭು ಮೇಲಿನ ವಾಕ್ಯವನ್ನು ಹೇಳಿದ್ದಾನೆ. ಪರಿಶುದ್ಧ ಗ್ರಂಥದಲ್ಲಿನ ಪ್ರಭು ವಾಕ್ಯದ ಪ್ರಕಾರ, ಭಗವದ್ಗೀತೆಯಲ್ಲಿನ ಭಗವಂತನು ಹೇಳಿರುವ ಆಹಾರ ವಿಷಯದ ಪ್ರಕಾರ, ಮನುಷ್ಯನನ್ನು ಆಹಾರವು ಅಪವಿತ್ರನನ್ನಾಗಿ ಮಾಡುವುದಿಲ್ಲವೆಂದು, ಅವನ ಕರ್ಮ ಅವನ ಆಹಾರವನ್ನು ಒದಗಿಸುತ್ತದೆ ಎಂದು, ಜ್ಞಾನಮಾರ್ಗದಲ್ಲಿ ಇರುವವನಿಗೆ ಆಹಾರ ನಿಯಮ ಗಳಿರುವುದಿಲ್ಲವೆಂದು, ಅಭ್ಯಾಸದ ಪ್ರಕಾರ ಯಾವ ಆಹಾರವನ್ನು ತೆಗೆದು ಕೊಂಡರೂ ಅದು ದೇವರಿಗೆ ಅವಶ್ಯಕತೆ ಇಲ್ಲವೆಂದು ತಿಳಿಯುತ್ತಿದೆ.

**(41) ಮತ್ತಾಯ ಸುವಾರ್ತೆ, 15ನೇ ಅಧ್ಯಾಯ, 12, 13ನೇ ವಚನಗಳು.**

**(12) ಅಪ್ಪರಲ್ಲಿ ಆತನ ಶಿಷ್ಯರು ಬಂದು "ಪರಿಸಯ್ಯರು ಆ ಮಾತು ಕೇಳಿ ಅಭ್ಯಂತರಪಟ್ಟರೆಂದು" ಹೇಳಿದಾಗ, ಪ್ರಭು ಹೀಗೆ ಹೇಳಿದನು.**

**(13) "ಪರಲೋಕದಲ್ಲಿರುವ ನನ್ನ ತಂದೆ ನಾಟದೆ ಇರುವ ಪ್ರತಿ ಗಿಡವನ್ನು ಬೇರು ಸಹಿತ ಕಿತ್ತುಹಾಕಲ್ಪಡುವುದು."**

ಮನುಷ್ಯ ಆಹಾರದಿಂದ ಅಪವಿತ್ರನಾಗುವುದಿಲ್ಲವೆಂದು, ಯಾವ ಆಹಾರವನ್ನು ತೆಗೆದುಕೊಂಡರೂ ದೇವರ ಮಾರ್ಗದಲ್ಲಿ ಪ್ರಯಾಣಿಸಬಹುದೆಂದು ಪ್ರಭು ಹೇಳಿರುವ ಮಾತನ್ನು ಕೇಳಿ ಅಂದಿನ ಪಂಡಿತರು, ಪರಿಸಯ್ಯರು ಎನ್ನುವವರು ಅವರ ಅಭ್ಯಂತರವನ್ನು ತಿಳಿಸಿದ್ದಾರೆ. ಪ್ರಭು ಹೇಳಿರುವ ಮಾತನ್ನೇ ತಿರಸ್ಕರಿಸಿದ್ದಾರೆ, ಅದು ಜ್ಞಾನವೇ ಅಲ್ಲವೆಂದಿದ್ದಾರೆ. ಪ್ರಭು ಅಜ್ಞಾನವನ್ನು ಬೋಧಿಸುತ್ತಿದ್ದಾನೆಂದು, ಹಾಗೆ ಬೋಧಿಸುವ ಅಧಿಕಾರ ಯಾರು ಕೊಟ್ಟಿದ್ದಾರೆಂದು ಪ್ರಶ್ನಿಸಿದ್ದಾರೆ. ದೇವರನ್ನು ಕುರಿತು ಬೋಧಿಸುವ ಅಧಿಕಾರ ತಮಗೇ ಇದೆಯೆಂದು, ತಾವೇ ಗುರುಗಳೆಂದು ತಮ್ಮನ್ನು ದೊಡ್ಡದಾಗಿ ಹೇಳಿಕೊಂಡು, ದೇವರನ್ನು ಕುರಿತು ಬೋಧಿಸುವ ಅಧಿಕಾರ ಪ್ರಭುವಿಗೆ ಇಲ್ಲವೆಂದಿದ್ದಾರೆ. ಆ ವಿಷಯವನ್ನು

ಪ್ರಭು ಶಿಷ್ಯರು ಕೆಲವರು ಪ್ರಭುವಿನೊಂದಿಗೆ ಹೇಳಿದಾಗ **'ಪರಲೋಕದಲ್ಲಿರುವ ನನ್ನ ತಂದೆ ನಾಟದೆ ಇರುವ ಪ್ರತಿ ಗಿಡವನ್ನು ಬೇರು ಸಹಿತ ಕಿತ್ತುಹಾಕಲ್ಪಡುತ್ತದೆ ಎಂದು'** ಸಮಾಧಾನ ಕೊಟ್ಟಿದ್ದಾನೆ.

ಪರಲೋಕ ತಂದೆಯಾದ ಪರಮಾತ್ಮ ತನ್ನ ಧರ್ಮಗಳನ್ನು ಸ್ಥಾಪಿಸಿ ಇಟ್ಟಿದ್ದಾನೆ. ಆತನು ಸ್ಥಾಪಿಸಿರುವ ಧರ್ಮಗಳಿಗೆ ಭೂಮಿ ಮೇಲೆ ಆಗಾಗ ಗ್ಲಾನಿ ಏರ್ಪಡಬಹುದು, ಆದರೇ ಅವು ಪೂರ್ತಿ ನಾಶವಾಗುವುದಿಲ್ಲ. ಧರ್ಮಗ್ಲಾನಿ ಏರ್ಪಟ್ಟಾಗ ಪರಮಾತ್ಮ ಭಗವಂತನಾಗಿ ಅವತರಿಸಿ ತನ್ನ ಧರ್ಮಗಳಿಗೆ ಬಲವನ್ನು ಸೇರಿಸಿ ಹೋಗುತ್ತಾನೆ. ಧರ್ಮಗಳಿಗೆ ಗ್ಲಾನಿ ಏರ್ಪಟ್ಟಾಗ ಅಧರ್ಮಗಳು ಹೆಚ್ಚಾಗುವುದು ಕೂಡಾ ನಡೆಯುತ್ತಿರುತ್ತದೆ. ದೇವರವು ಧರ್ಮಗಳಾದರೇ, ಸಾತಾನಿನವು ಅಧರ್ಮಗಳೆಂದು ತಿಳಿಯಬೇಕು. ಪರಮಾತ್ಮ ನಾಟಿರುವ ಗಿಡಗಳು ಧರ್ಮಗಳಾಗಿರುವಾಗ, ಸಾತಾನು ನಾಟಿರುವ ಗಿಡಗಳು ಅಧರ್ಮಗಳು. ಪರಮಾತ್ಮ ತಾನೇ ಸ್ವತಃವಾಗಿ ಭೂಮಿ ಮೇಲೆ ಅವತರಿಸಿ, ತನ್ನ ಧರ್ಮಗಳು ಇವು ಎಂದು ತಿಳಿಸಿ ಹೋದರೆ, ಸಾತಾನು ತಾನು ಕೂಡಾ ಪಂಡಿತರು, ಪರಿಸಯ್ಯರು, ಗುರುಗಳು, ಸ್ವಾಮಿಗಳಾಗಿ ಅವತರಿಸಿ ದೇವರ ಧರ್ಮಗಳೆಂದು ಅವರಿಂದ ಪ್ರಜೆಗಳನ್ನು ನಂಬಿಸಿ, ತನ್ನ ಧರ್ಮಗಳನ್ನು ತಿಳಿಸುತ್ತಿರುವುದು. ಸಾತಾನು (ಮಾಯೆ) ಧರ್ಮಗಳಿಂದ ಪರಮಾತ್ಮ ಧರ್ಮಗಳು ಆಗಾಗ ಬಲಹೀನ ವಾಗುತ್ತಿರುತ್ತವೆ. ದೇವರ ಧರ್ಮಗಳು ದೊಡ್ಡವಾದರೆ ಯಾಕೆ ಮಾಯೆ ಧರ್ಮಗಳಿಂದ ಬಲಹೀನವಾಗಬೇಕು? ಎಂದು ಕೆಲವರಿಗೆ ಪ್ರಶ್ನೆ ಬರಬಹುದು. ಅದಕ್ಕೆ ಸಮಾಧಾನ ಪರಮಾತ್ಮ ಭಗವಂತನಾಗಿ ಒಂದು ಕಡೆ ಹುಟ್ಟಿ ತನ್ನ ಧರ್ಮಗಳ ಕುರಿತು ಪ್ರಚಾರ ಮಾಡಿ ಹೋಗುತ್ತಾನೆ. ಆಗ ಬಲವು ಬಂದರೂ ಕೆಲವು ಸಾವಿರ ವರ್ಷಗಳಿಗೆ ಪುನಃ ಧರ್ಮಗಳು ಬಲಹೀನವಾಗುತ್ತಿವೆ. ಹಾಗೆ ನಡೆಯುವುದಕ್ಕೆ ಕಾರಣವೇನೆಂದರೇ! ದೇವರು ಭಗವಂತನಾಗಿ ಒಂದು ಬಾರಿ ಬಂದು ಹೋದರೇ ಪುನಃ ತನಗೆ ಅವಶ್ಯಕತೆಯೆಂದು ಅನಿಸಿದಾಗ ಪುನಃ ಆತನ ಬರುವಿಕೆ ಇರುತ್ತದೆ. ಮಾಯೆ(ಸಾತಾನ್) ದೇವರ ಹಾಗೆ ಅಲ್ಲದೆ ಯಾವಾಗಲೂ ತನ್ನ ಅಂಶದಿಂದ ಗುರುಗಳನ್ನು, ಸ್ವಾಮಿಗಳನ್ನು ಹುಟ್ಟಿಸಿ ಅವರ

ಮೂಲಕ ಇದು ದೇವರ ಜ್ಞಾನವೆಂದು ನಂಬಿಸಿ ತನ್ನ ಧರ್ಮಗಳನ್ನು ಪ್ರಚಾರ ಮಾಡುತ್ತಿದೆ.

ಸಾವಿರ ವರ್ಷಗಳಿಗೆ ಒಂದು ಬಾರಿ ಬರುವ ಯಾವ ಗುರುತು ಇಲ್ಲದ ಭಗವಂತನಿಗಿಂತ ಯಾವಾಗಲೂ ಸ್ವಾಮಿಗಳು, ಗುರುಗಳು, ಬಾಬಾಗಳಾಗಿ ಇರುವವರನ್ನೇ ಭಗವಂತರನ್ನಾಗಿ ತೋರಿಸುವ ಮಾಯೆ ಪ್ರಭಾವದಲ್ಲಿ ಪ್ರಜೆಗಳು ಆಕರ್ಷಿತರಾಗುತ್ತಿದ್ದಾರೆ. ಒಂದು ಸಮಯದಲ್ಲಿ ಒಂದು ಬಾರಿ ಬಂದು ಹೋಗುವ ದೇವರಿಗಿಂತಲೂ, ಅನೇಕ ಬಾರಿ ಅನೇಕ ಜನರಾಗಿ ಹುಟ್ಟುವ ಸಾತಾನು ಪ್ರಭಾವಕ್ಕೆ ದೇವರ ಧರ್ಮಗಳು ಕ್ಷೀಣಿಸಿಹೋಗುತ್ತವೆ. ಹೊಲದಲ್ಲಿ ಕಳೆ(ಹುಲ್ಲು) ಹೆಚ್ಚಾದಾಗ ರೈತನು ಬಿತ್ತಿರುವ ಗಿಡಗಳು ಕ್ಷೀಣಿಸಿ ಹೋಗುತ್ತವೆ. ಆಗ ರೈತನು ತಾನು ನೆಟ್ಟ ಗಿಡವನ್ನು ಬಲಪಡಿಸಲು ಸ್ವತಃವಾಗಿ ಹೊಲಕ್ಕೆ ಹೋಗಿ, ಕಳೆ ಗಿಡಗಳನ್ನು ತಾಯಿ (ಪ್ರಧಾನ) ಬೇರು ಸಮೇತ ಸಹ ಕಿತ್ತು ಹಾಕುತ್ತಾನೆ. ನಂತರ ಸ್ವಲ್ಪ ಕಾಲಕ್ಕೆ ಯಾರೂ ಬಿತ್ತದಿದ್ದರೂ ಕಳೆಗಿಡಗಳು ಅನೇಕವಾಗಿ ಬೆಳೆಯುವುದು ನಾವು ನೋಡಿಯೇ ಇರುತ್ತೇವೆ. ಪರಮಾತ್ಮ ರೈತನಂಥವನು, ತಾನು ತನ್ನ ಧರ್ಮಗಳೆನ್ನುವ ಗಿಡಗಳನ್ನು ನೆಟ್ಟಿದ್ದಾನೆ. ಸಾತಾನು ಕಳೆಯನ್ನು ದೇವರ ಗಿಡದ ಸುತ್ತಲೂ ಹುಟ್ಟುವಹಾಗೆ ಮಾಡುತ್ತಿದೆ. ಮಾಯೆ ಗಿಡಗಳ ಪ್ರಭಾವಕ್ಕೆ ದೇವರ ಗಿಡ ಬಲಹೀನವಾಗುವುದು ಸಹಜವೇ. ಅಂತಹ ಸಮಯದಲ್ಲಿ ದೇವರು ಬಂದು ತನ್ನ ಧರ್ಮಕ್ಕೆ ಸುತ್ತಲೂ ಇರುವ **ಅನೇಕ ಮಾಯೆ ಧರ್ಮಗಳನ್ನು ಬೇರು ಸಹಿತವಾಗಿ ಕಿತ್ತುಹಾಕುತ್ತಾನೆ**. ಆದ್ದರಿಂದಲೇ ಪ್ರಭು ಮೇಲಿನ ವಾಕ್ಯವನ್ನು ಹೇಳಿದ್ದಾನೆಂದು ತಿಳಿಯಬೇಕು. "ದೇವರು ತಾನು ನಿರ್ಮಿಸಿರುವ ಧರ್ಮಗಳನ್ನು ಬಲಹೀನಪಡಿಸುವ ಸಾತಾನು ಧರ್ಮಗಳನ್ನು ಪೂರ್ತಿ ಖಂಡಿಸಿ, ತನ್ನ ಧರ್ಮಕ್ಕೆ ಬಲ ಕೈಗೂಡಿಸುತ್ತಾನೆ."

**(42) ಮತ್ತಾಯ ಸುವಾರ್ತೆ, 15ನೇ ಅಧ್ಯಾಯ, 14ನೇ ವಚನ.**

**(14) ಅವರ ತಂಟೆಗೆ ಹೋಗಬೇಡಿ. ಅವರು ಕುರುಡರಾಗಿ ಇದ್ದು**

**ಕುರುಡರಿಗೆ ದಾರಿ ತೋರಿಸುವವರು. ಕುರುಡನು ಕುರುಡನಿಗೆ ದಾರಿ ತೋರಿಸಿದಾಗ ಅವರಿಬ್ಬರೂ ಕುಣಿಯಲ್ಲಿ ಬೀಳುತ್ತಾರೆ.**

ಮಾಯೆ ಪ್ರಭಾವದಲ್ಲಿರುವ ಮನುಷ್ಯರು ಮಾಯೆ ಒಂದರ ಅಂಶವಾದ ಪಂಡಿತರು, ಪರಿಸಯ್ಯರು ಭಗವಂತನಾದ ಪ್ರಭುವನ್ನು ವಿಮರ್ಶಿಸಿದ್ದಾರೆ. ಅಂಥವರು ದೇವರ ಜ್ಞಾನ ತಿಳಿಯದವರು. ಅವರಿಗೆ ಜ್ಞಾನ ನೇತ್ರ ಇಲ್ಲವೇ ಇಲ್ಲ. ಅವರು ಜ್ಞಾನ ದೃಷ್ಠಿ ಇಲ್ಲದ ಕುರುಡರು. ದೇವರ ಜ್ಞಾನವನ್ನು ತಿಳಿಯದವರು ಮತ್ತೊಬ್ಬನಿಗೆ ದೇವರ ಜ್ಞಾನವನ್ನು ಹೇಗೆ ತಿಳಿಸುತ್ತಾರೆ? ತಮಗೆ ದೃಷ್ಠಿ ಇಲ್ಲದಿದ್ದರೂ ದೃಷ್ಠಿ ಇರುವವರ ಹಾಗೆ ನಟಿಸುತ್ತಾ, ತಮಗೆ ದೇವರ ಜ್ಞಾನ ತಿಳಿಯದಿದ್ದರೂ ತಿಳಿದವರ ಹಾಗೆ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ. ಅಂತಹ ಪ್ರಚಾರಕರನ್ನು ನಂಬಿ ಅವರಿಗೆ ಜ್ಞಾನವು ಸಂಪೂರ್ಣವಾಗಿ ತಿಳಿದಿದೆಯೆಂದು ಪ್ರಜೆಗಳು ಅವರನ್ನು ಮಾರ್ಗದರ್ಶಕರನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ನಮಗೆ ಮಾರ್ಗ ತೋರಿಸುವವನು ಒಬ್ಬನಿದ್ದಾನೆಂಬ ಧೈರ್ಯದಿಂದ ಅವರ ಹಿಂದೆ ನಡೆಯುತ್ತಿದ್ದಾರೆ. ವಾಸ್ತವವಾಗಿ ಅವರು ಹಿಡಿದುಕೊಂಡವನು ಕೂಡಾ ನಮ್ಮ ಹಾಗೆ ಕುರುಡನೇ ಎಂದು ಪ್ರಜೆಗಳಿಗೆ ತಿಳಿದಿಲ್ಲ. ಒಬ್ಬ ಕುರುಡನು ಉಳಿದ ಕುರುಡರನ್ನು ಜೊತೆ ಮಾಡಿಕೊಂಡು, ನನಗೆ ಕಣ್ಣಿವೆ ನಿಮಗೆ ದಾರಿ ತೋರಿಸುತ್ತೇನೆಂದು ತನ್ನ ಹಿಂದೆ ಕೈ ಹಿಡಿದುಕೊಂಡು ಕರೆದುಕೊಂಡು ಹೋಗುತ್ತಿದ್ದಾನೆಂದುಕೊಳ್ಳಿ. ಎಲ್ಲಾದರೂ ಕುಣಿ ಬಂದರೇ ಆ ಕುಣಿಯಲ್ಲಿ ಮೊದಲು ದಾರಿ ತೋರಿಸುತ್ತೇನೆಂದು ಹೇಳಿರುವ ಕುರುಡನು ಬೀಳುತ್ತಾನೆ. ನಂತರ ಅವನ ಮೇಲೆ ಉಳಿದವರು ಬೀಳುತ್ತಾರೆ. ಹಾಗೆಯೇ ದೇವರ ಜ್ಞಾನವು ತಿಳಿಯದವರು ತಿಳಿದವರನ್ನು ಕೂಡಾ ಅವಹೇಳನವಾಗಿ ಮಾತನಾಡುತ್ತಾ, ತಾವೇ ದೊಡ್ಡ ಗುರುಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಅವರೊಂದಿಗೆ ತಿಳಿದವರು ವಾದ ಮಾಡಬೇಕಾದ ಅಗತ್ಯವಿಲ್ಲ. ಜ್ಞಾನದೃಷ್ಠಿ ಇಲ್ಲದವರು ಮೋಕ್ಷವೆಂಬ ಶಿಖರವನ್ನು ಹತ್ತಲಾರರು. ಜ್ಞಾನ ದೃಷ್ಠಿ ಇಲ್ಲದ ಗುರುಗಳನ್ನು ಜ್ಞಾನ ದೃಷ್ಠಿ ಇಲ್ಲದ ಪ್ರಜೆಗಳು ಎಷ್ಟು ಜನ ಆಶ್ರಯಿಸಿದರೂ ಮೋಕ್ಷ ಶಿಖರವನ್ನು ಹತ್ತಲಾರರು ಆದರೇ, **ಗುಣಗಳೆಂಬ ಕುಣಿಗಳಲ್ಲಿ** ಬೀಳುವುದು ತಪ್ಪುವುದಿಲ್ಲ.

**(43) ಮತ್ತಾಯ ಸುವಾರ್ತೆ, 16ನೇ ಅಧ್ಯಾಯ, 21, 22 ವಚನಗಳು.**

**ಮತ್ತಾಯ ಸುವಾರ್ತೆ, 17ನೇ ಅಧ್ಯಾಯ, 22, 23 ವಚನಗಳು.**

**ಮತ್ತಾಯ ಸುವಾರ್ತೆ 20ನೇ ಅಧ್ಯಾಯ, 17, 18, 19 ವಚನಗಳು.**

**(ಮತ್ತಾಯ, 16–21) ಅಂದಿನಿಂದ ತಾನು ಎರೂಷಲೇಮುಗೆ ಹೋಗಿ ದೊಡ್ಡವರಿಂದಲೂ, ಪ್ರಧಾನ ಯಾಜಕರಿಂದಲೂ, ಶಾಸ್ತ್ರಿಗಳಿಂದಲೂ ಅನೇಕ ಹಿಂಸೆಗಳು ಪಟ್ಟು, ಕೊಲ್ಲಲ್ಪಟ್ಟು ಮೂರನೆಯ ದಿನದಂದು ಏಳುವುದು ಅಗತ್ಯವೆಂದು ಏಸು ಶಿಷ್ಯರಿಗೆ ತಿಳಿಸಲು ಪ್ರಾರಂಭಿಸಿದಾಗ**

**(ಮತ್ತಾಯ, 16–22) ಪೇತುರು(ಪೇತ್ರು) ಆತನ ಕೈ ಹಿಡಿದುಕೊಂಡು ಪ್ರಭುವೇ ಅದು ನಿನಗೆ ದೂರವಾಗಿ ಹೋಗಲಿ, ಅದು ನಿನಗೆ ಎಂದಿಗೂ ಉಂಟಾಗುವುದಿಲ್ಲವೆಂದು ಆತನನ್ನು ಗದರಿಸುತ್ತ ಸಾಗಿದನು. (ಒಂದನೆಯ ಬಾರಿ ಹೇಳುವುದು)**

**(ಮತ್ತಾಯ ಸುವಾರ್ತೆ, 17–22) ಅವರು ಗಲಿಲಯದಲ್ಲಿ ಸಂಚರಿಸುತ್ತಿರುವಾಗ ಏಸು "ಮನುಷ್ಯ ಕುಮಾರನು ಮನುಷ್ಯರ ಕೈಗೆ ಒಪ್ಪಿಸಲ್ಪಡುತ್ತಾನೆ.**

**(ಮತ್ತಾಯ, 17–23) ಅವರು ಆತನನ್ನು ಕೊಲ್ಲುತ್ತಾರೆ. ಮೂರನೆಯ ದಿನದಂದು ಆತನು ಏಳುತ್ತಾನೆಂದು" ಅವರೊಂದಿಗೆ ಹೇಳಿದಾಗ, ಅವರು ಬಹಳ ದುಃಖ ಪಟ್ಟರು. (ಎರಡನೆಯಬಾರಿ ಹೇಳುವುದು)**

**(ಮತ್ತಾಯ, 20–17) ಏಸು ಎರೂಷಲೇಮಗೆ ಹೋಗುವಾಗ ಆತನು ಹನ್ನೆರಡು ಜನ ಶಿಷ್ಯರನ್ನು ಏಕಾಂತವಾಗಿ ಕರೆದುಕೊಂಡು ಹೋಗಿ ಮಾರ್ಗದಲ್ಲಿ ಅವರೊಂದಿಗೆ ಹೀಗೆ ಹೇಳಿದನು.**

**(ಮತ್ತಾಯ, 20–18) ಇಗೋ! ಎರೂಷಲೇಮಗೆ ಹೋಗುತ್ತಿದ್ದೇವೆ. ಅಲ್ಲಿ ಮನುಷ್ಯ ಕುಮಾರನು ಪ್ರಧಾನ ಯಾಜಕರಿಗು, ಶಾಸ್ತ್ರಿಗಳಿಗೂ ವಶಪಡಿಸಲ್ಪಡುತ್ತಾನೆ ಅವರು ಆತನಿಗೆ ಮರಣ ಶಿಕ್ಷೆ ವಿಧಿಸಿ**

**(ಮತ್ತಾಯ, 20–19) ಆತನನ್ನು ಅಪಹಾಸ್ಯ ಮಾಡುವುದಕ್ಕು, ಚಾಟಿಯಿಂದ ಹೊಡೆಯುವುದಕ್ಕು, ಶಿಲುಬೆಗೆ ಹಾಕುವುದಕ್ಕು ಅನ್ಯ ಜನರಿಗೆ ಆತನನ್ನು ವಶಪಡಿಸುತ್ತಾರೆ. ಮೂರನೆಯ ದಿನದಂದು ಆತನು ಮತ್ತೇ ಎದ್ದೇಳುತ್ತಾನೆ. (ಮೂರನೆಯಬಾರಿ ಹೇಳುವುದು)**

ಮತ್ತಾಯ ಸುವಾರ್ತೆ 16, 17, 20 ಅಧ್ಯಾಯಗಳಲ್ಲಿ ಏಸು ತನ್ನ ಭವಿಷ್ಯತ್ ಕಾಲವನ್ನು ಕುರಿತು ಹೇಳಿದ್ದಾನೆ. ಸಾಧಾರಣ ಮನುಷ್ಯರು ಯಾರಾದರೂ ತನ್ನ ಮರಣವು ಇಂತಹ ಸಮಯದಲ್ಲಿ ಬರುವುದೆಂದು ಹೇಳಲಾರರು. ಭವಿಷ್ಯತ್ತು ಅಂಧಕಾರವು. ಅಂದರೇ ಮುಂದೆ ಏನು ನಡೆಯುತ್ತದೋ ಯಾರಿಗೂ ತಿಳಿದಿಲ್ಲ. ತನ್ನ ಮರಣವನ್ನು ಯಾರೂ ಕಂಡು ಕೊಳ್ಳಲಾರರು. ಏಸು ಸಾಧಾರಣ ಮನುಷ್ಯನಲ್ಲವೆಂದು, ಆತನಲ್ಲಿ ಯಾವುದೋ ಒಂದು ಪ್ರತ್ಯೇಕತೆ ಇದೆಯೆಂದು, ಎಂತಹ ಅಜ್ಞಾನಿಗಾದರೂ ಅರ್ಥವಾಗುವ ಹಾಗೆ ತನ್ನ ಮರಣವನ್ನು ಕುರಿತು ಏಸು ಮೊದಲೇ ಹೇಳುವುದು ನಡೆದಿದೆ. ಒಂದು ಬಾರಿ ಅಲ್ಲದೇ ಮೂರು ಬಾರಿ ತನ್ನ ಮರಣವನ್ನು ಕುರಿತು ಹೇಳಿದ್ದಾನೆ. ಹಾಗೆ ಯಾರಿಗೂ ಸಾಧ್ಯವಾಗುವುದಿಲ್ಲ. ಏಸು ತನ್ನ ಮರಣವನ್ನು ಮೊದಲೇ ನಿರ್ಣಯಿಸಿಕೊಂಡು ಬಂದಿದ್ದಾನೆ. ಆದ್ದರಿಂದ ಆ ವಿಷಯವನ್ನು ಕುರಿತು ಹೇಳಿದ್ದಾನೆ. ಶರೀರದಲ್ಲಿ ಜೀವನಕ್ಕೆ ಸಂಬಂಧಿಸಿರುವ ಕರ್ಮಗಳನ್ನು ತುಂಬಿ ಕಳುಹಿಸುವವನು ಒಬ್ಬನೇ! ಆತನೇ ಆತ್ಮನೆಂದು ಕರೆಯಲ್ಪಡುತ್ತಿದ್ದಾನೆ.

ಏಸು ತನ್ನ ಮರಣವನ್ನು ಕುರಿತು ಮೂರು ಬಾರಿ ಹೇಳಿದ್ದಾನೆ. ತನ್ನ ಕರ್ಮಗಳನ್ನು ತಾನೇ ನಿರ್ಣಯಿಸಿಕೊಂಡಿದ್ದಾನೆ. ಆದ್ದರಿಂದ ಏಸು ಮೊದಲೇ ಈ ವಿಷಯವನ್ನು ಹೇಳಿದ್ದಾನೆ. ಕರ್ಮಗಳ ತೀರ್ಪು ನಿರ್ಣಯಿಸುವವನು

ಆತ್ಮ ಆಗಿರುವಾಗ ಪರಮಾತ್ಮಗೆ ಆತ್ಮ ಕುಮಾರನಾಗಿ ಇದ್ದಾನೆ. ಏಸು ಪರಿಶುದ್ಧಾತ್ಮನನ್ನು ತಂದೆಯೆಂದು ಅನೇಕ ಬಾರಿ ಹೇಳಿದ್ದಾನೆ. ಆದಕಾರಣ ಆತನು ಕರ್ಮಗಳನ್ನು ನಿರ್ಣಯಿಸುವ ಆತ್ಮವೆಂದು ತಿಳಿದಿದೆ. ಆದ್ದರಿಂದ ತನ್ನ ಜೀವನಕ್ಕೆ ತಾನೇ ತನ್ನ ಕರ್ಮವನ್ನು ನಿರ್ಣಯಿಸಿಕೊಂಡು ಬಂದಿದ್ದಾನೆಂದು ತಿಳಿಯುತ್ತಿದೆ. ಕರ್ಮವನ್ನು ಮೊದಲೇ ತಯಾರಿ ಮಾಡಿಕೊಂಡು ಬಂದಿದ್ದಾನೆ. ಆದ್ದರಿಂದ ತಾನು ಶಾಸ್ತ್ರಿಗಳು, ಪ್ರಧಾನ ಯಾಜಕರಿಂದ ಅನೇಕ ಹಿಂಸೆಗಳನ್ನು ಹೊಂದಿ, ಸಾಯಿಸಲ್ಪಟ್ಟ ನಂತರ ಮೂರನೆಯ ದಿನದಂದು ಏಳುವುದು ತಪ್ಪುವುದಿಲ್ಲವೆಂದು ಹೇಳಿದ್ದಾನೆ. ಆತನು ಹೇಳಿದ ಹಾಗೆಯೇ ನಡೆದಿದೆ. ತನಗೆ ಮರಣ ಶಿಕ್ಷೆ ವಿಧಿಸಲ್ಪಡುತ್ತದೆಂದು ಯಾವ ಆಂದೋಳನವಿಲ್ಲದೆ ಹೇಳಿದ್ದಾನೆ. ಹಾಗೆ ಹೇಳುವುದರಿಂದ ಏಸು ಸಾಧಾರಣ ಮನುಷ್ಯನಲ್ಲ ಎಂದು, ಆತನಲ್ಲಿ ಯಾವುದೋ ಪ್ರತ್ಯೇಕತೆ ಇದೆಯೆಂದು ಬುದ್ಧಿಯಿರುವ ಪ್ರತಿಯೊಬ್ಬನು ತಿಳಿಯಬಹುದು.

**44) ಮತ್ತಾಯ ಸುವಾರ್ತೆ, 19ನೇ ಅಧ್ಯಾಯ, 23, 24 ವಚನಗಳು.**

**(23) ಏಸು ತನ್ನ ಶಿಷ್ಯರನ್ನು ನೋಡಿ ಧನವಂತನು ಪರಲೋಕ ರಾಜ್ಯದಲ್ಲಿ ಪ್ರವೇಶಿಸುವುದು ದುರ್ಲಭವೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

**(24) ಇದಲ್ಲದೇ "ಧನವಂತನು ಪರಲೋಕ ರಾಜ್ಯದಲ್ಲಿ ಪ್ರವೇಶಿಸುವುದಕ್ಕಿಂತ ಸೂಜಿ ರಂಧ್ರದಲ್ಲಿ ಒಂಟೆ ತೂರುವುದು ಸುಲಭವೆಂದು" ನಿಮ್ಮೊಂದಿಗೆ ಹೇಳುತ್ತಿದ್ದೇನೆಂದನು.**

ಏಸು ಇಲ್ಲಿ ಒಂದು ಉಪಮಾನವನ್ನು ಹೇಳಿದ್ದಾನೆ, ಅದು ಏನೆಂದರೇ! **"ಧನವಂತನು ಪರಲೋಕದಲ್ಲಿ ಪ್ರವೇಶಿಸುವುದಕ್ಕಿಂತ ಸೂಜಿ ರಂಧ್ರದಲ್ಲಿ ಒಂಟೆ ತೂರುವುದು ಸುಲಭವೆಂದಿದ್ದಾನೆ."** ಒಂಟೆ ಸೂಜಿ ರಂಧ್ರದಲ್ಲಿ ತೂರುವುದು ಅಸಾಧ್ಯವಾದ ಕೆಲಸವಾಗಿ ಹೇಗೆ ಇದೆಯೋ, ಅಷ್ಟೇ ಅಸಾಧ್ಯವಾದ ಕೆಲಸವಾಗಿ

ಧನವಂತನು ಪರಲೋಕವನ್ನು ಸೇರುವನೆಂದು ಹೇಳಬಹುದು. ಮನುಷ್ಯನಿಗೆ **"ಧನ ಹೆಚ್ಚಿದರೆ ಮದ ಹೆಚ್ಚುವುದೆಂದು"** ಕೆಲವರು ಹಿರಿಯರು ಹೇಳುತ್ತಿರುತ್ತಾರೆ. ಧನ ಹೆಚ್ಚಾದವನನ್ನು ಧನವಂತನು ಎಂದು ಹೇಳುತ್ತಾರೆ. ಮದ ಹೆಚ್ಚಾದವನನ್ನು ಮದವಂತನು (ಗರ್ವ ಇರುವವನು) ಎಂದು ಅನ್ನುತ್ತಾರೆ. ಮದ ಎಂದರೆ ಆರು ಕೆಟ್ಟ ಗುಣಗಳಲ್ಲಿ ಒಂದು ಗುಣವನ್ನು ಮದ ಎಂದು ಕರೆಯುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ಕೆಟ್ಟ ಗುಣಗಳಲ್ಲಿ ಐದನೆಯ ಕೆಟ್ಟ ಗುಣವಾಗಿ ಮದ ಎನ್ನುವುದು ಇದೆ. ಮದ ಎಂದರೇ ಗರ್ವವೆಂದು ಅರ್ಥ. ಗರ್ವ ಇಲ್ಲದ ಮನುಷ್ಯ ಭೂಮಿ ಮೇಲೆ ಇಲ್ಲ. ಅಷ್ಟೋ ಇಷ್ಟೋ ಆದರೂ ಗರ್ವವು ಪ್ರತಿ ಮನುಷ್ಯನಲ್ಲಿಯು ಇರುತ್ತದೆ. ಮನುಷ್ಯನಲ್ಲಿ ಶೇ. 100 ರಷ್ಟು ಗರ್ವವು ಇಲ್ಲದಿದ್ದರೂ 90, 80, 70, 60, 50, 40, 30 ರಷ್ಟಾದರೂ ಇರುತ್ತದೆ. ಒಬ್ಬನಲ್ಲಿ ಶೇ. 90 ರಷ್ಟು ಇದ್ದರೇ, ಮತ್ತೊಬ್ಬ ಮನುಷ್ಯನಲ್ಲಿ ಶೇ. 80 ರಷ್ಟು ಇರುತ್ತದೆ. ಹೀಗೆ ಕೊನೆಗೆ ಮೂವತ್ತು (30) ರಷ್ಟಾದರೂ ಇರುವ ಮನುಷ್ಯರಿರಬಹುದು.

ಶರೀರದಲ್ಲಿ ಜೀವಿಯೊಂದಿಗೆ ತಗಲಿಕೊಂಡು ಆಲೋಚನೆ ಮಾಡಿಸುವುದು ಒಂದು ಗರ್ವವೇ ಅಲ್ಲ, ಅದಕ್ಕೆ ಅನುಬಂಧವಾಗಿರುವ ಉಳಿದ ಐದು ಗುಣಗಳು ಕೂಡಾ ಕೆಲಸ ಮಾಡುತ್ತಿವೆ. ಪ್ರಪಂಚದಲ್ಲಿ ಧನ ಇಲ್ಲದವನಿಗೆ ಗರ್ವವು ಕಡಿಮೆ ಇರಬಹುದು. ಧನ ಇರುವವನಿಗೆ ಗರ್ವವು ಹೆಚ್ಚಾಗಿ ಇರುತ್ತದೆ. ಕೋಟಿ ಧನ ಇರುವವನಿಗೆ ಗರ್ವವು ಕೂಡಾ ಅಧಿಕವಾಗಿ ಇರುತ್ತದೆ. ಧನವಿರುವವನಿಗೆ ಒಂದು ಗರ್ವವೇ ಅಲ್ಲದೇ ಉಳಿದ ಗುಣಗಳು ಕೂಡಾ ಅಧಿಕವಾಗಿ ಇರುತ್ತವೆ. ಧನವು ಮನುಷ್ಯನನ್ನು ಯಾವ ವಿಧವಾಗಿಯಾದರೂ ಬದಲಾಯಿಸಬಲ್ಲದು. ಆದ್ದರಿಂದ ಧನದಿಂದ ಮನುಷ್ಯ ಜ್ಞಾನಕ್ಕೆ ದೂರವಾಗಬಲ್ಲನು. **ಮೋಕ್ಷವನ್ನು** ಸೂಜಿಗಿರುವ ರಂಧ್ರದ ಹಾಗೆ ಹೋಲಿಸಿದಾಗ, ಧನವಿರುವವನನ್ನು ಒಂಟೆಗೆ ಹೋಲಿಸಬಹುದು. ದೊಡ್ಡ ಒಂಟೆ ಚಿಕ್ಕದಾಗಿ ಇರುವ ಸೂಜಿ ರಂಧ್ರದಲ್ಲಿ ಹೇಗೆ ತೂರುವುದಿಲ್ಲವೋ ಹಾಗೇ, ಧನವಂತನು

ಮೋಕ್ಷವನ್ನು ಸೇರಲಾರನು ಎಂದು ಹೇಳಿದ್ದಾರೆ. ಒಂಟೆ ಯಾವ ವಿಧವಾಗಿ ಸೂಜಿ ರಂಧ್ರದಲ್ಲಿ ತೂರುವುದಿಲ್ಲವೋ, ಅದೇ ವಿಧವಾಗಿ ಧನವಿರುವವನು **ಗುಣಗಳು** ಎಂಬ ಬಲವಿರುವ ಒಂಟೆಯಂತಿದ್ದು ಪರಲೋಕದಲ್ಲಿ ಪ್ರವೇಶಿಸ ಲಾರನು.

**(45) ಮತ್ತಾಯ ಸುವಾರ್ತೆ, 22ನೇ ಅಧ್ಯಾಯ, 36, 37, 38, 39, 40 ವಚನಗಳು.**

**36) ಬೋಧಕನೇ! ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಆಜ್ಞೆಯಾವು ದೆಂದು ಕೇಳಿದನು.**

**37) ಅದಕ್ಕೆ ಆತನು, ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣಾತ್ಮ ದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ದೇವರಾದ ಪ್ರಭುವನ್ನು ಪ್ರೀತಿಸಬೇಕು ಎನ್ನುವುದೇ.**

**38) ಇದು ಮುಖ್ಯವಾದುದು ಮೊದಲನೆಯದಾದ ಆಜ್ಞೆ.**

**39) ನಿನ್ನ ಹಾಗೆ ನಿನ್ನ ಪಕ್ಕದಲ್ಲಿರುವವನನ್ನು ಪ್ರೀತಿಸಬೇಕೆಂಬ ಎರಡನೆಯ ಆಜ್ಞೆಯು ಅದರಂಥದ್ದೇ.**

**40) ಈ ಎರಡು ಆಜ್ಞೆಗಳು ಧರ್ಮಶಾಸ್ತ್ರವೆಲ್ಲದಕ್ಕೂ, ಪ್ರವಕ್ತರಿಗೂ ಆಧಾರವಾಗಿರುವವೆಂದು ಆತನೊಂದಿಗೆ ಹೇಳಿದ್ದಾನೆ.**

ಏಸುವನ್ನು ಶೋಧಿಸಿ ಕೇಳಬೇಕೆಂದು, ಏಸು ಸಮಾಧಾನವನ್ನು ಹೇಳದೆ ಹೋದರೇ ಅವಹೇಳನ ಮಾಡಬೇಕೆಂಬ ಉದ್ದೇಶದಲ್ಲಿ ಕೆಲವರು ಏಸು ಹತ್ತಿರಕ್ಕೆ ಬಂದು ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಆಜ್ಞೆ ಯಾವುದೆಂದು ಕೇಳಿದ್ದಾರೆ. ಅದಕ್ಕೆ ಏಸು ಕೂಡಲೇ ಸಮಾಧಾನ ಹೇಳುತ್ತಾ **"ನಿನ್ನ ಪೂರ್ಣ ಹೃದಯ ದಿಂದಲೂ, ನಿನ್ನ ಪೂರ್ಣ ಆತ್ಮದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ**

**ನಿನ್ನ ದೇವರಾದ ಪ್ರಭುವನ್ನು ಪ್ರೀತಿಸಬೇಕೆನ್ನುವುದೇ.”** ಮೊದಲ ಆಜ್ಞೆ ಎಂದು ಮತ್ತು ಮುಖ್ಯವಾದ ಆಜ್ಞೆ ಎಂದು ಹೇಳಿರುವುದಾಗಿದೆ. ನಂತರ ಕೂಡಲೇ ಎರಡನೆಯ ಆಜ್ಞೆಯನ್ನು ಕುರಿತು ಕೂಡಾ ಹೇಳಿದ್ದಾನೆ. ಈಗ ನಾವು ಮೊದಲ ಆಜ್ಞೆಯನ್ನು ಕುರಿತು ತಿಳಿದುಕೊಳ್ಳೋಣ. ಈ ವಾಕ್ಯದಲ್ಲಿ **ಆಜ್ಞೆ** ಎಂಬ ಪದವನ್ನು ಹೇಳಿದ್ದಾರೆ. ಕೊನೆಯಲ್ಲಿ ಎರಡು ಆಜ್ಞೆಗಳು ಧರ್ಮಶಾಸ್ತ್ರವೆಲ್ಲದಕ್ಕು ಮತ್ತು ಪ್ರವಕ್ತರೆಲ್ಲರಿಗು ಆಧಾರವಾದವುಗಳೆಂದು ಹೇಳುವುದಾಗಿದೆ. ಅದನ್ನು ಕುರಿತು ನೋಡಿದರೇ ಹೀಗೆ ಹೇಳಬಹುದು.

ಆಜ್ಞೆ ಎಂದರೇ ಆಜ್ಞಾಪಿಸಲ್ಪಟ್ಟಿರುವುದು ಎಂದು ಹೇಳಬಹುದು. ಆದರೇ ತಕ್ಷಣವೇ ಯಾರು ಆಜ್ಞಾಪಿಸಿದ್ದಾರೆ? ಎಂಬ ಪ್ರಶ್ನೆ ಬರಬಹುದು. ಅದಕ್ಕೆ ಉತ್ತರವಾಗಿ ದೊಡ್ಡವನು ಚಿಕ್ಕವರಿಗೆ ಆಜ್ಞಾಪಿಸುತ್ತಾನೆ. ಪ್ರಪಂಚಕ್ಕೆಲ್ಲಾ ದೊಡ್ಡವನಾದವನು ಪ್ರಪಂಚವನ್ನು ಸೃಷ್ಠಿಸಿರುವ ಸೃಷ್ಠಿಕರ್ತನಾದ ದೇವರೇ. ದೇವರು ಶಾಸಿಸಿ ಹೇಳಿರುವುದು ಇಲ್ಲವೇ ಆಜ್ಞಾಪಿಸಿ ಹೇಳಿರುವುದು ಆಜ್ಞೆ ಎಂದು, ಶಾಸನ ಎಂದು ಹೇಳಬಹುದು. ಬದಲಾವಣೆ ಹೊಂದದಿರುವುದು ಶಾಸನದೊಂದಿಗೆ ಕೂಡಿಕೊಂಡಿರುವುದನ್ನು ಶಾಸನ ಎಂದೂ ಮತ್ತೊಂದು ಪದವನ್ನು ಉಪಯೋಗಿಸಿ ಹೇಳಿದರೇ ‘ಧರ್ಮವು’ ಎಂದು ಹೇಳಬಹುದು. **ಶಾಸನ** ಎಂದರೂ, **ಆಜ್ಞೆ** ಎಂದರೂ ಬದಲಾವಣೆ ಹೊಂದದಿರುವುದು ಆಗಿರುವುದರಿಂದ ಅದನ್ನು ಪ್ರತ್ಯೇಕ ಪದದಿಂದ **ಧರ್ಮ** ಎಂದು ಹೇಳಬಹುದು. ಉದಾಹರಣೆಗೆ ಒಂದು ಮೆಣಸಿನಕಾಯನ್ನು ತೆಗೆದುಕೊಂಡು ನೋಡಿದರೇ ಅದರಲ್ಲಿ ಬದಲಾವಣೆ ಹೊಂದದಿರುವುದು, ಶಾಸನವಾಗಿ ಇರುವುದು ಮೆಣಸಿನಕಾಯಿಯ ಒಂದು ಕಾರ. ಮೆಣಸಿನಕಾಯಿಯಲ್ಲಿ ಕಾರ ಎನ್ನುವುದು ಅದರ ಧರ್ಮ ಎಂದು ಹೇಳಬಹುದು. ಮೆಣಸಿನಕಾಯಿ ಎಂದಿಗೂ ಒಂದೇ ವಿಧವಾಗಿ ಬದಲಾವಣೆ ಹೊಂದದೆ ಇರುವುದಾಗಿದೆ. ಆದ್ದರಿಂದ ಅದರ ಧರ್ಮವು ಕಾರವಾಗಿ ಇರುವುದೇಯೆಂದು ತಿಳಿಯುತ್ತಿದೆ. ಮೆಣಸಿನಕಾಯಿಗೆ ಕಾರವು ಧರ್ಮವಾದಂತೆ, ಹುಣಸೇಕಾಯಿಗೆ ಹುಳಿ ಧರ್ಮವಾಗಿ ಇದೆ. ಬೇವಿನಕಾಯಿಗೆ ಕಹಿ ಧರ್ಮವಾಗಿ ಇದೆ.

ಧರ್ಮ ಎನ್ನುವುದು ಒಂದು ನಿಯಮ ನಿಬದ್ಧತೆಯಿಂದ ಕೂಡಿರುವುದೆಂದು ಹೇಳಬಹುದು. ಧರ್ಮ ಅಥವಾ ಧರ್ಮಗಳು ಯಾರಿಗೆ ಇರುತ್ತವೆ? ಎಂದು ಪ್ರಶ್ನಿಸಿಕೊಂಡು ನೋಡಿದರೇ ಸೃಷ್ಟಿಸಲ್ಪಟ್ಟಿರುವ ಹುಣಸೇಕಾಯಿಗೆ, ಮೆಣಸಿನಕಾಯಿಗೆ, ಬೇವಿನಕಾಯಿಗೆ ಧರ್ಮವಿರುವ ಹಾಗೆ ಸೃಷ್ಟಿಸಲ್ಪಟ್ಟಿರುವ ಯಾವುದಕ್ಕಾದರೂ ಧರ್ಮವು ಇರುತ್ತದೆ. ದೇವರು ಸೃಷ್ಟಿಸಿದ ಸೃಷ್ಟಿಕರ್ತನಾಗಿರುವುದರಿಂದ ಆತನಿಗೆ ಧರ್ಮಗಳಂತೂ ಯಾವುವೂ ಇರುವುದಿಲ್ಲ. ಸೃಷ್ಟಿಕರ್ತನಾದ ದೇವರು ಧರ್ಮಗಳಿಗೆ ಅತೀತನಾಗಿ ಇರುತ್ತಾನೆ. ಸೃಷ್ಟಿ ಕರ್ತನಾದ ದೇವರನ್ನು ಹೊರತುಪಡಿಸಿ ಸೃಷ್ಟಿಸಲ್ಪಟ್ಟಿರುವ ಆತ್ಮಗು, ಜೀವಾತ್ಮಗು ಕೂಡಾ ಧರ್ಮಗಳು ಇವೆ. ಪರಮಾತ್ಮ ಅಂಶಗಳಾದ ಆತ್ಮಗು, ಜೀವಾತ್ಮಗು ಧರ್ಮಗಳಿರುವಾಗ ತಯಾರು ಮಾಡಲ್ಪಟ್ಟಿರುವ ಪ್ರಕೃತಿಗೆ ತಪ್ಪದೆ ಧರ್ಮಗಳಿರುತ್ತವೆ. ಆದರೇ ನಾವು ತಿಳಿಯಬೇಕಾಗಿರುವುದು ಬ್ರಹ್ಮವಿದ್ಯೆಯಾದ ಆಧ್ಯಾತ್ಮಿಕ ವಿದ್ಯೆಯನ್ನು. ಆದ್ದರಿಂದ ಆತ್ಮ, ಜೀವಾತ್ಮಗಳನ್ನು ಕುರಿತಾದ ಧರ್ಮಗಳನ್ನೇ ತಿಳಿಯಬೇಕಾಗಿರುತ್ತದೆ. ಬ್ರಹ್ಮವಿದ್ಯೆಯನ್ನು ತಿಳಿಯಬೇಕಾದವನು ಜೀವಾತ್ಮನಾಗಿರುವುದರಿಂದ ಆತನು **ತಿಳಿಯಬೇಕಾಗಿರುವುದು ಆತ್ಮ ಧರ್ಮಗಳನ್ನು ಮಾತ್ರವೇ.**

ಇಲ್ಲಿ ವಾಕ್ಯದಲ್ಲಿ ಕೂಡಾ ಆತ್ಮನನ್ನು ತಿಳಿಯಬೇಕಾಗಿರುವ ವಿಧಾನವನ್ನು ಕುರಿತಾಗಿಯೇ ಹೇಳಿದ್ದಾರೆ. ಹಾಗೆ ತಿಳಿಯುವುದೇ ಮುಖ್ಯವೆಂದು ಕೂಡಾ ಹೇಳಿದ್ದಾರೆ. ಧರ್ಮಶಾಸ್ತ್ರವು ಆತ್ಮನನ್ನು ಕುರಿತು ತಿಳಿಯುವುದಾಗಿ ಇದೆ. ಆದ್ದರಿಂದ ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಧರ್ಮವು ಯಾವುದು ಎಂದು ಕೇಳಿದಾಗ **"ನಿನ್ನ ದೇವರಾದ ಪ್ರಭುನನ್ನು ಪ್ರೀತಿಸಬೇಕೆನ್ನುವುದೇ ಮುಖ್ಯವಾದುದೆಂದೂ, ಮೊದಲನೆಯದಾದ ಆಜ್ಞೆ"** ಎಂದು ಹೇಳಿದ್ದಾರೆ. ಇಲ್ಲಿ ದೇವರಾದ ಪ್ರಭು ಎಂದು ಹೇಳಿದ್ದಾರೆ. ಪ್ರಭು ಎಂದರೇ ಮುಖ್ಯವಾಗಿ ಹುಟ್ಟಿದವನು ಎಂದು ಅರ್ಥ ಇದೆ. ಹುಟ್ಟಿರುವ ದೇವರನ್ನು ಪ್ರೀತಿಸುವುದೇ ಮುಖ್ಯವಾದ ಆಜ್ಞೆ ಎಂದು ಹೇಳಿದ್ದಾರೆ. ಇದಕ್ಕು ಮೊದಲೇ ಸೃಷ್ಟಿಸಿರುವವನು ಮತ್ತು ಸೃಷ್ಟಿಸಲ್ಪಡದವನು ದೇವರು ಎಂದು, ಆತನಿಗೆ ಧರ್ಮವಿಲ್ಲ ಎಂದು

ಹೇಳಿಕೊಳ್ಳುತ್ತಿದ್ದೇವೆ. ಸೃಷ್ಠಿಸಲ್ಪಡದವನು, ಸೃಷ್ಠಿ ಎಲ್ಲವನ್ನೂ ಸೃಷ್ಠಿಸಿರುವವನು ದೇವರು ಆದಾಗ ಮುಖ್ಯವಾಗಿ ಹುಟ್ಟಿರುವ (ಪ್ರಭು) ಎನ್ನುವವನು ದೇವರು ಹೇಗಾಗುತ್ತಾನೆ? ಎಂಬ ಪ್ರಶ್ನೆ ಬರಬಹುದು. 'ದೇವರಾದ ಪ್ರಭು' ಎಂದು ಹೇಳಿದ್ದಾರೆ ಆದ್ದರಿಂದ ದೇವರು ಹುಟ್ಟದವನಾ? ಹುಟ್ಟಿದವನಾ ಎಂದು ಅನುಮಾನ ಬರುತ್ತಿದೆ. ಅದಕ್ಕೆ ಉತ್ತರ ಏನೆಂದರೇ!

ದೇವರು ಹುಟ್ಟದವನು ಎಂದು ಮೊದಲಿಗೆ ಹೇಳಬಹುದು. ಸೃಷ್ಟಿಸಲ್ಪಡದ ಸೃಷ್ಠಿಕರ್ತನಾದ ದೇವರು ಮೊದಲು ಪ್ರಕೃತಿಯನ್ನು ಮಾತ್ರವೇ ಸೃಷ್ಠಿಸಿದ್ದಾನೆ. ಪ್ರಕೃತಿಯನ್ನು ಸೃಷ್ಠಿಸಿರುವ ದೇವರಾದ ಪರಮಾತ್ಮ ತನ್ನ ಪ್ರಕೃತಿಯಲ್ಲಿ ಜೀವರಾಶಿಗಳನ್ನು ಸೃಷ್ಠಿಸಬೇಕೆಂದು ಅಂದುಕೊಂಡಿದ್ದಾನೆ. ಒಂದು ಬಾರಿ ಪ್ರಕೃತಿಯನ್ನು ಸೃಷ್ಠಿಸಿರುವ ದೇವರು ತನಗೆ ತಾನು ಯಾವ ಕಾರ್ಯವನ್ನು ಮಾಡಬಾರದೆಂದು ನಿರ್ಣಯಿಸಿಕೊಂಡಿದ್ದಾನೆ. ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎಂಬ ಐದು ಸಜೀವವಿರುವ ಪಂಚಭೂತಗಳನ್ನು ತಯಾರಿ ಮಾಡಿದ ನಂತರ ಯಾವ ಕಾರ್ಯವನ್ನು ಮಾಡದವನಾಗಿ ಇರಬೇಕೆಂದುಕೊಂಡ ದೇವರು ತನ್ನ ಪ್ರಕೃತಿಯಲ್ಲಿ ಜೀವಿಗಳನ್ನು ಸೃಷ್ಠಿಸುವುದಕ್ಕೆ, ಪಾಲಿಸುವುದಕ್ಕೆ, ಗತಿಸುವುದಕ್ಕೆ ಸಾಮರ್ಥ್ಯವಾಗಿ ಮಾಡುವ ಆತ್ಮನನ್ನು ಪ್ರತ್ಯೇಕವಾಗಿ, ತನಗೆ ತಾನು ಹುಟ್ಟುವಂತೆ ಅಂದುಕೊಂಡಾಗ ದೇವರು ಅಂದುಕೊಂಡ ಕೂಡಲೇ **ಪ್ರಭು** ಎನ್ನಲ್ಪಡುವ ಆತ್ಮ ತಯಾರಾಗಿದೆ. ಆತ್ಮ ಸರ್ವಜೀವರಾಶಿಗಳನ್ನು ಸೃಷ್ಠಿಸುತ್ತಿದೆ, ಪಾಲಿಸುತ್ತಿದೆ, ಮರಣಿಸುವ ಹಾಗೆ ಮಾಡುತ್ತಿದೆ. ಜೀವಿಗಳೆಲ್ಲರನ್ನೂ ಸೃಷ್ಠಿಸಿರುವ ಸೃಷ್ಠಿಕರ್ತ ಆತ್ಮವೇ ಆಗಿರುವುದರಿಂದ ಆತ್ಮನನ್ನು ಕೂಡಾ ದೇವರು ಎಂದು ಹೇಳಬೇಕಾಗಿ ಬಂದಿದೆ. ಈ ವಿಧವಾಗಿ **ಪ್ರಕೃತಿಯನ್ನು ಸೃಷ್ಠಿಸಿರುವ ದೇವರು ಮೊದಲನೆಯವನು ಆಗಿರುವಾಗ, ಪ್ರಕೃತಿಯಲ್ಲಿ ಜೀವರಾಶಿಗಳನ್ನು ಸೃಷ್ಠಿಸಿರುವ ದೇವರು ಎರಡನೆಯವನು ಎಂದು ಹೇಳಬಹುದು.**

ಆತ್ಮವನ್ನು ಕೂಡಾ ಸೃಷ್ಠಿಸಿರುವವನು, ಆತ್ಮಗು ಕೂಡಾ ದೇವರಾದವನು, ಆತ್ಮಕ್ಕು ಕೂಡಾ ಬೇರೆಯಾಗಿ (ಪರವಾಗಿ) ಇರುವವನಾದ ಮೊದಲ ದೇವರನ್ನು

ಪರಮಾತ್ಮ ಎಂದು ಹೇಳುತ್ತಿದ್ದೇವೆ. ಜೀವರಾಶಿಗಳನ್ನು ಸೃಷ್ಠಿಸಿರುವ ಎರಡನೆಯ ದೇವರನ್ನು ಆತ್ಮವೆಂದು ಹೇಳುತ್ತಿದ್ದೇವೆ. ಪರಮಾತ್ಮ, ಆತ್ಮ ಎಂಬ ಇಬ್ಬರು ದೇವರುಗಳು ಸೃಷ್ಠಿಕರ್ತರೇ, ಇಬ್ಬರು ದೇವರುಗಳಾಗಿಯೇ ಕರೆಯಲ್ಪಡುತ್ತಿದ್ದರೂ, **ಮೊದಲ ದೇವರಾದ ಪರಮಾತ್ಮ ಧರ್ಮಗಳಿಗೆ ಅತೀತನು. ಎರಡನೆಯ ದೇವರಾದ ಆತ್ಮ ಧರ್ಮಗಳು ಇರುವವನು. ಧರ್ಮಗಳಿಲ್ಲದ ದೇವರು ಮೊದಲ ಸೃಷ್ಠಿಕರ್ತ ಆಗಿರುವಾಗ, ಧರ್ಮಗಳಿರುವ ದೇವರು ಎರಡನೆಯ ಸೃಷ್ಠಿಕರ್ತನಾಗಿ ಇದ್ದಾನೆ.** ಪ್ರಪಂಚದಲ್ಲಿ ಇಬ್ಬರು ದೇವರುಗಳಿದ್ದಾರೆಂದು ವಾಸ್ತವವಾಗಿ ಯಾರಿಗೂ ತಿಳಿದಿಲ್ಲ. ಇಬ್ಬರು ದೇವರುಗಳಿದ್ದರೂ ಮೊದಲ ದೇವರನ್ನು ದೊಡ್ಡದಾಗಿ ಹೇಳುತ್ತಿದ್ದರೂ ಮನುಷ್ಯರನ್ನು ಸೃಷ್ಠಿಸಿರುವುದು ಎರಡನೆಯ ದೇವರಾದ ಆತ್ಮನೇ ಆಗಿರುವುದರಿಂದ ಮನುಷ್ಯರಿಗೆ ದೇವರು ಆತ್ಮನೇ ಎಂದು ಹೇಳಬಹುದು. ಮನುಷ್ಯರು ಆರಾಧಿಸಲು ಅರ್ಹನಾದ ದೇವರು ಆತ್ಮನೇ ಎಂದು ಹೇಳಬಹುದು. ಮನುಷ್ಯರು ಎರಡನೆಯ ದೇವರ ಧರ್ಮಗಳನ್ನೇ ತಿಳಿಯಬೇಕಾಗಿದೆ. ದೈವಗ್ರಂಥಗಳಲ್ಲಿ ತಿಳಿಸಿರುವ ಧರ್ಮ ಗಳೆಲ್ಲವೂ ಆತ್ಮನನ್ನು ಕುರಿತಿರುವವೆಂದೇ ತಿಳಿಯಬೇಕು.

ಮನುಷ್ಯ ಪೂಜಿಸಬೇಕೆಂದರೂ, ಆರಾಧಿಸಬೇಕೆಂದರೂ, ನಮಸ್ಕರಿಸಬೇ ಕೆಂದರೂ, ಪ್ರಾರ್ಥನೆ ಮಾಡಬೇಕೆಂದರೂ ಎರಡನೆಯ ದೇವರಾದ ಆತ್ಮನನ್ನು ಆರಾಧಿಸಬೇಕಾದ್ದೆ, ಆತ್ಮನನ್ನು ಪ್ರಾರ್ಥನೆ ಮಾಡಬೇಕಾದ್ದೇ. ಮೊದಲ ದೇವರನ್ನು ಯಾರೂ ಆರಾಧಿಸಲಾರರು. ಆತನನ್ನು ಆರಾಧಿಸುವುದಕ್ಕೆ, ಪ್ರಾರ್ಥಿಸುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಆತನು ಯಾವ ಅಗತ್ಯವಿಲ್ಲದವನು, ಯಾರನ್ನೂ ಹುಟ್ಟಿಸಿದವನಲ್ಲ, ಆತನು ಹುಟ್ಟಿಸಲ್ಪಟ್ಟಿರುವವನೂ ಅಲ್ಲ. ಆದ್ದರಿಂದ ಮೊದಲ ದೇವರನ್ನು ಅಂತಿಮ ದೈವಗ್ರಂಥದಲ್ಲಿ **"ಆತನು ಯಾರಿಗೂ ಸಂತತಿ ಅಲ್ಲ, ಆತನಿಗೆ ಯಾರೂ ಸಂತಾನವು ಇಲ್ಲ"** ಎಂದು ಹೇಳಿದ್ದಾರೆ. **ಆತನು ಯಾರ ಪ್ರಾರ್ಥನೆಯೊಂದಿಗೂ ಅಕ್ಕರೆ ಇಲ್ಲದವನೆಂದು ಕೂಡಾ 112ನೇ ಸೂರಾದಲ್ಲಿ** ಹೇಳಿದ್ದಾನೆ. ನಮಾಜ್ ಅಥವಾ ಪ್ರಾರ್ಥನೆಯಿಂದ ಸಂಬಂಧವಿಲ್ಲದ ದೇವರು ಮೊದಲನೆಯವನು ಆದಾಗ, ಪ್ರಾರ್ಥನೆಯೊಂದಿಗೆ ಸಂಬಂಧವಿರುವವನು ಎರಡನೆಯ ದೇವರು ಇದ್ದಾನೆ. ಇತ್ತ ಕ್ರೈಸ್ಥವರಿಗಾಗಲೀ, ಅತ್ತ ಮುಸ್ಲಿಮರಿಗಾಗಲೀ

ಇಬ್ಬರು ದೇವರುಗಳೆಂದು (ಇಬ್ಬರು ಅಲ್ಲಾಹ್‌ಗಳೆಂದು) ತಿಳಿದಿಲ್ಲ. ಇರುವುದು ಒಂದೇ ದೇವರೆಂದು ಹೇಳುತ್ತಿದ್ದಾರೆ. ಆ ಒಂದು ದೇವರನ್ನೇ ಆರಾಧಿಸುತ್ತಿದ್ದಾರೆ. **ಆರಾಧಿಸಲು ಅರ್ಹನಾದ ದೇವರು ಬೇರೆ, ಸೃಷ್ಟಿಕರ್ತನಾದ ಮೊದಲ ದೇವರು ಬೇರೆ** ಎಂದು ಎರಡು ಮತಗಳವರಿಗೆ ತಿಳಿದಿಲ್ಲ. ಹಿಂದೂಗಳಿಗಾದರೇ ದೇವರು ಎನ್ನುವ ವಿಷಯವೇ ತಿಳಿಯದೆ ಅನೇಕ ದೇವತೆಗಳನ್ನು ಆರಾಧಿಸುತ್ತಾ, ಪೂರ್ತಿ ತಪ್ಪು ದಾರಿಯಲ್ಲಿ (ಅಜ್ಞಾನ ಮಾರ್ಗದಲ್ಲಿ) ನಡೆಯುತ್ತಿದ್ದಾರೆ.

ಮೊದಲ ದೇವರು ಧರ್ಮಗಳಿಗೆ ಅತೀತನು. ಆದ್ದರಿಂದ ಆತನನ್ನು ಯಾರೂ ತಿಳಿಯಲಾರರು, ಆರಾಧಿಸಲಾರರು. ಧರ್ಮಗಳಿರುವ ದೇವರಾದ ಆತ್ಮನನ್ನು ಆರಾಧಿಸುವುದಕ್ಕೆ ಮನುಷ್ಯನ ಶರೀರದಲ್ಲಿ ಕೆಲವು ಭಾಗಗಳು ಮುಖ್ಯವಾಗಿವೆ. ಜೀವಿಯು ತನ್ನ ಮನಸ್ಸಿನಿಂದ ಮತ್ತು ತನ್ನ ಬುದ್ಧಿಯಿಂದ ಆತ್ಮನಾದ ದೇವರನ್ನು ಆರಾಧಿಸಬೇಕಾಗಿದೆ. ಇದು ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಧರ್ಮವಾಗಿ ಇದೆ. ಆತ್ಮನಾದ ದೇವರನ್ನು **"ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣಾತ್ಮದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ ಪ್ರೀತಿಸಬೇಕು"** ಎಂದು ಹೇಳಿದ್ದಾರೆ. ಇಲ್ಲಿ ಪ್ರೀತಿಸಬೇಕೆಂದು ಅಂದರೆ ಆರಾಧಿಸಬೇಕೆಂದು ಅರ್ಥ. ಹಾಗೆ ಮಾಡುವುದೇ ಮುಖ್ಯವಾದುದೆಂದು ಮೊದಲನೆಯದಾದ ಆಜ್ಞೆ (ಧರ್ಮ) ಎಂದು ವಾಕ್ಯದಲ್ಲಿ ಇದೆ. **ಆಜ್ಞೆ ಎಂದರೇ ಧರ್ಮವೆಂದು ಅರ್ಥ ಮಾಡಿಕೊಂಡ ಹಾಗೆ, ಪೂರ್ಣ ಹೃದಯದಿಂದ ಅಂದರೇ ಬುದ್ಧಿ ಎಲ್ಲದರಿಂದಲೂ ಎಂದು ಅರ್ಥ. ಹಾಗೆಯೇ ಪೂರ್ಣಾತ್ಮದಿಂದ ಅಂದರೇ ಜೀವಿಯಾದ ನೀನು ಎಂದು ಅರ್ಥ. ಪ್ರೀತಿಸು ಅಂದರೇ ಪ್ರಾರ್ಥಿಸು ಎಂದು ಅರ್ಥ. ಧರ್ಮಶಾಸ್ತ್ರದಲ್ಲಿ ಅಂದರೇ ಅಧ್ಯಾತ್ಮಿಕ ಧರ್ಮಗಳಲ್ಲಿ ನೀನು, ನಿನ್ನ ಬುದ್ಧಿಯಿಂದ, ನಿನ್ನ ಮನಸ್ಸಿನಿಂದ ಆತ್ಮನಾದ ದೇವರನ್ನು ಆರಾಧಿಸಬೇಕೆಂದು ಹೇಳಿದ್ದಾರೆ.** ಇದು ಮೊದಲ ಆಜ್ಞೆಯಾಗಿರುವಾಗ, ಎರಡನೆಯ ಆಜ್ಞೆ ಮತ್ತೊಂದು ಇದೆ. ಅದು ಏನೆಂದರೇ!

ಮೊದಲನೆಯಂತದ್ದೆ ಆದ ಎರಡನೆಯ ಆಜ್ಞೆ **"ನಿನ್ನ ಹಾಗೆ ನಿನ್ನ ಪಕ್ಕದವನನ್ನು ಪ್ರೀತಿಸು"** ಎಂದು ಇದೆ. ಈ ಎರಡು ಆಜ್ಞೆಗಳು ಧರ್ಮ

ಶಾಸ್ತ್ರವೆಲ್ಲದಕ್ಕೂ ಮತ್ತು ಪ್ರವಕ್ತರಿಗೂ ಆಧಾರವಾಗಿ ಇವೆಯೆಂದು ಹೇಳಿದ್ದಾರೆ. ಧರ್ಮಶಾಸ್ತ್ರವೆಲ್ಲದಕ್ಕೂ ಅಂದರೆ ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಧರ್ಮಗಳಲ್ಲಿಯೂ ಮತ್ತು ಧರ್ಮಗಳನ್ನು ಬೋಧಿಸುವ ಪ್ರವಕ್ತರಿಗೆಲ್ಲರಿಗೂ ಆಧಾರವಾದವೆಂದು ವಾಕ್ಯದಲ್ಲಿ ಹೇಳಿದ್ದಾರೆ. ಈ ವಾಕ್ಯವನ್ನು ಆಲೋಚಿಸಿ ನೋಡಿದರೆ ಪ್ರತಿ ಮನುಷ್ಯನಿಗೂ ತನ್ನ ಮೇಲೆ ಹೆಚ್ಚು ಪ್ರೀತಿ ಇರುತ್ತದೆ. ತನ್ನ ಮೇಲೆ ಅಂದರೆ ತನ್ನ ಪ್ರಾಣದ ಮೇಲೆ ಹೆಚ್ಚು ಗಮನ ಇರುತ್ತದೆ. ಪ್ರಾಣವನ್ನು ತೆಗೆಯುತ್ತಾರೆಂದು ಇತರರು ಸಜ್ಜಾದಾಗ ತನ್ನ ಆಸ್ತಿ ಎಲ್ಲವನ್ನಾದರೂ ಕೊಟ್ಟು ಪ್ರಾಣವನ್ನು ಕಾಪಾಡಿಕೊಳ್ಳಬೇಕೆಂದು ನೋಡುತ್ತಾರೆ. ಆದ್ದರಿಂದ ಮನುಷ್ಯ ತನ್ನನ್ನು ತಾನು ಚೆನ್ನಾಗಿರುವ ಹಾಗೆ ನೋಡಿಕೊಳ್ಳುತ್ತಿರುತ್ತಾನೆ. ತನ್ನ ಪ್ರಾಣದ ಮೇಲೆ ತನಗೆ ಆಸೆ ಹೆಚ್ಚಾಗಿದೆ ಎಂದು ಹೇಳುತ್ತಿರುತ್ತಾರೆ. ತನ್ನ ಪ್ರಾಣವಿದ್ದರೇ ತಾನಿರುತ್ತೇನೆಂದು ತಿಳಿದು, ತನಗಾಗಿ ಯಾವ ದೇವರನ್ನಾದರೂ ಮುಗಿಯಬಲ್ಲನು, ಏನಾದರೂ ಮಾಡಬಲ್ಲನು. ಇದನ್ನು ಅನುಸರಿಸಿ ಜೀವಿಯು ತನ್ನನ್ನು ತಾನು ಹೆಚ್ಚಾಗಿ ಪ್ರೀತಿಸುತ್ತಾನೆಂದು ತಿಳಿಯುತ್ತದೆ. ವಾಕ್ಯದಲ್ಲಿ ನಿನ್ನಹಾಗೆ ನಿನ್ನ ಪಕ್ಕದವನನ್ನು ಪ್ರೀತಿಸಬೇಕೆಂದು ಅಂದಿದ್ದಾರೆ. ನಿನ್ನ ಹಾಗೆ ಅಂದರೆ ನೀನು ಹೇಗೆ ಚೆನ್ನಾಗಿರಬೇಕೆಂದು ಕೋರಿಕೊಳ್ಳುವೆಯೋ, ಸಾವಿನಿಂದ ನಿನ್ನನ್ನು ದೂರವಾಗಿ ಇರುವಂತೆ ನಿನ್ನ ಪ್ರಾಣದ ಮೇಲೆ ಎಷ್ಟು ಶ್ರದ್ಧೆ ಹೊಂದಿದ್ದೀಯೋ ಹಾಗೆಯೇ ನಿನ್ನ ಪಕ್ಕದವನನ್ನು ಪ್ರೀತಿಸಬೇಕೆಂದು ಹೇಳಿದ್ದಾರೆ.

ಪಕ್ಕದವನು ಎಂದರೆ ಏನು? ಎಂದು ಆಲೋಚಿಸಿದರೇ ಇಹಪರ ಎಂಬ ಜೋಡಿ ಪದಗಳನ್ನು ಆಗಾಗ ನಾವೇ ಅನ್ನುವುದಾಗಲೀ, ಕೇಳುವುದಾಗಲೀ ನಡೆಯುತ್ತಿರುತ್ತದೆ. ಇಹ ಎಂದರೇ ನಾನು ಎಂದು ಅರ್ಥ, ಪರ ಎಂದರೆ ನನ್ನ ಪಕ್ಕದವನು ಎಂದು ಅರ್ಥ. ಚೆನ್ನಾಗಿ ಗಮನಿಸಿದರೇ ಪರ ಎಂದರೆ ಪಕ್ಕದ ಮನೆಯವನು ಎಂದು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಾರೆ. ಅದು ತಪ್ಪೆಂದು, **ನಿನ್ನ ಸಮೀಪದಲ್ಲಿರುವವನನ್ನೇ ಪಕ್ಕದವನೆಂದು** ಹೇಳುವುದು ನಡೆಯುತ್ತಿದೆ ಎಂದು ತಿಳಿಯಬೇಕು. ಇಹ, ಪರ ಎಂದು ಎರಡು ಜೋಡಿ

ಪದಗಳಿರುವ ಹಾಗೆ, ಅಕ್ಕ ಪಕ್ಕ ಎಂಬ ಎರಡು ಜೋಡಿ ಪದಗಳು ಇವೆ. ಇಹ ಲೋಕ ಪರಲೋಕ ಎಂದಾಗ ನಾನಿರುವ ಲೋಕವೆಂದೂ, ನಾನಿರುವುದಕ್ಕಿಂತ ಬೇರೆಯಾಗಿರುವ ಲೋಕವು ಎಂದು ಅರ್ಥ ಬರುವುದು. ಹಾಗೆಯೆ ಅಕ್ಕದ ಮನೆ, ಪಕ್ಕದ ಮನೆ ಎಂದರೆ ನಾನಿರುವ ಮನೆ, ನಾನಿರುವ ಮನೆಯ ಪಕ್ಕದ ಮನೆ ಎಂದು ಹೇಳಬಹುದು. ಅಕ್ಕಪಕ್ಕ ಎಂದಾಗ ನಾನು ನನ್ನ ಪಕ್ಕದವನು ಎಂದು ಹೇಳಬೇಕು. ಇಲ್ಲಿ ವಾಕ್ಯದಲ್ಲಿ ನಿನ್ನ ಹಾಗೆ ನಿನ್ನ ಪಕ್ಕದವನನ್ನು ಎಂದಾಗ ನಿನಗೆ ನಿನ್ನ ಮೇಲೆ ಇರುವಷ್ಟು ಪ್ರೇಮದಿಂದ ಪಕ್ಕದವನನ್ನು ಪ್ರೀತಿಸಬೇಕೆಂದು ಅರ್ಥ ಬರುತ್ತದೆ. ವಾಕ್ಯದ ಪ್ರಕಾರ ನೋಡಿಕೊಳ್ಳುವುದಾದರೇ ನಿನಗೆ ಪಕ್ಕದವನು ಯಾರಿದ್ದಾರೆಂದು ನೋಡಿದರೇ ಶರೀರದಲ್ಲಿ ನಿನ್ನ ಪಕ್ಕದಲ್ಲೇ ಇರುವವನು ನಿನ್ನ **ಆತ್ಮ** ಹೊರತು ಮತ್ತೊಬ್ಬನು ಇಲ್ಲ. ನೀನು ಜೀವಾತ್ಮನಾದರೆ ನಿನ್ನ ಹಾಗೆ ಆತ್ಮನಾಗಿರುವವನು ಒಬ್ಬನೇ, ಆತನೇ ಎರಡನೆಯ ದೇವರಾದ ಆತ್ಮ. ಮೊದಲ ದೇವರು ಎಲ್ಲರಿಗೂ ಅತೀತನಾಗಿ, ಯಾರಿಗೂ ತಿಳಿಯದ ವಿಧವಾಗಿ ಇದ್ದಾನೆ. ಆದ್ದರಿಂದ ಆತ್ಮಗಳಾಗಿ ಇರುವವರು ಮೂವರೇ ಆದರೇ ಅದರಲ್ಲಿ ನೀನಲ್ಲದೆ ಉಳಿದವರು ಇಬ್ಬರೇ ಇದ್ದಾರೆ. ಅವರಲ್ಲಿ ಎಲ್ಲದಕ್ಕೂ ಅತೀತನು, ಒಂದುಕಡೆ ಇಲ್ಲದೇ ಎಲ್ಲೆಡೆ ವ್ಯಾಪಿಸಿರುವವನು ಆಗಿರುವ ಪರಮಾತ್ಮನನ್ನು ಪಕ್ಕದವನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ನೀನಲ್ಲದೇ ನಿನ್ನ ಹಾಗೆ ಇರುವ ಆತ್ಮಗಳು ಎರಡಾದರೂ, ಅದರಲ್ಲಿ ಪರಮಾತ್ಮನನ್ನು ಬಿಟ್ಟರೆ ಉಳಿದ ಆತ್ಮ ಒಂದೇ ನಿನ್ನ ಪಕ್ಕದವನಾಗಿ ಇದ್ದಾನೆ. ನಿನ್ನ ಹಾಗೆ ಪುರುಷನಾದವನು ಆತ್ಮ, ಪರಮಾತ್ಮ ಹೊರತು ಉಳಿದೆಲ್ಲವೂ ಸ್ತ್ರೀ ಸ್ವರೂಪವಾದ ಪ್ರಕೃತಿಯೇ ಇದೆ.

ನಿನ್ನ ಹಾಗೆ ಪುರುಷ ಸ್ವರೂಪವಾದವನು ಆತ್ಮ ಒಬ್ಬನೇ ಇದ್ದಾನೆ. ಆದ್ದರಿಂದ ನಿನ್ನ ಪಕ್ಕದವನನ್ನು ಆತ್ಮನಾದ ದೇವರೆಂದೇ ಹೇಳಬೇಕು. ಮೊದಲ ದೇವರಾದ ಪರಮಾತ್ಮನನ್ನು ಯಾರೂ ಆರಾಧಿಸಲಾರರು. ಆತನು ಸರ್ವ ಧರ್ಮಗಳಿಗೂ ಅತೀತನು. ಆತನು ಆರಾಧನೆಗಳಿಗೆ ಅತೀತನು, ಯಾರೊಂದಿಗೂ ಸಂಬಂಧ ಇಲ್ಲದವನು. ಆತನನ್ನು ಆರಾಧಿಸುವುದಕ್ಕೆ ಯಾರೂ ಅರ್ಹರಲ್ಲ.

ಆದ್ದರಿಂದ ಎಲ್ಲಾ ವಿಧಗಳಲ್ಲಿ ಆರಾಧಿಸಲು ಅರ್ಹನಾದವನು ಆತ್ಮವೇಯೆಂದು ಮೂರು ದೈವಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. **"ಈತನೇ ನಿಮ್ಮ ಅಲ್ಲಾಹ್, ಈತನನ್ನೇ ನೀವು ಆರಾಧಿಸಿರಿ"** ಎಂದು ಅಂತಿಮ ದೈವಗ್ರಂಥದಲ್ಲಿ ಆತ್ಮನನ್ನು ಕುರಿತು ಅನೇಕ ಬಾರಿ ಹೇಳಿದ್ದಾನೆ. ಸೂರಾ 6 ರಲ್ಲಿ, 102ನೇ ಆಯತ್‌ನಲ್ಲಿಯು, ಸೂರಾ 3 ರಲ್ಲಿ, 18ನೇ ಆಯತ್‌ನಲ್ಲಿಯು, ಸೂರಾ 16 ರಲ್ಲಿ ಆಯತ್ 51 ರಲ್ಲಿಯು ಈ ವಿಷಯವು ಇದೆ. ನಿನ್ನ ಹಾಗೆ ನಿನ್ನ ಪಕ್ಕದವನಾದ ಆತ್ಮನನ್ನು ಇಷ್ಟನಾಗಿ ನೋಡಿಕೊಳ್ಳುವುದು ಎಂಬ ಎರಡು ಆಜ್ಞೆಗಳು ಧರ್ಮಶಾಸ್ತ್ರದಲ್ಲಿ ಮುಖ್ಯವಾದವುಗಳಾಗಿ ಇವೆ. **ಪ್ರವಕ್ತರಾದ ಗುರುಗಳಿಗು, ಬೋಧಕರಿಗು ಮುಖ್ಯ ಧರ್ಮವಾಗಿ ಮನುಷ್ಯ ಆತ್ಮನನ್ನು ಆರಾಧಿಸುವುದೇ** ಎಂದು ತಿಳಿಯಬೇಕು. ಏಸುವನ್ನು ಒಬ್ಬ ಧರ್ಮಶಾಸ್ತ್ರೋಪದೇಶಕನು, ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಧರ್ಮವು ಯಾವುದು ಎಂದು ಕೇಳಿದಾಗ ಅದಕ್ಕೆ ಸರಿಯಾದ ಸಮಾಧಾನವಾಗಿ ಈ ವಾಕ್ಯವನ್ನು ಹೇಳಿದ್ದಾನೆ. ಈ ವಾಕ್ಯದಿಂದ ನೀವು ಯಾರನ್ನು ಆರಾಧಿ ಸುತ್ತಿದ್ದೀರೋ ಒಂದು ಬಾರಿ ಹಿಂದಿರುಗಿ ನೋಡಿಕೊಳ್ಳುವುದಕ್ಕೆ ಅವಕಾಶವಿದೆ.

**46. ಮತ್ತಾಯ ಸುವಾರ್ತೆ, 23ನೇ ಅಧ್ಯಾಯ, 8, 9, 10 ವಚನಗಳು.**

**8) ನೀವಾದರೇ ಬೋಧಕರೆಂದು ಕರೆಯಲ್ಪಡಬೇಡಿ, ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರೂ ಸಹೋದರರು.**

**9) ಮತ್ತು ಭೂಮಿ ಮೇಲೆ ಯಾರಿಗಾದರೂ ತಂದೆ ಎಂದು ಹೆಸರು ಇಡಬೇಡ. ಒಬ್ಬನೇ ನಿಮ್ಮ ತಂದೆ. ಆತನು ಪರಲೋಕ ದಲ್ಲಿದ್ದಾನೆ.**

**10) ಮತ್ತು ನೀವು ಗುರುಗಳೆಂದು ಕರೆಯಲ್ಪಡಬೇಡಿ, ಕ್ರೀಸ್ತ ಒಬ್ಬನೇ ನಿಮ್ಮ ಗುರು.**

ಎಲ್ಲಾದರೂ ಬೋಧಕನಾಗಿ ಇರುವವನನ್ನು ಕೆಲವರು ತಂದೆಯೆಂದು ಕರೆಯುತ್ತಿರುತ್ತಾರೆ. ಬೋಧಕರಾಗಿ ಇರುವ ಗುರುಗಳು ತಂದೆಯೊಂದಿಗೆ

ಸಮಾನವೆಂದು ಕೂಡಾ ಹೇಳುತ್ತಿರುತ್ತಾರೆ. ಅದು ಸತ್ಯವಾದರೂ ಮನುಷ್ಯ ಆದವನು ಯಾರಾದರೂ ಬೋಧಕನೆಂದು ಕರೆಯಲ್ಪಡಬಾರದು ಎಂದು ಹೇಳುತ್ತಾ ನೀವು ಬೋಧಕರೆಂದು ಕರೆಯಲ್ಪಡಬೇಡಿ, ಒಬ್ಬನೇ ನಿಮ್ಮ ಬೋಧಕನು ಎಂದು ಹೇಳಿದ್ದಾರೆ. ನೀವೆಲ್ಲರೂ ಸಹೋದರರೇ ಎಂದು ಹೇಳಿದ್ದಾರೆ. ಬೋಧಕನು ಎಂದರೇ ಬೋಧಿಸುವವನು ಎಂದು ಅರ್ಥ. ಒಂದು ವಿಷಯವನ್ನು ಮತ್ತೊಬ್ಬರಿಗೆ ಹೇಳುವವನನ್ನು ಬೋಧಕನು ಎಂದರೂ ಇಲ್ಲಿ ಮಾತ್ರ ದೈವಜ್ಞಾನವನ್ನು ಬೋಧಿಸುವವರನ್ನು ಕುರಿತು ಹೇಳಿದ್ದಾರೆ. ದೈವಜ್ಞಾನವನ್ನು ಬೋಧಿಸುವವನು ಒಬ್ಬನೇಯೆಂದು ಹೇಳಿದ್ದಾರೆ. ಇದನ್ನು ಅನುಸರಿಸಿ ದೈವಜ್ಞಾನವು ಒಬ್ಬನಿಗೆ ಹೊರತುಪಡಿಸಿ ಉಳಿದವರಿಗೆ ಯಾರಿಗೂ ತಿಳಿಯದೆಂದು ಹೇಳಬಹುದು. ಉಳಿದವರಿಗೆ ಯಾಕೆ ತಿಳಿದಿಲ್ಲ? ತಿಳಿದ ಒಬ್ಬನು ಯಾರು? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನೋಡಿದರೇ ಈ ವಿಧವಾಗಿ ಇದೆ.

ದೇವರ ಜ್ಞಾನವು ದೇವರಿಗೆ ಹೊರತುಪಡಿಸಿ ಯಾರಿಗೂ ತಿಳಿದಿಲ್ಲವೆಂದು ಹೇಳಲ್ಪಟ್ಟಿದೆ. ಹಾಗೆ ಹೇಳಿರುವ ದೈವಗ್ರಂಥಗಳಲ್ಲಿಯೇ ಮತ್ತೊಂದು ಮಾತನ್ನು ಕೂಡಾ ಹೇಳಿದ್ದಾರೆ. ಅದೇನೆಂದರೇ! ದೇವರ ಜ್ಞಾನವನ್ನು ದೇವರು ಯಾವ ಮಾನವನ ಮೇಲೆ ಪ್ರಸರಿಸಲಿಲ್ಲ ಎಂದು ಹೇಳಿದ್ದಾರೆ. ಅಂದರೇ ದೇವರ ಜ್ಞಾನವು ಯಾವ ಮನುಷ್ಯನಿಗೂ ತಿಳಿದಿಲ್ಲವೆಂದೇ ಅಲ್ಲವೆ ಅರ್ಥ. ಆದ್ದರಿಂದ ಯಾರೇ ಆಗಲೀ ದೇವರ ಜ್ಞಾನವನ್ನು ಬೋಧಿಸಲು ಸಾಧ್ಯವಿಲ್ಲ. ಆದ್ದರಿಂದ ನೀವು ಬೋಧಕನೆಂದು ಕರೆಯಲ್ಪಡಬೇಡ ಎಂದು ವಾಕ್ಯದಲ್ಲಿ ಹೇಳಿದ್ದಾರೆ. ದೇವರ ಜ್ಞಾನವನ್ನು ದೇವರು ಒಬ್ಬನೇ ಬೋಧಿಸಬಲ್ಲನು. ಆದ್ದರಿಂದ ನಿಮ್ಮ ಬೋಧಕನು ಒಬ್ಬನೇಯೆಂದು, ಆತನೇ ದೇವರೆಂದು ವಾಕ್ಯದಲ್ಲಿ ಹೇಳಿದ್ದಾರೆ. ಮನುಷ್ಯ ಬೋಧಕನಲ್ಲ ಆದರೇ ಮನುಷ್ಯರೆಲ್ಲರೂ ಒಬ್ಬರಿಗೊಬ್ಬರು ಸಹೋದರರಾಗಿ ಇದ್ದಾರೆಂದು ಹೇಳುವುದಾಗಿದೆ.

ಪ್ರತಿ ಮನುಷ್ಯನಿಗೂ ಭೌತಿಕವಾದ ತಾಯಿತಂದೆ ಇದ್ದಾರೆ. ಚಿಕ್ಕ ಮಗುವಿದ್ದಾಗಿನಿಂದ ಕಾಣಿಸುವ ತಾಯಿತಂದೆಯರನ್ನೇ ಎಲ್ಲರೂ ಪೂರ್ತಿಯಾಗಿ

ನನ್ನ ತಾಯಿತಂದೆಯರೆಂದು ನಂಬಿದ್ದಾರೆ. ಪ್ರತ್ಯಕ್ಷವಾಗಿ ಕಾಣಿಸುವ ತಾಯಿತಂದೆಯರನ್ನು ಗೌರವಿಸಬೇಕೆಂದು ಬಹಳಜನ ಹಿರಿಯರು ಹೇಳುತ್ತಿರುತ್ತಾರೆ. ಹಾಗೆಯೇ ಕಾಣಿಸುವ ತಾಯಿತಂದೆಯರನ್ನು ಎಲ್ಲರೂ ಗೌರವಿಸುತ್ತಿರುತ್ತಾರೆ. ಕಾಣಿಸುವ ತಾಯಿತಂದೆಯರು ಹೊರತು ಇತರರು ತಾಯಿಯಾಗಲೀ, ತಂದೆಯಾಗಲೀ ಇಲ್ಲವೆಂದು ಹೇಳಬಹುದು. ಇದೆಲ್ಲವೂ ಪ್ರಪಂಚ ಸಂಬಂಧವು. ದೈವಿಕ ಸಂಬಂಧವಾಗಿ ಪ್ರತಿ ಮನುಷ್ಯನಿಗೂ ಕಾಣಿಸದ, ತಿಳಿಯದ ತಾಯಿತಂದೆಯರು ಇದ್ದಾರೆ. ನಿಜವಾದ ತಾಯಿತಂದೆಯರು ಕಾಣಿಸುವವರಾ? ಅಥವಾ ಕಾಣಿಸದವರಾ! ಎಂದು ಪ್ರಶ್ನಿಸಿಕೊಂಡು ನೋಡಿದರೇ ಕಾಣಿಸದವವರೇ ನಿಜವಾದ ತಾಯಿತಂದೆಯರೆಂದು ತಿಳಿಯುತ್ತಿದೆ. ಹಾಗೆ ಏಕೆ ಹೇಳುತ್ತಿದ್ದೇವೆಂದರೇ! ಮನುಷ್ಯ ಹುಟ್ಟುವುದಕ್ಕೆ ತಂದೆಯೇ ಬೀಜದಾತನಾಗಿ ಇರುತ್ತಾನೆ. ಅದರ ಪ್ರಕಾರ **"ಕಾಣಿಸದ ತಂದೆಯಾಗಿ ಇರುವ ದೇವರೇ (ಆತ್ಮನೇ) ಸರ್ವಜೀವರಾಶಿಗಳಿಗು ಬೀಜದಾತನಾಗಿ ಇದ್ದಾನೆ."** ಆದ್ದರಿಂದ ಕಾಣಿಸದ ತಂದೆಯನ್ನೇ ನಿಜವಾದ ತಂದೆಯೆಂದು ಹೇಳಬೇಕಾಗಿ ಬರುತ್ತಿದೆ. ನಮಗೆ ತಿಳಿದರೂ, ತಿಳಿಯದಿದ್ದರೂ ನಮಗೆ ನಿಜವಾದ ತಂದೆ ಆತ್ಮವೇಯೆಂದು ತಿಳಿಯುತ್ತಿದೆ. ಆದ್ದರಿಂದ **"ತಂದೆಯೆಂದು ಹೆಸರಿಟ್ಟು ಯಾರನ್ನೂ ಕರೆಯಬೇಡ, ಒಬ್ಬನೇ ನಿಮ್ಮ ತಂದೆ. ಆತನು ಕಾಣಿಸದ ಲೋಕದಲ್ಲಿ ಕಾಣಿಸದೆ ಇದ್ದಾನೆಂದು"** ಹೇಳಿದ್ದಾರೆ.

ಕಾಣಿಸುವ ಬೋಧಕನು ನಿಜವಾದ ಬೋಧಕನಲ್ಲ ಎನ್ನುವಂತೆ, ಕಾಣಿಸುವ ತಂದೆ ನಿಜವಾದ ತಂದೆ ಅಲ್ಲ ಎನ್ನುವಂತೆ, ಕಾಣಿಸುವ ಗುರುವು ಕೂಡಾ ನಿಜವಾದ ಗುರುವು ಅಲ್ಲವೆಂದು ವಾಕ್ಯದಲ್ಲಿ ಹೇಳಿದ್ದಾರೆ. ಬಹಳ ಜನ ಏನೋ ಸ್ವಲ್ಪ ಬೋಧಿಸುತ್ತಾ ಗುರುಗಳೆಂದು ಕರೆಯಿಸಿಕೊಳ್ಳುತ್ತಿರುತ್ತಾರೆ. ಹಾಗೆ ಕರೆಯಿಸಿಕೊಳ್ಳುವುದರಿಂದ, ನೀವು ಗುರುಗಳಾಗಿ ಚಲಾವಣೆ ಆಗುವುದರಿಂದ, ಯೋಗ್ಯತೆ ಇಲ್ಲದ ಪಾತ್ರವನ್ನು ಪೋಷಿಸಿದಂತಾಗುತ್ತದೆ. ಯಾವಾಗಾದರೂ ಆಗಲೀ ದೇವರು ಒಬ್ಬನೇ ಗುರುವಾಗಿ ಭೂಮಿ ಮೇಲಕ್ಕೆ ಬರಬಲ್ಲನು. ದೇವರು

ಮನುಷ್ಯನ ಹಾಗೆ ಅವತರಿಸಿದಾಗ ತಾನೇ ಗುರುವಾಗಿ ಇದ್ದು ಜ್ಞಾನವನ್ನು ಬೋಧಿಸುತ್ತಾನೆ. ಆದ್ದರಿಂದ **"ಭೂಮಿಮೇಲೆ ಮನುಷ್ಯನಾಗಿ ಹುಟ್ಟಿರುವ ದೇವರ ಅವತಾರವೇ ನಿಜವಾದ ಗುರುವು"** ಎಂದು ತಿಳಿಯಬೇಕು.

**(47) ಮತ್ತಾಯ ಸುವಾರ್ತೆ, 23ನೇ ಅಧ್ಯಾಯ, 15ನೇ ವಚನ.**

**(15) ವೇಷಧಾರಿಗಳಾದ ಶಾಸ್ತ್ರಿಗಳೇ! ಪರಿಸಯ್ಯರೇ! ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವುದಕ್ಕೆ ನೀವು ಸಮುದ್ರವನ್ನು, ಭೂಮಿಯನ್ನು ಸುತ್ತಿ ಬರುತ್ತೀರಿ. ಆತನು ಭೇಟಿಯಾದಾಗ ಆತನನ್ನು ನಿಮಗಿಂತ ಎರಡರಷ್ಟು ನರಕ ಪಾತ್ರನನ್ನಾಗಿ ಮಾಡುತ್ತೀರಿ.**

ಮೊದಲು ಕಲಿಯುಗ ಮೂರು ಸಾವಿರ ವರ್ಷಗಳು ಕಳೆಯುವವರೆಗು ಮತವೆನ್ನುವುದು ಇಲ್ಲ. ಎರಡು ಸಾವಿರ ವರ್ಷಗಳ ಪೂರ್ವವು ಕ್ರೈಸ್ಥವವು ಹುಟ್ಟಿದಾಗ ಮೊದಲು ಸಂಘಗಳ ಹಾಗೆ, ಗುಂಪುಗಳು ಗುಂಪುಗಳಾಗಿದ್ದ ಕ್ರೈಸ್ಥವರು ಕೊನೆಗು ತಮ್ಮದು 'ಕ್ರೈಸ್ಥವ ಸಮಾಜ'ವಾಗಿ ಹೇಳಿಕೊಂಡಿದ್ದಾರೆ. ಸಮಾಜವಾಗಿ ಇದ್ದ ಅವರು ಸ್ವಲ್ಪ ಕಾಲಕ್ಕೆ ತಮ್ಮದು 'ಕ್ರೈಸ್ಥವ ಮತ' ಎಂದು ಹೇಳಿಕೊಂಡಿದ್ದಾರೆ. ಈ ವಿಧವಾಗಿ ಮೊದಲು 'ಮತವು' ಎನ್ನುವುದು ಹುಟ್ಟಿದೆ. ತಮ್ಮದು ಕ್ರೈಸ್ಥ ಮತ ಎಂದು ಹೇಳಿಕೊಂಡ ನಂತರ ತಮ್ಮ ಮತವನ್ನು ವಿಸ್ತರಿಸಿಕೊಳ್ಳಬೇಕೆಂದು ಪ್ರಯತ್ನಿಸಿದ್ದಾರೆ. ಹಾಗೆ ಕ್ರೈಸ್ಥವವನ್ನು ಒಂದು ಮತವಾಗಿ ಹೇಳಿಕೊಂಡ ನಂತರ ಉಳಿದವರು ಕೆಲವರು ತಾವು ಹೇಳುವ ಬೋಧನೆಗಳನ್ನು ಅನುಸರಿಸಿ ತಮ್ಮದು ಒಂದು ಮತವಾಗಿ ಹೇಳಿಕೊಳ್ಳುತ್ತಾ ಸಾಗಿದ್ದಾರೆ. ಹೀಗೆ ಮತಗಳು ಒಂದಕ್ಕೊಂದು ತಯಾರಾಗುತ್ತಾ ಹೋಗಿವೆ. ಅತಿ ಶೀಘ್ರವಾಗಿ ಭೂಮಿ ಮೇಲೆ ಹನ್ನೆರಡು ಮತಗಳು ತಯಾರಾಗಿವೆ. ಮತಗಳು ತಯಾರಾದ ನಂತರ ತಮ್ಮ ತಮ್ಮ ಮತಗಳನ್ನು ಪ್ರಚಾರ ಮಾಡಿಕೊಳ್ಳುವುದರಲ್ಲಿ ಕೆಲವರು ಮಗ್ನರಾಗಿ ಹೋಗಿದ್ದಾರೆ. ಇತರರನ್ನು ತಮ್ಮ ಮತಗಳಲ್ಲಿ ಸೇರಿಸಿಕೊಳ್ಳುವುದಕ್ಕೆ ಸಮುದ್ರವನ್ನು, ಭೂಮಿಯನ್ನು ಸುತ್ತಿ ಬಂದು ಸಿಕ್ಕವನನ್ನು ಸಿಕ್ಕ ಹಾಗೆ ತಮ್ಮ ಮತದಲ್ಲಿ ಸೇರಿಸಿಕೊಳ್ಳುತ್ತಿದ್ದರು.

ಮತ ಎನ್ನುವುದು ಪ್ರಜೆಗಳ ಇಷ್ಟದಿಂದ ತಯಾರಾಗಿರುವುದೇ ಹೊರತು, ದೇವರ ಜ್ಞಾನದಿಂದ ತಯಾರಾಗಿರುವುದಲ್ಲ. ಪ್ರಜೆಗಳ ಮನೋಭಾವಗಳೊಂದಿಗೆ ಕೂಡಿಕೊಂಡಿರುವ ಮತಗಳಲ್ಲಿ ದೈವಜ್ಞಾನವಿರುವಂತೆ ಕಾಣಿಸಿದರೂ, ಅದರಲ್ಲಿ ದೇವರು ಹೇಳಿರುವ ಜ್ಞಾನಕ್ಕೆ ವಿರುದ್ಧವಾದ ಜ್ಞಾನವಿರುತ್ತಿತ್ತು. ಆದ್ದರಿಂದ ಮತದೊಂದಿಗೆ ಸಂಬಂಧವಿಲ್ಲದೇ ದೈವಜ್ಞಾನವನ್ನು, ದೈವಗ್ರಂಥಗಳನ್ನು ಆಶ್ರಯಿಸಿದವನಿಗೆ ದೇವರ ಒಂದು ಧರ್ಮಗಳು, ದೇವರ ಜ್ಞಾನವು ತಿಳಿಯುತ್ತಿತ್ತು. ಹಾಗಲ್ಲದೆ ಮತದೊಂದಿಗೆ ಸಂಬಂಧಪಟ್ಟು ನನ್ನದು ಇಂತಹ ಮತವೆಂದು ಹೇಳಿಕೊಳ್ಳುವವನಿಗೆ ಮಾಯೆ ಜ್ಞಾನವು ತಿಳಿಯುತ್ತಿತ್ತು. ಅದರಿಂದ ಮನುಷ್ಯ ಮತವನ್ನು ಸ್ವೀಕರಿಸಿದರೇ ನರಕ ಪಾತ್ರನಾಗಿ ತಯಾರಾಗುತ್ತಿದ್ದಾನೆ. ಮತ ವಿಲ್ಲದವನು ಪರಲೋಕ ರಾಜ್ಯದಲ್ಲಿ ಸೇರುವುದಕ್ಕೆ ಅರ್ಹನಾಗುತ್ತಿದ್ದಾನೆ.

### (48) ಮತ್ತಾಯ ಸುವಾರ್ತೆ, 24ನೇ ಅಧ್ಯಾಯ, 35ನೇ ವಚನ.

## (35) ಆಕಾಶ ಭೂಮಿಯು ಗತಿಸುವುದು ಆದರೇ, ನನ್ನ ಮಾತುಗಳು ಎಂದಿಗೂ ಗತಿಸುವುದಿಲ್ಲ.

ಪರಮಾತ್ಮನಾದ ದೇವರು ಮಾತನಾಡುವವನಲ್ಲ. ಆತ್ಮನಾಗಿ ಶರೀರದಲ್ಲಿ ಇರುವವನು ಮಾತನಾಡಬಲ್ಲನು. ಆತ್ಮನಾದ ದೇವರು ಎರಡನೆಯ ಸೃಷ್ಟಿಕರ್ತನಾಗಿ, ಎರಡನೆಯ ದೇವರಾಗಿ ಹೇಳಲ್ಪಡುತ್ತಿದ್ದಾನೆ. ಶರೀರದಲ್ಲಿ ಆತ್ಮನಾಗಿ ಇರುವವನು ಶರೀರದಿಂದಲೇ ಮಾತನಾಡುತ್ತಿದ್ದಾನೆ. ಆತ್ಮನಾದ ಎರಡನೆಯ ದೇವರು ಮನುಷ್ಯನಿಂದ ಎಷ್ಟೋ ಜ್ಞಾನವನ್ನು ಬೋಧಿಸುತ್ತಿದ್ದಾನೆ. ಹಾಗೆ ಬೋಧಿಸಿರುವ ಜ್ಞಾನವು ಮಾತುಗಳ ರೂಪದಲ್ಲಿಯೇ ಇರುತ್ತದೆ. ಆತ್ಮ ಶರೀರದಿಂದ ಬೋಧನೆಯ ರೂಪದಲ್ಲಿ ಹೇಳಿರುವ ಮಾತುಗಳು ಆಕಾಶವು, ಭೂಮಿ ಗತಿಸಿ ಹೋದರೂ ಆತನ ಮಾತುಗಳು ಗತಿಸುವುದಿಲ್ಲ ಎಂದು ಹೇಳುತ್ತಿದ್ದಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! **"ಆಕಾಶ, ಭೂಮಿ ಗತಿಸುವವು ಆದರೇ ನನ್ನ ಮಾತುಗಳು ಯಾವುದೂ**

**ಗತಿಸುವುದಿಲ್ಲ"** ಎಂದು ಹೇಳಿದ್ದಾರೆ. ಆದರೇ ಆಕಾಶ, ಭೂಮಿ ಎಂದಿಗೂ ಗತಿಸುವವಲ್ಲ ಎಂದು ಹೇಳಬಹುದು. ಇಲ್ಲಿ ವಾಕ್ಯದಲ್ಲಿ ಗತಿಸದ ಆಕಾಶವನ್ನು, ಭೂಮಿಯನ್ನು ಗತಿಸುವುದು ಎಂದು ಹೇಳಿದ್ದಾರೆ. ಆದ್ದರಿಂದ ಈ ವಾಕ್ಯದಲ್ಲಿ ಹೇಳಿರುವ ಆಕಾಶ, ಭೂಮಿ ಎರಡೂ ನಮಗೆ ಕಾಣಿಸುವ ಆಕಾಶ ಭೂಮಿ ಅಲ್ಲವೆಂದು ತಿಳಿಯಬೇಕು. ವಾಕ್ಯದಲ್ಲಿ ಹೇಳಿರುವ ಆಕಾಶವು, ಭೂಮಿ ನಾಶವಾಗುವವಾಗಿ ಇವೆ. ಎಂದಿಗೂ ನಾಶವಾಗದ ಭೂಮಿ, ಆಕಾಶಗಳು ಒಂದು ವಿಧವಾದರೇ, ಎಂದಾದರೂ ಪೂರ್ತಿ ನಾಶವಾಗುವ ಭೂಮಿ ಆಕಾಶಗಳು ಮತ್ತೊಂದು ವಿಧವಾಗಿ ಇವೆ. ಮನುಷ್ಯ ಶರೀರವಾಗಿ ಇರುವ ಪ್ರಕೃತಿಯಲ್ಲಿ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎರಡು ಇವೆ. ಶರೀರ ರೂಪದಲ್ಲಿ ಇರುವ ಮೊದಲನೆಯದಾದ ಆಕಾಶವು ಕೊನೆಯದಾದ ಭೂಮಿ ಮಧ್ಯದಲ್ಲಿರುವ ಗಾಳಿ, ಅಗ್ನಿ, ನೀರು ಎಲ್ಲವೂ ನಾಶವಾಗುವವಾಗಿಯೇ ಇವೆ. ಮನುಷ್ಯ ಧರಿಸಿರುವ **ಶರೀರವು ನಾಶವಾಗುವುದು** ಆದರೇ, ಮನುಷ್ಯ ನೊಳಗಿನಿಂದ ಮಾತನಾಡಿರುವ **ಜ್ಞಾನವು ಎಂದಿಗೂ ನಾಶವಾಗುವುದಿಲ್ಲವೆಂದು** ವಾಕ್ಯದಲ್ಲಿ ಹೇಳಿದ್ದಾರೆ.

**(49) ಮತ್ತಾಯ ಸುವಾರ್ತೆ, 24ನೇ ಅಧ್ಯಾಯ, 42ನೇ ವಚನ.**

**(42) "ಆದ್ದರಿಂದ ಯಾವ ದಿನದಂದು ನಿಮ್ಮ ಪ್ರಭು ಬರುತ್ತಾನೋ ನಿಮಗೆ ತಿಳಿದಿಲ್ಲ ಆದುದರಿಂದ ಎಚ್ಚರಿಕೆಯಾಗಿ ಇರಿ."**

ಭೂಮಿ ಮೇಲೆ ದೇವರ ಧರ್ಮಗಳಿಗೆ ಯಾವಾಗ ಮುಪ್ಪು ಏರ್ಪಟ್ಟು, ಸಾತಾನ್ ಧರ್ಮಗಳು ಹೆಚ್ಚಾಗುತ್ತಿವೆಯೋ, ಆಗ ದೇವರು ತನ್ನ ಅಂಶವನ್ನು ಭೂಮಿ ಮೇಲಕ್ಕೆ ಕಳುಹಿಸಿ ತನ್ನ ಆಜ್ಞೆಗಳಿಗೆ (ಧರ್ಮಗಳಿಗೆ) ಆತಂಕ ಉಂಟಾಗದಂತೆ ಮಾಡಿಕೊಳ್ಳುತ್ತಿರುತ್ತಾನೆ. ಹಾಗೆ ಕೆಲಸ ಬಿದ್ದಾಗ ದೇವರೇ ಮನುಷ್ಯನಾಗಿ ಬರಬೇಕಾಗಿದೆ. ಆ ವಿಧವಾಗಿ ಬಂದವನೇ ದ್ವಾಪರ ಯುಗದಲ್ಲಿ ಕೃಷ್ಣನು, ಕಲಿಯುಗದಲ್ಲಿ ಏಸುಪ್ರಭು. ವಿಶೇಷವೇನೆಂದರೇ ಅವರು ಬಂದುಹೋದ ನಂತರ ಅವರನ್ನು ಗುರುತಿಸುತ್ತಿದ್ದೇವೆ ಆದರೇ, ಅವರು ಬಂದಾಗ ಕಿಂಚಿತ್ತಾದರೂ

ಇವರು ಇಂಥವರೆಂದು ಗುರುತಿಸಲಾರದೇ ಹೋಗಿದ್ದೇವೆ. ದೇವರೇ ಪ್ರಭುವಾಗಿ ಬಂದ ಸಮಯದಲ್ಲಿ ಯಾವ ಒಬ್ಬರೂ ಸಹ ಗುರುತಿಸಲಾರದೇ ಹೋಗಿದ್ದಾರೆ. ಆತನ ಮಹಿಮೆಗಳು ನೋಡಿದವರು ಕೂಡಾ ಆತನು ದೊಡ್ಡವನೆಂದು ಅಂದುಕೊಂಡಿದ್ದಾರೆ ಹೊರತು, ಸಾಕ್ಷಾತ್ತು ದೇವರೆಂದು ತಿಳಿಯಲಾರದೇ ಹೋಗಿದ್ದಾರೆ. ದ್ವಾಪರ ಯುಗದಲ್ಲಿ ಕೃಷ್ಣನು **"ನಾನು ಭೂಮಿ ಮೇಲೆ ಧರ್ಮಗಳಿಗೆ ಗ್ಲಾನಿ ಉಂಟಾದಾಗ ಬರುತ್ತೇನೆಂದು"** ಹೇಳಿ ಹೋಗಿದ್ದಾನೆ ಹಾಗೆಯೇ ಪ್ರಭುವಾಗಿ ಬಂದು ತನ್ನ ಧರ್ಮಗಳ ಕುರಿತು ಹೇಳಿ ಹೋಗಿದ್ದಾನೆ. ದ್ವಾಪರಯುಗದಲ್ಲಾಗಲೀ, ಕಲಿಯುಗದಲ್ಲಾಗಲೀ ಆತನು ತಿಳಿಸಿರುವ ಆಜ್ಞೆಗಳಲ್ಲಿ ಯಾವುದೇ ಬೇಧವಿರುವುದಿಲ್ಲ, ಆದರೇ ಹುಟ್ಟಿರುವ ಆಕಾರಗಳಲ್ಲಾಗಲೀ, ಹೆಸರಲ್ಲಾಗಲೀ, ಜೀವನದಲ್ಲಾಗಲೀ ಹೋಲಿಕೆ ಇಲ್ಲದೆ ಬೇಧಗಳಿರುತ್ತವೆ. ಆದ್ದರಿಂದ ಸಾತಾನು ಅವರಿಬ್ಬರೂ ಒಬ್ಬರೇಯೆಂದು ತಿಳಿಯುವುದಕ್ಕೆ ಸಾಧ್ಯವಾಗದೇ ಹೊರಗಿನ ಸ್ಥಿತಿಗತಿಗಳನ್ನು ತೋರಿಸಿ ಮಾನವರನ್ನು ಮೋಸ ಮಾಡಿ, ಬಂದವನನ್ನು ಗುರುತಿಸಲಾಗದಂತೆ ಮಾಡಿದೆ. ಬಂದವನು ಯಾರು, ಹಾಗೆಯೇ ಮುಂಬರುವವನು ಯಾರು, ಯಾವಾಗ ಬಂದು ಹೋಗಿದ್ದಾನೆ, ಯಾವಾಗ ಬರಬಲ್ಲನು ಎಂಬ ವಿವರವನ್ನು ತಿಳಿಯಬೇಕೆಂದರೇ ಮಾನವನಿಗೆ ಸ್ವಲ್ಪ ಜ್ಞಾನ ಅಗತ್ಯ. ಅಜ್ಞಾನದಲ್ಲಿ ಇರುವವರೆಗು ದೇವರ ಬರುವಿಕೆ ಆಗಲೀ, ದೇವರು ಬಂದಿದ್ದರಾಗಲಿ, ದೇವರು ಬಂದು ಹೋಗಿದ್ದರಾಗಲಿ ತಿಳಿಯುವುದಿಲ್ಲ. ಆದ್ದರಿಂದ ದೇವರ ಬರುವಿಕೆ ತಿಳಿಯಬೇಕೆಂದರೇ, ಆತನನ್ನು ಗುರುತಿಸಬೇಕೆಂದರೇ ಆತನಿಗೆ ಸಂಬಂಧಿಸಿದ **ಜ್ಞಾನ** ತಿಳಿದಿರಬೇಕು. ಪ್ರಸ್ತುತ ಕಾಲದಲ್ಲಿ ದೇವರ ಜ್ಞಾನವು ತಿಳಿಯದೇ ಹೋಗಿ ಸಾತಾನ್ ಜ್ಞಾನವು ತುಂಬಿ ಹೋಗಿದೆ. ಆದ್ದರಿಂದಲೇ ಮೇಲಿನ ವಾಕ್ಯದಲ್ಲಿ **"ಯಾವ ದಿನ ಪ್ರಭು ಬರುತ್ತಾನೋ ನಿಮಗೆ ತಿಳಿಯುವುದಿಲ್ಲ"** ಎಂದಿದ್ದಾರೆ. ಈ ವಾಕ್ಯದಲ್ಲಿಯೇ **"ಆತನನ್ನು ತಿಳಿಯಬೇಕೆಂದರೇ ಎಚ್ಚರಿಕೆಯಾಗಿ ಇರಿ"** ಎಂದು ಕೂಡಾ ಹೇಳಿದ್ದಾರೆ. **ಎಚ್ಚರಿಕೆ ಎಂದರೇ ಜ್ಞಾನ ತಿಳಿದಿರುವುದೆಂದು** ತಿಳಿಯಬೇಕು.

**(50) ಮತ್ತಾಯ ಸುವಾರ್ತೆ, 26ನೇ ಅಧ್ಯಾಯ, 26, 27, 28 ವಚನಗಳು.**

**(26) ಅವರು ಊಟ ಮಾಡುತ್ತಿರುವಾಗ ಏಸು ಒಂದು ರೊಟ್ಟಿಯನ್ನು ಹಿಡಿದುಕೊಂಡು ಅದನ್ನು ಆಶೀರ್ವದಿಸಿ ಮುರಿದು ತನ್ನ ಶಿಷ್ಯರಿಗೆ ಕೊಟ್ಟು "ನೀವು ತೆಗೆದುಕೊಂಡು ತಿನ್ನಿರಿ ಇದು ನನ್ನ ಶರೀರವೆಂದು" ಹೇಳಿದನು.**

**(27) ಮತ್ತು ಆತನು ಬಟ್ಟಲನ್ನು ಹಿಡಿದುಕೊಂಡು ಕೃತಜ್ಞತಾ ಸ್ತುತಿಗಳು ಸಲ್ಲಿಸಿ ಅವರಿಗೆ ಕೊಟ್ಟು ಇದರಲ್ಲಿರುವುದನ್ನು ನೀವೆಲ್ಲರೂ ಕುಡಿಯಿರಿ.**

**(28) "ಇದು ನನ್ನ ರಕ್ತ. ಅಂದರೇ ಪಾಪಕ್ಷಮಾಪಣೆ ನಿಮಿತ್ತ ಅನೇಕರಿಗಾಗಿ ಚಿಮ್ಮಿಸಲ್ಪಡುವ ನಿಬಂಧನ ರಕ್ತ."**

ಏಸು ಆತನಿಗಿರುವ ಹನ್ನೆರಡು ಮಂದಿ ಶಿಷ್ಯರು ಸೇರಿ ಊಟ ಮಾಡುತ್ತಿರುವಾಗ, ಏಸು ಒಂದು ರೊಟ್ಟಿಯನ್ನು ಹಿಡಿದುಕೊಂಡು ಅದನ್ನು ಆಶೀರ್ವದಿಸಿ, ಮುರಿದು ತನ್ನ ಶಿಷ್ಯರಿಗೆ ಕೊಟ್ಟು **"ನೀವು ತೆಗೆದುಕೊಂಡು ತಿನ್ನಿರಿ. ಇದು ನನ್ನ ಶರೀರವು"** ಎಂದು ಹೇಳಿದನು. ಅಷ್ಟೇ ಅಲ್ಲದೇ **"ಆತನು ಬಟ್ಟಲನ್ನು ಹಿಡಿದುಕೊಂಡು ಅದರಲ್ಲಿನ ದ್ರಾಕ್ಷ ರಸವನ್ನು ನೀವೆಲ್ಲರೂ ಕುಡಿಯಿರಿ, ಇದು ನನ್ನ ರಕ್ತ"** ಎಂದು ಹೇಳಿದನು. ಬಟ್ಟಲಿನಲ್ಲಿನ ರಸವನ್ನು ಕುರಿತು ಇದು ನನ್ನ ರಕ್ತ ಎಂದು ರಕ್ತವಾಗಿ ಹೋಲಿಸಿ ಹೇಳುವುದೇ ಅಲ್ಲದೇ, ರಕ್ತವನ್ನು ಕುರಿತು ವಿವರಿಸಿ ಹೇಳುತ್ತಾ **"ಪಾಪ ಕ್ಷಮಾಪಣೆ ನಿಮಿತ್ತ ಅನೇಕರಿಗಾಗಿ ಚಿಮ್ಮಿಸಲ್ಪಡುವ ನಿಬಂಧನ ರಕ್ತ"** ಎಂದು ಹೇಳಿದ್ದಾನೆ. ಏಸು ಹೇಳಿರುವುದು ಸರ್ವಸಾಧಾರಣ ಮಾತುಗಳ ಹಾಗೆ ಕಾಣಿಸಿದರೂ, ಆತನು ಹೇಳಿರುವ ಮಾತುಗಳ ಬೋಧನೆಗಳಲ್ಲಿ ಅತಿ ಮುಖ್ಯವಾದ ಮಾತುಗಳಾಗಿ ಊಟದ ಸಮಯದಲ್ಲಿ ಹೇಳಿರುವ ಮಾತುಗಳನ್ನು ಲೆಕ್ಕಿಸಬಹುದು. ಊಟದ ಸಮಯದಲ್ಲಿ ಹೇಳಿರುವ ಮಾತುಗಳಲ್ಲಿನ ಸಾರಾಂಶವನ್ನು ತಿಳಿಯದ ಕ್ರೈಸ್ಥರು ಈ ಮಾತುಗಳನ್ನು ದೊಡ್ಡದಾಗಿ ವಿವರಿಸಿ ಹೇಳಿಕೊಳ್ಳಲಿಲ್ಲ. ಮೇಲಾಗಿ **ಆತನು ಹೇಳಿರುವ**

**ವರ್ತಮಾನಕಾಲ ಮಾತನ್ನು ಕೆಲವರು ಭೂತಕಾಲ ಮಾತಾಗಿ, ಕೆಲವರು ಭವಿಷ್ಯತ್ತಿಗೆ ಸಂಬಂಧಿಸಿರುವ ಮಾತಾಗಿ ಹೇಳಿಕೊಳ್ಳುತ್ತಿದ್ದಾರೆ.**

ಏಸು ಒಂದು ಬಟ್ಟಲಲ್ಲಿ ದ್ರಾಕ್ಷ ರಸವನ್ನು ಕೊಟ್ಟು 'ಇದು ನನ್ನ ರಕ್ತ' ಎಂದು ಹೇಳಿದ್ದಾನೆ ಹೊರತು, ಶಿಲುಬೆ ಮೇಲೆ ಸೋರಿಸುವ 'ನನ್ನ ಶರೀರ ರಕ್ತ' ಎಂದು ಹೇಳಲಿಲ್ಲ. ಆದರೇ ಬಹಳ ಜನ ಕ್ರೈಸ್ಥವ ಬೋಧಕರು ಏಸು ಶಿಲುಬೆ ಮೇಲೆ ಸೋರಿಸಿರುವ ಏಸು ಶರೀರ ರಕ್ತವಾಗಿ ಹೇಳುತ್ತಿದ್ದಾರೆ. ಏಸು ಪಾಪಿಗಳಿಗಾಗಿ ಶಿಲುಬೆ ಮೇಲೆ ಚಿಮ್ಮಿಸಿರುವ ರಕ್ತದಿಂದ ಮನುಷ್ಯರ ಪಾಪವು ಕ್ಷಮಿಸಲ್ಪಡುತ್ತಿದೆಯೆಂದು ಹೇಳುತ್ತಿದ್ದಾರೆ. ಏಸು ಹೇಳಿರುವುದು ಒಂದಾದರೇ ಮನುಷ್ಯರು ಹೇಳುವುದು ಮತ್ತೊಂದಾಗಿದೆ. ಏಸು ತನ್ನ ಶರೀರ ರಕ್ತವನ್ನು ಕುರಿತು ಸ್ವಲ್ಪವಾದರೂ ಮೇಲಿನ ವಾಕ್ಯಗಳಲ್ಲಿ ಹೇಳಲಿಲ್ಲ. ಹಾಗಿರುವಾಗ ಏಸು ತನ್ನ ಶರೀರ ರಕ್ತವನ್ನು ಪಾಪಿಗಳಿಗಾಗಿ ಸೋರಿಸಿದ್ದಾನೆನ್ನುವುದು ಅನ್ಯಾಯ ವಾಗುವುದು. ಆ ದಿನ ಮನುಷ್ಯರು ಏಸುವನ್ನು ಶಿಲುಬೆ ಮೇಲಕ್ಕೆ ಹತ್ತಿಸಿ ಆತನ ರಕ್ತವನ್ನು ಸೋರುವ ಹಾಗೆ ಮಾಡಿ, ಆತನ ಮರಣಕ್ಕೆ ಕಾರಣವಾದವರಿಗೆ ಭಯಂಕರವಾದ ಪಾಪವು, ಕ್ಷಮಿಸಲ್ಪಡದ ಪಾಪವು ಬಂದಿರುವಾಗ, ಪ್ರಜೆಗಳೇನೋ ಒಳ್ಳೆಯ ಕೆಲಸ ಮಾಡಿದ ಹಾಗೆ ಏಸು ಮರಣದಿಂದ ಪ್ರಜೆಗಳ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು, ಕ್ಷಮಿಸಲ್ಪಡುವವೆಂದು ಹೇಳುವುದು ಏಸುಪ್ರಭುವಿಗೆ ವಿರುದ್ಧವಾಗಿ ಹೇಳಿದಂತಾಗುತ್ತದಾಗಲೀ ಬೇರೆ ಅಲ್ಲ.

ಏಸು ತನ್ನ ವಾಕ್ಯದಲ್ಲಿ ದ್ರಾಕ್ಷ ರಸವನ್ನು ಬಟ್ಟಲಲ್ಲಿ ಕೊಟ್ಟು ಅದನ್ನು ಕುಡಿಯಿರೆಂದು ಹೇಳುವುದಲ್ಲದೇ ಅದು ಪಾಪ ಕ್ಷಮಾಪಣೆ ನಿಮಿತ್ತ ಅನೇಕರಿಗಾಗಿ **"ಸ್ರವಿಸಲ್ಪಡುತ್ತಿರುವ ನಿಬಂಧನ ರಕ್ತ"** ಎಂದು ಹೇಳಿದ್ದಾನೆ. ಇಲ್ಲಿ ಸ್ರವಿಸಲ್ಪಡುತ್ತಿರುವ ಎಂದು ವರ್ತಮಾನ ಕಾಲದಲ್ಲಿನ ವಿಷಯವನ್ನು ಕುರಿತು ಹೇಳಿದ್ದಾನೆ ಹೊರತು, ಮುಂದೆ ನಡೆಯುವ ವಿಷಯವನ್ನು ಕುರಿತು ಹೇಳಲಿಲ್ಲ. ಶಿಲುಬೆ ಮೇಲೆ ಸೋರಿಸಿರುವ ರಕ್ತವನ್ನು ಕುರಿತು ಹೇಳಲಿಲ್ಲ. ಆದರೂ ಎಲ್ಲರೂ ಶಿಲುಬೆ ಮೇಲೆ ಸೋರಿಸಿರುವ ರಕ್ತವು ಪಾಪಿಗಳ ನಿಮಿತ್ತ, ಪಾಪ ಕ್ಷಮಾಪಣೆ ನಿಮಿತ್ತ

ಎಂದು ಹೇಳುವುದು ಅವಿವೇಕವಾಗುತ್ತದೆ. **ಶಿಲುಬೆ ಮೇಲೆ ಏಸುವನ್ನು ರಕ್ತ ಸೋರುವ ಹಾಗೆ ಮಾಡಿದವರಿಗೆ, ಆತನ ಶರೀರ ರಕ್ತವು ಚಿಮ್ಮಿಸಿರುವುದರಿಂದ ಪಾಪವು ಬಂದಿದೆ ಆದರೇ, ಪಾಪವು ಹೋಗಲಿಲ್ಲ ಎಂದು ತಿಳಿಯಬೇಕು**. ಏಸು ಹೇಳಿರುವುದು ನಿಬಂಧನ ರಕ್ತವನ್ನು ಕುರಿತು, ಆದರೆ ಶರೀರ ರಕ್ತವನ್ನು ಅಲ್ಲ. ನಿಬಂಧನ ಅಂದರೇ ಅಜ್ಞಾನ ಬಂಧನಗಳೊಂದಿಗೆ ಇಲ್ಲದ ದೇವರ ಜ್ಞಾನವೆಂದು ಅರ್ಥ. ಏಸು ಪ್ರತಿ ದಿನ ಪ್ರಜೆಗಳಿಗೆ ಹೇಳುವ ಜ್ಞಾನವನ್ನೇ "ನಾನು ಅನೇಕರಿಗಾಗಿ ಚಿಮ್ಮಿಸುತ್ತಿರುವ' ಎಂದು ಪ್ರತಿ ದಿನವು ನಡೆಯುತ್ತಿರುವ ಕೆಲಸವನ್ನು ಕುರಿತು ಹೇಳಿದ್ದಾನೆ. ಆತನು ಪ್ರತಿ ದಿನ ಮನುಷ್ಯರ ಪಾಪಗಳು ಇಲ್ಲದೇ ಹೋಗುವ ಹಾಗೆ, ಮನುಷ್ಯರ ಪಾಪಗಳು ಸುಟ್ಟು ಹೋಗುವಂತೆ ಜ್ಞಾನವೆಂಬ ಅಗ್ನಿಯನ್ನು ಬೋಧಿಸುತ್ತಿರುವುದರಿಂದ ಬೋಧಿಸುವ ಜ್ಞಾನವನ್ನು ತನ್ನ ಬಾಯಿಂದ ಬೋಧನೆ ರೂಪದಲ್ಲಿ ಹೊರ ಚೆಲ್ಲುವ ನಿಬಂಧನ ರಕ್ತದ ಹೋಲಿಕೆಗೆ ಹೇಳಿದ್ದಾನೆ. ವಾಕ್ಯದಲ್ಲಿ ಹೇಳಿರುವ ವಿಷಯವನ್ನು **ವಿಚಕ್ಷಣ** ಎಂಬ ದೃಷ್ಠಿಯಿಂದ ನೋಡಿದಾಗಲೇ ಹೇಳಲ್ಪಟ್ಟ ಸತ್ಯವು ತಿಳಿಯುವುದು.

ರಕ್ತ ಎಂಬ ಪದವನ್ನು ಉಪಯೋಗಿಸುವುದರಿಂದ 'ನಿಬಂಧನೆ' ಎಂಬ ಮಾತನ್ನು ಬಿಟ್ಟು ಹಾಕಿ 'ರಕ್ತ' ಎಂಬ ಮಾತನ್ನು ಮಾತ್ರ ತೆಗೆದುಕೊಳ್ಳುವುದರಿಂದ ಹೇಳಿರುವ ಮಾತುಗಳಲ್ಲಿನ ಭಾವವು ಸರಿಯಾಗಿ ಅರ್ಥವಾಗದೇ ಹೋಗಿದೆ. ನಿಬಂಧನ ಅಂದರೆ ಜ್ಞಾನಗಳೊಂದಿಗೆ ಧರ್ಮಸಂಬಂಧವಾದುದೆಂದು ಹೋಲಿಸಿಕೊಳ್ಳಲಾರದೇ ಹೋಗಿದ್ದಾರೆ. ಹೇಳಿರುವ ವಾಕ್ಯದಲ್ಲಿ ಶರೀರದಲ್ಲಿನ ರಕ್ತವನ್ನು ಕುರಿತು ಹೇಳಲಿಲ್ಲವೆಂದು, ರಕ್ತ ಎಂದು ಹೇಳುವುದಕ್ಕೆ ಮತ್ತೊಂದು ಕಾರಣ ಇದೆಯೆಂದು ಹೇಳಬಹುದು. ಶರೀರವು ರಕ್ತದೊಂದಿಗೆ ತುಂಬಿರುತ್ತದೆ. ಶರೀರದಲ್ಲಿ ರಕ್ತವಿರುವವರೆಗು ಶರೀರವು ಪ್ರಾಣದೊಂದಿಗೆ ಇರುತ್ತದೆ. ಶರೀರದಲ್ಲಿನ ರಕ್ತವು ಸೋರಿ ಹೋದರೆ ಶರೀರದಲ್ಲಿ ಪ್ರಾಣವಿರದೆ ಮರಣವನ್ನು ಹೊಂದುತ್ತಾನೆ. ಇದನ್ನು ಅನುಸರಿಸಿ ಶರೀರದಲ್ಲಿ ಸಾರಾಂಶವಾದುದು ಶರೀರದಲ್ಲಿನ ರಕ್ತವೇಯೆಂದು ತಿಳಿಯುತ್ತಿದೆ. ಊಟದ ಸಮಯದಲ್ಲಿ ಮೊದಲು ಏಸು ಒಂದು

ರೊಟ್ಟಿಯನ್ನು ತೆಗೆದುಕೊಂಡು **"ಇದು ನನ್ನ ಶರೀರ ಇದನ್ನು ತಿನ್ನಿರಿ"** ಎಂದು ರೊಟ್ಟಿಯನ್ನು ಶರೀರವಾಗಿ ಹೋಲಿಸಿ ಹೇಳಿದ್ದಾನೆ. ನಂತರ ಬಟ್ಟಲಲ್ಲಿ ದ್ರಾಕ್ಷ ರಸವನ್ನು ಕೊಟ್ಟು **"ಇದು ನಾನು ಚಿಮ್ಮಿಸಿರುವ ನಿಬಂಧನ ರಕ್ತ"** ಎಂದು ಹೇಳುವುದು ನಡೆದಿದೆ. ಮೊದಲು ಕೊಟ್ಟಿರುವುದು 'ನನ್ನ ಶರೀರವೆಂದು ಇದನ್ನು ತಿನ್ನಿರಿ'ಎಂದು ಹೇಳಿದ್ದಾನೆ. ರೊಟ್ಟಿಯನ್ನು ಏಸು ಶರೀರವಾಗಿ ಹೋಲಿಸಿ ಹೇಳಿ ಅದನ್ನು ತಿನ್ನಿರೆಂದು ಹೇಳಿದ್ದಾನೆ. ರೊಟ್ಟಿಯನ್ನು ಶರೀರವಾಗಿ ಹೋಲಿಸಿ ತಿಂದರೆ ಏಸು ಶರೀರವನ್ನು ತಿಂದ ಹಾಗೆಯೇ ಅಲ್ಲವೇ! ಶರೀರದಲ್ಲಿ ಸಾರಾಂಶವಾದುದು, ಶರೀರಕ್ಕೆ ಆಧಾರವಾಗಿ ಇರುವುದು ಶರೀರದೊಳಗಿನ ರಕ್ತವೇ ಅಲ್ಲವೇ!

ನಿಬಂಧನ ರಕ್ತವನ್ನು ದೈವಜ್ಞಾನವಾಗಿ ಹೋಲಿಸಿದರೇ, ರೊಟ್ಟಿಯೆಂಬ ಶರೀರವನ್ನು ದೈವಜ್ಞಾನವಿರುವ ದೈವಗ್ರಂಥವಾಗಿ ಹೋಲಿಸಿ ಹೇಳಬಹುದು. ಆ ವಿಧವಾಗಿ ಹೇಳಿದರೆ **ಶರೀರವೆಂಬ ಗ್ರಂಥದಲ್ಲಿ ಜ್ಞಾನವೆಂಬ ರಕ್ತವಿದೆ. ಶರೀರವನ್ನು ತಿನ್ನುವುದೆಂದರೆ ಗ್ರಂಥವನ್ನು ಓದಿದರೆ ಅದರಲ್ಲಿರುವ ಸಾರಾಂಶವಾದ ಜ್ಞಾನವನ್ನು ತಿಳಿಯುವುದನ್ನೇ ರಕ್ತವನ್ನು ಕುಡಿಯುವುದೆಂದು ತಿಳಿಯಬೇಕು**. ಆದರೇ ಏಸು ಕೊಟ್ಟಿರುವ ರೊಟ್ಟಿಯನ್ನು, ದ್ರಾಕ್ಷ ರಸವನ್ನೇ ಮನುಷ್ಯ ನೋಡುತ್ತಿದ್ದಾನೆ ಹೊರತು ರೊಟ್ಟಿ ದೈವಗ್ರಂಥವೆಂದು, ರಸವು ಗ್ರಂಥಸಾರವಾದ ಜ್ಞಾನವೆಂದು ತಿಳಿಯದೆ ಇದ್ದಾರೆ. **ಗ್ರಂಥವನ್ನು ಶರೀರವಾಗಿ (ರೊಟ್ಟಿಯಾಗಿ), ಜ್ಞಾನವನ್ನು ರಕ್ತವಾಗಿ (ದ್ರಾಕ್ಷರಸವಾಗಿ) ಹೋಲಿಸಿ ಹೇಳಿದ್ದಾರೆ. ಚಿಮ್ಮಿಸಲ್ಪಡುತ್ತಿರುವ ನಿಬಂಧನ ರಕ್ತ ಎಂದರೆ ಪ್ರಸ್ತುತ ಬೋಧಿಸಲ್ಪಡುತ್ತಿರುವ ಧರ್ಮಗಳೊಂದಿಗೆ ಕೂಡಿರುವ ಜ್ಞಾನವೆಂದು** ತಿಳಿಯಬೇಕು. ಏಸು ಗ್ರಂಥವನ್ನು ತನ್ನ ಶರೀರವಾಗಿ, ಗ್ರಂಥದಲ್ಲಿನ ಜ್ಞಾನವನ್ನು ಶರೀರದಲ್ಲಿನ ರಕ್ತವಾಗಿ ಹೇಳುವುದಾಗಿದೆಯೆಂದು ಮನುಷ್ಯರು ಗ್ರಹಿಸದೇ ಇರುವುದರಿಂದ ಏಸು ಶಿಲುಬೆ ಮೇಲೆ ಸೋರಿಸಿರುವ ರಕ್ತವು ಪಾಪ ಕ್ಷಮಾಪಣೆಗೋಸ್ಕರವೆಂದು ಅಪಾರ್ಥಮಾಡಿಕೊಂಡು ಹೇಳಿಕೊಳ್ಳುವುದು ನಡೆದಿದೆ.

## (51) ಮತ್ತಾಯ ಸುವಾರ್ತೆ, 28ನೇ ಅಧ್ಯಾಯ, 18ನೇ ವಚನ.

## (18) ಪರಲೋಕದಲ್ಲಿಯೂ, ಭೂಮಿ ಮೇಲೆಯೂ ನನಗೆ ಸರ್ವ ಅಧಿಕಾರವನ್ನು ಕೊಡಲಾಗಿದೆ.

'ಲೋಕ' ಎಂದರೆ ಅನುಭವ ಇರುವುದು ಎಂದು ಹೇಳುತ್ತಿದ್ದೇವೆ. ಲೋಕದಲ್ಲಿ ಅನೇಕವಾದ ಕಷ್ಟಗಳು, ಅನೇಕವಾದ ಸುಖಗಳು ಅನುಭವಿಸುತ್ತಿದ್ದೇವೆ. ಲೋಕದಲ್ಲಿ ಅನುಭವಗಳಿರುವಾಗ ಸುಖಗಳ ಅನುಭವಗಳನ್ನು ಸ್ವರ್ಗಲೋಕ ಎಂದು, ಕಷ್ಟಗಳ ಅನುಭವಗಳನ್ನು ನರಕಲೋಕ ಎಂದು ಹೇಳುತ್ತಿದ್ದೇವೆ. ಲೋಕ ಎನ್ನುವುದು ಪ್ರತ್ಯೇಕವಾದ ದೇಶವಾಗಲೀ, ಪ್ರತ್ಯೇಕವಾದ ಸ್ಥಳವಾಗಲೀ ಅಲ್ಲ. ಅನುಭವಗಳನ್ನು ಲೋಕವೆಂದು ಹೇಳುತ್ತಾ ಸುಖ, ದುಃಖ ಅನುಭವಗಳನ್ನು ಅನುಸರಿಸಿ ಸ್ವರ್ಗ, ನರಕ ಲೋಕಗಳು ಎಂದು ವಿಭಜಿಸಿದ್ದೇವೆ ಆದರೇ ಎಲ್ಲ ಅನುಭವಗಳನ್ನು ಸೇರಿಸಿ ಹೇಳಿದರೇ 'ಲೋಕ' ಎಂದು ಹೇಳುತ್ತಿದ್ದೇವೆ. ಲೋಕವು ಯಾವುದಾದರೂ ಭೂಮಿ ಮೇಲೆಯೇ ಇದೆ. ಭೂಮಿ ಮೇಲೆಯೇ ಮನುಷ್ಯ ಎಲ್ಲಾ ಅನುಭವಗಳನ್ನು ಹೊಂದುತ್ತಿದ್ದಾನೆ. ಆದ್ದರಿಂದ ಸ್ವರ್ಗಲೋಕವಾದರೂ, ನರಕ ಲೋಕವಾದರೂ ಭೂಮಿ ಮೇಲೆಯೇ ಇದೆಯೆಂದು ಹೇಳಬಹುದು. ಅನುಭವಿಸುವ ಅನುಭವಗಳನ್ನು ಅನುಸರಿಸಿ ಸ್ವರ್ಗ, ನರಕವೆಂದು ಹೇಳುತ್ತಿದ್ದೇವೆ ಆದರೇ ಅವು ಯಾವುವಾದರೂ ಭೂಮಿ ಮೇಲೆಯೇ ಇವೆ.

ಇಹಲೋಕ, ಪರಲೋಕ ಎಂದು ಭೂಮಿ ಮೇಲೆಯೇ ಎರಡು ವಿಧಗಳ ಲೋಕಗಳಿವೆ. **ಅನುಭವಗಳಿರುವುದನ್ನು ಇಹಲೋಕವೆಂದು, ಅನುಭವಗಳು ಇಲ್ಲದಿರುವುದನ್ನು ಪರಲೋಕ ಎಂದು ಹೇಳುತ್ತಿದ್ದೇವೆ.** ಯಾವ ವಿಧವಾಗಿ ಹೇಳಿದರೂ ಇಹ, ಪರಲೋಕಗಳು ಎರಡು ಭೂಮಿ ಮೇಲೆಯೇ ಇವೆ. ಪರ ಎಂದರೇ ಬೇರೆಯಾಗಿ ಅಥವಾ ಅನ್ಯವಾಗಿ ಎಂದು ಅರ್ಥ. ಪರಲೋಕ ಎಂದರೇ ಅನುಭವಗಳಿಗಿಂತ ಬೇರೆಯಾಗಿ ಇದೆಯೆಂದು ಅರ್ಥ. ಇನ್ನೂ ಹೇಳಿದರೇ ಯಾವ ಅನುಭವ ಇಲ್ಲದಿರುವುದನ್ನು, ಲೋಕಕ್ಕಿಂತ ಬೇರೆಯಾಗಿರುವ ಲೋಕ ಎಂದೂ ಪರಲೋಕ ಎಂದು ಹೇಳಬಹುದು.

ಮನುಷ್ಯ ಎಂದರೇ ಮನಸ್ಸಿನ ಮೂಲಕ ಅನುಭವಗಳನ್ನು ಹೊಂದುವವನು ಎಂದು ಅರ್ಥ. ಆದ್ದರಿಂದ ಭೂಮಿ ಮೇಲಿರುವ ಮನುಷ್ಯರೆಲ್ಲರೂ ಇಹಲೋಕ ವಾಸಿಗಳೆಂದು ಹೇಳಬಹುದು. ಮನುಷ್ಯನಾಗಿರುವವನು ಯಾರಾದರಾಗಲೀ ಪರಲೋಕವನ್ನು ನೋಡಲಿಲ್ಲವೆಂದು ತಿಳಿಯುತ್ತಿದೆ. ಶರೀರವನ್ನು ಧರಿಸಿರುವ ಪ್ರತಿ ಮನುಷ್ಯ ಅನುಭವಗಳು ಇಲ್ಲದೇ ಯಾರೂ ಇಲ್ಲ. ಆದ್ದರಿಂದ ಪ್ರತಿ ಮನುಷ್ಯ ಲೋಕದಲ್ಲಿರುವವನೇ ಎಂದು, ಪರಲೋಕ ತಿಳಿಯದ ಇಹಲೋಕ ವಾಸಿಯಾಗಿ ಇದ್ದಾನೆಂದು ಹೇಳಬಹುದು. ಅನುಭವಗಳು ಇಲ್ಲದ ಸ್ಥಿತಿಯನ್ನು ಹೊಂದುವವನು ಪರಲೋಕದಲ್ಲಿ ಇದ್ದಾನೆಂದು ಹೇಳಬಹುದು. ಮೇಲಿನ ವಾಕ್ಯದಲ್ಲಿ **"ಭೂಮಿ ಮೇಲೆ ಇರುವ ಇಹಲೋಕದಲ್ಲಿಯೂ, ಹಾಗೆಯೇ ಪರಲೋಕದಲ್ಲಿಯೂ ಏಸುಪ್ರಭುವಿಗೆ ಸರ್ವಾಧಿಕಾರವನ್ನು ಕೊಡಲಾಗಿದೆಯೆಂದು"** ಹೇಳಿದ್ದಾರೆ.

ಏಸುಪ್ರಭು ಸಾಧಾರಣ ಮನುಷ್ಯನಾಗಿದ್ದರೇ ಆತನು ಇಹಲೋಕದಲ್ಲಿ ಇರುವವನೇ ಹೊರತು, ಪರಲೋಕವನ್ನು ತಿಳಿಯದವನಾಗಿ ಇರುತ್ತಿದ್ದನು. ಆದರೆ ಏಸು ಸಾಧಾರಣ ಮನುಷ್ಯನಾಗಿ ಕಾಣಿಸಿದರೂ, ಆತನ ಶರೀರದಲ್ಲಿ ಇರುವುದು ಆತ್ಮವೇ ಹೊರತು, ಜೀವಾತ್ಮ ಅಲ್ಲ. ಆತ್ಮ ಏಸು ಶರೀರದಲ್ಲಿ ನಿವಾಸಿಸುತ್ತಾ ಜೀವಾತ್ಮವಾಗಿ ನಟಿಸುತ್ತಿದೆ. ಸರ್ವಮಾನವರಲ್ಲಿ ಆತ್ಮ, ಜೀವಾತ್ಮ ಎರಡು ಇರುವಾಗ, ಆತ್ಮ ಕಾರ್ಯಗಳನ್ನು ಮಾಡುತ್ತಿರುವಾಗ, ಜೀವಾತ್ಮ ಶರೀರದಲ್ಲಿ ಆತ್ಮ ಮಾಡುವ ಕಾರ್ಯಗಳಲ್ಲಿ ಇರುವ ಸುಖವನ್ನಾಗಲೀ, ದುಃಖವನ್ನಾಗಲೀ ಅನುಭವಿಸುತ್ತಿದ್ದಾನೆ. ಇದನ್ನು ಅನುಸರಿಸಿದರೆ ಮನುಷ್ಯನ ಶರೀರದಲ್ಲಿನ ಜೀವಾತ್ಮ ಸ್ವಲ್ಪ ಹೊತ್ತು ಸ್ವರ್ಗಲೋಕದಲ್ಲಿ, ಸ್ವಲ್ಪಹೊತ್ತು ನರಕಲೋಕದಲ್ಲಿ ಇರುತ್ತಿದ್ದಾನೆಂದು ಹೇಳಬಹುದು. ಆದರೇ ದೇವರು ಮನುಷ್ಯನಾಗಿ ಬಂದರೇ ಆತನ ಶರೀರದಲ್ಲಿ ಜೀವಾತ್ಮ ಇರುವುದಿಲ್ಲ. ದೇವರ ಕುಮಾರನು ಎನ್ನಲ್ಪಡುವ ಆತನ ಶರೀರದಲ್ಲಿ ಆತ್ಮ ಕೆಲಸವನ್ನು ಮಾಡಿದರೂ, ಆತ್ಮ ಯಾವುದನ್ನೂ ಅನುಭವಿಸುವವನಲ್ಲ. ಆದ್ದರಿಂದ ಆತನನ್ನು ಪರಲೋಕದಲ್ಲಿದ್ದಾನೆ ಎಂದು ಹೇಳಬಹುದು. ಏಸು ಸಾಧಾರಣ ಮನುಷ್ಯನಲ್ಲ

ಆದ್ದರಿಂದ ಆತನು ಇಹಲೋಕವಾದ ಭೂಮಿ ಮೇಲೆಯೂ, ಹಾಗೆಯೇ ಪರಲೋಕದಲ್ಲಿಯೂ ಅಧಿಕಾರ ಇರುವವನಾಗಿ ಇದ್ದಾನೆ. ಪರಮಾತ್ಮನಾದ ಪರಿಶುದ್ಧಾತ್ಮದಿಂದ ಆತ್ಮನಾದ ಏಸುವಿಗೆ ಸರ್ವ ಅಧಿಕಾರ ಕೊಡಲಾಗಿದೆ. ಸರ್ವಾಧಿಕಾರಿಯಾಗಿ ಇರುವವನಿಗೆ ದೈವಜ್ಞಾನದ ಮೇಲೆ ಕೂಡಾ ಅಧಿಕಾರವಿದೆ ಆದ್ದರಿಂದ ಆತ್ಮನಾಗಿರುವ ಏಸು ದೈವಜ್ಞಾನವನ್ನು ಹೇಳುವುದಕ್ಕೆ ಅಧಿಪತಿ ಯಾಗಿದ್ದಾನೆ. ಸಾಧಾರಣವಾಗಿ **"ದೇವರ ಜ್ಞಾನವು ದೇವರಿಗೆ ಹೊರತುಪಡಿಸಿ ಯಾವ ಮಾನವನಿಗೂ ತಿಳಿದಿಲ್ಲ."** ಆದ್ದರಿಂದ ಆತ್ಮಗಳ ವಿಷಯವು ಪ್ರಜೆಗಳಿಗೆ ತಿಳಿದಿಲ್ಲ. ಸರ್ವಾಧಿಕಾರ ಇರುವ ಏಸು ಜ್ಞಾನದಲ್ಲಿ ಮೂರು ಆತ್ಮಗಳ ವಿಷಯವು ತಿಳಿದವನಾಗಿ ಬೋಧಿಸುತ್ತಿದ್ದಾನೆ, ಆದ್ದರಿಂದ ಆತನ ಹತ್ತಿರ ಆತ್ಮಗಳ ಜ್ಞಾನವನ್ನು ತಿಳಿದ ಶಿಷ್ಯರು ಹೋಗಿ ಹೊರಗಿನ ಪ್ರಪಂಚದಲ್ಲಿನ ಮನುಷ್ಯರಿಗೆ ಆತ್ಮ ಜ್ಞಾನವನ್ನು ತಿಳಿಸಿರೆಂದು ಹೇಳಿದ್ದಾನೆ.

**(52) ಮತ್ತಾಯ ಸುವಾರ್ತೆ, 28ನೇ ಅಧ್ಯಾಯ, 19, 20 ವಚನಗಳು.**

**(19) ಆದ್ದರಿಂದ ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ತಂದೆಯ, ಕುಮಾರನ, ಪರಿಶುದ್ಧಾತ್ಮನ ನಾಮದಲ್ಲಿ ಅವರಿಗೆ ಬಾಪ್ತಿಸ್ಮ ಕೊಡುತ್ತ**

**(20) ನಾನು ನಿಮಗೆ ಯಾವ ಯಾವ ಸಂಗತಿಗಳನ್ನು ಆಜ್ಞಾಪಿಸಿದ್ದೇನೋ ಅವುಗಳೆಲ್ಲವನ್ನು ಕೈಗೊಳ್ಳಬೇಕೆಂದು ಅವರಿಗೆ ಬೋಧಿಸಿರಿ. ಇಗೋ ನಾನು ಯುಗ ಸಮಾಪ್ತಿವರೆಗು ಸದಾಕಾಲ ನಿಮ್ಮೊಂದಿಗೆ ಕೂಡಾ ಇದ್ದೇನೆಂದು ಅವರೊಂದಿಗೆ ಹೇಳಿದನು.**

ಮತ್ತಾಯ ಸುವಾರ್ತೆ 28 ಅಧ್ಯಾಯಗಳಾಗಿ ಇರುವಾಗ, ಅದರಲ್ಲಿ 28ನೇ ಅಧ್ಯಾಯದಲ್ಲಿ ಕೊನೆಯ ವಾಕ್ಯಗಳಾದ 19, 20 ರಲ್ಲಿ ಆಧ್ಯಾತ್ಮಿಕ ವಿದ್ಯೆಯ ರಹಸ್ಯವೆಲ್ಲವೂ ಹೇಳಿದ್ದಾನೆ. ಇಲ್ಲಿ 19ನೇ ವಾಕ್ಯದಲ್ಲಿ ಹೇಳಿರುವ

ಮೂರು ಆತ್ಮಗಳ ಸಮಾಚಾರವು ಗ್ರಂಥಕ್ಕೆಲ್ಲಾ ಮುಖ್ಯವಾದ ಜ್ಞಾನವೆಂದು ತಿಳಿಯಬೇಕು. ಇಲ್ಲಿ ಸ್ವಲ್ಪ ಆಲೋಚಿಸಿದರೂ ಅರ್ಥವಾಗದಂತೆ 'ತಂದೆ' ಎಂಬ ಪದವನ್ನು ಮೊದಲು ಹೇಳಿ, 'ಕುಮಾರನು' ಎಂಬ ಪದವನ್ನು ಹಿಂದೆ ಹೇಳಿದ್ದಾರೆ. ಇದನ್ನು ಕುರಿತು ಆಲೋಚಿಸಿದವರಿಗೆ ಮೊದಲು ಕುಮಾರನು ನಂತರ ತಂದೆ, ಆ ನಂತರ ತಂದೆಗೆ ತಂದೆಯಾದ ಪರಿಶುದ್ಧಾತ್ಮ ಎಂಬ ವರಸೆ ಕ್ರಮ ತಿಳಿಯಬಲ್ಲದು. ಇದನ್ನು ಚೆನ್ನಾಗಿ ವಿವರಿಸಿ ಹೇಳಿದರೇ **ಕುಮಾರನು ಎಂದು ಹೇಳಿದ ಕಡೆ ಜೀವಾತ್ಮಯೆಂದು, ತಂದೆಯೆಂದು ಹೇಳಿರುವ ಕಡೆ ಆತ್ಮಯೆಂದೂ, ಪರಿಶುದ್ಧಾತ್ಮ ಎಂದು ಹೇಳಿರುವ ಕಡೆ ಪರಮಾತ್ಮಯೆಂದು ತಿಳಿಯಬೇಕು**. ಪ್ರಪಂಚದಲ್ಲಿ ಮೂರು ಆತ್ಮಗಳು ಹೊರತುಪಡಿಸಿ ಇತರ ಆತ್ಮಗಳು ಯಾವುವೂ ಇಲ್ಲ. ಆ ಮೂರು ಆತ್ಮಗಳೇ ಸಿದ್ಧಾಂತದ ಪ್ರಕಾರ ಜೀವಾತ್ಮ, ಆತ್ಮ, ಪರಮಾತ್ಮ ಎಂದು ಹೇಳಬಹುದು.

'ಬಾಪ್ತಿಸ್ಮ' ಎಂದರೇ ಒಂದು ವಿಧವಾಗಿ ಉಪದೇಶವೆಂದು ಹೇಳ ಬಹುದು. ಉಪ ಎಂದರೇ ಪಕ್ಕದಲ್ಲಿರುವುದು ಎಂದು ಅರ್ಥ. ಉಪದೇಶ ಎಂದರೇ ಪಕ್ಕದ ದೇಶವೆಂದು ಅರ್ಥ. ಇನ್ನೂ ವಿವರವಾಗಿ ಹೇಳಿದರೇ ಈಗ "ನೀನಿರುವ ಈ ದೇಶವನ್ನು ಬಿಟ್ಟು ಪರದೇಶಕ್ಕೆ ಹೋಗುವುದಕ್ಕೆ ಅನುಮತಿಯನ್ನು ಪಡೆಯುವುದೆಂದು ಅರ್ಥ." ಪರದೇಶಕ್ಕೆ ಹೋಗುವುದಕ್ಕೆ ಅನುಮತಿಯನ್ನು ಮೊದಲು ಒಬ್ಬ ಅಧಿಕಾರಿಯಿಂದ ಪಡೆಯಬೇಕಾಗಿರುತ್ತದೆ. ಆ ಅಧಿಕಾರಿಯನ್ನು ಗುರುವು ಎಂದು ಹೇಳಬಹುದು. ಗುರುವು ಎಂದರೇ ಪರದೇಶಕ್ಕೆ ಅಥವಾ ಪರಲೋಕಕ್ಕೆ ಅಧಿಪತಿಯಾಗಿ ಇರುವವನು ಎಂದು ಅರ್ಥ. ಭೂಮಿ ಮೇಲೆ ಎಷ್ಟೋ ಜನ ಗುರುಗಳಿದ್ದರೂ, ಪರಲೋಕಕ್ಕೆ ಅಧಿಪತಿಯಾದ ದೇವರೇ ನಿಜವಾದ ಗುರು ಎಂದು ಹೇಳುವುದಾಗಿದೆ. ಪರಲೋಕಕ್ಕೆ ಅಧಿಪತಿಯಾದ ದೇವರು ಭೂಮಿ ಮೇಲಕ್ಕೆ ಮನುಷ್ಯನ ಹಾಗೆ ಬಂದರೇ ಆತನೇ ನಿಜವಾದ ಬಾಪ್ತಿಸ್ಮವನ್ನು ಕೊಡುವ ನಿಜಗುರು. ಭೂಮಿ ಮೇಲೆ ಎಷ್ಟೋ ಜನ ಗುರುಗಳೆಂದು ಹೇಳಿಕೊಂಡರೂ ಅವರೆಲ್ಲರೂ ಹೆಸರಿಗೆ ಮಾತ್ರವೇ ಗುರುಗಳು. ಅವರು ಕೊಡುವುದು ಹೆಸರಿಗೆ ಮಾತ್ರವೇ ಉಪದೇಶ (ಬಾಪ್ತಿಸ್ಮ).

ನಿಜಗುರುವಾದ ದೇವರು ಭೂಮಿ ಮೇಲೆ ಮನುಷ್ಯನಾಗಿ ಇಲ್ಲದಿರುವಾಗಾದರೂ ಜ್ಞಾನ ಸಂಪ್ರದಾಯದ ಪ್ರಕಾರ ಬೋಧಕರು ಕೂಡಾ ಕೆಲವರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಉಪದೇಶ ಕೊಡಬೇಕಾಗಿ ಇರುತ್ತದೆ. ಉಪದೇಶವು ಪರದೇಶಕ್ಕೆ ಅನುಮತಿಯಂಥದ್ದಾದರೇ, ಉಪದೇಶ ಕಾರ್ಯದಲ್ಲಿ ಶಿಷ್ಯರಿಗೆ ಗುರುವು ನೀರಿನಿಂದಲೋ, ಮಂತ್ರದಿಂದಲೋ, ವಾಕ್ಯದಿಂದಲೋ, ವಿಭೂತಿಯಿಂದಲೋ ಉಪದೇಶ ಕೊಡುತ್ತಿರುತ್ತಾರೆ. ಉಪದೇಶವು ಪರಲೋಕರಾಜ್ಯಕ್ಕೆ ಅನುಮತಿಯಂಥದ್ದಾದರೇ ವಾಕ್ಯವಾಗಲೀ, ನೀರಾಗಲೀ ಪರದೇಶ ಪ್ರವೇಶಕ್ಕೆ ಅನುಮತಿ ಹೊಂದಿದ ಹಾಗೆ ಗುರುತಿನ ಚೀಟಿಯಂತಾದ್ದು. ಬಹಳ ಜನ ಗುರುಗಳು ಮಂತ್ರವನ್ನಾಗಲೀ, ವಾಕ್ಯವನ್ನಾಗಲೀ ಉಪದೇಶ ಕಾರ್ಯಗಳಲ್ಲಿ ವಿನಿಯೋಗಿಸುತ್ತಿರುತ್ತಾರೆ. ಅದೇ ವಿಧವಾಗಿ ತನ್ನ ಶಿಷ್ಯರಾದವರಿಗೆ ಹೇಳುತ್ತಾ **"ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ"** ಎಂದು ಹೇಳಿದ್ದಾನೆ. ಸರ್ವಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡಾಗ ಅವರಿಗೆ ಬಾಪ್ತಿಸ್ಮ (ಉಪದೇಶ) ಕೂಡಾ ಕೊಡಲು ಹೇಳಿದ್ದಾನೆ. ಆದರೇ ಉಪದೇಶ ಕಾರ್ಯದಲ್ಲಿ ಶಿಷ್ಯನಿಗೆ ಕೊಡುವ ಟಿಕೆಟ್‌ನಂಥದ್ದು ಕೊಟ್ಟಾಗ "ತಂದೆ, ಕುಮಾರನು, ಪರಿಶುದ್ಧಾತ್ಮ ಎಂಬ ಹೆಸರುಗಳನ್ನೇ ವಾಕ್ಯವಾಗಿ ಹೇಳುತ್ತಾ, ಮೂರು ಆತ್ಮಗಳ ನಾಮದಿಂದ ಬಾಪ್ತಿಸ್ಮ ಕೊಡಿ" ಎಂದು ಹೇಳಿದ್ದಾನೆ. ಜ್ಞಾನ ಸಾಂಪ್ರದಾಯದ ಪ್ರಕಾರ ಬಾಪ್ತಿಸ್ಮದಲ್ಲಿ ಹಾಗೆ ಮಾಡಬೇಕಾಗಿದೆ. ಆದಕಾರಣ ಯೋಹಾನ್ ಎಂಬ ಗುರು ಮನುಷ್ಯರಿಗೆ ಬಾಪ್ತಿಸ್ಮ ಕೊಡುವಾಗ ನೀರಿನಿಂದ ಬಾಪ್ತಿಸ್ಮ ಕೊಟ್ಟಿದ್ದಾನೆ. ಆ ವಿಧಾನದ ಪ್ರಕಾರ ಏಸು ಕೂಡಾ ಯೋಹಾನ್ ಹತ್ತಿರ ಉಪದೇಶವನ್ನು ಹೊಂದಿದ್ದಾನೆ. ಆ ಸಮಯದಲ್ಲಿ ಯೋಹಾನ್ ಏಸುವನ್ನು ನೋಡಿ ಹೀಗೆಂದನು.

ಮತ್ತಾಯ ಸುವಾರ್ತೆ, ಮೂರನೆಯ ಅಧ್ಯಾಯ, 14, 15 ವಚನಗಳಲ್ಲಿ ಹೀಗೆ ಹೇಳಿದ್ದಾನೆ ನೋಡಿರಿ. ಯೋಹಾನ್ ಏಸುವನ್ನು ನೋಡಿ **"ನಾನು ನಿನ್ನಿಂದ ಬಾಪ್ತಿಸ್ಮ ಹೊಂದಬೇಕಾದವನಾಗಿ ಇರುವಾಗ ನೀನು ನನ್ನ ಹತ್ತಿರ ಬರುತ್ತಿದ್ದೀಯಾ?" ಎಂದು ಆತನನ್ನು ತಡೆಯುತ್ತಾ ನೋಡಿದನು. ಆದರೇ ಏಸು ಹೀಗೆ ಹೇಳಿದನು "ಸಧ್ಯಕ್ಕೆ ನಡೆಯಲಿ! ನೀತಿ(ಜ್ಞಾನ) ಎಲ್ಲವನ್ನು ಕೊಡುವ ಹಾಗೆ**

**ನೆರವೇರಿಸುವುದು ನಮಗೆ ಯೋಗ್ಯವಾಗಿದೆ" ಎಂದು ಆತನಿಗೆ ಉತ್ತರಕೊಟ್ಟನು.** ಜ್ಞಾನ ಸಾಂಪ್ರದಾಯದಲ್ಲಿ ತಪ್ಪದೇ ಗುರು ಹತ್ತಿರ ಬಾಪ್ತಿಸ್ಮ ಪಡೆಯಬೇಕಾಗಿದೆಯೆಂದು ಏಸುವೇ ಹೇಳಿದ್ದಾನೆ. ಅದೇ ವಿಷಯವನ್ನೇ ನಾನು ಕೂಡಾ ಬಾಪ್ತಿಸ್ಮವನ್ನು ಕುರಿತು ಹೇಳಿದ್ದೇನೆ. ಏಸು ತನ್ನ ಶಿಷ್ಯರಿಗೆ ಬಾಪ್ತಿಸ್ಮ ಕೊಡುವ ಅಧಿಕಾರ ಕೊಟ್ಟು 'ಒಂದು ವರ್ಗ, ಒಂದು ಕುಲ ಎಂದಲ್ಲದೇ ಸರ್ವ ಜನರಿಗೆ ಅವಶ್ಯವಾದುದು ಬಾಪ್ತಿಸ್ಮ' ಎಂದು ಹೇಳಿ ಎಲ್ಲರಿಗೂ ಬಾಪ್ತಿಸ್ಮ ಸಮಯದಲ್ಲಿ ತಂದೆ, ಕುಮಾರನು, ಪರಿಶುದ್ಧಾತ್ಮ ಎಂಬ ಪ್ರವೇಶ ಪತ್ರವನ್ನು ಕೊಡಬೇಕೆಂದು ಹೇಳಿದ್ದಾನೆ. ಎಂದಿಗೂ ದೇವರು ಕಾಣಿಸುವ ಮನುಷ್ಯನಾಗಿ ಭೂಮಿ ಮೇಲೆ ಇದ್ದು ಉಪದೇಶ ಕೊಡಲಾರನು ಆದ್ದರಿಂದ ಆ ಕಾರ್ಯವನ್ನು ತನ್ನ ಶಿಷ್ಯರಿಗೆ ಹೇಳಿದ್ದಾನೆ. ಬಾಪ್ತಿಸ್ಮ ಕಾರ್ಯದಿಂದ ನಿಲ್ಲದೆ 'ನಾನು ನಿಮಗೆ ಯಾವ ಸಂಗತಿಗಳು ಹೇಳಿದ್ದೇನೋ ಅವುಗಳೆಲ್ಲವನ್ನು ಗ್ರಹಿಸಿರೆಂದು' ಅವರಿಗೆ ಬೋಧಿಸುತ್ತಿದ್ದಾನೆ.

ಹಾಗೆ ಹೇಳುತ್ತಾ ನಾವು ಗುರುಗಳಲ್ಲ ಅಲ್ಲವೇ! ಎಂಬ ಅನುಮಾನ ಇಲ್ಲದೇ ನಾನು ನಿಮ್ಮೊಂದಿಗೆ ಕೂಡಾ ಯಾವಾಗಲು ಇರುತ್ತೇನೆ ಎಂದಿದ್ದಾನೆ. ಹಾಗೆ ಹೇಳುವುದರಲ್ಲಿ ವಿಶೇಷವಾಗಿ ಏಸು ಏನು ಹೇಳಿದ್ದಾನೆಂದರೇ **"ಇಗೋ ನಾನು ಯುಗ ಸಮಾಪ್ತಿವರೆಗು ಸದಾಕಾಲ ನಿಮ್ಮೊಂದಿಗೆ ಕೂಡಾ ಇದ್ದೇನೆ"** ಎಂದು ಅವರೊಂದಿಗೆ ಹೇಳಿದನು. ಈ ಮಾತನ್ನು ನೊಡಿದರೇ ಯುಗಗಳ ವಿಷಯವು ತಿಳಿದವರಿಗೆ ಒಂದು ಪ್ರಶ್ನೆ ಬರಬಹುದು. ಅದು ಏನೆಂದರೇ! ಯುಗ ಎನ್ನುವುದು ಮುಗಿದು ಹೋಗುವುದಲ್ಲ. ಒಂದು ಯುಗ ಹೋದರೇ ಮತ್ತೊಂದು ಯುಗ ಇರುತ್ತದೆ. ಹಾಗಿರುವಾಗ ಸಮಾಪ್ತಿಯಿಲ್ಲದ ಯುಗಗಳನ್ನು ಕುರಿತು ಯುಗ ಸಮಾಪ್ತಿ ಎಂದು ಯಾಕೆ ಹೇಳಿದ್ದಾನೆ? ಎಂಬ ಪ್ರಶ್ನೆ ಬರಬಹುದು. ಈ ಪ್ರಶ್ನೆಗೆ ಉತ್ತರ ಹುಡುಕಿದರೇ ಹೀಗೆ ತಿಳಿಯುತ್ತಿದೆ. ಕಾಲವು ಶಾಶ್ವತವಾದುದು, ಎಂದಿಗೂ ನಡೆಯುವುದು, ದೇವರು (ಪರಮಾತ್ಮ) ಎಂದಿಗೂ ಇರುವವನು, ಹಾಗೆಯೇ ದೇವರಿಗೆ ಇನ್ನೊಂದು ಹೆಸರಾದ ಕಾಲವು ಕೂಡಾ ಎಂದಿಗೂ ಇರುವುದು. ಕಾಲವು ಪರಮಾತ್ಮನಾಗಿ ಇದೆ ಆದ್ದರಿಂದ ಕಾಲಕ್ಕೆ ಮೂರು ಆತ್ಮಗಳ ಹೆಸರುಗಳು ಇಡಲಾಗಿದೆ. ಪರಮಾತ್ಮ ಮೂರು ಆತ್ಮಗಳಾಗಿ ಇದ್ದಾನೆ.

ಜೀವಾತ್ಮ, ಆತ್ಮ, ಪರಮಾತ್ಮನಾಗಿ ವಿಭಜಿಸಲ್ಪಟ್ಟಿದ್ದಾನೆ. ಈ ಮೂರು ಹೆಸರುಗಳು ಕಾಲದಲ್ಲಿ ಕೇಳಿಸುವ ಹಾಗೆ, ಕಾಲದಲ್ಲಿ ತಿಳಿಯುವ ಹಾಗೆ ಕಾಲಕ್ಕೆ ಭೂತ, ಭವಿಷ್ಯತ್, ವರ್ತಮಾನ ಎಂಬ ಮೂರು ಹೆಸರುಗಳು ಇಟ್ಟಿದ್ದಾರೆ. ದೇವರನ್ನು ಸೇರುವುದಕ್ಕೆ ಅವಶ್ಯವಾದ ಯೋಗ ಒಂದರ ಹೆಸರನ್ನು ಕಾಲಕ್ಕೆ ಇಟ್ಟಿದ್ದಾರೆ. ಈ ವಿಧವಾಗಿ ಕಾಲವನ್ನು ನಾಲ್ಕು ಹೆಸರುಗಳಾಗಿ ಹೇಳುತ್ತಾ, ಆ ನಾಲ್ಕು ಹೆಸರುಗಳ ಕೊನೆಯಲ್ಲಿ 'ಯೋಗ' ಎಂಬ ಪದವನ್ನು ಇಡುವುದರಿಂದ ದೇವರನ್ನು ಸೇರುವುದಕ್ಕೆ ಅಥವಾ ಕಾಲವಾಗಿ (ದೇವರಾಗಿ) ಹೋಗುವುದಕ್ಕೆ ಯೋಗವು ಅವಶ್ಯಕತೆ ಎಂದು ತಿಳಿಯುವ ಹಾಗೆ ಕಾಲದ ಹೆಸರಿನ ಕೊನೆಯಲ್ಲಿ ಯೋಗ ಎಂಬ ಹೆಸರನ್ನು ಇಟ್ಟಿದ್ದಾರೆ.

ಕಾಲವನ್ನು ನಾಲ್ಕು ಭಾಗಗಳಾಗಿ ಮಾಡಿ, ನಾಲ್ಕು ಹೆಸರುಗಳು ಕ್ರಮವಾಗಿ ಕೃತ್, ತ್ರೈತಾ, ದ್ವಾಪರ, ಕಲಿ ಎಂದು ಹೆಸರುಗಳು ಇಡುವುದೇ ಅಲ್ಲದೇ ಎಲ್ಲಾ ಹೆಸರುಗಳ ಕೊನೆಯಲ್ಲಿ ಯೋಗ ಎಂಬ ಮಾತನ್ನು ಇಡುವುದರಿಂದ ಕೃತಯುಗ, ತ್ರೈತಾಯುಗ, ದ್ವಾಪರಯುಗ, ಕಲಿಯುಗ ಎಂದು ಕರೆಯಲ್ಪಡುತ್ತಿವೆ. **ಕೃತ ಎಂದರೆ ಮಾಡುವುದು ಆತ್ಮ ಎಂದು ಅರ್ಥ. ತ್ರೈತಾ ಎಂದರೇ ಮೂರು ಎಂದು ಅರ್ಥ. ಹಾಗೆಯೇ ದ್ವಾಪರ ಎಂದರೆ ಎರಡು ಅಲ್ಲದೆ ಮೂರು ಎಂದು ಅರ್ಥ. ಕಲಿ ಎಂದರೆ ನಾಶವಾಗುವುದು ಜೀವಾತ್ಮ ಎಂದು ಅರ್ಥ**. ಕ್ಷರನು, ಅಕ್ಷರನು, ಪುರುಷೋತ್ತಮನು ಎಂದು ಪ್ರಥಮ ದೈವಗ್ರಂಥದಲ್ಲಿ ಹೇಳಿದ್ದಾರೆ. ಕ್ಷರನು ಎಂದರೇ ನಾಶವಾಗುವವನು ಜೀವಾತ್ಮ ಎಂದು, ಅಕ್ಷರನು ಎಂದರೆ ನಾಶವಾಗದವನು ಆತ್ಮ ಎಂದು, ಪುರುಷೋತ್ತಮನು ಎಂದರೆ ಕ್ಷರ, ಅಕ್ಷರರಿಗಿಂತಲೂ ಉತ್ತಮ ಪುರುಷನು ಪರಮಾತ್ಮ ಎಂದು ಅರ್ಥ. ಈ ಮೂವರು ಪುರುಷರನ್ನೇ **"ನಡೆಸಲ್ಪಡುವವನು, ನಡೆಸುವವನು, ನೋಡುವವನು"** ಎಂದು ಅಂತಿಮ ದೈವಗ್ರಂಥದಲ್ಲಿ ಸೂರಾ 50, ಆಯತ್ 21ರಲ್ಲಿ ಹೇಳಿದ್ದಾರೆ. ಹಾಗೆಯೇ **"ಕುಮಾರನು, ತಂದೆ, ಪರಿಶುದ್ಧಾತ್ಮ"** ಎಂದು ದ್ವಿತೀಯ ದೈವಗ್ರಂಥದಲ್ಲಿ ಹೇಳಿದ್ದಾರೆ. ಈ ಮೂವರು ಪುರುಷರನ್ನು ತಿಳಿಯುವುದಕ್ಕೆ **ಯೋಗವು** ಅಗತ್ಯ. ಆದ್ದರಿಂದ ನಾಲ್ಕು ಕಾಲಗಳ ಹೆಸರುಗಳ ಕೊನೆಯಲ್ಲಿ ಯೋಗ ಎಂದು ಹೇಳಿದ್ದಾರೆ.

ಯೋಗದಿಂದ ಜೀವಾತ್ಮ ತನ್ನನ್ನು ತಾನು ತಿಳಿಯಬಲ್ಲನು, ಆದ್ದರಿಂದ ಕಲಿಯೋಗ ಎಂದು ಕರೆದಿದ್ದಾರೆ. ಯೋಗದಿಂದ ಆತ್ಮನನ್ನು ತಿಳಿಯಬಹುದು, ಆದ್ದರಿಂದ ಕೃತಯೋಗವೆಂದು ಕರೆದಿದ್ದಾರೆ. ಯೋಗದಿಂದ ಪರಮಾತ್ಮನನ್ನು ಸೇರಬಹುದು, ಆದ್ದರಿಂದ ತ್ರೈತಾಯೋಗ ಎಂದು, ದ್ವಾಪರಯೋಗ ಎಂದು ಕರೆದಿದ್ದಾರೆ. ಇದೆಲ್ಲವೂ ಜ್ಞಾನ ಸಂಪನ್ನರಾದವರು ಏರ್ಪಡಿಸಿರುವ ವಿಧಾನದಿಂದ ಇಡಲಾಗಿರುವ ಹೆಸರುಗಳು. ಆದರೆ ಕಾಲಕ್ರಮೇಣ ತ್ರೈತ ಎಂಬ ಪದವು ತ್ರೇತಾ ಎಂದು ನುಡಿಯಲಾಗುತ್ತಿದೆ. ಹಾಗೆಯೆ ಯೋಗವೆಂಬ ಮಾತು ಈ ದಿನ ಯುಗವೆಂದು ಕರೆಯಲ್ಪಡುತ್ತಿದೆ. ಆದ್ದರಿಂದ ಮೇಲಿನ ವಾಕ್ಯದಲ್ಲಿ **'ಯೋಗ ಸಮಾಪ್ತಿ'** ಎಂದು ಬರೆಯಬೇಕಾದ ಕಡೆ **'ಯುಗ ಸಮಾಪ್ತಿ'** ಎಂದು ಬರೆದಿದ್ದಾರೆ. ವಾಸ್ತವವಾದ ಪದವನ್ನು ಹೇಳಿಕೊಂಡರೆ ಯೋಗ ಸಮಾಪ್ತಿ ಆಗುವವರೆಗು ನಾನು ಎಲ್ಲಕಾಲವು ನಿಮ್ಮೊಂದಿಗೇ ಇರುತ್ತೇನೆಂದು ಹೇಳಿದ್ದಾನೆ. ಅದನ್ನು ವಿವರಿಸಿಕೊಂಡು ಹೇಳಿಕೊಂಡರೇ ಯೋಗ ಸಮಾಪ್ತಿವರೆಗು ನಿಮ್ಮೊಂದಿಗೇ ಇರುತ್ತೇನೆಂದು ಹೇಳುವುದು ಅಲ್ಲವೇ! ಒಬ್ಬ ಮನುಷ್ಯ (ಜೀವಿಯು) ಯೋಗ ಸಮಾಪ್ತಿಯನ್ನು ಹೊಂದಿದಾಗ ದೇವರಲ್ಲಿ ಐಕ್ಯವಾಗಿ ಹೋಗುತ್ತಾನೆ. ದೇವರಲ್ಲಿ ಐಕ್ಯವಾಗದೇ ದೇವರು ಬೇರೆ, ಜೀವಿಯು ಬೇರೆಯಾಗಿ ಇರುವಾಗ ದೇವರಲ್ಲಿ ಸೇರುವುದಕ್ಕೆ ಯೋಗವು ಅಗತ್ಯ. **ಯೋಗವು ಪರಿಸಮಾಪ್ತಿ ಹೊಂದಿದಾಗ ಜೀವಿಯು ದೇವರು ಬೆರೆತು ಹೋಗುತ್ತಾರೆ.** ಹಾಗೆ ಬೆರೆಯುವವರೆಗೂ ಜೀವಿಯ ಜೊತೆ ದೇವರಿರುತ್ತಾನೆ. ಜೀವಿಯು ದೇವರೊಂದಿಗೆ ಬೆರೆತು ಹೋದಾಗ ಯೋಗವು ಪೂರ್ತಿ ಆಗಿದೆಯೆಂದು ಅರ್ಥ. ಆಗ ಜೀವಿಯೊಂದಿಗೆ ದೇವರು ಇರಬೇಕಾದ ಅವಶ್ಯಕತೆ ಇಲ್ಲ. ಆಗ ಇಬ್ಬರೂ ಒಂದಾಗಿ ಹೋಗಿ ಇರುತ್ತಾರೆಂದು ತಿಳಿಯಬೇಕು. ಆದ್ದರಿಂದ ವಾಕ್ಯದಲ್ಲಿ **"ಯುಗ ಸಮಾಪ್ತಿ"** ವರೆಗು ಎಂದು ಹೇಳಿದ್ದಾರೆ.

# ಮಾರ್ಕ ಸುವಾರ್ತೆ

**1) ಮಾರ್ಕ ಸುವಾರ್ತೆ, 2ನೇ ಅಧ್ಯಾಯ, 19, 20 ವಚನಗಳು.**

**(19) ಮದುಮಗನು ತಮ್ಮೊಂದಿಗೆ ಕೂಡಾ ಇದ್ದ ಕಾಲದಲ್ಲಿ ಮದುವೆ ಮನೆಯವರು ಉಪವಾಸ ಮಾಡುವುದು ಯೋಗ್ಯವೇ? ಮದುಮಗನು ತಮ್ಮೊಂದಿಗೆ ಇರುವಷ್ಟು ಕಾಲ ಉಪವಾಸ ಮಾಡಲು ಯೋಗ್ಯವಲ್ಲ ಆದರೇ**

**(20) ಮದುಮಗನು ಅವರ ಹತ್ತಿರದಿಂದ ತೆಗೆದುಕೊಂಡು ಹೋಗುವ ದಿನಗಳು ಬರುತ್ತವೆ. ಆ ದಿನಗಳಲ್ಲಿಯೇ ಅವರು ಉಪವಾಸ ಮಾಡುತ್ತಾರೆ.**

ಕೆಲವರು ಏಸು ಹತ್ತಿರಕ್ಕೆ ಬಂದು “ಯೋಹಾನ್ ಶಿಷ್ಯರು, ಪರಿಸಯ್ಯರು ಉಪವಾಸ ಮಾಡುತ್ತಾರೆ ಆದರೇ, ನಿನ್ನ ಶಿಷ್ಯರು ಉಪವಾಸ ಮಾಡುವುದಿಲ್ಲ ಅದಕ್ಕೆ ಕಾರಣವೇನೆಂದು” ಏಸುವನ್ನು ಕೇಳಿದಾಗ ಏಸು ಮೇಲಿನ ವಾಕ್ಯಗಳನ್ನು ಹೇಳಿದ್ದಾನೆ. ಉಪವಾಸ ಎಂದರೆ ಆಹಾರವನ್ನು ತೆಗೆದುಕೊಳ್ಳದೇ ಇರುವುದೆಂದು ಇಲ್ಲಿ ಅರ್ಥ. ಇದು ಸರ್ವಸಾಧಾರಣ ಪ್ರಪಂಚ ಅರ್ಥವಾಗಿ ಇದೆ. ಈ ವಾಕ್ಯದಲ್ಲಿ ವಿಶೇಷ ಅರ್ಥದಿಂದ ಕೂಡಿಕೊಂಡಿರುವ ಪದವು ಮದುಮಗನು. ಈ ಪದವನ್ನು ಆಧ್ಯಾತ್ಮಿಕ ಅರ್ಥದಿಂದ ಹೇಳಿಕೊಂಡರೇ ಮದುವೆ ಎಂದರೆ ದೇವರು ಎಂದು ಅರ್ಥವಿದೆ. ಅದರ ಪ್ರಕಾರ ಮದುಮಗನು ಎಂದರೇ! ದೇವರ ಕುಮಾರನು ಎಂದು ಅರ್ಥ. ದೇವರ ಕುಮಾರನಾದ ಏಸು ತಮ್ಮೊಂದಿಗೆ ಇರುವಾಗ ದೇವರ ಕುಮಾರನ ಹತ್ತಿರ ಇರುವವರು ಸಂತೋಷದಿಂದ ಇರುತ್ತಾರೆ

ಆದ್ದರಿಂದ ಉಪವಾಸ ಇರುವುದಿಲ್ಲ. ಮದುಮಗನನ್ನು (ದೇವರ ಕುಮಾರನನ್ನು) ತಮ್ಮ ಹತ್ತಿರದಿಂದ ಇತರರು ಬಲವಂತವಾಗಿ ತೆಗೆದುಕೊಂಡು ಹೋದಾಗ ದೇವರ ಕುಮಾರನ ಹತ್ತಿರ ಇರುವವರೆಲ್ಲರೂ ಆತನು ತಮ್ಮ ಹತ್ತಿರದಿಂದ ಇಲ್ಲದೇ ಹೋಗುತ್ತಿದ್ದಾನೆಂಬ ಬಾಧೆಯಿಂದ ಅನ್ನವನ್ನು ತಿನ್ನದೆ ಉಪವಾಸ ವಿರುತ್ತಾರೆ. ಅದೇ ವಿಧವಾಗಿ ಮನುಷ್ಯ ಕುಮಾರನೆಂದು ಹೇಳಿಕೊಳ್ಳುತ್ತಾ ದೇವರ ಕುಮಾರನಾದ ಏಸು ತಮ್ಮ ಹತ್ತಿರ ಇರುವಷ್ಟು ಕಾಲ ಏಸು ಶಿಷ್ಯರು ಸಂತೋಷದಿಂದ ಇರುತ್ತಾರೆ ಆದ್ದರಿಂದ ಉಪವಾಸ ಇರುವುದಿಲ್ಲ. ಏಸು ತನ್ನ ಬಳಿಯಿಂದ ಇಲ್ಲದೇ ಹೋದಾಗ ದಿಗಿಲುಗೊಂಡು ಉಪವಾಸ ಇರಬಹುದು. ಮದುಮಗನು ಎಂದರೇ ದೇವರ ಕುಮಾರನೆಂದು ಅರ್ಥ ಮಾಡಿಕೊಳ್ಳಬೇಕು.

**2) ಮಾರ್ಕ ಸುವಾರ್ತೆ, 4ನೇ ಅಧ್ಯಾಯ, 38, 39 ವಚನಗಳು.**

**(38) ಆತನು (ಏಸು) ದೋಣಿಯೊಳಗೆ ತಲೆದಿಂಬಿನ ಮೇಲೆ (ತಲೆಬಾಗಿಸಿಕೊಂಡು) ನಿದ್ರಿಸುತ್ತಿದ್ದನು. ಅವರು (ಶಿಷ್ಯರು) ಆತನನ್ನು ಎಬ್ಬಿಸಿ ಬೋಧಕನೇ! ನಾವು ನಾಶವಾಗಿ ಹೋಗುತ್ತಿದ್ದೇವೆ ನಿನಗೆ ಚಿಂತೆ ಇಲ್ಲವೇ? ಎಂದು ಆತನೊಂದಿಗೆ ಹೇಳಿದರು.**

**(39) ಅದಕ್ಕೆ ಆತನು ಎದ್ದು ಗಾಳಿಯನ್ನು ಗದರಿಸಿ, ನಿಶ್ಶಬ್ಧವಾಗಿ ಸುಮ್ಮನಿರು ಎಂದು ಸಮುದ್ರದೊಂದಿಗೆ ಹೇಳಿದಾಗ ಗಾಳಿ ಅಣಗಿ ಶಾಂತವಾಯಿತು.**

ಏಸುಪ್ರಭು ಮತ್ತು ಆತನ ಶಿಷ್ಯರು ಸಮುದ್ರದ ಮೇಲೆ ಚಿಕ್ಕ ದೋಣಿಯನ್ನು ಹತ್ತಿ ಪ್ರಯಾಣಿಸುತ್ತಿರುವಾಗ ಸ್ವಲ್ಪ ದೂರ ಹೋದ ನಂತರ ಅವರ ದೋಣಿ ತುಫಾನಿನಲ್ಲಿ ಸಿಲುಕಿಕೊಂಡಿತು. ಅವರ ದೋಣಿ ತುಫಾನಿನಲ್ಲಿ ಇದ್ದುದರಿಂದ, ದೋಣಿ ಮೇಲಕ್ಕೆ ಅಲೆಗಳು ಹೊಡೆದಿರುವುದರಿಂದ ದೋಣಿ ನೀರಿನಿಂದ ತುಂಬಿ ಹೋಯಿತು. ಆಗ ಏಸು ಶಿಷ್ಯರು ಭಯಪಟ್ಟು ತಾವು

ಸಮುದ್ರದಲ್ಲಿ ಮುಳುಗಿ ಹೋಗುತ್ತೇವೆಂದು ತಿಳಿದು ಆಂದೋಲನದಿಂದ ಏಸುವನ್ನು ಎಬ್ಬಿಸಿ ದೋಣಿ ತುಫಾನಿನಲ್ಲಿ ಸಿಲುಕಿಕೊಂಡಿದೆಯೆಂದು, ಅದು ಮುಳುಗಿ ಹೋಗುವ ಪ್ರಮಾದವಿದೆಯೆಂದು, ಅದರಿಂದ ಎಲ್ಲರೂ ಜಲಸಮಾಧಿ ಆಗುತ್ತೇವೆಂದು ಹೇಳಿದಾಗ ಏಸು ಎದ್ದು ಅಲ್ಲೋಲ ಕಲ್ಲೋಲವಾಗಿ ಇರುವ ಸಮುದ್ರವನ್ನು, ವೇಗವಾಗಿ ಬೀಸುವ ತುಫಾನನ್ನು ಗದರಿಸಿ ನಿಂತುಹೋಗೆಂದು ಹೇಳಿದಾಗ, ಆ ಒಂದು ಮಾತಿನಿಂದಲೇ ತುಫಾನು ಇಲ್ಲದೇ ಹೋಗಿ ಸಮುದ್ರವು ಪ್ರಶಾಂತವಾಗಿ ಬದಲಾಗಿ ಹೋಯಿತು. ಇದು ದೊಡ್ಡ ವಿಚಿತ್ರವಾದರೂ ಯಾಕೆ ಹಾಗೆ ನಡೆದಿದೆ? ಎಂದು ಅಲ್ಲಿರುವವರಿಗೆ ಯಾರಿಗೂ ಅರ್ಥವಾಗಲಿಲ್ಲ. ಏಸು ಮಹಿಮೆ ಇರುವವನೆಂದು ಅವರು ಹೇಳಿಕೊಂಡರು ಹಾಗೆ ನಡೆಯುವುದಕ್ಕೆ ಕಾರಣವಾದ ವಿಷಯವು ಅವರಿಗೆ ತಿಳಿದಿಲ್ಲ. ಅಲ್ಲಿ ನಡೆದಿರುವ ಸಂಘಟನೆಯನ್ನು ಕುರಿತು ಹೇಳಿಕೊಂಡರೇ ಎಷ್ಟೋ ವಿಶೇಷವಾದ ಜ್ಞಾನವು ತಿಳಿಯುತ್ತದೆ, ಅದು ಏನೆಂದರೇ!

ಏಸು ಸಾಮಾನ್ಯವಾದ ಮನುಷ್ಯನಲ್ಲ. ಆದರೂ ಆತನು ಸರ್ವ ಸಾಧಾರಣವಾಗಿ ಕಾಣಿಸುತ್ತಾ ಮನುಷ್ಯನ ಹಾಗೆ ಪ್ರವರ್ತಿಸುವ ದೇವರೆಂದು ಹೇಳುವುದು ತಪ್ಪುವುದಿಲ್ಲ. ಪರಿಶುದ್ಧಾತ್ಮನಾದ ದೇವರು ಮಾನವ ಆಕಾರದೊಳಗೆ ಬಂದಾಗ ಆತನು ಯಾರಿಗೂ ಗುರುತಿಸಲ್ಪಡುವುದಿಲ್ಲ. ಆತನು ಇಂಥವನೆಂದು ಯಾರೂ ಹೇಳಲಾರರು. ದೇವರ ಜನ್ಮ ಮಾನವನಾಗಿ ಇರುವಾಗ ಅತ್ಯಂತ ರಹಸ್ಯವಾಗಿ ಇರುತ್ತದೆ. ಪ್ರಪಂಚ ಬುದ್ಧಿಯಿಂದ ಆತನನ್ನು ಎಂದಿಗೂ, ಯಾರೂ ತಿಳಿಯಲಾರರು. ಆತನನ್ನು ಜ್ಞಾನದಿಂದಲೇ ತಿಳಿಯುವುದಕ್ಕೆ ಅವಕಾಶವಿರುತ್ತದೆ. ಜ್ಞಾನದಿಂದ ದೇವರ ಅವತಾರವನ್ನು ಎರಡು ವಿಧಗಳಾಗಿ ತಿಳಿಯಬಹುದು. ಒಂದು ಯಾರೂ ಹೇಳದ ದೇವರ ಧರ್ಮಗಳು ಶಾಸ್ತ್ರಬದ್ಧವಾಗಿ ಎಲ್ಲಿ ತಿಳಿಯಲ್ಪಡುತ್ತಿವೆಯೋ ಅಲ್ಲಿ ದೇವರ ಅವತಾರ ಇದೆಯೆಂದು ತಿಳಿಯಬಹುದು. ಎರಡನೆಯದು ಎಲ್ಲಿ ಪ್ರಕೃತಿ ಶಾಸಿಸಲ್ಪಡುತ್ತಿದೆಯೋ ಅಲ್ಲಿ ಪರಮಾತ್ಮ ಮನುಷ್ಯನ ಆಕಾರದಲ್ಲಿ ಇದ್ದಾನೆಂದು ಹೇಳಬಹುದು. ಈ ಎರಡು ವಿಧಾನಗಳ ಪ್ರಕಾರ

ಅಲ್ಲದೇ ಬೇರೆ ಯಾವ ವಿಧವಾಗಿ ಯಾರೂ ದೇವರ ಅವತಾರವನ್ನು ಗುರುತಿಸಲಾರರು. ತ್ರೈತಾಯುಗದಲ್ಲಿ ರಾವಣಬ್ರಹ್ಮನಿಗೆ ದೇವತೆಗಳು ನಮಸ್ಕರಿಸಿದ್ದಾರೆ. ಆತನು ನವಗ್ರಹಗಳನ್ನು ಶಾಸಿಸಿದಾಗ ಆತನು ಸಾಧಾರಣ ಮನುಷ್ಯ ಅಲ್ಲವೆಂದು ತಿಳಿದಿದೆ. ರಾವಣಬ್ರಹ್ಮ ಯಾರಿಗೂ ತಿಳಿಯದ ದೈವಧರ್ಮಗಳನ್ನು ಬೋಧಿಸುವುದೇ ಅಲ್ಲದೇ ಅವುಗಳನ್ನು ಪ್ರಜೆಗಳಿಂದ ಆಚರಿಸುವಂತೆ ಮಾಡಿದನು. ಆದ್ದರಿಂದ ರಾವಣಬ್ರಹ್ಮ ದೇವರ ಅವತಾರವೆಂದು ತಿಳಿದಿದೆ. ಹಾಗೆಯೇ ದ್ವಾಪರ ಯುಗದಲ್ಲಿ ಕೃಷ್ಣನು ಸೂರ್ಯನನ್ನು ಶಾಸಿಸಿ ಒಂದು ವಿಧವಾಗಿ, ಭಗವದ್ಗೀತೆಯಲ್ಲಿ ಧರ್ಮಗಳನ್ನು ಬೋಧಿಸಿ ಮತ್ತೊಂದು ವಿಧವಾಗಿ ದೇವರ ಅವತಾರವೆಂದು ತಿಳಿಯಲ್ಪಟ್ಟಿದ್ದಾನೆ. ಎರಡು ಸಾವಿರ ವರ್ಷಗಳ ಪೂರ್ವವು ಮನುಷ್ಯನಾಗಿ ಬಂದಿರುವ ಏಸು ಸಮುದ್ರವನ್ನು ಶಾಸಿಸಿ ಒಂದು ವಿಧವಾಗಿ, ದೈವ ಧರ್ಮಗಳನ್ನು ಬೋಧಿಸಿ ಮತ್ತೊಂದು ವಿಧವಾಗಿ ದೇವರೆಂದು ಗುರುತಿಸಲ್ಪಟ್ಟಿದ್ದಾನೆ. ಏಸು ಯಾರಾಗಿರುವುದು ಪ್ರಜೆಗಳಿಗೆ ತಿಳಿಯುವುದಕ್ಕೇ ಸಮುದ್ರ ಪ್ರಯಾಣದಲ್ಲಿ ತುಫಾನು ಎದ್ದಿದೆಯೆಂದು ಅರ್ಥವಾಗುತ್ತಿದೆ. ಈ ವಿಧವಾಗಿ ದೇವರ ಅವತಾರವು ರಹಸ್ಯವಾದುದಾದರೂ ತಿಳಿಯುವುದಕ್ಕು ಕೂಡಾ ಅವಕಾಶವನ್ನು ದೇವರೇ ಕಲ್ಪಿಸಿದ್ದಾನೆ.

**3) ಮಾರ್ಕ ಸುವಾರ್ತೆ, 5ನೇ ಅಧ್ಯಾಯ, 38, 39, 40, 41, 42, 43 ವಚನಗಳು.**

**(38) ಸಭಾ ಮಂದಿರದ ಅಧಿಕಾರಿ ಒಬ್ಬನ ಮನೆಗೆ ಬಂದು ಅವರು ಗುಂಪಾಗಿದ್ದು ಅಳುವುದನ್ನು ನೋಡಿ**

**(39) ಒಳಗೆ ಹೋಗಿ ನೀವು ಯಾಕೆ ಗೋಳಾಡಿ ಅಳುತ್ತಿದ್ದೀರಿ? ಈ ಹುಡುಗಿಯು ನಿದ್ರಿಸುತ್ತಿದ್ದಾಳೆ ಹೊರತು ಸತ್ತಿಲ್ಲವೆಂದು ಅವರೊಂದಿಗೆ ಹೇಳಿದನು.**

**(40) ಅದಕ್ಕೆ ಅವರು ಆತನನ್ನು ಅಪಹಾಸ್ಯ ಮಾಡಿದರು. ಆದರೇ ಆತನು ಅವರೆಲ್ಲರನ್ನು ಹೊರಗೆ ಕಳುಹಿಸಿ, ಆ ಹುಡುಗಿಯ ತಾಯಿತಂದೆಯರನ್ನು ತನ್ನೊಂದಿಗೆ ಇರುವವರನ್ನು ಕರೆದುಕೊಂಡು ಆ ಹುಡುಗಿಯು ಮಲಗಿದ್ದ ಕೋಣೆಗೆ ಹೋಗಿ**

**(41) ಆ ಹುಡುಗಿಯ ಕೈ ಹಿಡಿದು "ತಲೀತಾಕುಮೀ" ಎಂದು ಆಕೆಯೊಂದಿಗೆ ಹೇಳಿದನು. ಆ ಮಾತಿಗೆ "ಹುಡುಗಿಯೇ ಮೇಲೇಳೆಂದು ನಿನ್ನೊಂದಿಗೆ ಹೇಳುತ್ತಿದ್ದೇನೆಂದು" ಅರ್ಥ.**

**(42) ಕೂಡಲೇ ಆ ಹುಡುಗಿ ಎದ್ದು ನಡೆದಾಡಿದಳು. ಆಕೆ ಹನ್ನೆರಡು ವರ್ಷಗಳ ವಯಸ್ಸಿನವಳು. ಕೂಡಲೇ ಅವರು ಬಹಳ ವಿಸ್ಮಯಗೊಂಡರು.**

**(43) ನಡೆದಿರುವುದು ಯಾರಿಗೂ ತಿಳಿಯಬಾರದೆಂದು ಆತನು ಅವರಿಗೆ ಗಟ್ಟಿಯಾಗಿ ಆಜ್ಞಾಪಿಸಿ ಆಕೆಗೆ ಆಹಾರವನ್ನು ಕೊಡಿರೆಂದು ಹೇಳಿದನು.**

ಸತ್ತುಹೋದ ಮನುಷ್ಯ ಪುನಃ ಬದುಕುವುದು ಎಲ್ಲರಿಗೂ ಬಹಳ ಆಶ್ಚರ್ಯಕರವಾದ ವಿಷಯವೇ. ಏಸು ತನ್ನ ಜೀವನದಲ್ಲಿ ಸತ್ತು ಹೋದವರನ್ನು ಎಬ್ಬಿಸಿದ್ದಾನೆ. ಇತರರನ್ನು ಆತನು ಎಬ್ಬಿಸುವುದೇ ಅಲ್ಲದೇ, ಆತನೇ ಸ್ವತಃವಾಗಿ ಸತ್ತು ಹೋಗಿ ಬದುಕಿ ಬಂದಿರುವ ಸಂಘಟನೆ ಕೂಡಾ ನಡೆದಿದೆ. ಇದು ಹೇಗೆ ನಡೆದಿದೆಯೆಂದು ಆಲೋಚಿಸಿದರೇ, ಸ್ವಲ್ಪ ತಿಳಿಯದ ರಹಸ್ಯವು ತಿಳಿಯುತ್ತಿದೆ. ಅದು ಏನೆಂದರೇ! ಮರಣ ಎನ್ನುವುದು ನಾಲ್ಕು ವಿಧಗಳು ಇವೆ. 1) ಕಾಲಮರಣ 2) ಅಕಾಲಮರಣ 3) ತಾತ್ಕಾಲಿಕ ಮರಣ 4) ಕೊನೆಯ ಮರಣ. ಕೊನೆಯ ಮರಣವನ್ನು ಹೊಂದಿದಾಗ ಆತನು ಪುನಃ ಹುಟ್ಟುವುದಿಲ್ಲ. ಆತನು ಕೊನೆಯ ಮರಣದೊಂದಿಗೆ ಮೋಕ್ಷವನ್ನು ಹೊಂದುತ್ತಾನೆ.

ಹಾಗೆಯೇ ಮೊದಲನೆಯದಾದ ಕಾಲಮರಣವು ಸರ್ವ ಸಾಧಾರಣವಾಗಿ ನಡೆಯುತ್ತಿರುತ್ತದೆ. ಕಾಲಮರಣದಿಂದ ಮನುಷ್ಯ ಪ್ರಸ್ತುತ ಶರೀರವನ್ನು ಬಿಟ್ಟು ಎರಡನೆಯ ಜನ್ಮಕ್ಕೆ ಹೋಗುವನು. ಕಾಲ ಮರಣದಲ್ಲಿ ಎರಡನೆ ಜನ್ಮಕ್ಕೆ ಹೋಗುವುದು ಹೊರತುಪಡಿಸಿ ಬೇರೆ ದಾರಿ ಇರುವುದಿಲ್ಲ. ಇನ್ನು ಅಕಾಲ ಮರಣದಿಂದ ಮನುಷ್ಯ ಪೂರ್ತಿ ಸಾಯದೆ ಅರ್ಧ ಶರೀರವನ್ನು ಮಾತ್ರ ಕಳೆದುಕೊಂಡು ಅರ್ಧ ಶರೀರದೊಂದಿಗೆ ಬದುಕಿರುತ್ತಾನೆ. ಇದು ಸ್ವಲ್ಪ ಆಶ್ಚರ್ಯವಾಗಿ ಇದ್ದರೂ ನಡೆಯುತ್ತಿರುವ ಸತ್ಯ ಅಷ್ಟೇ.

ಮನುಷ್ಯನಿಗೆ ಶರೀರವು ಎರಡು ಭಾಗಗಳಾಗಿ ಇದೆ. ಮನುಷ್ಯನಿಗೇ ಅಲ್ಲ ಉಳಿದ ಜೀವರಾಶಿಗಳ ಶರೀರಗಳು ಕೂಡಾ ಸ್ಥೂಲ, ಸೂಕ್ಷ್ಮ ಎಂಬ ಎರಡು ವಿಧಗಳು ಇವೆ. ಮನುಷ್ಯನ ಶರೀರದಲ್ಲಿ ಹತ್ತು ಭಾಗಗಳು ಸ್ಥೂಲ ಶರೀರವಾಗಿ, ಹದಿನೈದು ಭಾಗಗಳು ಸೂಕ್ಷ್ಮ ಶರೀರವಾಗಿ ಇದೆ. ಮನುಷ್ಯ ಅಕಾಲ ಮರಣವನ್ನು ಹೊಂದಿದಾಗ ಹತ್ತು ಭಾಗಗಳಿರುವ ಸ್ಥೂಲ ಶರೀರವನ್ನು ಬಿಟ್ಟು ಹದಿನೈದು ಭಾಗಗಳ ಸೂಕ್ಷ್ಮ ಶರೀರದೊಂದಿಗೆ ಜೀವಿಸುತ್ತಿರುತ್ತಾನೆ. ಆದ್ದರಿಂದ ಅಕಾಲ ಮರಣವನ್ನು ಹೊಂದಿದವನನ್ನು ಅರ್ಧ ಸತ್ತವನೆಂದು ಹೇಳಬಹುದು. ಉಳಿದಿರುವ ಸೂಕ್ಷ್ಮ ಶರೀರವು ಪೂರ್ತಿಯಾಗಿ ಮರಣಿಸಿದಾಗ ಕಾಲಮರಣವಾಗುತ್ತದೆ. ಆಗ ಅವನು ಎರಡನೆಯ ಜನ್ಮಕ್ಕೆ ಹೋಗುತ್ತಾನೆ. ಕಾಲ ಮರಣವು ಬಾರದೇ, ಅಕಾಲ ಮರಣದೊಂದಿಗೆ ಸತ್ತುಹೋದವನು ಕಾಣಿಸದೆ ಬದುಕುತ್ತಿರುತ್ತಾನೆ. ಆತನು ಕಾಲಮರಣವು ಬರುವವರೆಗು ಹಾಗೆಯೇ ಇರುತ್ತಾನೆ. ಇನ್ನು ತಾತ್ಕಾಲಿಕ ಮರಣವು ಮಾತ್ರ ಇಲ್ಲಿಯವರೆಗು ಯಾರಿಗೂ ತಿಳಿಯದೆ ಇದೆ. ತಾತ್ಕಾಲಿಕ ಮರಣದಲ್ಲಿ ಮನುಷ್ಯನ ಶರೀರದಲ್ಲಿ ಎಲ್ಲಾ ಕಾರ್ಯಗಳು ನಿಂತು ಹೋಗುತ್ತವೆ. ಆದರೂ ಮನುಷ್ಯ ಶರೀರದಲ್ಲಿನ ಜೀವಿಯು ಹೊರಗೆ ಹೋಗದೇ ಶರೀರದಲ್ಲಿಯೇ ಅಣಗಿರುತ್ತಾನೆ. ಶರೀರದಲ್ಲಿ ಅಣಗಿರುವ ಜೀವಿಯು ನಿದ್ರೆಯಲ್ಲಿ ಮುಳುಗಿರುತ್ತಾನೆ. ತಾತ್ಕಾಲಿಕ ಮರಣದಲ್ಲಿ ಮನುಷ್ಯ ಸತ್ತುಹೋಗದೇ ಆತನ ಪ್ರಾಣವು ಶರೀರದಲ್ಲಿಯೇ ಅಣಗಿ ಇರುವುದರಿಂದ

ಆ ಮನುಷ್ಯ ಮೇಲ್ನೋಟಕ್ಕೆ ಮಾತ್ರ ಸತ್ತುಹೋದ ಹಾಗೆಯೇ ಕಾಣಿಸುತ್ತಿರುತ್ತಾನೆ. ಹಾಗೆ ಕಾಣಿಸುವುದರಿಂದ ಆತನನ್ನು ಸತ್ತುಹೋದವನ ಕೆಳಗೆ ಜಮಕಟ್ಟಿ ಆತನ ಶರೀರವನ್ನು ಊತಿಟ್ಟಿರುವ ಸಂಘಟನೆಗಳು ಬಹಳ ನಡೆದಿವೆ. ತಾತ್ಕಾಲಿಕ ಮರಣದಲ್ಲಿ ಆತನು ಸತ್ತುಹೋಗಲಿಲ್ಲವೆಂದು ಯಾರೂ ಗುರುತಿಸಲಾರರು. ಆದ್ದರಿಂದ ಬಹಳಜನ ಪ್ರಾಣದಿಂದ ಇದ್ದರೂ ಅವರನ್ನು ಊತಿಡುವುದು ನಡೆದಿದೆ. ಕೆಲವು ನಡೆದಿರುವ ಪ್ರತ್ಯಕ್ಷ ಸಂಘಟನೆಗಳನ್ನು ಕೆಳಗಿನ ಪುಟಗಳಲ್ಲಿ ತೋರಿಸುತ್ತಿದ್ದೇವೆ ನೋಡಿ.

## (ಜಮ್ಮು ಕಾಶ್ಮೀರ್‌ದಲ್ಲಿನ ಅಬ್ದುಲ್ ಅಜೀಜ್ ಕಥೆ)

2009 ಡಿಸೆಂಬರ್ 7ನೇ ತಾರೀಖು ಟೀವಿ9 ರಲ್ಲಿ ಮಧ್ಯಾಹ್ನ 1–30 ನಿಮಿಷಗಳಿಗೆ ಒಂದು ಕಥನ ಪ್ರಸಾರವಾಯಿತು. ಅದೇನೆಂದರೇ! ಅಂದಿಗೆ ಒಂದು ವಾರದ ದಿನಗಳ ಹಿಂದೆ ಅಂದರೇ 2009 ನವಂಬರ್, 30ನೇ ತಾರೀಖು ಜಮ್ಮು ಕಾಶ್ಮೀರ್‌ದಲ್ಲಿನ 'ರಾಜೌರಿ' ಎಂಬ ಗ್ರಾಮದಲ್ಲಿ ಅಬ್ದುಲ್ ಅಜೀಜ್ ಎಂಬ 60 ವರ್ಷಗಳ ವೃದ್ಧನು ಸತ್ತುಹೋದನು. ಆತನು ಮುಸ್ಲೀಮ್ ಆಗಿರುವುದರಿಂದ ಇಸ್ಲಾಮ್ ಸಂಪ್ರದಾಯದ ಪ್ರಕಾರ ಆತನನ್ನು ಭೂಮಿಯಲ್ಲಿ ಊತಿಡುವುದು ನಡೆದಿದೆ. ಆತನನ್ನು ಊತಿಟ್ಟ ಮೂರು ದಿನಗಳಿಗೆ ಆತನು ಸಾಧಾರಣವಾಗಿ ಸಾಯಲಿಲ್ಲವೆಂದು, ಯಾರೋ ಹತ್ಯೆ ಮಾಡಿದ್ದಾರೆಂದು ಆರೋಪಣೆ ಪೊಲೀಸರಿಗೆ ಸೇರಿತು. ಕೂಡಲೇ ಪೊಲೀಸರು ಕೇಸು ಬರೆದುಕೊಂಡು ಸ್ಮಶಾನಕ್ಕೆ ಹೋಗಿ ಅಬ್ದುಲ್ ಅಜೀಜ್ ಶವವನ್ನು ಬಂಧುಗಳ ಸಮಕ್ಷಮದಲ್ಲಿಯೇ ಹೊರಗೆ ತೆಗೆದರು. ಹೊರಗೆ ತೆಗೆದ ಅಬ್ದುಲ್ ಅಜೀಜ್ ಶರೀರವನ್ನು ಪೋಸ್ಟುಮಾರ್ಟಮ್ (ಶವಪರೀಕ್ಷೆ) ಗಾಗಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ಡಾಕ್ಟರ್ ಶವಪರೀಕ್ಷೆ ಮಾಡಲು ಪ್ರಾರಂಭಿಸಿದ್ದಾನೆ. ಮೊದಲು ತಲೆ ಭಾಗವನ್ನು ಪರೀಕ್ಷಿಸುವುದಕ್ಕೆ ತಲೆ ಮೇಲಿನ ಚರ್ಮವನ್ನು ತೆಗೆಯುವುದಕ್ಕೆ ಕತ್ತಿಯಿಂದ ತಲೆ ಮೇಲೆ ಹೊಡೆಯಲಾಗಿದೆ. ತಲೆ ಮೇಲೆ ಗಾಯವಾಗಿದೆ. ಆಗ ಎಲ್ಲರಿಗೂ ಆಶ್ಚರ್ಯವಾಗುವ ಹಾಗೆ ಅಲ್ಲಿಯವರೆಗು ಸತ್ತುಹೋದ ಅಬ್ದುಲ್

ಅಜೀಜ್ ಎದ್ದು ಕುಳಿತುಕೊಂಡು "ನನ್ನನ್ನು ಏನು ಮಾಡುತ್ತಿದ್ದೀರೆಂದು" ಪ್ರಶ್ನಿಸಿದನು. ಹಾಗೆ ಆತನು ಎದ್ದು ಕೇಳುವುದು ಡಾಕ್ಟರ್‌ಗೆ ನಂಬಲು ಸಾಧ್ಯವಾಗಲಿಲ್ಲ. ಆದರೂ ಡಾಕ್ಟರ್ ಎಚ್ಚೆತ್ತುಕೊಂಡು ಆತನು ಕೇಳಿದ ಪ್ರಶ್ನೆಗೆ 'ನಿನ್ನನ್ನು ಶವಪರೀಕ್ಷೆ ಮಾಡುತ್ತಿದ್ದೇವೆಂದು' ಹೇಳಿದನು. ಅದಕ್ಕೆ ಅಬ್ದುಲ್ ಅಜೀಜ್ 'ನಾನು ಬದುಕೇ ಇದ್ದೇನೆ ಅಲ್ಲವೇ!' ಎಂದು ಹೇಳಿದನು. ಅಷ್ಟರಲ್ಲಿ ಡಾಕ್ಟರ್‌ರವರು ಅಬ್ದುಲ್ ಅಜೀಜ್ ಒಬ್ಬರ ಬಂಧುಗಳಿಗೆ ವಿಷಯವನ್ನು ತಿಳಿಸಿದಾಗ, ಹೊರಗಿರುವ ಬಂಧುಗಳು ಬಂದು ಆತನನ್ನು ಕರೆದುಕೊಂಡು ಹೋಗುವುದು ನಡೆಯಿತು. ಮೂರು ದಿನಗಳ ಹಿಂದೆ ಅಬ್ದುಲ್ ಅಜೀಜ್ ಸತ್ತು ಹೋದಾಗ ಹದಿನೈದು ನಿಮಿಷಗಳ ನಂತರ ಪರೀಕ್ಷಿಸಿ, ನೋಡಿ ಆತನು ಸತ್ತು ಹೋಗಿದ್ದಾನೆಂದು ಹೇಳಿದ್ದೇನೆಂದು, ಅಜೀಜ್ ವಿಷಯದಲ್ಲಿ ಅದ್ಭುತ ನಡೆದಿದೆಯೆಂದು ಡಾಕ್ಟರ್ ಹೇಳಿದ್ದಾರೆ. ರಾಜೌರಿ ಗ್ರಾಮ ಪ್ರಜೆಗಳು ಕೂಡಾ ತಮ್ಮ ಕೈಗಳಿಂದ ಊತಿಟ್ಟಿರುವ ಅಬ್ದುಲ್ ಅಜೀಜ್ ಮೂರು ದಿನಗಳ ನಂತರ ಬದುಕಿ ಬರುವುದೇನೆಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಈ ಸಂಘಟನೆ ನಡೆದು ಇಲ್ಲಿಗೆ ಕೇವಲ ಆರು ವರ್ಷಗಳ ಏಳು ತಿಂಗಳು ಮಾತ್ರವೇ ಆಗುತ್ತದೆ. ಈ ವಿಷಯವನ್ನು ಎಲ್ಲರಿಗೂ ತಿಳಿಯುವ ಹಾಗೆ ಆ ದಿನವೇ ಟೀವಿ ಚಾನಲ್‌ಗಳು ಎಲ್ಲವು ಪ್ರಸಾರ ಮಾಡಿವೆ. ಈ ಸಂಘಟನೆ ಕೂಡಾ ಡಾಕ್ಟರ್‌ಗಳ ಸಮಕ್ಷಮದಲ್ಲಿಯೇ ನಡೆದಿದೆ. ಆದಕಾರಣ ಯಾರೂ ಇದನ್ನು ಖಂಡಿಸುವುದಕ್ಕಾಗಲೀ, ಮೂಢ ನಂಬಿಕೆ ಎನ್ನುವುದಕ್ಕಾಗಲೀ ಸಾಧ್ಯವಿಲ್ಲ.

## (ವಿಶಾಖ ಜಿಲ್ಲೆಯಲ್ಲಿ ನಡೆದಿರುವ ಒಂದು ಸಂಘಟನೆ)

ವಿಶಾಖ ಜಿಲ್ಲೆಯಲ್ಲಿ ಅರಕು ಕಣಿವೆಗೆ ಹೋಗುವ ದಾರಿಯಲ್ಲಿ 'ಶೃಂಗವರಪು ಕೋಟ' ಎಂಬ ಊರಿದೆ. ಶೃಂಗವರಪು ಕೋಟ ಮಂಡಲದಲ್ಲಿ ಅಲ್ಲಿಗೆ 12 ಕಿಲೋಮೀಟರುಗಳ ದೂರದಲ್ಲಿ 'ಸಾರೆಪುರ' ಎಂಬ ಗ್ರಾಮವಿದೆ. ಸಾರೆಪುರ ಗ್ರಾಮದಲ್ಲಿ 67 ವರ್ಷಗಳ ವಯಸ್ಸಿರುವ 'ಸಮುದ್ರಮ್ಮ' ಎಂಬ

ಹೆಸರಿರುವ ಮಹಿಳೆ ಇದ್ದಳು. ಆಕೆಗೆ ಸುಮಾರು ಹತ್ತು ವರ್ಷಗಳಿಂದ ಹೈಬಿಪಿ, ಮತ್ತು ಷುಗರ್ ವ್ಯಾಧಿ ಇದ್ದವು. ಆಕೆ ಶೃಂಗವರಪು ಕೋಟೆಯಲ್ಲಿನ ಸೀನಿಯರ್ ಡಾಕ್ಟರಾದ ಧರ್ಮಲಿಂಗಾಚಾರಿ ಹತ್ತಿರ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಳು. ಎಂ.ಬಿ.ಬಿ.ಎಸ್ ಡಾಕ್ಟರ್ ಧರ್ಮಲಿಂಗಾಚಾರಿಯವರು ಒಳ್ಳೆಯ ಹೆಸರು ವಾಸಿಯಾದ ಸುಮಾರು 60 ವರ್ಷಗಳ ವಯಸ್ಸಿರುವ ಅನುಭವಸ್ತನು. ಇಂದಿಗೆ 6 ವರ್ಷಗಳ ಪೂರ್ವವು ಒಂದು ದಿನ ಸಾಯಂಕಾಲ 6 ಗಂಟೆಗಳ ಸಮಯದಲ್ಲಿ ಸಮುದ್ರಮ್ಮನನ್ನು ಡಾಕ್ಟರ್ ಧರ್ಮಲಿಂಗಾಚಾರಿ ಹತ್ತಿರ ಕರೆದುಕೊಂಡು ಬರುವುದು ನಡೆದಿದೆ. ಅದಕ್ಕು ಮೊದಲೇ ಸರ್ಕಾರಿ ಆಸ್ಪತ್ರೆಯಲ್ಲಿ ಸತ್ತುಹೋಗಿದ್ದಾಳೆಂದು ಹೇಳಿದ ನಂತರ ಅಲ್ಲಿಗೆ ತೆಗೆದುಕೊಂಡು ಬಂದಿದ್ದಾರೆ. ಆಗ ಡಾಕ್ಟರ್‌ರವರು ಆಕೆಯನ್ನು ನೋಡಿದಾಗ ಆಕೆ ಶರೀರದಲ್ಲಿ ಬಿ.ಪಿ ಆಗಲೀ, ನಾಡಿಯಾಗಲೀ ಏನೂ ಇಲ್ಲ. ಆಕೆಗೆ ಶ್ವಾಸವಾಗಲೀ, ನಾಡಿ (ಪಲ್ಸ್) ಆಗಲೀ ಸ್ವಲ್ಪವಾದರೂ ಇಲ್ಲದಿದ್ದರಿಂದ ಆಕೆಯನ್ನು ಸತ್ತುಹೋಗಿದ್ದಾಳೆಂದು ನಿರ್ಧಾರಿಸಿ ಡಾಕ್ಟರ್ “ಮನೆಗೆ ತೆಗೆದುಕೊಂಡು ಹೋಗಿ, ಈಕೆ ಸತ್ತು ಹೋಗಿದ್ದಾಳೆ, ಈಕೆಗೆ ಚಿಕಿತ್ಸೆ ಅವಶ್ಯಕತೆ ಇಲ್ಲ” ಎಂದನು. ಆಗ ಅವರು 12 ಕಿಲೋಮೀಟರುಗಳ ದೂರದಲ್ಲಿರುವ ಅವರ ಗ್ರಾಮಕ್ಕೆ ತೆಗೆದುಕೊಂಡು ಹೋದರು. ಆಗ ರಾತ್ರಿ ಆಗಿದ್ದರಿಂದ ಬೆಳಗ್ಗೆ ಆಕೆಯನ್ನು ಊತಿಡಬೇಕೆಂದುಕೊಂಡರು. ಬೆಳಗಾಗುತ್ತಲೇ ಮಳೆ ಪ್ರಾರಂಭವಾಗಿ ಎರಡು ದಿನಗಳು ಬಿಡುವಿಲ್ಲದ ಹಾಗೆ ಸುರಿಯುತ್ತಿದ್ದರಿಂದ ಹೊರಗೆ ಹೋಗುವುದಕ್ಕೆ ಅವಕಾಶವೇ ಇಲ್ಲದಂತೆ ಹೋಯಿತು. ಸಮುದ್ರಮ್ಮನ ಶವವನ್ನು ಹಾಗೆಯೇ ಮೂರು ದಿನಗಳು ವರಂಡಾದಲ್ಲಿಯೇ ಇಟ್ಟಿದ್ದಾರೆ. ಮೂರು ದಿನಗಳ ನಂತರ ನಾಲ್ಕನೆಯ ದಿನ ಬೆಳಗ್ಗೆ ಆಕೆ ಎದ್ದು ಕುಳಿತುಕೊಂಡು ಎಲ್ಲರನ್ನು ಕರೆದಳಂತೆ. ಆಗ ಆಕೆ ಬಂಧುಗಳು ಆಕೆ ಬದುಕಿರುವ ಹಾಗೆ ಗ್ರಹಿಸಿ, ಕೂಡಲೇ ಡಾಕ್ಟರ್ ಧರ್ಮಲಿಂಗಾಚಾರಿಯವರಿಗೆ ಫೋನ್ ಮಾಡುವುದು ನಡೆದಿದೆ. ಹದಿನೈದು ದಿನಗಳು ಕಳೆದ ನಂತರ ಆಕೆಯನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಬಂದಿದ್ದಾರೆ. ಆಗ ಡಾಕ್ಟರ್ “ನೀನು ಸತ್ತು ಹೋಗಿ ಮೂರು ದಿನಗಳು

ಹಾಗೆಯೇ ಇದ್ದೀಯ ಅಲ್ಲವೇ! ಆಗ ನಿನಗೆ ಯಮಭಟರಾಗಲೀ, ಯಮಲೋಕವಾಗಲೀ ಏನಾದರೂ ಕಾಣಿಸಿದೆಯಾ?" ಎಂದು ಕೇಳಿದನು. ಅದಕ್ಕೆ ಆಕೆ "ನನಗೆ ಏನು ಕಾಣಿಸಲಿಲ್ಲ" ಎಂದು ಹೇಳಿದಳಂತೆ. ಈ ಸಂಘಟನೆ ಕೂಡಾ ಒಬ್ಬ ಡಾಕ್ಟರ್ ಸಮಕ್ಷಮದಲ್ಲಿ ಆರು ವರ್ಷಗಳ ಕೆಳಗೆ ನಡೆದಿದೆ . ಆದ್ದರಿಂದ ಇದನ್ನು ಕೂಡಾ ಯಾರೂ ಅಲ್ಲಗಳೆಯುವುದಕ್ಕಾಗಲೀ, ಮೂಢನಂಬಿಕೆ ಎನ್ನುವುದಕ್ಕಾಗಲೀ ಸಾಧ್ಯವಿಲ್ಲ. **(ಮತ್ತೊಂದು ಸಂಘಟನೆ ಕುರಿತು ಕೆಳಗಿನ ಪುಟದಲ್ಲಿ ನೋಡಿರಿ.)**

## 10.07.2012, ಸಾಕ್ಷಿ (Telugu) ನ್ಯೂಸ್, ತಾತ್ಕಾಲಿಕ ಮರಣ ಚಿತೆಯಿಂದ ಪ್ರಾಣದೊಂದಿಗೆ..!

ಚೆನ್ನೈ, ನ್ಯೂಸ್ ಲೈನ್: ಅನಾರೋಗ್ಯದಿಂದ ಬಾಧೆಪಡುತ್ತಿರುವ ತಮಿಳನಾಡು ಕರೂರ್ ಜಿಲ್ಲೆ ಕೃಷ್ಣರಾಯಪುರಕ್ಕೆ ಸೇರಿರುವ 50 ವರ್ಷ ವಯಸ್ಸಿನ ಮುತ್ತುಸ್ವಾಮಿ ಮಂಗಳವಾರ ಮರಣಿಸಿದ್ದಾನೆಂದು ಡಾಕ್ಟರ್‌ಗಳು ನಿರ್ಣ ಯಿಸಿಬಿಟ್ಟರು. ಮೃತ ದೇಹವನ್ನು ತೆಗೆದುಕೊಂಡು ಹೋಗಿ ಅಂತಿಮ ಸಂಸ್ಕಾರವನ್ನು ಮಾಡಿಕೊಳ್ಳಬೇಕೆಂದು ಸಲಹೆ ಕೂಡಾ ಕೊಟ್ಟಿದ್ದಾರೆ. ವಯಸ್ಸು ಹೆಚ್ಚಾಗಿರುವುದರಿಂದ, ಅನಾರೋಗ್ಯವು ಪೀಡಿಸುತ್ತಿದ್ದರಿಂದ ಮುತ್ತುಸ್ವಾಮಿ ನಿಜವಾಗಿಯೇ ಸತ್ತುಹೋಗಿರುತ್ತಾನೆಂದು ಭಾವಿಸಿರುವ ಬಂಧುಗಳು ಚಿತೆಗೆ ಏರ್ಪಾಟು ಮಾಡಿದರು. ಸ್ಮಶಾನದಲ್ಲಿ ಬಂಧುಗಳು ಗುಂಪು ಕೂಡಿದರು. ಇನ್ನು ತಲೆಗೊರವಿ (ಉತ್ತರಕ್ರಿಯೆ) ಇಡುವುದರಲ್ಲೇ ಚಿತೆ ಮೇಲೆ ಮಲಗಿಸಿಟ್ಟ ಶವವನ್ನು ಅಂತಿಮವಾಗಿ ನೋಡುವುದಕ್ಕೆ ಬಂದಿರುವ ಮುತ್ತುಸ್ವಾಮಿ ತಂಗಿ ಪಾಪಾತ್ತಿ, ದುಃಖವನ್ನು ತಡೆಯಲಾರದೇ ಪಾರ್ಥಿವ ದೇಹದ ಮೇಲೆ ಬಿದ್ದು ಗಟ್ಟಿಯಾಗಿ ಅಳುತ್ತಿದ್ದಳು. 'ಅಣ್ಣಾ ನನ್ನನ್ನು ಬಿಟ್ಟು ಹೋಗುತ್ತೀಯಾ?' ಎನ್ನುತ್ತಾ ಶೋಕವಿಟ್ಟಳು. ಅಷ್ಟೇ! ಸತ್ತುಹೋಗಿದ್ದಾನೆ ಅಂದುಕೊಂಡ ಮುತ್ತುಸ್ವಾಮಿಯಲ್ಲಿ ಕದಲಿಕೆ!! ಕಾಲುಗಳು ಕೈಗಳು ಕದಲಿದವು. ಅಷ್ಟೇ ಅಲ್ಲ, ಇಷ್ಟರಲ್ಲಿ ಚಿಕ್ಕದಾಗಿ 'ಮೂಲುಗುವುದು' ಕೂಡಾ ಸದ್ದಾಯಿತು. ಇನ್ನು ಕೆಲವು ಸೆಕೆಂಡುಗಳಲ್ಲಿಯೇ

ಕಾಲುಗಳು, ಕೈಗಳಲ್ಲಿ ಸ್ವಲ್ಪ ಕದಲಿಕೆ. ಕಣ್ಣೀರ ಸಮುದ್ರದಲ್ಲಿ ಮುಳುಗಿ ಹೋಗಿರುವ ಬಂಧುಗಳು ಈ ಪರಿಣಾಮದಿಂದ ಒಂದೇ ಸಲ ಆಶ್ಚರ್ಯಾನಂದಕ್ಕೆ ಒಳಗಾಗಿ ಗಟ್ಟಿಯಾಗಿ 'ಮುತ್ತುಸ್ವಾಮಿ... ಮುತ್ತುಸ್ವಾಮಿ' ಎನ್ನುತ್ತಾ

*** ತಂಗಿಯ ರೋದನೆಯಿಂದ 'ಕಣ್ಣು ತೆರೆದ' ಅಣ್ಣ**

*** ವೈದ್ಯರ ನಿರ್ಲಕ್ಷ್ಯದ ಮೇಲೆ ಚರ್ಚೆ!**

ಒಂದೇ ಸಮಕ್ಕೆ ಕೂಗಿದರು. ಇವರ ಕಿರುಚಾಟಕ್ಕೆ ನಿದ್ರೆಯಿಂದ ಎದ್ದ ಹಾಗೆ ಚಿತೆ ಮೇಲಿಂದ ಎದ್ದ ಮುತ್ತುಸ್ವಾಮಿ. ಏನು? ಏನಾಯಿತು? ಎಂದು ಬಂಧುಗಳನ್ನು ಎದುರು ಪ್ರಶ್ನಿಸಿದನು. ಇದರಿಂದ ಎಲ್ಲರೂ ಹರುಷದಳುವಿನ ಮಧ್ಯೆಯಲ್ಲಿ ಮುತ್ತುಸ್ವಾಮಿಯನ್ನು ಅಪ್ಪಿಕೊಂಡು, ಪುನಃ ಆಸ್ಪತ್ರೆಗೆ ಸೇರಿಸಿದರು. ಮುತ್ತುಸ್ವಾಮಿ ಏಕೈಕ ಮಗಳಿಗೆ ಸೋಮವಾರವೇ ವಿವಾಹ ಆಗುವುದು ಗಮನಿಸತಕ್ಕದ್ದು.

ವೈದ್ಯರ ನಿರ್ಲಕ್ಷ್ಯ: ಅನಾರೋಗ್ಯದಿಂದ ಬಾಧೆಪಡುತ್ತಾ ಹತ್ತು ದಿನಗಳ ಹಿಂದೆ ಸ್ಥಳೀಯ ಆಸ್ಪತ್ರೆಯಲ್ಲಿ ಸೇರಿದ ಮುತ್ತುಸ್ವಾಮೀ ಮೇಲೆ ವೈದ್ಯರು ನಿರ್ಲಕ್ಷ್ಯವಾಗಿ ವ್ಯವಹರಿಸಿದ್ದಾರೆಂದು ಬಂಧುಗಳು ವಿಮರ್ಶಿಸಿದ್ದಾರೆ. ವೈದ್ಯರು ಮಾಡಿರುವ ಘನ ಕಾರ್ಯದ ಮೇಲೆ ಮಣ್ಣೆತ್ತಿ ಹಾಕಿದರು. ಹಾಗಿರುವಾಗ, ಈ ವಾರ್ತೆ ಕರೂರ್ ಜಿಲ್ಲೆಯಲ್ಲಿ ಕಾಡ್ಗಿಚ್ಚಿನ ಹಾಗೆ ವ್ಯಾಪಿಸಿತು. ಇದರಿಂದ ಸರ್ವರಿಗೂ ಇದರ ಮೇಲೆ ಚರ್ಚೆ ಸಾಗಿತು. **(ಇದು ತಾತ್ಕಾಲಿಕ ಮರಣಕ್ಕೆ ಪ್ರತ್ಯಕ್ಷ ಉದಾಹರಣೆ)**

ಎಲ್ಲಾದರೂ ತಾತ್ಕಾಲಿಕ ಮರಣವನ್ನು ಹೊಂದಿದವನು ಸತ್ತುಹೋದ ಹಾಗೆ ಕಾಣಿಸಿದರೂ ಆತನು ಒಂದು ವರ್ಷದವರೆಗು ಆಗಲೀ ಇಲ್ಲವೇ ಅದಕ್ಕಿಂತಲೂ ಹೆಚ್ಚು ಕಾಲವಾಗಲೀ ಬದುಕಿರುವುದಕ್ಕೆ ಅವಕಾಶವಿದೆ. ಅಂಥವನು ಎಂದಾದರೂ ತನಗೆ ತಾನಾಗಿ ಆಗಲೀ, ಇಲ್ಲವೇ ಇತರರು ತಟ್ಟಿ ಎಬ್ಬಿಸಿದರೇ ಮತ್ತೆ ಬದುಕುವುದಕ್ಕೆ ಅವಕಾಶವಿದೆ. ತಾತ್ಕಾಲಿಕ ಮರಣವನ್ನು ಹೊಂದಿದವರು

ಅನೇಕ ಕಡೆಗಳಲ್ಲಿ ಬೆಳಗ್ಗೆ ಸತ್ತುಹೋಗಿ ಸಾಯಂಕಾಲ ಎದ್ದವರು ಇದ್ದಾರೆ. ಒಂದು ವಾರಕ್ಕೆ ಎದ್ದಿರುವವರು ಇದ್ದಾರೆ. ಈ ಮಧ್ಯೆ ಕಾಲದಲ್ಲಿ ಚಿತೆ ಮೇಲೆ ಇಡಲಾದ ಮುತ್ತುಸ್ವಾಮಿ ಎಂಬ ವ್ಯಕ್ತಿ ಬದುಕಿ ಎದ್ದು ಕುಳಿತುಕೊಳ್ಳುವುದು ತಮಿಳುನಾಡಿನಲ್ಲಿ ನಡೆದಿದೆ. ಆ ರೀತಿಯಾಗಿ ತಾತ್ಕಾಲಿಕ ಮರಣ ಹೊಂದಿದ ಬಾಲಕಿಯನ್ನು ಏಸು ಗುರುತಿಸಿ ಆಕೆ ಸತ್ತುಹೋಗಲಿಲ್ಲ ಎಂದು ಹೇಳಿ ಆಕೆಯನ್ನು ತಟ್ಟಿ ಎಬ್ಬಿಸಿದನು. ಹಾಗೆಯೇ ಏಸು ಸ್ವತಃವಾಗಿ ಸತ್ತುಹೋಗಿ ಬದುಕಿ ಬಂದ ಹಾಗೆ ಚರಿತ್ರೆ ಇದೆ. ಇದೆಲ್ಲವೂ ತಾತ್ಕಾಲಿಕ ಮರಣದಿಂದ ನಡೆದಿರುವುದೇಯೆಂದು ತಿಳಿಯಬೇಕು. ಮರಣಗಳನ್ನು ಕುರಿತು ನಾಲ್ಕು ವಿಧಗಳ ಮರಣಗಳು ಇವೆಯೆಂದು ಅವುಗಳ ವಾಸ್ತವಿಕತೆಯನ್ನು ನಮ್ಮ ರಚನೆಗಳಲ್ಲಿನ **"ಮರಣ ರಹಸ್ಯ"** ಎಂಬ ಗ್ರಂಥದಲ್ಲಿ ಬರೆದಿದ್ದೇವೆ. ಅದನ್ನು ನೋಡಿದರೇ ವಿಷಯವು ಸಂಪೂರ್ಣ ವಾಗಿ ತಿಳಿಯುತ್ತದೆ.

**4) ಮಾರ್ಕ ಸುವಾರ್ತೆ, 7ನೇ ಅಧ್ಯಾಯ, 15, 16, 17, 18, 19, 20, 21, 22, 23 ವಚನಗಳು.**

**15) ಹೊರಗಿನಿಂದ ಒಳಗೆ ಹೋಗಿ ಮನುಷ್ಯನನ್ನು ಅಪವಿತ್ರ ನನ್ನಾಗಿ ಮಾಡುವುದು ಯಾವುದೂ ಇಲ್ಲ ಆದರೇ, ಒಳಗಡೆಯಿಂದ ಹೊರಗೆ ಹೋಗುವವೇ**

**16) ಮನುಷ್ಯನನ್ನು ಅಪವಿತ್ರನನ್ನಾಗಿ ಮಾಡುವುದು ಎಂದನು.**

**17) ಆತನು ಜನ ಸಮೂಹಗಳನ್ನು ಬಿಟ್ಟು ಮನೆಯೊಳಗೆ ಬಂದಾಗ ಆತನ ಶಿಷ್ಯರು ಈ ಉಪಮಾನವನ್ನು ಕುರಿತು ಆತನನ್ನು ಕೇಳಿದಾಗ**

**18) ಆತನು ಅವರೊಂದಿಗೆ ಹೀಗೆಂದನು. "ನೀವು ಇಷ್ಟು ಅವಿವೇ ಕಿಗಳಾಗಿ ಇದ್ದೀರಾ? ಹೊರಗಡೆಯಿಂದ ಮನುಷ್ಯನ ಒಳಗೆ**

**ಹೋಗುವುದು ಯಾವುದೂ ಅವನನ್ನು ಅಪವಿತ್ರನನ್ನಾಗಿ ಮಾಡಲಾರದು ಎಂದು ನೀವು ಗ್ರಹಿಸದೆ ಇದ್ದೀರಾ?"**

**19) "ಅದು ಅವನ ಹೃದಯದಲ್ಲಿ ಪ್ರವೇಶಿಸದೆ ಹೊಟ್ಟೆಯೊಳಗೆ ಪ್ರವೇಶಿಸಿ ಬಹಿರ್ಭೂಮಿಯಲ್ಲಿ ಬಿಡಲಾಗುವುದು. ಹೀಗೆ ಅದು ಭೋಜನ ಪದಾರ್ಥಗಳೆಲ್ಲವನ್ನು ಪವಿತ್ರ ಪಡಿಸುವುದು."**

**20) "ಮನುಷ್ಯನ ಒಳಗಡೆಯಿಂದ ಬಯಲಿಗೆ ಹೋಗುವುದು ಮನುಷ್ಯನನ್ನು ಅಪವಿತ್ರ ಪಡಿಸುವುದು."**

**21) ಒಳಗಡೆಯಿಂದ ಅಂದರೇ ಮನುಷ್ಯನ ಹೃದಯ ದೊಳಗಿನಿಂದ ದುರಾಲೋಚನೆಗಳನ್ನು, ಜಾರತ್ವವನ್ನು, ಕಳ್ಳತನಗಳನ್ನು**

**22) ನರಹತ್ಯೆಗಳಿಂದ, ವ್ಯಭಿಚಾರದಿಂದ, ಲೋಭಗಳಿಂದ, ಕೆಟ್ಟತನಗಳಿಂದ, ಕಾಮವಿಕಾರದಿಂದ, ಮತ್ಸರದಿಂದ, ದೈವ ದೂಷಣೆಯಿಂದ, ಅಹಂಭಾವನೆಯಿಂದ, ಅವಿವೇಕದಿಂದ ಬರುತ್ತದೆ.**

**23) ಈ ಕೆಟ್ಟ ಕೆಲಸಗಳೆಲ್ಲವು ಒಳಗಡೆಯಿಂದ ಹೊರಗೆ ಹೋಗಿ ಮನುಷ್ಯನನ್ನು ಅಪವಿತ್ರ ಪಡಿಸುವವೆಂದು ಆತನು ಹೇಳಿದ್ದಾನೆ.**

ಮನುಷ್ಯನ ಜನ್ಮದಲ್ಲಿಯೇ ಮನುಷ್ಯನ ತಲೆಯಲ್ಲಿ ಆರು ಕೆಟ್ಟ ಗುಣಗಳು, ಆರು ಒಳ್ಳೆಯ ಗುಣಗಳು ತುಂಬಿಸಲ್ಪಟಿರುತ್ತವೆ. ಮನುಷ್ಯ ಬೆಳೆದಂತೆಲ್ಲಾ ಗುಣಗಳು ಕೂಡಾ ಬೆಳೆಯುತ್ತಾ ಬರುತ್ತವೆ. ಗುಣಗಳು ಶರೀರದಲ್ಲಿಯೇ ತಲೆಯಲ್ಲಿರುವ ಬುದ್ಧಿಯನ್ನು ಸೇರಿ ಬುದ್ಧಿಯನ್ನು ಪ್ರೇರೇಪಿಸಿ ಬುದ್ಧಿ ಆಜ್ಞೆಯಿಂದ ಹೊರಗಿನ ಕೆಲಸಗಳು ನಡೆಯುವ ಹಾಗೆ ಇದೆ. ಶರೀರದ ಹೊರಗಿನ ಕಾರ್ಯಗಳನ್ನು

ಮಾಡುವ ಕರ್ಮೇಂದ್ರಿಯಗಳಿಗೆ ಬುದ್ಧಿ ಸೂಚನೆಗಳನ್ನು ಕೊಟ್ಟು ಕೆಲಸವನ್ನು ಮಾಡಿಸುತ್ತಿರುತ್ತದೆ. ಬುದ್ಧಿ ಗುಣಾನುಸಾರಿಣಿ ಎಂದ ಹಾಗೆ ಮನುಷ್ಯನಲ್ಲಿನ ಕೆಟ್ಟ ಗುಣಗಳು ಬುದ್ಧಿಯನ್ನು ಪ್ರಭಾವಿತ ಮಾಡುವುದರಿಂದ ಬುದ್ಧಿ ಗುಣಗಳ ಕೆಲಸಗಳನ್ನೇ ಆದೇಶಿಸುವಾಗ ಹೊರಗಿನ ಇಂದ್ರಿಯಗಳು ಬುದ್ಧಿ ಆದೇಶದ ಪ್ರಕಾರ ಕೆಲಸ ಮಾಡುತ್ತಿರುತ್ತವೆ. ಮನುಷ್ಯನಲ್ಲಿರುವ ಕೆಟ್ಟ ಗುಣಗಳು ಕಾಮ (ಆಸೆ), ಕ್ರೋಧ (ಕೋಪ), ಲೋಭ (ಜಿಪುಣತನ), ಮೋಹ (ನನ್ನದು ನನ್ನವರು ಎನ್ನುವುದು), ಮದ (ಗರ್ವ), ಮತ್ಸರ (ಅಸೂಯೆ) ಎಂಬ ದುರಾಲೋಚನೆಗಳು ಈ ಗುಣಗಳಿಂದಲೇ ಬರುತ್ತಿರುತ್ತವೆ. ಮೊದಲು ಬುದ್ಧಿಯನ್ನು ಸೇರಿದ ಗುಣಗಳು ಅಲ್ಲಿಂದ ಶರೀರಕ್ಕೆ ಆದೇಶಿಸುತ್ತವೆ. ಯಾವುದಾದರೂ ಬುದ್ಧಿ ಮೂಲಕವೇ ಬರಬೇಕಾಗಿದೆ. ಮನುಷ್ಯರು ಮಾಡುವ ಕ್ರೂರತೆಗಳೆಲ್ಲವು ಒಳಗೇ ಇರುವ ಗುಣಗಳಿಂದ ಬರುತ್ತಿರುವವೇಯೆಂದು ತಿಳಿಯಬೇಕು.

ಮನುಷ್ಯ ಹೊರಗಿನಿಂದ ತೆಗೆದುಕೊಳ್ಳುವ ಆಹಾರವು ಶರೀರ ಆರೋಗ್ಯಕ್ಕೆ ಕೆಲಸಕ್ಕೆ ಬರುತ್ತಿದೆ ಆದರೇ ಬುದ್ಧಿಯನ್ನು ಪ್ರೇರೇಪಿಸದು. ಆಹಾರವು ನೇರವಾಗಿ ಶರೀರಕ್ಕೆ ಪೋಷಕ ಪದಾರ್ಥಗಳಾಗಿ ಉಪಯೋಗಪಟ್ಟು ಮನುಷ್ಯನನ್ನು ಆರೋಗ್ಯವಾಗಿ ಇರುವಂತೆ ಮಾಡುತ್ತಿದೆ. ಮನುಷ್ಯ ತಿನ್ನುವ ಆಹಾರವು ಬುದ್ಧಿಯೊಂದಿಗೆ ಯಾವ ಸಂಬಂಧವಿರುವುದಿಲ್ಲ. ಆಹಾರವು ಶರೀರದೊಳಗೆ ಹೋಗಿ ಮನುಷ್ಯನ ಆರೋಗ್ಯದ ಮೇಲೆ ಕೆಲಸ ಮಾಡುತ್ತಿದೆ. ಆಹಾರವು ಶರೀರಕ್ಕೆ ಉಪಯೋಗಪಡುವಾಗ, ಶರೀರವು ಬಲವಾಗಿ ಆರೋಗ್ಯವಾಗಿ ಇರುತ್ತಿದೆ. ಆದ್ದರಿಂದ ಹೊರಗಿನಿಂದ ಶರೀರದೊಳಗೆ ಹೋಗುವ ಆಹಾರದಿಂದ ಮನುಷ್ಯನಿಗೆ ಎಂತಹ ಕೆಟ್ಟ ಪ್ರವರ್ತನೆ ಬರುವುದಿಲ್ಲ. ಶರೀರದಿಂದ ಹೊರಗೆ ಬರುವ ಗುಣಗಳ ಪ್ರಭಾವಗಳಿಂದ ಮನುಷ್ಯನಲ್ಲಿ ಕೆಟ್ಟ ಪ್ರವರ್ತನೆ ಉಂಟಾಗುತ್ತಿದೆ ಯೆಂದು ತಿಳಿಯಬೇಕು. ಆದ್ದರಿಂದ ಆಹಾರ ನಿಯಮಗಳು ಪಾಟಿಸದಿದ್ದರೂ ಫರವಾಗಿಲ್ಲ, ಗುಣಗಳ ನಿಯಂತ್ರಣವನ್ನು ಹೊಂದಿರಬೇಕು.

**5) ಮಾರ್ಕ ಸುವಾರ್ತೆ, 3ನೇ ಅಧ್ಯಾಯ, 35ನೇ ವಚನ.**

**(35) "ದೇವರ ಚಿತ್ತ ಹೇಳಿದ ಹಾಗೆ ನಡೆಸುವವನೇ ನನ್ನ ಸೋದರನು, ಸಹೋದರಿ ಮತ್ತು ತಾಯಿಯು" ಎಂದು ಹೇಳಿದನು.**

ದೇವರ ಚಿತ್ತ ಎಂದರೇನು? ಎಂದು ಮೊದಲು ಪ್ರಶ್ನಿಸಿಕೊಂಡು ಪರಿಶೀಲಿಸಿ ನೋಡಿದರೇ ದೇವರು ತಿಳಿಸಿರುವ ಆಜ್ಞೆಗಳೇ ಆತನ ಚಿತ್ತವೆಂದು ನಮಗೆ ತಿಳಿಯುತ್ತಿದೆ. ಆತನ ಆಜ್ಞೆ (ಧರ್ಮ) ಗಳಿಗೆ ಒಳಪಟ್ಟಿದ್ದರೇ ದೇವರ ಚಿತ್ತಾನುಸಾರ ಮನುಷ್ಯರಿದ್ದಂತೆ, ಆತನ ಆಜ್ಞೆಗಳಿಗೆ ಒಳಪಡದೇ ನಮಗಿಷ್ಟ ಬಂದ ಹಾಗೆ ಇರುವುದು ಆತನ ಆಜ್ಞೆಗಳನ್ನು ಅತಿಕ್ರಮಿಸಿ ಸಾತಾನ್ ಇಷ್ಟದ ಪ್ರಕಾರ ನಡೆದಂತಾಗುವುದು. ದೇವರ ಅಂಶ ಭಗವಂತನಾಗಿ ಭೂಮಿಮೇಲೆ ಅವತರಿಸಿದಾಗ ದೇವರ ಜ್ಞಾನ ತಿಳಿದವರು, ಆತನ ಜ್ಞಾನದ ಪ್ರಕಾರ ನಡೆಯುವವರು, ದೇವರ ಜ್ಞಾನವನ್ನು ಕುರಿತು, ಆತನ ಆಜ್ಞೆಗಳನ್ನು ಕುರಿತು ತಿಳಿಸುವವರು ಭಗವಂತನಿಗೆ ಸನ್ನಿಹಿತರಾಗುತ್ತಾರೆ. ಸಾತಾನ್ ಮಾರ್ಗ ದಲ್ಲಿರುವವರೆಲ್ಲರೂ ಭಗವಂತನಿಗೆ ಶತ್ರುಗಳ ಹಾಗೆ ತಯಾರಾಗುತ್ತಿದ್ದಾರೆ. ಭಗವಂತನಿಗೆ ಸನ್ನಿಹಿತರಾಗಿ ತಯಾರಾಗಿ ದೇವರ ವಾಕ್ಯಗಳನ್ನು ಪ್ರಚಾರ ಮಾಡುತ್ತಾ ದೇವರ ಆಜ್ಞೆಗಳಿಗೆ ಅನುಗುಣವಾಗಿ ನಡೆಯುವವರೆಲ್ಲರೂ ಆತನಿಗೆ ಆಗ ಸೋದರಿ, ಸೋದರರಾಗಿ ಬಹಳ ಹತ್ತಿರದವರಾಗಿ ಲೆಕ್ಕಿಸಲ್ಪಟ್ಟು ಇರುತ್ತಾರೆ. ದೇವರು ಭೂಮಿ ಮೇಲೆ ಇರುವಾಗಾಗಲೀ, ಇಲ್ಲದಾಗಾಗಲೀ ಆತನು ಎಳೆದ ಹದ್ದು ಆಜ್ಞೆಗಳಿಗೆ ಒಳಪಟ್ಟು ಇರುವ ಜ್ಞಾನಿಗಳು ದೇವರಿಗೆ ಸನ್ನಿಹಿತರಾಗಿಯೇ ಲೆಕ್ಕಿಸಲ್ಪಡುತ್ತಾರೆಂದು ತಿಳಿಯಬೇಕು.

**6) ಮಾರ್ಕ ಸುವಾರ್ತೆ, 4ನೇ ಅಧ್ಯಾಯ, 17ನೇ ವಚನ.**

**(17) "ಸ್ವಲ್ಪ ಕಾಲ ಅವರು ನಿಲ್ಲುತ್ತಾರೆ ಆದರೇ ವಾಕ್ಯದ ನಿಮಿತ್ತ ಶ್ರಮವಾದರೂ, ಹಿಂಸೆ ಆದರೂ ಉಂಟಾಗುತ್ತಲೇ ಅಭ್ಯಂತರ ಪಡುತ್ತಾರೆ."**

ನನ್ನ ಮೇಲೆ ಭಕ್ತಿ ಇರುವವರು 1) ಅರ್ತರು, 2) ಅರ್ಥಾರ್ಥರು, 3) ಜಿಜ್ಞಾಸಿಗಳು, 4) ಜ್ಞಾನಿಗಳು ಎಂಬ ನಾಲ್ಕು ವಿಧಗಳವರು ಇದ್ದಾರೆಂದು ಅವರಲ್ಲಿ ಕೊನೆಯ ವಿಧವಾದ **ಜ್ಞಾನಿಗಳೆಂದರೇ ನನಗಿಷ್ಟವೆಂದು** ಗೀತೆಯಲ್ಲಿ ಕೂಡಾ ಹೇಳಿದಂತೆ ಇಲ್ಲಿ ಕೂಡಾ ನಾಲ್ಕು ವಿಧಗಳ ಭಕ್ತರನ್ನು ಪ್ರಭು ಹೇಳುತ್ತಾ ಅದರಲ್ಲಿ ಒಂದು ವಿಧದವರನ್ನು ಕುರಿತು ಹೇಳಿರುವ ಮಾತಿದು. ದೇವರ ಜ್ಞಾನವನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆ ಇರುವವರು ಕೆಲವರು ವಾಕ್ಯವನ್ನು ಕೇಳಿ ಅದರ ಪ್ರಕಾರ ಇರಬೇಕೆಂದು ಅಂದುಕೊಳ್ಳುತ್ತಾರೆ. ಅಂಥವರನ್ನು ಸಾತಾನ್ ತನ್ನ ಪದ್ಧತಿಯಲ್ಲಿ ತಾನು ಶೋಧಿಸಲು ಪ್ರಾರಂಭ ಮಾಡುತ್ತದೆ. ಆ ಶೋಧನೆಯಲ್ಲಿ ಪ್ರಪಂಚ ಸಂಬಂಧವಾದ ಅಡತಡೆಗಳು ಎಷ್ಟೋ ಉಂಟಾಗುತ್ತಿರುತ್ತವೆ. ಅಷ್ಟಕ್ಕೆ ಅವರು ಸ್ವಲ್ಪ ಸಹಿಸಿಕೊಂಡು ಇರುತ್ತಾರೆ. ಜ್ಞಾನದಿಂದ ಸ್ವಲ್ಪ ಶ್ರಮ ಉಂಟಾದಾಗ, ಸಾತಾನ್ ಅವರ ತಲೆಯಲ್ಲಿ ಬೋಧಿಸುವುದು ಪ್ರಾರಂಭಿಸುತ್ತದೆ. ನೀನು ಜ್ಞಾನ ತಿಳಿದುಕೊಳ್ಳುವುದರಿಂದಲೇ ಅಲ್ಲವೇ! ನಿನಗೆ ಈ ಶ್ರಮ ಏರ್ಪಟ್ಟಿದೆ, ನೀನು ಬುದ್ಧಿ ಇಲ್ಲದವನಂತೆ ಇರದೇ, ಬುದ್ಧಿ ಉಪಯೋಗಿಸಿ ಮೇಲ್ನೋಟಕ್ಕೆ ಜ್ಞಾನಮಾರ್ಗದಲ್ಲಿ ಇರುವ ಹಾಗೆಯೇ ಕಾಣಿಸುತ್ತಾ, ಬರುವ ಶ್ರಮಗಳನ್ನು ತಪ್ಪಿಸಿಕೊಳ್ಳಲು ಬೋಧಿಸುತ್ತದೆ. ಜ್ಞಾನದ ಒಂದು ಸಾರ ಪೂರ್ತಿ ತಿಳಿಯದ ಮನುಷ್ಯ ಅದರ ಪ್ರಕಾರವೇ ನಡೆದುಕೊಳ್ಳುವುದಕ್ಕೆ ಪ್ರಾರಂಭಿಸುತ್ತಾನೆ. ನಂತರ ಸ್ವಲ್ಪ ಕಾಲಕ್ಕೆ ಜ್ಞಾನದ ಮೂಲಕವಾಗಲೀ, ಜ್ಞಾನವನ್ನು ಬೋಧಿಸುವ ಗುರು ಮೂಲಕವಾಗಲೀ ಸಮಸ್ಯೆಗಳು ಬಂದು ಇತರರೊಂದಿಗೆ ತಗಾದೆ ಪಡಬೇಕಾಗಿ ಬಂದಾಗ ಇತರರು ತಮ್ಮನ್ನು ಹಿಂಸಿಸುತ್ತಾರೇನೋ ಎಂದು ಆಲೋಚನೆ ಬಂದಾಗ ಮಾಯೆಗೆ ಒಳ್ಳೆಯ ಅವಕಾಶ ದೊರೆತಂತಾಗುವುದು. ಆಗ ಈ ರೀತಿಯಾಗಿ ಅವನ ತಲೆಯಲ್ಲಿಯೇ ಆಲೋಚನೆಗಳು ಬರುವಂತೆ ಮಾಡುತ್ತದೆ. ನಾನು ಮೊದಲಿನಿಂದ ಬುದ್ಧಿವಂತಿಕೆಯಿಂದ ಇದ್ದಿದ್ದರೇ ಚೆನ್ನಾಗಿರುತ್ತಿತ್ತು. ಹತ್ತಿರದ ಬಂಧುಗಳು ಹೇಳಿದರೂ ಆಗ ಕೇಳದೇ ಗುರು, ಜ್ಞಾನ ಎಂದು ಗುರುವನ್ನು ಹಿಂಬಾಲಿಸುವುದರಿಂದ ಈ ಪರಿಸ್ಥಿತಿ ಏರ್ಪಟ್ಟಿದೆ. ಈ ಜ್ಞಾನಕ್ಕಾಗಿ ನಾನು

ಯಾಕೆ ಇತರರಿಂದ ಪೆಟ್ಟು ತಿನ್ನಬೇಕು? ಇಲ್ಲಿಗೆ ಈ ಜ್ಞಾನವನ್ನು, ಗುರುವನ್ನು, ಸಹವಾಸವನ್ನು ಬಿಟ್ಟು ಹಾಕುವುದು ಒಳ್ಳೆಯದು. ಜ್ಞಾನವೆಂದು ಮೂರ್ಖವಾಗಿ ಹೋದರೇ ಕೊನೆಗೆ ನಾವೇ ಪೆಟ್ಟು ತಿನ್ನುವುದು. ನಮ್ಮ ಸಂಸಾರಗಳು ಇದರಿಂದ ಕೆಟ್ಟು ಹೋಗುತ್ತವೆ. ಪ್ರಪಂಚದಲ್ಲಿ ಇದ್ದೇವೆ ಆದ್ದರಿಂದ ಪ್ರಪಂಚದ ಪ್ರಕಾರ ಹೋಗುವುದು ನಮ್ಮ ಕರ್ತವ್ಯ. ಅಡವಿಗಳಲ್ಲಿ ಇರುವವರಿಗಾದರೇ ಯಾವ ಸಮಸ್ಯೆಗಳು ಇರುವುದಿಲ್ಲ, ಅವರು ಹೇಗೆ ನಡೆದುಕೊಂಡರೂ ಪರವಾಗಿಲ್ಲ. ನಾವು ಊರುಗಳಲ್ಲಿ ಇದ್ದು ಜ್ಞಾನವೆಂದು ಎಲ್ಲರಿಗೂ ವಿರುದ್ಧವಾಗಿ ಹೋದರೇ ಅದು ನಮ್ಮ ದಡ್ಡತನವೇ ಆಗುತ್ತದೆ ಎಂದು ಅವರ ತಲೆಯಲ್ಲಿ ಹುಟ್ಟಿ ಅಂದಿನಿಂದ ಜ್ಞಾನವನ್ನು ಬಿಟ್ಟು ದೂರವಾಗಿ ಇರುವುದಕ್ಕೆ ಪ್ರಯತ್ನಿಸುತ್ತಾರೆ. ಆದ್ದರಿಂದ ಜ್ಞಾನಮಾರ್ಗದಲ್ಲಿ ಸ್ವಲ್ಪ ಕಾಲವಿರುವವರು ಕೂಡಾ ಜ್ಞಾನದ ನಿಮಿತ್ತ ಶ್ರಮವಾದರೂ, ಹಿಂಸೆಯಾದರೂ ಉಂಟಾಗುತ್ತಲೇ ಅಭ್ಯಂತರ ಪಡುತ್ತಾರೆಂದು ತಿಳಿಸಿದ್ದಾನೆ.

ಪೂರ್ತಿ ಜ್ಞಾನವನ್ನು ತಿಳಿದು ದೇವರ ಒಂದು ಬೆಲೆಯನ್ನು ತಿಳಿದವನು ಸಾತಾನ್ ಒಳಗೆ ಎಷ್ಟು ಶೋಧಿಸಿದರೂ ಅದಕ್ಕೆ ಬಗ್ಗುವುದಿಲ್ಲ. ಜ್ಞಾನ ಮಾರ್ಗದಲ್ಲಿ ಶ್ರಮವನ್ನೇ ಅಲ್ಲ ಇತರರು ತನ್ನನ್ನು ಹಿಂಸಿಸುತ್ತಾರೆಂದು ತಿಳಿದರೂ, ಅವರಿಂದ ತಾನು ಕೊಲ್ಲಲ್ಪಡುತ್ತೇನೆಂದು ತಿಳಿದರೂ (ಕೂಡಲೇ ತಮ್ಮ ಸ್ವಾರ್ಥವನ್ನು ಬೆಳೆಸಿಕೊಳ್ಳದೇ) ಜ್ಞಾನವನ್ನು ಗುರುವನ್ನು ತನಗೆ ಸಂಬಂಧವು ಇಲ್ಲದವರಂತೆ ತಿಳಿಯದೇ, ಎಲ್ಲರಿಗಿಂತಲೂ ಪ್ರಪಂಚದಲ್ಲಿ ಹೆಂಡತಿಗಿಂತಲು, ಸನ್ನಿಹಿತರಿಗಿಂತಲು, ಕೊನೆಗೆ ತನ್ನ ಪ್ರಾಣಕ್ಕಿಂತಲೂ ಬೆಲೆಯುಳ್ಳದ್ದಾಗಿ ಜ್ಞಾನವನ್ನು, ಗುರುವನ್ನು, ತಿಳಿದರಾಗಲಿ ಸಾತಾನ್ ಕೈಯಿಂದ ತಪ್ಪಿಸಿಕೊಳ್ಳಲಾರೆವು. ಸಾಕ್ಷಾತ್ತು ದೇವರ ಅಂಶವಾದ ಪ್ರಭು ಹತ್ತಿರವಿದ್ದ ಶಿಷ್ಯರೇ ಅಂದಿನ ರಕ್ಷಕ ಭಟರನ್ನು ನೋಡಿ ಭಯಪಟ್ಟು ತಮ್ಮ ಪ್ರಾಣಗಳು ರಕ್ಷಿಸಿಕೊಳ್ಳುವ ನಿಮಿತ್ತ ತಮ್ಮ ಗುರುವನ್ನೇ ಬಿಟ್ಟು ಓಡಿ ಹೋಗಿದ್ದಾರೆ. ಅಂದಿನ ಶ್ರಮಕ್ಕೆ, ಹಿಂಸೆಗೆ ಅವರು ಭಯಪಟ್ಟು ಓಡಿ ಹೋಗಿದ್ದಾರೆಂದೇ ಅರ್ಥವಾಗುತ್ತಿದೆ. ಆ ದಿನವು ತಮ್ಮ ಗುರುವಾದ

ಪ್ರಭುವಿನ ಜೊತೆ ಮರಣಕ್ಕಾದರೂ ಸಿದ್ಧವಾಗಿ ಇದ್ದಿದ್ದರೇ ಅವರ ಜೀವನವೇ ಧನ್ಯವಾಗುತ್ತಿತ್ತು. ಆ ದಿನ ಪ್ರಭು ಶಿಷ್ಯರನ್ನೇ ಮಾಯೆ ಶೋಧಿಸಿ ಅವರ ಮಾರ್ಗದಲ್ಲಿ ಪೂರ್ತಿ ಸಾಫಲ್ಯವಾಗದಂತೆ ಮಾಡಿದೆ. ನಾವು ಹಾಗಲ್ಲದೇ ಜ್ಞಾನ ಮಾರ್ಗದಲ್ಲಿ ಶ್ರಮವಾಗಲೀ, ಹಿಂಸೆಯಾಗಲೀ ಬಂದ ಪಕ್ಷದಲ್ಲಿ ಎದೆತಟ್ಟಿ ನಿಲ್ಲಬೇಕು. ಅಜ್ಞಾನ ಮಾರ್ಗದಲ್ಲಿ 'ಭಯ' ಎಂಬ ಮಾಯೆ ಒಂದರ ಮಾತು ಕೇಳಿ ಹೆಚ್ಚು ಕಾಲ ಜೀವಿಸುವುದಕ್ಕಿಂತಲೂ, ದೈವ ಜ್ಞಾನಮಾರ್ಗದಲ್ಲಿ ಮರಣವನ್ನು ಕೂಡಾ ಲೆಕ್ಕ ಮಾಡದವನು ಧನ್ಯನು. ಈ ಮಾತನ್ನು ಭಗವದ್ಗೀತೆಯಲ್ಲಿ **"ಪರಧರ್ಮವಾದ ಸಾತಾನ್ ಮಾರ್ಗದಲ್ಲಿ ಭಯಕ್ಕಿಂತಲೂ ಸ್ವಧರ್ಮವಾದ ಪರಮಾತ್ಮ ಧರ್ಮದಲ್ಲಿ ಮರಣಿಸುವುದೇ ಮೇಲು ಎಂದು"** ಪ್ರಭು ಹೇಳಿದ್ದಾನೆ.

**7) ಮಾರ್ಕ ಸುವಾರ್ತೆ, 4ನೇ ಅಧ್ಯಾಯ, 21, 22 ವಚನಗಳು.**

**(21) ದೀಪವು ದೀಪ ಸ್ಥಂಭದ ಮೇಲೆ ಇಡುವುದಕ್ಕೇ ಹೊರತು ಪುಟ್ಟಿಯ ಕೆಳಗಾಗಲೀ, ಮಂಚದ ಕೆಳಗಾಗಲೀ ಇಡುವುದಕ್ಕೆ ತರಲಾಗುವುದಿಲ್ಲ ಅಲ್ಲವೇ! (22) ರಹಸ್ಯವು ಯಾವುದಾದರೂ ಬೆಳಕಿಗೆ ಬಾರದೇ ಹೋಗುವುದಿಲ್ಲ. ಬಹಿರಂಗ ಪಡಿಸುವುದಕ್ಕೇ ಹೊರತು ಯಾವುದೂ ಮರೆಯಲ್ಲಿ ಮಾಡಲ್ಪಡಲಿಲ್ಲ.**

ಪ್ರಸ್ತುತ ಕಾಲದಲ್ಲಿ ಬಹಳ ಜನ ಗುರುಗಳು, ಶಿಷ್ಯರು ತಮ್ಮ ಜ್ಞಾನವನ್ನು ಇತರರಿಗೆ ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿರುತ್ತಾರೆ. ತಮ್ಮ ಜ್ಞಾನವು ರಹಸ್ಯವೆಂದೂ, ಇತರರಿಗೆ ಹೇಳಬಾರದೆಂದೂ, ನಮ್ಮ ಹತ್ತಿರ ಉಪದೇಶ ತೆಗೆದುಕೊಂಡವರಿಗೆ ಮಾತ್ರವೇ ಹೇಳುತ್ತೇವೆಂದೋ ಹೇಳುತ್ತಿರುತ್ತಾರೆ. ಅವರನ್ನು ಯಾರಾದರೂ ಪ್ರಶ್ನೆಗಳನ್ನು ಕೇಳಿದಾಗ ಹೇಳುವುದಕ್ಕೆ ಕೈಲಾಗದೆ ಹೀಗೆ ತಪ್ಪಿಸಿ ಕೊಳ್ಳಲು ನೋಡುತ್ತಿರುತ್ತಾರೆ. ಜ್ಞಾನವೆನ್ನುವುದು ಮರೆಮಾಚಿ ಇಡುವುದಲ್ಲ. ಅದನ್ನು ತಿಳಿಸುವುದಕ್ಕೆ ದೇವರೇ ಮಾನವಾಕೃತಿಯಲ್ಲಿ ಬಂದು ಕಷ್ಟಗಳು ಪಟ್ಟು ತಿಳಿಸುತ್ತಿರುವಾಗ, ಜ್ಞಾನದವೊಂದು ನಿಜ ಸ್ಥಿತಿಯನ್ನು ತಿಳಿಯದ ನಾವು ಬಂದು

ಬಾರದ ಜ್ಞಾನವನ್ನು ಕೂಡಾ ಇತರರಿಗೆ ಹೇಳದೇ ನೆಪ ಹೇಳುವುದು ಒಳ್ಳೆಯದೇನಾ ಯೋಚಿಸಿರಿ. ಜ್ಞಾನವೆನ್ನುವುದು ಇತರರ ಅಜ್ಞಾನ ಕತ್ತಲೆಯನ್ನು ತೊಲಗಿಸುವ ದೀಪದಂತಾದ್ದು. ಕತ್ತಲೆಯಲ್ಲಿನ ವಸ್ತುವು ದೀಪದ ಬೆಳಕಿನಲ್ಲಿ ತಿಳಿಯುವ ಹಾಗೆ ಅಜ್ಞಾನದಲ್ಲಿ ತಿಳಿಯದ ವಿಷಯವು ಜ್ಞಾನದಿಂದ ತಿಳಿಯಲ್ಪಡುತ್ತಿದೆ. ಕತ್ತಲೆಯನ್ನು ಕಳೆಯುವುದಕ್ಕೆ ದೀಪವು ಅಗತ್ಯವಾದಂತೆ ಅಜ್ಞಾನವನ್ನು ಕಳೆಯುವುದಕ್ಕೆ ಜ್ಞಾನವು ಅಗತ್ಯ. ದೀಪವನ್ನು ಬೆಳಕಿಗಾಗಿಯೇ ಬೆಳಗಿಸಿ ಬುಟ್ಟಿ ಕೆಳಗೆ ಮುಚ್ಚಿಡುವುದು ಎಷ್ಟು ಅವಿವೇಕವೋ, ಜ್ಞಾನವನ್ನು ತಿಳಿದವನು ಇತರರಿಗೆ ಹೇಳದೇ ಮುಚ್ಚಿಡುವುದು ಅಷ್ಟೇ ದಡ್ಡತನವಾಗುವುದು. ರಹಸ್ಯವೆನ್ನುವುದು ಕೂಡಾ ತಪ್ಪದೇ ಹೊರ ಬೀಳುವುದಕ್ಕೇ ಇದೆ. ಪ್ರಪಂಚದಲ್ಲಿ ಉತ್ತಮೋತ್ತಮವಾದ ದೈವಜ್ಞಾನವು ಭಗವಂತನ ಮೂಲಕ ಬಹಿರಂಗ ಪಡಿಸಲಾಗಿದೆ. ಹಾಗಿರುವಾಗ ಜ್ಞಾನಕ್ಕಿಂತಲೂ ಕಡಿಮೆ ಸ್ಥಾನ ಇರುವವು ಯಾವುವಾದರೂ ಮರೆಮಾಡಲಾರೆವು. ಪ್ರಪಂಚದಲ್ಲಿ ರಹಸ್ಯವೆನ್ನುವುದು ಯಾವುದೂ ಗುಟ್ಟಾಗಿ ಇರುವುದಿಲ್ಲ, ಅದು ತಪ್ಪದೇ ಹೊರಬೀಳಬಲ್ಲದು. ದೈವಜ್ಞಾನವು ಸರ್ವರಿಗೂ ಅವಶ್ಯವಾದುದು. ಅದು ರಹಸ್ಯವಾಗಿ ಇರಬಾರದು. ಹಾಗೆ ಮುಚ್ಚಿ ಇಡಬೇಕೆಂದುಕೊಳ್ಳುವವರು ಮುಚ್ಚಿಡಲಾರರು.

**8) ಮಾರ್ಕ ಸುವಾರ್ತೆ, 6ನೇ ಅಧ್ಯಾಯ, 4ನೇ ವಚನ.**

## (4) ಪ್ರವಕ್ತ ತನ್ನ ದೇಶದಲ್ಲಿಯು, ತನ್ನ ಬಂಧುಗಳಲ್ಲಿಯು, ತನ್ನ ಮನೆಯವರಲ್ಲಿಯು ಹೊರತುಪಡಿಸಿ ಎಲ್ಲೂ ಘನ ಹೀನನು ಅಲ್ಲ.

**'ವಕ್ತ'** ಎಂದರೇ ವ್ಯಕ್ತ ಪಡಿಸುವವನೆಂದು ಅಥವಾ ತಿಳಿಸುವವನೆಂದು ಅರ್ಥ. **'ಪ್ರ'** ಎಂದರೇ ಮುಖ್ಯವಾದ ಜ್ಞಾನವೆಂದು, ದೊಡ್ಡದೆಂದು, ದೊಡ್ಡ ವಿಶೇಷತೆ ಇದೆಯೆಂದು ಅರ್ಥ. **'ಪ್ರವಕ್ತ'** ಎಂದರೇ ಮುಖ್ಯವಾದುದನ್ನು ಬೋಧಿಸುವವನೆಂದು ಅರ್ಥ. ಪ್ರತಿ ಮನುಷ್ಯನಿಗು ಅತಿ ಮುಖ್ಯವಾದುದು ಪರಮಾತ್ಮ ಜ್ಞಾನವು. ಪರಮಾತ್ಮ ಜ್ಞಾನವನ್ನು ಬೋಧಿಸುವವನೇ ಪ್ರವಕ್ತನೆಂದು

ಕರೆಯಲ್ಪಡುತ್ತಾನೆ. ಪರಮಾತ್ಮ ಜ್ಞಾನವು ಪರಮಾತ್ಮನಿಂದ ಬಂದಿರುವವನಿಗೇ ತಿಳಿದಿರುತ್ತದೆ ಹೊರತು ಸಾಧಾರಣ ಮನುಷ್ಯರಿಗೆ ತಿಳಿಯದು. ಪರಮಾತ್ಮನಿಂದ ಬಂದು ಮನುಷ್ಯನಾಗಿ ಹುಟ್ಟಿರುವವನೇ ಭಗವಂತನೆಂದು, ಪ್ರವಕ್ತ ಎಂದು ಕರೆಯಲ್ಪಡುತ್ತಿದ್ದಾನೆ. ಪ್ರವಕ್ತ ಕೂಡಾ ಸಾಧಾರಣ ಮನುಷ್ಯನ ಹಾಗೆ ಇರುವುದರಿಂದ ತನ್ನ ಮನೆಯವರಲ್ಲಿ, ಬಂಧುಗಳಲ್ಲಿ ತನ್ನ ದೇಶದಲ್ಲಿ ಪ್ರಶಂಸಿಸಲ್ಪಡುವುದಿಲ್ಲ. ಎಷ್ಟು ದೊಡ್ಡವರಾದರೂ ಮನೆಯಲ್ಲಿಯೂ, ಬಂಧುಗಳಲ್ಲಿಯೂ ಕೀಳಾಗಿ ನೋಡುವುದು ಸಹಜವೆ. ಚಿಕ್ಕಂದಿನಿಂದ ಆತನನ್ನು ನೋಡುವುದರಿಂದ ಮನೆಯವರಲ್ಲಿಯೂ, ಬಂಧುಗಳಲ್ಲಿಯೂ ಇವನಲ್ಲಿ ಏನು ಹೊಸತನವಿದೆಯೆಂದು, ಇವನು ಹೇಳುವ ಮಾತುಗಳು ಬುದ್ಧಿ ಇಲ್ಲದೇ ಕೇಳುವವರಿಗೇ ಸರಿಹೋಗುತ್ತವೆಂದು, ನಮಗೆ ತಿಳಿಯದೇ ಇವನಿಗೇನು ತಿಳಿದಿದೆಯೆಂದು ಹೇಳನವಾಗಿಯೇ ಹೇಳಿಕೊಳ್ಳುತ್ತಿರುತ್ತಾರೆ. ಮನೆಯಲ್ಲಿನವರಿಗೆ ದೇವರಾದರೂ ಪ್ರವಕ್ತ ಆಗಲಾರನು. ಏಕೆಂದರೇ! ವ್ಯಕ್ತಿ ಮೇಲೆ ಅವರಿಗೆ ದೊಡ್ಡತನವು ಸ್ವಲ್ಪವೂ ಇರುವುದಿಲ್ಲ. ಇತರರು ಪ್ರವಕ್ತನನ್ನು ಗುರುತಿಸಿ ಈತನು ದೊಡ್ಡವನೆಂದು ಗೌರವದಿಂದ ಹೇಳಿದರೂ ಮನೆಯವರು, ಬಂಧುಗಳು ಇವನಲ್ಲಿ ಏನು ದೊಡ್ಡತನವಿದೆ? ಚಿಕ್ಕಂದಿನಲ್ಲಿ ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ ಮಾಡುವನೆಂದೋ, ನಿಕ್ಕರಿನಲ್ಲಿ ಮಲವಿಸರ್ಜನೆ ಮಾಡುವವನೆಂದೋ ಹೇಳಿ ಅಪಹಾಸ್ಯವಾಗಿ ಮಾತನಾಡುತ್ತಾರೆಯೇ ಹೊರತು ವ್ಯಕ್ತಿಯಲ್ಲಿನ ಪ್ರಾಮುಖ್ಯತೆ ಯನ್ನು ಗುರುತಿಸುವುದಿಲ್ಲ. ಆದ್ದರಿಂದ ಪ್ರವಕ್ತ ಇತರ ಪ್ರಜೆಗಳಿಗೇ ಪ್ರವಕ್ತ ಹೊರತು ತನ್ನವರಲ್ಲಾಗಲೀ, ತನ್ನ ಊರಿನಲ್ಲಾಗಲೀ ಗೌರವಿಸಲ್ಪಡುವುದಿಲ್ಲ. ಈ ಸೂತ್ರದ ಪ್ರಕಾರ ಏಸು ಪ್ರಭುವನ್ನು ಪ್ರವಕ್ತನೆಂದು ತನ್ನವರು ಗುರುತಿಸಲಾರದೇ ಹೋಗಿದ್ದಾರೆ.

**9) ಮಾರ್ಕ ಸುವಾರ್ತೆ, 8ನೇ ಅಧ್ಯಾಯ, 38ನೇ ವಚನ.**

**(38) ನನ್ನನ್ನು ಕುರಿತಾಗಿಯೂ, ನನ್ನ ಮಾತನ್ನು ಕುರಿತಾಗಿಯೂ**

**ನಾಚಿಕೆ ಪಡುವವನು ಯಾರೋ ಅವನನ್ನು ಕುರಿತು ಮನುಷ್ಯ ಕುಮಾರನು ತನ್ನ ತಂದೆ ಮಹಿಮೆ ಇರುವವನಾಗಿ ಬರುವಾಗ ನಾಚಿಕೆ ಪಡುತ್ತಾನೆ.**

ಕೆಲವರು ಸಮಾಜದಲ್ಲಿ ಜ್ಞಾನವನ್ನು ತಿಳಿದುಕೊಳ್ಳುತ್ತಾ ತಾನು ಹಾಗೆ ತಿಳಿದುಕೊಳ್ಳುವುದು ಯಾರಿಗೂ ತಿಳಿಯಬಾರದೆಂದುಕೊಳ್ಳುತ್ತಾರೆ. ಜ್ಞಾನವನ್ನು ತಿಳಿದುಕೊಳ್ಳುವುದು ಯಾವುದೋ ತಪ್ಪು ಕೆಲಸ ಮಾಡಿದ ಹಾಗೆ ಲೆಕ್ಕಿಸಿಕೊಂಡು ರಹಸ್ಯವಾಗಿ ತಿಳಿದುಕೊಳ್ಳುತ್ತಿರುತ್ತಾರೆ. ಕೆಲವರು ಗುರು ಹತ್ತಿರ ಹೋಗಿ ಜ್ಞಾನವನ್ನು ತಿಳಿದುಕೊಳ್ಳುವುದು ಸಣ್ಣತನವೆಂದು ಭಾವಿಸಿ ಅದು ಯಾರಿಗೂ ಕಾಣಿಸದ ಹಾಗೆ ಜಾಗ್ರತೆ ವಹಿಸುತ್ತಿರುತ್ತಾರೆ. ಕೆಲವರು ಗುರು ಶಿಷ್ಯರೆನಿಸಿಕೊಳ್ಳಬೇಕೆಂದು ತಪನ ಇದ್ದೂ ನಾವು ಧನಿಕರು, ಘನತೆಯುಳ್ಳವರು ಗುರು ಬಡವನಾದರೇ ಚೆನ್ನಾಗಿರುವುದಿಲ್ಲ ಗುರುವು ಕೂಡಾ ಧನಿಕನಾಗಿ ಇರಬೇಕೆಂದು ತಿಳಿದು ಬಡ ಗುರುವಿನ ಹತ್ತಿರಕ್ಕೆ ಹೋಗುವುದಕ್ಕೆ ನಾಚಿಕೆ ಪಟ್ಟು ಜ್ಞಾನ ಸರಿಯಾಗಿ ಇಲ್ಲದ ಧನಿಕ ಗುರುವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಕೆಲವರು ಗುರುಗಳ ಹತ್ತಿರ ಜ್ಞಾನವನ್ನು ತಿಳಿದುಕೊಳ್ಳುತ್ತಿದ್ದರೂ, ತಮ್ಮ ಗುರುಗಳಿಗೆ ತಮ್ಮನ್ನು ಶಿಷ್ಯರಾಗಿ ಹೇಳಿಕೊಳ್ಳುವುದು ಇಷ್ಟ ಇಲ್ಲದವರಾಗಿ ಇರುತ್ತಾರೆ. ಹೀಗೆ ಎಷ್ಟೋಜನ ಜ್ಞಾನ ವಿಷಯಗಳಲ್ಲಿ ನಾಚಿಕೆ ಪಡುತ್ತಾ ತಮ್ಮ ವಿಷಯವು ಹೊರಗೆ ತಿಳಿಯದಿರುವಂತೆ ಜಾಗ್ರತೆ ಪಡುವವರೂ ಇದ್ದಾರೆ.

ಪ್ರಪಂಚ ವಿಷಯಗಳಲ್ಲಿ ನಾಚಿಕೆ ಪಡಬಹುದು ಆದರೇ, ಪರಮಾತ್ಮ ಜ್ಞಾನ ವಿಷಯಗಳಲ್ಲಿ ನಾಚಿಕೆ ಪಡಬಾರದು. ಒಂದು ಉದಾಹರಣೆಯನ್ನು ನೋಡೋಣ. ಒಂದು ದಾರಿಯಲ್ಲಿ ಇಬ್ಬರು ವ್ಯಕ್ತಿಗಳು ಹೋಗುತ್ತಿದ್ದಾರೆ. ಒಬ್ಬನು ಅಂದವಾದವನು, ಎರಡನೆಯವನು ಅಂದವಿಲ್ಲದವನು. ಅಂದವಿರುವವನು ದಡ್ಡನು ಮತ್ತು ಬಡವನು, ಅಂದವಿಲ್ಲದವನು ಬುದ್ಧಿವಂತನು ಧನಿಕನು. ಇಬ್ಬರೂ ಹತ್ತಿರ ಸಂಬಂಧವಾದ ಬಾವ, ಬಾಮ್ಮೈದರೇ. ದಾರಿಯಲ್ಲಿ ಎದುರಾಗುವವರಿಗೆ

ಕಾಣಿಸುವುದು ಅವರ ಮೇಲ್ನೋಟದ ಅಂದವೇ ಹೊರತು ಒಳಗಿನ ಬುದ್ಧಿ ಕಾಣಿಸುವುದಿಲ್ಲ ಅಲ್ಲವೇ! ಸ್ವಲ್ಪ ಹೊತ್ತಿಗೆ ಒಬ್ಬ ವ್ಯಕ್ತಿ ಎದುರಾಗಿ ಅಂದವಾದ ಮೊದಲ ವ್ಯಕ್ತಿಯನ್ನು, ಎರಡನೆಯ ವ್ಯಕ್ತಿ ಯಾರು? ಎಂದು ಕೇಳಿದನು. ಎರಡನೆಯವನು ಅಂದವಾಗಿ ಇಲ್ಲ ಅಲ್ಲವೇ! ಅಂಥವನನ್ನು ನನ್ನ ಹತ್ತಿರ ಬಂಧುವೆಂದರೇ ಏನು ಚೆನ್ನಾಗಿರುತ್ತದೆಂದು ನನ್ನ ಬಂಧುವೆಂದು ಹೇಳುವುದಕ್ಕೆ ನಾಚಿಕೆಪಟ್ಟು ಇಬ್ಬರು ಪರಿಚಯಸ್ಥರೆಂದು ದಾರಿಯಲ್ಲಿ ಪರಿಚಯವೇರ್ಪಟ್ಟ ಹಾಗೆ ಎದುರಿಗಿರುವವನಿಗೆ ಅರ್ಥವಾಗುವ ಹಾಗೆ ಹೇಳಿದನು. ಆ ಮಾತು ಎರಡನೆಯವನು ಕೇಳಿಸಿಕೊಂಡು ನಾನು ಅಂದವಾಗಿ ಇಲ್ಲವೆಂದು ಈತನು ನನ್ನ ಬಾವನೆಂದು ಹೇಳುವುದಕ್ಕೆ ನಾಚಿಕೆ ಪಟ್ಟು ಹೀಗೆ ಪರಿಚಯಸ್ಥನೆಂದು ಹೇಳುತ್ತಿದ್ದಾನೆ ಅಲ್ಲವೇ! ಎಂದು ಅಂದುಕೊಂಡನು. ಸ್ವಲ್ಪ ದೂರ ಹೋದಮೇಲೆ ಮತ್ತೊಬ್ಬನು ಎದುರಾಗಿ ಎರಡನೆಯವನನ್ನು ನಿನ್ನ ಪಕ್ಕದವನು ಯಾರು ಎಂದು ಕೇಳಿದನು ಆಗ ಎರಡನೆಯವನು ಬುದ್ಧಿವಂತ ನಾದ್ದರಿಂದ ಮೊದಲನೆಯವನು ಹೇಳಿದ ಹಾಗೆ ಈತನು ಪರಿಚಯಸ್ಥನೆಂದು ಹೇಳಿದನು ಆ ಮಾತನ್ನು ಕೇಳಿ ಮೊದಲನೆಯವನು ಸಂತೋಷಪಟ್ಟನು ನನ್ನ ಬಾಮೈದ ಎಂದು ಎರಡನೆಯವನು ಹೇಳುವುದಕ್ಕಿಂತ ಪರಿಚಯಸ್ಥನೆಂದು ಹೇಳುವುದೇ ಒಳ್ಳೆಯದೆಂದು ಅಂದುಕೊಂಡನು. ನಾನು ಅಂದವಾಗಿ ಇಲ್ಲವೆಂದು ನನ್ನನ್ನು ಬಾವನೆಂದು ಹೇಳುವುದಕ್ಕೆ ಇವನು ನಾಚಿಕೆ ಪಟ್ಟನು ಆದ್ದರಿಂದ ಇಷ್ಟು ದಡ್ಡನನ್ನು ನನ್ನ ಬಾಮೈದನೆಂದು ಹೇಳುವುದಕ್ಕೆ ನಾಚಿಕೆಪಡಬೇಕಾದ್ದೇಯೆಂದು ಮೊದಲನೆಯ ವನು ಕೂಡಾ ಅಂದುಕೊಂಡನು. ಮೊದಲನೆಯವನನ್ನು ಅನುಸರಿಸಿ ಎರಡನೆಯವನು ನಡೆದುಕೊಳ್ಳಬೇಕಾಗಿ ಬಂದಿದೆ.

ಎರಡನೆಯ ಬಾರಿ ಎದುರಾಗಿ ಎರಡನೆಯವನನ್ನು ಕೇಳಿದವನು ಬಹಳ ವರ್ಷಗಳಿಂದ ಒಂದು ನಿಯಮವನ್ನು ಇಟ್ಟುಕೊಂಡು ಇದ್ದನು. ಯಾರಾದರೂ ಹತ್ತಿರದ ಬಂಧುಗಳು ಎದುರಾದರೇ ಅವರಿಗೆ ಹತ್ತು ಸಾವಿರ ವರಹಗಳನ್ನು ದಾನ ನೀಡಬೇಕೆನ್ನುವುದು ಅವನ ನಿಯಮ, ಇವರಿಬ್ಬರೂ

ಬಾವ ಬಾಮ್ಮೈದರಾಗಿದ್ದರೂ ಅವರು ಬಂಧುಗಳೆಂದು ಹೇಳಿಕೊಳ್ಳದೇ ಪರಿಚಯಸ್ಥರೆಂದು ಹೇಳುವುದರಿಂದ ಅವರಿಗೆ ಬರುವ ಹತ್ತುಸಾವಿರ ವರಹಗಳು ಬರದೇ ಹೋಯಿತು. ಅದರಿಂದ ಬಡವನಾದ ಮೊದಲನೆಯವನಿಗೆ ಬರುವ ಆಸ್ತಿ ಹೋಯಿತು. ಎರಡನೆಯವನು ಧನಿಕನು ಆದ್ದರಿಂದ ಅವನಿಗೆ ಧನವು ಬಂದರೂ ಬಾರದೇ ಹೋದರೂ ಪರವಾಗಿಲ್ಲ. ಮೊದಲು ನಾಚಿಕೆ ಪಟ್ಟು ಮೇಲ್ನೋಟಕ್ಕೆ ಸುಳ್ಳು ಹೇಳಿರುವುದರಿಂದ ನಷ್ಟ ಹೋಗಿರುವುದು ಮೊದಲನೆಯವನೇ. ಹಾಗೆಯೇ ಜ್ಞಾನವು ಹೊರಗಿನವರಿಗೆ ಚೆನ್ನಾಗಿ ಕಾಣಿಸುವುದಿಲ್ಲವೆಂದು ಜ್ಞಾನದ ಬಗ್ಗೆ ನೀವು ನಾಚಿಕೆ ಪಟ್ಟರೇ ಜ್ಞಾನವು ಕೂಡಾ ನಿನ್ನ ಬಗ್ಗೆ ನಾಚಿಕೆ ಪಡುತ್ತದೆ ಆದ್ದರಿಂದ ಮುಂಬರುವ ಮೋಕ್ಷವೆಂಬ ಲಾಭವು ಬಾರದೇ ಹೋಗುತ್ತಿದೆ. ಇದರ ಪ್ರಕಾರವೇ ಪ್ರಭು ಕೂಡಾ **"ನನ್ನನ್ನು ಕುರಿತು ನನ್ನ ಮಾತನ್ನು ಕುರಿತು ಯಾರು ನಾಚಿಕೆ ಪಡುತ್ತಾನೋ ಅವನನ್ನು ಕುರಿತು ನಾನು ಕೂಡಾ ನಾಚಿಕೆ ಪಡುತ್ತೇನೆಂದು ಹೇಳಿದನು."** ಪ್ರಭು ಮಾತಿನಲ್ಲಿನ ಅರ್ಥ ತಿಳಿದವರಾಗಿ ಪ್ರಪಂಚ ವಿಷಯದಲ್ಲಿ ನಾಚಿಕೆ ಪಟ್ಟರೂ ಪರವಾಗಿಲ್ಲ ಪರಮಾತ್ಮ ಬಗ್ಗೆಯಾಗಲೀ, ಪರಮಾತ್ಮ ಜ್ಞಾನದ ಬಗ್ಗೆಯಾಗಲೀ ನಾಚಿಕೆ ಪಡಬಾರದೆಂದು ತಿಳಿಯಬೇಕು.

**10) ಮಾರ್ಕ ಸುವಾರ್ತೆ, 9ನೇ ಅಧ್ಯಾಯ, 7ನೇ ವಚನ.**

## (7) ಮೇಘವೊಂದು ಬಂದು ಅವರನ್ನು ಕವಿದುಕೊಂಡಾಗ "ಈತನು ನನ್ನ ಪ್ರಿಯ ಕುಮಾರನು, ಈತನ ಮಾತು ಕೇಳಿರಿ ಎಂದು" ಒಂದು ಶಬ್ಧವು ಆ ಮೇಘದೊಳಗಿನಿಂದ ಹುಟ್ಟಿತು.

ಆಕಾಶದಲ್ಲಿರುವ ಮೇಘಗಳ ಕುರಿತು ಬಹಳ ಜನರಿಗೆ ತಿಳಿಯದೆಂದೇ ಹೇಳಬಹುದು. ಮಳೆಗಾಲದಲ್ಲಿ ಮೇಘಗಳು ಸಿಡಿಲುಗಳನ್ನು ಹುಟ್ಟಿಸಿ ದೊಡ್ಡ ಶಬ್ಧವನ್ನು ಮಾಡುತ್ತಿರುತ್ತವೆ. ಮೇಘಗಳು ಸಜೀವವಾದವು. ಅವು ಮಾಡುವ ಕೆಲಸಗಳು ಬಹಳ ಇವೆ. ಆದರೂ ಮೇಘಗಳ ಕಾರ್ಯಗಳು ಯಾರಿಗೂ ತಿಳಿಯುವುದಿಲ್ಲ. ಸೃಷ್ಠಿ ಆದಿಯಲ್ಲಿ ಮೊದಲು ಮೇಘಗಳೇ ದೇವರ ಜ್ಞಾನವನ್ನು

ಹೇಳಿದಾಗ, ಅದನ್ನು ಸೂರ್ಯನು ಕೇಳಿದನು ಎಂದು ಚರಿತ್ರೆ ಹೇಳುತ್ತಿದೆ. ಭೂಮಿ ಮೇಲೆ ಮೇಘಗಳಿಗೆ ತಿಳಿಯದ ರಹಸ್ಯವು ಯಾವುದೂ ಇಲ್ಲ. ಮೇಘಗಳ ರೂಪದಲ್ಲಿ ಮೇಘಗಳ ಮರೆಯಲ್ಲಿ ಇರುವ ದೇವರು ಏಸುವನ್ನು ಕುರಿತು ಅಲ್ಲಿನ ಪ್ರಜೆಗಳಿಗೆ **"ಈತನು ನನ್ನ ಪ್ರಿಯ ಕುಮಾರನು ಈತನ ಮಾತು ಕೇಳಿರಿ"** ಎಂದು ಹೇಳಲಾಗಿದೆ. ಹಾಗೆ ಹೇಳುವುದರಿಂದ ಏಸು ಹೇಳುವ ದೇವರ ಜ್ಞಾನವನ್ನು ಪ್ರಜೆಗಳು ಕೇಳಬೇಕೆಂದು ದೇವರ ಅಭಿಷ್ಟ. ದೇವರು ಮನುಷ್ಯನ ಹಾಗೆ ಹೇಳುವುದು ದೇವರ ಜ್ಞಾನವೇ ಆದರೂ, ಮನುಷ್ಯ ಹೇಳುವುದು ಮನುಷ್ಯರು ಕೇಳದಿರುವಾಗ ದೇವರೇ ಮೇಘಗಳಿಂದ ಹೇಳುವುದಾಗಿದೆ. ಹಾಗೆ ಹೇಳುವುದರಿಂದ ಎದುರಿಗೆ ಹೇಳುವ ಮನುಷ್ಯನಿಗೆ ಬೆಲೆ ಕೊಡದಿದ್ದರೂ, ಮೇಘಗಳು ಹೇಳುವ ಮಾತಿಗೆ ಮನುಷ್ಯರು ಬೆಲೆ ಕೊಡುವುದರಿಂದ ದೇವರು ಆಕಾಶದಲ್ಲಿರುವ ಮೇಘಗಳಿಂದ ಹೇಳಿದ್ದಾನೆ.

**11) ಮಾರ್ಕ ಸುವಾರ್ತೆ, 10ನೇ ಅಧ್ಯಾಯ, 17, 18ನೇ ವಚನಗಳು.**

**(17) ಏಸು ಹೊರಟು ಮಾರ್ಗದಲ್ಲಿ ಹೋಗುತ್ತಿರುವಾಗ ಒಬ್ಬನು ಓಡಿ ಬಂದು ಆತನ ಎದುರು ಮೊಣಕಾಲನ್ನು ಊರಿ "ಸದ್ಬೋಧಕನೇ, ನಿತ್ಯ ಜೀವನಕ್ಕಾಗಿ ವಾರಸನಾಗುವುದಕ್ಕೆ ನಾನೇನು ಮಾಡಬೇಕೆಂದು ಆತನನ್ನು ಕೇಳಿದನು."**

**(18) ಏಸು "ನನ್ನನ್ನು ಸತ್ಪುರುಷನೆಂದು ಯಾಕೆ ಹೇಳುತ್ತಿದ್ದೀಯಾ? ದೇವರೊಬ್ಬನೇ ಹೊರತುಪಡಿಸಿ ಯಾರೂ ಸತ್ಪುರುಷನಲ್ಲ."**

ಈ ಗ್ರಂಥವು ತೆಲುಗಿನೊಳಗೆ ಅನುವಾದ ಮಾಡಿರುವ ಗ್ರಂಥ. ಬೈಬಲ್ ಗ್ರಂಥವನ್ನು ಮೊದಲು ಯಾವ ಭಾಷೆಯಲ್ಲಿ ಬರೆದಿದ್ದಾರೋ ನನಗೆ ತಿಳಿದಿಲ್ಲ. ಕೆಲವು ಕ್ರೈಸ್ಥ ಹಿರಿಯರು ಈ ಗ್ರಂಥವನ್ನು ಮೊದಲು ಹೆಬ್ರೀ ಭಾಷೆಯಲ್ಲಿ ಬರೆದಿದ್ದಾರೆ ಎಂದು ಹೇಳುತ್ತಿದ್ದಾರೆ. ಹೆಬ್ರೀ ಭಾಷೆಯಿಂದ ಅನೇಕ ಭಾಷೆಗಳಿಗೆ

ಅನುವಾದಿಸಲ್ಪಡುತ್ತಾ ಬಂದು, ತೆಲುಗು ಭಾಷೆಯೊಳಗು ಕೂಡಾ ಅನುವಾದ ಮಾಡಲ್ಪಟ್ಟಿದೆ. ಅನುವಾದಿಸಿರುವವರು ತೆಲುಗು ಭಾಷೆ ಪಂಡಿತರಲ್ಲವೆಂದು, ಆದ್ದರಿಂದ ಕೆಲವು ಪದಗಳನ್ನು ಸರಿಯಾಗಿ ಬರೆಯಲಾರದೇ ಹೋಗಿದ್ದಾರೆಂದು ತಿಳಿಯುತ್ತಿದೆ. ಈ ವಾಕ್ಯದಲ್ಲಿ ಮೇಲೆ 'ಸದ್ಬೋಧಕನೇ ಎಂದು' ಹೇಳಿ, ಕೆಳಗೆ 'ಸತ್ಪುರುಷನೇ ಎಂದು' ಹೇಳಿದ ಹಾಗೆ ಬರೆದಿದ್ದಾರೆ. ನಂತರ ಏಸು ಕೇಳಿರುವು ದನ್ನು ಅನುಸರಿಸಿ **"ದೇವರು ಒಬ್ಬನೇ ಸತ್ಪುರುಷನು"** ಎಂದು ಹೇಳಿರುವುದನ್ನು ಅನುಸರಿಸಿ ಅಲ್ಲಿ ಇರಬೇಕಾಗಿರುವ ಪದವು ಸದ್ಬೋಧಕನು ಅಲ್ಲ, ಸತ್ಪುರುಷನು ಅಲ್ಲ ಎಂದು ತಿಳಿಯುತ್ತಿದೆ. ಜ್ಞಾನವನ್ನು ಚೆನ್ನಾಗಿ ಬೋಧಿಸುವವನನ್ನು 'ಸದ್ಬೋಧಕನು' ಎಂದು ಕರೆಯಬಹುದು. ಹಾಗೆಯೇ ಒಳ್ಳೆಯ ಕೆಲಸಗಳನ್ನು ಮಾಡುವ ಒಳ್ಳೆಯವನನ್ನು 'ಸತ್ಪುರುಷನು' ಎಂದು ಹೇಳುತ್ತಾರೆ.

ಭೂಮಿ ಮೇಲೆ ಮನುಷ್ಯರಲ್ಲಿ ಒಳ್ಳೆಯದಾಗಿ ಬೋಧಿಸುವ ಸದ್ಬೋಧಕರು ಇದ್ದಾರೆ, ಹಾಗೆಯೇ ಒಳ್ಳೆಯ ಪ್ರವರ್ತನೆ ಇರುವ ಸತ್ಪುರುಷರು ಇದ್ದಾರೆ. ಆದ್ದರಿಂದ ಇವರ ಸ್ಥಾನದಲ್ಲಿ ದೇವರನ್ನು ಇಟ್ಟು, ದೇವರು ಒಬ್ಬನೇ ಸತ್ಪುರುಷನು ಎಂದು ಹೇಳುವುದು ದೇವರನ್ನು ಕಡಿಮೆ ಮಾಡಿದಂತಾಗುತ್ತದೆ. ಅದೂ ಅಲ್ಲದೇ ಮೇಲೆ ಹೇಳಿರುವುದು ಸದ್ಬೋಧಕನೆಂದು, ಕೆಳಗಿನ ವಾಕ್ಯದಲ್ಲಿ ಹೇಳಿರುವುದು ಸತ್ಪುರುಷನೆಂದು ಎರಡಕ್ಕೂ ಹೊಂದಾಣಿಕೆ ಇಲ್ಲದೇ ಇದೆ. ದ್ವಿತೀಯ ದೈವಗ್ರಂಥವಾದ ಬೈಬಲ್ ಉಳಿದ ಎರಡು ದೈವಗ್ರಂಥಗಳಿಗಿಂತಲೂ ಹೆಚ್ಚು ಭಾಷೆಗಳೊಳಗೆ ಅನುವಾದಿಸಲ್ಪಟ್ಟಿದೆ. ಬೈಬಲ್ ಹದಿನಾಲ್ಕು ನೂರು (1400) ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಅತ್ಯಧಿಕ ಭಾಷೆಗಳಿಗೆ ಅನುವಾದಿಸಲ್ಪಟ್ಟ ಗ್ರಂಥವು ದ್ವಿತೀಯ ದೈವಗ್ರಂಥವಾದ ಬೈಬಲ್ ಒಂದೇ ಎಂದು ಹೇಳಬಹುದು.

ದ್ವಿತೀಯ ದೈವಗ್ರಂಥವಾದ ಬೈಬಲ್‌ಗು, ಅಂತಿಮ ದೈವಗ್ರಂಥವಾದ ಖುರ್ಆನ್‌ಗು ಅನುಬಂಧವು, ಆಧಾರವಾಗಿರುವುದು ಪ್ರಥಮ ದೈವಗ್ರಂಥ. **ಪ್ರಥಮ ದೈವಗ್ರಂಥವಾದ ತೌರಾತ್ (ಭಗವದ್ಗೀತೆ) ಗ್ರಂಥದಲ್ಲಿನ ಜ್ಞಾನವೇ ಉಳಿದ ಎರಡು ಗ್ರಂಥಗಳಲ್ಲಿ ಇದೆಯೆಂದು ಸಾಕ್ಷ್ಯವನ್ನು ಹೇಳುತ್ತಿದ್ದೇನೆಂದು** ಕೊನೆಯ

ದೈವಗ್ರಂಥವಾದ ಖುರ್‌ಆನ್‌ನಲ್ಲಿ ಸೂರಾ 5ರಲ್ಲಿ 44, 46, 48, 68 ಆಯತ್‌ಗಳಲ್ಲಿ ಹೇಳಿದ್ದಾರೆ. ಆದ್ದರಿಂದ ಇಲ್ಲಿ ಮಾರ್ಕ ಸುವಾರ್ತೆಯಲ್ಲಿ ಹತ್ತನೆ ಅಧ್ಯಾಯದಲ್ಲಿ 17, 18 ವಾಕ್ಯಗಳಲ್ಲಿ ಯಾವ ಪದವನ್ನು ಬಳಸಲ್ಪಟ್ಟಿದೆ ಎಂದು ನೋಡಿದರೇ ಪ್ರಪಂಚದಲ್ಲಿ ಸದ್ಬೋಧಕರು, ಸತ್ಪುರುಷರು ಎಷ್ಟು ಜನರಾದರೂ ಇರಬಹುದು ಆದರೇ ಪುರುಷರಲ್ಲಿ ಉತ್ತಮ ಪುರುಷನು ಇರುವುದಿಲ್ಲ. ಆದ್ದರಿಂದ ಭಗವದ್ಗೀತೆಯಲ್ಲಿ **"ದೇವರು ಒಬ್ಬನೇ ಪುರುಷೋತ್ತಮನು"** ಎಂದು ಹೇಳಿದ್ದಾರೆ. ಇದನ್ನು ಅನುಸರಿಸಿ ಮೇಲಿನ ವಾಕ್ಯದಲ್ಲಿ ಪುರುಷೋತ್ತಮನು ಎಂದು ಇರಬೇಕಾಗಿರುವ ಕಡೆ ಉಳಿದ ಸಂಬಂಧವು ಇಲ್ಲದ ಪದಗಳನ್ನು ಬಳಸಿದ್ದಾರೆ ಎಂದು ಹೇಳಬಹುದು. **ಭಗವದ್ಗೀತೆ 15ನೇ ಅಧ್ಯಾಯವಾದ ಪುರುಷೋತ್ತಮ ಪ್ರಾಪ್ತಿ ಯೋಗವೆಂಬ ಅಧ್ಯಾಯದಲ್ಲಿ 16, 17, 18 ಶ್ಲೋಕಗಳನ್ನು ನೋಡಿದರೇ ಈ ವಿಷಯವು ಚೆನ್ನಾಗಿ ಅರ್ಥವಾಗುತ್ತದೆ.**

ಪ್ರಥಮ ದೈವಗ್ರಂಥದ ಪ್ರಕಾರ ನೋಡಿದರೇ ಪುರುಷನು ಎನ್ನುವವನು ಒಬ್ಬನೇ ಎಂದು ಹೇಳುತ್ತಾ, ಪುರುಷನು ಒಬ್ಬನೇ ಆದರೂ ದೇವರು ಮೂವರಾಗಿ ವಿಭಜಿಸಲ್ಪಟ್ಟಿದ್ದಾನೆಂದು, ಆ ಮೂವರ ಹೆಸರುಗಳು ಕ್ರಮವಾಗಿ ಜೀವಾತ್ಮ, ಆತ್ಮ, ಪರಮಾತ್ಮ ಎಂದು ಇವೆಯೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಮೂವರ ಪುರುಷರಲ್ಲಿ ಉಳಿದ **ಜೀವಾತ್ಮ, ಆತ್ಮಗಿಂತಲೂ ಉತ್ತಮನಾದ ಪುರುಷನು ಪರಮಾತ್ಮನೆಂದು, ಆತನನ್ನೇ ಪುರುಷೋತ್ತಮನು ಎಂದು** ಕರೆಯುತ್ತಿದ್ದಾರೆಂದು ಹೇಳಿದ್ದಾರೆ. ಆ ಮೂವರು ಪುರುಷರು ಹೊರತುಪಡಿಸಿ ಉಳಿದಿರುವುದೆಲ್ಲಾ ಪ್ರಕೃತಿಯೇ ಎಂದೂ, ಪ್ರಕೃತಿಯೆಲ್ಲವೂ ಸ್ತ್ರೀತತ್ತ್ವ ಹೊಂದಿರುವುದೆಂದು, ಈ ದಿನ ಪ್ರಪಂಚದಲ್ಲಿ ಇರುವ ಗಂಡಸರು, ಹೆಂಗಸರು ಎಲ್ಲರೂ ಸ್ತ್ರೀ ತತ್ತ್ವವಾದ ಪ್ರಕೃತಿಗೆ ಸಂಬಂಧಿಸಿರುವವರೇಯೆಂದು ಹೇಳಬಹುದು. ಆದ್ದರಿಂದ ಏಸು ಮೇಲಿನ ವಾಕ್ಯದಲ್ಲಿ **"ನನ್ನನ್ನು ಪುರುಷೋತ್ತಮನೇ (ಉತ್ತಮ ಪುರುಷನೇ)"** ಎಂದು ಕರೆಯಬೇಡ. ದೇವರು ಒಬ್ಬನೇ ಉತ್ತಮ ಪುರುಷನೆಂದು ಹೇಳಿದನು. ಭೂಮಿಮೇಲೆ ಮೂರು ಮುಖ್ಯವಾದ ಮತಗಳಿವೆ. ಮೂರು ದೈವಗ್ರಂಥಗಳನ್ನು

ಮೂರು ಮತದವರು ಒಂದೊಂದನ್ನು ತೆಗೆದುಕೊಂಡು ಇದು ನಮ್ಮ ಗ್ರಂಥವೆಂದು ಹೇಳುತ್ತಿದ್ದಾರೆ. ಅವರ ಮತ ಅವರಿಂದ ಹಾಗೆ ಹೇಳಿಸುತ್ತಿದೆ. ವಾಸ್ತವವಾಗಿ ಮೂರು ಗ್ರಂಥಗಳು ಯಾವ ಮತಕ್ಕೂ ಸಂಬಂಧಿಸಿರುವವು ಅಲ್ಲ. ಮಾನವರೆಲ್ಲರಿಗೂ ಜ್ಞಾನವನ್ನು ತಿಳಿಸಿರುವವು ಮೂರು ಗ್ರಂಥಗಳು, ಆದ್ದರಿಂದ ಅವು ಮೂರು ಸರ್ವ ಮಾನವರಿಗೂ ಹೇಳಿರುವ ಗ್ರಂಥಗಳಾಗಿ ಲೆಕ್ಕಿಸಬೇಕು.

**12) ಮಾರ್ಕ ಸುವಾರ್ತೆ, 16ನೇ ಅಧ್ಯಾಯ, 15, 16 ವಚನಗಳು.**

**(15) ನೀವು ಸರ್ವಲೋಕಕ್ಕು ಹೋಗಿ ಸರ್ವ ಸೃಷ್ಠಿಗು ಸುವಾರ್ತೆಯನ್ನು ಪ್ರಕಟಿಸಿರಿ.**

**(16) ನಂಬಿ ಬಾಪ್ತಿಸ್ಮವನ್ನು ಹೊಂದಿದವನು ರಕ್ಷಿಸಲ್ಪಡುತ್ತಾನೆ. ನಂಬದವನಿಗೆ ಶಿಕ್ಷೆ ವಿಧಿಸಲ್ಪಡುತ್ತದೆ.**

ಏಸು ಶಿಲುಬೆಗೆ ಹಾಕಲ್ಪಟ್ಟ ನಂತರ, ಆತನನ್ನು ಸಮಾಧಿಯಲ್ಲಿ ಇಡಲ್ಪಟ್ಟ ನಂತರ ಭಾನುವಾರ ಬೆಳಗಾಗುವ ಮುನ್ನವೇ ಬೆಳಗಿನ ಜಾವದಲ್ಲಿ ಏಸು ಸಮಾಧಿಯಿಂದ ಎದ್ದು ಹೊರಗೆ ಬರುವುದು ನಡೆದಿದೆ. ಮೊದಲು ಮಗ್ಧಲೇನ ಮರಿಯಮ್ಮನಿಗೆ ಕಾಣಿಸುವುದು ನಡೆದಿದೆ. ನಂತರ ಆತನ ಶಿಷ್ಯರಿಗೆ ಕಾಣಿಸುವುದು ನಡೆದಿದೆ. ಒಟ್ಟಾರೆ ಮೂವತ್ತು ಮೂರು ಬಾರಿ ಏಸು ಸಮಾಧಿಯಿಂದ ಬಂದ ನಂತರ ಕಾಣಿಸುವುದು ನಡೆದಿದೆ. ಅದರಲ್ಲಿ ಒಂದು ಬಾರಿ ಆತನ ಹನ್ನೊಂದು ಜನ ಶಿಷ್ಯರು ಊಟಕ್ಕೆ ಕುಳಿತಾಗ ಅವರಿಗೆ ಕಾಣಿಸಿ ಹೇಳಿರುವ ಮಾತುಗಳಲ್ಲಿ ಮೇಲಿನ ಎರಡು ವಾಕ್ಯಗಳು ಇವೆ. ಪ್ರಪಂಚದಲ್ಲಿನ ಮನುಷ್ಯರೆಲ್ಲರೂ ಅಜ್ಞಾನದಲ್ಲಿ ಮುಳುಗಿದ್ದಾರೆಂದು, ಅವರ ಹತ್ತಿರಕ್ಕೆ ಹೋಗಿ **ಸುವಾರ್ತೆಯಾದ ದೇವರ ಜ್ಞಾನವನ್ನು ಬೋಧಿಸಿರೆಂದು** ಹೇಳಿದನು. ಅದೇ ವಿಷಯವನ್ನು 15ನೇ ವಚನದಲ್ಲಿ **"ನೀವು ಸರ್ವ ಲೋಕಗಳಿಗು ಹೋಗಿ ಸರ್ವ ಸೃಷ್ಠಿಗು ಸುವಾರ್ತೆಯನ್ನು ಪ್ರಕಟಿಸಿರಿ"** ಎಂದು ಹೇಳಿದನು. ಇಲ್ಲಿ ಸರ್ವ ಲೋಕಗಳಿಗು ಎಂದು ಹೇಳಿದ್ದಾರೆ.

ಸರ್ವಲೋಕಗಳು ಎಂದರೇ ಎಲ್ಲೋ ಇರುವ ಬೇರೆ ಬೇರೆ ಲೋಕಗಳಿಗೆ ಎಂದು ಅರ್ಥ ಮಾಡಿಕೊಳ್ಳಬಾರದು. ಭೂಮಿ ಮೇಲೆ ಅನೇಕ ಕಾರ್ಯಗಳು ಮಾಡುತ್ತಾ, ಅನೇಕ ಬಾಧೆಗಳು ಪಡುತ್ತಿರುವವರ ಹತ್ತಿರಕ್ಕೆ ಹೋಗಿ ಎಂದು ಅರ್ಥ ಮಾಡಿಕೊಳ್ಳಬೇಕು.

ಅಷ್ಟೇ ಅಲ್ಲದೇ "ಸರ್ವ ಸೃಷ್ಠಿಗು ಸುವಾರ್ತೆಯನ್ನು ಪ್ರಕಟಿಸಿರಿ" ಎಂದು ಹೇಳಿದನು. ಸರ್ವ ಸೃಷ್ಠಿಗು ಎಂದರೇ "ಹುಟ್ಟಿರುವ ದೊಡ್ಡವರಿಗಾಗಲೀ, ಚಿಕ್ಕವರಿಗಾಗಲೀ ಎಲ್ಲಾ ವಿಧಗಳ ವಯಸ್ಸಿನವರಿಗೆ ಒಳ್ಳೆಯ ಸಮಾಚಾರವಾದ ದೈವಜ್ಞಾನವನ್ನು ಬೋಧಿಸಿರಿ" ಎಂದು ಹೇಳಿದ್ದಾನೆ. ದೈವಜ್ಞಾನವನ್ನು ಹೇಳುವುದೇ ಅಲ್ಲದೆ ಅವರು ಪರಲೋಕಕ್ಕೆ ಹೋಗುವುದಕ್ಕೆ ಅನುಮತಿಯಾದ 'ಬಾಪ್ತಿಸ್ಮ'ವನ್ನು ಕೂಡಾ ನನ್ನ ವಾಕ್ಯವನ್ನು ಗುರುತಿನ ಪತ್ರವಾಗಿ ಕೊಡಬೇಕೆಂದು ಹೇಳಿದ್ದಾನೆ. ಬಾಪ್ತಿಸ್ಮ ಎಂದರೇ ಮೋಕ್ಷಕ್ಕೆ (ಪರಲೋಕಕ್ಕೆ) ಅನುಮತಿಯಂಥದ್ದು. ಹಾಗೆ ಪರಲೋಕಕ್ಕೆ ಅನುಮತಿ ಹೊಂದಿದವರು ನನ್ನ ಜ್ಞಾನದಿಂದ ರಕ್ಷಣೆ ಹೊಂದಿ ಪಾಪ ಅನುಭವಗಳಿಂದ ತಪ್ಪಿಸಿಕೊಳ್ಳುತ್ತಾರೆ. ಹಾಗೆ ಬಾಪ್ತಿಸ್ಮ ಹೊಂದದವರು ಪಾಪಗಳಿಂದ ರಕ್ಷಣೆ ಇಲ್ಲದೆ ಪಾಪಗಳಿಂದ ಬರುವ ಕಷ್ಟಗಳಿಂದ ಶಿಕ್ಷಿಸಲ್ಪಡುತ್ತಾರೆಂದು ಹೇಳಿದ್ದಾನೆ.

*****

# ಲೂಕಾ ಸುವಾರ್ತೆ

**1) ಲೂಕಾ ಸುವಾರ್ತೆ, 2ನೇ ಅಧ್ಯಾಯ, 49ನೇ ವಾಕ್ಯ.**

**(49) ಆತನು "ನೀವೇಕೆ ನನ್ನನ್ನು ಹುಡುಕುತ್ತಿದ್ದೀರಿ? ನಾನು ನನ್ನ ತಂದೆ ಕೆಲಸಗಳ ಮೇಲೆ ಇರಬೇಕೆಂದು ನೀವು ಅರಿತಿಲ್ಲವೇ" ಎಂದು ಅವರೊಂದಿಗೆ ಹೇಳಿದನು.**

ಏಸು ತಾಯಿ ತಂದೆಯರು ಏಸುಗಾಗಿ ಹುಡುಕುತ್ತಾ ಬಂದು ಒಂದು ಕಡೆ ಆತನನ್ನು ನೋಡಿ ಬಹಳ ಆಶ್ಚರ್ಯ ಪಟ್ಟರು. ಆತನ ತಾಯಿ "ಕುಮಾರಾ! ನಮ್ಮನ್ನು ಯಾಕೆ ಹೀಗೆ ಮಾಡಿದ್ದೀಯ? ಇಗೋ ನಿನ್ನ ತಂದೆ, ನಾನು ದುಃಖ ಪಡುತ್ತಾ ನಿನ್ನನ್ನು ಹುಡುಕುತ್ತಿದ್ದೇವೆ ಎಂದಾಗ, ಅದಕ್ಕೆ ಏಸು ಉತ್ತರವಾಗಿ **"ನೀವೇಕೆ ನನ್ನನ್ನು ಹುಡುಕುತ್ತಿದ್ದೀರಿ? ನಾನು ನನ್ನ ತಂದೆ ಕೆಲಸಗಳ ಮೇಲೆ ಇರಬೇಕೆಂದು ನೀವು ಅರಿತಿಲ್ಲವೇ"** ಎಂದು ಹೇಳಿದನು. ಇಲ್ಲಿ ಹುಡುಕುತ್ತಾ ಬಂದಿರುವವರಲ್ಲಿ ಏಸು ತಂದೆ ಕೂಡಾ ಇದ್ದಾನೆ ಎಂದು ಹೇಳುತ್ತಿದ್ದಾರೆ. ಆದರೇ ಏಸು ಅವರಿಗೆ ಉತ್ತರ ಹೇಳುತ್ತಾ "ನಾನು ನನ್ನ ತಂದೆ ಕೆಲಸಗಳ ಮೇಲೆ ಇರಬೇಕು" ಎಂದು ಹೇಳಿದನು. ಹುಡುಕುತ್ತಾ ಬಂದಿರುವವರಲ್ಲಿ ಇರುವವನು ಕಾಣಿಸುವ ತಂದೆ ಆಗಿರುವಾಗ, ಏಸು ಹೇಳಿರುವುದು ಕಾಣಿಸದ ತಂದೆಯನ್ನು. ಏಸು ಯಾವ ತಂದೆಯನ್ನು ಕುರಿತು ಹೇಳಿದ್ದಾನೆ ಎನ್ನುವುದೇ ಇಲ್ಲಿ ಮುಖ್ಯವಾಗಿ ತಿಳಿಯಬೇಕಾಗಿದೆ. ಏಸು ಹೇಳುತ್ತಿರುವ ತಂದೆ ಯಾರೋ ತಿಳಿದರೇ, ಆ ತಂದೆ ಕೆಲಸಗಳು ಯಾವುವೋ ತಿಳಿಯಬಹುದು. ಆಗ ಏಸು ಮಾಡುವ ಕೆಲಸಗಳು ಯಾವುವೋ? ಯಾವ ಕೆಲಸಗಳ ನಿಮಿತ್ತ ಆತನು ತಾಯಿಯನ್ನು, ತಂದೆಯನ್ನು ಬಿಟ್ಟು ತಿರುಗುತ್ತಿದ್ದಾನೋ? ಅರ್ಥವಾಗಬಹುದು.

ಏಸುವನ್ನು ಚೆನ್ನಾಗಿ ಗಮನಿಸಿದರೇ ಆತನನ್ನು ಕುರಿತು ಆತನೇ ಹೇಳಿರುವ ಮಾತುಗಳಲ್ಲಿ ತನ್ನನ್ನು ಮನುಷ್ಯ ಕುಮಾರನಾಗಿ ಹೇಳಿಕೊಂಡಿದ್ದಾನೆ. ನಂತರ ಕೆಲವು ಸಂದರ್ಭಗಳಲ್ಲಿ ತನ್ನನ್ನು ದೇವರ ಕುಮಾರನಾಗಿ ಕೂಡಾ

ಹೇಳಿಕೊಂಡಿದ್ದಾನೆ. ಈ ರೀತಿಯಾಗಿ ಆತನು ಹೇಳಿರುವ ಮಾತುಗಳಲ್ಲಿ ಏಸು ಮನುಷ್ಯ ಕುಮಾರನಾಗಿ ಇದ್ದಾನೆ ಮತ್ತು ದೇವರ ಕುಮಾರನಾಗಿ ಕೂಡಾ ಇದ್ದಾನೆ. ಈಗ ಪ್ರಪಂಚದಲ್ಲಿ ಇರುವ ಮನುಷ್ಯರೆಲ್ಲರೂ ಯಾರ ಕುಮಾರರೆಂದು ಹೇಳಬಹುದೆಂದು ಪ್ರಶ್ನಿಸಿಕೊಂಡು ನೊಡಿದರೇ ಮನುಷ್ಯರೆಲ್ಲರನ್ನೂ ಮನುಷ್ಯ ಕುಮಾರರೆಂದೇ ಹೇಳಬಹುದು. ಹಾಗೆ ಹೇಳುವುದರಲ್ಲಿ ಸ್ವಲ್ಪ ರಹಸ್ಯ ಅಡಗಿದೆ. ಅದು ಏನೆಂದರೇ! ಒಬ್ಬ ಮನುಷ್ಯ ಹುಟ್ಟಿದರೆ ಅವನ ಜನ್ಮಕ್ಕೆ ಒಬ್ಬ ಬೀಜದಾತ ಅವಶ್ಯ. ಆದರೇ ಎಲ್ಲರೂ ಮನುಷ್ಯ ಜನ್ಮಕ್ಕೆ ಕಾರಣ ಕಾಣಿಸುವ ತಂದೆಯೇ ಬೀಜದಾತನೆಂದು ಅಂದುಕೊಳ್ಳುವುದು ಸಹಜ. ಆದರೇ ಕಾಣಿಸುವ ಮನುಷ್ಯ, ಕಾಣಿಸುವ ಪುರುಷನಾಗಿ ಇದ್ದರೂ ಆತನು ಪುರುಷನ ಗುರುತಿಗೆ ನಮೂನೆಯಾಗಿ ಹುಟ್ಟಿಸಲ್ಪಟ್ಟವನು ಆದರೆ, ಅವನು ವಾಸ್ತವವಾಗಿ ಪುರುಷನಾಗಿ ಲೆಕ್ಕಿಸಲ್ಪಡುವುದಿಲ್ಲ. ಆತನಾಗಲೀ, ಆತನ ಹೆಂಡತಿಯಾಗಲೀ ಇಬ್ಬರೂ ಸ್ತ್ರೀತತ್ತ್ವವಾದ ಪ್ರಕೃತಿ ಕೆಳಗೇ ಜಮ ಕಟ್ಟಲ್ಪಡುತ್ತಾರೆ.

ಮನುಷ್ಯನ ಶರೀರದಲ್ಲಿರುವ ಜೀವಾತ್ಮ ಆತ್ಮ ಸಂಬಂಧ ಪುರುಷನೇ ಆದರೂ ಆತನು ಹುಟ್ಟಿಸಲ್ಪಡುವವನೇ ಹೊರತು ಹುಟ್ಟಿಸುವವನಲ್ಲ. ಪ್ರತಿ ಮನುಷ್ಯನನ್ನು ಹುಟ್ಟಿಸುವವನು ಮನುಷ್ಯನ ಶರೀರದಲ್ಲಿರುವ ಆತ್ಮವೇ ಎಂದು ಹೇಳಬಹುದು. ಆತ್ಮ ಶರೀರದಲ್ಲಿ ಎಲ್ಲ ಕಾರ್ಯಗಳನ್ನು ಮಾಡುವುದು ಎಂದೂ, ಆತ್ಮವೇ ಎಲ್ಲರ ಸೃಷ್ಠಿಗೆ ಬೀಜದಾತನೆಂದು ಹೇಳಿದ್ದೇವೆ. ಸರ್ವ ಕಾರ್ಯಗಳ ಕಾರ್ಯ ಕರ್ತನಾಗಿ ಆತ್ಮನೇ ಇದ್ದಾನೆ. ಮನುಷ್ಯರಲ್ಲಿ ಇದ್ದು ಮನುಷ್ಯನನ್ನು ಹುಟ್ಟಿಸುತ್ತಿದ್ದಾನೆ ಆದ್ದರಿಂದ ಹುಟ್ಟಿರುವವನನ್ನು ಮನುಷ್ಯ ಕುಮಾರನು ಎಂದು ಅನ್ನುತ್ತಿದ್ದೇವೆ. ಏಸು ತಾನು ಸರ್ವಸಾಧಾರಣ ಮನುಷ್ಯನೇಯೆಂದು ಹೇಳಿದಂತೆ "ನಾನು ಮನುಷ್ಯ ಕುಮಾರನೆಂದು" ಹೇಳಿದ್ದಾನೆ. ಆಗ ಆತನ ತಂದೆ ಹೊರಗೆ ಕಾಣಿಸುವ 'ಯೊಸೇಪು' ಎನ್ನುವಾತನು ಅಲ್ಲವೆಂದು, ಎಲ್ಲರ ಶರೀರಗಳಲ್ಲಿ ಇರುವ ಆತ್ಮನೆಂದು ಹೇಳಿದಂತಾಗಿದೆ. ವಾಸ್ತವವಾಗಿ ಒಂದು ಕೋನದಲ್ಲಿ ತಾಯಿ ಗರ್ಭದಿಂದ ಹುಟ್ಟಿರುವ ಪ್ರತಿ ಜೀವರಾಶಿಗೂ ತಂದೆ ಆತ್ಮನೆಂದು, ತಾಯಿ ಪ್ರಕೃತಿಯೆಂದು ಪ್ರಥಮ ದೈವಗ್ರಂಥದಲ್ಲಿ ಹೇಳಿದ್ದಾರೆ. ಮತ್ತೊಂದು ಕೋನದಲ್ಲಿ ಹೇಳಿದರೇ ಏಸು ಪ್ರತ್ಯೇಕವಾಗಿ ಹುಟ್ಟಿದವನೆಂದು, ಆತನು ಕಾಣಿಸುವ

ತಂದೆ ಇಲ್ಲದೇನೆ ನೇರವಾಗಿ ಹುಟ್ಟಿರುವವನೆಂದು ಹೇಳಬಹುದು. ಆತನು ಸಾಧಾರಣವಾಗಿ ಎಲ್ಲರೂ ಜನ್ಮಿಸಿದ ಹಾಗೆ ಜನ್ಮಿಸಲಿಲ್ಲ. ಆತನು ನೇರವಾಗಿ ಆತ್ಮಗಿಂತಲೂ ಬೇರೆಯಾಗಿರುವ ಪರಮಾತ್ಮ (ಪರಿಶುದ್ಧಾತ್ಮ) ಕುಮಾರನೆಂದು ತಿಳಿಯಬೇಕು. ಆ ರೀತಿಯಾಗಿ ಪರಿಶುದ್ಧಾತ್ಮದ ಕುಮಾರನು ಆಗಿರುವುದರಿಂದ ಆತನನ್ನು ದೇವರ ಕುಮಾರನೆಂದು ಹೇಳುತ್ತಿದ್ದಾರೆ. ಏಸುವನ್ನು ಆತನ ತಾಯಿ ತಂದೆಯರು ಭೇಟಿಯಾದಾಗ ಆತನು ಯಾರ ಕುಮಾರನು ಎಂದು ಅರ್ಥವಾಗದ ಹಾಗೆ "ನಾನು ನನ್ನ ತಂದೆ ಕೆಲಸಗಳ ಮೇಲೆ ಇರಬೇಕು" ಎಂದು ಹೇಳಿದನು. ವಾಸ್ತವವಾಗಿ ಆತನ ಭಾವದಲ್ಲಿ ಯಾರ ಕುಮಾರನಾಗಿ ತನ್ನನ್ನು ಹೇಳಿದ್ದಾನೋ ಎಂದು ಪ್ರಶ್ನಿಸಿಕೊಂಡು ನೋಡಿದರೇ ತನ್ನನ್ನು ದೇವರ ಕುಮಾರನಾಗಿ ಲೆಕ್ಕಿಸಿ ಹೇಳಿದ್ದಾನೆ. ಏಸು ಶರೀರದಲ್ಲಿ ಇರುವ ಆತ್ಮ ಕೆಲಸವನ್ನು ಮಾಡಲಿಲ್ಲ. ಆತನು ಸರ್ವವೂ ವ್ಯಾಪಿಸಿರುವ ಪರಮಾತ್ಮನವೊಂದು ಕೆಲಸವಾದ ದೇವರ ಜ್ಞಾನ ಪ್ರಚಾರ ಮಾಡುತ್ತಿದ್ದಾನೆ. ಆದ್ದರಿಂದ ನನ್ನ ತಂದೆ (ಪರಿಶುದ್ಧಾತ್ಮ) ಕೆಲಸವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಆತನು ಹಾಗೆ ಹೇಳಿದ್ದಾನೆ. ಪರಮಾತ್ಮ ನಾದವನೇ ಸ್ವತಃವಾಗಿ ಶರೀರವನ್ನು ತಯಾರಿ ಮಾಡಿ ಅದರೊಳಗೆ ತನ್ನ ಆತ್ಮನನ್ನೇ ತುಂಬಿ ಕಳುಹಿಸಿರುವುದರಿಂದ ದೇವರ ಕುಮಾರನಾಗಿ ಬಂದವನು ವಾಸ್ತವವಾಗಿ ದೇವರೇ ಆಗಿದ್ದರೂ, ತನ್ನನ್ನು ಯಾರೂ ಗುರುತಿಸದ ಹಾಗೆ ಒಂದು ಸಮಯದಲ್ಲಿ ಮನುಷ್ಯ ಕುಮಾರನೆಂದು, ಮತ್ತೊಂದು ಸಮಯದಲ್ಲಿ ದೇವರ ಕುಮಾರನೆಂದು ಹೇಳಿದ್ದಾನೆಂದು ತಿಳಿಯಬೇಕು.

**2) ಲೂಕಾ ಸುವಾರ್ತೆ, 11ನೇ ಅಧ್ಯಾಯ, 37, 38, 39, 40, 41 ವಚನಗಳು.**

**(37) ಆತನು ಮಾತನಾಡುತ್ತಿರುವಾಗ ಒಬ್ಬ ಪರಿಶಯ್ಯನು ತನ್ನೊಂದಿಗೆ ಊಟ ಮಾಡೆಂದು ಆತನನ್ನು ಕರೆದಾಗ! ಆತನು ಒಳಗೆ ಹೋಗಿ ಊಟದ ಪಂಕ್ತಿಯಲ್ಲಿ ಕುಳಿತುಕೊಂಡನು.**

**(38) ಆತನು (ಏಸು) ಊಟಕ್ಕೆ ಮುಂಚಿತವಾಗಿ ಸ್ನಾನ ಮಾಡಲಿಲ್ಲ ವೆಂದು ಆ ಪರಿಸಯ್ಯನು ನೋಡಿ ಆಶ್ಚರ್ಯಪಟ್ಟನು.**

**(39) ಅದಕ್ಕೆ ಪ್ರಭು ಹೀಗೆಂದನು. "ಪರಿಸಯ್ಯರಾದ ನೀವು ಬಟ್ಟಲನ್ನು, ತಟ್ಟೆಯನ್ನು ಹೊರಗೆ ಶುದ್ಧಿ ಮಾಡುತ್ತೀರಿ ಆದರೇ ನಿಮ್ಮ ಅಂತರಂಗದಲ್ಲಿ ಕೆಟ್ಟತನ ತುಂಬಿದೆ."**

**(40) ಅವಿವೇಕಿಗಳೇ! ಹೊರಗಿನ ಭಾಗದಲ್ಲಿ ಮಾಡಿರುವವರು ಒಳಗಿನ ಭಾಗ ಶುದ್ಧಿ ಮಾಡಲಾರರಾ?**

**(41) ಅದಲ್ಲದೇ ನಿಮಗೆ ಇರುವವು ಧರ್ಮ ಮಾಡಿರಿ. ಆಗ ನಿಮಗೆಲ್ಲವೂ ಶುದ್ಧಿಯಾಗಿ ಇರುತ್ತದೆ.**

ಇಲ್ಲಿ ಕೊನೆಯ ವಾಕ್ಯದಲ್ಲಿ **"ನಿಮಗೆ ಇರುವವುಗಳೆಲ್ಲವನ್ನೂ ಧರ್ಮ ಮಾಡಿರಿ ಆಗ ನಿಮಗೆಲ್ಲವು ಶುದ್ಧಿಯಾಗುತ್ತದೆ"** ಎಂಬ ವಾಕ್ಯವಿದೆ. ಈ ವಿಷಯದಲ್ಲಿ ಗ್ರಂಥದಲ್ಲಿನ ವಾಕ್ಯವನ್ನು ಮನುಷ್ಯರು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಏಸು ಹೇಳಿರುವ ವಿಷಯವನ್ನು ಇನ್ನೊಂದು ವಿಧವಾಗಿ ಭಾವಿಸಿಕೊಳ್ಳುವುದು ನಡೆಯುತ್ತಿದೆ. ಇಲ್ಲಿ "ಧರ್ಮ ಮಾಡಿ" ಎಂದಾಗ ಮನುಷ್ಯರಿಗಿರುವ ಧನ, ವಸ್ತು, ವಾಹನಗಳೆಲ್ಲವು ದಾನ ಮಾಡಿರೆಂದು ಹೇಳುತ್ತಿದ್ದಾರೆ. ವಾಸ್ತವವಾಗಿ ಏಸು ಹಾಗೆ ಹೇಳಲಿಲ್ಲ. ಬಾಹ್ಯ ವಸ್ತುಗಳನ್ನು ದಾನ ಮಾಡಿದರೇ ಒಳಗೆ ಶುದ್ಧಿಯಾಗುವುದಿಲ್ಲ. ಆದ್ದರಿಂದ ಆತನು ಹೊರಗಿನವುಗಳನ್ನು ದಾನ ಮಾಡಿರೆಂದು ಹೇಳಲಿಲ್ಲ. ಅಂತರಂಗದಲ್ಲಿ ಧರ್ಮವನ್ನು ತಿಳಿದು ಆಚರಿಸಿದರೇ ಒಳಗಿರುವ ಕೆಟ್ಟತನವೆಲ್ಲವೂ ಶುದ್ಧಿಯಾಗಿ ಹೋಗುತ್ತದೆಂದು ಆತನ ಭಾವವು. ಏಸು ಹೊರಗಿನ ಶುದ್ಧಿಗೆ ಪ್ರಾಧಾನ್ಯತೆ ಕೊಡಲಿಲ್ಲ. ಅಂತರಂಗದಲ್ಲಿ ಗುಣಗಳ ಶುದ್ಧಿಗೆ ಪ್ರಾಧಾನ್ಯತೆ ಕೊಟ್ಟನು. ಆದ್ದರಿಂದ ಗುಣಗಳಿಗೆ ವಿರುದ್ಧವಾಗಿ ದೈವಮಾರ್ಗ ದಲ್ಲಿರುವ ಧರ್ಮದ ಪ್ರಕಾರ ನಡೆಯಿರೆಂದು ಹೇಳಿದ್ದಾನೆ. ಏಸು ಅಂತರಂಗದಲ್ಲಿ ಶುದ್ಧಿ ಇರುವವನಾಗಿ ಇದ್ದು ಧರ್ಮವಾಗಿ ನಡೆಯುತ್ತಾ, ಇತರರನ್ನು ಕೂಡಾ ಧರ್ಮಮಾರ್ಗದಲ್ಲಿ ನಡೆಸಬೇಕೆಂದು ಆ ರೀತಿಯಲ್ಲಿ ಹೇಳಿದ್ದಾನೆಂದು ಅರ್ಥ ಮಾಡಿಕೊಳ್ಳಬೇಕು.

**3) ಲೂಕಾ ಸುವಾರ್ತೆ 12ನೇ ಅಧ್ಯಾಯ, 4, 5 ವಚನಗಳು.**

**(4) ನನ್ನ ಸ್ನೇಹಿತರಾದ ನಿಮ್ಮೊಂದಿಗೆ ನಾನು ಹೇಳುವುದೇನೆಂದರೇ! ದೇಹವನ್ನು ಕೊಂದ ನಂತರ ಮತ್ತೇನೂ ಮಾಡದವರಿಗೆ ಭಯಪಡಬೇಡಿ**

**(5) ಯಾರಿಗೆ ನೀವು ಭಯಪಡಬೇಕೋ ನಿಮಗೆ ತಿಳಿಸುತ್ತೇನೆ. ಕೊಂದ ನಂತರ ನರಕದಲ್ಲಿ ತಳ್ಳುವ ಶಕ್ತಿ ಇರುವವನಿಗೆ ಭಯಪಡಿರಿ. ಆತನಿಗೇ ಭಯಪಡಿರಿ ಎಂದು ನಿಮ್ಮೊಂದಿಗೆ ಹೇಳುತ್ತಿದ್ದೇನೆ.**

ಮನುಷ್ಯರು ದೇಹವನ್ನು ಕೊಲ್ಲಬಹುದು ಆದರೇ, ಒಳಗಿನ ಜೀವಾತ್ಮನನ್ನು ಏನೂ ಮಾಡಲಾರರು. ಜೀವಾತ್ಮ ಹೊರಗೆ ಕಾಣಿಸುವುದು ಅಲ್ಲ. ದೇಹವು ಕಾಣಿಸುವುದರಿಂದ ದೇಹವನ್ನು ಕೊಲ್ಲಬಹುದು, ಅದಕ್ಕಿಂತಲೂ ಯಾರೂ ಏನೂ ಮಾಡಲಾರನು ಅಂತಹವರಿಗೆ ಭಯಪಡಬೇಕಾದ ಕೆಲಸ ಇಲ್ಲ. ಭಯಪಡಬೇಕಾಗಿರುವುದು ಒಬ್ಬನೇ ಒಬ್ಬನಿಗೆ ಮಾತ್ರ, ಅವನು ಸತ್ತು ಹೋದ ನಂತರ ಕೂಡಾ ನೀನು ಮಾಡಿರುವ ಪಾಪಗಳನ್ನು ಲೆಕ್ಕಕಟ್ಟಿ, ಪಾಪಗಳಿಗೆ ತಕ್ಕಂತೆ ಶಿಕ್ಷಿಸಿ, ಅನುಭವಿಸುವ ಹಾಗೆ ಮಾಡುತ್ತಾನೆ. ಸತ್ತುಹೋದ ನಂತರ ಮಾನವನಿಗೂ, ಮಾನವನಿಗೂ ಸಂಬಂಧವು ಮುರಿದು ಹೋಗುತ್ತಿದೆ. ಸತ್ತವನು ಕೊಂದವನ ಮನೆಯಲ್ಲೇ ತಿರುಗಿ ಹುಟ್ಟಿದರೂ ಇವನು ನನಗೆ ಶತ್ರು ಅಲ್ಲವೇ! ಎಂದು ಗುರುತಿಸಲಾರನು. ದೇವರು ಮನುಷ್ಯ ಸತ್ತು ಹೋದ ನಂತರ ಕೂಡಾ ಜೀವಾತ್ಮನನ್ನು ಗುರುತಿಸುತ್ತಾನೆ, ಅವನು ಯಾವ ಜನ್ಮಕ್ಕೆ ಹೋಗುವುದು ಕೂಡಾ ಗಮನಿಸುತ್ತಿದ್ದಾನೆ. ಸತ್ತು ಹೋದ ನಂತರ ಮಾಡಿಕೊಂಡಿರುವ ಕರ್ಮವನ್ನು ಅನುಭವಿಸುವ ಹಾಗೆ ಮಾಡುವ ದೇವರಿಗೆ ಜೀವಿಯು ಭಯಪಡಬೇಕು ಆದರೇ ಸತ್ತು ಹೋದ ನಂತರ ತನ್ನನ್ನು ಗುರುತಿಸದ ಮನುಷ್ಯನಿಗೆ ಭಯ ಪಡಬೇಕಾದ ಕೆಲಸವಿಲ್ಲ.

**4) ಲೂಕಾ ಸುವಾರ್ತೆ, 12ನೇ ಅಧ್ಯಾಯ, 25ನೇ ವಚನ.**

**(25) ನಿಮ್ಮಲ್ಲಿ ಯಾರು ಚಿಂತಿಸುವುದರಿಂದ ತನ್ನ ಸ್ಥಾನವನ್ನು ಒಂದು ಮೊಳ ಹೆಚ್ಚು ಮಾಡಿಕೊಳ್ಳಬಲ್ಲನು?**

ಮಾನವನು ತನ್ನ ಬುದ್ಧಿವಂತಿಕೆಯಿಂದಲೇ ಎಲ್ಲಾ ಮಾಡುತ್ತಿದ್ದೇನೆಂದು ಅಂದುಕೊಂಡಿದ್ದರೂ ಅವನಿಗು, ಅವನ ಬುದ್ಧಿವಂತಿಕೆಗು ಕೂಡಾ ಸಂಬಂಧವಿಲ್ಲ. ಮಾನವನು ಅಸ್ವತಂತ್ರನು, ಸ್ವತಃವಾಗಿ ತಾನು ಯಾವುದನ್ನು ಮಾಡಲಾರದವನು. ಕರ್ಮ ಕೈಯಲ್ಲಿ ಕೀಲು ಗೊಂಬೆಯಂತೆ ಆಡುವವನು. ತಾನು ಅಂದುಕೊಂಡರೇ ಮಾಡುತ್ತೇನೆಂದು ತಿಳಿಯುವ ಮನುಷ್ಯ ತನ್ನ ವಿಷಯವು ತನಗೇ ತಿಳಿಯದ ಸ್ಥಿತಿಯಲ್ಲಿ ಇದ್ದಾನೆ. ದೇವರು ನಿರ್ಮಿಸಿರುವ ನಿರ್ಮಾಣದ ಪ್ರಕಾರ ದೇವರ ಕೈಯಲ್ಲಿ ಕರ್ಮ, ಕರ್ಮ ಕೈಯಲ್ಲಿ ಮನುಷ್ಯ ಇದ್ದು, ಕರ್ಮ ಆಡಿಸಿದಂತೆ ಕದಲುವವನು ತಾನು ಸ್ವತಃವಾಗಿ ಯಾವ ನಿರ್ಣಯವನ್ನು ತೆಗೆದುಕೊಳ್ಳಲಾರನು. ತಾನು ಎಷ್ಟು ಯೋಚಿಸಿದರೂ ತನ್ನ ಬುದ್ಧಿಯನ್ನು ಎಷ್ಟು ಉಪಯೋಗಿಸಿದರೂ, ತನ್ನ ಎತ್ತರವನ್ನು ತಗ್ಗಿಸಿಕೊಳ್ಳುವುದಾಗಲೀ, ಹೆಚ್ಚಿಸಿಕೊಳ್ಳುವುದಾಗಲೀ ಮಾಡಲಾರದ ಅಸ್ವತಂತ್ರನು. ಪ್ರತಿ ಮನುಷ್ಯ ತನ್ನನ್ನು ತಾನು ತಿಳಿದುಕೊಂಡು ತನ್ನ ಶಕ್ತಿ ಎಷ್ಟರ ಮಟ್ಟಿಗೆ ಇದೆಯೆಂದು ಯೋಚಿಸಿಕೊಂಡರೇ ತಾನು ಅಲ್ಪದವನೆಂದು, ತನಗಿಂತಲೂ ಹೇಳಲಾರದಷ್ಟು ಅಧಿಕನಾದವನು ದೇವರು ಇದ್ದಾನೆಂದು ತಿಳಿಯಬಲ್ಲದು.

**5) ಲೂಕಾ ಸುವಾರ್ತೆ, 12ನೇ ಅಧ್ಯಾಯ, 33, 34 ವಚನಗಳು.**

**(33) ನಿಮಗೆ ಇರುವವುಗಳನ್ನು ಮಾರಾಟ ಮಾಡಿ ಧರ್ಮವನ್ನು ಮಾಡಿರಿ. ಪುರಾತನದ ಹಳೆಯ ಚೀಲಗಳನ್ನು, ಪರಲೋಕದಲ್ಲಿ ಅಕ್ಷಯವಾದ ಧನವನ್ನು ಸಂಪಾದಿಸಿಕೊಳ್ಳಿ. ಅಲ್ಲಿಗೆ ಕಳ್ಳನು ಬರುವುದಿಲ್ಲ, ಗೆದ್ದಲು ಹಿಡಿಯುವುದಿಲ್ಲ.**

## (34) ನಿಮ್ಮ ಧನವೆಲ್ಲಿ ಇರುತ್ತದೋ ಅಲ್ಲಿಯೇ ನಿಮ್ಮ ಹೃದಯವು ಇರುತ್ತದೆ.

ಧನವೆನ್ನುವುದು ಎರಡು ವಿಧಗಳು ಇದೆ. ಒಂದು ಧನದಿಂದ ಪ್ರಪಂಚದಲ್ಲಿ ಯಾವುದನ್ನಾದರೂ ಕೊಂಡುಕೊಳ್ಳಬಹುದು. ಮತ್ತೊಂದು ಧನದಿಂದ ಪ್ರಪಂಚಕ್ಕೆ ಅತೀತವಾದ ದೇವರನ್ನು ಕೊಳ್ಳಬಹುದು. ಪ್ರಪಂಚವನ್ನು ಕೊಳ್ಳುವುದು ಮಾನವರ ಮಧ್ಯೆದಲ್ಲಿರುವ ಧನವು. ದೇವರನ್ನು ಸಹಿತ ಕೊಳ್ಳಬಲ್ಲ ಜ್ಞಾನ ಧನವನ್ನು ದೇವರೇ ಸೃಷ್ಠಿಸಿದ್ದಾನೆ. ಮಾನವರಿಂದ ಸೃಷ್ಠಿಸಲ್ಪಟ್ಟಿರುವ ಧನವನ್ನು ನಾವು ನಿತ್ಯವು ನೋಡುತ್ತಲೇ ಇದ್ದೇವೆ ಅದರಿಂದಲೇ ಪ್ರಪಂಚ ವಸ್ತುಗಳನ್ನು ಕೊಳ್ಳುತ್ತಲೇ ಇರುತ್ತೇವೆ. ದೈವವು ಸೃಷ್ಠಿಸಿರುವ ಜ್ಞಾನ ಧನವು ಕಣ್ಣಿಗೆ ಕಾಣಿಸುವುದು ಅಲ್ಲ. ಜ್ಞಾನ ಧನಕ್ಕೂ ಪ್ರಪಂಚ ಧನಕ್ಕೂ ಎಷ್ಟೋ ವ್ಯತ್ಯಾಸಗಳು ಇವೆ. ಪ್ರಪಂಚ ಧನವನ್ನು ಕಳ್ಳರು ಕದಿಯಬಹುದು, ಜ್ಞಾನ ಧನವು ಕಾಣಿಸುವುದಿಲ್ಲ ಕಳ್ಳರು ಕದಿಯಲಾರರು. ಪ್ರಪಂಚ ಧನಕ್ಕೆ ಗೆದ್ದಲು ಹಿಡಿಯಬಹುದು. ಜ್ಞಾನ ಧನಕ್ಕೆ ಗೆದ್ದಲು ಹಿಡಿಯುವ ಅವಕಾಶವಿಲ್ಲ. ಪ್ರಪಂಚ ಧನದಿಂದ ಚಿಕ್ಕ ಕರ್ಮವನ್ನು ಕೂಡಾ ಕಳೆದುಕೊಳ್ಳಲಾರೆವು. ಜ್ಞಾನ ಧನದಿಂದ ದೊಡ್ಡ ಕರ್ಮವನ್ನಾದರೂ ಇಲ್ಲದೇ ಮಾಡಿಕೊಳ್ಳಬಹುದು. ಕೆಲಸಗಳು ಮಾಡಿದರೇ ಲಭ್ಯವಾಗುವುದು ಹಣ, ದೈವ ಸಾನ್ನಿಧ್ಯವನ್ನು ಮಾಡಿದರೇ ಲಭಿಸುವುದು ಜ್ಞಾನಧನವು. ಪ್ರಪಂಚ ಧನಕ್ಕೆ ಬೆಲೆ ಕಟ್ಟಬಹುದು, ಜ್ಞಾನಧನಕ್ಕೆ ಬೆಲೆ ಕಟ್ಟಲಾರೆವು. ಮಾನವನ ಮರಣದೊಂದಿಗೆ ಸಂಬಂಧ ಮುರಿದು ಹೋಗುವುದು ಧನವು, ಜೀವಿಯ ಹಿಂದೆ ಒಂದು ರೂಪಾಯಿ ಕೂಡಾ ಹೋಗುವುದಿಲ್ಲ. ಜ್ಞಾನಧನವು ಮನುಷ್ಯನ ಮರಣದಿಂದ ಕೂಡಾ ಸಂಬಂಧವು ಮುರಿದು ಹೋಗದೆ ಜೀವಿಯ ಹಿಂದೆ ಹೋಗುತ್ತದೆ. ಯಾರು ಎಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾನೋ ಅಷ್ಟು ಅವನ ಹಿಂದೆ ಜನ್ಮಗಳ ಪರ್ಯಂತರ ಅಂಟಿಕೊಂಡು ಇರುತ್ತದೆ. ಪ್ರಪಂಚ ಧನವಿರುವವರು ಪ್ರಪಂಚದಲ್ಲಿ ಮಾನವರ ಮಧ್ಯೆ ಗೌರವಿಸಲ್ಪಡುತ್ತಾರೆ, ದೇವರ ಎದುರು ಗೌರವಿಸಲ್ಪಡುವುದಿಲ್ಲ. ಜ್ಞಾನ ಧನವಿರುವವರು ದೇವರ ಎದುರು ಗುರುತಿಸಲ್ಪಡುತ್ತಾರೆ, ಮಾನವರ ಮಧ್ಯೆ

ಗೌರವಿಸಲ್ಪಡುವುದಿಲ್ಲ. ಹೀಗೆ ಅನೇಕವಾದ ಭೇದಗಳು ಪ್ರಪಂಚ ಧನಕ್ಕು, ಜ್ಞಾನಧನಕ್ಕು ಇವೆ.

**6) ಲೂಕಾ ಸುವಾರ್ತೆ, 12ನೇ ಅಧ್ಯಾಯ, 49ನೇ ವಚನ.**

## (49) ನಾನು ಭೂಮಿ ಮೇಲೆ ಅಗ್ನಿ ಹಾಕಲು ಬಂದಿದ್ದೇನೆ. ಅದು ಈಗಾಗಲೇ ಹೊತ್ತಿಕೊಂಡು ಉರಿಯಬೇಕೆಂದು ಎಷ್ಟೋ ಕೋರುತ್ತಿದ್ದೇನೆ.

ಅಗ್ನಿ ಎನ್ನುತ್ತಲೇ ನಾವು ಪ್ರತಿ ದಿನವು ನೋಡುವುದೇಯೆಂದು ಅಪಾರ್ಥ ಮಾಡಿಕೊಳ್ಳಬಾರದು. ಅಗ್ನಿಗಳು ಎರಡು ವಿಧಗಳು ಇವೆ. ಒಂದು ಸಾಧಾರಣ ಅಗ್ನಿ, ಎರಡನೆಯದು ಅಸಾಧಾರಣ ಜ್ಞಾನಾಗ್ನಿ. ಸಾಧಾರಣ ಅಗ್ನಿ ಕಟ್ಟಿಗೆಗಳನ್ನು, ಪ್ರಪಂಚ ವಸ್ತುಗಳನ್ನು ಸುಡಬಲ್ಲದು. **ಜ್ಞಾನಾಗ್ನಿ ಕರ್ಮವೆಂಬ ಕಟ್ಟಿಗೆಗಳನ್ನು ಸುಡುತ್ತದೆ.** ಮಾನವರು ಪಾಪ ಕರ್ಮಗಳ ಮಧ್ಯೆ ಸಿಲುಕಿಕೊಂಡು ಘೋರವಾದ ಕಷ್ಟಗಳನ್ನು ಅನುಭವಿಸುತ್ತಿರುವಾಗ ಅವರನ್ನು ಪಾರು ಮಾಡಲು ದೇವರು ಭೂಮಿ ಮೇಲೆ ತನ್ನ ಜ್ಞಾನವೆಂಬ ಅಗ್ನಿಯನ್ನು ಹಾಕುವುದಕ್ಕೆ ಬರುತ್ತಾನೆ. ಜ್ಞಾನವೆಂಬ ಅಗ್ನಿ ಮಾನವರಲ್ಲಿ ಸೇರಿದರೇ ಅವರ ಕರ್ಮಗಳನ್ನು ಸುಟ್ಟು ಹಾಕಿ ಜನ್ಮಗಳು ಇಲ್ಲದೇ ಮಾಡಿ ತನ್ನ ಹತ್ತಿರಕ್ಕೆ ಅವರನ್ನು ಸೇರಿಸಬಲ್ಲದೆಂದು ದೇವರ ಭಾವವು. ಜ್ಞಾನವನ್ನು ಭೂಮಿ ಮೇಲೆ ಬೋಧಿಸುವುದಕ್ಕೆ ಬಂದಿರುವ ದೇವರು ಜ್ಞಾನವನ್ನು ಅಗ್ನಿಯಾಗಿ ಹೇಳುವುದರಲ್ಲಿ ಜ್ಞಾನದಿಂದ ಮಾನವನು ಪಾರಾಗಲು ಹೇಳುವನೆಂದು ತಿಳಿಯಬೇಕು. ದೇವರು ಭೂಮಿ ಮೇಲೆ ತನ್ನ ಅಗ್ನಿಯನ್ನು ಗತದಲ್ಲಿ ಕೂಡಾ ಹಾಕಿದ್ದಾನೆ, ಆಗ ಸ್ವಲ್ಪ ಕಾಲ ಉರಿದು ಅದು ಮತ್ತೆ ಕಾಣಿಸದೆ ಅಣಗಿ ಹೋಗಿದೆ ಆದ್ದರಿಂದ ಪುನಃ ಅಗ್ನಿಯನ್ನು ಹಾಕಲು ಬಂದಿದ್ದಾನೆ. ಇದಕ್ಕು ಮೊದಲು ಹಾಕಿರುವ ಅಗ್ನಿ ಇದುವರೆಗೆ ಹೊತ್ತಿಕೊಂಡು ಉರಿಯಬೇಕೆಂದು ಕೋರುತ್ತಿದ್ದೇನೆ ಎಂದಿದ್ದಾನೆ. ಅದರಲ್ಲಿನ ಅರ್ಥವು 'ಅಗ್ನಿ ಇಲ್ಲದ ಸ್ಥಳದಲ್ಲಿ ಅಗ್ನಿ ಹಾಕುತ್ತಿದ್ದೇನೆಂದು, ಇದಕ್ಕು ಮೊದಲು ಹಾಕಿರುವ ಕಡೆ ಅದು ಅಣಗಿರದೆ ಪುನಃ ಹೊತ್ತಿಕೊಂಡು ಉರಿಯಬೇಕೆಂದು' ಆತನ ಉದ್ದೇಶ.

**7) ಲೂಕಾ ಸುವಾರ್ತೆ, 12ನೇ ಅಧ್ಯಾಯ, 51, 52, 53 ವಚನಗಳು.**

**(51) "ನಾನು ಭೂಮಿ ಮೇಲೆ ಸಮಾಧಾನವನ್ನುಂಟು ಮಾಡುವುದಕ್ಕೆ ಬಂದಿದ್ದೇನೆಂದು ನೀವೆಂದುಕೊಳ್ಳುತ್ತಿದ್ದೀರಾ? ಅಲ್ಲ, ಭೇದವನ್ನೇ ಉಂಟು ಮಾಡಲು ಬಂದಿದ್ದೇನೆಂದು ನಿಮ್ಮೊಂದಿಗೆ ಹೇಳುತ್ತಿದ್ದೇನೆ.**

**(52) "ಇಂದಿನಿಂದ ಒಂದು ಮನೆಯಲ್ಲಿ ಐದು ಮಂದಿ ಬೇರೆಯಾಗಿ ಇಬ್ಬರಿಗೆ ವಿರೋಧವಾಗಿ ಮೂವರು, ಮೂವರಿಗೆ ವಿರೋಧವಾಗಿ ಇಬ್ಬರು ಇರುತ್ತಾರೆ.**

**(53) ತಂದೆ ಕುಮಾರನಿಗೆ, ಕುಮಾರನು ತಂದೆಗೆ, ತಾಯಿ ಮಗಳಿಗೆ, ಮಗಳು ತಾಯಿಗೆ, ಅತ್ತೆ ಸೊಸೆಗು, ಸೊಸೆ ಅತ್ತೆಗು ವಿರೋಧಿಗಳಾಗಿ ಇರುತ್ತಾರೆ.**

ಪರಮಾತ್ಮ ಭಗವಂತನ ರೂಪದಿಂದ ಭೂಮಿ ಮೇಲೆ ಅವತರಿಸಿದಾಗ ತನ್ನ ಜ್ಞಾನವನ್ನೇ ತಿಳಿಸುತ್ತಿರುತ್ತಾನೆ. ಭಗವಂತನ ಜ್ಞಾನವು ಸಾತಾನ್ ಮಾರ್ಗದಲ್ಲಿ ಮುಳುಗಿ ಇರುವವರಿಗೆಲ್ಲರಿಗೂ ವಿರುದ್ಧ ಭಾವನೆಗಳನ್ನು ಉಂಟುಮಾಡುತ್ತಿರುತ್ತದೆ. ಹಾಗಿರುವಾಗ ದೇವರ ಜ್ಞಾನವು ತಿಳಿಯುವವರಿಗೆ, ತಿಳಿಯದವರಿಗೆ ಅಭಿಪ್ರಾಯ ಭೇದಗಳೇರ್ಪಡುವುದು. ಜ್ಞಾನ ತಿಳಿದವರು ತಿಳಿಯದವರೊಂದಿಗೆ ವಿಭೇದಿಸಬೇಕಾಗಿ ಬರುತ್ತಿದೆ. ಅಂತಹ ಪರಿಸ್ಥಿತಿ ಒಂದೇ ಮನೆಯಲ್ಲಿ ಉಂಟಾಗುವುದರಿಂದ ಮನೆಯಲ್ಲಿನವರೇ ವಿರೋಧಿಗಳಾಗಿ ತಯಾರಾಗುತ್ತಾರೆ. ಒಬ್ಬನು ಜ್ಞಾನವನ್ನು ತಿಳಿದುಕೊಳ್ಳಬೇಕೆಂದು ಪ್ರಯತ್ನಿಸಿದರೇ, ಸಾತಾನ್ ಜಾಗ್ರತೆ ಪಟ್ಟು ತಂದೆ ಮೇಲೆ ಮಗನನ್ನು ಮಗನ ಮೇಲೆ ತಂದೆಯನ್ನು, ಅತ್ತೆ ಮೇಲೆ ಸೊಸೆಯನ್ನು, ಸೊಸೆಯ ಮೇಲೆ ಅತ್ತೆಯನ್ನು, ಹೆಂಡತಿ ಮೇಲೆ ಗಂಡನನ್ನು, ಗಂಡನ ಮೇಲೆ ಹೆಂಡತಿಯನ್ನು ಎತ್ತಿಕಟ್ಟಿ ವಿಭೇದಿಸುವ ಹಾಗೆ ಮಾಡುತ್ತದೆ. ತನ್ನ ಜ್ಞಾನ ನಿಮಿತ್ತ ಗಂಡಹೆಂಡತಿಯರು ಹೊಡೆದಾಡುತ್ತಿದ್ದಾರೆಂದು ತಿಳಿದ ಗುರುವಾಗಿರುವ ಭಗವಂತನು ಕೂಡಾ ಜ್ಞಾನದಲ್ಲಿ ಸಮಾಧಾನ ಪಡಬೇಡವೆಂದು ನಿನ್ನೊಂದಿಗೆ

ಭೇದಿಸುವವರೊಂದಿಗೆ ನೀನು ಕೂಡಾ ಭೇದಿಸೆಂದು ಹೇಳುತ್ತಾನೆ. ಅದರಿಂದ ಅವರ ತಗಾದೆ ಬೆಳೆಯುತ್ತದೆ ಆದರೇ ಕಡಿಮೆಯಾಗುವುದಿಲ್ಲ. ಆದ್ದರಿಂದ ಮೇಲಿನ ವಾಕ್ಯದಲ್ಲಿ **"ಪ್ರಭುವು ನಾನು ಸಮಾಧಾನ ಪಡಿಸುವುದಕ್ಕೆ ಬರಲಿಲ್ಲ, ಭೇದವನ್ನೇ ಉಂಟು ಮಾಡಲು ಬಂದಿದ್ದೇನೆ ಎಂದಿದ್ದಾನೆ."** ಜ್ಞಾನವನ್ನು ಭೂಮಿ ಮೇಲೆ ಬೋಧಿಸಲು ಬಂದವನು ನಿಮ್ಮ ಮನೆಯವರ ಮಾತು ಕೇಳಿರಿ, ನನ್ನ ಜ್ಞಾನವನ್ನು ತಿಳಿದುಕೊಳ್ಳಬೇಡಿ ಎಂದು ಹೇಳುತ್ತಾನಾ? ದೇವರ ವಿಷಯದಲ್ಲಿ ಕೈ ಆತಂಕ ಪಡಿಸಿದರೆ ಕೈಯನ್ನು ಕಡಿದು ಹಾಕೆಂದು ಹೇಳಿರುವವನು, ಶರೀರವನ್ನು ಕೂಡಾ ಲೆಕ್ಕಿಸಬೇಡವೆಂದು ಹೇಳಿರುವವನು, ಶರೀರಕ್ಕಿಂತಲೂ ಬೇರೆಯಾಗಿರುವ ಹೆಂಡತಿಯೊಂದಿಗೂ, ಬಂಧುಗಳೊಂದಿಗೆ ರಾಜೀಪಡು ಎಂದು ಹೇಳುತ್ತಾನಾ? ಹೇಳುವುದಿಲ್ಲ. ಪ್ರಾಣ ಹೋದರೂ ಪರವಾಗಿಲ್ಲ ಸಾತಾನ್ ಮಾರ್ಗದವರೊಂದಿಗೆ ರಾಜೀ ಆಗಬೇಡವೆಂದೇ ಹೇಳಿದ್ದಾನೆ. ಆದ್ದರಿಂದ ದೇವರ ಜ್ಞಾನ ನಿಮಿತ್ತವಾಗಿ ಅನೇಕ ಕಡೆ ಅನೇಕ ಕುಟುಂಬಗಳಲ್ಲಿ ತಗಾದೆಗಳು ಹೆಚ್ಚಾಗುತ್ತಲೇ ಇರುತ್ತವೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ್ದೇನೆಂದರೆ ಎಲ್ಲಾದರೆ ನಿಜವಾದ ಜ್ಞಾನವು ಪ್ರಕಟಿಸಲ್ಪಡುತ್ತಿದೆಯೋ ಅಲ್ಲಿ ಮಾತ್ರವೇ ಮನೆಯವರೊಂದಿಗೆ ವಿರೋಧ ಏರ್ಪಡುತ್ತದೆ. ಎಲ್ಲಾದರೆ ದೇವರ ಜ್ಞಾನವೆಂದು ಸಾತಾನ್ ಜ್ಞಾನ ಹೇಳಲ್ಪಡುತ್ತಿದೆಯೋ ಅಲ್ಲಿ ಯಾವ ವಿಭೇದಗಳು ಬರುವುದಿಲ್ಲ. ಅಂತಹ ಜ್ಞಾನಕ್ಕೆ ಎಲ್ಲರೂ ಸಹಕರಿಸುತ್ತಾರೆ. ಜ್ಞಾನ ವಿಷಯದಲ್ಲಿ ಪ್ರಭು ಮಾತಿನ ಪ್ರಕಾರ ಮನೆಯವರೆಲ್ಲರೂ ವಿರೋಧಿಗಳಾಗುತ್ತಿದ್ದಾರೆಂದರೇ ಅದು ನಿಜವಾದ ದೇವರ ಜ್ಞಾನವಾಗಿ ಇರುತ್ತದೆಂದು ತಿಳಿಯಬಹುದು.

**8) ಲೂಕಾ ಸುವಾರ್ತೆ, 13ನೇ ಅಧ್ಯಾಯ, 3ನೇ ವಚನ.**

## (3) "ನೀವು ಮಾರು ಮನಸ್ಸನ್ನು ಹೊಂದದ ಪಕ್ಷದಲ್ಲಿ ನೀವೆಲ್ಲರು ಹಾಗೆಯೇ ನಾಶವಾಗುತ್ತೀರಿ."

ನಮ್ಮ ಶರೀರದಲ್ಲಿರುವ ಅಂತರಂಗಗಳಲ್ಲಿ ಮುಖ್ಯವಾದುದು ಮನಸ್ಸು. ವಿಷಯಗಳನ್ನು ಮನನ ಮಾಡುವುದು ಆದ್ದರಿಂದ ಅದಕ್ಕೆ ಮನಸ್ಸು ಎಂದು ಹೆಸರು ಬಂದಿದೆ. ಮನಸ್ಸು ಯಾವಾಗಲೂ ಮಾಯೆಗೆ (ಸಾತಾನಿಗೆ) ಒಳಪಟ್ಟು

ಇರುತ್ತದೆ. ಅದು ಯಾವಾಗಲೂ ಸಾತಾನಿಗೆ ಬಲವನ್ನು ಕೈಗೂಡಿಸುವುದಾಗಿ ಪ್ರಪಂಚ ವಿಷಯಗಳನ್ನೇ ಜ್ಞಾಪಕಕ್ಕೆ ತರುತ್ತಿರುತ್ತದೆ. ಮನುಷ್ಯ ಹುಟ್ಟಿದಾಗಿನಿಂದ ದೇವರಕಡೆ ಮನಸ್ಸು ಯಾವತ್ತೂ ಕೆಲಸ ಮಾಡದೆ ಸಾತಾನ್ ಕಡೆಯೇ ಕೆಲಸ ಮಾಡುತ್ತಿದೆ. ಅಂತಹ ಮನಸ್ಸನ್ನು ಸಾತಾನ್ ಕಡೆಯಿಂದ ದೇವರ ಕಡೆ ಬದಲಾಯಿಸುವುದನ್ನು 'ಬದಲೀ ಮನಸ್ಸು' ಅಥವಾ 'ಮಾರು ಮನಸ್ಸು' ಎಂದು ಕರೆಯಬಹುದು. ಮಾರುಮನಸ್ಸು ಹೊಂದದೆ ದೇವರ ಕಡೆ ಯಾರೂ ಹೋಗಲಾರನು. ಮಾರು ಮನಸ್ಸು ಹೊಂದಿದರೇ ಜ್ಞಾನಶಕ್ತಿ ಅಥವಾ ಜ್ಞಾನಾಗ್ನಿ ಲಭ್ಯವಾಗುವುದಕ್ಕೆ ಪ್ರಾರಂಭಿಸುತ್ತದೆ. ಜ್ಞಾನಾಗ್ನಿಯಿಂದ ಕರ್ಮಗಳು ಹೋಗಿ ಸಾವುಹುಟ್ಟುಗಳು ಇಲ್ಲದ ದೈವದೊಳಗೆ ಐಕ್ಯವಾಗುತ್ತದೆ. ಮಾರುಮನಸ್ಸು ಹೊಂದದೆ ಮನಸ್ಸೊಂದರ ವಿಷಯ ಜ್ಞಾಪಕಗಳು ನಿಲ್ಲದೇ ಹೋದರೇ, ಪ್ರಪಂಚದೊಂದಿಗೆ ಹುಟ್ಟುತ್ತಾ ಸಾಯುತ್ತಾ ನರಕ ಯಾತನೆಗಳು ಪಡಬೇಕಾಗಿ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಮಾರುಮನಸ್ಸು ಹೊಂದಬೇಕು.

**9) ಲೂಕಾ ಸುವಾರ್ತೆ, 14ನೇ ಅಧ್ಯಾಯ, 26ನೇ ವಚನ.**

**(26) ಯಾರಾದರೂ ನನ್ನ ಬಳಿಗೆ ಬಂದು ತನ್ನ ತಾಯಿಯನ್ನು ತಂದೆಯನ್ನು ಹೆಂಡತಿಯನ್ನು ಮಕ್ಕಳನ್ನು, ಅಣ್ಣತಮ್ಮಂದಿರನ್ನು ಅಕ್ಕತಂಗಿಯರನ್ನು ತನ್ನ ಪ್ರಾಣದೊಂದಿಗೆ ಸಹ ದ್ವೇಷಿಸದಿದ್ದರೇ ಅವನು ನನ್ನ ಶಿಷ್ಯನು ಆಗಲಾರನು.**

ಈ ಮಾತನ್ನು ಕೇಳಿದರೇ ಇದೆಲ್ಲಿನ ಜ್ಞಾನವು ಆತನು ಎಂತಹ ಗುರುವು ನೀವೆಂತಹ ಶಿಷ್ಯರೆಂದು ಆಶ್ಚರ್ಯವಾಗುತ್ತದೆ. ಗುರು ಬಳಿಗೆ ಬಂದು 'ಮನೆಯವರೆಲ್ಲರನ್ನೂ ಬೈದರೇನೇ ನನಗೆ ಶಿಷ್ಯನು, ಬೈಯದಿದ್ದರೇ ಶಿಷ್ಯನಲ್ಲ ವೆಂದು' ಯಾವ ಗುರುವಾದರೂ ಹೇಳುತ್ತಾನಾ ಎಂದು ಕೂಡಾ ಕೇಳಬಹುದು. ಇಲ್ಲಿ ಸ್ವಲ್ಪ ಯೋಚಿಸಬೇಕಾಗಿದೆ. ಮನೆಯವರೆಲ್ಲರನ್ನೂ ಬೈದರೇ ಗುರುವಿಗೆ ಸಂತೋಷವಾಗಿ ಶಿಷ್ಯನನ್ನಾಗಿ ಸೇರಿಸಿಕೊಳ್ಳುವುದಕ್ಕೆ ಗುರುವೇನಾದರೂ ಹುಚ್ಚನಾ! ಇಲ್ಲಿ ಹೇಳಿರುವ ಭಾವವನ್ನು ವಿವರಿಸಿ ನೋಡಿಕೊಂಡರೇ ಎಲ್ಲರನ್ನೂ ಕ್ರಮವಾಗಿ

ದ್ವೇಷಿಸಿರೆಂದು ಇಲ್ಲ. ಗುರುವಿಗಾಗಲೀ, ಶಿಷ್ಯನಿಗಾಗಲೀ ಸರಿಹೋಗದವರು ಅಜ್ಞಾನಿಗಳು, ಸಾತಾನು ಮಾರ್ಗದಲ್ಲಿ ನಡೆಯುವವರು ಸರಿಹೋಗದ ಅಜ್ಞಾನಿಗಳನ್ನು ದ್ವೇಷಿಸಿದರೇ ಗುರುವಿಗೆ ಸಂತೋಷವಾಗುವುದು ವಾಸ್ತವ! ಶಿಷ್ಯನು ಕೂಡಾ ತನ್ನಲ್ಲಿನ ಭಾವಕ್ಕೆ ಸಮಾನವಾಗಿ ಅಜ್ಞಾನಿಗಳಾದವರನ್ನು ದೂಷಿಸಿದರೇ ಶಿಷ್ಯನು ತನ್ನ ಪಕ್ಷದವನೇಯೆಂದು ಅವನನ್ನು ಶಿಷ್ಯನನ್ನಾಗಿ ಒಪ್ಪಿಕೊಳ್ಳುತ್ತಾನೆ. ಹಾಗಲ್ಲದೆ ಅವನು ಕೂಡಾ ಅಜ್ಞಾನಿಗಳೊಂದಿಗೆ ವಿಭೇದಿಸದೆ, ಅವರೊಂದಿಗೆ ಬೆರೆತು ಹೋದರೇ ಗುರುವು ಅವನನ್ನು ಶಿಷ್ಯನನ್ನಾಗಿ ಹೇಗೆ ಒಪ್ಪಿಕೊಳ್ಳುತ್ತಾನೆ? ಜ್ಞಾನಿಗಳು, ಅಜ್ಞಾನಿಗಳೆಂಬ ಎರಡು ಗುಂಪುಗಳವರಿಗೆ ಮಧ್ಯೆ ವಿರೋಧವಿರುವುದು ಸಹಜವೇ. ಅಜ್ಞಾನಿಗಳಲ್ಲಿ ತಾಯಿತಂದೆ ಇದ್ದರೂ, ಹೆಂಡತಿ ಮಕ್ಕಳಿದ್ದರೂ, ಅಣ್ಣತಮ್ಮಂದಿರಿದ್ದರೂ, ಅಕ್ಕತಂಗಿಯರಿದ್ದರೂ ಕೊನೆಗೆ ತನ್ನ ಪ್ರಾಣವನ್ನಾದರೂ ದ್ವೇಷಿಸಬೇಕಾಗಿರುವುದೇಯೆಂದು ತಿಳಿಯುತ್ತಿದೆ. ಅಜ್ಞಾನಿಗಳನ್ನು ದ್ವೇಷಿಸದೆ ಬಂಧುಪ್ರೀತಿ ತೋರಿಸುವವನು ತನಗೆ ಶಿಷ್ಯನು ಆಗಲಾರನು ಎಂದು ಪ್ರಭು ಹೇಳಿದ್ದಾನೆ. ಈ ಮಾತನ್ನು ಅನುಸರಿಸಿ ಅಜ್ಞಾನದ ಬಗ್ಗೆ ಯಾವುದೇ ರಾಜೀ ಭಾವವಿರಬಾರದೆಂದು ತಿಳಿಯುತ್ತಿದೆ. ತನ್ನ ಜ್ಞಾನಮಾರ್ಗದಲ್ಲಿ ಆತಂಕ ಉಂಟುಮಾಡುವ ತಾಯಿಯನ್ನಾಗಲೀ, ತಂದೆಯನ್ನಾಗಲೀ, ಅಣ್ಣತಮ್ಮಂದಿರನ್ನಾಗಲೀ, ಹೆಂಡತಿ ಮಕ್ಕಳನ್ನಾಗಲೀ ತಪ್ಪದೇ ಬಿಟ್ಟುಹಾಕಬೇಕಾದ್ದೇಯೆಂದು ಏಸುಪ್ರಭುವಿನ ಒಂದು ಉದ್ದೇಶ.

**10) ಲೂಕಾ ಸುವಾರ್ತೆ, 14ನೇ ಅಧ್ಯಾಯ, 27ನೇ ವಚನ.**

## (27) ಯಾರಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನನ್ನು ಹಿಂಬಾಲಿಸದ ಪಕ್ಷದಲ್ಲಿ ಅವನು ನನ್ನ ಶಿಷ್ಯನು ಆಗಲಾರನು.

ಬಿಡಿಬಿಡಿಯಾಗಿ ಇರುವ ಕಟ್ಟಿಗೆಗಳನ್ನು ಒಂದು ಕುಪ್ಪೆಯಾಗಿ ಹೊರೆಕಟ್ಟಿ, ಹೊತ್ತುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಂಡು ಕಟ್ಟಿಗೆಗಳ ಹೊರೆಯನ್ನು ಎತ್ತಿಕೊಂಡು ಎಷ್ಟು ದೂರವಾದರೂ ಹೋಗಬಹುದು. ಬಿಡಿಬಿಡಿಯಾಗಿ ಇರುವ ಕಟ್ಟಿಗೆಗಳನ್ನು ಒಂದು ಕುಪ್ಪೆಯಾಗಿ ಬಂಧಿಸಿದಾಗ

ಮಾತ್ರವೇ ಅವುಗಳನ್ನು ಎಲ್ಲಿಂದ ಎಲ್ಲಿಗಾದರೂ ತೆಗೆದುಕೊಂಡು ಹೋಗಬಹುದು. ಬಿಡಿಯಾಗಿ ಇರುವ ಕಟ್ಟಿಗೆಗಳನ್ನು ಕುಪ್ಪೆಯಾಗಿ ಕಟ್ಟಿಹಾಕದೇ ಅವುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಯೇ ನಿನ್ನ ತಲೆಯಲ್ಲಿ ಕಟ್ಟಿಗೆಗಳ ಹಾಗೆ ಬಿಡಿಬಿಡಿಯಾಗಿ 108 ಭಾಗಗಳಾಗಿ ಇರುವ ಗುಣಗಳನ್ನು ಒಂದಾಗಿ ಬಂಧಿಸಿದಾಗ ಅವು ಕೆಲಸ ಮಾಡದ ಸ್ಥಿತಿಯಲ್ಲಿ ಕಟ್ಟಿ ಹಾಕಲ್ಪಟ್ಟಾಗ ಅವು ಮನುಷ್ಯನ ಕೈಯಲ್ಲಿ ಹೊರೆಯಂತೆ ಬದಲಾಗಿ ಹೋಗುತ್ತವೆ. ಮನುಷ್ಯನ ಶರೀರದಲ್ಲಿ ಒಳ್ಳೆಯ ಗುಣಗಳು, ಕೆಟ್ಟ ಗುಣಗಳು ಎಂದು ಎರಡು ರೀತಿಯ ಗುಣಗಳು ಇವೆ. **ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ಕೆಟ್ಟ ಗುಣಗಳು, ಹಾಗೆಯೇ ದಾನ, ದಯೆ, ಔದಾರ್ಯ, ವೈರಾಗ್ಯ, ವಿನಯ, ಪ್ರೇಮಗಳು ಎಂಬ ಆರು ಒಳ್ಳೆಯ ಗುಣಗಳು ಇವೆ.** ಆರು ಕೆಟ್ಟ ಗುಣಗಳು ಒಂದೊಂದು ಒಂಭತ್ತು ಭಾಗಗಳಾಗಿ ವಿಭಜಿಸಲ್ಪಟ್ಟಿವೆ. ಆ ರೀತಿಯಾಗಿ 54 ಭಾಗಗಳಾಗಿ ಕೆಟ್ಟ ಗುಣಗಳಿರುವಾಗ, ಒಳ್ಳೆಯ ಗುಣಗಳು ಕೂಡಾ ಒಂದೊಂದು ಒಂಭತ್ತು ಭಾಗಗಳಾಗಿ ವಿಭಜಿಸಲ್ಪಟ್ಟು 54 ಭಾಗಗಳಾಗಿ ಒಳ್ಳೆಯ ಗುಣಗಳಿವೆ. ಒಳ್ಳೆಯ, ಕೆಟ್ಟ ಎರಡು ರೀತಿಯ ಗುಣಗಳು ಸೇರಿ 108 ಆಗಿವೆ.

108 ಭಾಗಗಳಾಗಿ ಇರುವ ಗುಣಗಳನ್ನು ಪ್ರಥಮ ದೈವಗ್ರಂಥದಲ್ಲಿ **ಮಾಯೆ** ಎಂದು ಅನ್ನುತ್ತಿದ್ದಾರೆ. ದ್ವಿತೀಯ ದೈವಗ್ರಂಥದಲ್ಲಿ **ಸಾತಾನ್** ಎಂದು ಅನ್ನುತ್ತಿದ್ದಾರೆ. ಅಂತಿಮ ದೈವಗ್ರಂಥದಲ್ಲಿ **ಸೈತಾನ್** ಎಂದೂ, **ಇಬ್ಲೀಸ್** ಎಂದೂ ಅನ್ನುತ್ತಿದ್ದೇವೆ. ದೇವರಿಂದ ತಯಾರು ಮಾಡಲ್ಪಟ್ಟಿರುವ ಗುಣಗಳನ್ನು **ಮಾಯೆ** ಎಂದು ಅನ್ನುತ್ತಿದ್ದೇವೆಂದು ದೇವರೇ ಮೊದಲು ಪ್ರಥಮ ದೈವಗ್ರಂಥದಲ್ಲಿ **"ಗುಣಮಯಿ ಮಮ ಮಾಯಾ"** ಎಂದು ಹೇಳಿದ್ದಾನೆ. ಅದರ ಅರ್ಥ ಮನುಷ್ಯನ ಶರೀರದಲ್ಲಿ ಇರುವ ಗುಣಗಳೇ **'ನನ್ನ ಮಾಯೆ'** ಎಂದು ಹೇಳಿದ್ದಾನೆ. ಮಾಯ ಎನ್ನುವುದು ದೇವರ ಮಾರ್ಗದ ಕಡೆ ಹೋಗದಂತೆ ತನ್ನ ಕಡೆಯೇ ಇರುವ ಹಾಗೆ ಮಾಡಬಲ್ಲದು. ಮಾಯೆ ಮನುಷ್ಯರನ್ನು ದೈವಮಾರ್ಗದಲ್ಲಿ ಹೋಗದಂತೆ ಮಾಡುವುದಕ್ಕೇ ದೇವರಿಂದ ತಯಾರಿ ಮಾಡಲ್ಪಟ್ಟಿದೆ. ಮಾಯೆ ಎಂದರೇ ಗುಣವೆಂದು, ಗುಣ ಎಂದರೇ ಮಾಯೆ ಎಂದು ಹೇಳಬಹುದು. ಗುಣವು

ಎಂಬ ಮೂರು ಅಕ್ಷರಗಳಿಗೆ ಸಮಾನವಾಗಿ ಹೇಳಿದರೆ **ಮಾಯೆ** ಎಂದು ಹೇಳಬಹುದು. ಮಾಯೆ ಎಂದರೆ ಕಾಣಿಸದಂತೆ ಇರುವುದೆಂದು ಅರ್ಥ. **ಮಾಯವು=ಗುಣವು=ಶಿಲುಬೆ** ಎಂದು ಮೂರು ಅಕ್ಷರಗಳಿಗೆ ಅರ್ಥವಿದೆ. ನಮ್ಮ ಶರೀರದಲ್ಲಿನ ಮಾಯೆಯನ್ನು ಶಿಲುಬೆ ಎಂಬ ಹೆಸರಿನಿಂದ ಕೂಡಾ ಕರೆಯುತ್ತಿದ್ದೇವೆ. ಶಿಲುಬೆ ಎಂದರೆ ಮಾಯೆ ಅಥವಾ ಗುಣಗಳು ಎಂದು ತಿಳಿದರೂ, ಮಾಯೆಯನ್ನು ಆಧ್ಯಾತ್ಮಿಕ ಭಾವನೆಯಲ್ಲಿ ಹಾವಾಗಿ ಹೇಳುತ್ತಿದ್ದಾರೆ. ಆತ್ಮವನ್ನು ಪಾರಿವಾಳವಾಗಿ, ಮಾಯೆಯನ್ನು ಹಾವಾಗಿ ಹೇಳುತ್ತಿದ್ದೇವೆ. ಶಿಲುಬೆ ಎಂದರೇ ಹಾವು ಎಂದು ಅರ್ಥ, ಹೆಬ್ಬಾವು ಎಂದರೇ ದೊಡ್ಡ ಸರ್ಪವೆಂದು ಅರ್ಥ. ಮಾಯೆಯನ್ನು ಹೆಬ್ಬಾವು ಎನ್ನುವ ಹಾವಾಗಿ (ಪೈತಾನ್‌ಆಗಿ) ಹೇಳುತ್ತಿದ್ದಾರೆ.

ಹೆಬ್ಬಾವು ಬಹಳ ಬಲವಾದ ಸರ್ಪವು. ಅದರ ಕೈಯಿಗೆ ಸಿಕ್ಕಿದವನು ಯಾರೂ ಬಿಡಿಸಿಕೊಳ್ಳಲಾರನು. ಅಂದರೆ ಮಾಯೆ ಬಲವಾದುದು ಎಂದು ಅರ್ಥ. ಅಷ್ಟು ಬಲವಾದ ಮಾಯೆಯನ್ನು ಅಂದರೆ ಶಿಲುಬೆಯನ್ನು ಬಂಧಿಸಿ ಹೊರಬಲ್ಲ ಹೊರೆಯಂತೆ ಕಟ್ಟಿ ಹಾಕಿ ಮನುಷ್ಯ ತನ್ನ ಮಾಯೆಯನ್ನು ಕದಲದಂತೆ ಮಾಡಿ, ಅದನ್ನು ತನ್ನ ಕೈಯಲ್ಲಿ ಇರುವಹಾಗೆ ಮಾಡಿಕೊಂಡು, ಏಸುವನ್ನು ಹಿಂಬಾಲಿಸುವವನು ಆತನಿಗೆ ಶಿಷ್ಯನಾಗುತ್ತಾನೆಂದು ಹೇಳಿದ್ದಾನೆ. ಮಾಯೆಯನ್ನು ಜಯಿಸುವವನು ನಿಜವಾಗಿ ಶಿಷ್ಯನಾಗುತ್ತಾನೆಂದು ಏಸು ಹೇಳುವುದು ನಡೆದಿದೆ. **ಮಾಯೆ ಎಂಬ ಶಿಲುಬೆಯನ್ನು ಯಾರಾದರೇ ಬಂಧಿಸಿ ಹೊರುತ್ತಾ ದೇವರ ಮಾರ್ಗದಲ್ಲಿ ಪ್ರಯಾಣಿಸುತ್ತಾನೋ ಅವನು ದೇವರಿಗೆ ನಿಜವಾದ ಶಿಷ್ಯನಾಗಿ ಕರೆಯಲ್ಪಡುತ್ತಾನೆ.** ಈ ದಿನ ಎಲ್ಲರೂ ದೊಡ್ಡದಾಗಿ ಹೇಳಿಕೊಳ್ಳುವ ಶಿಲುಬೆಯನ್ನು ಹೊರುತ್ತಾ ಏಸುವನ್ನು ಹಿಂಬಾಲಿಸಿ ಹೋಗುವವನು ಆತನ ಶಿಷ್ಯನೆಂದು ವಾಕ್ಯದಲ್ಲಿ ಹೇಳಿದ್ದಾರೆ.

**11) ಲೂಕಾ ಸುವಾರ್ತೆ, 18ನೇ ಅಧ್ಯಾಯ, 29ನೇ ವಚನ.**

**(29) ದೇವರ ರಾಜ್ಯದ ನಿಮಿತ್ತವಾಗಿ ಮನೆಯನ್ನಾದರೂ,**

**ಹೆಂಡತಿಯನ್ನಾದರೂ, ಅಣ್ಣತಮ್ಮಂದಿರನ್ನಾದರೂ, ತಾಯಿತಂದೆ ಯನ್ನಾದರೂ, ಮಕ್ಕಳನ್ನಾದರೂ ಬಿಟ್ಟು ಹಾಕಿದವನು ಇಹದಲ್ಲಿ ಹೆಚ್ಚುಪಟ್ಟು, ಪರದಲ್ಲಿ ನಿತ್ಯ ಜೀವನವನ್ನು ಹೊಂದುವನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

ದೇವರ ರಾಜ್ಯ ಎಂದರೆ ಮೋಕ್ಷ. ಒಬ್ಬ ಮನುಷ್ಯ ಮೋಕ್ಷವನ್ನು ಹೊಂದಿದರೆ ಅವನು ಪುನಃ ಭೂಮಿ ಮೇಲೆ ಹುಟ್ಟುವುದಿಲ್ಲ. ಭೂಮಿ ಮೇಲೆ ಹುಟ್ಟಿದರೇ ಅಲ್ಲವೇ! ಸಾತಾನ್ ಬಾಧೆ ಅವನಿಗಿರುವುದು? ಹುಟ್ಟುವುದಿಲ್ಲ ವಾದ್ದರಿಂದ ಸಾತಾನ್ ಬಾಧೆ ಅವನಿಗಿರುವುದಿಲ್ಲ. ಮೋಕ್ಷವನ್ನು ಹೊಂದುವು ದೆಂದರೇ ಸಾತಾನ್‌ನಿಂದ ಬಿಡುಗಡೆ ಹೊಂದಿ ದೇವರ ಬಳಿ ಸೇರಿಹೋಗುವು ದೆಂಬ ಮಾತು. ಇನ್ನೂ ವಿವರವಾಗಿ ಹೇಳಬೇಕೆಂದರೇ ದೇವರಲ್ಲಿ ಐಕ್ಯವಾಗಿ ಇದ್ದು ಹೋಗುವುದೆ. ಇನ್ನೂ ವಿವರವಾಗಿ ಹೇಳಬೇಕೆಂದರೆ ದೇವರಾಗಿ ಬದಲಾಗಿ ಹೋಗುವುದೇ ಎಂಬ ಮಾತು. ಎಷ್ಟೋ ಹೇಳಲಾರದಷ್ಟು ವಿಶಾಲವಾದವನು, ಮೊದಲು ಕೊನೆ ಇಲ್ಲದವನು, ಯಾರ ಊಹೆಗು ಸಿಗದೆ ಎಲ್ಲೆಡೆ ವ್ಯಾಪಿಸಿರು ವವನು ಆದ ಪರಮಾತ್ಮನೊಳಗೆ, ಆಕಾರವಿದ್ದು ಪ್ರಕೃತಿಯಲ್ಲಿ ಎಷ್ಟೋ ಚಿಕ್ಕವನಾದ ಜೀವಿಯು ಸೇರಿಹೋಗಿ, ತಾನು ದೇವರು ಒಂದಾಗಿ ಹೋಗುವುದು ಎಷ್ಟು ದೊಡ್ಡತನವೋ ಹೇಳಲಾರೆವು. ಅಂತಹ ಸ್ಥಾನವನ್ನು, ಸ್ಥಿತಿಯನ್ನು ಹೊಂದಲು ಕೋರಿ ಜ್ಞಾನಮಾರ್ಗದಲ್ಲಿ ಪ್ರವೇಶಿಸಿದವನಿಗೆ ಯಾರು ಯಾವ ವಿಧವಾಗಿ ಆತಂಕಪಡಿಸಿದರೂ ಅವರ ಮೇಲಿರುವ ಪ್ರೇಮ ಮೋಹಗಳು ಬಿಟ್ಟುಹಾಕಿ ತನಗೆ ಪ್ರಪಂಚದಲ್ಲಿ ಹತ್ತಿರ ಅಂದುಕೊಂಡ ಮನೆಯಾಗಲೀ, ಹೆಂಡತಿ ಮಕ್ಕಳನ್ನು ಆಗಲೀ, ತಾಯಿತಂದೆ ಯರನ್ನಾಗಲೀ, ಅಣ್ಣತಮ್ಮಂದಿರನ್ನಾಗಲೀ ತೃಣವಾಗಿ ತಿಳಿದು ಅವರನ್ನಾದರೂ ಬಿಟ್ಟುಕೊಳ್ಳುವವನು ಇಹದಲ್ಲಿ ಸಂಪೂರ್ಣ ಜ್ಞಾನಿಯಾಗಿ, ಪರದಲ್ಲಿ ದೈವವನ್ನೇ ಹೊಂದುವನು. ಬಿಟ್ಟುಕೊಳ್ಳುವುದು ಚಿಕ್ಕ ಕೆಲಸವಲ್ಲ ಅಲ್ಲವೇ! ಹೆಂಡತಿ ಮಕ್ಕಳನ್ನು, ಅಣ್ಣ ತಮ್ಮಂದಿರನ್ನು, ತಾಯಿತಂದೆಯರನ್ನು ಬಿಟ್ಟುಕೊಳ್ಳುವುದು ಬಹಳ ದೊಡ್ಡ ಕೆಲಸವೇ ಆಗುತ್ತದೆ. ಈ ವಿಷಯದಲ್ಲಿ ಮಾಯೆ ಮಾನವನನ್ನು ಸುತ್ತಿಕೊಂಡು ಅವರನ್ನೇ ಮನುಷ್ಯನ ಕಾಲಿಗೆ ಅಡ್ಡ

ಹಾಕುತ್ತಿರುತ್ತದೆ. ಆದರೂ ಪ್ರಹ್ಲಾದನು ತಂದೆಯನ್ನು ಲೆಕ್ಕ ಮಾಡದಂತೆ, ಮೀರಾಬಾಯಿ ಗಂಡನನ್ನು, ಬಂಧುಗಳನ್ನು ಬಿಟ್ಟು ಹೋದ ಹಾಗೆ, ಬುದ್ಧನು ಯುಕ್ತ ವಯಸ್ಸಿನ ಹೆಂಡತಿಯನ್ನು, ಒಂದು ವರ್ಷ ವಯಸ್ಸಿರುವ ಕುಮಾರನನ್ನು, ತಾಯಿತಂದೆಯರನ್ನು, ಮನೆಯನ್ನು, ರಾಜ್ಯವನ್ನು ಬಿಟ್ಟುಹೋದ ಹಾಗೆ ಯಾರಾದರೇ ತನ್ನವರನ್ನಾದರೂ ಅನ್ಯದವರಾಗಿ ತಿಳಿಯುತ್ತಾನೋ ಅವನಿಗೆ ಅನ್ಯವಾಗಿರುವ ದೇವರು ತನ್ನವನಾಗುತ್ತಾನೆ. ಸ್ವಲ್ಪಕಾಲ ಸಂಬಂಧವಿದ್ದು ಹೋಗುವವರನ್ನು ಬಿಟ್ಟು ಶಾಶ್ವತವಾಗಿ ಇರುವವನನ್ನು ಹೊಂದುವುದು ಬುದ್ಧಿವಂತನ ಕೆಲಸ ಆಗುತ್ತದೆ. ಆದರೆ ಅದು ಪ್ರಪಂಚದಲ್ಲಿ ದಡ್ಡತನದ ಕೆಲಸವಾಗಿ ಕಾಣಿಸುತ್ತದೆ. ಅಂತಹವನನ್ನು ದಡ್ಡನ ಕೆಳಗೆ ಲೆಕ್ಕಿಸುತ್ತಾರೆ. ಸಾತಾನ್ ರಾಜ್ಯವಾದ ಪ್ರಪಂಚದಲ್ಲಿ ದೇವರಿಗಾಗಿ ಎಲ್ಲರನ್ನು ಬಿಟ್ಟುಹಾಕುವ ತ್ಯಾಗ ಪುರುಷನು ಕಾಣಿಸುವುದು ಅಪರೂಪ. ಯಾಕೆಂದರೇ! ಯಾರ ಮನಸ್ಸಿನಲ್ಲಾದರೂ **ದೇವರು** ಎಂಬ ಯೋಚನೆ ಬಂದಾಗಿನಿಂದ ಸಾತಾನ್ ಅವನ ಮೇಲೆ ಪ್ರತ್ಯೇಕ ದೃಷ್ಠಿ ಹರಿಸಿ ಆ ಮಾರ್ಗದಿಂದ, ಆ ಯೋಚನೆಯಿಂದ ತಪ್ಪಿಸಬಲ್ಲದು. ಮತ್ತೊಂದು ಮಾತು ಏನೆಂದರೇ ಸಾತಾನ್ ಬಲದ ಮುಂದೆ ನಿರ್ಬಲನಾದ ಮನುಷ್ಯ ಅದನ್ನು ಜಯಿಸಿ ದಾಟಿ ಬರುವುದು ದುಸ್ಸಾಧ್ಯವೆಂದು ಭಗವದ್ಗೀತೆಯಲ್ಲಿ ವಿಜ್ಞಾನ ಯೋಗವೆಂಬ ಅಧ್ಯಾಯದಲ್ಲಿ 14ನೇ ಶ್ಲೋಕದಲ್ಲಿ ಕೂಡಾ ಹೇಳಿದ್ದಾನೆ. ಇಲ್ಲಿ ಒಂದು ಅನುಮಾನ ಮನುಷ್ಯನಿಗೆ ಬರಬಹುದು. ಸಾತಾನ್ ಬಲವು ದೊಡ್ಡದಾಗಿರುವಾಗ, ಮಾನವನು ಅದನ್ನು ದಾಟಿ ಹೋಗುವುದು ಸಾಧ್ಯವಾಗುವು ದಿಲ್ಲ ಎಂದಾಗ ಮನುಷ್ಯ ದೇವರ ಕಡೆ ಹೋಗಲಾರನು ಅಲ್ಲವೇ! ಹಾಗಿರುವಾಗ ಪ್ರಯತ್ನ ಮಾಡುವುದು ಯಾಕೆ ವಿಫಲವಾಗುವುದು ಯಾಕೆ ಎಂದು ಕೇಳಬಹುದು. ಅದಕ್ಕೆ ಉತ್ತರ ವಾಸ್ತವವಾಗಿ ಪ್ರಪಂಚವೆಲ್ಲಾ ವಿಶಾಲವಾದ ಸಾತಾನ್ ಮುಂದೆ ಮನುಷ್ಯನ ಪ್ರಯತ್ನವೆಷ್ಟಾದರೂ ನಿಲ್ಲಲಾರದು ಎಂದು ತಿಳಿದಿದ್ದರೂ ತನ್ನ ಪ್ರಯತ್ನವನ್ನು ತಾನು ಮಾಡುತ್ತಾ, ದೇವರನ್ನು ಪೂರ್ತಿ ವಿಶ್ವಾಸಿಸಿ ಇದ್ದವನನ್ನು ದೇವರೇ ಶ್ರದ್ಧೆ ವಹಿಸಿ ಸಾತಾನ್ ನಿಂದ ತಪ್ಪಿಸಿ ತನ್ನ ಕಡೆ ಸೆಳೆದುಕೊಳ್ಳುತ್ತಾನೆ. ಆದ್ದರಿಂದ ಸಾತಾನ್ ಮುಂದೆ ಸೂಕ್ಷ್ಮಾತಿ ಸೂಕ್ಷ್ಮವಾದ ಮಾನವನು ಸಾತಾನನ್ನು ಜಯಿಸಬೇಕೆಂದರೇ ಮುಖ್ಯವಾದುದು ದೇವರನ್ನು ಸಂಪೂರ್ಣವಾಗಿ ಶರಣು

ಬೇಡುವುದೇ ಮಾರ್ಗ. ಸಂಪೂರ್ಣವಾಗಿ ತನ್ನನ್ನೇ ನಂಬಿದವನನ್ನು **"ಮಾಯಾ ಮೇತಾಂ ತರನ್ತಿತೇ" "ಮಾಯೆಯಿಂದ ಹೊರ ಬೀಳುವಂತೆ ನಾನು ಮಾಡುತ್ತೇನೆ"** ಎಂದಿದ್ದಾನೆ. ಆದಕಾರಣ ಸಂಪೂರ್ಣವಾಗಿ ದೇವರನ್ನು ನಂಬಿ ಭಾರವೆಲ್ಲಾ ಆತನ ಮೇಲೆ ಇಟ್ಟರೇ ದೇವರೇ ಸಾತಾನ್‌ನಿಂದ ತಪ್ಪಿಸಬಲ್ಲನು.

**12) ಲೂಕಾ ಸುವಾರ್ತೆ, 21ನೇ ಅಧ್ಯಾಯ, 15ನೇ ವಚನ.**

## (15) ನಿಮ್ಮ ವಿರೋಧಿಗಳು ಎದುರಾಡುವುದಕ್ಕೆ ಸಾಧ್ಯವಾಗದ ವಾಕ್ಕನ್ನು ಜ್ಞಾನವನ್ನು ನಾನು ನಿಮಗೆ ಅನುಗ್ರಹಿಸುತ್ತೇನೆ.

ಪ್ರಪಂಚದಲ್ಲಿ ಬೋಧಕರು, ಗುರುಗಳೆಂದು ಹೆಸರು ಇಟ್ಟುಕೊಂಡವರು, ಬೋಧಿಸುವ ಬೋಧನೆಗಳನ್ನು ಸ್ವಲ್ಪ ಜ್ಞಾನ ತಿಳಿದ ಚಿಕ್ಕ ಮಕ್ಕಳು ಪ್ರಶ್ನಿಸಿದರೂ, ಅವರ ಬೋಧನೆಗಳಲ್ಲಿ ಸಮಾಧಾನವಿಲ್ಲದೆ ಇರುತ್ತದೆ. ಆದ್ದರಿಂದ ಪ್ರಪಂಚದಲ್ಲಿ ಬೋಧಕರ ಜ್ಞಾನವನ್ನು ಯಾರೂ ಪ್ರಶ್ನಿಸಬಾರದೆಂಬ ನಿಯಮವನ್ನು ಇಟ್ಟುಕೊಂಡಿದ್ದಾರೆ. ಅವರ ಬೋಧನೆಗಳಲ್ಲಿ ಸಮಾಧಾನವಿಲ್ಲದೆ ಹೋಗುವುದಕ್ಕೆ ಕಾರಣ ಅದು ಶಾಸ್ತ್ರಬದ್ಧವಲ್ಲದೆ ಹೋಗಿರುವುದೆ ಮುಖ್ಯಕಾರಣ. ಅಶಾಸ್ತ್ರೀಯ ವಾದ ಬೋಧನೆಗಳು ಹೇತುಬದ್ಧವಾದ ಪ್ರಶ್ನೆಗಳಿಗೆ ಉತ್ತರ ನೀಡಲಾರವು. ಅವರು ಹೇಳುತ್ತಾ ಹೋಗುವವರೇ ಹೊರತು ಕೇಳಿದರೆ ಸಮಾಧಾನ ಕೊಡುವವರಲ್ಲ. ಪರಮಾತ್ಮ ಭಗವಂತನಾಗಿ ಬಂದು ಬೋಧಿಸಿರುವುದು ಅಸಲಾದ ಪರಮಾತ್ಮ ಜ್ಞಾನವು, ಆದ್ದರಿಂದ ಬೋಧಕರು ಹೇಳಿರುವ ಜ್ಞಾನವಲ್ಲದೆ ಭಗವಂತನು ಹೇಳಿರುವ ಜ್ಞಾನವನ್ನು ತಿಳಿದವರು, ಹೇಳುವುದೇ ಅಲ್ಲದೆ ಯಾರು ಎಂತಹ ಪ್ರಶ್ನೆ ಕೇಳಿದರೂ ಉತ್ತರ ಕೊಡಬಲ್ಲ ಸ್ಥಿತಿಯಲ್ಲಿ ಕೂಡಾ ಇರುತ್ತಾರೆ. ಪರಮಾತ್ಮ ಜ್ಞಾನವನ್ನು ತಿಳಿದಿರುವ ಭಗವಂತನ ಭಕ್ತರನ್ನು ನೋಡಿ ನಾವು ಗುರುಗಳು, ನಾವು ಜ್ಞಾನಿಗಳು ಎಂಬ ಅಹಂಕಾರದಿಂದ ಭಗವಂತನ ಜ್ಞಾನ ಇರುವವರ ಹತ್ತಿರಕ್ಕೆ ವಿರೋಧವಾಗಿ ಬಂದು, ವಿರುದ್ಧವಾಗಿ ಮಾತನಾಡುತ್ತಿರು ತ್ತಾರೆ. ಅಂತಹ ಸಮಯದಲ್ಲಿ ಅವರು ಎದುರು ಮಾತನಾಡುವು ದಕ್ಕೆ ಸಾಧ್ಯವಾಗದ ಜ್ಞಾನವು ಭಗವಂತನ ಜ್ಞಾನವನ್ನು ತಿಳಿದವರಿಗೆ ಮೊದಲೇ ತಿಳಿಸಲ್ಪಟ್ಟಿರುತ್ತದೆ. ನಿಜ ಜ್ಞಾನವನ್ನು ತಿಳಿದವರನ್ನು ನೋಡಿ ಎಷ್ಟೋ ಜನ ಅಸೂಯೆ ಪಡುತ್ತಾರೆಂದು

ಅವರೊಂದಿಗೆ ವಿರೋಧ ಬೆಳೆಸಿಕೊಳ್ಳುತ್ತಾರೆಂದು ಮೇಲಿರುವ ದೇವರ ವಾಕ್ಯ ದಲ್ಲಿಯೇ ತಿಳಿಯುತ್ತಿದೆ. ದೇವರೆ ಇಳಿದು ಬಂದಿರುವ ದಿನವು ಕೂಡಾ ನಿನ್ನ ಜ್ಞಾನವು ಎಷ್ಟರ ಮಟ್ಟಿಗೆ ಎಂದು ಎದುರಿಸಿ ಮಾತನಾಡಿ ನಿನಗೆ ಇನ್ನೂ ಸರಿಯಾಗಿ ತಿಳಿದಿಲ್ಲ, ಇಂತಹ ಜಾಗಕ್ಕೆ ಹೋದರೇ ನಿನಗೆ ಒಳ್ಳೆಯ ಜ್ಞಾನವು ತಿಳಿಯುತ್ತದೆ ಎಂದು ದೇವರಿಗೆ ಹೇಳಿರುವವರು ಇದ್ದಾರೆ. ನನ್ನ ಹತ್ತಿರಕ್ಕೆ ಬಂದು ನನಗೆ ಜ್ಞಾನ ತಿಳಿದಿಲ್ಲ ಎನ್ನುವವರು ಭೂಮಿ ಮೇಲೆ ಇದ್ದಾರೆ. ಅಂಥವರು ನಿಮ್ಮ ಹತ್ತಿರಕ್ಕು ಕೂಡಾ ಬರಬಲ್ಲರು ಅವರಿಗೆ ತಿರುಗಿಲ್ಲದ ಸಮಾಧಾನ ಹೇಳುವ ಹಾಗೆ ನಿಮಗೆ ನಾನು ಜ್ಞಾನವನ್ನು ಅನುಗ್ರಹಿಸುತ್ತೇನೆಂದು ದೇವರು ಮೇಲಿನ ವಾಕ್ಯದಲ್ಲಿ ತಿಳಿಸಿದ್ದಾನೆ.

### 13) ಲೂಕಾ ಸುವಾರ್ತೆ, 21ನೇ ಅಧ್ಯಾಯ, 17ನೇ ವಚನ.

## (17) ನನ್ನ ನಾಮದ ನಿಮಿತ್ತ ನೀವು ಮನುಷ್ಯರಿಂದ ದ್ವೇಷಿಸಲ್ಪಡುತ್ತೀರಿ.

ಭಗವಂತನು ಅಥವಾ ದೇವರ ಕುಮಾರನು ತಿಳಿಸಿರುವ **ಜ್ಞಾನವು** ಸಾತಾನ್ ಆವಹಿಸಿ ಇರುವ ಪ್ರಜೆಗಳೆಲ್ಲರಿಗೂ ವಿರುದ್ಧವಾಗಿ ಇರುತ್ತದೆ. ಸಾಧಾರಣ ಪ್ರಜೆಗಳಿಗೆ ಅರ್ಥವಾಗದೆ ಹೇಳುವ ಜ್ಞಾನವು ಅಪಾರ್ಥವಾಗುವ ಅವಕಾಶ ಇದೆ. ಅಷ್ಟೋ ಇಷ್ಟೋ ಜ್ಞಾನಿಗಳಾಗಿ ಬೋಧಕರಾಗಿರುವ ಗುರುಗಳ ಹಾಗೆ ಚಲಾವಣೆ ಆಗುವವರಿಗೆ ಪೂರ್ತಿ ವಿರೋಧವಾಗಿ ಕಾಣಿಸುತ್ತದೆ. ದೇವರ ನಾಮವನ್ನು ಬೋಧಿಸುವವರ ಒಂದು ವಾಕ್ಯಗಳು ದೇಶದಲ್ಲಿನ ಪಂಡಿತರಿಗೆ, ಬೋಧಕರಂತಹ ಗುರುಗಳಿಗೆ ಸರಿಹೋಗುವುದಿಲ್ಲ. ಅವರಿಗೆ ದೇವರ ವಾಕ್ಯಗಳೆಲ್ಲವೂ ವಿರೋಧವಾಗಿ ಕಾಣಿಸುವುದರಿಂದ ಅವರೂ, ಅವರನ್ನು ಅನುಸರಿಸುವ ಮನುಷ್ಯರನ್ನು ದೈವಮಾರ್ಗವನ್ನು ಬೋಧಿಸುವವರನ್ನು ದ್ವೇಷಿಸುವುದಕ್ಕೆ ಪ್ರಾರಂಭಿಸುತ್ತಾರೆ. ಆದ್ದರಿಂದಲೆ ಮೇಲಿನ ವಾಕ್ಯದಲ್ಲಿ ದೇವರು **"ನನ್ನ ನಾಮದ ನಿಮಿತ್ತ ಮನುಷ್ಯರಿಂದ ದ್ವೇಷಿಸಲ್ಪಡುತ್ತೀರಿ ಎಂದಿದ್ದಾನೆ."**

******

# ಯೋಹಾನ್ ಸುವಾರ್ತೆ

ಯೋಹಾನ್ ಸುವಾರ್ತೆ ಒಂದನೆಯ ಅಧ್ಯಾಯ, ಒಂದನೆ ವಚನವನ್ನು ಪ್ರಾರಂಭಿಸಿ ಮೂರು ವಾಕ್ಯಗಳಿಗೆ ಒಂದಾಗಿ ವಿವರವನ್ನು ಬರೆಯುತ್ತಿದ್ದೇವೆಂದು ತಿಳಿಯಬೇಕು. ಯೋಹಾನ್ ಸುವಾರ್ತೆ 21 ಅಧ್ಯಾಯಗಳಾಗಿ ಇದೆ. ಇಲ್ಲಿ ನಾನು ಯೋಹಾನ್ ಸುವಾರ್ತೆಯಲ್ಲಿನ ಕೆಲವು ವಾಕ್ಯಗಳಿಗೆ ವಿವರವನ್ನು ಬರೆಯುತ್ತಿದ್ದೇನೆ. ಎಲ್ಲಾದರೆ ಮನುಷ್ಯರಿಗೆ ಅರ್ಥವಾಗದ ವಾಕ್ಯವಿರುತ್ತದೊ, ಎಲ್ಲಾದರೆ ಮನುಷ್ಯ ವಾಕ್ಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಅಪಾರ್ಥ ಮಾಡಿಕೊಳ್ಳುವ ಅವಕಾಶವಿದೆಯೋ, ಇನ್ನೂ ಕೆಲವರು ಎಲ್ಲಾದರೆ ವಾಕ್ಯವನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೋ, ಅಲ್ಲಿ ಆ ವಾಕ್ಯವನ್ನು ಕುರಿತು ವಿವರಿಸಿ ಬರೆಯಬೇಕೆಂದುಕೊಂಡಿದ್ದೇವೆ. ಆ ರೀತಿಯಾಗಿ ಮಾಡುವುದು ದೇವರ ಸೇವೆಯಲ್ಲಿ ಒಂದು ಭಾಗವಾದುದರಿಂದ ನಾನು ಒಂದು ಲೇಖನಿ ಆಗಿರುವಾಗ, ದೇವರೆ ನನ್ನಿಂದ ಈ ಕೆಲಸವನ್ನು ಮಾಡಿಸುತ್ತಿದ್ದಾನೆಂದು ತಿಳಿದು ಈ ಸೇವೆ ಮಾಡುತ್ತಿದ್ದೇನೆ. ಇದಕ್ಕು ಮೊದಲು ಪ್ರಥಮ ದೈವಗ್ರಂಥ ಭಗವದ್ಗೀತೆ, ತೃತೀಯ ದೈವಗ್ರಂಥ ಖುರ್‌ಆನ್‌ನಲ್ಲಿನ ಕೆಲವು ವಾಕ್ಯಗಳಿಗೆ ವಿವರವನ್ನು ಬರೆದಿದ್ದೇವೆ. ಮೂರು ದೈವಗ್ರಂಥಗಳಿಗೆ ವಿವರವನ್ನು ಬರೆಯಬೇಕೆನ್ನುವುದು ನನ್ನ ಪ್ರಗಾಢ ಕೋರಿಕೆ ಆಗಿರುವುದರಿಂದ, ಈಗ ದ್ವಿತೀಯ ದೈವಗ್ರಂಥವಾದ ಇಂಜೀಲು (ಬೈಬಲ್) ಗ್ರಂಥದಲ್ಲಿನ ಕೆಲವು ವಾಕ್ಯಗಳಿಗೆ ವಿವರವನ್ನು ಬರೆಯುತ್ತಿದ್ದೇವೆ. ಇದರಲ್ಲಿ ಬರೆಯುವ ಜ್ಞಾನ ವಿವರವು ಶಾಸ್ತ್ರಬದ್ಧವಾದುದು ಮತ್ತು ಸತ್ಯಸಮೇತ ವಾದುದು ಎಂದು ತಿಳಿಸುತ್ತಿದ್ದೇವೆ. ಈಗ ಯೋಹಾನ್ ಸುವಾರ್ತೆಯಲ್ಲಿನ ಮೊದಲ ಅಧ್ಯಾಯದಲ್ಲಿನ ಮೊದಲ ವಾಕ್ಯವನ್ನು ಬರೆಯುತ್ತಿದ್ದೇವೆ. ಯೋಹಾನ್ ಸುವಾರ್ತೆಯಲ್ಲಿನ ಮೊದಲ ವಾಕ್ಯದಲ್ಲಿ ಮೂರು ಚಿಕ್ಕ ವಾಕ್ಯಗಳಿವೆ. ಆ ಮೂರು

ಚಿಕ್ಕ ವಾಕ್ಯಗಳಿಗೆ ವಿವರವನ್ನು ಹೇಳಿದರೆ ಮೊದಲ ವಾಕ್ಯಕ್ಕೆ ಪೂರ್ತಿಯಾಗಿ ಉತ್ತರ ಹೇಳಿದಂತಾಗುತ್ತದೆ. ಅದನ್ನು ಕೆಳಗೆ ನೋಡಿರಿ.

**1) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 1ನೇ ವಚನ.**

**(1) ಆದಿಯಲ್ಲಿ ವಾಕ್ಯವಿತ್ತು, ವಾಕ್ಯವು ದೇವರ ಹತ್ತಿರವಿತ್ತು. ವಾಕ್ಯವು ದೇವರಾಗಿತ್ತು.**

ಈಗ ದ್ವಿತೀಯ ದೈವಗ್ರಂಥದಲ್ಲಿನ ಯೋಹಾನ್ ಸುವಾರ್ತೆಯಲ್ಲಿನ ಮೊದಲ ಮೂರು ವಾಕ್ಯಗಳಿಗೆ ವಿವರವನ್ನು ಹೇಳಿಕೊಳ್ಳೋಣ.

**ಆದಿಯಲ್ಲಿ ವಾಕ್ಯವಿತ್ತು**

**ವಾಕ್ಯವು ದೇವರ ಹತ್ತಿರವಿತ್ತು**

**ವಾಕ್ಯವು ದೇವರಾಗಿತ್ತು**

ಬೈಬಲ್ ಬೋಧನೆಯಲ್ಲಿ ಈ ಮೂರು ವಾಕ್ಯಗಳನ್ನು ಪ್ರಥಮ ವಾಕ್ಯಗಳಾಗಿ ವಿವರಕ್ಕೋಸ್ಕರ ಸ್ವಲ್ಪ ಬದಲಾಯಿಸಿ ಹೇಳಿಕೊಳ್ಳುತ್ತಿದ್ದೇವೆ. ಗ್ರಂಥ ಪ್ರಾರಂಭದಲ್ಲಿನ ಆದಿಕಾಂಡದಲ್ಲಿ ಇರುವ ವಾಕ್ಯಗಳನ್ನು ಗ್ರಂಥ ಪ್ರಥಮ ವಾಕ್ಯಗಳಾಗಿ ಹೇಳಬೇಕಲ್ಲವೇ! ಎಂದು ಇತರರು ಕೇಳಬಹುದು. ಅಂತಹ ಅನುಮಾನ ಬಾರದಂತೆ ಮೊದಲೇ ವಿವರವನ್ನು ಹೇಳಿದ್ದೇವೆ. ಮನುಷ್ಯನಿಗೆ ಅವಶ್ಯವಾದ ಬೋಧನೆಯನ್ನೆ ಗ್ರಂಥವಾಗಿ ತೆಗೆದುಕೊಂಡು, ಅದರಲ್ಲಿ ಮೊದಲ ವಾಕ್ಯಗಳನ್ನು ಹೇಳಿಕೊಳ್ಳುತ್ತಿದ್ದೇವೆ. ಆ ಪದ್ಧತಿ ಪ್ರಕಾರ ನಾಲ್ಕು ಸುವಾರ್ತೆಗಳು ಭಗವಂತನಾದ ಏಸು ಹೇಳಿರುವವು. ಅದರಲ್ಲಿ ಯೋಹಾನ ಸುವಾರ್ತೆ ಕೊನೆಯದಾದರೂ ಉಳಿದ ಮೂರು ಅಧ್ಯಾಯಗಳಿಗಿಂತಲೂ ಬೋಧನೆಯೊಂದಿಗೆ ಪ್ರಾರಂಭವಾಗಿರು ವುದು ಒಂದು ಯೋಹಾನ್ ಸುವಾರ್ತೆ ಮಾತ್ರವೆ. ಭಗವದ್ಗೀತೆಯಲ್ಲಿ ಕೂಡಾ ಇದೇ ಸೂತ್ರದ ಪ್ರಕಾರ ಎರಡನೆ ಅಧ್ಯಾಯವಾದ ಸಾಂಖ್ಯಯೋಗದಲ್ಲಿ 11ನೇ

ಶ್ಲೋಕದಿಂದ ಪ್ರಥಮ ವಾಕ್ಯಗಳನ್ನು ತೆಗೆದುಕೊಂಡಿದ್ದೇವೆ. ಜ್ಞಾನಬೋಧನೆ ಅಲ್ಲಿಂದಲೇ ಪ್ರಾರಂಭವಾಗುವುದರಿಂದ ಸಾಂಖ್ಯ ಯೋಗದಲ್ಲಿ 11, 12, 13 ನೇ ಶ್ಲೋಕಗಳನ್ನು ಮೊದಲ ಮಾತುಗಳಾಗಿ ಹೇಳಿಕೊಂಡಿದ್ದೇವೆ. ಹಾಗೆಯೇ ಈಗ ಇಂಜೀಲು ಗ್ರಂಥದಿಂದ, ಗ್ರಂಥದ ಮಧ್ಯದಲ್ಲಿರುವ ಅಂದರೆ 43ನೇ ಪಾಠದಿಂದ ಪ್ರಾರಂಭ ವಾಕ್ಯಗಳನ್ನು ತೆಗೆದುಕೊಳ್ಳುವುದು ನಡೆದಿದೆ. ಅಲ್ಲಿ ತೌರಾತ್‌ನಲ್ಲಿ ಮೂರು ಶ್ಲೋಕಗಳನ್ನು ಮೂರು ವಾಕ್ಯಗಳಾಗಿ ತೆಗೆದುಕೊಂಡಿದ್ದೇವೆ. ಆದರೆ ಇಲ್ಲಿ ಯೋಹಾನ ಸುವಾರ್ತೆಯಲ್ಲಿ ಮೂರು ಕ್ರಮ ಸಂಖ್ಯೆಯಲ್ಲಿರುವ ಮೂರು ವಾಕ್ಯಗಳನ್ನು ತೆಗೆದುಕೊಳ್ಳದೆ ಒಂದೇ ವಾಕ್ಯದಲ್ಲಿರುವ ಸಮಾಚಾರವನ್ನು ಮೂರು ಪ್ರಥಮ ವಾಕ್ಯಗಳಾಗಿ ತೆಗೆದುಕೊಂಡಿದ್ದೇವೆ. ವಾಕ್ಯಗಳ ಕ್ರಮ ಸಂಖ್ಯೆ ಮುಖ್ಯವಲ್ಲ. ಮೂರು ಭಾವನೆಗಳೊಂದಿಗೆ ತುಂಬಿರುವವುಗಳನ್ನು ಮೂರು ವಾಕ್ಯಗಳಾಗಿ ತೆಗೆದುಕೊಂಡಿದ್ದೇವೆ. ಆದ್ದರಿಂದ ಮೂರು ಚಿಕ್ಕ ವಾಕ್ಯಗಳಿದ್ದರೂ, ಅವು ಮೂರು ದೊಡ್ಡ ಭಾವನೆಗಳಿರುವ ವಾಕ್ಯಗಳೆಂದು ತಿಳಿಯಬೇಕು.

ಈ ಮೂರು ವಾಕ್ಯಗಳು ಪ್ರತ್ಯೇಕವಾದ ಸೂಕ್ಷ್ಮ ಭಾವದಿಂದ ಅಡಗಿವೆ. ಭಗವದ್ಗೀತೆ ಮೊದಲ ಮೂರು ವಾಕ್ಯಗಳು ಜೀವಾತ್ಮ, ಆತ್ಮವನ್ನು ಕುರಿತು ಹೇಳಿರುವವಾಗಿವೆ. ಆದರೆ ಇಂಜೀಲು (ಬೈಬಲ್) ಗ್ರಂಥದಲ್ಲಿ ಯೋಹಾನ್ ಸುವಾರ್ತೆಯಲ್ಲಿನ ಮೊದಲ ವಾಕ್ಯಗಳು ಪ್ರತ್ಯೇಕವಾದ ಭಾವವನ್ನು ಬೋಧಿಸುತ್ತಿವೆ. ಭಗವದ್ಗೀತೆ ಪ್ರಾರಂಭದಲ್ಲಿ ಜೀವಾತ್ಮ, ಆತ್ಮ, ಶರೀರವೆಂಬ ಮೂರು ಭಾಗಗಳನ್ನು ಕುರಿತು ತಿಳಿಸಿರುವುದಾಗಿದೆ. ಇಲ್ಲಿ ಯೋಹಾನ್ ಸುವಾರ್ತೆಯಲ್ಲಿನ ಮೂರು ಪ್ರಥಮ ವಾಕ್ಯಗಳಲ್ಲಿ ಜ್ಞಾನವು, ಆತ್ಮ, ಪರಮಾತ್ಮ ಎಂಬ ಮೂರು ಅಂಶಗಳನ್ನು ಕುರಿತು ಹೇಳುವುದಾಗಿದೆ. ಆದರೆ ಈ ಮೂರು ವಾಕ್ಯಗಳಲ್ಲಿ ಎಲ್ಲಿ ಆತ್ಮ ಇದೆಯೋ, ಎಲ್ಲಿ ಪರಮಾತ್ಮ ಇದೆಯೋ ಅರ್ಥವಾಗದೆ ಅಡಗಿದೆ. ಮೂರು ವಾಕ್ಯಗಳಲ್ಲಿ ದೇವರು ಎಂಬ ಮಾತು ಎರಡು ವಾಕ್ಯಗಳಲ್ಲಿ ಇದೆ. ಅಷ್ಟೇ ಹೊರತು ಜ್ಞಾನ, ಆತ್ಮ ಎಂಬ ವಿಷಯಗಳು ಎಲ್ಲಿ ಇವೆಯೋ ಗುರುತಿಸಲಾರದ ರೀತಿಯಲ್ಲಿ ಇವೆ. ಈಗ ಮೂರು ವಾಕ್ಯಗಳಲ್ಲಿ ಮೊದಲ ವಾಕ್ಯವನ್ನು ತೆಗೆದುಕೊಳ್ಳೋಣ.

ಮೊದಲ ಮಾತಿನಲ್ಲಿ **ಆದಿಯಲ್ಲಿ ವಾಕ್ಯವಿತ್ತು** ಎಂದು ಇದೆ ಅಲ್ಲವೇ! ಇದರಲ್ಲಿ ವಾಕ್ಯ ಎಂದರೆ ಅದು ನಿನಗೆ ತಿಳಿದಿರುವ ಭಾಷೆಯಲ್ಲಿ ಇರಬಹುದು, ಇರದೆ ಹೋಗಬಹುದು. ನಿನಗೆ ತೆಲುಗು ಭಾಷೆ ಮಾತ್ರವೇ ಬರುತ್ತದೆ ಅಂದುಕೊಳ್ಳಿ. ವಾಕ್ಯವು ಬೇರೆ ಭಾಷೆಯಲ್ಲಿ ನಿನಗೆ ತಿಳಿಯದ ಭಾಷೆಯಲ್ಲಿ ಇರಬಹುದು. ವಾಕ್ಯ ಎಂದರೇ! ವಾಕ್ಕು ಮೂಲಕ ಬರುವುದು ವಾಕ್ಯವು. ವಾಕ್ಕು ಎಂದರೇ! ಬಾಯಿಂದ ಬರುವ ಶಬ್ಧವನ್ನು ವಾಕ್ಕು ಎಂದು ಕರೆಯುತ್ತಿದ್ದೇವೆ. ಶಬ್ಧ ಎಂದರೆ ಕೇಳಿಸುವುದು. ಕೇಳಿಸುವ ಶಬ್ಧವು ದೊಡ್ಡದು ಆಗಬಹುದು, ಚಿಕ್ಕದು ಆಗಬಹುದು. ಕೇಳಿಸುವ ಶಬ್ಧವನ್ನು ಅನುಸರಿಸಿ ವಾಕ್ಯವು ದೊಡ್ಡದೆಂದೋ ಇಲ್ಲವೇ ಚಿಕ್ಕದೆಂದೋ ಹೇಳಬಹುದು. ಕೇಳಿಸುವ ಶಬ್ಧ ಒಂದರ ಆಲಿಸುವಿಕೆ ದೊಡ್ಡದಾಗಿ ಚಿಕ್ಕದಾಗಿ ಅಲ್ಲದೇ ಶಬ್ಧವು ಉದ್ದವಾಗಿ ಇರಬಹುದು ಅಥವಾ ಮೊಟಕಾಗಿ ಇರಬಹುದು. ವಾಕ್ಯವು ನಿನಗೆ ತಿಳಿದಿರುವ ಭಾಷೆಯಲ್ಲಿಯೆ ಇರುತ್ತದೆಂದಾಗಲಿ, ವಾಕ್ಯವು ಇಷ್ಟೇ ದೊಡ್ಡದು ಅಥವಾ ಚಿಕ್ಕದಾಗಿದೆ ಎಂದಾಗಲಿ, ವಾಕ್ಯವು ಚಿಕ್ಕ ಶಬ್ಧದೊಂದಿಗೆ ಹೇಳುವುದೆಂದಾಗಲೀ, ಅಥವಾ ದೊಡ್ಡ ಶಬ್ಧದಿಂದಲೇ ಹೇಳುವುದೆಂದಾಗಲೀ ಹೇಳಲಾರೆವು. ವಾಕ್ಯವು ಭಾಷೆಯಲ್ಲಾಗಲಿ, ದೊಡ್ಡ ಚಿಕ್ಕ ಶಬ್ಧದಲ್ಲಾಗಲಿ, ಉದ್ದ ಮೊಟಕಾಗಲಿ ಇರಬಹುದು. ಹೀಗೇ ಇರುತ್ತದೆಂದು ಹೇಳಲಾಗುವುದಿಲ್ಲ. ವಾಕ್ಯವು ಹೇಗಾದರೂ ಇರಬಹುದು. ಈಗ **ಆದಿಯಲ್ಲಿ ವಾಕ್ಯವಿತ್ತು** ಎಂಬ ಮಾತನ್ನು ತೆಗೆದುಕೊಂಡು ನೋಡಿದರೆ ವಾಕ್ಯವು ಆದಿಯಲ್ಲಿತ್ತು ಎಂದು ಹೇಳಿದರೂ ಭಾವವು ಕೆಡುವುದಿಲ್ಲ, ಹೇಳಿರುವುದು ಆದಿಯಲ್ಲೆಂದು ತಿಳಿಯುತ್ತಿದೆ. ಆದಿಯಲ್ಲಿ ಮನುಷ್ಯರಿಗೆ ಯಾವ ಭಾಷೆ ಬರುವುದಿಲ್ಲ. ಆಗ ಯಾವ ಭಾಷೆಯಲ್ಲಿ ವಾಕ್ಯವು ಹೇಳಲ್ಪಟ್ಟಿದೆಯೆಂದು ಪ್ರಶ್ನೆ ಬರಬಹುದು. ಆದಿಯಲ್ಲಿ ನಡೆದ ಯಥಾರ್ಥವನ್ನು ಗಮನಿಸಿದರೆ ಎಲ್ಲಾ ಪ್ರಶ್ನೆಗಳಿಗು ಉತ್ತರ ಸಿಗಬಲ್ಲದು.

ಆದಿಯಲ್ಲಿ ಶಬ್ಧವು ಎಲ್ಲಿಂದ ಬಂದಿದೆ? ಎಂದು ಪ್ರಶ್ನಿಸಿಕೊಂಡು ನೋಡಿದರೆ ಮನುಷ್ಯನ ಕಿವಿಗೆ ಕೇಳಿಸುವ ಶಬ್ಧವು ಪ್ರಕೃತಿಯಿಂದಲೆ ಉಂಟಾಗಿದೆ

ಎಂದು ಹೇಳಬಹುದು. ಪ್ರಕೃತಿ ಐದು ಭೂತಗಳಾಗಿ ಇದೆ. ಭೂತ ಎಂದರೆ ಜೀವ ಎಂದು ಅರ್ಥ. ಜೀವವಿರುವ ಆಕಾಶದಲ್ಲಿ ಆದಿಯಲ್ಲಿ ಶಬ್ಧ ಏರ್ಪಟ್ಟಿದೆಯೆಂದು ಅಲ್ಲಿಗೆ ಹೋಗಿ ನೋಡಿದರೆ ತಿಳಿದು ಹೋಗುತ್ತಿದೆ. ಆಕಾಶವು ಶೂನ್ಯವಾಗಿ ಇದೆ. ಅದು ಹೇಗೆ ಶಬ್ಧ ಮಾಡುತ್ತದೆ? ಎಂಬ ಪ್ರಶ್ನೆ ಕೂಡಾ ಬರಬಹುದು. ಹೇತುವಾದ ಪದ್ಧತಿಯಲ್ಲಿ ಈ ಪ್ರಶ್ನೆಗಳು ತಪ್ಪದೆ ಬರಬೇಕಾಗಿರುವುದೇ. ಅವುಗಳಿಗೆ ಉತ್ತರ ತಿಳಿಯಬೇಕಾದ್ದೇ. ಆಗಲೇ ಶಾಸ್ತ್ರಪದ್ಧತಿಯಾಗುತ್ತದೆ. ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ನೋಡಿದರೆ, ಶಬ್ಧವನ್ನು ಆಕಾಶ ಸ್ವತಃವಾಗಿ ಮಾಡಿದೆಯಾ? ಎಂದು ನೋಡಿದರೆ, ಆಕಾಶವು ಒಂದು ಜೀವಿಯೆ ಆಗಿರುವುದರಿಂದ ಜೀವಾತ್ಮಕ್ಕೆ ಯಾವುದು ಕೈಲಾಗುವುದಿಲ್ಲ, ಯಾವುದೂ ಮಾಡಲಾರದು ಎಂಬ ಶಾಸ್ತ್ರವಿಧಿ ಇದೆ. ಅದನ್ನು ಜೀವಾತ್ಮ ಧರ್ಮವೆಂದು ಹೇಳಬಹುದು. ಪರಮಾತ್ಮಗು ಕೂಡಾ ಧರ್ಮವಿದೆ. ಪರಮಾತ್ಮ (ದೇವರು) ನಾಮ, ರೂಪ, ಕ್ರಿಯೆ ಇಲ್ಲದವನೆಂದು, ಅದುವೇ ದೇವರ ಪ್ರಥಮ ಧರ್ಮವೆಂದು ಹೇಳಬಹುದು. ದೇವರು ಕ್ರಿಯಾ ರಹಿತನು ಎಂದರೇ ಕೆಲಸವನ್ನು ಮಾಡುವುದಿಲ್ಲ. ಜೀವಾತ್ಮ ಧರ್ಮದ ಪ್ರಕಾರ ಜೀವಿಯು ಕೈಲಾಗದವನಾಗಿ ಮಾಡಲಾರನು, ದೇವರು ಕೈಲಾಗುವವನಾದರೂ ಮಾಡುವುದಿಲ್ಲ. ಈ ವಿಧವಾಗಿ ಜೀವಿಗು, ದೇವರಿಗು ವಿರುದ್ಧವಾದ ಧರ್ಮಗಳಿವೆ. ಆದಿಯಲ್ಲಿ ವಾಕ್ಯವು ಆಕಾಶದಿಂದ ಬಂದರೆ, ಆಕಾಶವು ಒಂದು ಜೀವಿಯೆ ಆಗಿರುವುದರಿಂದ ಆಕಾಶ ಎನ್ನುವ ಜೀವಿಯು ಆ ಶಬ್ಧವನ್ನು ಮಾಡಲಿಲ್ಲ. ಆಕಾಶದಿಂದ ಶಬ್ಧ ಬಂದಿರುವುದು ವಾಸ್ತವವೇ. ಆದರೆ ಆಕಾಶ ಜೀವಿಯು ಶಬ್ಧವನ್ನು ಮಾಡುವ ಸಾಮರ್ಥ್ಯ, ಬಲ ಇಲ್ಲದವನು. ಆದ್ದರಿಂದ ಆಕಾಶದ ಹಿಂದೆ ಯಾರೋ ಇದ್ದು ಶಬ್ಧ ಮಾಡಿರಬಹುದು. ಆದರೆ ದೇವರು ಕೂಡಾ ಕೆಲಸ ಮಾಡದವನು, ಆದಕಾರಣ ದೇವರು ಕೂಡಾ ಆ ಶಬ್ಧವನ್ನು ಮಾಡಲಿಲ್ಲ. ಆಕಾಶದಿಂದ ಶಬ್ಧ ಬಂದಿರುವುದು ವಾಸ್ತವವೇ ಆದರೂ, ಆ ಶಬ್ಧಕ್ಕೆ ಕಾರಣ ಆಕಾಶ ಜೀವಿಯು ಅಲ್ಲ, ದೇವರೂ ಅಲ್ಲ. ಇಬ್ಬರೂ ಅಲ್ಲದೆ ಮತ್ತೊಬ್ಬನು ಯಾರೋ ಇನ್ನೊಬ್ಬನು ಇದ್ದು ಆ ಶಬ್ಧವನ್ನು ಮಾಡಿರಬಹುದು ಎಂದು ಅನುಮಾನ ಬಂದಿದೆ.

ಈ ಅನುಮಾನ ತೀರುವುದಕ್ಕೆ ವಿಶ್ವದಲ್ಲಿ ಯಾರ್‍ಯಾರು ಇದ್ದಾರೊ ಮೊದಲು ಗಮನಿಸಬೇಕಾದ ಅವಶ್ಯವಿದೆ. ದೇವರು ಮೊದಲು ವಿಶ್ವವನ್ನು ಸೃಷ್ಠಿಸಿದ್ದಾನೆ. ಆಗ ದೇವರು ದೇವರಾಗಿಯೇ ಇದ್ದೂ ಮೊದಲು ತನ್ನಿಂದ ಪ್ರಕೃತಿ ಎನ್ನುವುದನ್ನು ತಯಾರಿ ಮಾಡಿದ್ದಾನೆ. ಪ್ರಕೃತಿ ಐದು ಭಾಗಗಳಾಗಿ ಇರುವ ಹಾಗೆ ಸೃಷ್ಠಿಸಿದ್ದಾನೆ. ನಂತರ ಅದು ನಿರ್ಜೀವವಾಗಿ ಇರುವುದರಿಂದ ಅದನ್ನು ಚೈತನ್ಯವಾಗಿ ಮಾಡುವುದಕ್ಕೆ ತನ್ನಿಂದ ಆತ್ಮನನ್ನು, ಜೀವಾತ್ಮವನ್ನು ಎರಡನ್ನೂ ತಯಾರಿ ಮಾಡಿದ್ದಾನೆ. ದೇವರು ತನ್ನ ಹಾಗೆ ಪುರುಷತ್ವವಿರುವ ಜೀವಾತ್ಮ, ಆತ್ಮನನ್ನು ತಯಾರಿ ಮಾಡಿ ಜೀವಿಯು ನಡೆಸಲ್ಪಡುವವನಾಗಿ, ಆತ್ಮ ನಡೆಸುವವನಾಗಿ ಇರುವಂತೆ ಮಾಡಿದ್ದಾನೆ. ಸಕಲ ಕಾರ್ಯಗಳನ್ನು ಮಾಡುವುದಕ್ಕೆ ಆತ್ಮನನ್ನು ನೇಮಿಸಿದ್ದಾನೆ. ಪ್ರತಿ ಶರೀರದಲ್ಲಿಯೂ ಜೀವಿ ಇದ್ದರೆ ಜೀವಿಯೊಂದಿಗೆ ಆತ್ಮವಿದ್ದೂ ಶರೀರದಲ್ಲಿ ಎಲ್ಲಾ ಕಾರ್ಯಗಳನ್ನು ಮಾಡುತ್ತಿದೆ. ಆತ್ಮ ವಿಷಯವು ಎಷ್ಟೋ ದೊಡ್ಡ ಜ್ಞಾನಿಗಳಾದವರಿಗು ಕೂಡಾ ತಿಳಿಯದೆಂದು ದೇವರೇ ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಪ್ರಯತ್ನಿಸುವ ಯೋಗಿಗಳಿಗೆ ಮಾತ್ರವೇ ಆತ್ಮ ತಿಳಿಯುವುದೆಂದು ಭಗವದ್ಗೀತೆ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಹನ್ನೊಂದನೆಯ (11) ಶ್ಲೋಕದಲ್ಲಿ ಹೇಳಲಾಗಿದೆ. ಆತ್ಮ ಶರೀರದಲ್ಲಿ ತಿಳಿಯದೆ ಅಣಗಿದೆಯೆಂದು ತಿಳಿಯಬೇಕು.

ದೇವರು ಕೆಲಸ ಮಾಡದವನು ಅಲ್ಲವೇ! ಏನೂ ಮಾಡದವನು ಪ್ರಕೃತಿಯನ್ನು, ಉಳಿದ ಎರಡು ಆತ್ಮಗಳನ್ನು ಹೇಗೆ ಮಾಡಿದ್ದಾನೆ? ಎಂದು ಕೆಲವರು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೇ! ದೇವರು ಕ್ರಿಯಾರಹಿತನು ಕೆಲಸ ಮಾಡದವನು ಎನ್ನುವ ಮಾತು ವಾಸ್ತವವೇ. ಅದು ಸೃಷ್ಠಿಯನ್ನು ತಯಾರಿ ಮಾಡಿದ ನಂತರ, ಆತ್ಮವನ್ನು ಜೀವಾತ್ಮನನ್ನು ತಯಾರಿ ಮಾಡಿದ ನಂತರ ಹೇಳಲ್ಪಟ್ಟ ಧರ್ಮವು. ಸೃಷ್ಠಿ ಪೂರ್ವವು ದೇವರು ಕೆಲಸ ಮಾಡುವವನು. ಆಗ ಸೃಷ್ಠಿಗೆ ಮೊದಲು ದೇವರು ಒಬ್ಬನೇ ಇದ್ದಾನೆ. ದೇವರು ಹೊರತುಪಡಿಸಿ ಯಾರೂ ಇಲ್ಲ. ಆದ್ದರಿಂದ ಸೃಷ್ಠಿಯನ್ನು ತಯಾರಿ ಮಾಡುವ ಮೊದಲು ದೇವರು ಕಾರ್ಯಗಳನ್ನು ಮಾಡುತ್ತಿದ್ದನು. ದೇವರು ಮಾಡಿದರೇನೆ

ಪ್ರಪಂಚವು ತಯಾರಾಗಿದೆ. ಪ್ರಪಂಚವು ತಯಾರಾದ ನಂತರ ಜೀವಾತ್ಮ, ಆತ್ಮನನ್ನು ದೇವರು ತಯಾರಿ ಮಾಡಿದ ನಂತರ ದೇವರ ಧರ್ಮವು ತಯಾರಾಗಿದೆ. ಸೃಷ್ಠಿ ನಂತರ ದೇವರು ಕೆಲಸ ಮಾಡದವನೆಂದು, ಸೃಷ್ಠಿ ಪೂರ್ವದಲ್ಲಿ ಕೆಲಸ ಮಾಡುತ್ತಿದ್ದನು ಎಂದು ತಿಳಿದಿದೆ. ದೇವರು ಎಲ್ಲ ಕ್ರಿಯೆಗಳನ್ನು ಆತ್ಮಕ್ಕೆ ಅಂಟಿಸಿ, ಆತ್ಮದಿಂದ ಮಾಡಿಸುವಂತೆ ನಿರ್ಣಯಿಸಿ, ತಾನು ಏನೂ ಮಾಡದವನಾಗಿದ್ದಾನೆ. ಆದ್ದರಿಂದ ಆತ್ಮನನ್ನು ತಯಾರಿ ಮಾಡಿರುವ ಪರಮಾತ್ಮ ತಾನು ಕೆಲಸಗಳನ್ನು ಮಾಡದೆ ಬಿಟ್ಟು ಹಾಕಿದೆ. ದೇವರು ಮಾಡಬೇಕಾಗಿರುವ ಕೆಲಸವನ್ನೆಲ್ಲಾ ಆತ್ಮವೇ ಮಾಡುತ್ತಿದೆ. ಆತ್ಮ ಕೆಲಸಗಳು ಮಾಡುತ್ತಿರುವಾಗ ಪರಮಾತ್ಮ ಏನೂ ಮಾಡದೆ ಕೇವಲ ಸಾಕ್ಷಿಯಾಗಿ ನೋಡುತ್ತಾ ಸುಮ್ಮನಿದ್ದಾನೆ.

ದೇವರು ಏನೂ ಮಾಡದವನು ಆಗಿರುವುದರಿಂದ, ಜೀವಿಯು ಏನೂ ಕೈಲಾಗದವನಾದ್ದರಿಂದ, ಎಲ್ಲಾ ಮಾಡುವವನು ಆತ್ಮ ಆಗಿರುವುದರಿಂದ, ಆದಿಯಲ್ಲಿ ಆಕಾಶದಿಂದ ಶಬ್ಧವನ್ನು ಮಾಡಿರುವುದು ಆತ್ಮವೇ ಎಂದು ಹೇಳಬಹುದು. ಆತ್ಮ ಆಕಾಶದಲ್ಲಿ ಅಡಗಿ ಇದ್ದು ಆಕಾಶದಿಂದ ಶಬ್ಧ ಮಾಡಿದೆ. ಆತ್ಮ ಮಾಡಿರುವ ಶಬ್ಧವು ದೇವರ ಜ್ಞಾನವಾಗಿತ್ತು. ಆದ್ದರಿಂದ ಆ ಶಬ್ಧವನ್ನು 'ವಾಕ್ಯ' ಎಂದಿದ್ದಾರೆ. ವಾಕ್ಯ ಎಂದರೇ 'ಭಾವದಿಂದ ಕೂಡಿಕೊಂಡಿರುವ ಶಬ್ಧವು' ಎಂದು ಅರ್ಥ. ಸೃಷ್ಠಿ ಆದಿಯಲ್ಲಿ ಆಕಾಶದಿಂದ ಭಾವದಿಂದ ಕೂಡಿಕೊಂಡಿರುವ ಶಬ್ಧವು ಬಂದಿದೆ ಎಂದು ಹೇಳುತ್ತಾ **"ಆದಿಯಲ್ಲಿ ವಾಕ್ಯವಿತ್ತು"** ಎಂದು ಹೇಳಿದ್ದಾರೆ. ವಾಕ್ಯ ಅಂದರೆ ಏನು? ಅದನ್ನು ಹೇಳಿರುವುದು ಯಾರು? ಎಂದು ತಿಳಿದುಕೊಂಡಿದ್ದೇವೆ. ಜ್ಞಾನದಿಂದ ಕೂಡಿಕೊಂಡಿರುವುದು ವಾಕ್ಯ. ವಾಕ್ಯವನ್ನು ಶಬ್ಧ ರೂಪದಲ್ಲಿ ಹೇಳಿರುವುದು ಆತ್ಮ. ಆತ್ಮ ಆಕಾಶದಿಂದ ಹೇಳಿರುವ ಜ್ಞಾನವೇ ಪ್ರಪಂಚಕ್ಕೆ ಮೊದಲ ಜ್ಞಾನವು. ಆಕಾಶದಿಂದ ಮೊದಲು ಹೊರಟು ಬಂದಿರುವ ಶಬ್ಧವು ಜ್ಞಾನವೇ ಆದರೂ, ಅದು ಗುಡುಗಿನ ರೂಪದಲ್ಲಿ ದೊಡ್ಡ ದೊಡ್ಡ ಶಬ್ಧಗಳಾಗಿ ಇತ್ತು. ಅದು ಮನುಷ್ಯರು ಅರ್ಥಮಾಡಿಕೊಳ್ಳುವ ಭಾಷೆ ಅಲ್ಲ. ಗುಡುಗಿನ ಶಬ್ಧದಿಂದ ಇರುವ ಭಾಷೆಯನ್ನು ಆಕಾಶದಲ್ಲಿ ಸೂರ್ಯನು ಗ್ರಹಿಸಿದ್ದಾನೆ. ಅದು ಮನುಷ್ಯರಿಗೆ ಅರ್ಥವಾಗದ ಭಾಷೆಯೆಂದು ತಿಳಿದು,

ಸೂರ್ಯನು ಮನುಷ್ಯರ ಭಾಷೆಯಲ್ಲಿ ಭೂಮಿ ಮೇಲಿರುವ ಮನುವು ಎಂಬ ವ್ಯಕ್ತಿಗೆ ತಾನು ಶಬ್ಧಗಳಿಂದ ಗ್ರಹಿಸಿದ ಜ್ಞಾನವನ್ನು ತಿಳಿಸುವುದಾಗಿದೆ.

ಸೃಷ್ಠಿ ಆದಿಯಲ್ಲಿ ಅರ್ಥವಾಗದ ಶಬ್ಧವು ಜ್ಞಾನ ರೂಪದಲ್ಲಿ ಬಂದಿರುವುದರಿಂದ ಅದನ್ನು **ಆದಿಯಲ್ಲಿ ವಾಕ್ಯವಿತ್ತು** ಎಂದು ಯೋಹಾನ ಸುವಾರ್ತೆ ಮೊದಲ ಅಧ್ಯಾಯ ಮೊದಲ ವಾಕ್ಯದಲ್ಲಿ ಹೇಳಲಾಗಿದೆ. ಶಬ್ಧವು ಜ್ಞಾನವೆಂದು ಮನುಷ್ಯರಿಗೆ ಆ ದಿನ ತಿಳಿದಿಲ್ಲ. ಅದನ್ನು ಸೂರ್ಯನು ಹೇಳಿದಾಗ ಸ್ವಲ್ಪ ಅರ್ಥವಾಗಿದೆ. ಅದೇ ಜ್ಞಾನವನ್ನೇ ಕೃಷ್ಣನು ಭಗವದ್ಗೀತೆಯಾಗಿ ಹೇಳಿದ್ದಾನೆ. ಭಗವದ್ಗೀತೆಯನ್ನು ಹೇಳಿದಾಗ ಇದು ಸೃಷ್ಠಿ ಆದಿಯಲ್ಲಿ ಹೇಳಲ್ಪಟ್ಟ ಜ್ಞಾನವೆಂದು ಕೃಷ್ಣನು ಹೇಳಿದರೂ, ಮನುಷ್ಯರ ದೃಷ್ಠಿಯಲ್ಲಿ ಆದಿಯಲ್ಲಿನ ಶಬ್ಧವಾದ ಗುಡುಗಿನ ಬಳಿಗೆ ಹೋಗಲಿಲ್ಲ. ಗುಡುಗಿನ ಶಬ್ಧವೇ ಭಗವದ್ಗೀತೆ ಜ್ಞಾನವೆಂದು ಇಂದಿಗೂ ಯಾರಿಗೂ ತಿಳಿದಿಲ್ಲ. ಕೃಷ್ಣನು ಹೇಳಿರುವ ಜ್ಞಾನವನ್ನೇ ಸೂರ್ಯನು ಮನುವಿಗೆ ಹೇಳಿದ್ದಾನೆ. ಸೂರ್ಯನು ಹೇಳಿರುವ ಜ್ಞಾನವು ಆಕಾಶ ಗುಡುಗಿನ ಶಬ್ಧ ಜ್ಞಾನವು. ಆಕಾಶ ಶಬ್ಧಗಳ ಜ್ಞಾನವು ಆಕಾಶ ಆತ್ಮ ಬಳಿಯಿಂದ ಬಂದಿರುವ ಜ್ಞಾನವು. ಆತ್ಮ ಬಳಿಯಿಂದ ಬಂದಿರುವ ಆತ್ಮ ಜ್ಞಾನವು ಆತ್ಮದೊಳಗಿನಿಂದ ಬಂದಿರುವುದು. ಆತ್ಮದೊಳಗಿನಿಂದ ಬಂದಿರುವ ಜ್ಞಾನವನ್ನು ನೋಡಿದರೆ ಆತ್ಮವೇ ಜ್ಞಾನವಾಗಿ ಬದಲಾಗಿ ಆತ್ಮದಿಂದ ಹೊರಗೆ ಬಂದಿದೆ. ಹತ್ತಿಯಿಂದ ದಾರ ಹೊರಗೆ ಬಂದಂತೆ, ಆತ್ಮದೊಳಗಿನಿಂದ ಜ್ಞಾನವು ಹೊರಗೆ ಬಂದಿದೆ. ಹತ್ತಿ ದಾರವಾಗಿ ಹೇಗೆ ಬದಲಾಗಿ ಹತ್ತಿಯಿಂದ ದಾರವು ಹೊರಗೆ ಬರುತ್ತಿದೆಯೋ, ಹಾಗೆಯೇ ಆತ್ಮದಿಂದ ಜ್ಞಾನವು ತಯಾರಾಗುತ್ತಾ ಹೊರಗೆ ಬರುತ್ತಿದೆ. ಹತ್ತಿ ಬೇರೆ, ದಾರ ಬೇರೆಯಾದರೂ, ಹತ್ತಿಯೇ ದಾರವಾಗಿ ಬದಲಾಗಿದೆಯೆಂದು ಹೇಳಬಹುದು. ಹಾಗೆಯೇ ಆತ್ಮ ಬೇರೆ, ಜ್ಞಾನವು ಬೇರೆಯಾದರೂ, ಆತ್ಮದಿಂದಲೇ ಆತ್ಮಜ್ಞಾನವು ಹೊರಗೆ ಬರುತ್ತಿದೆ. ದಾರವನ್ನು ಬೇರ್ಪಡಿಸಿ ನೋಡಿದರೆ ಅದರಲ್ಲಿ ಹತ್ತಿ ಎಳೆಗಳೇ ಇರುವ ಹಾಗೆ, ಆತ್ಮಜ್ಞಾನವನ್ನು ಬಿಡಿಸಿ ನೋಡಿದರೆ ಅದರಲ್ಲಿ ಆತ್ಮ ವಿಧಾನವೇ ಇರುತ್ತದೆ.

ಆದಿಯಲ್ಲಿ ಆಕಾಶ ಶಬ್ಧದ ಮೂಲಕ ದೇವರು ಜ್ಞಾನವನ್ನು ಹೇಳಲಾಗಿದೆಯೆಂದು, ಅದನ್ನೇ ಖುರ್‌ಆನ್ ಗ್ರಂಥದಲ್ಲಿ ದೇವರು ಜ್ಞಾನವನ್ನು ತಿಳಿಸುವ ಮೂರು ವಿಧಾನಗಳಲ್ಲಿ ಒಂದು ಆಕಾಶವಾಣಿಯಿಂದ (ವಹೀ ಮೂಲಕ) ತಿಳಿಸಲಾಗುವುದೆಂದು ಸೂರಾ 42 ಆಯತ್ 51ರಲ್ಲಿ ಹೇಳಲಾಗಿದೆ. ದೇವರು ಸೃಷ್ಠಿ ಆದಿಯಲ್ಲಿಯೇ ಆಕಾಶವೆಂಬ ಜೀವಿಯಲ್ಲಿರುವ ಆತ್ಮದಿಂದ ತನ್ನ ಜ್ಞಾನವನ್ನು ಹೇಳಿಸಿದ್ದಾನೆ. ಆಗ ಗುಡುಗಿನ ರೂಪದಲ್ಲಿ ಬಂದಿರುವ ಜ್ಞಾನವು ಮನುಷ್ಯರಿಗೆ ಅರ್ಥವಾಗುವುದಿಲ್ಲ, ಅದು ಮನುಷ್ಯರ ಭಾಷೆಯಲ್ಲ. ಆದ್ದರಿಂದ ಗುಡುಗಿನ ಜ್ಞಾನವನ್ನು ಗ್ರಹಿಸಿದ ಸೂರ್ಯನು ಮಾನವರ ಭಾಷೆಯಲ್ಲಿ ಭೂಮಿ ಮೇಲೆ ಒಬ್ಬ ಮನುಷ್ಯನಿಗೆ ಹೇಳಿದಾಗ ಅದು ಭೂಮಂಡಲವೆಲ್ಲಾ ಹಬ್ಬಿತು. ಕಾಲಕ್ರಮೇಣ ಅಧರ್ಮಗಳು ಬೆಳೆದು ಹೋಗಿ ಧರ್ಮಗಳಿಲ್ಲದೆ ಹೋಗುವ ಸಮಯದಲ್ಲಿ ಆದಿಯಲ್ಲಿನ ಜ್ಞಾನವು ಮನುಷ್ಯರಲ್ಲಿ ಇಲ್ಲದೇ ಹೋಗಿದೆ. ಆಗ ಕೃಷ್ಣನಾಗಿ ಭಗವಂತನು ಬಂದು ಸೂರ್ಯನು ಹೇಳಿರುವ ಜ್ಞಾನವನ್ನೇ ಈಗ ನಿನಗೆ ಹೇಳುತ್ತಿದ್ದೇನೆಂದು ದ್ವಾಪರ ಯುಗದಲ್ಲಿ ಅರ್ಜುನನಿಗೆ ಹೇಳಿದ್ದಾನೆ. ಅದು ಗ್ರಂಥರೂಪದಲ್ಲಿ ಪ್ರಥಮ ದೈವಗ್ರಂಥವಾಗಿ ನಮ್ಮ ಮುಂದಿದ್ದರೂ, ಅದು ಸೂರ್ಯನು ಹೇಳಿರುವ ಜ್ಞಾನವೆಂದಾಗಲೀ, ಸೂರ್ಯನು ಗ್ರಹಿಸಿರುವ ಆಕಾಶ ಶಬ್ಧಗಳ ಜ್ಞಾನವೆಂದಾಗಲೀ ನಮ್ಮ ಜ್ಞಾಪಕದಲ್ಲಿ ಇಲ್ಲ. ಹಿಂದಿನ ವಿಷಯವನ್ನು ಎಲ್ಲರೂ ಮರೆತು ಹೋಗಿದ್ದಾರೆ.

ಮನುಷ್ಯರು ದೇವರು ಕಳುಹಿಸಿರುವ ಜ್ಞಾನವನ್ನು ಮರೆತು ಹೋಗಿದ್ದಾರೆಂಬ ಉದ್ದೇಶದಿಂದ ಭಗವದ್ಗೀತೆಯನ್ನು ಹೇಳಿದ ನಂತರ ಮೂರು ಸಾವಿರ ವರ್ಷಗಳಿಗೆ ದ್ವಿತೀಯ ದೈವಗ್ರಂಥದಲ್ಲಿ ಯೋಹಾನ್ ಸುವಾರ್ತೆಯಲ್ಲಿ ಮೂರು ಪ್ರಥಮ ವಾಕ್ಯಗಳನ್ನು ಹೇಳಲಾಗಿದೆ. ಇಲ್ಲಿ ಹೇಳಿರುವ ವಾಕ್ಯದ ಪ್ರಕಾರ **ಆದಿಯಲ್ಲಿ ವಾಕ್ಯವಿತ್ತು** ಎಂಬ ಮಾತು ಅರ್ಥವಾಗಿದೆ. ಅದರ ನಂತರ ಎರಡನೆಯ ವಾಕ್ಯವನ್ನು ಬಿಡಿಸಿ ನೋಡಿದರೇ, ಗುಡುಗಿ ಹೇಳಿರುವ ಜ್ಞಾನ ಶಬ್ಧವು ಆಕಾಶ ಆತ್ಮ ಬಳಿಯಿಂದ ಬಂದಿದೆಯೆಂದು ತಿಳಿಯಿತು. ಆದ್ದರಿಂದ **ವಾಕ್ಯವು ದೇವರ ಹತ್ತಿರವಿತ್ತು** ಎಂದು ತಿಳಿಯಿತು. ಇನ್ನೂ ಆಳವಾಗಿ

ನೋಡಿದರೆ ವಾಕ್ಯವು ಎಂಬ ಶಬ್ಧವು ಆತ್ಮದೊಳಗಿನಿಂದ ಹುಟ್ಟಿ ಬಂದಿದೆಯೆಂದು ತಿಳಿಯಿತು. ಹತ್ತಿಯ ಎಳೆಗಳಿಂದ ದಾರವು ಸುರುಳಿಯಾಗಿ ಹೊರ ಬಂದಂತೆ, ಆತ್ಮ ಚೈತನ್ಯವೇ ಶಕ್ತಿಯಾಗಿ ಬದಲಾಗಿ, ಶಕ್ತಿ ರೂಪದಲ್ಲಿನ ಜ್ಞಾನವು ಶಬ್ಧರೂಪದಲ್ಲಿ ಹೊರಗೆ ಬಂದಿದೆ. ದಾರದಲ್ಲಿ ಹತ್ತಿ ಎಳೆಗಳು ಇರುವ ಹಾಗೆ, ಜ್ಞಾನ ಶಬ್ಧದಲ್ಲಿ ಆತ್ಮ ಶಕ್ತಿಯೆ ಇದೆಯೆಂದು ತಿಳಿಯುತ್ತಿದೆ. ಆತ್ಮ ಜ್ಞಾನವು ಆತ್ಮ ಶಕ್ತಿಯಾಗಿ, ಆತ್ಮವಾಗಿ ಇದೆಯೆಂದು ತಿಳಿಯುತ್ತಿದೆ. ಆದ್ದರಿಂದ ಆತ್ಮಜ್ಞಾನವು ಆತ್ಮ ಎರಡೂ ಒಂದೇಯೆಂದು ತಿಳಿಯುತ್ತಿದೆ. ಅದನ್ನೆ **ವಾಕ್ಯವು ದೇವರಾಗಿತ್ತು** ಎಂದು ಹೇಳಿದ್ದಾರೆ.

ಇಲ್ಲಿಯವರೆಗು ದೇವರು ಜೀವಾತ್ಮನನ್ನು, ಆತ್ಮನನ್ನು ಸೃಷ್ಠಿಸಿದ್ದಾನೆಂದು ಹೇಳಿದ್ದೇವೆ. ಸೃಷ್ಠಿ ನಡೆಯುವುದಕ್ಕಿಂತ ಮೊದಲು ದೇವರು ಕೆಲಸ ಮಾಡುವವನು. ಸೃಷ್ಟಿ ನಡೆದ ನಂತರ ಕೆಲಸವನ್ನು ಆತ್ಮ ಮಾಡುವಂತೆ ಅಧಿಕಾರ ಕೊಟ್ಟು, ತಾನು ಇದ್ದರೂ ಇಲ್ಲದ ಹಾಗೆ ಬದಲಾಗಿದ್ದಾನೆ. ದೇವರು ಯಾವ ಕಾರ್ಯವನ್ನು ಮಾಡದವನಾಗಿ ತನ್ನ ಇರುವಿಕೆ ಯಾರಿಗೂ ಏನೂ ತಿಳಿಯದಂತೆ ಮಾಡಿದ್ದಾನೆ. ದೇವರು ಪ್ರಪಂಚದೊಂದಿಗೆ ಯಾವ ಸಂಬಂಧ ಇಲ್ಲದೇ ಹೋದ ನಂತರ ಆತನು ಇದ್ದರೂ ಇಲ್ಲದವನೊಂದಿಗೆ ಸಮಾನವಾಗಿ ಹೋಗಿದೆ. ಆಗ ದೇವರ ಕಾರ್ಯಗಳನ್ನು ಕೂಡಾ ಆತ್ಮವೇ ಮಾಡಬೇಕಾಗಿ ಬಂದಿದೆ. ಇತ್ತ ಜೀವಾತ್ಮ ಕಾರ್ಯಗಳನ್ನೂ, ಅತ್ತ ಪರಮಾತ್ಮ ಕಾರ್ಯಗಳನ್ನೂ ಆತ್ಮ ಮಾಡುತ್ತಾ ತಾನು ಯಾರಿಗೂ ತಿಳಿಯದಂತೆ ಕಾರ್ಯನಿರತವಾಗಿದೆ. ಮೇಲಿನ ವಾಕ್ಯಗಳನ್ನು ಅನುಸರಿಸಿ ನೋಡಿದರೆ ಆತ್ಮ ವಿಧಾನವೆಲ್ಲವೂ ಬಯಲಾಗುತ್ತಿದೆ. ಪರಮಾತ್ಮ ಸೃಷ್ಠಿಯನ್ನು ತಯಾರಿ ಮಾಡಿದಾಗ ಮೂರು ಆತ್ಮಗಳಿದ್ದವು. ನಂತರ ಎರಡು ಆತ್ಮಗಳು ಮಾತ್ರವೇ ತಿಳಿಯುತ್ತಿವೆ. ಜೀವಾತ್ಮ, ಆತ್ಮ ಇರುವಿಕೆ ಇದ್ದರೂ, ಪರಮಾತ್ಮ ಇರುವಿಕೆ ಇಲ್ಲದೇ ಹೋಗಿದೆ. ಆದ್ದರಿಂದ ಸೃಷ್ಠಿ ನಂತರ ಆತ್ಮವೇ ಪರಮಾತ್ಮವಾಗಿ ಚಲಾವಣೆ ಆಗಬೇಕಾಗಿ ಬಂದಿದೆ. ಆದ್ದರಿಂದ ಆತ್ಮನನ್ನು ದೇವರೆಂದು ಕೂಡಾ ಹೇಳಬೇಕಾಗಿ ಬಂದಿದೆ. ಆತ್ಮ, ದೇವರು (ಪರಮಾತ್ಮ)

ಅಲ್ಲದಿದ್ದರೂ, ಕೊನೆಗೆ ದೇವರ ಸ್ಥಾನದಲ್ಲಿ ಸೇರಿ ಹೋಗಿ ದೇವರ ಕಾರ್ಯಗಳನ್ನು ಮಾಡುತ್ತಿದೆ.

ಆತ್ಮಜ್ಞಾನವು ಆತ್ಮ ಬಳಿಯಿಂದ ಬಂದಿದೆ. ಆತ್ಮನನ್ನು ದೇವರೆಂದು ಹೇಳುವುದರಿಂದ **ವಾಕ್ಯವು ದೇವರ ಹತ್ತಿರವಿತ್ತು** ಎಂದು ಹೇಳಬೇಕಾಗಿ ಬಂದಿದೆ. ಆತ್ಮನನ್ನು ದೇವರೆಂದು ಅಂದುಕೊಂಡಾಗ ಈ ವಾಕ್ಯವು ಸರಿಹೋಗುತ್ತದೆ. ಆತ್ಮ, ದೇವರು ಅಲ್ಲದಿದ್ದರೂ ದೇವರೆಂದು ಹೇಳಬೇಕಾಗಿ ಬಂದಿದೆ. ಆತ್ಮ, ದೇವರಾಗಿ ಇರುವ ಅಧಿಕಾರವನ್ನು ದೇವರೇ ಆತ್ಮಕ್ಕೆ ಕೊಡುವುದು ನಡೆದಿದೆ. ಆದ್ದರಿಂದ ವಾಕ್ಯವು (ಜ್ಞಾನವು) ಆತ್ಮವೇ ಆಗಿರುವಾಗ ಅದೇ ಜ್ಞಾನವೇ ಅಂದರೆ ಅದೇ ಆತ್ಮವೇ ದೇವರಾಗಿದೆಯೆಂದು ಹೇಳಬಹುದು. ಆದ್ದರಿಂದ ಯೋಹಾನ್ ಸುವಾರ್ತೆಯಲ್ಲಿ ವಾಸ್ತವವನ್ನು ಹೇಳುತ್ತಾ **ವಾಕ್ಯವು ದೇವರಾಗಿತ್ತು** ಎಂದು ಹೇಳಿದ್ದಾರೆ. ವಾಕ್ಯ ಎಂದರೆ ಏನು? ವಾಕ್ಯವು ಆತ್ಮವಾಗಿ ಹೇಗಿದೆ? ಆತ್ಮ, ದೇವರಾಗಿ ಯಾಕೆ ಹೇಳಲ್ಪಡುತ್ತಿದೆ? ಎಂಬ ವಿವರವೆಲ್ಲಾ ತಿಳಿದ ನಂತರ ಯೋಹಾನ್ ಸುವಾರ್ತೆ ಮೊದಲ ಅಧ್ಯಾಯದಲ್ಲಿನ ಮೊದಲ ಮೂರು ವಾಕ್ಯಗಳಿಗೆ ಭಾವವು ಪೂರ್ತಿಯಾಗಿ ಅರ್ಥವಾಗಿರುತ್ತದೆಂದು ಅಂದುಕೊಳ್ಳುತ್ತೇನೆ. ಇಷ್ಟು ವಿವರವಾಗಿ ಹೇಳಿದರೂ ಅರ್ಥವಾಗದೆ ಹೋದರೆ, ಆತ್ಮಜ್ಞಾನವು ಎಂದಿಗೂ ಅರ್ಥವಾಗುವುದಿಲ್ಲ. ಆತ್ಮಜ್ಞಾನವು ಅರ್ಥವಾಗದೆ ಹೋದರೆ ದೇವರ ವಿಧಾನವು ಏನೂ ತಿಳಿಯುವುದಿಲ್ಲ. ದೇವರ ವಿಧಾನವು ತಿಳಿಯುವುದಕ್ಕೆ ವಾಕ್ಯವು ಎಂಬ ಜ್ಞಾನದಿಂದ ಪ್ರಾರಂಭವಾಗಬೇಕು. ಜ್ಞಾನ ತಿಳಿದರೆ ಜ್ಞಾನವೇ ಆತ್ಮವೆಂದು, ಆತ್ಮವೇ ದೇವರೆಂದು ತಿಳಿಯುತ್ತದೆ.

| | | | | |
|---|---|---|---|---|
| **ಸೃಷ್ಟಿ ನಡೆದಾಗ** | **ದೇವರು (ಪರಮಾತ್ಮ)** | **ಪ್ರಕೃತಿ** | **ಆತ್ಮ** | **ಜೀವಾತ್ಮ** |
| **ಸೃಷ್ಟಿ ನಡೆದ ನಂತರ** | **(ಪರಮಾತ್ಮ)** | **ಪ್ರಕೃತಿ** | **ಆತ್ಮ** | **ಜೀವಾತ್ಮ** |
| **ಸೃಷ್ಟಿ ನಡೆದ ನಂತರ** | **ಆತ್ಮ (ದೇವರು)** | **ಪ್ರಕೃತಿ** | **ಆತ್ಮ** | **ಜೀವಾತ್ಮ** |

ಸೃಷ್ಠಿ ನಡೆದಾಗ ದೇವರು ಕೆಲಸ ಮಾಡುವವನಾಗಿದ್ದು ತನ್ನಿಂದ ಒಂದು ಸ್ತ್ರೀ ತತ್ವವಿರುವ ಪ್ರಕೃತಿಯನ್ನು, ನಂತರ ಪುರುಷ ತತ್ವವಿರುವ ಆತ್ಮ, ಜೀವಾತ್ಮಗಳನ್ನು ದೇವರು ತಯಾರಿ ಮಾಡಿದ್ದಾನೆ. ದೇವರು ಪುರುಷನಾಗಿ ಇದ್ದು ತನ್ನಹಾಗೆ ಪುರುಷ ತತ್ವವಿರುವ ಎರಡು ಆತ್ಮಗಳನ್ನು ತಯಾರಿ ಮಾಡಿದ್ದಾನೆ. ಅವುಗಳನ್ನೇ ಆತ್ಮವೆಂದು ಒಂದನ್ನು, ಜೀವಾತ್ಮವೆಂದು ಮತ್ತೊಂದನ್ನು ಹೇಳುತ್ತಿದ್ದೇವೆ. ದೇವರು ಸೃಷ್ಠಿಯನ್ನು ತಯಾರಿ ಮಾಡಿದ ನಂತರ ಪ್ರಕೃತಿ, ಆತ್ಮ, ಜೀವಾತ್ಮ ಏರ್ಪಟ್ಟ ನಂತರ ದೇವರು ಯಾವ ಕೆಲಸವನ್ನು ಮಾಡದವನಾಗಿ ಎಲ್ಲದಕ್ಕೂ ಅಂದರೆ ಪ್ರಕೃತಿಗೂ, ಆತ್ಮಕ್ಕು, ಜೀವಾತ್ಮಕ್ಕು ಸಾಕ್ಷಿಯಾಗಿ ಇದ್ದು ಹೋಗಿದ್ದಾನೆ. ಹಾಗೆ ಸ್ಥಬ್ದತೆಯಾಗಿದ್ದ ದೇವರು ಇದ್ದರೂ ಇಲ್ಲದ ಹಾಗೆಯೇ ಆಗುತ್ತಿದೆ. ಎಂದಾದರೂ ಭೂಮಿ ಮೇಲೆ ಧರ್ಮಗಳಿಗೆ ಮುಪ್ಪು ಉಂಟಾಗಿ, ಅಧರ್ಮಗಳು ಬೆಳೆದು ಹೋದರೇ ಆಗ ತನ್ನ ಆತ್ಮನನ್ನು ಭಗವಂತನನ್ನಾಗಿ ಕಳುಹಿಸಿ ಧರ್ಮಗಳನ್ನು ನೆಲೆಗೊಳಿಸುವನು. ಆಗಲೂ ಕೂಡಾ ಪ್ರತ್ಯೇಕವಾಗಿ ತನ್ನ ಪ್ರತಿನಿಧಿಯನ್ನು ತಯಾರಿ ಮಾಡುವುದರಿಂದ ತಾನು ಕೆಲಸ ಮಾಡದಂತೆಯೇ ಇರುತ್ತಾನೆ. ಆದರೆ ಉಳಿದ ಕಾರ್ಯಗಳೆಲ್ಲವೂ ಆತ್ಮವೇ ಮಾಡುತ್ತಿದೆ. ಸೃಷ್ಠಿ ನಂತರ ದೇವರ ಸ್ಥಾನದಲ್ಲಿ ದೇವರು ಇಲ್ಲದೆ ಹೋಗಿರುವುದರಿಂದ ದೇವರಾಗಿ ಆತ್ಮವೇ ಕೆಲಸ ಮಾಡುತ್ತಾ ದೇವರಿರುವಂತೆಯೇ ಎಲ್ಲರನ್ನು ನಂಬಿಸುತ್ತಿದೆ. ವಾಸ್ತವವಾಗಿ ಸೃಷ್ಠಿ ನಂತರ ದೇವರು ನಿರುಪಯೋಗವಾಗಿ, ಏನೂ ಮಾಡದವನಾಗಿ ನಿಂತು ಹೋಗಿದ್ದಾನೆ. ಆದ್ದರಿಂದ ದೇವರು ಇಲ್ಲದ ಹಾಗೆಯೇ ಎಂದು ಹೇಳಬಹುದು. ದೇವರಿಲ್ಲದ ಕೊರತೆಯನ್ನು ಆತ್ಮ ತಿಳಿಯದಂತೆ ಮಾಡುತ್ತಿದೆ. ಹಾಗೆ ದೇವರ ವಿಷಯವನ್ನು ಸವಣಿಸುವುದಕ್ಕೋಸ್ಕರ ತಾನೇ ದೇವರಾಗಿ ಬದಲಾಗುತ್ತಿದೆ. ಆದ್ದರಿಂದ ದ್ವಿತೀಯ ದೈವಗ್ರಂಥದಲ್ಲಿ **ವಾಕ್ಯವು ದೇವರಾಗಿತ್ತು** ಎಂದು ಹೇಳಿದ್ದಾರೆ. ದೇವರು ಬೇರೆ ವಾಕ್ಯವು ಬೇರೆ ಎಂದು ಈ ವಾಕ್ಯದಲ್ಲಿ ತಿಳಿಯುತ್ತಿದೆ. ವಾಕ್ಯವು ದೇವರಾಗದಿದ್ದರೂ ದೇವರಾಗಿತ್ತು ಎಂದು ಹೇಳಿದ್ದಾರೆ. ವಾಕ್ಯವು ದೇವರಾಗಿ ಬದಲಾಗಿದೆಯೆಂದು ಈ ವಾಕ್ಯದ ಮುಖಾಂತರ ತಿಳಿಯುತ್ತಿದೆ. ವಿವರವಾಗಿ ಹೇಳಿದರೆ ವಾಕ್ಯವು ಆತ್ಮವಾಗಿರುವಾಗ,

ಆತ್ಮ, ದೇವರು ಆಗಿರುವಾಗ ವಾಕ್ಯವಾದ ಆತ್ಮ, ದೇವರಾಗಿ ಇದ್ದಾನೆಂದು ಹೇಳಲಾಗಿದೆ. ದೇವರು ಬೇರೆ ಆತ್ಮ ಬೇರೆ ಆದರೂ ಯಾರು ಆತ್ಮವೋ, ಯಾರು ದೇವರೋ ತಿಳಿಯದೆ ಎಲ್ಲರೂ ಮೋಸ ಹೋಗುತ್ತಿದ್ದಾರೆ.

ವಾಸ್ತವವಾಗಿ ಈಗ ಸೃಷ್ಠಿ ನಂತರ ದೇವರು ಇಲ್ಲ. ಪ್ರಪಂಚದಲ್ಲಿ ದೇವರು ಇಲ್ಲವೆಂದು ಹೊರಗೆ ತಿಳಿಯದಂತೆ ಆತ್ಮವೇ ದೇವರ ಸ್ಥಾನವನ್ನು ಭರ್ತಿ ಮಾಡುತ್ತಿದೆ. ಆದ್ದರಿಂದ ಆತ್ಮ, ಜೀವಾತ್ಮನ ಕೆಲಸಗಳು ಮಾಡುತ್ತಾ, ಒಂದು ಕಡೆ ಪ್ರಕೃತಿ ಕೆಲಸಗಳನ್ನು ಮಾಡುತ್ತಾ, ಮತ್ತೊಂದು ಕಡೆ ದೇವರ ಹಾಗೆ ತಯಾರಾಗಿ ದೇವರು ಎಂಬ ಹೆಸರಿನಿಂದ ಇದೆ. ಸೃಷ್ಠಿ ನಂತರ ದೇವರು ರೂಪ, ನಾಮ, ಕ್ರಿಯೆಗಳು ಇಲ್ಲದವನಾಗಿ ಇದ್ದಾನೆ. ನಾಮ, ರೂಪ, ಕ್ರಿಯೆಗಳು ಇಲ್ಲದವನನ್ನು ಏನೂ ಅಲ್ಲದವನು, ಏನೂ ಮಾಡದವನು ಎಂದು ಹೇಳಬಹುದು. ಹಾಗಿರುವವನನ್ನು ಇದ್ದಾನೆ ಎನ್ನುವುದಕ್ಕಿಂತಲೂ ಇಲ್ಲವೆಂದು ಹೇಳುವುದು ಉತ್ತಮವಾಗುತ್ತದೆ. ದೇವರ ಸ್ಥಾನದಲ್ಲಿ ದೇವರು ಇಲ್ಲದೆ ಹೋದರೆ ಆ ಸ್ಥಾನವು ಖಾಲಿಯಾಗಿ ಇದ್ದು ಹೋಗುತ್ತದೆ ಎಂದು ಹೇಳದೇ ಆತ್ಮ ದೇವರಾಗಿ ಬದಲಾಗುತ್ತಿದೆ. ಆದ್ದರಿಂದ ಮೇಲೆ ಮೂರನೆ ವಾಕ್ಯದಲ್ಲಿ **"ವಾಕ್ಯವು ದೇವರಾಗಿತ್ತು"** ಎಂದು ಹೇಳಿದ್ದಾರೆ. ಈ ವಾಕ್ಯಗಳನ್ನು ಬಹಳ ಜನ ಕೇಳುತ್ತಿದ್ದಾರೆ, ಓದುತ್ತಿದ್ದಾರೆ. ಆದರೂ ಅದರಲ್ಲಿನ ನಿಗೂಢವಾದ ರಹಸ್ಯವು ಸರಿಯಾಗಿ ತಿಳಿಯಲಾರರೆಂದೇ ಹೇಳಬಹುದು.

ಇಲ್ಲಿ ದೇವರಾದ ಆತ್ಮ ವಾಸ್ತವವನ್ನು ತಿಳಿಸುವ ನಿಮಿತ್ತ **ವಾಕ್ಯವು ದೇವರಾಗಿತ್ತು** ಎಂದು ಹೇಳುವುದು ನಡೆದಿದೆ. ದೇವರ ಪಾತ್ರವನ್ನು ಪೋಷಿಸುವ ಆತ್ಮ ಯಾವ ಕೆಲಸವನ್ನು ಮಾಡಿದರೂ, ಅತ್ತ ಜೀವಿಯ ಮೇಲೆಯೋ ಇಲ್ಲವೇ ದೇವರೇ ಮಾಡಿದ್ದಾನೆಂದು ದೇವರ ಮೇಲೆಯೋ ಹೇಳುತ್ತಿದೆ. ಅದರಿಂದ ದೇವರು ಇದ್ದಾನೆಂದೇ ಎಲ್ಲರೂ ನಂಬುತ್ತಿದ್ದಾರೆ. ಇಲ್ಲಿ ಕೆಲವರು ದೇವರು ಇಲ್ಲವೆನ್ನುತ್ತೀರಾ, ದೇವರು ಇಲ್ಲದೆ ಹೋದರೆ ಈ ವಿಶ್ವಕ್ಕೆಲ್ಲಾ ಯಾರು ದೊಡ್ಡವನು? ನೀವು ಸಣ್ಣಗೆ.. ದೇವರ ಜ್ಞಾನವನ್ನು ಬೋಧಿಸುತ್ತಾ, ಕೊನೆಗೆ

ದೇವರೇ ಇಲ್ಲವೆಂದು ನಾಸ್ತಿಕವಾದವನ್ನು ಬೋಧಿಸುತ್ತಿದ್ದೀರಾ! ಎಂದು ಕೇಳಬಹುದು. ಕೆಲವರಲ್ಲಿ ಉಂಟಾಗಿರುವ ಈ ಪ್ರಶ್ನೆಗೆ ನನ್ನ ಉತ್ತರ ಈ ರೀತಿಯಾಗಿ ಇದೆ. ದೇವರು ದೇವರ ಸ್ಥಾನದಲ್ಲಿ ಇಲ್ಲವೆಂದು ಹೇಳುತ್ತಿದ್ದೇವೆ ಹೊರತು, ದೇವರೇ ಇಲ್ಲವೆಂದು ನಾನು ಹೇಳುತ್ತಿಲ್ಲ. ದೇವರು ಏನು ಮಾಡುತ್ತಿದ್ದಾನೋ ಗೊತ್ತಿಲ್ಲ. ಆತನು ಕೆಲಸ ಮಾಡುವುದಿಲ್ಲ ಎಂದು ಹೇಳಿದ್ದೇವೆ. ದೇವರಿಗು ಮನುಷ್ಯರಿಗು ಯಾವ ಸಂಬಂಧವು ಇಲ್ಲವೆಂದು ಹೇಳಿದ್ದೇವೆ ಆದರೆ, ದೇವರು ಅಸಲಿಗೆ ಇಲ್ಲವೆಂದು ಹೇಳಲಿಲ್ಲ. ದೇವರಿದ್ದಾನೆ ಆತನಿಗೆ ಹೆಸರಿಲ್ಲ, ಕೆಲಸ ಇಲ್ಲ, ಆಕಾರ ಇಲ್ಲ. ಆದ್ದರಿಂದ ಆತನು ಮನುಷ್ಯರೊಂದಿಗೆ ಸಂಬಂಧವಿಲ್ಲದೆ ಇದ್ದಾನೆ. ಆತನ ಧರ್ಮಗಳಿಗೆ ಹಾನಿ ಉಂಟಾದಾಗ ಮಾತ್ರ ತನ್ನ ಧರ್ಮಗಳನ್ನು ಕಾಪಾಡುವ ನಿಮಿತ್ತ ತನ್ನ ಪ್ರತಿನಿಧಿಯನ್ನು ಕಳುಹಿಸಿ ಕೆಲಸ ಮಾಡಿಸಿ ಧರ್ಮಗಳನ್ನು ಪುನರುದ್ಧರಿಸುತ್ತಾನೆ. ಆತನು ತನ್ನ ಪ್ರತಿನಿಧಿ ಮುಖಾಂತರ ಕೆಲಸವನ್ನು ಸಕ್ರಮಗೊಳಿಸುವನು. ಆಗಲೂ ಕೂಡಾ ನಾನು ದೇವರೆಂದು ಹೇಳಿ ಕೆಲಸ ಮಾಡಲಿಲ್ಲ. ದೇವರ ಪ್ರತಿನಿಧಿ ದೇವರೊಂದಿಗೆ ಸಮಾನವಾದರೂ ದೇವರೆಂದು ಹೇಳದೆ ಭಗವಂತನೆಂದು ಬದಲಿ ಹೆಸರನ್ನು ಹೇಳುತ್ತಿದ್ದಾನೆ. ಈತನು ದೇವರೆಂದಾಗಲೀ, ಈತನಿಗೆ ಈ ಲಕ್ಷಣಗಳು ಇವೆಯೆಂದಾಗಲೀ, ದೇವರನ್ನು ಕುರಿತು ಹೀಗಿದ್ದಾನೆಂದು ಅಥವಾ ಹಾಗಿದ್ದಾನೆಂದಾಗಲಿ ಹೇಳುವುದಕ್ಕೆ ಅವಕಾಶವಿಲ್ಲದೆ ಇದ್ದಾನೆ. ದೇವರಿದ್ದಾನೆ ಹೇಗಿದ್ದಾನೋ ಯಾರಿಗೂ ತಿಳಿದಿಲ್ಲ. ಸೃಷ್ಠಿ ಆದಿಯಿಂದ ದೇವರನ್ನು ನೋಡಿದವನಾಗಲೀ, ದೇವರೊಂದಿಗೆ ಮಾತನಾಡಿದವನಾಗಲೀ ಯಾರೂ ಇಲ್ಲ. ಪ್ರಪಂಚದಲ್ಲಿ ಯಾವುದನ್ನು ಕುರಿತಾದರೂ ಹೇಳಬಹುದು ಆದರೆ, ದೇವರನ್ನು ಕುರಿತು ಯಾರೂ ಹೇಳಲಾರರು. ಆದ್ದರಿಂದ ಕೈಲಾಗದ ಸ್ಥಿತಿಯಲ್ಲಿ ದೇವರು ಅಂತ್ಯ ಇಲ್ಲದವನು, ಹದ್ದು ಇಲ್ಲದವನು ಎಂದು ಅರ್ಥ ಬರುವಂತೆ **'ಅಲ್ಲಾಹ್'** ಎಂದು ಕೃತಯುಗದಲ್ಲಿಯೇ ಹೇಳಿದ್ದಾರೆ. ದೇವರು ಎಲ್ಲವನ್ನು ಆಡಿಸುವ ಆತ್ಮಗಿಂತಲೂ ದೊಡ್ಡವನಾದ್ದರಿಂದ 'ಪರಬ್ರಹ್ಮ' ಎಂದು ಕರೆದಿದ್ದಾರೆ. ಆತ್ಮಗಿಂತಲೂ ಬೇರೆಯಾಗಿರುವುದರಿಂದ 'ಪರಮಾತ್ಮ' ಎಂದು ಕರೆದಿದ್ದಾರೆ.

ಹುಡುಕಿದರೂ ಕಾಣಿಸುವುದಿಲ್ಲ ಆದ್ದರಿಂದ ಹುಡುಕಲ್ಪಡುವವನೆಂದು 'ದೇವರೆಂದು' ಹೇಳಿದ್ದಾರೆ. ಜೀವಾತ್ಮ, ಆತ್ಮಗಳಿಗಿಂತಲೂ ಉತ್ತಮ ಪುರುಷನಾದ್ದರಿಂದ ಆತನನ್ನು 'ಪುರುಷೋತ್ತಮ' ಎಂದಿದ್ದಾರೆ. ಒಟ್ಟಾರೆ ದೇವರನ್ನು ಕುರಿತು ನಿಮಗೂ ತಿಳಿದಿಲ್ಲ ನನಗೂ ತಿಳಿಯದೆಂದು ಒಪ್ಪಿಕೊಳ್ಳುವುದು ಒಳ್ಳೆಯದು.

**2) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 9ನೇ ವಚನ.**

## (9) ನಿಜವಾದ ಬೆಳಕಿತ್ತು. ಅದು ಲೋಕದೊಳಗೆ ಬರುತ್ತ ಅದು ಪ್ರತಿ ಮನುಷ್ಯನನ್ನು ಬೆಳಗಿಸುತ್ತಿದೆ.

ಹೊರಗೆ ಪ್ರಪಂಚದಲ್ಲಿ ಬೆಳಕಿದೆಯೆಂದರೇ ಅದು ಉರಿಯುವ ಅಗ್ನಿ ಮೂಲವಾಗಿ ಇರುತ್ತದೆ. ಆದರೆ ಇಲ್ಲಿ ವಾಕ್ಯದಲ್ಲಿ ನಿಜವಾದ ಬೆಳಕನ್ನು ಕುರಿತು ಹೇಳಿದ್ದಾರೆ. ನಿಜವಾದ ಬೆಳಕು ಅಗ್ನಿ ಇಲ್ಲದೆ ಬೆಳಗುತ್ತಿರುತ್ತದೆ. ಅಗ್ನಿ ಇಲ್ಲದೆ ಇರುವ ಬೆಳಕು ಪ್ರತಿ ಮನುಷ್ಯನೊಳಗೆ ಬಂದು ಅದು ಮನುಷ್ಯನೆಲ್ಲವನ್ನೂ ಪಾದಗಳಿಂದ ಮೊದಲುಗೊಂಡು ತಲೆಯವರೆಗು ಬೆಳಗಿಸುತ್ತಿದೆ. ಅಗ್ನಿ ಅಲ್ಲದ, ಅಗ್ನಿ ಇಲ್ಲದ ಬೆಳಕು ಒಂದೇ ಇದೆ. ಅದು ಸೃಷ್ಟಿಕರ್ತನಾದ ದೇವರಿಂದ ಬಂದಿರುವ "ಆತ್ಮ" ದೇವರಿಂದ ನೇಮಿಸಲ್ಪಟ್ಟ ಆತ್ಮ ಮನುಷ್ಯನ ಶರೀರದಲ್ಲಿ ಸೇರಿ ಮನುಷ್ಯನ ಶರೀರವೆಲ್ಲ ಚೈತನ್ಯ ಎಂಬ ಬೆಳಕನ್ನು ನೀಡುತ್ತಿದೆ. ಆತ್ಮ ಶರೀರದಲ್ಲಿ ಯಾವಾಗ ಪ್ರವೇಶಿಸುತ್ತಿದೆಯೋ ಆಗಲೇ ಮನುಷ್ಯನ ಶರೀರದಲ್ಲಿನ 25 ಲಕ್ಷ ಕೋಟಿಗಳ ಧಾತುಕಣಗಳು ಆತ್ಮ ಬೆಳಕಿನಿಂದ ತುಂಬಿಕೊಳ್ಳುತ್ತವೆ. ಪ್ರತಿ ಧಾತುಕಣದಲ್ಲಿ ಅಗ್ನಿ ಇಲ್ಲದೇನೇ ಉರಿಯುತ್ತಿರುವ ದೀಪವಿದೆ. ಆ ದೀಪದ ಬೆಳಕು ಸ್ವಲ್ಪ ಉಷ್ಣೋಗ್ರತೆಯನ್ನು ಹೊಂದಿದೆ. 98.4 ಡಿಗ್ರಿಗಳ ಫ್ಯಾರನ್‌ಹೀಟ್ ಉಷ್ಣೋಗ್ರತೆ ಆತ್ಮ ಬೆಳಕಿನಿಂದಲೇ ಉಂಟಾಗುತ್ತಿದೆ. ಆತ್ಮ ಇರುವ ಪ್ರತಿ ಮಾನವ ಶರೀರವು 98.4 F ಡಿಗ್ರಿಗಳ ಉಷ್ಣ ಹೊಂದಿದೆ. ಯಾವಾಗಾದರೆ ಆತ್ಮ ಶರೀರವನ್ನು ಬಿಟ್ಟು ಹೊರಗೆ ಹೋಗುವುದೋ ಆಗ ಶರೀರದಲ್ಲಿ ಉಷ್ಣೋಗ್ರತೆ ಸ್ವಲ್ಪವೂ ಇಲ್ಲದೆ ದೇಹವು ತಣ್ಣಗಾಗಿ ಹೋಗುತ್ತಿದೆ.

ಆತ್ಮ ಬೆಳಕಿಲ್ಲದ ದೇಹವನ್ನು ಮೃತದೇಹ ಎನ್ನಲಾಗುವುದು. ಆತ್ಮ ದೀಪವೆಂದು, ದೇಹ ಹಣತೆ ಎಂದು ಅಂತಿಮ ದೈವಗ್ರಂಥದಲ್ಲಿ 24ನೇ ಸೂರಾ 35ನೇ ಆಯತ್‌ನಲ್ಲಿ ಕೂಡಾ ಹೇಳಲ್ಪಟ್ಟಿದೆ. ದೇಹಕ್ಕೆ ಬೆಳಕನ್ನು ಕೊಡುವುದು, ಎಂದಿಗೂ ಬೆಳಗುವುದಾಗಿರುವ ಆತ್ಮ ಎನ್ನುವ ಬೆಳಕನ್ನು ನಿಜವಾದ ಬೆಳಕೆಂದು ಹೇಳಬಹುದು.

### 3) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 10ನೇ ವಚನ.

## (10) ಆತನು ಲೋಕದಲ್ಲಿ ಇದ್ದನು. ಲೋಕವು ಆತನ ಮೂಲವಾಗಿ ಉಂಟಾಗುವುದು ಆದರೆ, ಲೋಕವು ಆತನನ್ನು ತಿಳಿದುಕೊಳ್ಳಲಿಲ್ಲ.

ಲೋಕವು ಎಂದರೆ ಅನುಭವಗಳಿಂದ ಕೂಡಿಕೊಂಡಿರುವುದೆಂದು ಅರ್ಥ. ಆತ್ಮ ಎನ್ನುವ ಆತನು ಅನುಭವಗಳಿರುವ ಮನುಷ್ಯರಲ್ಲಿ ಇರುತ್ತಾನೆ. ಮಾನವರೆಲ್ಲರೂ ಆತ್ಮದಿಂದ ತಯಾರಿ ಮಾಡಲ್ಪಟ್ಟವರೆ. ಆದರೂ ಮನುಷ್ಯರು ಆತ್ಮನನ್ನು ತಿಳಿದುಕೊಳ್ಳಲಿಲ್ಲ. ಇಲ್ಲಿ ಸ್ವಲ್ಪ ವಿವರವಾಗಿ ತಿಳಿಯಬೇಕಾಗಿರುವುದು ಏನೆಂದರೆ! ಆತ್ಮ ಬೇರೆ ದೇವರು ಬೇರೆ. ಆತ್ಮನನ್ನು ದೇವರು ತಯಾರಿ ಮಾಡಿದರೆ, ಆತ್ಮ ಮನುಷ್ಯರನ್ನು ತಯಾರಿ ಮಾಡಿದೆ. ಇದರಿಂದ ತಿಳಿಯುವುದು ಏನೆಂದರೇ! ದೇವರು ನೇರವಾಗಿ ಮನುಷ್ಯರನ್ನು ತಯಾರಿ ಮಾಡಲಿಲ್ಲ. ದೇವರು ಸಮಸ್ತ ಪ್ರಪಂಚವನ್ನು ಸೃಷ್ಠಿಸಿದ್ದಾನೆ. ಆದರೆ ಅದು ಜೀವರಾಶಿಗಳು ಇಲ್ಲದ ಪ್ರಪಂಚ. ಮೊದಲು ಪ್ರಕೃತಿಯನ್ನು (ಪ್ರಪಂಚವನ್ನು) ತಯಾರಿ ಮಾಡಿರುವ ದೇವರು ನಂತರ ಆತ್ಮನನ್ನು ತಯಾರಿ ಮಾಡಿ ಆತ್ಮಕ್ಕೆ ಮನುಷ್ಯರನ್ನು ಹುಟ್ಟಿಸುವುದಕ್ಕೆ, ಪಾಲಿಸುವುದಕ್ಕೆ, ಕೊಲ್ಲುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದಾನೆ. ಆಗಿನಿಂದ ಆತ್ಮವೇ ಮನುಷ್ಯರನ್ನು ತಯಾರಿ ಮಾಡುತ್ತಿದೆ. ಮನುಷ್ಯರಲ್ಲಿ ಬೆಳಕಾಗಿ ಜೀವನವನ್ನು ಸಾಗಿಸುವಂತೆ ಮಾಡುತ್ತಿದೆ. ನಂತರ ಮರಣಿಸುವಂತೆ ಮಾಡಿ ಪುನಃ ಹುಟ್ಟಿಸುತ್ತಿದೆ, ಆದರೂ ಮನುಷ್ಯರಿಗೆ ಹತ್ತಿರವಾಗಿರುವ ಆತ್ಮನನ್ನು,

ಮನುಷ್ಯರಲ್ಲಿ ಬೆಳಕಾಗಿರುವ ಆತ್ಮನನ್ನು, ಮನುಷ್ಯರಿಗೆ ದೈವವಾಗಿರುವ ಆತ್ಮನನ್ನು ಮನುಷ್ಯರು ಕಿಂಚಿತ್ತಾದರೂ ತಿಳಿದುಕೊಳ್ಳದೆ ಇದ್ದಾರೆ. ಆತ್ಮ ಮನುಷ್ಯರನ್ನು ಹುಟ್ಟಿಸುತ್ತಿದೆ, ಆದ್ದರಿಂದ ಆತ್ಮ ಮನುಷ್ಯರಿಗೆ ತಂದೆಯಾಗಿದೆ. ಆತ್ಮ ದೇವರಿಂದ ತಯಾರಿ ಮಾಡಲ್ಪಟ್ಟಿದೆ, ಆದಕಾರಣ ಆತ್ಮಕ್ಕೆ ದೇವರು ತಂದೆಯಾಗಿ ಇದ್ದಾನೆ. ಆತ್ಮನನ್ನು ಕೆಲವು ಸಂದರ್ಭಗಳಲ್ಲಿ ದೇವರೆಂದು ಹೇಳಿದರೂ, ಆತ್ಮಕ್ಕೆ ಸೃಷ್ಠಿಕರ್ತ ಆದವನು ನಿಜವಾದ ದೇವರು. ಆದ್ದರಿಂದ ನಿಜವಾದ ದೇವರನ್ನು ಪರಿಶುದ್ಧಾತ್ಮ ಯೆಂದು, ಆತ್ಮನನ್ನು ತಂದೆಯೆಂದು ಮನುಷ್ಯ ಅನ್ನುತ್ತಿದ್ದಾನೆ.

**4) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 11ನೇ ವಚನ.**

**11) ಆತನು ತನ್ನ ಸ್ವಕೀಯರ ಬಳಿಗೆ ಬಂದನು. ಆತನ ಸ್ವಕೀಯರು ಆತನನ್ನು ಅಂಗೀಕರಿಸಲಿಲ್ಲ.**

ಸ್ವಕೀಯರು ಎಂದರೆ ಸ್ವತಃವಾಗಿ ತಯಾರಿ ಮಾಡಲ್ಪಟ್ಟವರು. ಆತನ ಸ್ವಕೀಯರು ಎಂದರೆ ಆತನು ಸ್ವತಃವಾಗಿ ತಯಾರಿ ಮಾಡಿರುವ ಮನುಷ್ಯರು ಎಂದು ತಿಳಿಯಬೇಕು. ಆತ್ಮ, ಪರಿಶುದ್ಧಾತ್ಮ ಕೊಟ್ಟಿರುವ ಆಜ್ಞೆಯಿಂದ ಮಾನವರನ್ನು ತಯಾರಿ ಮಾಡಿರುವಾಗ, ಆತ್ಮ ಜ್ಞಾನ ರೂಪದಲ್ಲಿ ಅಂದರೆ ವಾಕ್ಯದ ರೂಪದಲ್ಲಿ ಮನುಷ್ಯರ ಬಳಿಗೆ ಬಂದಿದೆ. ಮನುಷ್ಯರು ತನ್ನನ್ನು ತಿಳಿದುಕೊಳ್ಳುತ್ತಾರೆಂಬ ಉದ್ದೇಶದಿಂದ ಆತ್ಮ ವಾಕ್ಯವಾಗಿ ಮನುಷ್ಯರ ಬಳಿಗೆ ಬಂದರೂ, ಮನುಷ್ಯರು ವಾಕ್ಯವನ್ನು ಅಂದರೇ ಜ್ಞಾನವನ್ನು ಅಂಗೀಕರಿಸದೆ ತಮಗೆ ತಿಳಿದಿರುವುದೇ ದೊಡ್ಡದೆಂದು ಅಂದುಕೊಳ್ಳುತ್ತಿದ್ದಾರೆ.

**5) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 12ನೇ ವಚನ.**

**12) ತನ್ನನ್ನು ಎಷ್ಟು ಜನ ಅಂಗೀಕರಿಸುತ್ತಾರೋ ಅವರೆಲ್ಲರಿಗೂ, ಅಂದರೇ ತನ್ನ ನಾಮದಲ್ಲಿ ವಿಶ್ವಾಸ ಇಟ್ಟವರಿಗೆ ದೇವರ ಮಕ್ಕಳಾ ಗುವುದಕ್ಕೆ ಆತನು ಅಧಿಕಾರವನ್ನು ಅನುಗ್ರಹಿಸುತ್ತಾನೆ.**

ಆತ್ಮ ತಿಳಿಸಿರುವ ಆತ್ಮ ಜ್ಞಾನವನ್ನು ತಿಳಿದವರೆಲ್ಲರೂ ಆತ್ಮನನ್ನು ಅಂಗೀಕರಿಸಿದಂತೆಯೇ ಆಗುತ್ತದೆ. ಆತ್ಮಜ್ಞಾನವನ್ನು ತಿಳಿದು, ಆತ್ಮದ ಮೇಲೆ ವಿಶ್ವಾಸ ಇಟ್ಟವರಿಗೆ ಆತ್ಮ ವಾರಸರಾಗುವುದಕ್ಕೆ ಅವಕಾಶವಿದೆ. ಆ ವಿಷಯವನ್ನು 'ದೇವರ ಮಕ್ಕಳಾಗುವುದಕ್ಕೆ ಆತನು ಅಧಿಕಾರ ಕೊಟ್ಟಿದ್ದಾನೆ' ಎಂದು ಹೇಳಿದ್ದಾರೆ. ದೇವರ ಮಕ್ಕಳು ಅಂದರೆ ಆತ್ಮಜ್ಞಾನ ತಿಳಿದವರೆಂದು ಅರ್ಥ.

**6) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 13ನೇ ವಚನ.**

**(13) ಅವರು ದೇವರಿಂದ ಹುಟ್ಟಿರುವವರೇ ಹೊರತು, ರಕ್ತದಿಂದಾಗಲೀ, ಶರೀರ ಇಚ್ಛೆಯಿಂದಾಗಲೀ, ಮನುಷ್ಯ ಇಚ್ಛೆಯಿಂದಾಗಲೀ ಹುಟ್ಟಿದವರಲ್ಲ.**

ಮನುಷ್ಯರೆಲ್ಲರೂ ಆತ್ಮದಿಂದ ಹುಟ್ಟಿರುವವರೇ ಹೊರತು, ಸ್ತ್ರೀಯರ ರಕ್ತದಿಂದಾಗಲೀ, ಪುರುಷರ ಇಚ್ಛೆಯಿಂದಾಗಲೀ, ಒಟ್ಟಾರೆ ಹೆಣ್ಣು, ಗಂಡು ಆದ ಮನುಷ್ಯರ ಇಚ್ಛೆಯಿಂದಾಗಲೀ ಹುಟ್ಟಿರುವವರಲ್ಲ.

**7) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 14ನೇ ವಚನ.**

**(14) ಆ ವಾಕ್ಯವು ಶರೀರಧಾರಿಯಾಗಿ, ಕೃಪಾಸತ್ಯ ಸಂಪೂರ್ಣನಾಗಿ ನಮ್ಮ ಮಧ್ಯೆ ನಿವಾಸಿಸುತ್ತಾನೆ.**

ಆತ್ಮಜ್ಞಾನ ಅಂದರೆ ಆತ್ಮವಾದ ದೇವರು ಶರೀರವನ್ನು ಧರಿಸಿ, ಮನುಷ್ಯನ ಹಾಗೆ ಕಾಣಿಸುತ್ತಾ ಕೃಪೆಯು, ಜ್ಞಾನವು ಹೊಂದಿರುವವನಾಗಿ ಮನುಷ್ಯರ ಮಧ್ಯದಲ್ಲಿ ಮನುಷ್ಯನಾಗಿ ವಾಸ ಮಾಡಿದ್ದಾನೆ.

**8) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 18ನೇ ವಚನ.**

**(18) ಯಾರೂ ಯಾವಾಗಾದರೂ ದೇವರನ್ನು ನೋಡಲಿಲ್ಲ. ತಂದೆ ಎದೆಯಲ್ಲಿರುವ ಅದ್ವಿತೀಯ ಕುಮಾರನೆ ಆತನನ್ನು ಬಹಿರಂಗಪಡಿಸುತ್ತಾನೆ.**

**'ದೇವರು'** ಎಂಬ ಪದವನ್ನು ಆತ್ಮಕ್ಕೆ, ಪರಮಾತ್ಮಕ್ಕೆ ಇಬ್ಬರಿಗೂ ಬಳಸುತ್ತಿರುತ್ತಾರೆ. ಅಂತಿಮ ದೈವಗ್ರಂಥದಲ್ಲಿ **'ಅಲ್ಲಾಹ್'** ಎಂಬ ಪದವನ್ನು ಆತ್ಮ ಪರಮಾತ್ಮ ಎನ್ನುವ ಇಬ್ಬರು ದೇವರುಗಳಿಗೆ ಬಳಸಿದ್ದಾರೆ. ಆದ್ದರಿಂದ ಮುಸ್ಲೀಮರು ಇಬ್ಬರು ದೇವರುಗಳನ್ನು ಗುರುತಿಸಲಾರದೆ ಹೋಗಿದ್ದಾರೆ. ಅಂತಹ ತಪ್ಪು ನಡೆಯದಂತೆ ಬೈಬಲ್ ಗ್ರಂಥದಲ್ಲಿ ಆತ್ಮನನ್ನು ತಂದೆಯೆಂದು, ಪರಮಾತ್ಮನನ್ನು ಪರಿಶುದ್ಧಾತ್ಮನೆಂದು ಹೇಳಿದ್ದಾರೆ. ಈಗ ಈ ವಾಕ್ಯದಲ್ಲಿ **'ಅದ್ವಿತೀಯ ಕುಮಾರನು'** ಎಂಬ ಪದವನ್ನು ಹೇಳಿದ್ದಾರೆ. ಈ ಪದವನ್ನು ಪರಿಶೀಲಿಸಿ ನೋಡಿದರೆ ದ್ವಿತೀಯ ಎಂದರೆ ಎರಡನೆಯದು ಎಂದು ಅರ್ಥ. 'ದ್ವಿತೀಯ' ಎಂಬ ಪದಕ್ಕೆ ಮೊದಲು 'ಅ' ಎಂಬ ಅಕ್ಷರ ಇರುವುದರಿಂದ ಎರಡನೆಯದು ಅಲ್ಲದಿರುವುದು ಮೊದಲನೆಯದು ಎಂದು ಅರ್ಥ. ಅದ್ವಿತೀಯ ಕುಮಾರನು ಎಂದರೇ **'ದೇವರಿಂದ ಸೃಷ್ಠಿಸಲ್ಪಟ್ಟ ಒಬ್ಬನೇ ಒಬ್ಬ ಕುಮಾರನು'** ಎಂದು ಅರ್ಥ. ಪರಮಾತ್ಮ ಅಥವಾ ಪರಿಶುದ್ಧಾತ್ಮ ಎನ್ನಲ್ಪಡುವ ದೇವರು ಎಂದಿಗೂ ಇರುವವನೆ.  ಸೃಷ್ಠಿ ಆದಿಯಲ್ಲಿ ಪ್ರಕೃತಿಯನ್ನು ಸೃಷ್ಠಿಸಿರುವ ಸೃಷ್ಠಿಕರ್ತನಾದ ಪರಮಾತ್ಮ ಜೀವರೂಪ ಪ್ರಪಂಚವನ್ನು ತಯಾರಿ ಮಾಡುವುದಕ್ಕಾಗಿ ಒಬ್ಬ ಕುಮಾರನನ್ನು ಸೃಷ್ಠಿಸಿದ್ದಾನೆ. ಆ ಒಬ್ಬ ಕುಮಾರನೇ ಆತ್ಮ. ಆತ್ಮ ಪರಿಶುದ್ಧಾತ್ಮ ಆಜ್ಞೆಯ ಪ್ರಕಾರ ಸರ್ವ ಜೀವರಾಶಿಗಳನ್ನು ಸೃಷ್ಠಿಸಿದ್ದಾನೆ. ಆದ್ದರಿಂದ ಸರ್ವಜೀವರಾಶಿಗಳಿಗೆ ತಂದೆ ಒಬ್ಬನೇ, ಆತನೇ ಸೃಷ್ಠಿಸಲ್ಪಟ್ಟಿರುವ ದೇವರು. ಸೃಷ್ಠಿಸಲ್ಪಟ್ಟ ಆತ್ಮಕ್ಕೆ ತಂದೆ ಪರಿಶುದ್ಧಾತ್ಮ. ಮೇಲಿನ ವಾಕ್ಯದಲ್ಲಿ **"ಯಾರೂ ಯಾವಾಗಾದರೂ ಪರಿಶುದ್ಧಾತ್ಮ (ಪರಮಾತ್ಮ) ಎಂಬ ದೇವರನ್ನು ನೋಡಲಿಲ್ಲ"** ಎಂದು ಬರೆದಿದ್ದಾರೆ. ಪರಿಶುದ್ಧಾತ್ಮನಾದ ದೇವರು ನಾಮ, ರೂಪ, ಕ್ರಿಯೆಗಳು ಇಲ್ಲದವನಾಗಿ ಇದ್ದಾನೆ. ಆದ್ದರಿಂದ ಪರಮಾತ್ಮ ಎಂಬ ದೇವರನ್ನು ಯಾರೂ ನೋಡಲಿಲ್ಲ. ಯಾರೂ ನೋಡದ ದೇವರನ್ನು ಕುರಿತು ದೇವರ ಅದ್ವಿತೀಯ ಕುಮಾರನಾದ ಆತ್ಮ ತನ್ನ ಜ್ಞಾನದ ಮೂಲಕ ತಿಳಿಸುತ್ತಿದ್ದಾನೆ. ಪರಮಾತ್ಮ ಎಂಬ ದೊಡ್ಡ ದೇವರ ಹೃದಯದಿಂದ ಬೇರೆಯಾಗಿ ಸೀಳಿ ಬಂದವನು ಆತ್ಮವಾಗಿರುವ ಅದ್ವಿತೀಯ ಕುಮಾರನು ಎಂದು ಆತ್ಮನನ್ನು ಹೇಳಿ, ಆತನು

ಹೊರತುಪಡಿಸಿ ಪರಿಶುದ್ಧಾತ್ಮನನ್ನು ಯಾರೂ ನೋಡಲಿಲ್ಲವೆಂದು, ಆತನನ್ನು ಕುರಿತು ತಿಳಿದವನು ಆತ್ಮ ಒಬ್ಬನೇ ಆಗಿರುವುದರಿಂದ ಆತನ ತಂದೆಯನ್ನು ಕುರಿತು ಆತನು (ಆತ್ಮ) ಒಬ್ಬನೇ ತಿಳಿಸಬಲ್ಲನು. ಆತನು ಹೊರತುಪಡಿಸಿ (ಆತ್ಮ ಹೊರತು) ಆತನನ್ನು (ಪರಮಾತ್ಮನನ್ನು) ತಿಳಿಸುವವನು ಯಾರೂ ಇಲ್ಲ.

**9) ಯೋಹಾನ್ ಸುವಾರ್ತೆ 1ನೇ ಅಧ್ಯಾಯ, 51ನೇ ವಚನ.**

## 51) ನೀವು ಆಕಾಶ ತೆರೆಯುವುದನ್ನು ದೇವ ದೂತರು ಮನುಷ್ಯ ಕುಮಾರನ ಮೇಲೇ ಹತ್ತುವುದನ್ನು, ಇಳಿಯುವುದನ್ನು ನೋಡುತ್ತೀರೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆಂದನು.

ಇದು ಏಸು ಸ್ವತಃವಾಗಿ 'ನತನಯೇಲು' ಎನ್ನುವಾತನಿಗೆ ಸ್ವತಃವಾಗಿ ಹೇಳಿರುವ ಮಾತು ಇದುಯೆಂದು ತಿಳಿಯಬೇಕು. ಈ ವಾಕ್ಯದಲ್ಲಿ ಮನುಷ್ಯ ಕುಮಾರನು ಎಂಬ ವಾಕ್ಯವನ್ನು ಹೇಳಿದ್ದಾರೆ. ಏಸು ತನ್ನನ್ನು ಮನುಷ್ಯ ಕುಮಾರನೆಂದು ಹೇಳಿಕೊಂಡಿದ್ದಾನೆ. ಅದಕ್ಕು ಮೊದಲು ನತನಯೇಲು ಏಸುವಿನೊಂದಿಗೆ "ಬೋಧಕನೇ! ನೀನು ದೇವರ ಕುಮಾರನು" ಎಂದು ಹೇಳಿದ್ದಾನೆ. ಆದರೆ ಏಸು ತನ್ನನ್ನು ದೇವರ ಕುಮಾರನೆಂದು ಹೇಳದೆ ಮನುಷ್ಯ ಕುಮಾರನೆಂದು ತನ್ನನ್ನು ತಾನು ತಗ್ಗಿಸಿಕೊಂಡು ಹೇಳಿದ್ದಾನೆ. ಅಷ್ಟೇ ಅಲ್ಲದೇ ನತನಯೇಲು ಎನ್ನುವಾತನು ಮೊದಲಾದವರು ದೊಡ್ಡ ಮಹಿಮೆಗಳನ್ನು ನೋಡುವಿರಿ ಎಂದು ಏಸು ಹೇಳಿದನು. ಅದು ಏನೆಂದರೆ! ದೇವರ ದೂತರು ಪ್ರಪಂಚದಲ್ಲಿನ ಮಾನವರನ್ನು ಪಾಲಿಸುವ ಪಾಲಕರಾಗಿ ಇದ್ದಾರೆಂದು ಗತದಲ್ಲಿ ಕೂಡಾ ಅನೇಕಬಾರಿ ಹೇಳಿಕೊಂಡಿದ್ದೇವೆ. ದೇವರ ದೂತರು ಆಕಾಶದಲ್ಲಿಯೇ ಕೋಟಿಗಟ್ಟಲೆ ಇದ್ದಾರೆಂದು ಅವರನ್ನು ಭೂತಗಳು, ಗ್ರಹಗಳು ಅನ್ನುತ್ತಾರೆಂದು ಹೇಳಿಕೊಂಡಿದ್ದೇವೆ. ಏಸು ಯಾರಾಗಿರುವುದು ದೇವರ ದೂತರಾದವರಿಗೆ ತಿಳಿಯುವುದರಿಂದ ಆಕಾಶದಿಂದ ದೇವರ ದೂತರು ಬಂದು ಆತನಿಗೆ ಸಾಷ್ಟಾಂಗ

ನಮಸ್ಕಾರ ಮಾಡಿ ಹೋಗುತ್ತಿರುತ್ತಾರೆ. ಏಸು ಯಾರಾಗಿರುವುದು ಮನುಷ್ಯರಿಗೆ ಸ್ವಲ್ಪವಾದರೂ ತಿಳಿದಿಲ್ಲ. ಆದ್ದರಿಂದ ಮನುಷ್ಯರು ನಮಸ್ಕರಿಸುತ್ತಿಲ್ಲ. ಈ ವಿಷಯವನ್ನು ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ 15ನೇ ಸೂರಾದಲ್ಲಿ 28, 29, 30 ವಾಕ್ಯಗಳಲ್ಲಿ ಇದೆ. ಆಕಾಶದಲ್ಲಿ ದ್ವಾರವು ತೆರೆದಂತೆ ಆಕಾಶದಿಂದ ಭೂತಗಳು, ಗ್ರಹಗಳು ಏಸು ಬಳಿಗೆ ಬರುವುದನ್ನು ಹೋಗುವುದನ್ನು ನೋಡುತ್ತೀರೆಂದು ಹೇಳುವುದು ನಡೆದಿದೆ. ಹತ್ತುವುದು ಇಳಿಯುವುದು ಎಂದರೆ ಹೋಗುವುದು ಬರುವುದು ಎಂದು ಅರ್ಥ. 'ಮನುಷ್ಯ ಕುಮಾರನ ಮೇಲೆ' ಎಂದರೆ 'ಏಸು ಬಳಿಗೆ' ಎಂದು ಅರ್ಥ. ಆಕಾಶವು ತೆರೆಯಲ್ಪಟ್ಟಿದೆ ಎಂದರೆ ಆಕಾಶದಲ್ಲಿ ದ್ವಾರವು ತೆರೆದಂತೆ ಎಂದು ಅರ್ಥ. ಈ ವಾಕ್ಯವನ್ನು ನೀನು ದೇವರ ಕುಮಾರನು ಎಂದು ನತನಯೇಲು ಅಂದಾಗ ಆತನು ನೋಡಿರುವವು ಗಳಿಗಿಂತ ದೊಡ್ಡ ಕಾರ್ಯಗಳನ್ನು ನೋಡುತ್ತೀಯೆಂದು ಆತನಿಗೆ ಏಸು ಹೇಳಿದನು. 50ನೇ ವಾಕ್ಯದಲ್ಲಿ ಈ ಮಾತನ್ನು ಹೇಳಿದ ನಂತರ 51ನೇ ವಾಕ್ಯದಲ್ಲಿ ಈ ರೀತಿಯಾಗಿ ಏಸು ಹೇಳುವುದು ನಡೆದಿದೆ. ನತನಯೇಲು ಸ್ವಲ್ಪ ಮಟ್ಟಿಗೆ ಜ್ಞಾನದೃಷ್ಠಿ ಇರುವ ಜ್ಞಾನಿಯಾದ್ದರಿಂದ ಏಸುವನ್ನು ದೇವರ ಕುಮಾರನನ್ನಾಗಿ ಗುರುತಿಸಿ ಹೇಳಿದ್ದಾನೆ. ಆಗ ಏಸು ನತನಯೇಲು ಸಾಮರ್ಥ್ಯವನ್ನು ಗುರುತಿಸಿ ಆತನು ತನ್ನ ಜ್ಞಾನ ದೃಷ್ಠಿಯಿಂದ ಮನುಷ್ಯರು ನೋಡಲಾರದ ದೃಶ್ಯವನ್ನು ನೋಡುತ್ತೀಯೆಂದು 51ನೇ ವಾಕ್ಯವನ್ನು ಹೇಳಿದ್ದಾನೆ. ಅದರಲ್ಲಿ ಹೇಳಿರುವವು ಜ್ಞಾನಿಗಳಿಗೆ ಮಾತ್ರ ಕಾಣಿಸುವ ಕಾರ್ಯಗಳು. ಈ ವಾಕ್ಯದಿಂದ ಏಸು ಯಾರಾಗಿರುವುದು ಗ್ರಹಿಸುವವರಿಗೆ ತಿಳಿಯುತ್ತಿದೆ.

**10) ಯೋಹಾನ್ ಸುವಾರ್ತೆ 3ನೇ ಅಧ್ಯಾಯ, 3ನೇ ವಚನ.**

**3) ಒಬ್ಬನು ಹೊಸದಾಗಿ ಜನ್ಮಿಸಿದರೇ ಹೊರತು ಆತನು ದೇವರ ರಾಜ್ಯವನ್ನು ನೋಡಲಾರನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ ಎಂದನು.**

ಈ ವಾಕ್ಯವನ್ನು ಬಾಹ್ಯವಾಗಿ ಅರ್ಥಮಾಡಿಕೊಳ್ಳಬಾರದು. ಇದು ಸೂಕ್ಷ್ಮವಾದ ಅರ್ಥದೊಂದಿಗೆ ಕೂಡಿಕೊಂಡಿದೆ. ದೇವರು ಕಾಣಿಸದವನು. ಹಾಗೆಯೇ ದೇವರ ರಾಜ್ಯವೆಂದರೆ ಏನೋ ಅದೂ ಯಾರಿಗೂ ಕಾಣಿಸದು. ಕಾಣಿಸದ ದೇವರ ರಾಜ್ಯವನ್ನು ನೋಡಬೇಕೆಂದರೂ, ತಿಳಿಯಬೇಕೆಂದರೂ ಮನುಷ್ಯ ಹೊಸದಾಗಿ ಹುಟ್ಟಬೇಕಾಗಿದೆಯೆಂದು ಏಸಯ್ಯನೇ ಸ್ವತಃವಾಗಿ ಹೇಳಿದ್ದಾನೆ. ಆದರೆ ಮನುಷ್ಯ ಸತ್ತು ಹೋಗಿ ಹೊಸದಾಗಿ ಜನ್ಮಿಸಬೇಕೆಂದು ಅಂದುಕೊಳ್ಳಬಾರದು. ಹಾಗಾದರೆ ದೇವರನ್ನು ತಿಳಿಯಬೇಕೆನ್ನುವವರೆಲ್ಲರೂ ಮರಣಿಸಬೇಕಾಗಿರುತ್ತದೆ. ಆದ್ದರಿಂದ ಹಾಗೆ ಅಂದುಕೊಳ್ಳುವುದು ತಪ್ಪು. ಹಾಗೆ ಆಲೋಚಿಸಿದ 'ನೀಕೊದೇಮು' ಎಂಬ ವ್ಯಕ್ತಿ ಹೀಗೆ ಪ್ರಶ್ನಿಸಿದನು.

**11) ಯೋಹಾನ್ ಸುವಾರ್ತೆ, 3ನೇ ಅಧ್ಯಾಯ, 4, 5, 6, 7, 8 ವಚನಗಳು.**

**(4) ಮುದುಕನಾದ ಮನುಷ್ಯನು ಹೇಗೆ ಜನ್ಮಿಸಬಲ್ಲನು? ಎರಡನೆ ಬಾರಿ ತಾಯಿಗರ್ಭದಲ್ಲಿ ಪ್ರವೇಶಿಸಿ ಜನ್ಮಿಸಬಲ್ಲನಾ ಎಂದು ಆತನನ್ನು ಕೇಳಿದಾಗ (5) ಒಬ್ಬನು ನೀರಿನ ಮೂಲವಾಗಿಯೊ, ಆತ್ಮ ಮೂಲ ವಾಗಿಯೊ ಜನ್ಮಿಸಿದರೇನೇ ಹೊರತು ದೇವರ ರಾಜ್ಯದಲ್ಲಿ ಪ್ರವೇಶಿ ಸಲಾಗುವುದಿಲ್ಲವೆಂದು ನಿನ್ನೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ. (6) ಶರೀರ ಮೂಲವಾಗಿ ಜನ್ಮಿಸಿರುವುದು ಶರೀರ, ಆತ್ಮ ಮೂಲ ವಾಗಿ ಜನ್ಮಿಸಿರುವುದು ಆತ್ಮವಾಗಿ ಇದೆ. (7) ನೀವು ಹೊಸದಾಗಿ ಜನ್ಮಿಸಬೇಕಾಗುತ್ತದೆ ಎಂದು ನಾನು ನಿನ್ನೊಂದಿಗೆ ಹೇಳಿರುವುದಕ್ಕೆ ಆಶ್ಚರ್ಯ ಪಡಬೇಡ. (8) ಗಾಳಿ ಅದಕ್ಕೆ ಇಷ್ಟವಾದ ಕಡೆ ಬೀಸುತ್ತದೆ. ನೀನು ಅದರ ಶಬ್ಧವನ್ನು ಕೇಳುತ್ತೀಯ ಹೊರತು, ಅದು ಎಲ್ಲಿಂದ ಬಂದಿದೆಯೋ ಎಲ್ಲಿಗೆ ಹೋಗುತ್ತಿದೆಯೋ ನಿನಗೆ ತಿಳಿದಿಲ್ಲ. ಆತ್ಮ ಮೂಲವಾಗಿ ಜನ್ಮಿಸಿರುವ ಪ್ರತಿಯೊಬ್ಬನು ಹಾಗೆಯೇ ಇದ್ದಾನೆ ಅಂದನು.**

ಮನುಷ್ಯ ಮರಣಿಸಿ ಎರಡನೆಯ ಬಾರಿ ಜನ್ಮಿಸುವುದನ್ನು ಜನ್ಮ ಬದಲಾಯಿಸುವುದು ಎಂದು ಅನ್ನುತ್ತಾರೆ. ಹಾಗೆ ಸ್ಥೂಲವಾಗಿ ಜನ್ಮ ಬದಲಾದರೆ ಮನುಷ್ಯನಲ್ಲಿನ ಎಲ್ಲಾ ಭಾಗಗಳು ಬದಲಾಗುವವು. ಆಗ ದೇವರನ್ನು, ದೇವರ ರಾಜ್ಯವನ್ನು ನೋಡಬೇಕೆಂಬ ಕೋರಿಕೆ ಕೂಡಾ ಇಲ್ಲದೆ ಹೋಗುತ್ತದೆ. ಶರೀರದಲ್ಲಿನ ಅವಯವಗಳಾಗಲೀ, ಆಶಯಗಳಾಗಲಿ ಬದಲಾಗದೆ ಇರಬೇಕೆಂದರೆ ಶರೀರಗಳು ಸಾಯಬಾರದು. ಶರೀರದಲ್ಲಿನ ಜ್ಞಾನ ಅಜ್ಞಾನ ಎಂಬ ಎರಡು ಭಾಗಗಳಲ್ಲಿ ಅಜ್ಞಾನವು ಪೂರ್ತಿ ಸತ್ತು ಹೋಗಬೇಕಾಗಿರುತ್ತದೆ. ಮನುಷ್ಯ ಅಜ್ಞಾನದಲ್ಲಿ ಸತ್ತು ಹೋಗಿ ಜ್ಞಾನದಲ್ಲಿ ಜನ್ಮಿಸುವುದು ಎಂದರೆ ಅಜ್ಞಾನ ಆಲೋಚನೆಗಳು, ಅಜ್ಞಾನ ಕೋರಿಕೆಗಳನ್ನು ಇಲ್ಲದೆ ಮಾಡಿಕೊಳ್ಳುವುದರಿಂದ ಅವನು ಅಜ್ಞಾನ ಮರಣವನ್ನು ಹೊಂದಿ ಜ್ಞಾನ ಜನ್ಮ ಎತ್ತಿದಂತಾಗುತ್ತದೆ. ಹಾಗೆ ಅಜ್ಞಾನವನ್ನು ಇಲ್ಲದಂತೆ ಮಾಡಿಕೊಳ್ಳುವವನು ಜ್ಞಾನವನ್ನು ಹೊಂದಿದವನು ಆತ್ಮ ಮೂಲವಾಗಿ ಜನ್ಮಿಸಿದಂತಾಗುತ್ತಿದೆ. **ಶರೀರದಲ್ಲಿ ಆತ್ಮನನ್ನು ತಿಳಿಯುವುದೆ ಮನುಷ್ಯನ ಒಂದು ಕರ್ತವ್ಯ.** ಆತ್ಮನನ್ನು ತಿಳಿಯುವುದಕ್ಕೆ ಆತ್ಮಜ್ಞಾನವನ್ನು ತಿಳಿಯಬೇಕಾಗಿರುತ್ತದೆ. ಆದ್ದರಿಂದ ಆತ್ಮ ಮೂಲವಾಗಿ ಅಂದರೆ ಆತ್ಮಕ್ಕಾಗಿ ಜ್ಞಾನವನ್ನು ತಿಳಿಯುವುದನ್ನು ಆತ್ಮ ಮೂಲವಾಗಿ ಹುಟ್ಟಿದಂತಾಗುತ್ತಿದೆ. ಶರೀರವು ಮರಣಿಸಿದರೆ ಶರೀರವನ್ನು ಹೊಂದಬಹುದು. ಹಾಗೆ ಶರೀರವನ್ನು ಬಿಡುವುದಕ್ಕಿಂತ ಮೊದಲೇ ಹೊಸ ಶರೀರವನ್ನು ಸೇರದೇನೆ ಹಳೆಯ ಶರೀರದಲ್ಲಿ ತನ್ನ ಇಚ್ಛೆಯನ್ನು ಬದಲಿಸಿಕೊಳ್ಳುವುದನ್ನೇ ಹೊಸ ಜನ್ಮ ಎತ್ತಿದಂತಾಗುತ್ತದೆ. ಗಾಳಿ ತನ್ನ ಇಷ್ಟ ಬಂದ ಕಡೆ ಬೀಸುತ್ತಿದೆ. ಅದು ಬೀಸುವುದನ್ನು ಅನುಸರಿಸಿ ಅದರ ಶಬ್ಧವನ್ನು ಕೇಳುತ್ತೇವೆ. ಹಾಗೆಯೇ ಗಾಳಿ ತನ್ನ ದಿಕ್ಕನ್ನು ಬದಲಾಯಿಸಿಕೊಂಡ ಹಾಗೆ ಮನುಷ್ಯ ತನ್ನ ಉದ್ದೇಶವನ್ನು ಬದಲಾಯಿಸಿಕೊಂಡರೆ ಆತನು ಹೊಸ ಜನ್ಮ ಎತ್ತಿದಂತಾಗುತ್ತದೆ. ಆತ್ಮನನ್ನು ಕೋರುವವನು ಅದೇ ಜನ್ಮದಲ್ಲಿ, ಅದೇ ಶರೀರದಲ್ಲಿನ ಆತ್ಮನನ್ನು ತಿಳಿಯಬಹುದು. ಅದಕ್ಕಾಗಿ ಇನ್ನೊಂದು ಜನ್ಮಕ್ಕೆ ಹೋಗಬೇಕಾದ ಅಗತ್ಯವಿಲ್ಲ.

**12) ಯೋಹಾನ್ ಸುವಾರ್ತೆ 3ನೇ ಅಧ್ಯಾಯ, 13ನೇ ವಚನ.**

## 13) ಪರಲೋಕದಿಂದ ಇಳಿದು ಬಂದವನೆ ಅಂದರೆ ಪರ ಲೋಕದಲ್ಲಿ ಇರುವ ಮನುಷ್ಯ ಕುಮಾರನೆ ಹೊರತು ಪರಲೋಕಕ್ಕೆ ಹತ್ತಿ ಹೋದವನು ಯಾರೂ ಇಲ್ಲ.

ಇಹಲೋಕ, ಸ್ವರ್ಗಲೋಕ, ನರಕಲೋಕ, ಪರಲೋಕ ಎಂದು ಎಲ್ಲರೂ ನಾಲ್ಕು ಲೋಕಗಳ ಹೆಸರುಗಳನ್ನು ಕೇಳಿದ್ದೇವೆ. ಇಹಲೋಕ ಎಂದರೆ! ಎಲ್ಲರಿಗೂ ಕಾಣಿಸುವ, ಎಲ್ಲರೂ ನಿವಾಸವಿರುವ ಭೂಲೋಕವನ್ನೇ ಇಹಲೋಕವೆಂದು ಕರೆಯುತ್ತಿದ್ದೇವೆ. ಸ್ವರ್ಗ ಲೋಕ, ನರಕಲೋಕ ಎಂದರೆ! ಆ ಎರಡು ಲೋಕಗಳು ಭೂಲೋಕದಲ್ಲೇ ಇವೆ. ಇದನ್ನು ಅನುಸರಿಸಿ ಇಹ ಲೋಕದಲ್ಲಿಯೇ ಸ್ವರ್ಗ, ನರಕ ಲೋಕಗಳು ಇವೆಯೆಂದು ಹೇಳಬಹುದು. ಲೋಕ ಎಂದರೆ! ಒಂದು ರಾಜ್ಯವೋ, ಒಂದು ಭೂಭಾಗವೋ ಅಲ್ಲ. ಲೋಕ ಎಂದರೆ ಅನುಭವಿಸಲ್ಪಡುವ ಸ್ಥಳವನ್ನು ಅನುಭವಿಸಲ್ಪಡುವ ಸಮಯವನ್ನು ಎರಡನ್ನು ಸೇರಿಸಿ ಲೋಕವೆಂದು ಕರೆಯುತ್ತಿದ್ದೇವೆ. ಕಷ್ಟ ಅನುಭವಿಸುವ ಸಮಯದಲ್ಲಿರುವ, ಅನುಭವಿಸುವ ಸ್ಥಳವನ್ನು ಯಮಲೋಕ ಎಂದೂ ಇಲ್ಲವೇ ನರಕ ಲೋಕವೆಂದು ಅನ್ನುತ್ತಿದ್ದೇವೆ. ಹಾಗೆಯೇ ಸುಖವನ್ನು ಅನುಭವಿಸುವ ಸಮಯದಲ್ಲಿ ಯಾವ ಸ್ಥಳವಿರುತ್ತದೋ ಆ ಸ್ಥಳವನ್ನು ಸ್ವರ್ಗಲೋಕವೆಂದು ಅನ್ನುತ್ತಿದ್ದೇವೆ. ಈ ಎರಡು ಅನುಭವಗಳು ಭೂಲೋಕದಲ್ಲಿಯೇ ಇರುತ್ತವೆ ಆದ್ದರಿಂದ ಇಹಲೋಕವೇ ಸ್ವರ್ಗ, ನರಕ ಲೋಕವಾಗಿ ಇದೆಯೆಂದು ಹೇಳಬಹುದು. ಸ್ವರ್ಗ, ನರಕ ಲೋಕಗಳು ಎರಡೂ ಅಲ್ಲದಿರುವುದು ಪರಲೋಕವೆಂದು ಅನ್ನುತ್ತಾರೆ. ಲೋಕವೆಂದರೆ ಅನುಭವಗಳು ಇರುವುದು ಆದರೆ, ಪರಲೋಕ ಎಂದರೆ ಅನುಭವಗಳಿಗಿಂತಲೂ ಬೇರೆಯಾಗಿರುವ ಸಮಯವನ್ನು ಅಂದರೆ ಯಾವ ಅನುಭವವಿಲ್ಲದ ಸ್ಥಿತಿಯನ್ನು ಪರಲೋಕವೆಂದು ಕರೆಯುತ್ತಿದ್ದೇವೆ. ಮನುಷ್ಯ ಕರ್ಮಗಳಿಂದ ಹೊರ ಬಿದ್ದಾಗ ಸುಖ, ದುಃಖ ಯಾವ ಅನುಭವಗಳು ಇಲ್ಲದೆ ಹೋಗುತ್ತವೆ. ಅಂಥವರೇ ಪರಲೋಕವನ್ನು ಹೊಂದುವರೆಂದೂ ಅದೇ ದೇವರಲ್ಲಿ ಬೆರೆತಿರುವ ಸ್ಥಿತಿಯೆಂದು ಅದನ್ನೇ

ಮುಕ್ತಿ ಅಥವಾ ಮೋಕ್ಷವೆಂದು ಕರೆಯುತ್ತಿದ್ದಾರೆ. ಇಹಲೋಕದಲ್ಲಿ ಇರುವವನು ಪಾಪಪುಣ್ಯ ಕರ್ಮಗಳಿಂದ ಕೂಡಿಕೊಂಡಿರುತ್ತಾನೆ. ಪರಲೋಕದಲ್ಲಿ ಇರುವವನಿಗೆ ಯಾವ ಕರ್ಮಗಳು ಇರುವುದಿಲ್ಲ. ಇಹಲೋಕದಲ್ಲಿ ಇರುವವನು ಮರಣಿಸಿದರೆ ಪುನಃ ಇಹಲೋಕಕ್ಕೇ ಬರುತ್ತಾನೆ ಹೊರತು ಪರಲೋಕಕ್ಕೆ ಹೋಗಲಾರನು. ಹಾಗೆಯೇ ಪರಲೋಕದಲ್ಲಿ ಇರುವವನು ಎಂದಾದರೂ ಅವಶ್ಯಕತೆಯ ನಿಮಿತ್ತ ಇಹಲೋಕದೊಳಗೆ ಬಂದರೂ ಆತನು ಪುನಃ ಪರಲೋಕಕ್ಕೇ ಹೋಗುತ್ತಾನೆ. ಆದ್ದರಿಂದ ಪರಲೋಕದಿಂದ ಬಂದ ಪರಲೋಕ ನಿವಾಸಿ ತನ್ನ ಇಚ್ಛೆಯ ಪ್ರಕಾರ ಸ್ವಲ್ಪ ಕಾಲ ಇಹಲೋಕದಲ್ಲಿದ್ದರೂ ಆತನು ನಂತರ ಪರಲೋಕಕ್ಕೇ ಸೇರುತ್ತಾನೆ. ಪರಲೋಕದಿಂದ ಬಂದವನು ಮನುಷ್ಯ ಕುಮಾರನಾಗಿ ಭೂಮಿ ಮೇಲೆ ಕಾಣಿಸಿದರೂ ಅವನು ಪುನಃ ಪರಲೋಕಕ್ಕೆ ಸೇರಿಹೋಗಬೇಕಾಗಿರುತ್ತದೆ. ಆದ್ದರಿಂದ ವಾಕ್ಯದಲ್ಲಿ **'ಪರಲೋಕದಲ್ಲಿ ಇರುವ ಮನುಷ್ಯ ಕುಮಾರನು ಹೊರತುಪಡಿಸಿ ಪರಲೋಕಕ್ಕೆ ಹತ್ತಿ ಹೋದವನು ಇಲ್ಲ'** ಎಂದು ಹೇಳಿದ್ದಾರೆ. ಪರಲೋಕದಲ್ಲಿ ಇರುವವನು ದೇವರೇಯೆಂದು ಹೇಳಬಹುದು. ಆದರೆ ದೇವರಾದವನು ಮನುಷ್ಯನಾಗಿ ಬಂದು ಜನ್ಮಿಸಿದರೂ ಆತನು ಪುನಃ ಪರಲೋಕವನ್ನೇ ಸೇರುತ್ತಾನೆ. ಅದೇ ವಿಷಯವನ್ನು (ಯೋ, 3–13) ರಲ್ಲಿ ಹೇಳಿದ್ದಾರೆ.

### 13) ಯೋಹಾನ್ ಸುವಾರ್ತೆ 3ನೇ ಅಧ್ಯಾಯ, 15ನೇ ವಚನ.

## 15) ವಿಶ್ವಾಸಿಸುವ ಪ್ರತಿಯೊಬ್ಬನು ನಾಶವಾಗದೆ ಆತನ ಮೂಲಕ ನಿತ್ಯ ಜೀವವನ್ನು ಹೊಂದುವಂತೆ ಮನುಷ್ಯ ಕುಮಾರನು ಎತ್ತಲ್ಪಡಬೇಕು.

ದೇವರನ್ನು ವಿಶ್ವಾಸಿಸುವ ಪ್ರತಿಯೊಬ್ಬನು ಮರಣವನ್ನು ಹೊಂದದೆ ನಿತ್ಯ ಜೀವನವನ್ನು ಹೊಂದುವನು ಎನ್ನುವುದು ಸತ್ಯ. ಆದರೆ ಆತನ ಮೂಲಕ ನಿತ್ಯ ಜೀವವನ್ನು ಹೊಂದುವಂತೆ ಎಂದು ಬರೆಯಲಾಗಿದೆ. ಅಷ್ಟೇ ಅಲ್ಲದೆ

ಮನುಷ್ಯ ಕುಮಾರನು ಎತ್ತಲ್ಪಡಬೇಕು ಎಂದು ಕೂಡಾ ಹೇಳಿದ್ದಾರೆ. ಬೈಬಲ್ ಗ್ರಂಥವು ಮೊದಲು ಹೆಬ್ರೀ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ನಂತರ ಅದು 14 ನೂರು ಭಾಷೆಗಳಲ್ಲಿ ಅನುವಾದಿಸಲಾಗಿದೆ. ಕೊನೆಯಲ್ಲಿ ತೆಲುಗು ಭಾಷೆಗೆ ಯಾವ ಭಾಷೆಯಿಂದ ಅನುವಾದಿಸಿದ್ದಾರೋ ತಿಳಿದಿಲ್ಲ ಆದರೆ ಅನುವಾದದಲ್ಲಿ ಭಾಷಾ ಲೋಪವು ಚೆನ್ನಾಗಿ ಕಾಣಿಸುತ್ತಿದೆ. ಉದಾಹರಣೆಗೆ ಈಗ ಹೇಳಿರುವ (3–15) ವಾಕ್ಯದಲ್ಲಿ ಕರ್ತ, ಕರ್ಮ, ಕ್ರಿಯೆ ಯಾವುವೂ ಸರಿಯಾಗಿಲ್ಲ. ವಾಕ್ಯವು ಸಂಪೂರ್ಣವಾಗಿ ಅರ್ಥವಾಗುವಂತೆ ಇಲ್ಲ. ವಿಶ್ವಾಸಿಸುವ ಪ್ರತಿಯೊಬ್ಬನು ನಶಿಸದೆ ನಿತ್ಯ ಜೀವವನ್ನು ಹೊಂದುವುದು ವಾಸ್ತವವೆ ಆದರೂ ಕೊನೆಯಲ್ಲಿ ನಿತ್ಯ ಜೀವವನ್ನು ಹೊಂದುವಂತೆ ಎಂದು ಮತ್ತೊಂದು ವಿಷಯವನ್ನು ತೋರಿಸುತ್ತಾ 'ಮನುಷ್ಯ ಕುಮಾರನು ಎತ್ತಲ್ಪಡಬೇಕು' ಎಂದು ಹೇಳಿದ್ದಾರೆ. ಹಾಗೆಂದು ಹೇಳಿದಾಗ ಅದಕ್ಕೆ ತೋರಿಸಬೇಕಾಗಿರುವ ಉದಾಹರಣೆಯನ್ನು ಸರಿಯಾಗಿ ತೋರಿಸಲಿಲ್ಲ. ಆದರೂ ನಾವು ಸರಿಪಡಿಸಿಕೊಂಡು ಅರ್ಥ ಮಾಡಿಕೊಳ್ಳಬೇಕಾಗಿದೆ. ದೇವರ ಮೇಲೆ, ದೇವರ ಜ್ಞಾನದ ಮೇಲೆ ವಿಶ್ವಾಸವಿರುವವನು ನಿತ್ಯ ಜೀವವಾದ ಪರಲೋಕವನ್ನು ಹೊಂದುವುದು ವಾಸ್ತವವೇ. ಆ ಮಾತು ಹೇಳುವವರೆಗು ವಾಕ್ಯವು ಚೆನ್ನಾಗಿಯೇ ಇದೆ. ಮೊದಲು ಹೇಳಿರುವ ಈ ವಿಷಯಕ್ಕೆ ಸಂಬಂಧವಿಲ್ಲದೆ 'ಮನುಷ್ಯ ಕುಮಾರನು ಎತ್ತಲ್ಪಡಬೇಕು' ಎಂದು ಹೇಳಿದ್ದಾರೆ. 'ಮನುಷ್ಯ ಕುಮಾರನು ಎತ್ತಲ್ಪಡಬೇಕು' ಎಂಬ ಮಾತನ್ನು 'ಮನುಷ್ಯ ಕುಮಾರನು ಎತ್ತಲ್ಪಡುವನು' ಎಂದಾಗಲೀ, 'ಮನುಷ್ಯ ಕುಮಾರನು ಎತ್ತಲ್ಪಟ್ಟನು' ಎಂದಾಗಲೀ ಹೇಳಿದ್ದರೇ ಸರಿಹೋಗುತ್ತಿತ್ತು. ಹಾಗಲ್ಲದೇ ವಾಕ್ಯವನ್ನು ಅಸಂಪೂರ್ಣವಾಗಿ 'ಎತ್ತಲ್ಪಡಬೇಕು' ಎಂದು ಬರೆಯುವುದು ಸರಿಯಾದ ಭಾಷಾ ವಿಧಾನವಲ್ಲ. ಆದರೂ ವಾಕ್ಯವನ್ನು ಸಂಪೂರ್ಣ ಮಾಡಿಕೊಳ್ಳುವುದಕ್ಕೆ **'ಮನುಷ್ಯ ಕುಮಾರನು ಎತ್ತಲ್ಪಟ್ಟನು'** ಎಂದು ಹೇಳಿಕೊಳ್ಳೋಣ. ಯಾವಾಗಲೋ ಗತದಲ್ಲಿ ಮನುಷ್ಯ ಕುಮಾರನಾಗಿ ಬಂದ ಏಸು ಮನುಷ್ಯ ಲೋಕದಿಂದ ಪರಲೋಕಕ್ಕೆ ಸೇರಿಹೋಗಿದ್ದಾನೆ ಆದ್ದರಿಂದ 'ಎತ್ತಲ್ಪಟ್ಟನು' ಎಂದು ಹೇಳಿಕೊಳ್ಳುವುದೇ ಸರಿಯಾದ ವಿಧಾನವಾಗುವುದು.

ಎತ್ತಲ್ಪಟ್ಟನು ಅಂದರೆ ಪ್ರತ್ಯಕ್ಷವಾಗಿ ಸ್ಥೂಲ ಅರ್ಥದ ಪ್ರಕಾರ ಮೇಲಕ್ಕೆ ಎತ್ತುವುದಲ್ಲ. ಮನುಷ್ಯರು ನಿವಾಸಿಸುವ ಇಹಲೋಕವಾದ ಭೂಲೋಕಕ್ಕಿಂತಲೂ ಉತ್ತಮವಾದುದು ಪರಮಪದವು ಅಥವಾ ಪರಲೋಕ ಎಂದು ಅನ್ನುತ್ತೇವೆ. ಉತ್ತಮವಾದುದು ಆದ್ದರಿಂದ ಭೂಲೋಕಕ್ಕಿಂತಲೂ ಉನ್ನತ ಸ್ಥಾನದಲ್ಲಿ ಇದೆಯೆಂದು ಅನ್ನುತ್ತಾರೆ. ಭೂಲೋಕದಲ್ಲಿ ಮರಣಿಸಿದವನು ಮೋಕ್ಷವನ್ನು (ಪರಲೋಕವನ್ನು) ಹೊಂದಿದರೆ ಅವನನ್ನು ಮೇಲಕ್ಕೆ ಹತ್ತಿ ಹೋಗಿದ್ದಾನೆಂದು ಹೇಳುತ್ತಿದ್ದೇವೆ. ವಾಸ್ತವವಾಗಿ ಯಾರೂ ಸ್ಥೂಲವಾಗಿ ಮೇಲೆ ಹೋಗುತ್ತಿಲ್ಲ. ಭಾವವನ್ನು ಅರ್ಥ ಮಾಡಿಕೊಳ್ಳುವ ನಿಮಿತ್ತ ಮೋಕ್ಷವು ಇಹಲೋಕಕ್ಕಿಂತಲೂ ಉನ್ನತವಾದುದು, ಆದ್ದರಿಂದ ಅದನ್ನು ಮೇಲೆ ಇದೆಯೆಂದು ಗೌರವ ಭಾವದಿಂದ ಹೇಳಿದ್ದಾರೆ ಹೊರತು ಮೋಕ್ಷವು ಎಲ್ಲೋ ಮೇಲಿಲ್ಲ. ಶರೀರದೊಳಗು, ಶರೀರದ ಹೊರಗು ಅಣುವಣುವಿನಲ್ಲೂ ಪರಮಾತ್ಮ ವ್ಯಾಪಿಸಿದ್ದಾನೆ. **ಪರಮಾತ್ಮನಲ್ಲಿ ಜೀವಾತ್ಮ ಬೆರೆತು ಹೋಗುವುದನ್ನೇ ಜೀವಾತ್ಮ ಪರಲೋಕವನ್ನು ಹೊಂದುವುದೆಂದು ಹೇಳಬಹುದು. ಅದನ್ನೇ ನಿತ್ಯ ಜೀವನವನ್ನು ಹೊಂದುವುದೆಂದು ಕೂಡಾ ಹೇಳಬಹುದು.** ವಾಸ್ತವವು ಅಷ್ಟೇ ಹೊರತು ಇದಕ್ಕಿಂತ ಬೇರೆ ಅರ್ಥ ಏನೂ ಇಲ್ಲ. ಪರಲೋಕವನ್ನು ದೇವರ ರಾಜ್ಯವೆಂದು ಕೂಡಾ ಹೇಳುತ್ತಿದ್ದಾರೆ. 'ದೇವರಲ್ಲಿ ವಿಶ್ವಾಸವಿರುವವನು ಕೊನೆಗೆ ಕರ್ಮಗಳು ಇಲ್ಲದವನಾಗಿ ನಿತ್ಯ ಜೀವವನ್ನು ಹೊಂದುವನು' ಎಂದು ವಾಕ್ಯದಲ್ಲಿ ಕೂಡಾ ಹೇಳಿದ್ದಾರೆ. ನಿತ್ಯ ಜೀವನವಾದ ಪರಲೋಕವು ನೀನು ಎಲ್ಲಿರುವೆಯೋ ಅಲ್ಲೆ ಇದೆ. ಆದ್ದರಿಂದ ಯಾರಾದರೂ ಮೋಕ್ಷವನ್ನು ಹೊಂದುವವನು ಆತನ ಶರೀರದಲ್ಲಿರುವ ಪರಿಶುದ್ಧಾತ್ಮವಾದ ಪರಮಾತ್ಮನಲ್ಲಿ ಐಕ್ಯವಾಗಿ ಹೋಗುತ್ತಿದ್ದಾನೆ. ಅಷ್ಟೇ ಹೊರತು ಎಲ್ಲೋ ಮೇಲಕ್ಕೆಂದಾಗಲೀ, ಆಕಾಶದೊಳಗೆ ಹತ್ತಿ ಹೋಗುತ್ತಾನೆ ಎಂದಾಗಲೀ ಹೇಳುವುದು ತಪ್ಪಾಗುತ್ತದೆ.

**14) ಯೋಹಾನ್ ಸುವಾರ್ತೆ 3ನೇ ಅಧ್ಯಾಯ, 17ನೇ ವಚನ.**

**(17) ಲೋಕವು ತನ್ನ ಕುಮಾರನ ಮೂಲಕ ರಕ್ಷಣೆ ಹೊಂದುವು**

**ದಕ್ಕೇ ಹೊರತು, ಲೋಕಕ್ಕೆ ತೀರ್ಪು ನಿರ್ಣಯಿಸುವುದಕ್ಕೆ ದೇವರು ಆತನನ್ನು ಲೋಕಕ್ಕೆ ಕಳುಹಿಸಲಿಲ್ಲ.**

ಇಹಲೋಕವಾದ ಭೂಲೋಕದೊಳಗೆ ದೇವರು ತನ್ನ ಕುಮಾರನಾದ ಒಬ್ಬ ವ್ಯಕ್ತಿಯನ್ನು ಕಳುಹಿಸುತ್ತಾನೆ. ಆ ವ್ಯಕ್ತಿ ಮೂಲಕ ಮನುಷ್ಯರು ರಕ್ಷಣೆ ಹೊಂದುತ್ತಾರೇ ಹೊರತು ದೇವರ ಕುಮಾರನಾದವನು ಮನುಷ್ಯರಿಗೆ ತೀರ್ಪು ನಿರ್ಣಯಿಸುವುದಿಲ್ಲ. ದೇವರು ತನ್ನ ಕುಮಾರನಾಗಿ ಬಂದ ವ್ಯಕ್ತಿಯನ್ನು ಮನುಷ್ಯರಿಗೆ ರಕ್ಷಣೆ ನಿಮಿತ್ತ ಕಳುಹಿಸಿದ್ದಾನೆ ಹೊರತು, ತೀರ್ಪು ನಿರ್ಣಯಿಸುವುದಕ್ಕೆ ಕಳುಹಿಸಲಿಲ್ಲ. ದೇವರ ಬಳಿಯಿಂದ ಬಂದಿರುವ ವ್ಯಕ್ತಿಯ ವೊಂದು ಕರ್ತವ್ಯವು ಮನುಷ್ಯರಿಗೆ ದೈವಜ್ಞಾನವನ್ನು ಬೋಧಿಸಿ ಅವರ ಪಾಪಗಳಿಂದ ರಕ್ಷಣೆ ಹೊಂದುವಂತೆ ಮಾಡುತ್ತಾನೆ. ಹಾಗಲ್ಲದೇ ಮನುಷ್ಯರ ಪಾಪ ಪುಣ್ಯಗಳಿಗೆ ತೀರ್ಪು ನಿರ್ಣಯಿಸುವುದಕ್ಕೆ ಆತನು ಬರಲಿಲ್ಲ. ತೀರ್ಪು ನಿರ್ಣಯಿಸುವ ನಿಮಿತ್ತ ದೇವರು ತನ್ನ ಪ್ರತಿನಿಧಿಯನ್ನು ಭೂಮಿ ಮೇಲಕ್ಕೆ ಕಳುಹಿಸಲಿಲ್ಲ. ದೇವರು ಮನುಷ್ಯರಿಗೆ ರಕ್ಷಣೆ ನಿಮಿತ್ತವಾಗಿ ಬಂದಿದ್ದಾನೆ ಹೊರತು ತೀರ್ಪು ನಿರ್ಣಯಿಸುವುದಕ್ಕೆ ಬರಲಿಲ್ಲ. ಬೈಬಲ್ ಗ್ರಂಥದಲ್ಲಿ ಈ ವಾಕ್ಯವು ಬಹಳ ಮುಖ್ಯವಾದುದು ತೀರ್ಪು ನಿರ್ಣಯಿಸುವುದು ಎನ್ನುವ ಕೆಲಸವನ್ನು ಮನುಷ್ಯ ಮರಣಿಸಿದಾಗ ಶರೀರದಲ್ಲಿನ ಆತ್ಮವೇ ಮಾಡುತ್ತಿದೆ. ಮನುಷ್ಯರಿಗೆ ತೀರ್ಪು ನಿರ್ಣಯಿಸುವ ಕೆಲಸವನ್ನು ಆತ್ಮ ಮಾಡಿದರೆ, ದೇವರ ಬಳಿಯಿಂದ ಬಂದಿರುವವನು ಕರ್ಮಗಳಿಂದ ರಕ್ಷಣೆ ಹೊಂದುವ ಉಪಾಯವನ್ನು ತಿಳಿಸುತ್ತಾನೆ.

**15) ಯೋಹಾನ್ ಸುವಾರ್ತೆ 3ನೇ ಅಧ್ಯಾಯ 18ನೇ ವಚನ.**

**(18) ಆತನಲ್ಲಿ ವಿಶ್ವಾಸವಿಡುವವನಿಗೆ ತೀರ್ಪು ನಿರ್ಣಯಿಸಲ್ಪಡುವುದಿಲ್ಲ. ವಿಶ್ವಾಸವಿಲ್ಲದವನು ದೇವರ ಅದ್ವಿತೀಯ ಕುಮಾರನ ನಾಮದಲ್ಲಿ ವಿಶ್ವಾಸವಿಡಲಿಲ್ಲ. ಆದ್ದರಿಂದ ಅವನಿಗೆ ಇದಕ್ಕು ಮೊದಲೇ ತೀರ್ಪು ನಿರ್ಣಯಿಸಲಾಗುತ್ತದೆ.**

ಈ ವಾಕ್ಯದಲ್ಲಿ 'ಆತನಲ್ಲಿ ವಿಶ್ವಾಸವಿಡುವವನಿಗೆ' ಎಂದು ಹೇಳಿದ್ದಾರೆ. ಆತನು ಎಂದರೆ ಕಾಣಿಸದ ದೇವರು ಎಂದು ಅರ್ಥ ಮಾಡಿಕೊಳ್ಳಬಹುದು. ಅಥವಾ ದೇವರ ಬಳಿಯಿಂದ ಬಂದಿರುವ ಕಾಣಿಸುವ ದೇವರ ಪ್ರತಿನಿಧಿ ಆಗಬಹುದು. ಆದರೆ ಆ ವಾಕ್ಯದ ಕೊನೆಯಲ್ಲಿ 'ದೇವರ ಅದ್ವಿತೀಯ ಕುಮಾರನ ನಾಮದಲ್ಲಿ ವಿಶ್ವಾಸವಿಡದವನಿಗೆ' ಎಂದು ಹೇಳಲ್ಪಟ್ಟಿರುವುದರಿಂದ ದೇವರ ಬಳಿಯಿಂದ ಬಂದಿರುವ ದೇವರ ಪ್ರತಿನಿಧಿಯಾದ ಮನುಷ್ಯನ ರೂಪದಲ್ಲಿರುವ ವ್ಯಕ್ತಿಯನ್ನು ಕುರಿತು ಹೇಳಿದ್ದಾನೆಂದು ಅಂದುಕೊಳ್ಳಬಹುದು. ದೇವರು ಭೂಮಿ ಮೇಲೆ ಮನುಷ್ಯರಿಗೆ ಜ್ಞಾನವನ್ನು ತಿಳಿಸುವುದಕ್ಕೆ ಮನುಷ್ಯನ ಹಾಗೆ ಮಾರುವೇಷದಲ್ಲಿ ತಾನೇ ಬರುವನು. ಆದರೆ ಆ ವಿಷಯವು ಯಾರಿಗೂ ತಿಳಿಯದೆ ಇರುವಂತೆ ತನ್ನ **'ಅದ್ವಿತೀಯ ಕುಮಾರನು'** ಎಂದು ಒಂದು ಕಡೆ, **'ದೇವರ ಕುಮಾರನೆಂದು'** ಒಂದು ಕಡೆ. **'ಮನುಷ್ಯ ಕುಮಾರನೆಂದು'** ಮತ್ತೊಂದು ಕಡೆ ಹೇಳುತ್ತಾ ಬಂದಿದ್ದಾನೆ. ಹಾಗೆ ದೇವರ ಮಾರು ವೇಷವಾದ ಅವನನ್ನು ಹಿಂದೂಗಳು 'ಭಗವಂತನು' ಎಂದು ಕರೆದಿದ್ದಾರೆ. ಹಾಗೆ ಬಂದವನೆ ಕೃಷ್ಣನು ಎಂದು ಹೇಳುತ್ತಾ ಆತನು ಹೇಳಿರುವ ಭಗವದ್ಗೀತೆಯಲ್ಲಿ 'ಭಗವಾನುವಾಚ' ಎಂದು, ಕೃಷ್ಣನನ್ನು ಭಗವಂತನೆಂದು ಹೇಳಿದ್ದಾರೆ. ಇಲ್ಲಿ ಏಸಯ್ಯನಾಗಿ ಹುಟ್ಟಿರುವ ವ್ಯಕ್ತಿ ದೇವರ ಕುಮಾರನಾಗಿ ಮನುಷ್ಯ ಕುಮಾರನ ಹಾಗೆ ಕಾಣಿಸುತ್ತಿದ್ದರೂ ಆತನನ್ನು ಕೂಡಾ ಭಗವಂತನೆಂದು ಹೇಳದೆ ತಪ್ಪುವುದಿಲ್ಲ. ಹಿಂದೂಗಳು 'ಭಗವಂತನು', ಎಂದು ಪ್ರತ್ಯೇಕವಾಗಿ ಹೇಳುತ್ತಿದ್ದರೂ, ಕ್ರೈಸ್ಥವರು 'ಮನುಷ್ಯ ಕುಮಾರ'ನೆಂದು ಪ್ರತ್ಯೇಕವಾಗಿ ಹೇಳುತ್ತಿದ್ದಾರೆ. ಅಂತಿಮ ದೈವಗ್ರಂಥದಲ್ಲಿ ಕೂಡಾ **'ದೇವರು ತನ್ನ ಪ್ರತಿನಿಧಿಯನ್ನು ತನ್ನ ಆತ್ಮನನ್ನು ಊದಿ ಕಳುಹಿಸುತ್ತಾನೆ'** ಎಂದು 15 ನೇ ಸೂರಾ 28, 29, 30 ಆಯತ್‌ಗಳಲ್ಲಿ ಹೇಳಿದ್ದರೂ ಅವರು "ದೇವರು ಮನುಷ್ಯನಾಗಿ ಬರುವುದಿಲ್ಲ" ಎಂದು ಅನ್ನುತ್ತಿದ್ದಾರೆ. ದೇವರ ಪ್ರತಿನಿಧಿಯಾದ ಮನುಷ್ಯ ಕುಮಾರನಲ್ಲಿ ವಿಶ್ವಾಸ ಇಲ್ಲದವನಿಗೆ ಮೊದಲೇ ತೀರ್ಪು ನಿರ್ಣಯಿಸಲ್ಪಡುತ್ತದೆ.

**16) ಯೋಹಾನ್ ಸುವಾರ್ತೆ, 3ನೇ ಅಧ್ಯಾಯ, 19, 20, 21 ವಚನಗಳು.**

**(19) ಆ ತೀರ್ಪು ಇದೇ, ಬೆಳಕು ಲೋಕದೊಳಗೆ ಬಂದಿತು ಆದರೆ ತಮ್ಮ ಕ್ರಿಯೆಗಳು ಕೆಟ್ಟವಾದ್ದರಿಂದ ಮನುಷ್ಯರು ಬೆಳಕನ್ನು ಪ್ರೀತಿಸದೆ ಕತ್ತಲೆಯನ್ನೇ ಪ್ರೀತಿಸಿದರು.**

**(20) ದುಷ್ಕಾರ್ಯಗಳನ್ನು ಮಾಡುವ ಪ್ರತಿಯೊಬ್ಬನು ಬೆಳಕನ್ನು ದ್ವೇಷಿಸುವನು. ತನ್ನ ಕ್ರಿಯೆಗಳು ದುಷ್‌ಕ್ರಿಯೆಗಳಾಗಿ ಕಾಣಿಸದೆ ಇರುವಂತೆ ಬೆಳಕಿನ ಹತ್ತಿರಕ್ಕೆ ಬರುವುದಿಲ್ಲ.**

**(21) ಸತ್ಯವರ್ತನಾದರೆ ತನ್ನ ಕ್ರಿಯೆಗಳು ದೇವರ ಮೂಲವಾಗಿ ಮಾಡಲ್ಪಟ್ಟಿರುವವೆಂದು ಪ್ರತ್ಯಕ್ಷ ಪಡಿಸುವ ಹಾಗೆ ಬೆಳಕಿನ ಹತ್ತಿರಕ್ಕೆ ಬರುತ್ತಾನೆ.**

ಪರಮಾತ್ಮ ಯಾರಿಗೂ ತಿಳಿಯದ ಕಗ್ಗತ್ತಲೆಯಾಗಿ ಇದ್ದರೂ ಆತನಿಂದ ಸೃಷ್ಟಿಸಲ್ಪಟ್ಟಿರುವ ಆತ್ಮ ನಿಜವಾದ ಬೆಳಕಾಗಿದ್ದಾನೆ. ಪರಮಾತ್ಮನಿಂದ (ಪರಿಶುದ್ಧಾತ್ಮ ನಿಂದ) ಸೃಷ್ಟಿಸಲ್ಪಟ್ಟಿರುವ ಶರೀರಗಳಲ್ಲಿ ಬೆಳಕಾಗಿ ಇರುವ ಕಾಣಿಸದ ಆತ್ಮ ಮತ್ತು ಶರೀರದೊಂದಿಗೆ ಇದ್ದು ಮನುಷ್ಯರ ಮಧ್ಯದಲ್ಲಿ ಮನುಷ್ಯನಾಗಿ ತಿರುಗುವ ಆತ್ಮ ಎರಡೂ ಪರಿಶುದ್ಧಾತ್ಮಗೆ ಕುಮಾರರಾಗಿ ಇವೆ. ಶರೀರದಲ್ಲಿ ಕಾಣಿಸದ ಶರೀರಕ್ಕು ಬೆಳಕಾಗಿರುವ ಆತ್ಮನನ್ನು ಕುಮಾರನು ಎಂದರೂ, ಮನುಷ್ಯನ ಹಾಗೆ ಕಾಣಿಸುತ್ತಾ ಬರುವ ದೇವರ ಕುಮಾರನನ್ನು **ಅದ್ವಿತೀಯ ಕುಮಾರನು** ಎಂದು ಪ್ರತ್ಯೇಕಿಸಿ ಹೇಳಿದ್ದಾರೆ. ಅದ್ವಿತೀಯ ಕುಮಾರನಾದ ಏಸು ಭೂಲೋಕ ದೊಳಗೆ ಬಂದನು. ಆದರೂ ತಮ್ಮ ಕ್ರಿಯೆಗಳು ಅಂದರೇ ತಮ್ಮ ಕಾರ್ಯಗಳು ಕೆಟ್ಟವಾದ್ದರಿಂದ ಮನುಷ್ಯರು ಜ್ಞಾನ ಬೆಳಕಾದ ಏಸಯ್ಯನ ಬಳಿಗೆ ಬಾರದೆ ತಮಗೆ ಇಷ್ಟವಾದ ಅಜ್ಞಾನ ಕತ್ತಲೆಯನ್ನೇ ಪ್ರೀತಿಸುತ್ತಾ ಅದರ ಕಡೆಗೇ ಇದ್ದರು.

ಅಜ್ಞಾನಿಗಳಾದ ಪ್ರತಿ ಮನುಷ್ಯ ಲೋಕಕ್ಕೆ **ಜ್ಞಾನ ಬೆಳಕನ್ನು** ಕೊಡುವ ದೇವರ ಪ್ರತಿನಿಧಿಯಾದವನನ್ನು ದ್ವೇಷಿಸುತ್ತಿರುತ್ತಾರೆ. ದೈವಜ್ಞಾನವನ್ನು ಬೋಧಿಸುವ ದೇವರ ಪ್ರತಿನಿಧಿಯಾದ ಅವನ ಬಳಿಗೆ ಬಂದರೆ ತಮ್ಮ ಕೆಟ್ಟ ಕೆಲಸಗಳು ಹೊರಬೀಳುತ್ತವೆಂದು ತಿಳಿದ ಅಜ್ಞಾನಿಗಳು ತಮ್ಮ ಕಾರ್ಯಗಳು ಕಾಣಿಸದೆ ಇರುವಂತೆ ಬೆಳಕಿನ ಕಡೆಗೆ ಬರುವುದಿಲ್ಲ. ಭೂಲೋಕದಲ್ಲಿ ಮನುಷ್ಯನ ರೂಪವಾಗಿರುವ ದೇವರ ಬೆಳಕು ತಮ್ಮ ಕತ್ತಲೆಯ ಕೆಟ್ಟ ಕಾರ್ಯಗಳನ್ನು ಹೊರಗೆ ಕಾಣಿಸುವ ಹಾಗೆ ಮಾಡುವುದೆಂದು ಅದರಿಂದ ತಾವು ಭೂಲೋಕದಲ್ಲಿ ಕೆಟ್ಟವರಾಗಿ ಉಳಿದು ಹೋಗುತ್ತೇವೆಂದು ತಿಳಿದ ಅಜ್ಞಾನಿಗಳು ದೇವರ ಕುಮಾರನಾಗಿ ಭೂಮಿ ಮೇಲಕ್ಕೆ ಬಂದಿರುವವನ ಹತ್ತಿರಕ್ಕೆ ಬರುವುದಿಲ್ಲ. ಸತ್ಯವರ್ತನರಾಗಿ ದೇವರ ಜ್ಞಾನದ ಪ್ರಕಾರ ನಡೆದುಕೊಳ್ಳುತ್ತಾ ತಮ್ಮ ಕೆಲಸಗಳೆಲ್ಲವನ್ನು ಶರೀರದಲ್ಲಿನ ಆತ್ಮ ಮೂಲವಾಗಿ ನಡೆಯುತ್ತಿವೆಯೆಂದು ತಿಳಿದು, ತಮ್ಮ ಕಾರ್ಯಗಳು **ದೇವರ ಬೆಳಕಿನಲ್ಲಿ ಅಂದರೆ ಜ್ಞಾನ ಪದ್ಧತಿಯಾಗಿ** ಇರುವುದರಿಂದ ಅಂಥವರೆಲ್ಲರೂ ದೇವರ ಕುಮಾರನ ಹತ್ತಿರಕ್ಕೆ ಸೇರುತ್ತಾರೆ. ದೇವರಿಂದ ಅಂದರೆ ಆತ್ಮದಿಂದ ಕಾರ್ಯಗಳು ನಡೆಯುತ್ತಿವೆಯೆಂದು ತಿಳಿದವರು ಭೂಮಿ ಮೇಲೆ ಅಪರೂಪವಾಗಿ ಇದ್ದಾರೆ. ಆದ್ದರಿಂದ ದೇವರ ಪುತ್ರನು ಭೂಮಿ ಮೇಲಕ್ಕೆ ಬಂದಾಗ ಆತನ ಹತ್ತಿರಕ್ಕೆ ಬಂದವರು ಅಪರೂಪವಾಗಿಯೇ ಇರುತ್ತಾರೆ. ಅಂದರೆ ಸ್ವಲ್ಪವಾಗಿಯೇ ಇರುತ್ತಾರೆ. ನಡೆಯುತ್ತಿರುವ ಕಾರ್ಯಗಳೆಲ್ಲವೂ ತಾವೇ ಮಾಡುತ್ತಿದ್ದೇವೆಂದು ತಿಳಿಯುವವರು ಭೂಲೋಕವೆಲ್ಲಾ ತುಂಬಿರುವುದರಿಂದ ಅವರು ಭಗವಂತನಾದ ದೇವರ ಕುಮಾರನ ಹತ್ತಿರಕ್ಕೆ ಬರುವುದಿಲ್ಲ. ಬಾರದವರು ಅಷ್ಟಕ್ಕೆ ಸುಮ್ಮನಾಗದೇ ಯಾವಾಗಲೋ ಅಪರೂಪವಾಗಿ ಭೂಮಿ ಮೇಲಕ್ಕೆ ಬಂದಿರುವ ದೇವರ ಪ್ರತಿನಿಧಿಯಾಗಿ ಇರುವ ದೇವರ ಕುಮಾರನನ್ನು ಅಜ್ಞಾನ ಪ್ರಜೆಗಳು ದ್ವೇಷಿಸುವುದೇ ಅಲ್ಲದೆ, ಅವಮಾನಿಸುತ್ತಿರುತ್ತಾರೆ. ಅವಮಾನಿಸುವುದೇ ಅಲ್ಲದೆ ಅನೇಕ ಕಷ್ಟಗಳಿಗೆ ಗುರಿಯಾಗುವಂತೆ ಮಾಡುತ್ತಿರುತ್ತಾರೆ.

**17) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 19ನೇ ವಚನ.**

**(19) ತಂದೆ ಯಾವುದನ್ನು ಮಾಡುವುದು ಕುಮಾರನು ನೋಡುತ್ತಾನೋ, ಅದೇ ಹೊರತು ತನ್ನಷ್ಟಕ್ಕೆ ತಾನು ಯಾವುದನ್ನು ಮಾಡಲಾರನು. ಆತನು ಯಾವುಗಳನ್ನು ಮಾಡುತ್ತಾನೋ ಅವುಗಳನ್ನೇ ಕುಮಾರನು ಹಾಗೆಯೇ ಮಾಡುತ್ತಾನೆ.**

ಈ ವಾಕ್ಯದಲ್ಲಿ 'ತಂದೆ, ಕುಮಾರನು' ಎಂದು ಹೇಳುವುದೇ ಅಲ್ಲದೇ 'ತಂದೆ ಮಾಡುವ ಕೆಲಸಗಳನ್ನೇಕುಮಾರನು ಮಾಡುತ್ತಾನೆ' ಎಂದು ಇದೆ. ಮುಖ್ಯವಾಗಿ ತಂದೆ ಯಾರು, ಕುಮಾರನು ಯಾರು? ಎಂಬ ವಿಷಯವನ್ನು ನೋಡಬೇಕಾಗಿದೆ. ಏಕೆಂದರೆ ದೇವರಾದ ಪರಿಶುದ್ಧಾತ್ಮ ಒಬ್ಬನೇ ಇದ್ದಾನೆ. ಆದರೆ ಆತನಿಗೆ ಶಾಶ್ವತ ಕುಮಾರನು ಒಬ್ಬನೇ ಆದರೂ, ಕುಮಾರನೆಂಬ ಹೆಸರಿರುವವನು ಮತ್ತೊಬ್ಬನು ಆಗಾಗ ಅಪರೂಪವಾಗಿ ಭೂಮಿ ಮೇಲಕ್ಕೆ ಬರುತ್ತಿರುತ್ತಾನೆ. ಇಬ್ಬರ ಕುಮಾರರಲ್ಲಿ ಯಾರನ್ನು ಕುರಿತು ಯಾವಾಗ ಹೇಳಿದ್ದಾನೋಯೆಂದು ಗಮನಿಸಬೇಕಾದ ಅವಶ್ಯಕತೆ ಇದೆ. (ಯೋ 3–17) ವಾಕ್ಯದಲ್ಲಿ ದೇವರು ತನ್ನ ಕುಮಾರನನ್ನು ಅಂದರೆ ಭೂಮಿ ಮೇಲೆ ಮನುಷ್ಯನಾಗಿ ಬಂದ ಕುಮಾರನನ್ನು ಕುರಿತು ಹೇಳುತ್ತಾ **"ಲೋಕವು ತನ್ನ ಕುಮಾರನ ಮೂಲಕ ರಕ್ಷಣೆ ಪಡೆಯುವುದಕ್ಕೇ ಹೊರತು, ಲೋಕಕ್ಕೆ ತೀರ್ಪು ನಿರ್ಣಯಿಸುವುದಕ್ಕೆ ದೇವರು ಆತನನ್ನು ಲೋಕದೊಳಗೆ ಕಳುಹಿಸಲಿಲ್ಲ"** ಎಂದು ಹೇಳಿದ್ದಾನೆ. ಈಗ ಈ ವಾಕ್ಯದಲ್ಲಿ ಹೇಳಲ್ಪಟ್ಟಿರುವ ಕುಮಾರನು ಲೋಕದಲ್ಲಿನ ಮನುಷ್ಯರ ಶರೀರದಲ್ಲಿ ಬೆಳಕಾಗಿ ಆತ್ಮವಾಗಿ ಇರುವ ಕುಮಾರನನ್ನು ಕುರಿತು ಹೇಳುತ್ತಿದ್ದಾರೆ. ಆತ್ಮ ಎಲ್ಲರ ಶರೀರಗಳಲ್ಲಿ **'ಚೈತನ್ಯ'** ಎಂಬ ಬೆಳಕು ನೀಡುತ್ತಾ ಭೂಮಿ ಮೇಲೆ ಶಾಶ್ವತವಾಗಿ ಇದ್ದಾನೆ. ಈಗ ಆತ್ಮವಾಗಿರುವ ಕುಮಾರನನ್ನು ಕುರಿತು (ಯೋ 5–19) ವಾಕ್ಯದಲ್ಲಿ ಹೇಳಿದ್ದಾರೆ. ಇದನ್ನು ಅನುಸರಿಸಿ ಮುಖ್ಯವಾಗಿ ವಾಕ್ಯವನ್ನು ಓದುವಾಗ ಪರಿಶುದ್ಧಾತ್ಮನಾದ ದೇವರು ತನಗಿರುವ ಇಬ್ಬರು ಕುಮಾರರಲ್ಲಿ ಯಾವ ಕುಮಾರನನ್ನು ಕುರಿತು ವಾಕ್ಯದಲ್ಲಿ ಹೇಳಿದ್ದಾರೆ? ಎಂದು ನೋಡಬೇಕು.

ಈ ವಾಕ್ಯದಲ್ಲಿ ತನ್ನ ಶಾಶ್ವತ ಕುಮಾರನಾದ ಆತ್ಮವೊಂದರ ವಿಷಯವನ್ನು ಹೇಳುತ್ತಾ ಪರಿಶುದ್ಧಾತ್ಮ ಯಾವುದನ್ನು ಮಾಡುವುದೋ ಆತ್ಮ ಕೂಡಾ ಅದೇ ಮಾಡುವುದೆಂದೂ, ಆತ್ಮ ತನ್ನಷ್ಟಕ್ಕೆ ತಾನು ಯಾವುದನ್ನೂ ಮಾಡದೆ ತಂದೆ ಮಾಡಿರುವ ಕಾರ್ಯಗಳನ್ನೆ ವಾರಸತ್ವವಾಗಿ ಮಾಡುತ್ತಿದ್ದಾನೆ ಎಂದು ಹೇಳಿದ್ದಾರೆ.

**18) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 20ನೇ ವಚನ.**

**(20) ತಂದೆ ಕುಮಾರನನ್ನು ಪ್ರೇಮಿಸುತ್ತಾ, ತಾನು ಮಾಡುವ ಕಾರ್ಯ ಗಳೆಲ್ಲವನ್ನು ಆತನಿಗೆ ತಿಳಿಸುತ್ತಿದ್ದಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ. ಮತ್ತು ನೀವು ಆಶ್ಚರ್ಯಪಡುವ ಹಾಗೆ ಇವುಗಳಿಗಿಂತಲೂ ಮಹತ್ತರವಾದ ಕಾರ್ಯಗಳನ್ನು ಆತನಿಗೆ ತಿಳಿಸುತ್ತಾನೆ.**

**"ಪರಮಾತ್ಮನಾದ ಪರಿಶುದ್ಧಾತ್ಮ ತನ್ನ ಕುಮಾರನಾದ ಆತ್ಮನನ್ನು ಪ್ರೇಮಿಸುತ್ತಾ ತಾನು ಮಾಡುವ ಕೆಲಸಗಳೆಲ್ಲವನ್ನು ಆತ್ಮಕ್ಕೆ ತಿಳಿಸುತ್ತಿದ್ದಾನೆಂದು ನಾನು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ"** ಎಂದು ಯಾರು ಹೇಳಿದ್ದಾರೆಂದು ನಾವು ಪ್ರಶ್ನಿಸಿಕೊಂಡು ನೋಡಿದರೆ ದೇವರ ಎರಡನೆಯ ಕುಮಾರನಾದ ಏಸು ಈ ವಿಷಯವನ್ನು ತನ್ನ ಶಿಷ್ಯರಿಗೆ ಭೂಮಿ ಮೇಲೆ ತಾನಿದ್ದಾಗ ತಿಳಿಸಿದ್ದಾನೆ. ದೇವರ ಕುಮಾರನು ಮನುಷ್ಯನಾಗಿ ಭೂಮಿ ಮೇಲೆ ಪ್ರತ್ಯಕ್ಷವಾಗಿ ಇದ್ದರೂ ಆತನನ್ನು ಇಂಥವನೆಂದು ಗ್ರಹಿಸುವವರು ಇರುವುದಿಲ್ಲ. ಆತನು ಯಾರಾಗಿರುವುದು ಗ್ರಹಿಸದೆ ಹೋಗಿರುವುದಲ್ಲದೇ ಆತನನ್ನು ಅನೇಕ ಬಾಧೆಗಳಿಗೆ ಗುರಿ ಮಾಡಿ, ಅವಮಾನಿಸಿ ಆತನ ಮರಣಕ್ಕೆ ಕಾರಣರಾದ ಮನುಷ್ಯರು ಇದ್ದಾರೆ. ಅಂಥವರ ಮಧ್ಯದಲ್ಲಿ ಏಸು ಎಂಬ ಹೆಸರು ಹೊಂದಿರುವ ದೇವರ ಅದ್ವಿತೀಯ ಕುಮಾರನು ಇನ್ನೂ ಈ ರೀತಿಯಾಗಿ ಹೇಳುತ್ತಿದ್ದಾನೆ. ಅದೇನೆಂದರೇ! **"ನೀವು ಆಶ್ಚರ್ಯಪಡುವ ಹಾಗೆ ಇವುಗಳಿಗಿಂತಲೂ ಮಹತ್ತರವಾದ ಕಾರ್ಯಗಳನ್ನು ಆತನಿಗೆ (ಆತ್ಮಕ್ಕೆ) ತಿಳಿಸುತ್ತಿದ್ದೇನೆ"** ಎಂದು ಹೇಳಿದನು. ದೇವರು

ಆತ್ಮಕ್ಕೆ ಜೀವಿಯನ್ನು ಪಾಲಿಸುವುದಕ್ಕೆ ಆದೇಶವನ್ನು ಕೊಡುವುದಲ್ಲದೇ ಅದಕ್ಕಿಂತಲೂ ದೊಡ್ಡ ಕಾರ್ಯಗಳನ್ನು ಕೂಡಾ ಹೇಳಿದ್ದಾನೆ. ಅವು ಏನೆಂದರೇ! ಈಗ ನೋಡೋಣ.

**19) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 21, 22, 23ನೇ ವಚನಗಳು.**

**(21) ತಂದೆ ಮೃತರನ್ನು ಹೇಗೆ ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಕುಮಾರನೂ ತನಗೆ ಇಷ್ಟ ಬಂದವರನ್ನು ಬದುಕಿಸುತ್ತಾನೆ.**

**(22) ತಂದೆ ಯಾರಿಗೂ ತೀರ್ಪು ನಿರ್ಣಯಿಸುವುದಿಲ್ಲ ಆದರೆ, ತೀರ್ಪು ನಿರ್ಣಯಿಸುವುದಕ್ಕೆ ಸರ್ವಾಧಿಕಾರವನ್ನು ಕುಮಾರನಿಗೆ ಒಪ್ಪಿಸಿದ್ದಾನೆ.**

**(23) ತಂದೆಯನ್ನು ಘನಪಡಿಸುವ ಹಾಗೆ ಎಲ್ಲರೂ ಕುಮಾರನನ್ನು ಘನಪಡಿಸಬೇಕೆಂದು, ಕುಮಾರನನ್ನು ಘನಪಡಿಸದವನು ಆತನನ್ನು ಕಳುಹಿಸಿರುವ ತಂದೆಯನ್ನು ಘನಪಡಿಸುವುದಿಲ್ಲ.**

ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೇ! ಖುರ್‌ಆನ್ ಗ್ರಂಥದಲ್ಲಿ **'ಇಬ್ಬರು ಅಲ್ಲಾಹ್‌ರನ್ನು'** ಕುರಿತು ಬರೆದಿದ್ದರೂ ಮುಸ್ಲೀಮರು ಕಂಡುಹಿಡಿಯ ಲಾರದೆ ಹೋಗಿದ್ದಾರೆ. ಹಾಗೆಯೇ ಬೈಬಲ್ ಗ್ರಂಥದಲ್ಲಿ **'ಇಬ್ಬರು ಕುಮಾರರನ್ನು'** ಕುರಿತು ಹೇಳಿದರೂ ಕ್ರೈಸ್ಥವರು ಗ್ರಹಿಸಲಾರದೆ ಒಬ್ಬನೇ ಕುಮಾರನನ್ನು ಹೇಳಿಕೊಳ್ಳುತ್ತಿದ್ದಾರೆ. ಈ ಮೂರು ವಾಕ್ಯಗಳಲ್ಲಿ 'ಕುಮಾರನು' ಎಂಬ ಪದವು ಬಂದಿದೆ. ಆದರೆ ಇಲ್ಲಿ ಹೇಳಿರುವುದು ಇಬ್ಬರು ಕುಮಾರರಲ್ಲಿ ಯಾವ ಕುಮಾರನನ್ನು ಕುರಿತು ಹೇಳಿದ್ದಾರೋ ನೋಡಬೇಕಾಗಿದೆ. ಒಂದು ಬಾರಿ ಒಬ್ಬ ಕುಮಾರನನ್ನೇ ಹೇಳುವುದರಿಂದ ಎರಡನೆ ಕುಮಾರನು ಇದ್ದಾನೆನ್ನುವ ವಿಷಯವನ್ನು ಬಹಳಜನ ಗ್ರಹಿಸಲಾರದೆ ಹೋಗುತ್ತಿದ್ದಾರೆ. **(ಯೋ 3–17)**

**“ತನ್ನ ಕುಮಾರನು ಲೋಕಕ್ಕೆ ರಕ್ಷಣೆಯ ನಿಮಿತ್ತವೇ ಬಂದಿದ್ದಾನೆ ಹೊರತು, ತೀರ್ಪು ನಿರ್ಣಯಿಸುವುದಕ್ಕೆ ಕಳುಹಿಸಲಿಲ್ಲ”** ಎಂದು ಹೇಳಿರುವ ದೇವರು (ಯೋ 5–22) ರಲ್ಲಿ **“ತೀರ್ಪು ನಿರ್ಣಯಿಸುವ ಅಧಿಕಾರ ಕುಮಾರನಿಗೆ ಒಪ್ಪಿಸಿದ್ದಾನೆ”** ಎಂದು ಹೇಳಿದ್ದಾರೆ. ಇದನ್ನು ಅನುಸರಿಸಿ ದೇವರ ಇಬ್ಬರು ಕುಮಾರರನ್ನು ತಪ್ಪದೇ ಗ್ರಹಿಸಬೇಕಾಗಿದೆ.

ದೇವರು ಆತ್ಮವಾದ ಕುಮಾರನಿಗೆ ತಂದೆಯಾದ ಪರಿಶುದ್ಧಾತ್ಮ ‘ಮೃತರನ್ನು ಹೇಗೆ ಎಬ್ಬಿಸಿ ಬದುಕಿಸುತ್ತಾನೋ’ ಹಾಗೆಯೇ ಕುಮಾರನು ‘ಮೃತರನ್ನು ಎಬ್ಬಿಸಿ ಬದುಕಿಸುತ್ತಾನೆ’ ಎಂದು ಹೇಳಿದ್ದಾನೆ. ಇದನ್ನು ಅನುಸರಿಸಿ ಶರೀರಗಳಲ್ಲಿ ಬೆಳಕಾಗಿ ಕಾಣಿಸದೆ ಇರುವ ಆತ್ಮರೂಪವಾಗಿರುವ ಕುಮಾರನು ತಂದೆ ಹೇಗೆ ಸತ್ತವರನ್ನು ಪುನಃ ಪುನರ್ಜನ್ಮ ಕೊಟ್ಟು ಬದುಕಿಸುತ್ತಿದ್ದಾನೋ ಹಾಗೆಯೇ ಆತ್ಮವಾಗಿ ಇರುವವನು ಮನುಷ್ಯ ಸತ್ತ ನಂತರ ಅವನಿಗೆ ಗತ ಜನ್ಮದಲ್ಲಿ ಮಾಡಿಕೊಂಡಿರುವ ಪಾಪಪುಣ್ಯಗಳನ್ನು ಅನುಸರಿಸಿ ಮುಂದಿನ ಜನ್ಮದಲ್ಲಿ ಅನುಭವಿಸಬೇಕಾಗಿರುವವುಗಳನ್ನು ನಿರ್ಣಯಿಸಿ ಪುನಃ ಹುಟ್ಟಿಸುತ್ತಿದ್ದಾನೆ. ‘ತಂದೆಯ ಹಾಗೆ ಕುಮಾರನು ತನಗೆ ಇಷ್ಟವಾದವರನ್ನು ಬದುಕಿಸುತ್ತಾನೆ’ ಎಂದಿದ್ದಾರೆ. **‘ತನಗಿಷ್ಟವಾದವರು’** ಅಂದರೆ ತನ್ನ ದೃಷ್ಠಿಯಲ್ಲಿ **‘ಕರ್ಮ ನಿರ್ಣಯಿಸಲ್ಪಟ್ಟವರನ್ನು’** ಎಂದು ಅರ್ಥ. ಕರ್ಮವನ್ನು ಆತ್ಮವೇ ನಿರ್ಣಯಿಸುತ್ತಿದೆ. ಆದ್ದರಿಂದ ಆತ್ಮವೇ ಮನುಷ್ಯನನ್ನು ಪುನಃ ಹುಟ್ಟುವಂತೆ ಮಾಡುತ್ತಿದೆ. ಹುಟ್ಟಿದವನನ್ನು ಕರ್ಮವನ್ನು ಅನುಭವಿಸುವಂತೆ ಮಾಡುವವನು ಕೂಡಾ ಆತ್ಮವೇ ಆಗಿರುವುದರಿಂದ ‘ತಾನು ತೀರ್ಪು ನಿರ್ಣಯಿಸಿರುವ ಅವನನ್ನು ಪುನಃ ಬದುಕಿಸುತ್ತಾನೆ’ ಎಂದು ಹೇಳಿದ್ದಾರೆ. ಪುನಃ ಬದುಕಿಸುವುದು ಎಂದರೆ ಪುನರ್ಜನ್ಮ ಉಂಟುಮಾಡುವುದು.

ಸೃಷ್ಠಿಕರ್ತನಾದ ಪರಿಶುದ್ಧಾತ್ಮನನ್ನು ಎಲ್ಲರೂ ದೊಡ್ಡ ದೇವರೆಂದು ಘನವಾಗಿ ಹೇಳಿಕೊಂಡ ಹಾಗೆ ತನ್ನ ಕುಮಾರನಾದ ಆತ್ಮನನ್ನು ಕೂಡಾ ಎಲ್ಲರೂ ದೊಡ್ಡದಾಗಿ ಹೇಳಿಕೊಳ್ಳುವ ಹಾಗೆ ಸತ್ತವರನ್ನು ತೀರ್ಪು ನಿರ್ಣಯಿಸಿ

ಪುನಃ ಬದುಕಿಸುವ ಹಾಗೆ ದೇವರು ಮಾಡಿದ್ದಾನೆ. ಮನುಷ್ಯ ಸತ್ತುಹೋದ ಕ್ಷಣವೇ ಆತನ ಶರೀರದಲ್ಲಿ ಬೆಳಕಾಗಿರುವ ಆತ್ಮ ಸತ್ತುಹೋದ ಮನುಷ್ಯ ಮಾಡಿಕೊಂಡಿರುವ ಪಾಪಪುಣ್ಯಗಳನ್ನು ಅನುಸರಿಸಿ ಎರಡನೆ ಜನ್ಮದಲ್ಲಿ ಜೀವಿಯು ಅನುಭವಿಸಬೇಕಾಗಿರುವ ಕರ್ಮಗಳನ್ನು ನಿರ್ಣಯಿಸಿ ತಕ್ಷಣವೇ ಎರಡನೆಯ ಜನ್ಮ ಎತ್ತುವ ಹಾಗೆ ಮಾಡುತ್ತಿದ್ದಾನೆ. ಮನುಷ್ಯ ಮಾಡಿಕೊಂಡಿರುವ ಕರ್ಮಗಳನ್ನು ಅನುಸರಿಸಿ ಎರಡನೆ ಜನ್ಮವನ್ನು ನಿರ್ಣಯಿಸಿ ಮನುಷ್ಯನನ್ನು ಪುನಃ ಹುಟ್ಟುವಂತೆ ಮಾಡುತ್ತಿದ್ದಾನೆ. ಆತ್ಮ ಇಷ್ಟು ದೊಡ್ಡ ಕೆಲಸವನ್ನು ಮಾಡುತ್ತಿದ್ದಾನೆಂದು ತಿಳಿಯದವರು ಆತ್ಮನನ್ನು ದೊಡ್ಡ ಭಾವದಿಂದ ನೋಡುವುದಿಲ್ಲ. ಆತ್ಮನನ್ನು ಗೌರವಿಸದವನು ಆತ್ಮನನ್ನು ಕಳುಹಿಸಿರುವ ದೇವರನ್ನು ಕೂಡಾ ಗೌರವದಿಂದ ನೋಡುವುದಿಲ್ಲ. ಅಂತಹ ಅಜ್ಞಾನ ಜೀವಿಯ ಶರೀರದಲ್ಲಿನ ಆತ್ಮನನ್ನಾಗಲೀ, ಶರೀರದ ಹೊರಗೆ ಒಳಗೆ ಇರುವ ಪರಮಾತ್ಮನನ್ನಾಗಲೀ ಗೌರವ ಭಾವದಿಂದ ನೋಡುವುದಿಲ್ಲ.

**20) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 24ನೇ ವಚನ.**

**(24) ನನ್ನ ಮಾತು ಕೇಳಿ ನನ್ನನ್ನು ಕಳುಹಿಸಿದವನಲ್ಲಿ ವಿಶ್ವಾಸವಿಡುವವನು ನಿತ್ಯ ಜೀವವಿರುವವನು. ಅವನು ತೀರ್ಪಿನೊಳಗೆ ಬಾರದೆ ಮರಣದಿಂದ ಜೀವದೊಳಗೆ ದಾಟಿದ್ದಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

ಇದಕ್ಕೂ ಮೊದಲು ಹೇಳಿರುವ 21, 22, 23 ವಾಕ್ಯಗಳಲ್ಲಿ "ಶರೀರದಲ್ಲಿ ಚೈತನ್ಯವಾಗಿ ಇರುವ ಆತ್ಮನನ್ನು" ಕುರಿತು ಹೇಳಿದ್ದಾರೆ. ಈಗ 24ನೇ ವಾಕ್ಯದಲ್ಲಿ ಮನುಷ್ಯನ ಆಕಾರದಲ್ಲಿ ಬಂದಿರುವ ಅದ್ವಿತೀಯ ಕುಮಾರನಾದ ಏಸು ಶರೀರದಲ್ಲಿನ ಆತ್ಮನನ್ನು ಕುರಿತು ಹೇಳಿ, ಪರಿಶುದ್ಧಾತ್ಮನಾದ ದೇವರು ಆತ್ಮಕ್ಕೆ ಕೊಟ್ಟಿರುವ ಅಧಿಕಾರಗಳನ್ನು ಕುರಿತು ಹೇಳಿ, ನಂತರ ತನ್ನನ್ನು ಕಳುಹಿಸಿರುವ ಪರಿಶುದ್ಧಾತ್ಮನನ್ನು ವಿಶ್ವಾಸಿಸಿದವನು ತಪ್ಪದೆ ಮೋಕ್ಷವನ್ನು ಹೊಂದುತ್ತಾನೆಂದು, ಆತನು ಮರಣ ಹೊಂದಿದ ತಕ್ಷಣವೇ ತೀರ್ಪಿನೊಳಗೆ ಬರುವುದಿಲ್ಲವೆಂದು, ಆತನು ನೇರವಾಗಿ ಮೋಕ್ಷವನ್ನು ಸೇರುತ್ತಾನೆಂದು ಹೇಳಿದ್ದಾನೆ.

**21) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 26ನೇ ವಚನ.**

**(26) ತಂದೆ ಹೇಗೆ ತನ್ನಷ್ಟಕ್ಕೆ ತಾನೇ ಜೀವ ಇರುವವನಾಗಿ ಇದ್ದಾನೋ ಹಾಗೆಯೇ ಕುಮಾರನು ತನ್ನಷ್ಟಕ್ಕೆ ತಾನೇ ಜೀವ ಇರುವವನಾಗಿ ಇರುವುದಕ್ಕೆ ಕುಮಾರನಿಗೆ ಅಧಿಕಾರವನ್ನು ಅನುಗ್ರಹಿಸಿದ್ದಾನೆ.**

ಪರಿಶುದ್ಧಾತ್ಮನಾದ ದೇವರು ಎಂದಿಗೂ ನಿತ್ಯಜೀವ ಇರುವವನಾಗಿ ಇದ್ದಾನೆ. ಪರಮಾತ್ಮ ಹೇಗೆ ಶಾಶ್ವತವಾಗಿ ಇರುವವನೋ ಹಾಗೆಯೇ ಆತನ ಕುಮಾರನಾಗಿ ಹೇಳಲ್ಪಡುತ್ತಿರುವ ಆತ್ಮ ಕೂಡಾ ಎಂದಿಗೂ ಶಾಶ್ವತವಾಗಿ ಇರುವ ಹಾಗೆ ಆತ್ಮಕ್ಕೆ ಅಧಿಕಾರ ಕೊಡಲಾಗಿದೆ. ಅಧಿಕಾರವನ್ನು ಕೊಟ್ಟವನು ಆತ್ಮಕ್ಕೆ ತಂದೆಯಾದ ಪರಿಶುದ್ಧಾತ್ಮ ಎಂದು ತಿಳಿಯಬೇಕು. ಆದ್ದರಿಂದ ಶರೀರದಲ್ಲಿನ ಜೀವಿಯೊಂದಿಗೆ ಆತ್ಮನನ್ನು ಹೋಲಿಸಿದರೆ ಜೀವಿಯು ನಾಶ ಹೊಂದುವವನು, ಆತ್ಮ ನಾಶ ಹೊಂದದವನೆಂದು ಹೇಳುತ್ತಾ ಜೀವಿಯನ್ನು ಕ್ಷರನೆಂದು, ಆತ್ಮನನ್ನು ಅಕ್ಷರನೆಂದು ಪ್ರಥಮ ದೈವಗ್ರಂಥದಲ್ಲಿ ಹೇಳಿದ್ದಾರೆ. ಕ್ಷರನು ಎಂದರೇ ನಾಶ ಹೊಂದುವವನೆಂದು, ಅಕ್ಷರನು ಎಂದರೆ ನಾಶ ಇಲ್ಲದವನೆಂದು ಅರ್ಥ.

**22) ಯೋಹಾನ್ ಸುವಾರ್ತೆ 5ನೇ ಆಧ್ಯಾಯ, 37ನೇ ವಚನ.**

**(37) ನೀವು ಯಾವ ಕಾಲದಲ್ಲಾದರೂ ಆತನ ಸ್ವರವನ್ನು ಕೇಳಲಿಲ್ಲ, ಆತನ ಸ್ವರೂಪವನ್ನು ನೋಡಲಿಲ್ಲ.**

ಇಲ್ಲಿ **'ಆತನು'** ಎಂದು ಹೇಳಲ್ಪಟ್ಟಿರುವವನು ಪರಮಾತ್ಮನಾದ **'ಪರಿಶುದ್ಧಾತ್ಮ'** ಎಂದು ತಿಳಿಯಬೇಕು. ಪರಮಾತ್ಮ ಎನ್ನಲ್ಪಡುವ ದೇವರಿಗೆ ರೂಪವಿಲ್ಲ, ಹಾಗೆಯೇ ಹೆಸರು ಇಲ್ಲ. ಹಾಗೆಯೇ ಆತನಿಗೆ ಕೆಲಸವಿಲ್ಲ. ಅಂತಹ ದೇವರನ್ನು ಯಾರೂ ನೋಡಲಿಲ್ಲ. ಆತನಿಗೆ ರೂಪವೇ ಇಲ್ಲದಿರುವಾಗ ಹೇಗೆ ನೋಡಬಲ್ಲರು? ಆದ್ದರಿಂದ ಪ್ರಪಂಚದಲ್ಲಿನ ಮನುಷ್ಯರು ದೇವರನ್ನು ಎಂದೂ

ನೋಡಲಿಲ್ಲ. ದೇವರು ಕೆಲಸ ಮಾಡದವನು ಆಗಿರುವುದರಿಂದ ಆತನು ಯಾರೊಂದಿಗೂ ಮಾತನಾಡುವವನಲ್ಲ. ಇದನ್ನು ಅನುಸರಿಸಿ ದೇವರನ್ನು ಬದುಕಿರುವ ಮನುಷ್ಯ ಯಾರೂ ನೋಡಲಿಲ್ಲವೆಂದು ಹೇಳಬಹುದು. ಯಾರಾದರೂ ನಾನು ದೇವರನ್ನು ನೋಡಿದ್ದೇನೆ ಎಂದು ಹೇಳಿದರೆ ಅವನು ಪೂರ್ತಿ ಅಸತ್ಯವನ್ನು ಹೇಳಿದಂತೆ ಲೆಕ್ಕಿಸಬೇಕು. ದೇವರು ಕಾಣಿಸುವವನು ಅಲ್ಲ ಹಾಗೆಯೇ ಕೇಳಿಸುವವನು ಅಲ್ಲ.

**23) ಯೋಹಾನ್ ಸುವಾರ್ತೆ 5ನೇ ಅಧ್ಯಾಯ, 38ನೇ ವಚನ.**

## (38) ಆತನು ಯಾರನ್ನು ಕಳುಹಿಸಿದ್ದಾನೋ ಆತನನ್ನು ನೀವು ನಂಬಲಿಲ್ಲ, ಆದಕಾರಣ ನಿಮ್ಮಲ್ಲಿ ಆತನ ವಾಕ್ಯವು ನಿಲ್ಲಲಿಲ್ಲ.

ಮೊದಲ ಸೃಷ್ಟಿಕರ್ತನಾದ ಪರಮಾತ್ಮ ಅಥವಾ ಪರಿಶುದ್ಧಾತ್ಮ ಕೆಲಸ ಮಾಡದವನಾದರೂ ತನಗಂತೂ ಕೆಲವು ಕೆಲಸಗಳಿವೆ. ಆದರೂ ಆತನು ಕೆಲಸಗಳು ಮಾಡುವವನಲ್ಲ. ಆದರೆ ಆತನು ಮಾಡಬೇಕಾಗಿರುವ ಕೆಲಸಗಳನ್ನು ಮಾಡುವುದಕ್ಕೆ ಪರಮಾತ್ಮನಾದ ದೇವರು ತನ್ನ ದೂತರನ್ನು ನೇಮಿಸಿಕೊಂಡಿದ್ದಾನೆ. ದೇವರ ಪಾಲನೆಯಲ್ಲಿ ಭಾಗವಾಗಿರುವ ಕೋಟ್ಯಾದಿ ಕೋಟಿ ದೇವರ ದೂತರು ದೇವರು ಮಾಡಬೇಕಾಗಿರುವ ಪ್ರತಿ ಕಾರ್ಯವನ್ನು ಮಾಡುತ್ತಾ, ದೇವರಿಗೆ ಕೆಲಸವಿಲ್ಲದಂತೆ ಮಾಡುತ್ತಿದ್ದಾರೆ. ದೇವರು ಕೆಲಸ ಮಾಡದವನಾಗಿದ್ದರೂ ಆತನು ಮಾಡಬೇಕಾಗಿರುವ ಕೆಲಸಗಳೆಲ್ಲವೂ ಆತನ ಸೇವಕರಾದ ದೂತರ ಮುಖಾಂತರ ನಡೆದು ಹೋಗುತ್ತಿವೆ. ಪರಮಾತ್ಮ ಮುಖ್ಯವಾಗಿ ಮಾಡಬೇಕಾಗಿರುವ ಕೆಲಸ ಒಂದಿದೆ. ಅದೇ ದೇವರು ಸ್ವತಃವಾಗಿ ಜ್ಞಾನವನ್ನು ಬೋಧಿಸಬೇಕಾಗಿದೆ. ಆದರೆ ಆ ಕೆಲಸವನ್ನು ದೇವರು ಹೊರತುಪಡಿಸಿ ದೇವದೂತರು ಮಾಡುವುದು ಅಲ್ಲ. **'ದೇವರ ಜ್ಞಾನವನ್ನು ದೇವರೇ ಹೇಳುವನು ಎಂದು, ದೇವರ ಜ್ಞಾನವು ದೇವರಿಗೆ ಹೊರತುಪಡಿಸಿ ಯಾವ ಮಾನವನಿಗೂ ತಿಳಿಯದೆಂದು, ಯಾರಿಗೂ ತಿಳಿಯದೆಂದು'** ಅಂತಿಮ ದೈವಗ್ರಂಥದಲ್ಲಿ ಕೂಡಾ ಹೇಳಿದ್ದಾರೆ. ಹಾಗಿರುವಾಗ ಜ್ಞಾನವನ್ನು ಬೋಧಿಸುವುದು ಯಾರೂ ಮಾಡಲಾರದ

ಕೆಲಸವಾಗಿರುವುದರಿಂದ ದೇವರೇ ತಾನಲ್ಲ ಎನ್ನುವಂತೆ ಮಾರುವೇಷದಲ್ಲಿ ಬಂದು ಹೇಳಿ ಹೋಗುತ್ತಿದ್ದಾನೆ. ಮಾರುವೇಷದಲ್ಲಿ ದೇವರೇ ಹೇಳಿದರೂ, ಆ ಬಂದಿರುವ ವೇಷದಲ್ಲಿ ಯಾರಿರುವುದು ತಿಳಿಯದೆ ಹೋಗುವುದರಿಂದ ದೇವರು ಹೇಳದಂತೇ ಇರುತ್ತದೆ. ದೇವರು ತನ್ನ ಜ್ಞಾನವನ್ನು ತಾನೇ ಹೇಳಿದರೂ, ಅದು ದೇವರು ಹೇಳದಂತೆ ಬೆಳಕಿಗೆ ಬರುತ್ತಿಲ್ಲ. ಆದ್ದರಿಂದ ದೇವರು ವಿವೇಕವಂತನು ಆಗಿರುವುದರಿಂದ ತನ್ನನ್ನು ಯಾರೂ ಗುರುತು ಹಿಡಿಯದ ಹಾಗೆ **'ಭಗವಂತನು'** ಎಂಬ ಮಾರುವೇಷದಲ್ಲಿ ಬಂದು ಜ್ಞಾನವನ್ನು ಹೇಳಿ ಹೋಗುತ್ತಿದ್ದಾನೆ.

ದೇವರು ಸ್ವತಃವಾಗಿ ಮಾರುವೇಷದಲ್ಲಿ ಭೂಮಿ ಮೇಲಕ್ಕೆ ಮನುಷ್ಯನ ಹಾಗೆ ಬಂದು ಜ್ಞಾನವನ್ನು ಬೋಧಿಸಿ ಹೋದರೂ ಆ ವಿಷಯವನ್ನು ಯಾರೂ ತಿಳಿಯದಂತಿರುವುದಕ್ಕೆ ದೇವರು ತನ್ನ ಬಳಿಯಿಂದ ಪ್ರತ್ಯೇಕವಾದ ಮನುಷ್ಯನನ್ನು ಕಳುಹಿಸುತ್ತಾನೆ. 'ದೇವರ ಬಳಿಯಿಂದ ಬಂದವನೇ ದೇವರ ಜ್ಞಾನವನ್ನು ಬೋಧಿಸುತ್ತಾನೆ' ಎಂದು ದೇವರೇ ಸ್ವತಃವಾಗಿ ತನ್ನ ಗ್ರಂಥವಾದ ದೈವಗ್ರಂಥಗಳಲ್ಲಿ ಹೇಳಿದ್ದಾನೆ. ಇದನ್ನು ಅನುಸರಿಸಿ ಎಲ್ಲರೂ ದೇವರ ಬಳಿಯಿಂದ ಕಳುಹಿಸಲ್ಪಟ್ಟವನೆ ದೇವರ ಜ್ಞಾನವನ್ನು ಹೇಳುವನು ಎಂದು ಅಂದುಕೊಳ್ಳುತ್ತಿದ್ದಾರೆ. ಅದ್ದರಿಂದ ದೇವರ ಅವತಾರ ಯಾರಿಗೂ ತಿಳಿಯದೆ ಹೋಗುತ್ತಿದೆ. ತ್ರೈತಾಯುಗದಲ್ಲಿ ದೇವರು ಮನುಷ್ಯನಾಗಿ ಬಂದಿದ್ದರೂ ಆತನನ್ನು ಯಾರೂ ಗುರುತಿಸಲಿಲ್ಲ. ದ್ವಾಪರಯುಗದಲ್ಲಿ ದೇವರು ಮನುಷ್ಯನಾಗಿ ಬಂದು ಭಗವದ್ಗೀತೆಯನ್ನು ಬೋಧಿಸಿ, ಭಗವದ್ಗೀತೆಯಲ್ಲಿ **"ನಾನೇ ದೇವರು"** ಎಂದು ಹೇಳಿದ್ದರೂ ಯಾರೂ ಬಂದಿರುವ ಭಗವಂತನನ್ನು ಗುರುತಿಸಲಿಲ್ಲ. ಕಲಿಯುಗದಲ್ಲಿ ಏಸು ಆಗಿ ದೇವರೇ ಬಂದಿದ್ದರೂ ಆತನನ್ನು ಯಾರೂ ದೇವರೆಂದು ಗುರುತಿಸದೆ ಹೋಗುವುದಲ್ಲದೆ, ಏಸುನನ್ನು ಅನೇಕ ಕಷ್ಟಗಳಪಾಲು ಮಾಡಿದ್ದಾರೆ. ಆತನನ್ನು ನಿಜವಾದ ದೇವರೆಂದು ಯಾರೂ ಗ್ರಹಿಸಲಾರದೆ ಹೋಗಿದ್ದಾರೆ. ಕೆಲವರು ನಾವು ದೇವರ ವಿಶ್ವಾಸಿಗಳು ಎಂದವರು ಸಹಿತ ಏಸು ನಿಜವಾಗಿಯೂ ದೇವರೆಂದು ತಿಳಿಯದೇ ಕೆಲವರು ಆತನನ್ನು ಮನುಷ್ಯ ಕುಮಾರನೆಂದು ಹೇಳಿದ್ದಾರೆ. ಕೆಲವರು ದೇವರ

ಕುಮಾರನೆಂದು ಹೇಳಿದ್ದಾರೆ. ಅಷ್ಟೇ ಹೊರತು ದೇವರೆಂದು ಗುರುತಿಸಲಾರದೆ ಹೋಗಿದ್ದಾರೆ.

ಏಸು ಸ್ವತಃವಾಗಿ ದೇವರಾಗಿದ್ದು ಈ ವಾಕ್ಯದಲ್ಲಿ ತಾನು ಹೊರಬೀಳದಂತೆ **"ಆತನು ಯಾರನ್ನು ಕಳುಹಿಸಿದ್ದಾನೋ ಆತನನ್ನು ನೀವು ನಂಬಲಿಲ್ಲ"** ಎಂದು ಹೇಳಿದ್ದಾನೆ. ಆತನು ಕಳುಹಿಸಿದವನನ್ನು ನೀವು ನಂಬಲಿಲ್ಲವೆಂದು ಹೇಳಿದ್ದಾನೆ. ಇದನ್ನು ಅನುಸರಿಸಿ ಮನುಷ್ಯ ದೇವರು ಎಂಬ ಮಾತನ್ನು ಯಾರೂ ನಂಬುತ್ತಿಲ್ಲ. ದೇವರು ಕಳುಹಿಸಿರುವ ಮನುಷ್ಯನಲ್ಲಿ ನಿಮಗೆ ನಂಬಿಕೆ ಇಲ್ಲ. ಆದ್ದರಿಂದ ದೇವರ ವಾಕ್ಯವು ನಿಮ್ಮಲ್ಲಿ ನಿಲ್ಲಲಿಲ್ಲ ಎಂದು ಹೇಳಿದ್ದಾನೆ. ದೇವರು ಕಳುಹಿಸಿರುವ ಮನುಷ್ಯನ ಮೇಲೆ ನಂಬಿಕೆ ಇಲ್ಲದೆ ಹೋದರೆ ದೇವರ ವಾಕ್ಯವು ಯಾಕೆ ಮನುಷ್ಯರಲ್ಲಿ ಇರಲಿಲ್ಲ? ಎಂದು ಆಲೋಚಿಸಿದರೆ ಬಂದವನು ದೇವರೇ, ಹೇಳಿರುವವನು ದೇವರೇ ಆದ್ದರಿಂದ ಆತನನ್ನು ನಂಬದವರಲ್ಲಿ ದೇವರ ವಾಕ್ಯವು ನಿಲ್ಲಲಿಲ್ಲವೆಂದು ತಿಳಿಯುತ್ತಿದೆ.

**24) ಯೋಹಾನ್ ಸುವಾರ್ತೆ, 6ನೇ ಅಧ್ಯಾಯ, 25, 26, 27 ವಚನಗಳು.**

**25) ಬೋಧಕನೇ, ನೀನು ಯಾವಾಗ ಇಲ್ಲಿಗೆ ಬಂದೆ ಎಂದು ಕೇಳಿದಾಗ!**

**26) ನೀವು ಸೂಚನೆಗಳನ್ನು ನೋಡುವುದರಿಂದ ಅಲ್ಲ ಆದರೇ, ರೊಟ್ಟಿಗಳು ಭುಜಿಸಿ ತೃಪ್ತಿ ಪಡೆದಿರುವುದರಿಂದಲೇ ನನ್ನನ್ನು ಹುಡುಕುತ್ತಿದ್ದೀರೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

**27) ಕ್ಷಯವಾದ ಆಹಾರಕ್ಕಾಗಿ ಕಷ್ಟ ಪಡಬೇಡಿ ಆದರೆ ನಿತ್ಯ ಜೀವ ಉಂಟುಮಾಡುವ ಅಕ್ಷಯವಾದ ಆಹಾರಕ್ಕಾಗಿಯೇ ಕಷ್ಟಪಡಿ. ಮನುಷ್ಯ ಕುಮಾರನು ಅದನ್ನು ನಿಮಗೆ ನೀಡುತ್ತಾನೆ. ಇದಕ್ಕಾಗಿಯೇ ತಂದೆಯಾದ ದೇವರು ಆತನಿಗೆ ಮುದ್ರೆ ಹಾಕಿದ್ದಾನೆಂದು ಹೇಳಿದನು.**

ಈ ವಾಕ್ಯದಲ್ಲಿ 'ಕ್ಷಯವಾದ, ಅಕ್ಷಯವಾದ ಆಹಾರ' ಎಂದು ಆಹಾರವನ್ನು ಎರಡು ವಿಧಗಳಾಗಿ ಹೇಳಿದ್ದಾರೆ. ಭೂಮಿ ಮೇಲಿರುವ ಮನುಷ್ಯರು ಹೆಚ್ಚಾಗಿ ಕ್ಷಯವಾದ ಆಹಾರಕ್ಕಾಗಿಯೇ ಕಷ್ಟಪಡುತ್ತಿರುತ್ತಾರೆ. ಅದಕ್ಕೇ ಏಸು ತನ್ನನ್ನು ಹುಡುಕುತ್ತಾ ಬಂದು "ನೀನು ಯಾವಾಗ ಬಂದಿದ್ದೀಯ"? ಎಂದು ಕೇಳಿದವರನ್ನು **"ನೀವು ದೇವರ ಜ್ಞಾನವನ್ನು ಆಲಿಸುವುದಕ್ಕೆ ನನ್ನನ್ನು ಕೇಳುತ್ತಿಲ್ಲ. ನೀವು ನಾನು ಕೊಡುವ ರೊಟ್ಟಿಗಳನ್ನು ಆಶಿಸಿ ನನ್ನನ್ನು ಹುಡುಕುತ್ತಿದ್ದೀರೆಂದು"** ಹೇಳಿದ್ದಾನೆ. ಅಷ್ಟೇ ಅಲ್ಲದೆ ಕ್ಷಯವಾದ ಆಹಾರಕ್ಕಾಗಿ ಕಷ್ಟ ಪಡಬೇಡಿರಿ ಎಂದು ಹೇಳಿದ್ದಾನೆ. ಕ್ಷಯ ಎಂದರೆ ನಾಶ ಎಂದು ಅರ್ಥ. ಕ್ಷಯವಾದ ಆಹಾರ ಎಂದರೇ! ಪ್ರತಿದಿನ ನಾವು ತಿನ್ನುವ ಆಹಾರವೆಂದು ತಿಳಿಯಬೇಕು. ಮನುಷ್ಯರು ತಿನ್ನುವ ಆಹಾರವು ತಿಂದ ನಂತರ ಮೂರು ಗಂಟೆಗಳಲ್ಲಿ ಜೀರ್ಣವಾಗಿ ಹೋಗುತ್ತಿದೆ. ಜೀರ್ಣ ಎಂದರೆ ನಾಶವೆಂದು ಅರ್ಥ. ಮನುಷ್ಯರು ತಿನ್ನುವ ಯಾವ ಆಹಾರವಾದರೂ ಅದು ಜೀರ್ಣಾಶಯದಲ್ಲಿ ಜೀರ್ಣವಾಗದೆ ತಪ್ಪುವುದಿಲ್ಲ. ಜೀರ್ಣಾಶಯ ಎಂದರೆ ನಾಶ ಮಾಡುವುದೆ ಆಶಯವಾಗಿ ಹೊಂದಿರುವ ಶರೀರ ಭಾಗ. ಜೀರ್ಣಾಶಯದಲ್ಲಿ ನಾಶವಾಗದಿರುವುದು ಯಾವುದೂ ಇಲ್ಲ. ಜೀರ್ಣಾಶಯದಲ್ಲಿ ನಾಶವಾದ ಆಹಾರವು ಕಟ್ಟಿಗೆಗಳು ಸುಟ್ಟು ಬೂದಿಯಾದಂತೆ ವ್ಯರ್ಥ ಪದಾರ್ಥವಾಗಿ ಬದಲಾಗಿ ಹೋಗುತ್ತಿದೆ.

ಮನುಷ್ಯ ಬಾಯಿಯ ಮೂಲಕ ಹೊಟ್ಟೆಯೊಳಗೆ ಹಾಕುವ ಆಹಾರವನ್ನು ಕ್ಷಯವಾದ ಆಹಾರವೆಂದು ಹೇಳಬಹುದು. ಹಾಗೆಯೇ ಮನುಷ್ಯ ಕಿವಿಗಳ ಮೂಲಕ ಜ್ಞಾನವನ್ನು ತಲೆಯೊಳಗೆ ಹಾಕುತ್ತಿದ್ದಾನೆ. ತಲೆಯಲ್ಲಿ ಮಾತುಗಳ ರೂಪದಲ್ಲಿ ಶರೀರದೊಳಗೆ ಸೇರಿದ ಜ್ಞಾನವನ್ನು ಅಕ್ಷಯವಾದ ಆಹಾರವೆಂದು ಅನ್ನುತ್ತಿದ್ದಾರೆ. ಅಕ್ಷಯವಾದ ಅಂದರೆ **'ನಾಶವಾಗದ ಆಹಾರ, ದೇವರ ಜ್ಞಾನವು ಒಂದೇ'** ಎಂದು ಹೇಳಬಹುದು. ಯಾರಾದರೆ ದೇವರ ಜ್ಞಾನವನ್ನು **ಓದಿಕೊಂಡರೂ, ಕೇಳಿಸಿ ಕೊಂಡರೂ** ಅವನು ಅಕ್ಷಯ ಆಹಾರವನ್ನು ತನ್ನ ತಲೆಯೊಳಗೆ ಹಾಕಿದಂತೆಯೇ ಆಗುತ್ತದೆ. ಅಕ್ಷಯವಾದ ಆಹಾರವು ಮನುಷ್ಯ ಕುಮಾರನಾದವನು ನಿಮಗೆ ನೀಡುತ್ತಾನೆ. ಅದಕ್ಕೇ **"ತಂದೆಯಾದ ದೇವರು**

**ಆತನಿಗೆ ಮುದ್ರೆ ಹಾಕಿದ್ದಾನೆ"** ಎಂದು ವಾಕ್ಯದಲ್ಲಿದೆ. 'ಮುದ್ರೆ' ಎಂದರೆ ಒಪ್ಪಿಗೆ ಅಥವಾ ನಿರ್ಣಯ ಎಂದು ಹೇಳಬಹುದು. ದೇವರು ತನ್ನ ಅದ್ವಿತೀಯ ಕುಮಾರನಾದವನು ತನ್ನ ಜ್ಞಾನವನ್ನು ಹೇಳುವಂತೆ ನಿರ್ಣಯ ಮಾಡಿ ಕಳುಹಿಸಿದ್ದಾನೆ. ಆದ್ದರಿಂದ ದೇವರ ನಿರ್ಣಯವನ್ನು ಅಥವಾ ದೇವರು ಒಪ್ಪಿಕೊಳ್ಳುವುದನ್ನು ಮುದ್ರೆ ಎಂದು ವಾಕ್ಯದಲ್ಲಿ ಬರೆದಿದ್ದಾರೆ. ದೇವರು ತನ್ನ ಜ್ಞಾನವನ್ನು ಯಾವ ಮಾನವನ ಮೇಲೆ ಪ್ರಸರಿಸಿಲ್ಲ ಎಂದು ಹೇಳಿದ್ದಾರೆ. ಇದನ್ನು ಅನುಸರಿಸಿ ದೇವರ ಜ್ಞಾನವನ್ನು ಹೇಳುವವನು ಸಾಧಾರಣ ಮನುಷ್ಯನಲ್ಲವೆಂದು ತಿಳಿದು ಹೋಗುತ್ತಿದೆ. ದೇವರ ಜ್ಞಾನವು ದೇವರಿಗೆ ಹೊರತುಪಡಿಸಿ ಇತರರಿಗೆ ಯಾರಿಗೂ ತಿಳಿದಿಲ್ಲ ಎಂದು ದೇವರೇ ಹೇಳಿದ್ದಾನೆ. ಆದ್ದರಿಂದ ಅದ್ವಿತೀಯ ಕುಮಾರನಾಗಿ ಬಂದು ಹೇಳುವವನು ದೇವರೇ ಹೊರತು ಬೇರೆಯಲ್ಲವೆಂದು ತಿಳಿಯುತ್ತಿದೆ. 'ದೇವರ ಕುಮಾರನು' ಎನ್ನುವುದು ಮನುಷ್ಯರನ್ನು ಭ್ರಮೆಪಡಿಸುವುದಕ್ಕೆ ಹೇಳಿರುವುದೇ ಹೊರತು ಕುಮಾರನು ಎನ್ನುವುದು 'ದೇವರ ಮಾರುವೇಷ' ಎಂದು ಹೇಳಬಹುದು. ದೇವರು ದೇವರಾಗಿ ಬಂದು ಮನುಷ್ಯರೊಂದಿಗೆ ಮಾತನಾಡಬಾರದು, ಆದ್ದರಿಂದ ದೇವರೇ ಕುಮಾರನಾಗಿ ಬಂದಿದ್ದಾನೆಂದು ಹೇಳಬಹುದು. ನಾನು ಹೇಳುವ ಮಾತು ಸತ್ಯ ಎನ್ನುವಹಾಗೆ ಕೆಳಗೆ ವಾಕ್ಯವಿದೆ ನೋಡಿರಿ.

**25) ಯೋಹಾನ್ ಸುವಾರ್ತೆ 6ನೇ ಅಧ್ಯಾಯ, 32ನೇ ವಚನ.**

**(32) ಪರಲೋಕದಿಂದ ಬರುವ ಆಹಾರವನ್ನು ಮೋಷೆ ನಿಮಗೆ ನೀಡಲಿಲ್ಲ. ನನ್ನ ತಂದೆಯೆ ಪರಲೋಕದಿಂದ ಬರುವ ನಿಜವಾದ ಆಹಾರವನ್ನು ನಿಮಗೆ ಅನುಗ್ರಹಿಸುತ್ತಿದ್ದಾನೆ.**

**"ಪರಲೋಕದಿಂದ ಬರುವ ಜ್ಞಾನ ಎಂಬ ಆಹಾರವನ್ನು ಮೋಷೆ ನಿಮಗೆ ನೀಡಲಿಲ್ಲ"** ಎಂದಾಗ ಮೋಷೆ ಹೇಳಿರುವ ಧರ್ಮಶಾಸ್ತ್ರ ಎಲ್ಲವೂ ಅಸತ್ಯವೇನಾ? ಅದರಲ್ಲಿ ಧರ್ಮಯುಕ್ತವಾದ ಜ್ಞಾನವು ಇಲ್ಲವಾ? ಮೋಷೆ ಹೇಳಿರುವುದು

ನಿಜವಾದ ದೇವರ ಆಹಾರ ಅಲ್ಲದಿರುವಾಗ ಆತನು ಹೇಳಿರುವ ಜ್ಞಾನವನ್ನು ಮೋಷೆ ಧರ್ಮಶಾಸ್ತ್ರ ಎಂದು ಯಾಕೆ ಅಂದಿದ್ದಾರೆ? ಎಂಬ ಮೊದಲಾದ ಪ್ರಶ್ನೆಗಳೆಲ್ಲ ಬರುತ್ತವೆ. ಮೋಷೆ ಹೇಳಿರುವುದು ಧರ್ಮಶಾಸ್ತ್ರ ಅಲ್ಲ ಎಂಬ ಮಾತು ಒಂದು ರೀತಿಯಲ್ಲಿ ಸತ್ಯವೇ ಆದರೂ ಮತ್ತೊಂದು ರೀತಿಯಲ್ಲಿ ದೇವರು ಹೇಳಿದಂತೆ ಮೋಷೇ ಹೇಳಿರುವುದು ಧರ್ಮಶಾಸ್ತ್ರ ಅಲ್ಲವೆಂದು ಹೇಳಬಹುದು. "ಮೋಷೆ ಪರಲೋಕದಿಂದ ಬರುವ ಅಕ್ಷಯವಾದ ಆಹಾರವನ್ನು ನಿಮಗೆ ನೀಡಲಿಲ್ಲ" ಎಂಬ ಮಾತು ಕೂಡಾ ವಾಸ್ತವವೇ. ಆದರೆ ಈ ವಾಕ್ಯದ ಬಳಿ ಅನೇಕ ಪ್ರಶ್ನೆಗಳು, ಅನೇಕ ಅನುಮಾನಗಳು (ಸಂಶಯಗಳು) ಬರುವುದು ವಾಸ್ತವವೇ. ಇಲ್ಲಿ ಬಂದಿರುವ ಸಂಶಯಗಳೆಲ್ಲದಕ್ಕೂ ಪರಿಷ್ಕಾರ ಉತ್ತರಗಳು ದೊರೆತಾಗ ವಾಸ್ತವವಾದ ಜ್ಞಾನವು ಅರ್ಥವಾಗಬಲ್ಲದು.

ಕ್ರೈಸ್ಥವರಿಗೆ ಮೋಷೆ ಪ್ರವಕ್ತ ಸುಪರಿಚಯವೇ. ಬೈಬಲ್ ಗ್ರಂಥದಲ್ಲಿ ಹೇಳಲ್ಪಟ್ಟಿರುವ 'ಮೋಷೆ' ನಂತರ 1400 ವರ್ಷಗಳಿಗೆ ಕಾಲಕ್ರಮದಲ್ಲಿ 'ಮೋಷೆ' ಎಂಬ ಪದವು ಬದಲಾವಣೆ ಹೊಂದಿ 'ಮೂಸಾ'ಆಗಿ ಬದಲಾದ ವಿಷಯವು ಬಹಳ ಜನ ಮುಸ್ಲೀಮರಿಗು ಕೂಡಾ ತಿಳಿದಿಲ್ಲ. ಅದರಿಂದ ಮೋಷೆ, ಮೂಸಾ ಇಬ್ಬರೂ ಒಂದೇ ಎಂದು ತಿಳಿಯಬೇಕು. ಮೋಷೆ ಧರ್ಮಶಾಸ್ತ್ರವನ್ನು ಪ್ರಜೆಗಳಿಗೆ ಹೇಳಲಿಲ್ಲವಾ? ಎಂದು ಕೇಳಿದರೆ ಆ ಮಾತು ನಿಜವೆಂದೇ ಹೇಳಬಹುದು. ಅಷ್ಟೇ ಅಲ್ಲದೇ ಆ ಮಾತು ಅಸತ್ಯ ಎಂದು ಕೂಡಾ ಹೇಳಬಹುದು. ಹೀಗೆ ಎರಡು ವಿಧಗಳಲ್ಲಿ ಹೇಳುವುದಕ್ಕೆ ಯಾರಿಗೂ ತಿಳಿಯದ ಬಲವಾದ ಕಾರಣವಿದೆ. ಆ ಕಾರಣವನ್ನು ನೋಡಿದರೆ ಕೆಲವರು ತಪ್ಪದೇ ಆಶ್ಚರ್ಯಪಡುತ್ತಾರೆ. ಕೆಲವರು ನಮ್ಮ ಮಾತನ್ನು ವಿರೋಧಿಸಿ ಅಸತ್ಯವೆಂದು ಕೂಡಾ ಹೇಳಬಹುದು. ಯಾವುದು ಏನಾದರೂ ಸತ್ಯವು ಸತ್ಯವೇ, ಅಸತ್ಯವು ಅಸತ್ಯವೇ. ಕೆಲವು ಸಾವಿರ ವರ್ಷಗಳ ಪೂರ್ವವು ಮೋಷೆ ಪ್ರವಕ್ತ ಇದ್ದ ಮಾತು ವಾಸ್ತವವೇ. ಸುಮಾರು ಐದು ಸಾವಿರ ವರ್ಷಗಳ ಸಮಯದಲ್ಲಿ ಮೋಷೆ ಪ್ರವಕ್ತ ತನಗೆ ತಿಳಿದಿರುವ ಜ್ಞಾನವನ್ನು ಹೇಳುತ್ತಿದ್ದನು. ದೈವಜ್ಞಾನವನ್ನು ಹೇಳುವವರನ್ನು ಪ್ರವಕ್ತ ಎಂದು ಅನ್ನುವುದು ಸಹಜವೇ. ಆದ್ದರಿಂದ ಮೋಷೆ ಪ್ರಜೆಗಳಿಂದ ಪ್ರವಕ್ತ ಎಂದು ಕರೆಯಲ್ಪಡುತ್ತಿದ್ದನು.

ಹಾಗೆ ಚಿಕ್ಕವಯಸ್ಸಿನಿಂದಲೇ ದೈವ ಭಾವಗಳಿರುವ ಮೋಷೆಗೆ 20 ವರ್ಷಗಳ ವಯಸ್ಸಿನಲ್ಲೇ ಪ್ರಥಮ ದೈವಗ್ರಂಥವಾದ **'ತೌರಾತ್'** ಗ್ರಂಥವನ್ನು ಸ್ವತಃವಾಗಿ ಆಗ ಭೂಮಿ ಮೇಲಕ್ಕೆ ಬಂದಿದ್ದ **ಭಗವಂತನು** ಕೊಟ್ಟಿದ್ದಾನೆ. ಅಂದಿನಿಂದ ಆ ಗ್ರಂಥದಲ್ಲಿನ ಜ್ಞಾನವನ್ನು ಹೇಳುತ್ತಿದ್ದನು.

ಮೋಷೆ ಹೇಳಿರುವ ಜ್ಞಾನವೆಲ್ಲವೂ ಧರ್ಮಸಮ್ಮತವಾಗಿ ಇರುವುದರಿಂದ ಮೋಷೆ ಹೇಳಿರುವುದೆಲ್ಲವೂ ಧರ್ಮಶಾಸ್ತ್ರ ಎನ್ನುತ್ತಾ **"ಮೋಷೆ ಧರ್ಮಶಾಸ್ತ್ರ"** ಎಂದು ಕರೆದಿದ್ದಾರೆ. ಹಾಗೆಯೇ ಮೋಷೆ 54 ವರ್ಷಗಳು ಜೀವಿಸಿ ಮರಣಿಸಿದಾಗ, ಆತನು ಮರಣಿಸಿದ ತಕ್ಷಣವೇ ಆತನ ಶರೀರದೊಳಗೆ ಭಗವಂತನು ಸೇರಿಕೊಂಡು ನಂತರ ಒಂಭತ್ತು ವರ್ಷಗಳು ಮೋಷೆ ಹೇಳದ ಧರ್ಮಗಳನ್ನು ಕೂಡಾ ಹೇಳಿದ್ದಾನೆ. 63 ವರ್ಷಗಳ ನಂತರ ಭಗವಂತನು ಕೂಡಾ ಶರೀರವನ್ನು ಬಿಟ್ಟುಹೋಗುವುದು ನಡೆಯಿತು. ಈ ವಿಷಯವೆಲ್ಲಾ ಪ್ರಜೆಗಳಿಗೆ ತಿಳಿಯದೆ ಇರುವುದರಿಂದ ಮೋಷೆ ಪ್ರವಕ್ತ 63 ವರ್ಷಗಳು ಬದುಕಿದ್ದಾನೆ ಎಂದು ಅಂದುಕೊಂಡಿದ್ದಾರೆ. ಹಾಗೇ ಮೋಷೆ ಪ್ರವಕ್ತನೇ ಸ್ವತಃವಾಗಿ ಧರ್ಮಗಳನ್ನು ಬೋಧಿಸಿದ್ದಾನೆಂದು ಅಂದುಕೊಂಡಿದ್ದಾರೆ. ವಾಸ್ತವವಾಗಿ ಮೋಷೆಗೆ ದೈವಗ್ರಂಥವನ್ನು ಕೊಡಲಾಗಿದೆ ಆದರೇ ನೇರವಾಗಿ ದೇವರು ಜ್ಞಾನವನ್ನು ಕೊಡಲಿಲ್ಲ. ಆದ್ದರಿಂದ ಮೇಲಿನ ವಾಕ್ಯದಲ್ಲಿ "ಪರಲೋಕದಿಂದ ಬಂದಿರುವ ಆಹಾರವನ್ನು ಮೋಷೆಗೆ ನೀಡಲಿಲ್ಲ" ಎಂದು ಹೇಳಿದ್ದಾರೆ. ವಾಸ್ತವವಾಗಿ ದೇವರೇ ಮೋಷೆ ಮುಖಾಂತರ ಅಂದರೇ ಮೋಷೆ ಶರೀರ ದೊಳಗಿನಿಂದ ಧರ್ಮಗಳನ್ನು ಬೋಧಿಸುವುದರಿಂದ ಆತನು ಹೇಳಿರುವ ಜ್ಞಾನಕ್ಕೆ ಮೋಷೆ ಧರ್ಮಶಾಸ್ತ್ರ ಎಂದು ಕರೆದಿದ್ದಾರೆ. ಆದರೆ ಪರಲೋಕ ತಂದೆಯಾದ ಪರಿಶುದ್ಧಾತ್ಮನೇ ನಿಜವಾದ ಆಹಾರವನ್ನು ಕೊಟ್ಟಿದ್ದಾನೆಂದು ಕೂಡಾ ಗ್ರಂಥದಲ್ಲಿ ಬರೆದಿದ್ದಾರೆ. ಮೋಷೆ ಜೀವನವು 54 ವರ್ಷಗಳಾಗಿದ್ದರೇ, ಅದು 63 ವರ್ಷಗಳವರೆಗು ದೇವರೇ ಮುಂದುವರೆಸಿದ ವಿಷಯವು ಯಾರಿಗೂ ತಿಳಿದಿಲ್ಲ. ಈ ವಿಷಯಗಳೆಲ್ಲವೂ ಅಂದರೆ ಪೂರ್ತಿ ರಹಸ್ಯಗಳಾಗಿರುವ ಈ ವಿಷಯಗಳೆಲ್ಲವೂ ನಮ್ಮ ರಚನೆಗಳಲ್ಲಿನ **"ಕೃಷ್ಣಮೂಸ"** ಎಂಬ ಗ್ರಂಥದಲ್ಲಿ ಬರೆಯಲಾಗಿವೆ.

## 26) ಯೋಹಾನ್ ಸುವಾರ್ತೆ, 6ನೇ ಅಧ್ಯಾಯ, 47ನೇ ವಚನ.

## (47) ದೇವರ ಹತ್ತಿರದಿಂದ ಬಂದಿರುವವನು ಹೊರತುಪಡಿಸಿ ಇನ್ಯಾರೂ ತಂದೆಯನ್ನು ನೋಡಿರುವುದಿಲ್ಲ.

ಈ ವಾಕ್ಯವನ್ನು ಓದಿದ ತಕ್ಷಣವೇ ಅರ್ಥವಾಗುತ್ತಿದೆ. ಇದರಲ್ಲಿ ನಿಗೂಢ ವಾಗಿ ಬರೆದಿರುವುದು ಏನೂ ಇಲ್ಲ. ಭಗವದ್ಗೀತೆ, ಬೈಬಲ್, ಖುರಾನ್ ಎಂಬ ಮೂರು ದೈವಗ್ರಂಥಗಳನ್ನು ಪೂರ್ತಿಯಾಗಿ ಓದಿ ನೋಡಿದರೆ ಮೂರು ದೈವಗ್ರಂಥಗಳಲ್ಲಿ ಅಂತಿಮ ದೈವಗ್ರಂಥದಲ್ಲಿ ಇರುವ ವಾಕ್ಯಗಳು ಯಾರಿಗೂ ಅರ್ಥವಾಗದ ನಿಗೂಢ ಅರ್ಥದೊಂದಿಗೆ ಕೂಡಿಕೊಂಡಿವೆ. ಖುರಾನ್ ಗ್ರಂಥದಲ್ಲಿ ಇರುವಷ್ಟು ನಿಗೂಢತೆ ಉಳಿದ ಗ್ರಂಥಗಳಲ್ಲಿ ಇಲ್ಲವೆಂದೇ ಹೇಳಬಹುದು. ಬೈಬಲ್‌ನಲ್ಲಿ ವಾಕ್ಯಗಳೆಲ್ಲವು ಸುಲಭವಾಗಿ ಅರ್ಥವಾಗುವಂತೇ ಇವೆ. ವಾಕ್ಯವು ಸುಲಭವೇ ಆದರೂ ಅದರಲ್ಲಿನ ವಾಸ್ತವಿಕತೆಯನ್ನು ಬಹಳ ಜನ ತಿಳಿಯಲಾರದೆ ಹೋಗಿದ್ದಾರೆ. ಆದ್ದರಿಂದ ನಮ್ಮ ಮೂಲಕ ದೇವರು ಪ್ರತಿ ವಾಕ್ಯಕ್ಕು ವಿವರವನ್ನು ಪ್ರಜೆಗಳಿಗೆ ತಿಳಿಸುತ್ತಿದ್ದಾನೆ.

ಪರಿಶುದ್ಧಾತ್ಮವಾದ ದೇವರು ಸೃಷ್ಠಿ ಪೂರ್ವ, ಸೃಷ್ಠಿ ನಂತರ ಎರಡು ಕಾಲಗಳಲ್ಲಿಯೂ ಇದ್ದಾನೆ. ಆತನೇ ಮೊದಲ ದೇವರು. ದೇವರು ಎಂಥವನೋ, ಹೇಗಿದ್ದಾನೋ ಯಾವ ಮಾನವನಿಗೂ ತಿಳಿದಿಲ್ಲ. ಅಂತಿಮ ದೈವಗ್ರಂಥವಾದ ಖುರ್‌ಆನ್‌ನಲ್ಲಿ ಮೊದಲ ದೇವರನ್ನು **'ಅಲ್ಲಾಹ್'** ಎಂದು ಹೇಳಿದ್ದಾರೆ. ಎರಡನೆ ದೇವರಾದ ಆತ್ಮನನ್ನು ಕೂಡಾ **'ಅಲ್ಲಾಹ್'** ಎಂದಿದ್ದಾರೆ. ಅದ್ದರಿಂದ ಪರಮಾತ್ಮ ಎನ್ನಲ್ಪಡುವವನು ಒಂದು ಅಲ್ಲಾಹ್ ಆಗಿರುವಾಗ, ಆತ್ಮ ಎರಡನೆ ಅಲ್ಲಾಹ್ ಆಗಿ ಕರೆಯಲ್ಪಡುತ್ತಿದ್ದಾನೆ. ಅದೇ ದ್ವಿತೀಯ ಗ್ರಂಥವಾದ ಬೈಬಲ್‌ನಲ್ಲಿ ಪರಮಾತ್ಮನನ್ನು ದೇವರು ಎಂದು ಹೇಳುತ್ತಿದ್ದಾರೆ. ನಂತರ ಎರಡನೆಯ ದೇವರಾಗಿ ಇರುವ ಆತ್ಮನನ್ನು ತಂದೆಯೆಂದು ಸಂಬೋಧಿಸಿ ಹೇಳಿದ್ದಾರೆ. ಆತ್ಮಕ್ಕೆ ತಂದೆ ಪರಿಶುದ್ಧಾತ್ಮ ಆಗಿರುವಾಗ, ಮನುಷ್ಯನಿಗೆ ತಂದೆ ಆತ್ಮವಾಗಿ ಇರುವವನೆಂದು

ತಿಳಿಯಬೇಕು. ಪರಮಾತ್ಮನನ್ನು, ಆತ್ಮನನ್ನು ಇಬ್ಬರು ದೇವರುಗಳೆಂದು ಖುರಾನ್‌ನಲ್ಲಿ ಹೇಳಿದ್ದಾರೆ. ಬೈಬಲ್ ಗ್ರಂಥದಲ್ಲಿ ಒಬ್ಬರನ್ನು ದೇವರೆಂದು ಎರಡನೆಯವನನ್ನು ತಂದೆ ಎಂದು ಮನುಷ್ಯ ಹೇಳುತ್ತಿದ್ದಾನೆ. ಮನುಷ್ಯನಿಗೆ ತಂದೆ ಆತ್ಮ ಆಗಿರುವಾಗ, ಆತ್ಮಗೆ ತಂದೆ ಪರಿಶುದ್ಧಾತ್ಮಯೆಂದು ತಿಳಿಯಬೇಕು. ಇಲ್ಲಿ ಈ ವಾಕ್ಯದಲ್ಲಿ ಮನುಷ್ಯನಾದವನು ಯಾರಾದರೂ ತನ್ನ ತಂದೆಯನ್ನು ನೋಡಿರುವುದಿಲ್ಲ. ಮನುಷ್ಯನಿಗೆ ತಂದೆ ಎನ್ನಲ್ಪಡುವ ಆತ್ಮವೆಂದರೆ ಏನೋ ಮನುಷ್ಯನಿಗೆ ಗೊತ್ತಿಲ್ಲ. ಮನುಷ್ಯ ಆತ್ಮನನ್ನು ಯಾವಾಗಲೂ ನೋಡಿರುವುದಿಲ್ಲ. ವಾಕ್ಯದಲ್ಲಿ **"ದೇವರ ಹತ್ತಿರದಿಂದ ಬಂದಿರುವವನು ಹೊರತು"** ಎಂದು ಹೇಳಿರುವಾಗ ದೇವರ ಹತ್ತಿರದಿಂದ ಬಂದಿರುವವನು ಆತ್ಮ ಒಬ್ಬನೇ ಆಗಿರುವುದರಿಂದ **ಆತ್ಮ ಪರಿಶುದ್ಧಾತ್ಮ ಎಂಬ ತನ್ನ ತಂದೆಯನ್ನು ನೋಡಿದ್ದಾನೆ. ಜೀವಾತ್ಮ ಆದವನು ತನ್ನ ತಂದೆಯಾದ ಆತ್ಮನನ್ನು ನೋಡಿರುವುದಿಲ್ಲ** ಎಂದು ಹೇಳಿದ್ದಾರೆ.

### 27) ಯೋಹಾನ್ ಸುವಾರ್ತೆ 7ನೇ ಅಧ್ಯಾಯ, 37, 38 ವಚನಗಳು.

## (37) ಯಾರಾದರೂ ದಾಹಗೊಂಡ ಪಕ್ಷದಲ್ಲಿ ನನ್ನ ಬಳಿಗೆ ಬಂದು ದಾಹ ತೀರಿಸಿಕೊಳ್ಳಬೇಕು. (38) ನನ್ನಲ್ಲಿ ವಿಶ್ವಾಸ ಇಡುವವನು ಯಾರೋ ಶಾಸ್ತ್ರದಲ್ಲಿ ಹೇಳಿದಂತೆ ಅವನ ಹೊಟ್ಟೆಯೊಳಗಿಂದ ಜೀವಜಲ ನದಿಗಳು ಹರಿಯುವವೆಂದು ಗಟ್ಟಿಯಾಗಿ ಹೇಳಿದನು.

ಈ ವಾಕ್ಯವು ಸ್ವಲ್ಪ ಸೂಕ್ಷ್ಮ ಭಾವದಿಂದ ಕೂಡಿಕೊಂಡಿದೆ. ಬಾಯಾರಿಕೆ ಅಥವಾ ದಾಹ ಆದವನು ನೀರು ಕುಡಿಯುವುದು ಸಹಜ. ಆದರೆ ಇಲ್ಲಿ ಹೇಳಿರುವ ದಾಹವನ್ನು ಕುರಿತು ನೋಡಿದರೆ ನೀರು ಬೇಕೆಂಬ ತಪನ ಪಡುವುದನ್ನು ಬಾಯಾರಿಕೆ ಎಂದಂತೆ, **ಜ್ಞಾನ ಬೇಕೆಂಬ ಜಿಜ್ಞಾಸೆ** ಉಂಟಾದವನಿಗೆ ಉಂಟಾಗಿರುವ ತಪನವನ್ನು ದಾಹಕ್ಕೆ ಹೋಲಿಸಿ ಹೇಳಿದ್ದಾರೆ. ಜ್ಞಾನ ಬೇಕೆಂಬ ಜ್ಞಾನ ದಾಹ ಉಂಟಾದವನು ನನ್ನ ಬಳಿಗೆ ಬಂದು ದಾಹ ತೀರಿಸಿಕೊಳ್ಳಬೇಕೆಂದು

ವಾಕ್ಯದಲ್ಲಿ ಹೇಳಿದ್ದಾರೆ. ಏಸು ಬಳಿಗೆ ಹೋಗಿ ಆತನ ಬಳಿ ಜ್ಞಾನವನ್ನು ತಿಳಿದುಕೊಂಡರೆ ಏಸು ಬಳಿ **ಜ್ಞಾನ ದಾಹವನ್ನು** ತೀರಿಸಿಕೊಂಡಂತೆಯೇ ಆಗುತ್ತದೆ. ಏಸುವಿನಲ್ಲಿ ವಿಶ್ವಾಸವಿಡುವವನಿಗೆ ಜ್ಞಾನವು ಸಂಪೂರ್ಣವಾಗಿ ಉಂಟಾ ಗುತ್ತದೆಂದು, ಅವನು ಜ್ಞಾನ ನಿಧಿಯ ಹಾಗೆ ತಯಾರಾಗಿ ಜ್ಞಾನವನ್ನು ಇತರರಿಗೆ ಬೋಧಿಸುವ ಸ್ಥಿತಿಗೆ ಬರುತ್ತಾನೆಂದು ತಿಳಿಸುತ್ತಾ ಅವನ ಹೊಟ್ಟೆಯಲ್ಲಿ ಜೀವ ಜಲ ನದಿಗಳು ಹರಿಯುತ್ತವೆಂದು ಹೇಳಿದ್ದಾನೆ. **ಜೀವ ಜಲ ಎಂದರೇ 'ದೈವಜ್ಞಾನ'** ಎಂದು ಅರ್ಥ. ಜ್ಞಾನವು ಮೋಕ್ಷವನ್ನು ಉಂಟುಮಾಡಿ ಯಾವಾಗಲೂ ಒಂದೇ ಸ್ಥಿತಿಯಲ್ಲಿ ಇಡುವುದಾಗಿರುವುದರಿಂದ ಜ್ಞಾನವನ್ನು ಜೀವಜಲ ಎಂದು ಕರೆದಿದ್ದಾರೆ. ಜಲವನ್ನು ಬಾಯಿಂದ ಕುಡಿದು ಹೊಟ್ಟೆಯಲ್ಲಿ ತುಂಬಿದರೆ, **ಜ್ಞಾನವನ್ನು ಕಿವಿಗಳ ಮೂಲಕ ಕೇಳಿ ಬುದ್ಧಿಯಲ್ಲಿ ತುಂಬಬೇಕು.**

## 28) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 12ನೇ ವಚನ.

**(12) ನಾನು ಲೋಕಕ್ಕೆ ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸು ವವನು ಕತ್ತಲೆಯಲ್ಲಿ ನಡೆಯದೆ ಜೀವದ ಬೆಳಕು ಹೊಂದಿರುತ್ತಾನೆ ಎಂದು ಅವರಿಗೆ ಹೇಳಿದನು.**

ದೇವರು ಅಂದರೆ ಪರಿಶುದ್ಧಾತ್ಮ ಆದವನು ತನ್ನ ಪಾಲನೆ ಸಾಗಿಸುವುದಕ್ಕೆ, ತನ್ನ ಕಾರ್ಯಗಳನ್ನು ತಾನು ಮಾಡದೆ ಇತರರಿಂದ ಮಾಡಿಸುವುದಕ್ಕೆ ತಾನು ಪ್ರತ್ಯೇಕವಾಗಿ ಆತ್ಮನನ್ನು ಸೃಷ್ಟಿಸಿ, ಆತ್ಮನನ್ನು ತನ್ನ ಕುಮಾರನನ್ನಾಗಿ ಪ್ರಕಟಿಸಿ, ತನ್ನ ಕೆಲಸಗಳನ್ನು ಮಾಡುವ ಅಧಿಕಾರವನ್ನು ತನ್ನ ಕುಮಾರನಾದ ಆತ್ಮಕ್ಕೆ ಕೊಟ್ಟ ಹಾಗೆ ಪ್ರಕಟಿಸಿದ್ದಾನೆ. ದೇವರು ಕೊಟ್ಟಿರುವ ಅಧಿಕಾರದಿಂದ ಕುಮಾರನಾದ ಆತ್ಮ ಮನುಷ್ಯರನ್ನು ಕೊಲ್ಲುವುದಕ್ಕು, ಕೊಂದ ನಂತರ ಬದುಕಿಸುವುದಕ್ಕು, ಬದುಕಿಸಿದಾಗ ಹಿಂದಿನ ಜನ್ಮ ಕರ್ಮಗಳನ್ನು ಅನುಸರಿಸಿ ತೀರ್ಪು ನಿರ್ಣ ಯಿಸುವುದಕ್ಕೆ ಅಧಿಕಾರ ಹೊಂದಿದ್ದಾನೆ. ತೀರ್ಪು ನಿರ್ಣಯಿಸುವ ಅಧಿಕಾರ ಹೊಂದಿರುವ ಆತ್ಮ ಮನುಷ್ಯನ ಕರ್ಮವನ್ನು ಅನುಸರಿಸಿ ಪ್ರವರ್ತಿಸುತ್ತಿರುತ್ತಾನೆ.

ಮನುಷ್ಯ ಕರ್ಮಗಳಲ್ಲೇ ಸಿಲುಕಿಕೊಂಡು ಕರ್ಮಗಳ ಬಗ್ಗೆ ನಿನ್ನ ಗುಣಗಳ ಆಲೋಚನೆಗಳು ಮಾಡುವುದರಿಂದ ಮನುಷ್ಯನಿಗೆ ಆತ್ಮ ಕರ್ಮಗಳಿಗೆ ಸಂಬಂಧಪಟ್ಟ ಕೆಲಸಗಳನ್ನೇ ಮಾಡಿಸುತ್ತಿರುತ್ತದೆ. ಮನುಷ್ಯ ಅಜ್ಞಾನವನ್ನು ಕೋರುತ್ತಿರುವುದರಿಂದ ಆತ್ಮ ಮನುಷ್ಯನಿಗೆ ಅಜ್ಞಾನವನ್ನೇ ನೀಡುತ್ತಿದೆ. ಆದ್ದರಿಂದ ಸ್ವಲ್ಪ ಕಾಲಕ್ಕೆ ಭೂಮಿ ಮೇಲೆ ಅಧರ್ಮಗಳು ಬೆಳೆದು ಹೋಗುತ್ತಿವೆ. ಆತ್ಮ ಮನುಷ್ಯನಿಗೆ ಬೋಧಿಸುವ ಅಜ್ಞಾನದಿಂದಲೇ ಭೂಮಿ ಮೇಲೆ ಅಧರ್ಮಗಳು ಏರ್ಪಡುತ್ತಿವೆ.

ಮನುಷ್ಯನ ಇಷ್ಟದಿಂದ ಆತ್ಮ ತಿಳಿಸಿರುವ ಅಜ್ಞಾನದಿಂದ ಅಧರ್ಮಗಳು ಉದ್ಭವಿಸಿರುವಾಗ, ಅಧರ್ಮಗಳನ್ನು ಅಡಗಿಸಿ ಹಾಕಿ ಧರ್ಮಗಳನ್ನು ಬೋಧಿಸುವುದಕ್ಕೆ ಪರಿಶುದ್ಧಾತ್ಮವಾದ ದೇವರು ಭೂಮಿ ಮೇಲಕ್ಕೆ ಮನುಷ್ಯನ ಹಾಗೆ ಬರಬೇಕಾಗಿದೆ. ಹಾಗೆ ಮನುಷ್ಯನ ರೂಪದಲ್ಲಿ ಬಂದಿರುವ ದೇವರನ್ನು 'ಭಗವಂತನು' ಎಂದು ಅನ್ನುತ್ತಿದ್ದೇವೆ. ಭೂಮಿ ಮೇಲೆ ಮಾರುವೇಷದಲ್ಲಿ ದೇವರೇ ಬಂದು ತನ್ನ ಜ್ಞಾನವನ್ನು ತಾನೇ ಬೋಧಿಸಿ ಹೋಗುತ್ತಾನೆ. ಹಾಗೆ ಬಂದವನು ದೇವರು ಎಂದು ತಿಳಿಯದೆ ಇರುವುದಕ್ಕೆ ಮನುಷ್ಯನ ರೂಪದಲ್ಲಿ ಬಂದವನನ್ನು ಕೂಡಾ ಕುಮಾರನೆಂದು, ದೇವರನ್ನು ತಂದೆಯೆಂದು ಹೇಳುವುದು ನಡೆದಿದೆ. ಇದನ್ನು ಅನುಸರಿಸಿ ಸೃಷ್ಟಿಕರ್ತನಾದ ದೇವರು ಒಬ್ಬನೇ ಆದರೂ ಆತನಿಗೆ ಆತ್ಮ ರೂಪದಲ್ಲಿ ಒಬ್ಬ ಕುಮಾರನು, ಮನುಷ್ಯನ ರೂಪದಲ್ಲಿ ಬಂದವನು ಮತ್ತೊಬ್ಬ ಕುಮಾರನಾಗಿ ಇದ್ದಾರೆ. ಶಾಶ್ವತವಾಗಿ ಮನುಷ್ಯರಲ್ಲಿ ಇರುವ ಆತ್ಮವೆಂಬ ಕುಮಾರನು ಅಧರ್ಮಗಳನ್ನು ಪ್ರೇರೇಪಿಸಿದಾಗ, ಎರಡನೆಯ ಕುಮಾರನಾದ ತಾತ್ಕಾಲಿಕ ಕುಮಾರನು ಅಂದರೇ ಅಪರೂಪವಾಗಿ ಬರುವ ಮನುಷ್ಯನ ಆಕಾರದಲ್ಲಿರುವ ಕುಮಾರನು ಧರ್ಮಗಳನ್ನು ಬೋಧಿಸುವನು. ದೇವರು ಒಬ್ಬನೇ ಆದರೂ ಆತನು ಸೃಷ್ಟಿಸಿರುವ ಕುಮಾರರು ಇಬ್ಬರು ಎಂದು ತಿಳಿಯಿತು. ಅದರಲ್ಲಿ ಮನುಷ್ಯನಾಗಿ ಬಂದಿರುವ ಕುಮಾರನು **'ಏಸು'** ಎಂಬ ಹೆಸರಿನಿಂದ ಇದ್ದು ಪ್ರಜೆಗಳಿಗೆ ಬೋಧಿಸುವಾಗ ಹೀಗೆ ಹೇಳಿದ್ದಾನೆ. **"ನಾನು ಲೋಕಕ್ಕೆ ಬೆಳಕು"** ಎಂದು ಹೇಳಿದ್ದಾನೆ. ಜ್ಞಾನವು ಅಗ್ನಿ ಸ್ವರೂಪವಾಗಿ ಮನುಷ್ಯರ

ಕರ್ಮಗಳನ್ನು ಸುಡುತ್ತಿದೆ. ಅಂತಹ ಜ್ಞಾನಾಗ್ನಿಯನ್ನು ಸಂಪೂರ್ಣವಾಗಿ ಹೊಂದಿರುವವನು ಏಸು. ಏಸು ಸಂಪೂರ್ಣ ಜ್ಞಾನ ಬೆಳಕು ಹೊಂದಿದ್ದಾನೆ. ಆದ್ದರಿಂದ 'ನಾನು ಲೋಕಕ್ಕೆ ಬೆಳಕಾಗಿದ್ದೇನೆ' ಎಂದು ಹೇಳಿದ್ದಾನೆ. ಏಸು ಲೋಕದಲ್ಲಿನ ಮನುಷ್ಯರಿಗೆ ಜ್ಞಾನವನ್ನು ತಿಳಿಸುವುದಕ್ಕೆ ಬಂದಿದ್ದಾನೆ. ಆದ್ದರಿಂದ ಆತನನ್ನು ಅನುಸರಿಸಿ, ಆತನ ಜ್ಞಾನವನ್ನು ತಿಳಿದುಕೊಂಡವನು ಅಜ್ಞಾನ ದಲ್ಲಿ ನಡೆಯದೆ ಜ್ಞಾನದಲ್ಲಿಯೇ ನಡೆಯುತ್ತಾನೆ. ಆದ್ದರಿಂದ ನನ್ನನ್ನು ಹಿಂಬಾಲಿಸುವವನು ಕತ್ತಲಲ್ಲಿ ನಡೆಯದೆ ಜೀವದ ಬೆಳಕು ಹೊಂದಿರುತ್ತಾನೆಂದು ಹೇಳಿದ್ದಾನೆ. ಪ್ರಜೆಗಳಿಗೆ ಜ್ಞಾನ ಬೆಳಕು ನೀಡುವವನು, ಧರ್ಮಗಳನ್ನು ನೆಲೆಗೊಳಿಸುವವನು, ಮನುಷ್ಯನ ಆಕಾರದಲ್ಲಿ ಬಂದಿರುವ ದೇವರಿಂದಲೇ ಸಾಧ್ಯವಾಗುತ್ತದೆ.

**29) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 14ನೇ ವಚನ.**

**(14) ಏಸು "ನಾನು ಎಲ್ಲಿಂದ ಬಂದಿದ್ದೇನೋ, ಎಲ್ಲಿಗೆ ಹೋಗು ವೆನೋ ನನಗೆ ತಿಳಿದಿದೆ. ಆದ್ದರಿಂದ ನನ್ನ ಬಗ್ಗೆ ನಾನು ಸಾಕ್ಷ್ಯವನ್ನು ಹೇಳಿಕೊಂಡರೂ ನನ್ನ ಸಾಕ್ಷ್ಯವು ಸತ್ಯವೇ. ನಾನು ಎಲ್ಲಿಂದ ಬರುತ್ತಿದ್ದೇನೋ ಎಲ್ಲಿಗೆ ಹೋಗುತ್ತಿದ್ದೇನೋ ನೀವು ತಿಳಿದಿಲ್ಲ.**

ಏಸು ಸಾಧಾರಣ ಮನುಷ್ಯನ ಹಾಗೆ ಕಾಣಿಸುತ್ತಿರುತ್ತಾನೆ. ಮೇಲ್ನೋಟಕ್ಕೆ ನೋಡುವುದಕ್ಕೆ ಯಾವ ಮನುಷ್ಯನಲ್ಲಿ ಪ್ರತ್ಯೇಕತೆ ಕಾಣಿಸುವುದಿಲ್ಲ. ಎಲ್ಲರು ಹೇಗೆ ಇರುತ್ತಾರೋ ಹಾಗೆಯೇ ಪ್ರಕೃತಿ ಶರೀರವನ್ನು ಧರಿಸಿರುವ ಪ್ರತಿಯೊಬ್ಬನು ಇರುತ್ತಾನೆ. ಏಸು ಒಬ್ಬ ವ್ಯಕ್ತಿ. ಆದ್ದರಿಂದ ಪ್ರಪಂಚದಲ್ಲಿ ಎಲ್ಲರ ಹಾಗೆ ಸರ್ವಸಾಧಾರಣವಾಗಿ ಕಾಣಿಸುವ ಮನುಷ್ಯನಾಗಿ ಏಸು ಇದ್ದಾನೆ. 'ಯಾವ ಹುತ್ತದಲ್ಲಿ ಯಾವ ಹಾವಿದೆಯೋ' ಎಂದು ಹಿರಿಯರು ಹೇಳಿದ ಹಾಗೆ ಯಾವ ಶರೀರದಲ್ಲಿ ಯಾವ ಜೀವಿ ಇರುವುದು ಯಾರಿಗೂ ಗೊತ್ತಿಲ್ಲ. ಹುಟ್ಟುವ ಪ್ರತಿ ಜೀವಿಯು ಶರೀರವನ್ನು ಧರಿಸಿ ಹುಟ್ಟುತ್ತಿದ್ದಾನೆ. ಶರೀರದೊಳಗೆ ಬಂದು ಸೇರಿದ

ಪ್ರತಿ ಜೀವಿಯು ಯಾವುದೋ ಒಂದು ಕಡೆಯಿಂದ ಬಂದು ಹುಟ್ಟುತ್ತಿರುವುದು ಸತ್ಯ. ಭೂಮಿ ಮೇಲೆಯೇ ಯಾವುದೋ ಒಂದು ಕಡೆ ಕರ್ಮ ತೀರಿ ಮರಣಿಸಿದ ಜೀವಿಯು ಪುನಃ ಹೊಸ ಶರೀರದಲ್ಲಿ ಪ್ರವೇಶಿಸುತ್ತಿದ್ದಾನೆ. ಜೀವಿಯು ಕರ್ಮವನ್ನು ಅನುಸರಿಸಿ ಎಲ್ಲಿ ಹುಟ್ಟಬೇಕೆಂಬ ವಿಷಯವನ್ನು ನಿರ್ಣಯಿಸುವುದು ಶರೀರದೊಳಗಿನ ಆತ್ಮವೇ ಎಂದು ತಿಳಿಯಬೇಕು. ಸಾಧಾರಣ ಜೀವಿಯು ಆತ್ಮದಿಂದ ತೀರ್ಪು ನಿರ್ಣಯಿಸಲ್ಪಟ್ಟು, ತೀರ್ಪು ನಿರ್ಣಯಿಸಲ್ಪಟ್ಟಿರುವುದರ ಪ್ರಕಾರ ಆತ್ಮದಿಂದಲೇ ಕರೆ ತಂದು ಮತ್ತೊಂದು ಹೊಸ ಶರೀರದಲ್ಲಿ ಸೇರಿಸಲ್ಪಡುವುದು ನಡೆಯುತ್ತಿದೆ. ಒಂದು ಜೀವಿಯು ಮನುಷ್ಯನ ಶರೀರದಲ್ಲಿ ಪ್ರವೇಶಿಸಿ ಬದುಕುತ್ತಿದ್ದರೂ, ಆತನು ಎಲ್ಲಿಂದ ಬಂದು ಹುಟ್ಟಿರುವುದು ಆತನಿಗೇ ತಿಳಿಯದು. ಒಬ್ಬ ವ್ಯಕ್ತಿಗೆ ಈಗ 40 ವರ್ಷಗಳ ವಯಸ್ಸು. ಆತನು ಸೃಷ್ಠಿ ಆದಿಯಿಂದ ಭೂಮಿಮೇಲೆ ಇದ್ದಾನೆ. ಸೃಷ್ಠಿ ಆದಿಯಿಂದ ಆತನು ಯಾವಾಗ ಎಲ್ಲಿರುವುದು ಆತನಿಗೇ ತಿಳಿದಿಲ್ಲ. ಗತ ಜನ್ಮಗಳ ವಿಷಯಗಳೆಲ್ಲವೂ ಆತನಿಗೆ ಜ್ಞಾಪಕ ಇರುವುದಿಲ್ಲ. ಮನುಷ್ಯನಲ್ಲಿ ಪ್ರತಿ ವಿಷಯವನ್ನು ಜ್ಞಾಪಕ ಇಟ್ಟುಕೊಳ್ಳುವ ಅವಯವವು ಶರೀರದಲ್ಲಿನ ಮನಸ್ಸು. ಮನಸ್ಸು ಅಂದರೆ **'ಮನನ ಮಾಡುವುದು'** ಎಂದು ಅರ್ಥ. ಮನುಷ್ಯ ಶರೀರವನ್ನು ಬಿಟ್ಟು ಸತ್ತು ಹೋದಾಗಲೇ ಜ್ಞಾಪಕ ಮಾಡುವ ಮನಸ್ಸು ಕೂಡಾ ಸತ್ತು ಹೋಗುತ್ತಿದೆ. ಆದ್ದರಿಂದ ಯಾವ ಜನ್ಮ ಜ್ಞಾಪಕವು ಆ ಜನ್ಮದೊಂದಿಗೇ ಅಂತ್ಯವಾಗಿ ಹೋಗುತ್ತಿದೆ. ಪ್ರಸ್ತುತ 40 ವರ್ಷಗಳ ವಯಸ್ಸಿರುವ ವ್ಯಕ್ತಿ ಸೃಷ್ಠಿ ಆದಿಯಿಂದ ಇದ್ದಾನೆ. ಆದರೆ ಆತನು ಅಂದಿನಿಂದ ಇಂದಿನವರೆಗು ಅನೇಕ ಜನ್ಮಗಳು ಬದಲಾಗುತ್ತಾ ಬಂದಿದ್ದಾನೆ. ಹಾಗೆ ಜನ್ಮಗಳು ಬದಲಾಗುವುದರಿಂದ, ಆತನ ಮನಸ್ಸು ಆಗಿಂದಾಗಲೇ ಹೋಗುವುದರಿಂದ ಜನ್ಮಗಳ ಜ್ಞಾಪಕಗಳು ಇಲ್ಲದೆ ಹೋಗಿವೆ. ಪ್ರಸ್ತುತ ಈಗಿರುವ ಜನ್ಮದಲ್ಲಿನ 40 ವರ್ಷಗಳ ಜ್ಞಾಪಕವು ಮಾತ್ರ ಈಗ ಇದೆ. ಈ ಜನ್ಮ ಬದಲಾದರೇ ಈಗಿನ ಜ್ಞಾಪಕವು ಕೂಡಾ ಇಲ್ಲದೆ ಹೋಗಬಹುದು.

ಮನುಷ್ಯನಿಗೆ ಒಬ್ಬನಿಗೇ ಹಾಗೆ ನಡೆಯುತ್ತಿಲ್ಲ. ಪ್ರತಿ ಜೀವರಾಶಿಗು ಹಾಗೇಯೇ ನಡೆಯುತ್ತಿದೆ. ಆದರೆ ಏಸು ಕೂಡಾ ನೋಡುವುದಕ್ಕೆ ಒಬ್ಬ

ಮನುಷ್ಯನೇ ಆಗಿರುವುದರಿಂದ ಆತನಿಗೂ ಕೂಡಾ ಇದೇ ಪದ್ಧತಿ ಮುಂದುವರೆಯುತ್ತಿದೆ ಎಂದು ಯಾರಾದರೂ ಅಂದುಕೊಳ್ಳಬಹುದು. ಏಸು ಒಂದು ಕಡೆ ಹುಟ್ಟಿದ್ದಾನೆ ಎಂದರೆ ಅತನು ಮತ್ತೊಂದು ಕಡೆಯಿಂದ ಬರಬೇಕಾಗಿರುತ್ತದೆ. ಏಸು ಹಾಗೆಯೇ ಒಂದು ಕಡೆಯಿಂದ ಬಂದು ಇಜ್ರಾಯೇಲ್ ದೇಶದಲ್ಲಿ ಹುಟ್ಟುವುದು ನಡೆದಿದೆ. ಏಸು ಎಲ್ಲಿಂದ ಬಂದಿದ್ದಾನೆ ಎಂಬ ವಿಷಯವು ಆತನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ವಾಕ್ಯದಲ್ಲಿ **"ನಾನು ಎಲ್ಲಿಂದ ಬಂದಿದ್ದೇನೋ ನನಗೆ ಚೆನ್ನಾಗಿ ತಿಳಿದಿದೆ"** ಎಂದು ಹೇಳಿದ್ದಾನೆ. ಹಾಗೆಯೇ ಒಬ್ಬ ಮನುಷ್ಯ ಸತ್ತುಹೋದರೆ ಆತನು ಎಲ್ಲಿಗೆ ಹೋಗಿ ಜನ್ಮ ಎತ್ತುತ್ತಾನೋ ಆ ಮನುಷ್ಯನಿಗೆ ಏನೂ ತಿಳಿಯದು ಆದರೆ, ಏಸು ಸತ್ತು ಹೋದರೆ ಆತನು ಎಲ್ಲಿಗೆ ಹೋಗುತ್ತಾನೋ ಆತನಿಗೆ ಚೆನ್ನಾಗಿ ತಿಳಿದಿದೆ. ಅದೇ ಸಾಧಾರಣ ಮನುಷ್ಯನಿಗು ಏಸುವಿಗು ಇರುವ ವ್ಯತ್ಯಾಸ ಎಂದು ಹೇಳಬಹುದು. ಹಾಗೆ ನಡೆಯುವುದಕ್ಕೆ ಏಸುವಿನಲ್ಲಿ ಏನು ಪ್ರತ್ಯೇಕತೆ ಇದೆಯೆಂದು ಪ್ರಶ್ನೆ ಬಾರದೆ ಇರುವುದಿಲ್ಲ. ಆ ಪ್ರಶ್ನೆಗೆ ಉತ್ತರವನ್ನು ತಿಳಿದುಕೊಂಡರೆ ಅದೇ ಉತ್ತಮವಾದ ಜ್ಞಾನವಾಗುವುದು. ಆತನನ್ನು ಕುರಿತು ತಿಳಿದುಕೊಂಡರೆ ಏಸು ಸರ್ವಸಾಧಾರಣ ಮನುಷ್ಯನಲ್ಲ ಎಂದು, ಆತನು ಪ್ರತ್ಯೇಕವಾದ ಕಾರಣ ಜನ್ಮನೆಂದು ತಿಳಿಯುತ್ತಿದೆ.

ಹುಟ್ಟುವ ಮೊದಲೇ ಒಂದು ಕಾರಣವನ್ನು ಹೊಂದಿ, ಆ ಕಾರಣಕ್ಕಾಗಿ ಹುಟ್ಟುವವನನ್ನು **'ಕಾರಣ ಜನ್ಮನು'** ಎಂದು ಕರೆಯುತ್ತಿದ್ದಾರೆ. ಹಾಗೆ ಮೊದಲೇ ಉದ್ದೇಶವನ್ನು ಹೊಂದಿ ಅದಕ್ಕಾಗಿ ಯಾವ ಮನುಷ್ಯ ಹುಟ್ಟುವುದಿಲ್ಲ. ದೇವರು ಮಾತ್ರ **'ಭೂಮಿ ಮೇಲೆ ಧರ್ಮಗಳನ್ನು ಪ್ರತಿಷ್ಠಿಸುವುದು'** ಎನ್ನುವ ಉದ್ದೇಶ, ಎನ್ನುವ ಕಾರಣದಿಂದ ಹುಟ್ಟುತ್ತಿದ್ದಾನೆ. ಭೂಮಿ ಮೇಲೆ ಧರ್ಮ ಪ್ರತಿಷ್ಠಾಪನೆ ಮಾಡುವವನು ದೇವರು ಹೊರತುಪಡಿಸಿ ಯಾರೂ ಇಲ್ಲ. ದೇವರು ಎಂದಿಗೂ ಒಂದೇ ಸ್ಥಿತಿಯಲ್ಲಿ ಇದ್ದಾನೆ. ಆತನಿಗೆ ಜನ್ಮಗಳಿಲ್ಲ, ಆತನು ಹುಟ್ಟುವವನಲ್ಲ. ಆದ್ದರಿಂದ ಆತನಿಗಿರುವ ಜ್ಞಾಪಕ ಶಕ್ತಿ, ಆತನಿಗೆ ಹಾಗೆಯೇ ಇರುತ್ತದೆ. ದೇವರು ಭೂಮಿ ಮೇಲೆ ಮಾರುವೇಷದಲ್ಲಿ ಮನುಷ್ಯನಾಗಿ ಬಂದು ಧರ್ಮಗಳನ್ನು ಬೋಧಿಸಿ ಹೋಗುತ್ತಿದ್ದಾನೆ. ಯಾವಾಗಲೂ ಇರುವವನಾದ್ದರಿಂದ ದೇವರಿಗೆ

ಸಾವು ಹುಟ್ಟುಗಳು ಎರಡೂ ಇಲ್ಲ. ದೇವರು ಮನುಷ್ಯನಾಗಿ ಮಾರುವೇಷದಲ್ಲಿ ಬರುತ್ತಿದ್ದಾನೆ ಆದರೆ, ಮರಣಿಸಿ ಹುಟ್ಟಲಿಲ್ಲ. ಮರಣಿಸುವ ಮನುಷ್ಯನಿಗೆ ಮನಸ್ಸು ಹೋಗುತ್ತದೆ. ದೇವರು ಮರಣಿಸಲಿಲ್ಲ ಮತ್ತೊಂದು ಕಡೆ ಹುಟ್ಟಲಿಲ್ಲ. ಆತನು ಮನುಷ್ಯನ ಹಾಗೆ ಪ್ರತ್ಯೇಕವಾದ ವೇಷದಲ್ಲಿ ಬಂದು ಏನು ಮಾಡಬೇಕೆಂದುಕೊಂಡಿದ್ದಾನೋ ಅದನ್ನು ಮಾಡಿ ಪುನಃ ಬಂದ ಕಡೆಗೇ ಹೋಗುತ್ತಿದ್ದಾನೆ. ಆದ್ದರಿಂದ ವಾಕ್ಯದಲ್ಲಿ **"ಎಲ್ಲಿಗೆ ಹೋಗುವೆನೋ ನಾನು ತಿಳಿದಿದ್ದೇನೆ"** ಎಂದು ಹೇಳಿದ್ದಾನೆ.

ದೇವರು ಎಲ್ಲಿದ್ದಾನೋ, ಹೇಗಿದ್ದಾನೋ ಮನುಷ್ಯರಾದ ಯಾರಿಗೂ ತಿಳಿದಿಲ್ಲ. ದೇವರು ಮನುಷ್ಯನಾಗಿ ಬರುತ್ತಿದ್ದಾನೆಂದರೆ ಆತನು ಎಲ್ಲಿಂದ ಬರುತ್ತಿದ್ದಾನೋ ಯಾರಿಗೂ ತಿಳಿದಿಲ್ಲವೆಂದೇ ಹೇಳಬೇಕು. ದೇವರು ಜನ್ಮಿಸಿದ ಹಾಗೆ ಕಾಣಿಸಿದರೂ ಆತನು ಮನುಷ್ಯನ ಹಾಗೆ ಜನ್ಮಿಸುತ್ತಿಲ್ಲ. ಎಲ್ಲರ ಹಾಗೆ ಎಲ್ಲೋ ಬಂದು, ಎಲ್ಲೋ ಹುಟ್ಟುತ್ತಿಲ್ಲ. ಎಲ್ಲೆಡೆ ಅಣುವಣುವಿನಲ್ಲೂ ವ್ಯಾಪಿಸಿರುವ ದೇವರು, ತಾಯಿ ಗರ್ಭದಲ್ಲಿ ಕೂಡಾ ಇರುವ ದೇವರು ತನ್ನ ರೂಪ ಬದಲಾಯಿಸಿಕೊಂಡು ಶಿಶುರೂಪದಲ್ಲಿ ಹುಟ್ಟುತ್ತಿರುವಂತೆ ಕಾಣಿಸುತ್ತಿದ್ದಾನೆ. ಎಲ್ಲಿ ಹುಟ್ಟಿದ್ದಾನೋ ಅಲ್ಲೇ ಇರುವ ದೇವರನ್ನು ಎಲ್ಲಿಂದ ಬಂದಿದ್ದಾನೆಂದು ಹೇಳಬಲ್ಲೆವು! ಎಲ್ಲೆಡೆ ಇದ್ದಾನೆಂಬ ವಿಷಯವು ಕೂಡಾ ತಿಳಿಯದ ಮನುಷ್ಯರು ಏಸು ಎಲ್ಲಿಂದ ಬಂದಿದ್ದಾನೆಂದು ತಿಳಿಯದವರಾಗಿ ಇದ್ದಾರೆ. ಹಾಗೆಯೇ ಆತನು ತನ್ನ ರೂಪವನ್ನು ಬದಲಾಯಿಸಿಕೊಂಡು ಎಲ್ಲಿಗೆ ಹೋಗುವನೋ ತಿಳಿಯದವರಾಗಿ ಇದ್ದಾರೆ. ಆದ್ದರಿಂದ ವಾಕ್ಯದಲ್ಲಿ **"ನಾನು ಎಲ್ಲಿಂದ ಬರುತ್ತಿದ್ದೇನೋ, ಎಲ್ಲಿಗೆ ಹೋಗುತ್ತಿದ್ದೇನೋ ನೀವು ಅರಿತಿಲ್ಲ"** ಎಂದು ಏಸು ಹೇಳಿದ್ದಾನೆ.

**30) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 19ನೇ ವಚನ.**

**(19) ಅವರು ನಿನ್ನ ತಂದೆ ಎಲ್ಲಿದ್ದಾನೆಂದು ಆತನನ್ನು ಕೇಳಿದಾಗ!**

**ಏಸು “ನೀವು ನನ್ನನ್ನಾಗಲೀ, ನನ್ನ ತಂದೆಯನ್ನಾಗಲೀ ಅರಿತಿಲ್ಲ. ನನ್ನನ್ನು ಅರಿತು ಕೊಂಡಿದ್ದರೆ ನನ್ನ ತಂದೆಯನ್ನು ಸಹ ಅರಿತು ಕೊಂಡಿರುತ್ತೀರ” ಎಂದು ಅವರಿಗೆ ಹೇಳಿದನು.**

ದೇವರು ಎನ್ನುವವನು ಇದ್ದಾನಾ? ಇದ್ದರೆ ಹೇಗಿದ್ದಾನೆ? ಎಲ್ಲಿ ಇದ್ದಾನೆ? ಎಂದು ತಿಳಿದಿದ್ದರೆ ತಂದೆ ಅಂದರೆ ಏನು? ಕುಮಾರನು ಅಂದರೆ ಏನು? ಎಂಬ ವಿಷಯ ತಿಳಿಯಬಲ್ಲದು. ಇರುವವನು ದೇವರು ಒಬ್ಬನೇ ಆಗಿರುವಾಗ ಕುಮಾರನು ಎನ್ನುವವನು ಎಲ್ಲಿಂದ ಬಂದಿದ್ದಾನೋ ತಿಳಿಯಬೇಕಾಗಿರುತ್ತದೆ. ತಂದೆ, ಕುಮಾರನು ಎಂಬ ಮಾತುಗಳು ಬೈಬಲ್‌ನಲ್ಲಿ ಹೆಚ್ಚಾಗಿ ಹೇಳಲ್ಪಟ್ಟಿವೆ. ತಂದೆ ಎಂದರೇ ದೇವರು ಎಂದು ಅರ್ಥ ಮಾಡಿಕೊಳ್ಳಬೇಕು. **ಬೈಬಲ್‌ನಲ್ಲಿ ದೇವರನ್ನು ತಂದೆ ಎಂಬ ಪದದಿಂದ ಹೇಳಿದರೇ! ಖುರ್‌ಆನ್‌ನಲ್ಲಿ ದೇವರನ್ನು ಅಲ್ಲಾಹ್ ಎಂದು ಹೇಳಿದ್ದಾರೆ. ಭಗವದ್ಗೀತೆಯಲ್ಲಿ ಪರಮಾತ್ಮ ಎಂದು ಹೇಳಿದ್ದಾರೆ.** ಭಾಷೆಗಳು ಬೇರೆಯಾದರೂ ‘ದೇವರು’ ಎಂಬ ಭಾವನೆ ಒಂದೇ ಇದೆ. ದೇವರೆನ್ನುವ ಭಾವವನ್ನು ತಂದೆ ಎಂಬ ಪದದ ಬಳಿ ನೋಡಬೇಕಾಗಿದೆ. ಏಸು ಭೂಮಿ ಮೇಲೆ ಇದ್ದಾಗ ಸರ್ವಸಾಧಾರಣವಾಗಿ ನಿನ್ನ ತಂದೆ ಎಲ್ಲಿದ್ದಾನೆಂದು ಕೇಳಿದಾಗ! ಏಸು ನೇರವಾಗಿ **“ನೀವು ನನ್ನನ್ನಾಗಲೀ ನನ್ನ ತಂದೆಯನ್ನಾಗಲೀ ನೋಡಿರುವುದಿಲ್ಲ”** ಎಂದು ಹೇಳಿದ್ದಾನೆ. ಪ್ರಜೆಗಳು ಏಸುವನ್ನು ನೋಡಿದ್ದೇವೆಂದು ಏಸುವನ್ನು ಕುರಿತು ಕೇಳಲಿಲ್ಲ ಆದರೆ, ಏಸು ತಂದೆ ಯಾರೆಂದು ತಿಳಿಯುವ ನಿಮಿತ್ತ ಪ್ರಪಂಚ ಸಂಬಂಧ ಅರ್ಥದಿಂದ ಕೇಳಿದ್ದಾರೆ ಆದರೆ ತಂದೆ ಎಂದರೆ ದೇವರು ಎಂಬ ಭಾವದಿಂದ ಅವರು ಕೇಳಲಿಲ್ಲ. ಅದಕ್ಕೆ ಉತ್ತರವಾಗಿ ಏಸು ತನ್ನನ್ನು ಕುರಿತು, ತನ್ನ ತಂದೆಯನ್ನು ಕುರಿತು ಒಂದೇ ಸಲ ಕಡ್ಡಿ ಮುರಿದಂತೆ ಹೇಳುವುದರಿಂದ ಅವರಿಗೆ ಆಶ್ಚರ್ಯ ಉಂಟಾಗಿರಬಹುದು. ಪ್ರತ್ಯಕ್ಷವಾಗಿ ಕಾಣಿಸುವ ಏಸುವನ್ನು ಅವರು ನೋಡುತ್ತಿದ್ದೇವೆ ಎಂದು ಅಂದುಕೊಂಡಿದ್ದಾರೆ. ತಿಳಿಯದ ಏಸು ಒಬ್ಬನ ತಂದೆ ಯಾರೋ ತಿಳಿದುಕೊಳ್ಳೋಣ ಎಂದು ಕೇಳಿದ್ದಾರೆ. ಆಗ ಏಸು **‘ನನ್ನನ್ನಾಗಲೀ,**

**ನನ್ನ ತಂದೆಯನ್ನಾಗಲೀ ನೋಡಿರುವುದಿಲ್ಲ'** ಎಂದು ಹೇಳಿದ್ದಾನೆ. ಆ ಮಾತಿನ ವೊಂದು ಅರ್ಥವನ್ನು ನಾವು ತಿಳಿಯಬೇಕಾಗಿದೆ.

ಏಸು ತಂದೆ ಪರಿಶುದ್ಧಾತ್ಮ ಆಗಿ ಇದ್ದಾನೆ. ಪರಿಶುದ್ಧಾತ್ಮನ ಕುಮಾರನಾದ ಆತ್ಮ ಸರ್ವ ಶರೀರಗಳಲ್ಲಿ ಇದ್ದೂ ಶರೀರಗಳನ್ನು ನಡೆಸುತ್ತಿದ್ದಾನೆ. ದೇವರಾದ ಪರಿಶುದ್ಧಾತ್ಮಕ್ಕೆ ಆತ್ಮವೆಂಬ ಕುಮಾರನು ಒಬ್ಬನಿದ್ದಾನೆ. ಪರಿಶುದ್ಧಾತ್ಮ, ಆತ್ಮ ಎಂದರೇ! ತಂದೆ, ಕುಮಾರನು ಇಬ್ಬರು ಸನಾತರು. ಅಂದರೆ ಯಾವಾಗಲೂ ಇರುವವರು. ಪರಿಶುದ್ಧಾತ್ಮನಾದ ಪರಮಾತ್ಮ ಎಲ್ಲ ಕಾಲದಲ್ಲೂ ಇರುವವನೇ. ಪರಮಾತ್ಮ ಸೃಷ್ಠಿಗಿಂತಲೂ ಮೊದಲಿನಿಂದ ಇದ್ದಾನೆ. ಪರಿಶುದ್ಧಾತ್ಮ ಕುಮಾರನು ಎನಿಸಿಕೊಂಡ ಆತ್ಮ ಸೃಷ್ಠಿ ನಂತರ ಎಂದಿಗೂ ಶರೀರಗಳಲ್ಲಿ ಇದ್ದಾನೆ.

ಪರಿಶುದ್ಧಾತ್ಮನಾದ ದೇವರಿಗೆ ಆತ್ಮವೆಂಬ ಶಾಶ್ವತ ಕುಮಾರನು ಅಲ್ಲದೆ ಆಗಾಗ **"ಅದ್ವಿತೀಯ ಕುಮಾರನು"** ಎಂಬ ಹೆಸರಿನಿಂದ ಮತ್ತೊಬ್ಬ ಕುಮಾರನು ಭೂಮಿ ಮೇಲಕ್ಕೆ ಬಂದು ಹೋಗುತ್ತಿರುತ್ತಾನೆ. ದೇವರ ಕುಮಾರನಾದ ಆತ್ಮಕ್ಕು, ತಾತ್ಕಾಲಿಕ ಕುಮಾರನಾದ ಅದ್ವಿತೀಯ ಕುಮಾರನಾದವನಿಗು ಶಾಶ್ವತ ವ್ಯತ್ಯಾಸಗಳು ಇವೆ. ಉದಾಹರಣೆಗೆ ಆತ್ಮ ಸಾಧಾರಣ ಮನುಷ್ಯನ ಶರೀರದೊಂದಿಗೆ ಬಂದರೂ, ಅದರಲ್ಲಿ ಪ್ರತ್ಯೇಕವಾದ ಜೀವಾತ್ಮ ಕೂಡಾ ಇರುತ್ತದೆ. ಶರೀರವು ಪೂರ್ತಿ ಆತ್ಮದ್ದೇ ಆದರೂ, ಆತ್ಮವೇ ಶರೀರಕ್ಕೆ ಅಧಿಪತಿ ಆದರೂ, ಶರೀರದಲ್ಲಿ ಜೀವಾತ್ಮ ಕೂಡಾ ಆತ್ಮದೊಂದಿಗೆ ಸಹ ನಿವಾಸ ಮಾಡುತ್ತಾ, ಶರೀರವು ನನ್ನದೇಯೆಂದು ಜೀವಾತ್ಮ ಅಂದುಕೊಳ್ಳುತ್ತಿರುತ್ತಾನೆ. ತಾತ್ಕಾಲಿಕ ಕುಮಾರನಾದ ಅದ್ವಿತೀಯ ಕುಮಾರನು ಶರೀರದೊಂದಿಗೆ ಬಂದಿದ್ದರೂ, ಆತನ ಶರೀರದಲ್ಲಿ ಜೀವಾತ್ಮ ಇರುವುದಿಲ್ಲ. ಆತ್ಮ ಕುಮಾರನಾಗಿ ಇರುವ ಸಾಧಾರಣ ಮನುಷ್ಯನ ಶರೀರದಲ್ಲಿ ದೇವರು ಬೇರೆ, ಆತ್ಮ ಬೇರೆಯಾಗಿದ್ದು ದೇವರು ಕೆಲಸ ಮಾಡದಿದ್ದರೂ ಎಲ್ಲಾ ಕಾರ್ಯಗಳನ್ನು ಆತ್ಮವೇ ಮಾಡುತ್ತಿದೆ. ಆದರೆ ಅದ್ವಿತೀಯ ಕುಮಾರನ ಶರೀರದಲ್ಲಿ ಪರಮಾತ್ಮನೇ (ದೇವರೇ) ಆತ್ಮನಂತೆ ಇದ್ದೂ ಆತ್ಮ ರೂಪದಲ್ಲಿ ಕಾರ್ಯಗಳನ್ನು ಮಾಡುತ್ತಿದ್ದಾನೆ. ಅದ್ವಿತೀಯ ಕುಮಾರನ ಶರೀರದಲ್ಲಿ ಜೀವಾತ್ಮ

ಇಲ್ಲದಿರುವುದರಿಂದ ಆತ್ಮನಂತೆ ಇರುವವನೇ ಜೀವಾತ್ಮನಂತೆ ಕೂಡಾ ಇರಬೇಕಾಗಿ ಬಂದಿದೆ. ಒಟ್ಟಾರೆ ಅದ್ವಿತೀಯ ಕುಮಾರನ ಶರೀರದಲ್ಲಿ ವಾಸ್ತವವಾಗಿ ಆತ್ಮದ ಹಾಗೆ ಇರುವವನು ದೇವರೇ ಆದರೂ ಆತನೇ ಜೀವಾತ್ಮದ ಹಾಗೆ ನಟಿಸುತ್ತಿದ್ದಾನೆ. **ಅದ್ವಿತೀಯ ಕುಮಾರನ ಹಾಗೆ ಮಾರುವೇಷದಲ್ಲಿ ಬಂದವನು ಪರಿಶುದ್ಧಾತ್ಮನಾದ ದೇವರೇ. ಆ ದೇವರೇ ಜೀವಾತ್ಮನಂತೆ ಭ್ರಮಿಸುವ ಹಾಗೆ ಮಾಡುತ್ತಿದ್ದಾನೆ.** ವಾಸ್ತವಕ್ಕೆ ದೇವರ ಶಾಶ್ವತ ಕುಮಾರನಿಗೆ, ದೇವರ ತಾತ್ಕಾಲಿಕ ಕುಮಾರನಾದ ಅದ್ವಿತೀಯ ಕುಮಾರನಿಗೆ ಎಷ್ಟೋ ವ್ಯತ್ಯಾಸಗಳಿವೆ.

ಒಟ್ಟಾರೆ ದೇವರಿಗೆ ಶಾಶ್ವತ ಕುಮಾರನಿರುವ ವಿಷಯವಾಗಲೀ, ಅದ್ವಿತೀಯ ಕುಮಾರನಾಗಿ ಆಗಾಗ ಬರುವ ಕುಮಾರನಾಗಲಿ ಹೀಗಿದ್ದಾನೆಂಬ ವಾಸ್ತವ ವಿಷಯವು ಬಹಳ ಜನರಿಗೆ ತಿಳಿಯದೆಂದೇ ಹೇಳಬಹುದು. ಜ್ಞಾನ ಸಂಪಾದನೆಯಿಂದ ದೇವರ ಕುಮಾರನಾದ ಆತ್ಮ ಇರುವಿಕೆಯನ್ನು, ಆತ್ಮಜ್ಞಾನವನ್ನು ತಿಳಿಯಬಹುದು ಆದರೆ, ಅದ್ವಿತೀಯ ಕುಮಾರನಾಗಿ ಬಂದವನನ್ನು ತಿಳಿಯುವುದು ಕಷ್ಟ. ಅನೇಕವಾಗಿ ಇರುವ ಮಾನವರಲ್ಲಿ ಅದ್ವಿತೀಯ ಕುಮಾರನನ್ನು ಗುರುತಿಸುವುದು ಕಷ್ಟ. ಆದ್ದರಿಂದ ಅದ್ವಿತೀಯ ಕುಮಾರನಾಗಿ ಬಂದವನನ್ನು **ತ್ರೇತಾಯುಗದಲ್ಲಿಯೂ, ದ್ವಾಪರಯುಗದಲ್ಲಿಯೂ, ಕಲಿಯುಗದಲ್ಲಿಯೂ** ಯಾರೂ ಗುರುತಿಸಲಾರದೇ ಹೋಗಿದ್ದಾರೆ. ಕಲಿಯುಗದಲ್ಲಿ ದೇವರ ತಾತ್ಕಾಲಿಕ ಕುಮಾರನಾದ ಅದ್ವಿತೀಯ ಕುಮಾರನಾಗಿ ಬಂದವನು ಏಸು ಆದರೂ ಆತನನ್ನು ನಿಜವಾಗಿ ದೇವರ ಎರಡನೆಯ ಕುಮಾರನೆಂದು ಪ್ರಜೆಗಳು ಗುರುತಿಸಲಾರದೇ ಹೋಗಿದ್ದಾರೆ. ಗುರುತಿಸದೆ ಹೋಗುವುದಲ್ಲದೇ ನಾನು ದೇವರ ಕುಮಾರನೆಂದು ಆತನೇ ಹೇಳಿದರೂ ಲೆಕ್ಕಿಸದೆ, ಅನೇಕ ಅವಮಾನಗಳ ಪಾಲು ಮಾಡುವುದೇ ಅಲ್ಲದೇ ಹಿಂಸೆಗಳಿಗು ಕೂಡಾ ಗುರಿ ಮಾಡಿದ್ದಾರೆ. ತ್ರೇತಾಯುಗದಲ್ಲಿ ಬಂದಿರುವವನು ಹೊರತುಪಡಿಸಿ ಉಳಿದ ದ್ವಾಪರ, ಕಲಿಯುಗಗಳಲ್ಲಿ ಬಂದಿರುವವರು ನಾನು ದೇವರ ಕುಮಾರನೆಂದು ಹೇಳಿದರೂ ಪ್ರಜೆಗಳು ಗುರುತಿಸಲಾರದೇ ಹೋಗಿದ್ದಾರೆ. ತ್ರೇತಾಯುಗದಲ್ಲಿ ಬಂದವನು ಇಂಥವನು ಎಂದು ಈ ದಿನ ಹೇಳುವುದಕ್ಕೆ ಕೂಡಾ ಭಯಪಡಬೇಕಾಗಿ ಬರುತ್ತಿದೆ. ಆ

ದಿನ ದೇವರೇ ಮಾರುವೇಷದಲ್ಲಿ ಕುಮಾರನ ಹಾಗೆ ಬಂದು ಭೂಮಿಮೇಲೆ ಜ್ಞಾನವನ್ನು ಹೇಳಿಹೋಗಿದ್ದಾನೆ. ಆ ದಿನ ಆತನು ಬ್ರಹ್ಮಜ್ಞಾನಿ ಎಂದು ಹೆಸರುವಾಸಿಯಾದರೂ, ದೈವಜ್ಞಾನವನ್ನು ಬೋಧಿಸಿದರೂ ಆತನನ್ನು ಅಮಿತ ದುರ್ಮಾರ್ಗನನ್ನಾಗಿ ಚಿತ್ರಿಸಿ ಪ್ರಜೆಗಳಲ್ಲಿ ಪ್ರಚಾರ ಮಾಡುವುದರಿಂದ ನಾನು ಕೂಡಾ ಆತನು ಭಗವಂತನು ಎಂದು ಹೇಳುವುದಕ್ಕು ಕೂಡಾ ಭಯಪಡಬೇಕಾಗಿ ಬಂದಿದೆ. ಆದರೂ ನಾನು ಭಯಪಡದೆ **'ರಾವಣಬ್ರಹ್ಮನೇ ಆ ದಿನದ ಅದ್ವಿತೀಯ ಕುಮಾರನೆಂದು'** ಹೇಳುತ್ತಿದ್ದೇನೆ.

ದ್ವಾಪರಯುಗದಲ್ಲಿ ಕೃಷ್ಣನು ಭಗವಂತನಾಗಿ ಬಂದಿದ್ದಾನೆ. ಭಗವಂತನೆಂದರೆ ಅದ್ವಿತೀಯ ಕುಮಾರನು ಎಂದು ತಿಳಿಯಬೇಕು. ಆದರೆ ಆತನನ್ನು ಕೂಡಾ ಜಾರನ, ಚೋರನ ಕೆಳಗೆ ಜಮುಮಾಡಿ, ಹಾಗೆಯೇ ಚಿತ್ರಿಸಿ ಹೇಳುವುದರಿಂದ ಅಂದಿನಿಂದ ಇಂದಿನವರೆಗು ಆತನನ್ನು ಕುರಿತು ತಿಳಿಯುವವರೇ ಇಲ್ಲ. ದೇವರು ಮನುಷ್ಯನಾಗಿ ಮಾರುವೇಷದಲ್ಲಿ ಕುಮಾರನಾಗಿ ಬಂದು ದೈವಧರ್ಮಗಳನ್ನು ತಿಳಿಸಿದರೂ, ಆತನು ಹೇಳಿರುವ ಜ್ಞಾನವನ್ನು ನೋಡದೆ ಅಂದಿಗೆ ತಕ್ಕಂತೆ ಮಾಡಿರುವ ಪ್ರಪಂಚ ಕೆಲಸಗಳನ್ನೇ ಹೇಳುತ್ತಿದ್ದಾರೆ. ಆತನು ಹೇಳಿರುವ ಜ್ಞಾನವು ಕೆಲವು ಕೋಟಿಗಳಲ್ಲಿ ಕೆಲವರು ಮಾತ್ರವೇ ಗುರುತಿಸಿ ಆತನು ದೇವರೆಂದೇ ಹೇಳುತ್ತಿದ್ದಾರೆ ಹೊರತು, ಉಳಿದವರೆಲ್ಲರೂ ಕೆಟ್ಟದಾಗಿಯೇ ಹೇಳುತ್ತಿದ್ದಾರೆ. ದ್ವಾಪರ ಯುಗದಲ್ಲಿ ಬಂದಿರುವ ಕೃಷ್ಣನ ಅವತಾರವನ್ನು ತಿಳಿಯದವರು, ಕಲಿಯುಗದಲ್ಲಿ ಬಂದಿರುವ ಏಸುವನ್ನು ದೇವರ ಕುಮಾರನನ್ನಾಗಿ ಗುರುತಿಸಲಾರದೇ ಹೊಗಿದ್ದಾರೆ. ಪ್ರಜೆಗಳು ತಮ್ಮನ್ನು ಗುರುತಿಸದೆ ಹೋಗಿರುವುದರಿಂದ, ತಾವು ಹೇಳುವ ಜ್ಞಾನವನ್ನು ಕೂಡಾ ಗುರುತಿಸುವುದಿಲ್ಲ ಎಂಬ ಭಾವದಿಂದ ತಾವು ಇಂಥವರು ಎಂದು ಹೇಳುವುದರಿಂದ ತಮ್ಮ ಜ್ಞಾನವನ್ನು ಗುರುತಿಸಬಲ್ಲರೆಂಬ ನಂಬಿಕೆಯಿಂದ ಅತ್ತ ಕೃಷ್ಣನು, ಇತ್ತ ಏಸು ಇಬ್ಬರೂ ತಮ್ಮ ಮಾತುಗಳ ಸಂದರ್ಭದಲ್ಲಿ **"ನಾವೇ ದೇವರುಗಳು"** ಎಂದು ಹೇಳಿದ್ದಾರೆ. ಅದೇ ವಿಧಾನದಲ್ಲಿ ತಮ್ಮನ್ನು ಗುರುತಿಸಬೇಕೆಂಬ ಉದ್ದೇಶದಿಂದ, ದೇವರು ನಾನು ಇಬ್ಬರೂ ಒಂದೇಯೆಂದು ತಿಳಿಸುವ ನಿಮಿತ್ತ ಮೇಲಿನ

ವಾಕ್ಯದಲ್ಲಿ **"ನೀವು ನನ್ನನ್ನಾಗಲೀ, ನನ್ನ ತಂದೆಯನ್ನಾಗಲೀ ತಿಳಿದಿಲ್ಲ"** ಎಂದು ಹೇಳಿದ್ದಾನೆ.

ದೇವರ ಮೇಲೆ ನಮಗೆ ಭಕ್ತಿ ಇದೆಯೆನ್ನುವವರೇ ತಮಗಿಂತ ಹೆಚ್ಚಾಗಿ ಜ್ಞಾನವಿರುವವರು ಕಾಣಿಸಿದರೆ ಅವರನ್ನು ಹೇಳನವಾಗಿ ಮಾತನಾಡುತ್ತಿರುತ್ತಾರೆ. ಅದೇ ಭಾವದಿಂದ ಏಸುವನ್ನು ಮಾತನಾಡುವುದು ನಡೆದಿದೆ. ಏಸು ತಂದೆ ಇಲ್ಲದೆ ಮರಿಯಮ್ಮ ಎಂಬ ಆಕೆಗೆ ಹುಟ್ಟಿದ್ದಾನೆಂದು ತಿಳಿದವರಾಗಿ ಏಸುವನ್ನು ಒಂದೇ ಸಲ "ನಿನ್ನ ತಂದೆ ಎಲ್ಲಿದ್ದಾನೆ" ಎಂದು ಕೇಳಿದರು. ಅವರು ಕೇಳಿರುವುದು ಭಕ್ತಿ ಭಾವದಿಂದ ಅಲ್ಲ ಅವಹೇಳನ ಭಾವದಿಂದ ಎಂದು ಅರ್ಥವಾಗುತ್ತಿದೆ. ಅವರು ಹಾಗೆ ಕೇಳಿದಾಗ ಅರ್ಥಮಾಡಿಕೊಂಡ ಏಸು ಅವರಿಗೆ ತಲೆ ತಿರುಗಿ ಹೋಗುವ ಸಮಾಧಾನ ಕೊಟ್ಟನು. **"ನೀವು ನನ್ನನ್ನಾಗಲೀ, ನನ್ನ ತಂದೆಯನ್ನಾಗಲೀ ಅರಿತಿಲ್ಲ"** ಎಂದನು. ಆ ಮಾತನ್ನು ಅರ್ಥಮಾಡಿಕೊಂಡರೆ ಕಾಣಿಸುವ ಏಸು, ಕಾಣಿಸದ ದೇವರು ಇಬ್ಬರೂ ಒಂದೇ ಎಂದು ತಿಳಿಯುತ್ತದೆ. ಅಷ್ಟೇ ಅಲ್ಲದೇ ಎರಡನೆ ಮಾತಲ್ಲಿ **"ನನ್ನನ್ನು ಅರಿತುಕೊಂಡಿದ್ದರೆ ನನ್ನ ತಂದೆಯನ್ನು ಸಹ ಅರಿತುಕೊಂಡಿರುತ್ತೀರಿ"** ಎಂದು ಅವರಿಗೆ ಹೇಳಿದನು. ಆ ಮಾತು ಕೇಳಿಸಿಕೊಂಡ ಅವರು ಆತನು ಹೇಳಿರುವುದು ಯಾವುದನ್ನೂ ಗ್ರಹಿಸಿಕೊಳ್ಳಲಿಲ್ಲವೆಂದು ಹೇಳಬಹುದು. ಏಕೆಂದರೇ! ಅವರು ಆತನ ಮಾತನ್ನು ಗ್ರಹಿಸಿಕೊಂಡಿದ್ದರೆ ಆತನು ಯಾರೋ ಆಗಲೇ ಅವರಿಗೆ ಅರ್ಥವಾಗುತ್ತಿತ್ತು. ಆತನು ಸಾಧಾರಣ ಮನುಷ್ಯನಲ್ಲವೆಂದು ತಿಳಿದು ಹೋಗುತ್ತಿತ್ತು. ಆದರೇ ಏಸು ಆ ಮಾತು ಹೇಳಿದ್ದರೂ ಆತನನ್ನು ಸಾಧಾರಣ ಮನುಷ್ಯನನ್ನಾಗಿಯೇ ಪ್ರಜೆಗಳು ನೋಡಿದ್ದಾರೆಂದರೆ, ಅವರಿಗೆ ಏಸುವನ್ನು ಕುರಿತು ಪ್ರತ್ಯೇಕವಾಗಿ ಏನೂ ತಿಳಿಯದೆಂದು ಅರ್ಥವಾಗುತ್ತಿದೆ.

**31) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 21ನೇ ವಚನ.**

**(21) ನಾನು ಹೊರಟು ಹೋಗುತ್ತಿದ್ದೇನೆ. ನೀವು ನನ್ನನ್ನು**

**ಹುಡುಕುತ್ತೀರ ಆದರೇ ನಿಮ್ಮ ಪಾಪಗಳಲ್ಲಿಯೇ ಇದ್ದು ಸತ್ತು ಹೋಗುತ್ತೀರ ನಾನು ಹೋಗುವ ಜಾಗಕ್ಕೆ ನೀವು ಬರಲಾರಿರಿ ಎಂದು ಅವರಿಗೆ ಹೇಳಿದನು.**

ಏಸುಪ್ರಭು ಪ್ರಜೆಗಳಿಗೆ ತನ್ನನ್ನು ಕುರಿತು ತಿಳಿಯುವುದಕ್ಕೆ ಅವಕಾಶವಿರುವ ಮಾತುಗಳನ್ನು ಅನೇಕ ಹೇಳಿದ್ದಾನೆ. ಅಂತಹ ಮಾತುಗಳಲ್ಲಿ ಮೇಲಿನ ವಾಕ್ಯವು ಕೂಡಾ ಒಂದು. ಅದರಲ್ಲಿ **"ನಾನು ಹೊರಟು ಹೋಗುತ್ತಿದ್ದೇನೆ, ನೀವು ನನ್ನನ್ನು ಹುಡುಕುತ್ತೀರಿ ಆದರೇ ನಾನು ಹೋಗುವ ಜಾಗಕ್ಕೆ ನೀವು ಬರಲಾರಿರಿ"** ಎಂದು ಪ್ರಜೆಗಳಿಗೆ ಹೇಳಿದ್ದಾನೆ. ಇಲ್ಲಿಯವರೆಗು ಇರುವ ಈ ವಾಕ್ಯದಲ್ಲಿ ವಿಶೇಷತೆ ಏನೂ ಇಲ್ಲ. ಒಬ್ಬ ಮನುಷ್ಯ ಹೇಳದೇನೇ ಎಲ್ಲಿಗಾದರೂ ಹೋಗುವಾಗ ಆತನು ಎಲ್ಲಿಗೆ ಹೋಗುವುದು ತಿಳಿಯದು. ಆತನನ್ನು ಹುಡುಕಿದರೂ ಇಂತಹ ಕಡೆ ಇದ್ದಾನೆಂದು ತಿಳಿಯಲಾಗುವುದಿಲ್ಲ. ಹಾಗೆ ತಿಳಿಯದಿದ್ದಾಗ ಆತನು ಹೋಗಿರುವ ಜಾಗಕ್ಕೆ ನಾವು ಹೋಗಲಾರೆವೆಂದೇ ಅಲ್ಲವೇ! ಅರ್ಥ. ಇದು ಸರ್ವಸಾಧಾರಣವೇ ಅಲ್ಲವೇ! ಇದರಲ್ಲಿ ಜ್ಞಾನವೇನೂ ಇಲ್ಲ ಅಲ್ಲವೇ! ಎಂದು ಹೇಳಬಹುದು. ಇದೇ ವಿಷಯವನ್ನೇ ಇನ್ನೊಂದು ಕೋನದಲ್ಲಿ ಹೇಳಿಕೊಂಡರೇ ಚೆನ್ನಾಗಿ ಅರ್ಥವಾಗುತ್ತದೆ ನೋಡಿರಿ. ಚಿಕ್ಕ ವಯಸ್ಸಿನಲ್ಲಿ ಕಳ್ಳ, ಪೊಲೀಸ್ ಆಟ ಆಡುತ್ತಿದ್ದೆವು. ಅದರಲ್ಲಿ ಕಳ್ಳ ಹೋಗಿ ಎಲ್ಲೋ ಒಂದು ಕಡೆ ಬಚ್ಚಿಟ್ಟುಕೊಳ್ಳುತ್ತಾನೆ. ಆಗ ಎರಡು ನಿಮಿಷಗಳ ನಂತರ ಹೊರಟ ಪೊಲೀಸ್ ಕಳ್ಳನನ್ನು ಹುಡುಕಿ ಹಿಡಿದುಕೊಳ್ಳಬೇಕು. ಆದರೇ ಕಳ್ಳ ಹೋಗಿರುವ ಜಾಗಕ್ಕೆ ಪೊಲೀಸ್ ಹೋಗಬೇಕಾಗಿರುತ್ತದೆ. ಹಾಗೆ ಪೊಲೀಸ್ ಹೋಗದಿದ್ದರೆ ಎಲ್ಲಾ ಕಡೆ ಎಷ್ಟು ಹುಡುಕಿದರೂ ಕಳ್ಳನನ್ನು ಕಂಡುಹಿಡಿಯಲಾರರು. ನನ್ನ ವಯಸ್ಸು ಹತ್ತು ವರ್ಷಗಳಿರುವಾಗ ನಾನು ಕಳ್ಳ ಪೊಲೀಸ್ ಆಟ ಆಡುತ್ತಿದ್ದೆನು. ಒಂದು ದಿನ ನಾನು ಕಳ್ಳ, ಉಳಿದವರು ಪೊಲೀಸ್. ನಾನು ಎರಡು ನಿಮಿಷಗಳ ಮೊದಲೆ ಹೊರಟು ಹೋಗುತ್ತಿರುವಾಗ 'ನಾನು ಹೋಗುತ್ತಿದ್ದೇನೆ ನೀವು ನನ್ನನ್ನು ಹುಡುಕಿದರೂ ಕಂಡುಹಿಡಿಯಲಾರಿರಿ' ಎಂದು ಹೇಳಿದೆನು. ಆಗ ಅವರು

ಯಾಕೆ ಕಂಡು ಹಿಡಿಯಲಾರೆವು ಹತ್ತು ನಿಮಿಷಗಳಲ್ಲಿ ಹಿಡಿದುಕೊಳ್ಳುತ್ತೇವೆ ಎಂದರು. ಆಗ "ನಾನು ಹೋಗುವ ಜಾಗಕ್ಕೆ ನೀವು ಬರಲಾರಿರಿ" ಎಂದು ಮತ್ತೆ ಹೇಳಿಹೋದೆನು.

ಎರಡು ನಿಮಿಷಗಳ ನಂತರ ಪೊಲೀಸ್ ಬೇಟೆ ಪ್ರಾರಂಭವಾಯಿತು. ಆದರೆ ಅವರು ಅರ್ಧ ಗಂಟೆಯವರೆಗು ನನ್ನನ್ನು ಕಂಡುಹಿಡಿಯಲಾರದೇ ಹೋದರು. ಅವರು ಎಲ್ಲಾ ಜಾಗಗಳಲ್ಲಿ ಹುಡುಕಿದರೂ ನಾನು ಅವರಿಗೆ ಕಾಣಿಸಲಿಲ್ಲ. ನಾನು ಬಚ್ಚಿಟ್ಟುಕೊಂಡ ಜಾಗಕ್ಕೆ ಅವರು ಬರಲಾರದೇ ಹೋದರು. ನಾನು ಆ ದಿನ ಒಂದು ಮನೆಯಲ್ಲಿನ ದೇವರ ಕೋನೆಯಲ್ಲಿ ಕುಳಿತುಕೊಂಡು, ಕೋನೆಯ ಬಾಗಿಲುಗಳನ್ನು ಹಾಕಿಕೊಂಡಿದ್ದೆನು. ಪೊಲೀಸಾಗಿರುವವರು ಎಲ್ಲಾ ಕಡೆ ಹುಡುಕಿದರು. ನಾನು ಬಚ್ಚಿಟ್ಟುಕೊಂಡ ಮನೆಯೊಳಗು ಕೂಡಾ ಬಂದು ನೋಡಿದರು ಆದರೂ ನಾನಿರುವ ದೇವರ ಕೋಣೆಯ ಬಳಿ ಅವರು ಬರಲಿಲ್ಲ. ಆ ಕೋಣೆಯ ಬಾಗಿಲು ಹಾಕಿದ್ದರಿಂದ ಅವರು ಅದನ್ನು ನೋಡಲಿಲ್ಲ. ಮೇಲಿನ ವಾಕ್ಯವು ಕಳ್ಳ, ಪೊಲೀಸ್ ಆಟಕ್ಕೆ ಸಮಾನವಾಗಿ ಇರುವುದರಿಂದ ಈ ವಾಕ್ಯದಲ್ಲಿ ಏನು ವಿಶೇಷತೆ ಇದೆಯೆಂದು ಅಂದುಕೊಂಡೆನು. ವಿಶೇಷತೆಯಾಗಲೀ, ಜ್ಞಾನವಾಗಲೀ ಏನೂ ಇಲ್ಲದ ವಾಕ್ಯವನ್ನು ಏಸು ಯಾಕೆ ಹೇಳಿದ್ದಾನೆಂದು ಸ್ವಲ್ಪ ಆಲೋಚಿಸಿದಾಗ! ಈ ವಾಕ್ಯದಲ್ಲಿ **"ನಿಮ್ಮ ಪಾಪಗಳಲ್ಲಿಯೇ ಇದ್ದು ಸತ್ತು ಹೋಗುತ್ತೀರಿ"** ಎನ್ನುವ ಮಾತು ಪ್ರತ್ಯೇಕವಾಗಿ ಕಾಣಿಸಿದೆ. ಆಗ ಈ ವಾಕ್ಯವನ್ನು ಕುರಿತು ಆಲೋಚಿಸಿದಾಗ ಅದು ಕಳ್ಳ ಪೊಲೀಸ್ ಆಟದ ಹಾಗೆ ಇದ್ದರೂ ಅದರಲ್ಲಿ ದೊಡ್ಡ ಜ್ಞಾನ ಇದೆಯೆಂದು ತಿಳಿಯಿತು. ಆಗ ಈ ವಾಕ್ಯವನ್ನು ಕುರಿತು ಸಮಗ್ರವಾಗಿ ತಿಳಿದುಕೊಂಡೆನು. ಅದು ಏನೆಂದರೇ! ಹೀಗಿದೆ.

ಏಸು ಸ್ವಲ್ಪ ಕಾಲ ಭೂಮಿ ಮೇಲೆ ಎಲ್ಲರಿಗೂ ಕಾಣಿಸುವ ಹಾಗೆ ಇದ್ದಾನೆ. ಆಗ ಏಸು ಪ್ರಭುವನ್ನು ಯಾರೂ ವಿಶ್ವಾಸಿಸಲಿಲ್ಲ. ಆದರೂ ತಾನು ಸಾಧಾರಣ ಮನುಷ್ಯನಲ್ಲದ ಹಾಗೆ ಏಸು ಮನುಷ್ಯರ ಮಧ್ಯದಲ್ಲಿ ಅನೇಕ ಮಹಿಮೆಗಳನ್ನು ತೋರಿಸಿದ್ದಾನೆ. ತಾನು ಪಾಪಗಳನ್ನು ಕ್ಷಮಿಸುವವನೆಂದು

ತಿಳಿಯುವ ಹಾಗೆ ಕುರುಡನಿಗೆ ದೃಷ್ಠಿಯನ್ನು, ಕುಂಟನಿಗೆ ನಡಿಗೆಯನ್ನು ಕೊಟ್ಟನು. ಕುಷ್ಟ ರೋಗಿಗೆ ರೋಗವಿಲ್ಲದೇ ಮಾಡಿದನು. ಸತ್ತು ಹೋದವರಿಗೆ ಪ್ರಾಣ ಬರುವ ಹಾಗೆ ಮಾಡಿದನು. ಆದರೂ ಪ್ರಜೆಗಳು ಆತನ ಹಿರಿಮೆಯನ್ನು ಗುರುತಿಸಲಾರದೇ ಹೋದರು. ಆತನು ಇದ್ದಾಗ ಗುರುತಿಸದವರು ಆತನು ಹೋದ ನಂತರ ಅವರ ಬಾಧೆಗಳ ನಿವಾರಣೆಗಾಗಿ ಹುಡುಕುವುದಕ್ಕೆ ಪ್ರಾರಂಭ ಮಾಡುವರು. ಆಗ ಏಸು ಯಾರಿಗೂ ಕಾಣಿಸದೆ ಹೋಗಿರುವುದರಿಂದ ಆತನನ್ನು ಹುಡುಕಿದರೂ ಪ್ರಯೋಜನೆ ಇರುವುದಿಲ್ಲ. ಏಸುವನ್ನು ಯಾರೂ ಕೇಳದಿದ್ದರೂ ಆತನೇ ಅವರ ಪಾಪಗಳನ್ನು ಇಲ್ಲದಂತೆ ಕ್ಷಮಿಸಿದನು. ಅದರಿಂದ ಅನೇಕರಿಗೆ ಕರ್ಮ ನಿವಾರಣೆ ಆಗಿದೆ. ನಂತರ ಕೂಡಾ ಅವರ ಪಾಪಗಳನ್ನು ಇಲ್ಲದೇ ಮಾಡಿಕೊಳ್ಳುವುದಕ್ಕೆ ಏಸು ಪ್ರಭುವನ್ನು ಹುಡುಕಿದರೂ ಆತನು ಕಾಣಿಸುವುದಿಲ್ಲ. ಆಗ ಅವರ ಪಾಪಗಳು ಕ್ಷಮಿಸಲ್ಪಡುವುದಿಲ್ಲ. ಆದ್ದರಿಂದ ಅವರ ಪಾಪಗಳಲ್ಲಿಯೇ ಇದ್ದು ಅವರು ಸತ್ತು ಹೋಗುವುದು ನಡೆಯುತ್ತದೆ. ಅನುಭವಿಸುವ ಪಾಪಗಳಿಂದ ಪ್ರಜೆಗಳು ಸತ್ತು ಹೋಗುತ್ತಾರೆ. ಹಾಗೆ ಸತ್ತು ಹೋದರೂ ನಂತರದ ಜನ್ಮದಲ್ಲಾದರೂ ಅವರು ಏಸು ಮೂಲಕ ಪಾಪಗಳನ್ನು ಇಲ್ಲದೇ ಮಾಡಿ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೇ! ಏಸು ಎಲ್ಲಿಗೆ ಹೋಗಿದ್ದಾನೋ ಪ್ರಜೆಗಳಿಗೆ ಯಾರಿಗೂ ತಿಳಿದಿಲ್ಲ. ಆತನು ಪ್ರಜೆಗಳ ಮಧ್ಯದಲ್ಲಿ ಇರುವಾಗ ಆತನನ್ನು ಗುರುತಿಸಲಾರದವರು ನಂತರ ಏಸು ದೊಡ್ಡವನೆಂದು, ಏಸುವೇ ದೇವರೆಂದು ಅಂದುಕೊಂಡರೂ ಏನೂ ಪ್ರಯೋಜನೆ ಇರುವುದಿಲ್ಲ ವೆಂದು, ಆಗ ಆತನಿಂದ ಮನುಷ್ಯರ ಪಾಪಗಳು ಹೋಗುವುದಿಲ್ಲವೆಂದು ಈ ವಾಕ್ಯದ ಮೂಲಕ ತಿಳಿಯುತ್ತಿದೆ. ಈ ವಿಷಯಗಳೆಲ್ಲವೂ ಏಸು ಮೊದಲೇ ಪ್ರಜೆಗಳಿಗೆ ಹೇಳಿದ್ದಾನೆ. **“ನಾನು ಹೊರಟು ಹೋಗುತ್ತಿದ್ದೇನೆ”** ಎಂದು ಹೇಳಿದ್ದಾನೆ. ಆದರೂ ಆತನನ್ನು ನೀನು ಹೋಗಬೇಡ ಸ್ವಲ್ಪ ಕಾಲ ನಮ್ಮ ಹತ್ತಿರವೇ ಇರಬೇಕೆಂದು ಯಾರೂ ಆತನನ್ನು ಕೇಳಲಿಲ್ಲ. ಕೇಳದೇ ಹೋಗಿದ್ದಲ್ಲದೆ ಪ್ರಜೆಗಳೇ ಆತನು ನಮ್ಮ ಮಧ್ಯದಲ್ಲಿ ಇರಬಾರದೆಂದು ಕೇಕೆ ಹಾಕಿ ಹೇಳಿ ಶಿಲುಬೆ ಮೇಲೆ ಮರಣಿಸುವಹಾಗೆ ಮಾಡಿದ್ದಾರೆ.

**32) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 23, 24 ವಚನಗಳು.**

**(23) ಆಗ ಆತನು ನೀವು ಕೆಳಗಿನವರು ನಾನು ಮೇಲೆ ಇರುವವನು, ನೀವು ಈ ಲೋಕ ಸಂಬಂಧಿಕರು, ನಾನು ಈ ಲೋಕ ಸಂಬಂಧಿಕನಲ್ಲ.**

**(24) ಹಾಗಿರುವಾಗ ನಿಮ್ಮ ಪಾಪಗಳಲ್ಲಿಯೇ ಇದ್ದು ನೀವು ಸತ್ತು ಹೋಗುತ್ತೀರಿ ಎಂದು ಅವರೊಂದಿಗೆ ಹೇಳಿದನು.**

ಈ ಎರಡು ವಾಕ್ಯಗಳಲ್ಲಿ 24ನೇ ವಾಕ್ಯವು 21ನೇ ವಾಕ್ಯದಲ್ಲಿ ಹೇಳಿದಂತೆಯೇ ಇದೆ. 23ನೇ ವಾಕ್ಯವು ಮಾತ್ರ ಪ್ರತ್ಯೇಕತೆ ಹೊಂದಿದೆ. ಏಸು ಪ್ರಜೆಗಳೊಂದಿಗೆ ತಾನು ಸಾಧಾರಣ ಮನುಷ್ಯನಲ್ಲವೆಂದು ತಿಳಿಯುವಂತೆ ಎರಡನೆ ಅವಕಾಶ ಕೊಟ್ಟು **"ನೀವು ಕೆಳಗಿನವರು ನಾನು ಮೇಲಿರುವವನು. ನೀವು ಈ ಲೋಕ ಸಂಬಂಧಿಕರು ನಾನು ಈ ಲೋಕ ಸಂಬಂಧಿಕನಲ್ಲ"** ಎಂದು ಹೇಳಿದ್ದಾನೆ. ಈ ವಾಕ್ಯವು ಎರಡು ಭಾಗಗಳಾಗಿ ಇದೆ. ಒಂದು "ನೀವು ಕೆಳಗಿನವರು ನಾನು ಮೇಲಿರುವವನು" ಎನ್ನುವುದಲ್ಲದೆ, ಎರಡನೆಯದು "ನೀವು ಈ ಲೋಕ ಸಂಬಂಧಿಕರು, ನಾನು ಈ ಲೋಕ ಸಂಬಂಧಿಕನು ಅಲ್ಲ" ಈಗ ಏಸು ಪ್ರಜೆಗಳನ್ನು ಉದ್ದೇಶಿಸಿ ನೀವು ಕೆಳಗಿನವರು ನಾನು ಮೇಲೆ ಇರುವವನು ಎಂದು ಹೇಳಿರುವ ಮೊದಲ ಭಾಗವನ್ನು ನೋಡಿದರೇ ಪೂರ್ವವು ಕೃತಯುಗದಿಂದ ಪ್ರಜೆಗಳಲ್ಲಿ ಕೆಳಗಿನವರು, ಮೇಲಿನವರು ಎಂಬ ಮನುಷ್ಯರು ಇದ್ದಾರೆಂದು ಹೇಳಿಕೊಳ್ಳುತ್ತಿದ್ದರು. ಮೇಲಿನವರು ಕೆಳಗಿನವರು ಎಂಬ ಹೆಸರುಗಳು ಪ್ರಜೆಗಳಲ್ಲಿ ಯಾಕೆ ಬಂದಿವೆಯೋ ಆಲೋಚಿಸಿದರೇ ಅದಕ್ಕೆ ಒಂದು ಚರಿತ್ರೆ ಇದೆ. ಪೂರ್ವದಲ್ಲಿ ಮೇಲಿನವರು ಕೆಳಗಿನವರು ಎನ್ನುವ ವಿಭಜನೆ ಹೇಗೆ ನಡೆದಿದೆಯೆಂದರೇ!

ಕೃತಯುಗದವೊಂದು ಆಯುಸ್ಸು ಕಾಲ 17,28,000 ವರ್ಷಗಳು. ಕೃತಯುಗದ ಮೊದಲ ಸಾವಿರ ವರ್ಷಗಳ ಕಾಲದಲ್ಲಿಯೇ ಪ್ರಜೆಗಳಲ್ಲಿ ಜ್ಞಾನಿಗಳು ಅಜ್ಞಾನಿಗಳು ಎಂಬ ಎರಡು ಗುಂಪುಗಳು ಏರ್ಪಟ್ಟಿವೆ. ಆಗ ಭೂಮಿ ಮೇಲೆ

ಜ್ಞಾನಿಗಳು ಎನ್ನುವವರು ಅಪರೂಪವಾಗಿ ಇದ್ದರು. ಅಜ್ಞಾನಿಗಳು ಅಸಂಖ್ಯಾತ ವಾಗಿ ಇದ್ದರು. ಆ ಯುಗದಲ್ಲಿ ಪ್ರಪಂಚ ಜನಸಂಖ್ಯೆ ಸುಮಾರು ಮೂರು ಕೋಟಿ ಮಾತ್ರವೇ ಇತ್ತು. ಅದರಲ್ಲಿ ಭಾರತದೇಶ ಜನಸಂಖ್ಯೆ ಸುಮಾರು ಮೂರು ಲಕ್ಷಗಳಿಗಿಂತಲೂ ಮೀರಿರಲಿಲ್ಲ. ಮೂರು ಲಕ್ಷ ಜನರಲ್ಲಿ ಭೂಮಿ ಮೇಲಕ್ಕೆ ಸೂರ್ಯನ ಮೂಲಕ ಬಂದಿರುವ ಜ್ಞಾನವನ್ನು ಮನುವು ಹೇಳಿರುವಾಗ ಇಬ್ಬರು ಅಥವಾ ಮೂವರು ತಿಳಿದಿರುತ್ತಿದ್ದರು. ಆ ಇಬ್ಬರು ಅಥವಾ ಮೂವರು ಜ್ಞಾನಿಗಳನ್ನು ಪ್ರಜೆಗಳೆಲ್ಲರೂ ಗೌರವಿಸಿ ಅವರ ಮೂಲಕ ತಾವು ಕೂಡಾ ದೈವಜ್ಞಾನವನ್ನು ತಿಳಿಯಬೇಕೆಂದು ಅಂದುಕೊಳ್ಳುತ್ತಿದ್ದರು. ಆಗ ಜ್ಞಾನಿಗಳಾಗಿ ಇರುವವರನ್ನು ಅಮಿತವಾಗಿ ಗೌರವಿಸುತ್ತಾ ಜ್ಞಾನವನ್ನು ಬೋಧಿಸುವವರನ್ನು ಉನ್ನತವಾದ ಆಸನದ ಮೇಲೆ ಕೂರಿಸಿ ಪ್ರಜೆಗಳು ಕೆಳಗೆ ಕುಳಿತು ಜ್ಞಾನವನ್ನು ಕೇಳುತ್ತಿದ್ದರು. ಗುರುಗಳಿಗೆ ಉನ್ನತಾಸನವನ್ನು ಕೊಟ್ಟು ತಾವು ಕೆಳಗೆ ಕುಳಿತು ಕೊಳ್ಳುವುದು ಆ ದಿನ ಅಭ್ಯಾಸವಾಗಿ ಇತ್ತು, ಅದೇ ಸಾಂಪ್ರದಾಯವಾಗಿ ಹೇಳಿಕೊಳ್ಳುತ್ತಿದ್ದರು. ಈ ರೀತಿಯಾಗಿ ಜ್ಞಾನವನ್ನು ಬೋಧಿಸುವ ಬೋಧಕರನ್ನು ಮೇಲೆ ಕೂರಿಸಿ ಪ್ರಜೆಗಳು ಕೆಳಗೆ ಕುಳಿತುಕೊಳ್ಳುತ್ತಿದ್ದರು. ಆ ವಿಧಾನದ ಪ್ರಕಾರ ಏಸು ಪ್ರಜೆಗಳನ್ನು ಉದ್ದೇಶಿಸಿ ನೀವು ಕೆಳಗಿನವರು ನಾನು ಮೇಲೆ ಇರುವವನು ಎಂದು ಹೇಳಿದ್ದಾನೆ. ಅದರ ಅರ್ಥ **"ನಾನು ನಿಮ್ಮೆಲ್ಲರಿಗೂ ಬೋಧಕನು (ಗುರುವು)** ಎಂದು ಅರ್ಥ.

ಮೇಲೆ ಬೋಧಕರು ಕೆಳಗೆ ಬೋಧನೆಯನ್ನು ತಿಳಿಯುವ ಪ್ರಜೆಗಳು ಇರುವುದು ಸಹಜವಾಗಿ ಇತ್ತು. ಅದರ ಪ್ರಕಾರ ಬೋಧಿಸುವ ಬೋಧಕರು ಪ್ರಜೆಗಳನ್ನು ಉದ್ದೇಶಿಸಿ ನೀವು ನಮ್ಮ **ಕೆಳಗಿನವರು**, ನಾವು ನಿಮ್ಮ **ಮೇಲಿನವರು** ಎನ್ನುತ್ತಿದ್ದರು. ಆ ದಿನ ದೈವಜ್ಞಾನವನ್ನು ಬೋಧಿಸುವ ಬೋಧಕರನ್ನು ಬ್ರಹ್ಮವಿದ್ಯೆಯನ್ನು ಬೋಧಿಸುವವರು ಎಂದು ಹೇಳುತ್ತಿದ್ದರು. ಬ್ರಹ್ಮ ಎಂದರೇ ದೊಡ್ಡದು ಎಂದು ಅರ್ಥ. ಬ್ರಹ್ಮವಿದ್ಯೆ ಎಂದರೇ ದೊಡ್ಡ ವಿದ್ಯೆ ಎಂದು ಅರ್ಥ. ಬ್ರಹ್ಮ ವಿದ್ಯೆಯನ್ನು ತಿಳಿದ ಬೋಧಕರನ್ನು ಬ್ರಾಹ್ಮಣರು ಎಂದು ಕರೆಯುತ್ತಿದ್ದರು. ಆ ದಿನಗಳಲ್ಲಿ ಬ್ರಾಹ್ಮಣರು ಎಂದರೇ ಬೋಧಕರು ಭಾರತ ದೇಶವೆಲ್ಲಾ

ಹುಡುಕಿದರೂ ಇಬ್ಬರು ಅಥವಾ ಮೂವರು ಇರುತ್ತಿದ್ದರು. ಆ ಮೂವರನ್ನು ಬ್ರಾಹ್ಮಣರೆಂದು ಹೇಳಿದರೇ, ಆ ಬ್ರಾಹ್ಮಣರಾಗಿ ಇರುವವರು ಉಳಿದ ಪ್ರಜೆಗಳೆಲ್ಲರನ್ನೂ ನಮ್ಮ ಕೆಳಗಿನವರು ಎನ್ನುತ್ತಿದ್ದರು. ಜ್ಞಾನ ತಿಳಿಯದವರೆಲ್ಲರನ್ನು ಕೆಳಗಿನವರೆಂದು ಹೇಳಿದರೇ ದೇಶವೆಲ್ಲಾ ನಮ್ಮ ಕೆಳಗಿನವರು ಎನ್ನಲ್ಪಡುವವರು ಇರುತ್ತಿದ್ದರು. ಸ್ವಲ್ಪಕಾಲಕ್ಕೆ ಕುಲವ್ಯವಸ್ಥೆ ಅಲ್ಲೇ ಪ್ರಾರಂಭವಾಯಿತು. ಕುಲವ್ಯವಸ್ಥೆ ಪ್ರಾರಂಭವಾದಾಗ ಬ್ರಹ್ಮಜ್ಞಾನ ತಿಳಿದವರು 'ನಾವು ಬ್ರಾಹ್ಮಣರು' ಎಂದು ಹೇಳಿಕೊಳ್ಳುತ್ತಿದ್ದರು. ಹಾಗೆಯೇ ಅಜ್ಞಾನಿಗಳಾಗಿ ಇರುವವರೆಲ್ಲರನ್ನೂ 'ನಮ್ಮ ಕೆಳಗಿನವರು' ಎಂದು ಹೇಳುತ್ತಿದ್ದರು. ಈ ರೀತಿಯಾಗಿ **ಮೇಲಿನವರು, ಕೆಳಗಿನವರು** ಎಂದು ಎರಡು ಗುಂಪುಗಳು ಏರ್ಪಟ್ಟಿವೆ. ಆ ದಿನ ನಮ್ಮ ಕೆಳಗಿನವರು ಎಂದು ಹೇಳಿರುವ ಪದವು ಈ ದಿನವು ಕೂಡಾ ಇದ್ದರೂ ಅದರ ಭಾವವು ಯಾವ ಮಾತ್ರ ಪ್ರಜೆಗಳಿಗೆ ತಿಳಿಯಲಿಲ್ಲ. ಅಷ್ಟೇ ಅಲ್ಲದೇ ನಮ್ಮ ಕೆಳಗಿನವರು ಎನ್ನುವುದು ಸ್ವಲ್ಪ ಕಾಲಕ್ಕೆ **'ಮಾದಿಗರು'** ಎಂಬ ಪದವಾಗಿ ಬದಲಾಗಿ ಹೋಗಿ ಅದನ್ನು ಒಂದು ಕುಲವಾಗಿ ಲೆಕ್ಕಿಸಿಕೊಳ್ಳುವುದು ನಡೆದಿದೆ.

ಕುಲ ವ್ಯವಸ್ಥೆ ತಯಾರಾದ ಆ ದಿನಗಳಲ್ಲಿ ಬ್ರಾಹ್ಮಣರು, ಮಾದಿಗರು ಎಂಬ ಎರಡೇ ಕುಲಗಳಾಗಿ ಹೇಳಲ್ಪಟ್ಟಿವೆ. ಈ ದಿನ ಜ್ಞಾನ ತಿಳಿಯದ ಅಜ್ಞಾನರನ್ನು ಎಲ್ಲರನ್ನೂ ಮಾದಿಗರು ಎಂದು ಹೇಳಬೇಕಾದ್ದೇ! ಆದರೇ ಜ್ಞಾನ ತಿಳಿಯದವರು ಕೂಡಾ ಅನೇಕ ಹೆಸರುಗಳಿರುವ ಕುಲಗಳಾಗಿ ವಿಭಜಿಸಲ್ಪಟ್ಟು ಕಾಲಕಳೆದಂತೆಲ್ಲ ಕೊನೆಗೆ ಹಾಗೆಯೇ ಉಳಿದಿರುವವರು ಮಾದಿಗರಾಗಿಯೇ ಹೇಳಲ್ಪಡುತ್ತಿದ್ದಾರೆ. ಹಿಂದೆ ನಡೆದಿರುವ ಚರಿತ್ರೆಯೊಳಗೆ ಹೋಗಿ ನೋಡಿದರೇ ಮಾದಿಗರು ಎನ್ನುವುದು ಒಂದು ಕುಲವೇ ಅಲ್ಲ. ಅಜ್ಞಾನಿಗಳು ಎಂಬ ಅರ್ಥವನ್ನು ತಿಳಿಸುವ ನಿಮಿತ್ತ ಆ ದಿನ ಇಬ್ಬರು ಅಥವಾ ಮೂವರು ಬೋಧಕರು ಇಟ್ಟಿರುವ ಹೆಸರು ಮಾತ್ರವೇ ಎಂದು ತಿಳಿಯಬೇಕು. ಆ ಲೆಕ್ಕ ಪ್ರಕಾರ ಈ ದಿನ ಕೂಡಾ ಜ್ಞಾನ ತಿಳಿಯದ ಎಲ್ಲ ಕುಲದವರನ್ನು ಮಾದಿಗರೆಂದೇ ಹೇಳಬಹುದು. ಆದರೇ ಈ ದಿನ ಗತಚರಿತ್ರೆ ತಿಳಿಯದೆ ಇರುವುದರಿಂದ ಕುಲಗಳಾಗಿ ಸೀಳಿ ಹೋಗಿ ಉಳಿದವರೆಲ್ಲರೂ ಮಾದಿಗ ಎಂಬ ಒಂದು ಕುಲವಾಗಿ ಹೇಳುವುದು ಅಜ್ಞಾನ

ವಿಷಯವೇ ಅಲ್ಲದೇ, ಅನ್ಯಾಯ ವಿಷಯವೆಂದು ಕೂಡಾ ಹೇಳಬಹುದು. ಈ ದಿನ ಹೇಗಿದ್ದರೂ ಏಸು ಇದ್ದ 2017 ವರ್ಷಗಳ ಪೂರ್ವವು ಕೂಡಾ ಏಸು ಮೇಲಿನವರು, ಕೆಳಗಿನವರು ಎಂಬ ಪದಗಳನ್ನು ಉಪಯೋಗಿಸಿ ಅಜ್ಞಾನಿಗಳನ್ನು **"ನೀವು ಕೆಳಗಿನವರು ನಾನು ಮೇಲಿರುವವನು ಎಂದು ಹೇಳಿದ್ದಾನೆ"**. "ನಾನು ಜ್ಞಾನಿ ನೀವು ಅಜ್ಞಾನಿಗಳು" ಎಂದು ಹೇಳುವ ನಿಮಿತ್ತ ಏಸು **"ಕೆಳಗಿನವರು, ಮೇಲಿನವರು"** ಎಂಬ ಪದಗಳನ್ನು ಬಳಸಿದ್ದಾರೆ ಎಂದು ಅರ್ಥ ಮಾಡಿ ಕೊಳ್ಳಬೇಕು.

ಏಸು ಹೇಳಿರುವ ಎರಡನೆ ವಾಕ್ಯದಲ್ಲಿ ನೀವು ಈ ಲೋಕ ಸಂಬಂಧಿಕರು ನಾನು ಈ ಲೋಕ ಸಂಬಂಧಿಕನು ಅಲ್ಲವೆಂದು ಹೇಳಿದ್ದಾನೆ. ಲೋಕ ಎಂದರೇ ಅನುಭವಿಸುವುದು ಎಂದು ಹೇಳಿಕೊಂಡಿದ್ದೇವೆ. ಅನುಭವಿಸುವ ಅನುಭವಗಳನ್ನು ಅನುಸರಿಸಿ ಎರಡು ಗುಂಪುಗಳಾಗಿ ಹೇಳಬಹುದು. ಅನುಭವಗಳಿರುವವರನ್ನು ಈ ಲೋಕದವರೆಂದು, ಅನುಭವಗಳಿಲ್ಲದವರನ್ನು ಈ ಲೋಕದವರಲ್ಲ ಎಂದು ಹೇಳಬಹುದು. ಸಾಧಾರಣ ಮನುಷ್ಯರು ಪ್ರಪಂಚದಲ್ಲಿನ ಪ್ರತಿ ಅನುಭವವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಲೋಕವಾಸಿಗಳು ಎಂದು ಹೇಳಿದ್ದಾರೆ. ಯಾವ ಅನುಭವವನ್ನು ಹೊಂದದ ಏಸು ತನ್ನನ್ನು ಈ ಲೋಕದವನಲ್ಲ ಎಂದು ಹೇಳಿದ್ದಾನೆ. ಏಸು ಮನುಷ್ಯನ ಹಾಗೆ ಇದ್ದರೂ ಮನುಷ್ಯರ ಹಾಗೆ ಅನುಭವಗಳನ್ನು ಅನುಭವಿಸುವವನಲ್ಲ. ಏಸು ಮಾನವ ಶರೀರದಲ್ಲಿ ಇದ್ದರೂ ಆತನು ಎಲ್ಲರ ಹಾಗೆ ಜೀವಾತ್ಮ ಅಲ್ಲ. ಜೀವಾತ್ಮ ಅಲ್ಲದಿರುವಾಗ ಕರ್ಮ ಇರುವುದಿಲ್ಲ. ಕರ್ಮಕ್ಕೆ ತಕ್ಕ ಅನುಭವಗಳು ಇರುವುದಿಲ್ಲ. ಏಸು ಪರಮಾತ್ಮನಿಂದ ಪ್ರತ್ಯೇಕವಾಗಿ ಕಳುಹಿಸಲ್ಪಟ್ಟವನು ಎಂದು ಹೇಳಿದರೂ, ಮತ್ತೊಂದು ರೀತಿಯಲ್ಲಿ ಪರಿಶುದ್ಧಾತ್ಮನೇ ಮಾರುವೇಷದಲ್ಲಿ ಬಂದಿರುವ ಅವತಾರವೇ ಏಸುಯೆಂದು ಹೇಳಬಹುದು. ಆದರೂ ಆಧ್ಯಾತ್ಮಿಕ ಧರ್ಮದ ಪ್ರಕಾರ ಆ ರೀತಿ ಹೇಳಬಾರದು. ಪರಮಾತ್ಮ ಪ್ರತ್ಯೇಕವಾಗಿ ತಯಾರು ಮಾಡಿ ಕಳುಹಿಸಲ್ಪಟ್ಟಿರುವವನು ಏಸು. ಆದ್ದರಿಂದ ಏಸುವನ್ನು ಪರಿಶುದ್ಧಾತ್ಮ ಕುಮಾರನು ಎಂದು ಹೇಳಬೇಕು. ಏಸು ಜೀವಾತ್ಮ ಅಲ್ಲ ಆದ್ದರಿಂದ "ಆತನು ಅನುಭವಗಳು ಇಲ್ಲದವನು" ಎಂದು

ಹೇಳಬಹುದು. ಏಸು ಜೀವಾತ್ಮ ಆಗಿದ್ದರೇ ಪರಿಶುದ್ಧಾತ್ಮನಾದ ದೇವರಿಗೆ ಕುಮಾರನು ಎಂದು ಹೇಳಲ್ಪಡುವುದಿಲ್ಲ. ಜೀವಾತ್ಮ ಆತ್ಮಕ್ಕೆ ಮಾತ್ರ ಕುಮಾರನು. ಆತ್ಮಕ್ಕೆ ತಂದೆ ಪರಿಶುದ್ಧಾತ್ಮ. ಆದ್ದರಿಂದ ಜೀವಾತ್ಮ ಪರಿಶುದ್ಧಾತ್ಮಕ್ಕೆ ಮೊಮ್ಮಗ ವರಸೆಯಾಗುತ್ತದೆ. ದೇವರಿಂದ ದೇವರ ಬಳಿಯಿಂದ ಕಳುಹಿಸಲ್ಪಟ್ಟವನು ಆಗಿರುವುದರಿಂದ ಏಸುವನ್ನು ದೇವರ ಕುಮಾರನು ಎಂದು ಅನ್ನುತ್ತಿದ್ದೇವೆ. ಏಸುವನ್ನು ಪ್ರತ್ಯೇಕಿಸಿ ಅದ್ವಿತೀಯ ಕುಮಾರನು ಎಂದು ಕೂಡಾ ಹೇಳುವುದು ನಡೆದಿದೆ. ಆತ್ಮ ಪರಿಶುದ್ಧಾತ್ಮ ಕುಮಾರನು, ಹಾಗೆಯೇ ತಾತ್ಕಾಲಿಕವಾಗಿ ಭೂಮಿ ಮೇಲೆ ಅವಶ್ಯಕತೆ ಬಂದಾಗ ಮಾತ್ರವೇ ಬರುವ ಕುಮಾರನು ಅದ್ವಿತೀಯ ಕುಮಾರನು. ದೇವರಿಂದ ಕಳುಹಿಸಲ್ಪಟ್ಟವನು ಆತ್ಮದ ಹಾಗೆ ಅದ್ವಿತೀಯ ಕುಮಾರನೇ ಆಗುತ್ತಾನೆ ಆದರೇ ಮೊಮ್ಮಗನ ಹಾಗೆ ಜೀವಾತ್ಮ ಆಗುವುದಿಲ್ಲ. ಜೀವಾತ್ಮ ಅನುಭವಗಳು ಹೊಂದುವವನು. ಆದ್ದರಿಂದ ಜೀವಾತ್ಮ ಆದವನು ಅನುಭವಗಳಿರುವ ಇಹಲೋಕ ವಾಸಿಗಳೇ ಆಗುತ್ತಾರೆ. ಆತ್ಮದ ಹಾಗೆ ಇರುವ ಅನುಭವಗಳು ಇಲ್ಲದ ಏಸು ಈ ಲೋಕ ಸಂಬಂಧಿಕನಲ್ಲ. ಆತನು ಪರಲೋಕ ಸಂಬಂಧಿಕನು.

ಏಸು ಸಾಧಾರಣ ಮನುಷ್ಯನಲ್ಲ ಎಂದು ಪ್ರಜೆಗಳು ತಿಳಿಯುವುದಕ್ಕೆ ಏಸು ಪ್ರಜೆಗಳಿಗೆ ಎರಡನೆ ಅವಕಾಶವನ್ನು ಕೊಟ್ಟು (ಯೋ, 8–23, 24) ವಾಕ್ಯಗಳನ್ನು ಹೇಳಿದ್ದಾನೆ. ಆದರೂ ಮನುಷ್ಯರು ಏಸುವಿನ ಮಹತ್ವವನ್ನು ಗುರುತಿಸಲಾರದೇ ಹೋಗಿದ್ದಾರೆ. ಏಸುವನ್ನು ಸಾಧಾರಣ ಮನುಷ್ಯನಾಗಿಯೇ ಲೆಕ್ಕಿಸಿಕೊಂಡಿದ್ದಾರೆ. ಆದ್ದರಿಂದ ಅಂಥವರು ತಮ್ಮ ಪಾಪಗಳನ್ನು ಏಸು ಮೂಲಕವಾಗಲೀ, ಏಸು ಜ್ಞಾನದ ಮೂಲಕವಾಗಲೀ ಕಳೆದುಕೊಳ್ಳಲಾರರು. ಪರಿಶುದ್ಧಾತ್ಮ ಕುಮಾರನಾದ ಏಸು ಮನುಷ್ಯರ ಮಧ್ಯದೊಳಗೆ ಬಂದಿದ್ದರೂ, ತನ್ನನ್ನು ಗುರುತಿಸುವುದಕ್ಕೆ ಎಷ್ಟೋ ವಾಕ್ಯಗಳು ಹೇಳಿದ್ದರೂ ಏಸುವನ್ನು ಕಂಡುಕೊಳ್ಳದವರು, ಏಸುವನ್ನು ವಿಶ್ವಾಸಿಸದವರು ತಮ್ಮ ಪಾಪಗಳಲ್ಲಿ ಇದ್ದು ಸತ್ತು ಹೋಗುತ್ತಾರೆಂದು ಏಸು ಎರಡನೆ ಬಾರಿ ಹೇಳಿದ್ದಾನೆ. ಮೊದಲು ಅವಕಾಶ ಕೊಟ್ಟು (ಯೋ 8–21) ವಾಕ್ಯವನ್ನು ಹೇಳಿದ್ದಾನೆ. ಎರಡನೆ ಅವಕಾಶಕೊಟ್ಟು

(ಯೋ 8–23, 24) ವಾಕ್ಯಗಳನ್ನು ಹೇಳಿದ್ದಾನೆ. ನಂತರ ಮೂರನೆಯ ಅವಕಾಶವನ್ನು ಕೂಡಾ ಕೊಟ್ಟು ಕೊನೆಯದಾಗಿ ಹೇಳಿರುವ ವಾಕ್ಯವಿದೆ. ಏಸು ಯಾರಾಗಿರುವುದು ಪ್ರಜೆಗಳು ಗುರುತಿಸುವುದಕ್ಕೆ ಮೂರು ಬಾರಿ ಮೂರು ವಾಕ್ಯಗಳನ್ನು ಹೇಳಿದ್ದಾನೆ. ಆಗಲೂ ಕೂಡಾ ಗುರುತಿಸದವರಿಗೆ ಅವರ ಪಾಪಗಳು ಕ್ಷಮಿಸಲ್ಪಡುವುದಿಲ್ಲ ಎಂದು ಎಚ್ಚರಿಸಿ ಹೇಳುವುದಾಗಿದೆ. ಮೂರನೆಯ ಬಾರಿ ಏನು ಹೇಳಿದ್ದಾನೋ ಕೆಳಗಿನ ವಾಕ್ಯದಲ್ಲಿ ನೋಡೋಣ.

**33) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 24ನೇ ವಚನ.**

**(24) ನಾನು ಆತನೇ ಎಂದು ನೀವು ವಿಶ್ವಾಸಿಸದ ಪಕ್ಷದಲ್ಲಿ ನೀವು ಪಾಪಗಳಲ್ಲಿಯೇ ಇದ್ದು ಸಾಯುತ್ತೀರೆಂದು ಅವರೊಂದಿಗೆ ಹೇಳಿದನು.**

ಈ ವಾಕ್ಯವು ಏಸು ಪ್ರಜೆಗಳಿಗೆ ತಿಳಿಯುವುದಕ್ಕೆ ಮೂರನೆ ಅವಕಾಶ ಕೊಟ್ಟಿರುವ ವಾಕ್ಯವೆಂದು ತಿಳಿಯುತ್ತಿದೆ. ಈ ವಾಕ್ಯದಲ್ಲಿ ಏಸು ತಾನು ಯಾರಾಗಿರುವುದು ನೇರವಾಗಿ ಪ್ರಜೆಗಳು ತಿಳಿಯುವಂತೆ ಹೇಳಿದ್ದಾನೆ. **"ನಾನು ಸೃಷ್ಟಿಕರ್ತನಾದ ಪರಿಶುದ್ಧಾತ್ಮನೇಯೆಂದು ವಿಶ್ವಾಸಿಸದವನು ಪಾಪಗಳಲ್ಲಿ ಇದ್ದು ಸಾಯುತ್ತಾನೆ"** ಎಂದು ಹೇಳಿದ್ದಾನೆ. ಏಸುವೇ ಸ್ವತಃವಾಗಿ ತಾನು ಯಾರಾಗಿರುವುದು ಪ್ರಕಟಿಸಿಕೊಂಡಿದ್ದಾನೆ. ಮೊದಲ ಒಂದು ವಾಕ್ಯದಲ್ಲಿ **"ನಾನು ಹೊರಟು ಹೋಗುತ್ತೇನೆ ನಾನು ಹೋದ ಜಾಗಕ್ಕೆ ನೀವು ಬರಲಾರಿರಿ"** ಎಂದು ಸ್ವಲ್ಪ ಅವಕಾಶ ಕೊಟ್ಟು ಹೇಳಿದ್ದಾನೆ. ಎರಡನೆಯ ವಾಕ್ಯದಲ್ಲಿ **"ನೀವು ಈ ಲೋಕ ಸಂಬಂಧಿಕರು, ನಾನು ನಿಮ್ಮ ಹಾಗೆ ಈ ಲೋಕ ಸಂಬಂಧಿಕನು ಅಲ್ಲ"** ಎಂದು ಹೇಳಿದ್ದಾನೆ. ಎರಡನೆಯ ವಾಕ್ಯದಲ್ಲಿ ಮತ್ತಷ್ಟು ವಿವರವಾಗಿ ಅರ್ಥವಾಗು ವಂತೆ ಹೇಳಿದ್ದಾನೆ. ಎರಡನೆಯ ವಾಕ್ಯದಿಂದ ಏಸು ಪರಿಶುದ್ಧಾತ್ಮನೇಯೆಂದು ತಿಳಿಯಬಹುದು. ಆಗಲೂ ತಿಳಿಯದವರಿಗೆ ಇನ್ನೂ ಚೆನ್ನಾಗಿ ಅರ್ಥವಾಗುವ ಹಾಗೆ ಮೂರನೆ ವಾಕ್ಯದಲ್ಲಿ **"ನಾನೇ ಆತನೆಂದು ವಿಶ್ವಾಸಿಸದವನು ಪಾಪಗಳಿಂದ ಹೊರ ಬೀಳಲಾರನೆಂದು ಹೇಳಿದ್ದಾನೆ"**. ಮೂರನೆ ವಾಕ್ಯದಲ್ಲಿ ಏಸು **"ನಾನೇ ದೇವರೆಂದು"** ಪ್ರಕಟಿಸಿದಂತಾಗಿದೆ. ಆದರೂ ಏಸು ಪ್ರಭುವನ್ನು ಸಾಧಾರಣ

ಮನುಷ್ಯನ ಹಾಗೆ ಪ್ರಜೆಗಳು ಗುರುತಿಸಿದ್ದಾರೆ ಹೊರತು **ಆತನೇ ದೇವರೆಂದು ಗ್ರಹಿಸಲಾರದೇ ಹೋಗಿದ್ದಾರೆ**. ಆದರೇ ಕೆಲವರು ಏಸು ಹೇಳುವ ಮಾತುಗಳಿಗೆ ಆಶ್ಚರ್ಯ ಪಟ್ಟು ಒಳಗೆ ಮಾತ್ರ ನಂಬದೇ ಮೇಲ್ನೋಟಕ್ಕೆ ಮಾತ್ರ ನೀನು ಯಾರೆಂದು ಏಸುವನ್ನು ಕೇಳಿದ್ದಾರೆ. ಏಸು 'ತಾನು ಸಾಧಾರಣ ಮನುಷ್ಯನಲ್ಲ' ಎಂದು ಪ್ರಜೆಗಳು ತಿಳಿಯುವುದಕ್ಕೆ (ಯೋ, 8–21, 23, 24) ಮೂರು ವಾಕ್ಯಗಳಲ್ಲಿ ತನ್ನನ್ನು ಗುರುತಿಸುವಂತೆ ಹೇಳಿದರೂ, ಆತನನ್ನು ಗ್ರಹಿಸದವರಾಗಿ "ನೀನು ಯಾರು?" ಎಂದು ಎದುರು ಪ್ರಶ್ನೆ ಹಾಕಿ ಕೇಳಿದ್ದಾರೆ. ಆಗ ಮೊದಲಿನಿಂದ ಅಂದರೇ ಈ ಮೂರು ವಾಕ್ಯಗಳಲ್ಲಿ ಮೊದಲ ವಾಕ್ಯದಿಂದ **"ನಾನು ನಿಮಗೆ ಯಾರೆಂದು ಹೇಳಿದ್ದೇನೋ ಅವನೇ"** ಎಂದು ಹೇಳಿದ್ದಾನೆ.

ಅಷ್ಟೇ ಅಲ್ಲದೇ ನನ್ನನ್ನು ಕಳುಹಿಸಿದವನು ಸತ್ಯವಂತನು, ನಾನು ಆತನ ಹತ್ತಿರ ಕೇಳಿರುವ ಸಂಗತಿಗಳೇ ಲೋಕಕ್ಕೆ ಬೋಧಿಸುತ್ತಿದ್ದೇನೆಂದು ಹೇಳಿದನು. ಆದರೂ ತಂದೆಯನ್ನು ಕುರಿತು (ಪರಿಶುದ್ಧಾತ್ಮನನ್ನು ಕುರಿತು) ಹೇಳಿದ್ದಾನೆಂದು ಕೇಳಿರುವ ಪ್ರಜೆಗಳು ಗುರುತಿಸಲಾರದೇ ಹೋಗಿದ್ದಾರೆ. ಅಷ್ಟಾಗಿ ಹೇಳಿದರೂ ಪ್ರಜೆಗಳು ತನ್ನನ್ನು ಗುರುತಿಸದೆ ಸಾಧಾರಣ ಮನುಷ್ಯನಾಗಿ ಕೆಲವರು, ಸಾಧಾರಣ ಮನುಷ್ಯನಿಗಿಂತಲೂ ಹೀನವಾಗಿ ಕೆಲವರು ಆತನ ಬಗ್ಗೆ ಪ್ರವರ್ತಿಸುತ್ತಿದ್ದರು. ಅಂತಹ ಮನುಷ್ಯರೊಂದಿಗೆ ತನ್ನನ್ನು ಕುರಿತು ಮತ್ತೊಂದು ಮಾತು ಹೀಗೆ ಹೇಳಿದ್ದಾನೆ ನೋಡಿರಿ.

**34) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 28ನೇ ವಚನ.**

**(28) ನೀವು ಮನುಷ್ಯ ಕುಮಾರನನ್ನು ಮೇಲಕ್ಕೆತ್ತಿದಾಗ ನಾನೇ ಆತನೆಂದೂ, ನನ್ನಷ್ಟಕ್ಕೆ ನಾನೇ ಏನೂ ಮಾಡದೆ ತಂದೆ ನನಗೆ ಕಲಿಸಿದ ಹಾಗೆ ಈ ಸಂಗತಿಗಳು ಮಾತನಾಡುತ್ತಿದ್ದೇನೆಂದು ನೀವು ಗ್ರಹಿಸುತ್ತೀರಿ.**

ಈ ವಾಕ್ಯದಲ್ಲಿ ಸ್ವಲ್ಪ ಗೊಂದಲಪಡುವ ಅವಕಾಶವಿದೆ. ಏಕೆಂದರೇ! ನೀವು **'ಮನುಷ್ಯ ಕುಮಾರನನ್ನು ಮೇಲಕ್ಕೆತ್ತಿದಾಗ'** ಎಂದು ಹೇಳಲ್ಪಡುವುದರಿಂದ ಅಲ್ಲಿ ಸ್ವಲ್ಪ ಅರ್ಥವಾಗದಿರುವುದಕ್ಕೆ ಅವಕಾಶವಿದೆ. ಅದು ಏನೆಂದರೇ! ಪ್ರಜೆಗಳು ಏಸುವನ್ನು ಮೇಲಕ್ಕೆತ್ತಿದಾಗ ಅಂದರೇ ಏಸುವನ್ನು ಮೇಲಕ್ಕೆತ್ತುವುದೇನೆಂದು ಅರ್ಥವಾಗದೇ ಹೋಗಬಹುದು. ಆ ಮಾತನ್ನು ಅರ್ಥಮಾಡಿಕೊಂಡರೇ "ಪ್ರಜೆಗಳು ಏಸುನನ್ನು ತಲೆ ಮೇಲೆ ಏರಿಸಿಕೊಂಡಾಗ" ಎಂದು ಹೇಳುವುದಕ್ಕೆ 'ಏಸಯ್ಯನನ್ನು ಮೇಲಕ್ಕೆತ್ತಿದಾಗ' ಎಂದು ಹೇಳಿದ್ದಾರೆ. ಅದಾದರೂ "ಏಸುವನ್ನು ತಲೆ ಮೇಲಕ್ಕೆ ಎತ್ತಿಕೊಳ್ಳುವುದೇನು" ಎಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರ ಏನೆಂದರೇ! ಏಸಯ್ಯನನ್ನು ಶರೀರಕ್ಕೆ ಮೇಲಿರುವ **'ತಲೆಯೊಂದಿಗೆ ಅರ್ಥಮಾಡಿಕೊಂಡಾಗ'** ಎಂದು ತಿಳಿಯುತ್ತಿದೆ. ಏಸಯ್ಯನನ್ನು ಕುರಿತು ಯಾರ **ಬುದ್ಧಿಗೆ** ಅರ್ಥವಾಗಿದೆಯೋ ಅವನು ಏಸುವೇ ಪರಿಶುದ್ಧಾತ್ಮನೆಂದು ತಿಳಿಯುತ್ತಾನೆ. ಅಷ್ಟೇ ಅಲ್ಲದೇ ಏಸು ಹೇಳುವ ಜ್ಞಾನವೆಲ್ಲವೂ ಏಸು ಸ್ವತಃವಾಗಿ ಹೇಳುವುದು ಅಲ್ಲವೆಂದು, ಪರಿಶುದ್ಧಾತ್ಮ ಹೇಗೆ ಹೇಳಬೇಕೆಂದುಕೊಂಡಿದ್ದಾನೋ ಹಾಗೆಯೇ ಏಸು ಹೇಳುತ್ತಿದ್ದಾನೆಂದು ಪ್ರಜೆಗಳು ಗ್ರಹಿಸಬಲ್ಲರೆಂದು ಈ ವಾಕ್ಯದಲ್ಲಿ ತಿಳಿಯುತ್ತಿದೆ.

ಏಸುವನ್ನು ಮನುಷ್ಯರು ಮೇಲಿರುವ ತಲೆಯಲ್ಲಿನ ಬುದ್ಧಿಯಿಂದ ಗ್ರಹಿಸಿಕೊಂಡಾಗ ಎಂದು ಹೇಳುವುದಕ್ಕೆ ಬದಲು 'ಏಸುವನ್ನು ಪ್ರಜೆಗಳು ಮೇಲಕ್ಕೆ ಎತ್ತಿದಾಗ' ಎಂದು ಹೇಳಿದ್ದಾರೆಂದು ತಿಳಿದು ಹೋಗಿದೆ. ಶರೀರಕ್ಕೆ ಊರ್ಧ್ವದಲ್ಲಿರುವ **ಬುದ್ಧಿಯಿಂದ** ಏಸುವನ್ನು ಅರ್ಥಮಾಡಿಕೊಂಡರೆ, 'ಏಸು ಪರಮಾತ್ಮ (ಪರಿಶುದ್ಧಾತ್ಮ)' ಎಂದು ತಿಳಿಯುತ್ತದೆ. ಏಸು ದೇವರೆಂದು ತಿಳಿಯದಷ್ಟು ಕಾಲ ಪ್ರಜೆಗಳ ಬುದ್ಧಿಗೆ ಏಸು ಅರ್ಥವಾಗಲಿಲ್ಲವೆಂದು, ಆದ್ದರಿಂದ **'ಪ್ರಜೆಗಳಿಗಿರುವ ಪಾಪಗಳು ಕ್ಷಮಿಸಲ್ಪಡದೆ, ಯಾರ ಪಾಪದಲ್ಲಿ ಅವರು ಸಾಯುತ್ತಾರೆಂದು'** ಮೊದಲ ಮೂರು ವಾಕ್ಯಗಳಲ್ಲಿ ಹೇಳಿದ್ದಾರೆ. ಒಂದು ವೇಳೆ ಏಸುವನ್ನು ಗ್ರಹಿಸಿಕೊಂಡರೇ ಏಸು ಹೇಳಿದಂತೆ ಆತನೇ ದೇವರೆಂದು ತಿಳಿದುಹೋಗುತ್ತದೆ. ದೇವರು ಅಂದರೇ ಪರಿಶುದ್ಧಾತ್ಮ ತನ್ನ ಜ್ಞಾನವನ್ನು

ಮನುಷ್ಯರಿಗೆ ತಿಳಿಸುವ ನಿಮಿತ್ತ ಮನುಷ್ಯನಾಗಿ ಬರುವನೆಂಬ ರಹಸ್ಯವಾದ ವಿಷಯವು ತಿಳಿದು ಹೋಗುತ್ತದೆ. ಹಾಗೆ ಏಸುವೇ ದೇವರೆಂದು ತಿಳಿದಾಗ ಏಸು ಹೇಳುವ ಜ್ಞಾನವೆಲ್ಲವೂ ಏಸುವೇ ಸ್ವತಃವಾಗಿ ಹೇಳುತ್ತಿದ್ದಾನೆಂದು ಯಾರಾದರೂ ಅಂದುಕೊಳ್ಳಬಹುದು. ಆದರೇ ಕೆಲವರು ಅಂದುಕೊಂಡ ಹಾಗೆ ಆ ರೀತಿ ಹೇಳುವುದಕ್ಕೆ ಅವಕಾಶವಿಲ್ಲ. ಏಕೆಂದರೇ! ಈ ವಾಕ್ಯದಲ್ಲಿ **"ನಾನೇ ಆತನೆಂದು"** ಹೇಳಿದ ನಂತರ ಮತ್ತೊಂದು ಮಾತು ಕೂಡಾ ಹೇಳಿದ್ದಾನೆ. ಅದು ಏನೆಂದರೇ!

**"ನನ್ನಷ್ಟಕ್ಕೆ ನಾನೇ ಏನೂ ಮಾಡದೆ ತಂದೆ ನನಗೆ ಕಲಿಸಿದ ಹಾಗೆ ಈ ಸಂಗತಿಗಳು ಮಾತನಾಡುತ್ತಿದ್ದೇನೆಂದು ನೀವು ಗ್ರಹಿಸುತ್ತೀರಿ"** ಎಂದು ಹೇಳಿದ್ದಾನೆ. ಹಾಗೆ ಹೇಳುವುದರಿಂದ ತಂದೆ ಬೇರೆ, ಆತನು ಬೇರೆಯೆಂದು ಹೇಳಿದ ಹಾಗೆ ಕಾಣಿಸುತ್ತಿದೆ. ಹಾಗೆ ಏಕೆ ಎರಡು ವಿಧಗಳು ಹೇಳಿದ್ದಾನೆಂದು ಬಹಳ ಜನರಿಗೆ ಪ್ರಶ್ನೆ ಬರಬಹುದು. ಅದಕ್ಕೆ ಸಮಾಧಾನ ಏನೆಂದರೇ! ಏಸು ಒಬ್ಬ ವ್ಯಕ್ತಿಯಾಗಿ ಇದ್ದಾನೆ. ದೇವರು ಶಕ್ತಿಯಾಗಿ ಇದ್ದು ಕಾಣಿಸದೆ ಇದ್ದಾನೆ. ಕಾಣಿಸದ ಶಕ್ತಿಯಾದ ದೇವರು ಕಾಣಿಸುವ ವ್ಯಕ್ತಿಯಾಗಿ ಬಂದಿರುವುದು ವಾಸ್ತವವೇ. ದೇವರು ಮನುಷ್ಯನಾಗಿ ಬಂದಿರುವ ವಾಸ್ತವವನ್ನು ಮನುಷ್ಯ ಬುದ್ಧಿಯಿಂದ ಗ್ರಹಿಸಿಕೊಂಡರೇ ಪರಿಶುದ್ಧಾತ್ಮ, ಏಸು ಒಬ್ಬರೇಯೆಂದು ತಿಳಿಯುತ್ತದೆ. ಆದರೇ ಮನುಷ್ಯನಾಗಿ ಇರುವವನು ಯಾರೂ ನಾನೇ ದೇವರೆಂದು ಆಧ್ಯಾತ್ಮಿಕದ ಪ್ರಕಾರ ಹೇಳಬಾರದು. ಮನುಷ್ಯರು ಕಾಣಿಸುವ ಮನುಷ್ಯನೇ ದೇವರೆಂದು ತಿಳಿಯಬಹುದು. ಅಷ್ಟೇ ಹೊರತು ತಿಳಿದ ಸತ್ಯವನ್ನು ಬಹಿರಂಗವಾಗಿ ಹೇಳಬಾರದು. ಏಕೆಂದರೇ! **ಆಧ್ಯಾತ್ಮಿಕ ಕಾನೂನಿನ** ಪ್ರಕಾರ ಮನುಷ್ಯನನ್ನು ದೇವರಾಗಿ ತಿಳಿಯಬಹುದು ಆದರೇ ಹೊರಗೆ ಹೇಳಬಾರದು. ಆ ನಿಬಂಧನದ ಪ್ರಕಾರ ಏಸು ಕೂಡಾ ಹಾಗೆಯೇ ಹೇಳಿದ್ದಾನೆ. ದೇವರೇ ಏಸಯ್ಯನಲ್ಲಿ ಇದ್ದು ಮಾಡುತ್ತಿದ್ದರೂ ಏಸು ಮಾತ್ರ ಆಧ್ಯಾತ್ಮಿಕ ಕಾನೂನಿನ ವಿರುದ್ಧವಲ್ಲದೇ ಹೀಗೆ

ಹೇಳಿದ್ದಾನೆ. **"ನನ್ನಷ್ಟಕ್ಕೆ ನಾನೇ ಏನೂ ಮಾಡದೆ ತಂದೆ ನನಗೆ ಕಲಿಸಿದ ಹಾಗೆ ಈ ಸಂಗತಿಗಳನ್ನು ಮಾತನಾಡುತ್ತಿದ್ದೇನೆಂದು ನೀವು ಗ್ರಹಿಸುತ್ತೀರಿ".**

ತಂದೆ ಹೇಳಿದ ಹಾಗೆಯೇ ನಾನು ಹೇಳುತ್ತಿದ್ದೇನೆ. ನನ್ನಷ್ಟಕ್ಕೆ ನಾನು ಏನೂ ಮಾಡಲಿಲ್ಲವೆಂದು ಹೇಳಿದರೂ, ದೇವರೇ ಎಲ್ಲ ಮಾಡುತ್ತಿದ್ದಾನೆಂದು ನಾವು ತಿಳಿದರೂ, ಆತನು ಹೇಳಿದರೂ ಎರಡೂ ಒಂದೇ ಅರ್ಥವನ್ನು ಕೊಡುತ್ತಿವೆ. ಪರಿಶುದ್ಧಾತ್ಮನೇ ಏಸುಯೆಂದು ತಿಳಿಯುವುದರಿಂದ **ಮನುಷ್ಯರಿಗಿರುವ ಪಾಪವು ಕ್ಷಮಿಸಲ್ಪಡುತ್ತದೆ**. ಆದರೇ ಮನುಷ್ಯರು ಏಸಯ್ಯನನ್ನು ಪರಿಶುದ್ಧಾತ್ಮನೇ ಯೆಂದು ತಿಳಿಯುವುದು ಜ್ಞಾನವೇ ಆದರೂ, ಆತನೇ ಈತನೆಂದು ಹೇಳುವುದು ಆಧ್ಯಾತ್ಮಿಕದಲ್ಲಿ ತಪ್ಪಾಗುತ್ತದೆ. ಆದ್ದರಿಂದ ಸ್ವತಃವಾಗಿ ಏಸಯ್ಯನೇ **ನಾನೇ ದೇವರೆಂದು ತಿಳಿಯದ ತನಕ ನಿಮ್ಮ ಪಾಪಗಳು ಹೋಗುವುದಿಲ್ಲವೆಂದು ಹೇಳಿದರೂ "ನಾನೇ ಆತನೆಂದು"** ಮನುಷ್ಯರು ತಿಳಿಯುವ ನಿಮಿತ್ತ ಹೇಳಿದರೂ, ಕೊನೆಗೆ ಆಧ್ಯಾತ್ಮಿಕ ಕಾನೂನಿನ ಪ್ರಕಾರ ನಾನು ಮಾಡುವ ಕೆಲಸಗಳೆಲ್ಲವೂ ನನ್ನ ತಂದೆ ಹೇಳಿದ ಹಾಗೆಯೇ ಮಾಡುತ್ತಿದ್ದೇನೆಂದು ಹೇಳಿದ್ದಾನೆ. ಆದ್ದರಿಂದ ಈ ವಾಕ್ಯದಲ್ಲಿ ಎರಡು ರೀತಿಯಲ್ಲಿ ಹೇಳಿದ್ದಾರೆಂದು ಅಂದುಕೊಳ್ಳಬಾರದು. ವಾಕ್ಯದಲ್ಲಿ **'ನಾನೇ ದೇವರು'** ಎಂದು ಹೇಳಿದರೂ, 'ನಾನು ದೇವರು ಹೇಳಿದ ಹಾಗೆ ಮಾಡುತ್ತಿದ್ದೇನೆಂದು' ಹೇಳಿದರೂ ಎರಡೂ ಒಂದೇ ಅರ್ಥ ಕೊಡುತ್ತಿವೆಯೆಂದು ತಿಳಿಯಬೇಕು. ಈ ವಿಷಯವು ಅರ್ಥವಾಗದೇ ಹೋದರೆ ಏಸು ಎರಡು ನಾಲಿಗೆಗಳ ಧೋರಣೆಯಲ್ಲಿ ಮಾತನಾಡಿದ್ದಾನೆಂದು ಅಂದುಕೊಳ್ಳುವ ಅವಕಾಶವಿದೆ. ಜ್ಞಾನ ತಿಳಿದವನು ದೇವರು ಮನುಷ್ಯನಾಗಿ ಬರುವನೆಂದು ತಿಳಿಯಬಹುದು. ಆದರೆ ಈತನೇ ದೇವರೆಂದು ಬಹಿರಂಗ ಮಾಡಿ ಹೇಳಬಾರದು. ಆದ್ದರಿಂದ ಏಸು ಕೂಡಾ ಒಂದು ಕಡೆ **'ನಾನೇ ದೇವರು'** ಎಂದು ಎಲ್ಲರೂ ತಿಳಿಯುವ ಹಾಗೆ ಹೇಳಿದರೂ, ಎರಡನೆ ಮಾತಿನಲ್ಲಿ **'ದೇವರನ್ನು ತಂದೆ'** ಎಂದು ಹೇಳುವುದಾಗಿದೆ. ಎರಡೂ ಸತ್ಯವೇ. ಅಷ್ಟೇ ಅಲ್ಲದೇ ಏಸು ಪ್ರಜೆಗಳೊಂದಿಗೆ ಹೀಗೆ ಹೇಳಿದ್ದಾನೆ ಆ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ.

## 35) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 29ನೇ ವಚನ.

## (29) ನನ್ನನ್ನು ಕಳುಹಿಸಿದವನು ನನಗೆ ಜೊತೆಯಾಗಿ ಇದ್ದಾನೆ. ಆತನಿಗಿಷ್ಟ ವಾದ ಕಾರ್ಯಗಳನ್ನು ನಾನು ಯಾವಾಗಲೂ ಮಾಡುತ್ತೇನೆ. ಆದ್ದರಿಂದ ಆತನು ನನ್ನನ್ನು ಒಬ್ಬಂಟಿಯಾಗಿ ಬಿಡಲಿಲ್ಲ ವೆಂದು ಹೇಳಿದನು.

ಏಸು, ಪರಿಶುದ್ಧಾತ್ಮ ಇಬ್ಬರೂ ಒಂದೇಯೆಂದು, ಆತನೇ ಈತನೆಂದು ತಿಳಿಯುವ ಉದ್ದೇಶದಿಂದ ಈ ವಾಕ್ಯ ಹೇಳಲ್ಪಟ್ಟಿದೆ. ಅದಕ್ಕೆ ಬಲವಾಗಿ **"ನನ್ನನ್ನು ಕಳುಹಿಸಿದವನು ನನಗೆ ಜೊತೆಯಾಗಿ ಇದ್ದಾನೆ."** ಈ ಮಾತಿನಲ್ಲಿ ನನ್ನನ್ನು ಕಳುಹಿಸಿದ ದೇವರು ನನ್ನಲ್ಲಿಯೇ ಇದ್ದಾನೆ, ಆತನು ನಾನು ಒಂದೇಯೆಂದು ಅರ್ಥ ಅಲ್ಲವೇ! ಮನುಷ್ಯನ ಶರೀರದಲ್ಲಿ 'ಇಷ್ಟ' ಎನ್ನುವುದು ಒಂದಿದೆ. ಅದು ಮನುಷ್ಯನ ಶರೀರದಲ್ಲಿ ದೇವರ ಇಷ್ಟದ ಪ್ರಕಾರ ಕೆಲಸಗಳನ್ನು ನಾನು ಯಾವಾಗಲೂ ಮಾಡುವೆನು. ಅಂದರೆ ದೇವರ ಇಷ್ಟವೇ ನನ್ನಲ್ಲಿ ಕೆಲಸ ಮಾಡುತ್ತಿದೆಯೆಂದು ಹೇಳುವುದರಲ್ಲಿ ದೇವರೇ ನನ್ನಲ್ಲಿದ್ದಾನೆಂದು ಹೇಳುವುದಕ್ಕೆ ಸಾಕ್ಷ್ಯವಾಗಿದೆ. ಅಷ್ಟೇ ಅಲ್ಲದೇ ಆತನನ್ನು ಒಬ್ಬಂಟಿಯನ್ನಾಗಿ ಬಿಡಲಿಲ್ಲ ಎಂದು ಹೇಳಿದ್ದಾನೆ. ಆ ಮಾತಿನಲ್ಲಿ ದೇವರು ನನ್ನಲ್ಲಿ ಜೊತೆಯಾಗಿದ್ದಾನೆಂದು, ದೇವರೇ ನಾನಾಗಿದ್ದೇನೆಂದು ಹೇಳಿದಂತಾಗುತ್ತಿದೆ. ಈ ಮಾತುಗಳೆಲ್ಲವೂ ಅಂದಿನ ಮನುಷ್ಯರು ಏಸುವನ್ನು ದೇವರೆಂದು ಗುರುತಿಸುವುದಕ್ಕೆ ಏಸುವೇ ಹೇಳಿರುವ ಮಾತುಗಳು. ವಾಸ್ತವವಾಗಿ ಕಲಿಯುಗದಲ್ಲಿ ದೇವರು 'ಏಸು' ಎನ್ನುವ ಮನುಷ್ಯನಾಗಿ ಬಂದಿದ್ದರೂ ಪ್ರಜೆಗಳು ಗುರುತಿಸಲಾರದೇ ಹೋಗಿದ್ದಾರೆ. ಆದ್ದರಿಂದ ಏಸು ಜ್ಞಾನವನ್ನು ಮನುಷ್ಯರು ಗ್ರಹಿಸುವುದಿಲ್ಲವೆಂದು ಏಸುವಿನ ಶ್ರೇಷ್ಠತೆಯನ್ನು ಗುರುತಿಸುವ ನಿಮಿತ್ತ ಈ ವಾಕ್ಯಗಳನ್ನು ಹೇಳಬೇಕಾಗಿ ಬಂದಿದೆ. ಈ ರೀತಿಯ ವಾಕ್ಯಗಳನ್ನು ಹೇಳುವುದರಿಂದ ಆ ಮಾತುಗಳನ್ನು ಕೇಳಿಸಿಕೊಂಡ ಕೆಲವರು ಆತನನ್ನು ನಂಬಿದರು.

**36) ಯೋಹಾನ್ ಸುವಾರ್ತೆ 8ನೇ ಅಧ್ಯಾಯ 53, 54ನೇ ವಚನಗಳು.**

**(53) ನಿನ್ನನ್ನು ನೀನು ಯಾರೆಂದು ಹೇಳಿಕೊಳ್ಳುತ್ತಿದ್ದೀಯೆಂದು ಆತನನ್ನು ಕೇಳಿದರು.**

**(54) ಅದಕ್ಕೆ ಏಸು "ನನ್ನನ್ನು ನಾನೇ ಮಹಿಮೆಪಡಿಸಿಕೊಂಡ ಪಕ್ಷದಲ್ಲಿ ನನ್ನ ಮಹಿಮೆ ಬರಿದು. ನಮ್ಮ ದೇವರೆಂದು ನೀವು ಯಾರನ್ನು ಕುರಿತು ಹೋಳುವಿರೋ ಆ ನನ್ನ ತಂದೆಯೇ ನನ್ನನ್ನು ಮಹಿಮೆಗೊಳಿಸುತ್ತಿದ್ದಾನೆ."**

ಏಸು ಎಷ್ಟೋ ವಿವರವಾಗಿ ಪ್ರಜೆಗಳು ತನ್ನನ್ನು ಅರ್ಥ ಮಾಡಿಕೊಳ್ಳುವ ಹಾಗೆ ಹೇಳಿದರೂ, ಪ್ರಜೆಗಳಿಗೆ ಏಸುವನ್ನು ಕುರಿತು ಅರ್ಥ ಮಾಡಿಕೊಳ್ಳುವ ಗ್ರಾಹಿತಶಕ್ತಿ ಇಲ್ಲದೇ ಆತನನ್ನು **"ನೀನು ಯಾರು?"** ಎಂದು ಪ್ರಶ್ನಿಸಿದ್ದಾರೆ. ಅದಕ್ಕೆ ಏಸು ಹೀಗೆ ಹೇಳಿದ್ದಾನೆ. **"ನನ್ನನ್ನು ನಾನೇ ಮಹಿಮೆಪಡಿಸಿಕೊಂಡು ದೊಡ್ಡದಾಗಿ ಹೇಳಿಕೊಂಡ ಪಕ್ಷದಲ್ಲಿ ನನ್ನ ದೊಡ್ಡತನ ಬರಿದಾಗುತ್ತದೆ, ನಾನು ಅಸತ್ಯ ಹೇಳಿದಂತಾಗುತ್ತದೆ."** ನಾನು ನಿಮಗೆ ಇನ್ನೊಂದು ರೀತಿಯಲ್ಲಿ ಹೇಳುತ್ತೇನೆ ನಾನು ಇಲ್ಲಿಯವರೆಗು ಐದು ಬಾರಿ ನನ್ನನ್ನು ಕುರಿತು ಹೇಳಿಕೊಂಡಿದ್ದೇನೆ. ಈಗ ಇದಕ್ಕೂ ಮೊದಲು ಹೇಳಿರುವುದಕ್ಕಿಂತ ಹೆಚ್ಚಾಗಿ ಹೇಳಿಕೊಂಡ ಪಕ್ಷದಲ್ಲಿ ನಾನು ಹೇಳಿರುವುದು ಕೇವಲ ಅಸತ್ಯವೆಂದಂತಾಗುತ್ತದೆ. ಮತ್ತೊಂದು ಬಾರಿ ಈಗ ಹೇಳಿರುವುದಕ್ಕಿಂತಲೂ ಬೇರೆಯಾಗಿ ಹೇಳಿದರೇ, ನಮ್ಮ ದೇವರೆಂದು ನೀವು ಯಾವ ದೇವರನ್ನು ಕುರಿತು ಹೇಳುತ್ತಿದ್ದೀರೋ ಆ ದೇವರೇ ನನ್ನ ತಂದೆಯೆಂದು, ಆತನೇ ನನ್ನನ್ನು ದೊಡ್ಡದಾಗಿ ಮಹಿಮೆಗೊಳಿಸುತ್ತಿದ್ದಾನೆಂದು ಹೇಳಬಲ್ಲೆನು. **ನನ್ನ ತಂದೆಯೆಂದು ನಾನು ಯಾರನ್ನು ಕುರಿತು ಹೇಳುತ್ತಿದ್ದೇನೋ, ನೀವು ದೇವರೆಂದು ಯಾರನ್ನು ಕುರಿತು ಹೇಳುತ್ತಿದ್ದೀರೋ ಆತನೇ ನಾನೆನ್ನುವುದು ವಾಸ್ತವ.** ಆದರೂ ಆತ್ಮವನ್ನು ಆಧ್ಯಯನ ಮಾಡುವ ವಿಧಾನದಲ್ಲಿ ವ್ಯಕ್ತಿಯಾಗಿ ಕಾಣಿಸುವವನು ಯಾರೂ **'ನಾನು ದೇವರು'** ಎಂದು ಹೇಳಬಾರದು. ಆದ್ದರಿಂದ

ನೀವು ಅರ್ಥ ಮಾಡಿಕೊಳ್ಳುವುದಕ್ಕೆ 'ನಾನು ದೇವರೇ' ಎಂದು ಹೇಳಿದರೂ ನಂತರ ದೇವರನ್ನು ನಾನು ತಂದೆಯೆಂದು ಹೇಳುತ್ತಿದ್ದೇನೆ. ನಾನು ಎರಡು ರೀತಿಯಲ್ಲಿ ಹೇಳುವುದರಿಂದ ನೀವು ಗೊಂದಲಕ್ಕೊಳಗಾಗದೆ ನನ್ನನ್ನು ಸತ್ಯ ಸಮೇತವಾಗಿ ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದ್ದಾನೆ.

**37) ಯೋಹಾನ್ ಸುವಾರ್ತೆ, 8ನೇ ಅಧ್ಯಾಯ, 55ನೇ ವಚನ.**

**(55) ನೀವು ಆತನನ್ನು ಅರಿತಿಲ್ಲ. ನಾನು ಆತನನ್ನು ಅರಿತಿದ್ದೇನೆ. ಆತನನ್ನು ಅರಿತಿಲ್ಲವೆಂದು ನಾನು ಹೇಳಿದ ಪಕ್ಷದಲ್ಲಿ ನಿಮ್ಮ ಹಾಗೆ ನಾನೂ ಸುಳ್ಳುಗಾರನಾಗಿರುತ್ತೇನೆ ಆದರೇ ನಾನು ಆತನನ್ನು ಅರಿತಿದ್ದೇನೆ, ಆತನ ಮಾತನ್ನು ಕೈಗೊಳ್ಳುತ್ತಿದ್ದೇನೆ.**

ಏಸು ಪ್ರಜೆಗಳನ್ನು ಕುರಿತು **"ನೀವು ದೇವರನ್ನು ತಿಳಿದಿಲ್ಲ, ನಾನು ದೇವರನ್ನು ಅರಿತಿದ್ದೇನೆ"** ಎಂದು ಹೇಳಿದ್ದಾನೆ. ಏಸಯ್ಯನನ್ನು ಎಲ್ಲರೂ ಮನುಷ್ಯನ ಹಾಗೆ ಲೆಕ್ಕಿಸುವುದರಿಂದ ಏಸು ಆ ರೀತಿಯಾಗಿ ಹೇಳಬೇಕಾಗಿ ಬಂದಿದೆ. ಪ್ರಜೆಗಳು ಮನುಷ್ಯರೇ, ಏಸು ಮನುಷ್ಯನೇ ಆದಾಗ ಪ್ರಜೆಗಳಿಗೆ ದೇವರು ತಿಳಿಯದಿರುವಾಗ ಏಸುವಿಗೆ ಹೇಗೆ ತಿಳಿದಿದ್ದಾನೆ? ಎಂದು ಪ್ರಜೆಗಳಲ್ಲಿ ಕೆಲವರಿಗೆ ಪ್ರಶ್ನೆ ಬಂದಿದೆ. ಆ ಪ್ರಶ್ನೆಗೆ ಉತ್ತರವಾಗಿ ನಾವು ಹೇಳಿಕೊಂಡರೇ ಹೀಗೆ ಹೇಳಬಹುದು. ಏಸು ಮತ್ತು ಪ್ರಜೆಗಳು ಶರೀರವನ್ನು ಧರಿಸಿದವರಾಗಿ ಕಣ್ಣಿಗೆ ಕಾಣಿಸುವ ವ್ಯಕ್ತಿಗಳಾಗಿ ಇದ್ದಾರೆ. ಏಸಯ್ಯನ ಹಾಗೆ ಮನುಷ್ಯರು, ಮನುಷ್ಯರ ಹಾಗೆ ಏಸು ಇರುವಾಗ ಏಸುವಿಗೆ ಪ್ರತ್ಯೇಕವಾಗಿ ದೇವರು ತಿಳಿಯುವುದೇನು? ಎಂದು ಪ್ರಶ್ನೆ ಬರುವುದು ಸಮಂಜಸವೇ. ಆದರೇ ಇಲ್ಲಿ ನಾವು ಗ್ರಹಿಸಬೇಕಾಗಿರುವುದು ಏನು? ಎಂದು ಆಲೋಚಿಸಿದರೇ ಮೊದಲಿನಿಂದ ಏಸು **"ನಾನೇ ಆತನೆಂದು"** ಮೂರು ಬಾರಿ ಮೂರು ರೀತಿಯ ವಾಕ್ಯಗಳೊಂದಿಗೆ ತಿಳಿಸಿದ್ದಾನೆ. ಆತನು ತಿಳಿಸಿರುವ ಪದ್ಧತಿ ಪ್ರಕಾರ ನೋಡಿದರೇ ಏಸು ಮನುಷ್ಯನಾದರೂ ಆತನ ಶರೀರದಲ್ಲಿ ಎಲ್ಲರ ಹಾಗೆ ಜೀವಾತ್ಮ ಇಲ್ಲ. ಇರುವುದು

ಒಂದೇ ಆತ್ಮ, ಆತನೇ ಪರಿಶುದ್ಧಾತ್ಮ. ಪರಿಶುದ್ಧಾತ್ಮ ಏಸು ಶರೀರದಲ್ಲಿ ಇದ್ದು ಆತ್ಮದ ಹಾಗೆ ನಟಿಸುತ್ತಾ ಎಲ್ಲ ಕೆಲಸಗಳು ಮಾಡುತ್ತಿದೆ. ಶರೀರದಲ್ಲಿ ಜೀವಾತ್ಮ ಯಾರೋ, ಆತ್ಮ ಯಾರೋ ಯಾರಿಗೂ ತಿಳಿದಿಲ್ಲ. ಆದ್ದರಿಂದ ಆತ್ಮವನ್ನೆ ಜೀವಾತ್ಮ ಎಂದು ಪ್ರಜೆಗಳು ಅಂದುಕೊಳ್ಳುವುದರಿಂದ ಏಸುಗೆ ದೇವರಾದ ಪರಮಾತ್ಮ ತಿಳಿದಿಲ್ಲವೆಂದು ಅಂದುಕೊಂಡಿದ್ದಾರೆ. ವಾಸ್ತವವಾಗಿ ಏಸು ಶರೀರದಲ್ಲಿ ಸ್ವತಃವಾಗಿ ಪರಮಾತ್ಮನೇ ಇರುವುದರಿಂದ ಹೊರಗೆ ಕಾಣಿಸುವ ಏಸುಗೆ ಪರಮಾತ್ಮ ತಿಳಿದಿದ್ದಾನೆಂದು ಹೇಳಬಹುದು. ಜ್ಞಾನ ತಿಳಿಯುವುದು, ಜ್ಞಾಪಕದಿಂದ ತಿಳಿಯುವುದನ್ನು, ಎಚ್ಚರಿಕೆಯಾಗಿ ಇದ್ದು ತಿಳಿಯುವುದು ಎಂದು ಹೇಳಬಹುದು. ಏಸು ಶರೀರದಲ್ಲಿ ಪರಮಾತ್ಮನೇ ಜ್ಞಾಪಕವಾಗಿ ಇದ್ದಾನೆ. ಆದ್ದರಿಂದ ಆತನು ಪ್ರತ್ಯೇಕವಾಗಿ ತಿಳಿಯುವುದು ಏನೂ ಇಲ್ಲ. ಆತನು ದೇವರನ್ನೇ ಜ್ಞಾಪಕವಾಗಿದ್ದಾನೆ. ಮನುಷ್ಯರು ತಮ್ಮ ಶರೀರದಲ್ಲಿ ಇರುವ ಮನಸ್ಸು ಎಂಬ ಅರಿವನ್ನು ಹೊಂದಿದ್ದಾರೆ ಆದರೆ ಆತ್ಮ ಒಂದರ ಜ್ಞಾಪಕವಾಗಲೀ, ಪರಮಾತ್ಮ ಒಂದರ ಜ್ಞಾಪಕವಾಗಲೀ ಇಲ್ಲ. ಪರಮಾತ್ಮ ಒಂದರ ಜ್ಞಾನ ಇಲ್ಲದಿರುವುದರಿಂದ ಮನುಷ್ಯರು ದೇವರನ್ನು ಅರಿತಿಲ್ಲ. ಏಸು ದೇವರನ್ನೇ ಜ್ಞಾಪಕವಾಗಿ ಇರುವುದರಿಂದ ಏಸು ದೇವರನ್ನು ಅರಿತಿದ್ದಾನೆ ಎಂದು ಹೇಳಬಹುದು.

ಒಂದು ವೇಳೆ ಏಸು ದೇವರನ್ನು ಅರಿತಿಲ್ಲ ಎಂದು ಹೇಳಿದರೇ ಮನುಷ್ಯರ ಹಾಗೆ ಶರೀರದಲ್ಲಿ ದೇವರ ಜ್ಞಾಪಕ ಇಲ್ಲದವನು ಎಂದು ಹೇಳಬೇಕು. ಹಾಗೆ ಹೇಳಿದರೇ ಏಸು ಅಸತ್ಯವನ್ನು ಹೇಳಿದಂತಾಗುತ್ತದೆ. ಆದ್ದರಿಂದ ನಾನು ಆತನನ್ನು ಅರಿತಿಲ್ಲವೆಂದು ಹೇಳಿದ ಪಕ್ಷದಲ್ಲಿ ನಿಮ್ಮ ಹಾಗೆ ನಾನೂ ಸುಳ್ಳುಗಾರನಾಗಿ ಇರುತ್ತೇನೆ ಎಂದು ಹೇಳಿದ್ದಾನೆ. ಆದರೇ ಏಸು ಶರೀರದಲ್ಲಿ ಪರಿಶುದ್ಧಾತ್ಮ ಇರುವುದರಿಂದ ಜೋಡಿ ಆತ್ಮಗಳಾದ ಆತ್ಮ, ಜೀವಾತ್ಮ ಎರಡೂ ಇಲ್ಲ. ಕೆಲಸವನ್ನು ಮಾಡಿಸುವ ಆತ್ಮವಾಗಲೀ, ಅನುಭವಿಸುವ ಜೀವಾತ್ಮವಾಗಲೀ ಎರಡು ಏಸು ಶರೀರದಲ್ಲಿ ಇಲ್ಲ. ಇರುವುದು ಒಂದೇ ಪರಿಶುದ್ಧಾತ್ಮ (ದೇವರು) ಆಗಿರುವುದರಿಂದ ಪ್ರತಿ ಮಾತೂ ಸ್ವತಃವಾಗಿ ಪರಿಶುದ್ಧಾತ್ಮನೇ ಹೇಳುತ್ತಿದ್ದಾನೆ. ಆದ್ದರಿಂದ ಏಸು "ನಾನು ಆತನ ಜ್ಞಾಪಕದಲ್ಲಿ ಇದ್ದೇನೆ" ಎಂದು ಹೇಳುತ್ತಾ, "ನಾನು ಆತನನ್ನು

ಅರಿತಿದ್ದೇನೆ" ಎಂದು ಹೇಳುವುದೇ ಅಲ್ಲದೇ "ನಾನು ಆತನ ಮಾತನ್ನು ಕೈಗೊಳ್ಳುತ್ತಿದ್ದೇನೆ" ಎಂದು ಹೇಳಿದ್ದಾನೆ. ಏಸು ಮಾತನಾಡಿದಾಗ ಎಲ್ಲರ ಹಾಗೆ ಮಾತನಾಡಿದರೂ ಆ ಮಾತುಗಳು ಆತನವೇಯೆಂದು ಹೇಳಲಾಗಿದೆ. ಯಾರ ದೃಷ್ಟಿಗಾದರೂ ಏಸು ಕಾಣಿಸುವುದಕ್ಕೆ ಸಾಧಾರಣ ಮನುಷ್ಯನೇ ಆದರೂ ಆತನಿಗೆ ತಿಳಿಯದಿರುವುದು ಯಾವುದೂ ಇಲ್ಲ. ಆದ್ದರಿಂದ ಪೂರ್ವಕಾಲ ಗತಿಸಿ ಹೋಗಿರುವ ಅಬ್ರಹಾಮನನ್ನು ಕುರಿತು ಏಸು ಹೇಳಿದಾಗ ಪ್ರಜೆಗಳು ಆಶ್ಚರ್ಯಪಟ್ಟು ಒಂದು ಪ್ರಶ್ನೆ ಕೇಳಿದರು ಅದನ್ನು ಕೆಳಗೆ ನೋಡಿರಿ.

**38) ಯೋಹಾನ್ ಸುವಾರ್ತೆ 8ನೇ ಅಧ್ಯಾಯ, 57, 58 ವಚನಗಳು.**

## (57) ನಿನಗಿನ್ನೂ ಐವತ್ತು ವರ್ಷಗಳಾದರೂ ಇಲ್ಲವೇ, ನೀನು ಅಬ್ರಹಾಮನನ್ನು ನೋಡಿದ್ದೀಯಾ ಎಂದು ಆತನೊಂದಿಗೆ ಹೇಳಿದಾಗ!

## (58) ಅಬ್ರಹಾಮು ಹುಟ್ಟುವ ಮುಂಚೆಯೇ ನಾನು ಇದ್ದೇನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ ಎಂದನು.

ಏಸು ಈ ಮಾತುಗಳನ್ನು ಹೇಳುವಾಗ ಆತನ ವಯಸ್ಸು ಪೂರ್ತಿ 32 ವರ್ಷಗಳು ತುಂಬಿ 33ನೇ ವರ್ಷದಲ್ಲಿ ನಡೆಯುತ್ತಿತ್ತು. ಅಬ್ರಹಾಮ್ ಎಷ್ಟೋ ಪೂರ್ವಕಾಲದ ಮನುಷ್ಯ, ಎಲ್ಲರಿಗೂ ಮುತ್ತಾತನಂಥವನು. ಅಬ್ರಹಾಮ್ ವಿಷಯವನ್ನು ಏಸು ಹೇಳಿದಾಗ ನೀನು ಈಗಿನ ಕಾಲದವನು, ಅಬ್ರಹಾಮ್ ಪೂರ್ವವಿದ್ದ ಮನುಷ್ಯ ನಿನಗಿಂತ ಎಷ್ಟೋ ಮುಂಚೆ ಹುಟ್ಟಿ ಸತ್ತುಹೋಗಿರುವ ವ್ಯಕ್ತಿಯನ್ನು ಕುರಿತು ನೀನು ಹೇಗೆ ಹೇಳುತ್ತಿದ್ದೀಯಾ? ಎಂದು ಅಲ್ಲಿನ ಯೂದರು ಪ್ರಶ್ನಿಸಿದಾಗ, ಅಬ್ರಹಾಮ್ ಹುಟ್ಟುವುದಕ್ಕಿಂತ ಮುಂಚೆಯಿಂದಲೂ ನಾನು ಇದ್ದೇನೆಂದು ಏಸು ಹೇಳುವುದು ಹೊರಗೆ ನೋಡುವವರಿಗೆ ಏಸು ಹೇಳಿರುವುದು ಪೂರ್ತಿ ಅಸತ್ಯವಾಗಿ ಕಾಣಿಸುತ್ತಿದೆ. ಏಸು ಈಗಿನವನು ಅಬ್ರಹಾಮ್ ಯಾವ ಕಾಲದವನೋ ಎಂದು ಎಲ್ಲರಿಗೂ ಗೊತ್ತು. ಆದ್ದರಿಂದ ಆತನು ಹೇಳಿರುವ

ಮಾತು ಪೂರ್ತಿ ನಂಬಲು ಸಾಧ್ಯವಾಗದಂತಿದೆ. ಪ್ರತ್ಯಕ್ಷ ಸತ್ಯದ ಪ್ರಕಾರವಾದರೇ ಏಸು ಹೇಳಿರುವುದು ಅಸತ್ಯವಾಗಿ ಇದೆ. ಪರೋಕ್ಷ ಸತ್ಯದ ಪ್ರಕಾರ ನೋಡಿದರೇ ಏಸು ಹೇಳಿರುವುದು ಪೂರ್ತಿ ಸತ್ಯವಾಗಿ ಇದೆ.

ಹೇಗೆ ಸತ್ಯವು? ಎಂದು ಆಲೋಚಿಸಿದರೆ ಏಸು ಶರೀರವು 32 ವರ್ಷಗಳ ಹಿಂದೆ ಹುಟ್ಟಿರುವುದು. ಆದರೇ ಏಸು ಶರೀರದಲ್ಲಿ ಇರುವುದು ಜೀವಾತ್ಮ ಅಲ್ಲದೇ ನೇರವಾಗಿ ಪರಮಾತ್ಮವೆ ಇದೆ. ಜೀವಾತ್ಮ ಆಗಿದ್ದರೇ ಆತನಿಗೆ ನಡೆದು ಹೋಗಿರುವ ಜನ್ಮಗಳ ಕಾಲದಲ್ಲಿನ ಯಾವ ವಿಷಯವು ಜ್ಞಾಪಕ ವಿರುವುದಿಲ್ಲ. ಆದ್ದರಿಂದ ಎಷ್ಟೋ ವರ್ಷಗಳ ಪೂರ್ವವು ನಡೆದು ಹೋಗಿರುವ ವಿಷಯವು ತಿಳಿದಿರುತ್ತಿರಲಿಲ್ಲ. ಏಸು ಶರೀರದಲ್ಲಿರುವುದು ಪರಮಾತ್ಮ ಆಗಿರುವುದರಿಂದ ಆತನು ಸನಾತನನು. ಎಲ್ಲಾ ಕಾಲದಲ್ಲೂ ಇರುವವನು. ಪ್ರಪಂಚವಿಲ್ಲದ ಸಮಯದಿಂದ ಇರುವವನು. ಪ್ರಪಂಚವನ್ನೇ ಸೃಷ್ಠಿಸಿರುವವನು ಪರಮಾತ್ಮ ಆಜ್ಞೆಯಿಂದಲೇ ಆತ್ಮ ಜೀವಿಗಳನ್ನು ಹುಟ್ಟಿಸಿದೆ. ಒಂದಾನೊಂದು ಕಾಲದಲ್ಲಿದ್ದ ಅಬ್ರಹಾಮ್ ಕೂಡಾ ಒಬ್ಬ ವ್ಯಕ್ತಿ ಆಗಿರುವುದರಿಂದ ಆತನು ಹುಟ್ಟಿರುವುದು, ಆತನು ಬೆಳೆದಿರುವುದು, ಆತನು ಜೀವಿಸಿರುವುದು, ಆತನು ಮರಣಿಸಿರುವುದು, ಎಲ್ಲವನ್ನೂ ದೇವರಾದ ಪರಿಶುದ್ಧಾತ್ಮ ಸಾಕ್ಷಿಯಾಗಿ ನೋಡುತ್ತಲೇ ಇದ್ದಾನೆ. ಅಬ್ರಹಾಮ್‌ನನ್ನು ಹುಟ್ಟಿಸಿರುವುದು ಆತ್ಮ ಆಗಿರುವಾಗ, ಸಾಕ್ಷಿಯಾಗಿ ನೋಡುತ್ತಾ ಇದ್ದವನು ಪರಮಾತ್ಮನಾದ ದೇವರು. **ದೇವರು ಸಾಕ್ಷಿಭೂತನಾಗಿದ್ದರೇ, ಆತ್ಮ ಕಾರ್ಯಕರ್ತನಾದಾಗ, ಜೀವಾತ್ಮ ಜನ್ಮವನ್ನು ಅನುಭವಿಸಿದೆ**. ಅಬ್ರಹಾಮ್ ಎಂಬ ಜೀವಿಯು ಆತ್ಮದಿಂದ ಜನ್ಮಿಸಲ್ಪಟ್ಟಿದ್ದರೂ, ಪಕ್ಕದಲ್ಲೇ ಸಾಕ್ಷಿಯಾಗಿ ನೋಡುತ್ತಿರುವ ದೇವರಿಗೆ ಅಬ್ರಹಾಮ್ ವಿಷಯವೆಲ್ಲಾ ಪೂರ್ತಿಯಾಗಿ ತಿಳಿಯುತ್ತದೆ. ಅಷ್ಟೇ ಅಲ್ಲದೇ ಅಬ್ರಹಾಮ್ ಅದಕ್ಕು ಮೊದಲು ಎಷ್ಟು ಜನ್ಮಗಳು ಹೊಂದಿರುವುದು, ನಂತರ ಎಷ್ಟು ಜನ್ಮಗಳೊಳಗೆ ಹೋಗಿರುವುದು ಸಾಕ್ಷಿಯಾದ ಪರಮಾತ್ಮಗೆ ಎಲ್ಲ ತಿಳಿದಿದೆ. ಆದ್ದರಿಂದ ಏಸು ಶರೀರದಲ್ಲಿನ ಪರಮಾತ್ಮ "ಅಬ್ರಹಾಮ್ ಹುಟ್ಟುವುದಕ್ಕಿಂತ ಮುಂಚೆಯೇ ನಾನಿದ್ದೇನೆ" ಎಂದಿದ್ದಾನೆ.

**39) ಯೋಹಾನ್ ಸುವಾರ್ತೆ 9ನೇ ಅಧ್ಯಾಯ, 39ನೇ ವಚನ.**

## (39) ನೋಡದವರು ನೋಡಬೇಕು, ನೋಡುವವರು ಕುರುಡರಾಗ ಬೇಕು ಎಂಬ ತೀರ್ಪು ನಿಮಿತ್ತ ನಾನು ಈ ಲೋಕಕ್ಕೆ ಬಂದಿದ್ದೇನೆಂದು ಹೇಳಿದನು.

ಪ್ರಜೆಗಳಲ್ಲಿ ಕೆಲವರು ಏಸುವನ್ನು ಪಾಪಿಯೆಂದು ಹೇಳಿದರೆ, ಆ ಮಾತನ್ನು ಕೇಳಿಸಿಕೊಂಡ ವ್ಯಕ್ತಿ ಏಸು ಮೂಲಕ ಕರ್ಮವನ್ನು ತೆಗೆದುಹಾ ಕಲ್ಪಟ್ಟವನಾಗಿ ಇರುವುದರಿಂದ ಆತನು ಅವರೊಂದಿಗೆ ಈ ವಿಧವಾಗಿ ಹೇಳಿದನು. ಆತನು ಅವರೊಂದಿಗೆ ಹೇಳಿರುವ ಸಮಾಚಾರವನ್ನು ವಾಕ್ಯಗಳ ರೂಪದಲ್ಲಿಯೇ ಬರೆದಿದ್ದೇವೆ ನೋಡಿರಿ.

**(ಯೋ 9–25 ರಿಂದ 38ರ ವರೆಗು)** ಅವನು ಹೀಗೆ ಹೇಳಿದ್ದಾನೆ **"ಆತನು ಪಾಪಿಯೋ ಅಲ್ಲವೋ ನಾನು ಅರಿತಿಲ್ಲ. ಒಂದು ಮಾತ್ರ ನಾನು ಅರಿತಿದ್ದೇನೆ. ನಾನು ಕುರುಡನಾಗಿದ್ದು ಈಗ ನೋಡುತ್ತಿದ್ದೇನೆಂದನು."** ಅದಕ್ಕೆ ಅವರು **"ಆತನು ನಿನಗೇನು ಮಾಡಿದ್ದಾನೆ? ನಿನ್ನ ಕಣ್ಣುಗಳು ಹೇಗೆ ತೆರೆದನೆಂದು ಮತ್ತೇ ಅವನನ್ನು ಕೇಳಿದಾಗ!"** ಅವನು **"ಇದೀಗ ನಿಮ್ಮೊಂದಿಗೆ ಹೇಳಿದ್ದೇನೆ ಆದರೇ, ನೀವು ಕೇಳದೇ ಹೋಗಿದ್ದೀರಿ. ನೀವೇಕೆ ಮತ್ತೇ ಕೇಳಲು ಬಯಸುತ್ತಿದ್ದೀರಿ? ನೀವು ಆತನ ಶಿಷ್ಯರಾಗುವು ದಕ್ಕೆ ಕೋರುತ್ತಿದ್ದೀರಾ ಏನು"** ಎಂದು ಅವರೊಂದಿಗೆ ಹೇಳಿದನು. ಅದಕ್ಕೆ ಅವರು **"ನೀನೇ ಅವನ (ಏಸು) ಶಿಷ್ಯನು, ನಾವು ಮೋಷೇ ಶಿಷ್ಯರು. ದೇವರು ಮೋಷೆಯೊಂದಿಗೆ ಮಾತನಾಡಿದ್ದಾನೆಂದು ತಿಳಿದಿದ್ದೇವೆ ಆದರೇ ಇವನು ಎಲ್ಲಿಂದ ಬಂದಿದ್ದಾನೋ ತಿಳಿದಿಲ್ಲವೆಂದು ಹೇಳಿ ಏಸುವನ್ನು ದೂಷಿಸಿದರು."** ಅದಕ್ಕೆ ಆ ಮನುಷ್ಯನು ಹೀಗೆ ಹೇಳಿದನು **"ಆತನು ಎಲ್ಲಿಂದ ಬಂದಿದ್ದಾನೋ ನೀವು ತಿಳಿಯದೇ ಹೋಗಿರುವುದು ಆಶ್ಚರ್ಯವೇ, ಆದರೂ ಆತನು ನನ್ನ ಕಣ್ಣುಗಳನ್ನು ತೆರೆದನು. ದೇವರು ಪಾಪಿಗಳ ಮನವಿ ಆಲಿಸುವುದಿಲ್ಲವೆಂದು ತಿಳಿದಿದ್ದೇವೆ. ಯಾರಾದರೂ ದೈವಭಕ್ತನಾಗಿದ್ದು ಆತನ ಚಿತ್ತ ಹೇಳಿದ ಹಾಗೆ**

**ನಡೆಸಿರುವ ಪಕ್ಷದಲ್ಲಿ ಆತನು (ದೇವರು) ಅವನ ಮನವಿಯನ್ನು ಆಲಿಸುತ್ತಾನೆ. ಹುಟ್ಟು ಕುರುಡನ ಕಣ್ಣುಗಳನ್ನು ಯಾರಾದರೂ ತೆರೆದಂತೆ ಲೋಕವು ಹುಟ್ಟಿದಾಗಿನಿಂದ ಕೇಳಿಬರಲಿಲ್ಲ. ಈತನು ದೇವರ ಹತ್ತಿರದಿಂದ ಬಂದಿರುವವನು ಆಗದ ಪಕ್ಷದಲ್ಲಿ ಏನೂ ಮಾಡಲಾರನೆಂದು ಅವರೊಂದಿಗೆ ಹೇಳಿದನು."** ಅದಕ್ಕೆ ಅವರು ಅವನನ್ನು ಹೀಗೆ ದೂಷಿಸಿದರು **"ನೀನು ಕೇವಲ ಪಾಪಿಯಾಗಿ ಹುಟ್ಟಿರುವವನು, ನೀನು ನಮಗೆ ಬೋಧಿಸಲು ಬಂದಿರುವೆಯಾ"** ಎಂದು ಅವನಿಗೆ ಹೇಳಿ ಅವನನ್ನು ಹೊರಹಾಕಿದರು. ಈ ವಿಷಯವೆಲ್ಲಾ ತಿಳಿದು ಪರಿಶಯ್ಯರು ಅವನನ್ನು ಹೊರಹಾಕಿದ್ದಾರೆಂದು, ಅವನ ಬಳಿಗೆ ಹೋಗಿ ಏಸು ಅವನೊಂದಿಗೆ ಹೀಗೆ ಹೇಳಿದನು. **"ನೀನು ದೇವರ ಕುಮಾರನಲ್ಲಿ ವಿಶ್ವಾಸ ಇಡುತ್ತಿದ್ದೀಯಾ"** ಎಂದು ಕೇಳಿದನು. ಅದಕ್ಕೆ ಅವನು **"ಪ್ರಭುವೇ, ನಾನು ಆತನಲ್ಲಿ ವಿಶ್ವಾಸ ಇಡುವುದಕ್ಕೆ ಆತನು ಯಾರೋ ನನಗೆ ತಿಳಿದಿಲ್ಲವೇ?" ಎಂದು ಕೇಳಿದಾಗ!** ಏಸು **"ಈಗ ನೀನು ಆತನನ್ನು ನೋಡುತ್ತಿದ್ದೀಯ, ನಿನ್ನೊಂದಿಗೆ ಮಾತನಾಡುತ್ತಿರುವವನು ಆತನೇ"** ಎಂದನು. ಅಷ್ಟರಲ್ಲಿ "ಪ್ರಭುವೇ, ನಾನು ವಿಶ್ವಾಸಿಸುತ್ತಿದ್ದೇನೆ" ಎಂದು ಹೇಳಿ ಆತನಿಗೆ ನಮಸ್ಕರಿಸಿದನು. ಆಗ ಏಸು **"ನೋಡದವನು ನೋಡಬೇಕು. ನೋಡುತ್ತಿರುವವರು ಕುರುಡರಾಗಬೇಕು ಎಂಬ ತೀರ್ಪು ನಿಮಿತ್ತ ನಾನು ಈ ಲೋಕಕ್ಕೆ ಬಂದಿದ್ದೇನೆ"** ಎಂದು ಹೇಳಿದನು. ಈ ವಾಕ್ಯವನ್ನು ಏಸು ಯಾವ ಉದ್ದೇಶದಿಂದ ಹೇಳಿದ್ದಾನೋ ಮೊದಲು ನಡೆದಿರುವ ಸಮಾಚಾರವನ್ನು ಅನುಸರಿಸಿ ಸುಲಭವಾಗಿ ತಿಳಿಯುತ್ತಿದೆ.

ಅದು ಏನೆಂದರೇ! **ದೇವರ ಮೇಲೆ ವಿಶ್ವಾಸವಿರುವವರು ನನ್ನನ್ನು ನೋಡಬಲ್ಲರು.** ನಾನು ಯಾರೋ ತಿಳಿಯದಿದ್ದರೂ ದೇವರ ಮೇಲಿನ ವಿಶ್ವಾಸವೇ ನಾನು ಇಂಥವನೆಂದು ಅವರಿಗೆ ತಿಳಿಸಬಲ್ಲದು. ದೇವರ ಮೇಲೆ ವಿಶ್ವಾಸ ಇಲ್ಲದವರು ಪ್ರತಿ ದಿನವು ನನ್ನ ಭೌತಿಕ ದೇಹವನ್ನು ನೋಡುತ್ತಿದ್ದರೂ, ನನ್ನೊಂದಿಗೆ ಮಾತನಾಡುತ್ತಿದ್ದರೂ ನಾನು ಯಾರೋ ಅವರಿಗೆ ತಿಳಿಯುವುದಿಲ್ಲ. ಆದ್ದರಿಂದ ನೋಡುವವರು ಕುರುಡರಾಗಿ ಇರುವುದಕ್ಕೆ ನಾನು ಇಂಥವನೆಂದು ತಿಳಿಯದ ವಿಶ್ವಾಸಿಗರಿಗೆ ನಾನು ದೇವರೇಯೆಂದು ಕಾಣಿಸುವ ಹಾಗೆ ಮಾಡುವುದಕ್ಕೆ

ನಾನು ಈ ಲೋಕದೊಳಗೆ ಬಂದಿದ್ದೇನೆಂದು ಏಸು ಹೇಳಿದ್ದಾನೆ. ಏಸು ಹೇಳಿರುವುದನ್ನು ಅನುಸರಿಸಿ ವಿಶ್ವಾಸವಿರುವವರಿಗೆ ಏಸು ತಿಳಿದಿರುವುದನ್ನು ಅನುಸರಿಸಿ ನೋಡಿದರೇ ವಿಶ್ವಾಸ ಇಲ್ಲದವನು ದೇವರು ಮನುಷ್ಯನಾಗಿ ಬಂದು ಪಕ್ಕದಲ್ಲಿದ್ದರೂ ತನ್ನೊಂದಿಗೆ ಮಾತನಾಡಿದರೂ ಗುರುತಿಸಲಾರದಷ್ಟು ಅಜ್ಞಾನ ಅಂಧತ್ವ ಹೊಂದಿರುತ್ತಾನೆ. ಅಂದರೇ ಅಜ್ಞಾನವೆನ್ನುವ ಕುರುಡುತನ ಹೊಂದಿರುತ್ತಾನೆ. ಆದ್ದರಿಂದ ಮನುಷ್ಯನಾಗಿ ಬಂದಿರುವ ದೇವರು ಯಾರೋ ಅವರಿಗೆ ತಿಳಿಯುವುದಿಲ್ಲ. **"ಭಕ್ತಿ ವಿಶ್ವಾಸಗಳಿರುವವನು ದೇವರ ಅವತಾರವನ್ನು ನೋಡಿಯೂ ಹೊರಗಿನ ದೃಷ್ಠಿಗೆ ತಿಳಿಯದೇ ಹೋದರೂ ಅಂತರ್‌ದೃಷ್ಠಿಗೆ ಅವನಿಗೆ ಈತನೇ ದೇವರೆಂದು ತಿಳಿಯುತ್ತದೆ."** ಎಂದು ಏಸು ಹೇಳಿದಾಗ ಕೆಲವರು ಆ ಮಾತನ್ನು ಕೇಳದವರು ನಾವು ಈಗ ನಿನ್ನನ್ನು ನೋಡುತ್ತಿದ್ದೇವೆ ಅಲ್ಲವೇ! ನಾವು ನಿನ್ನನ್ನು ನೋಡಲಾರದ ಕುರುಡರಾ? ನಾವು ನೋಡುತ್ತಿದ್ದೇವೆ ಅಲ್ಲವೇ! ಎಂದರು. ಅದಕ್ಕೆ ಏಸು ಅವರೊಂದಿಗೆ ಹೀಗೆ ಹೇಳಿದ್ದಾನೆ.

### 40) ಯೋಹಾನ್ ಸುವಾರ್ತೆ 9ನೇ ಅಧ್ಯಾಯ, 41ನೇ ವಚನ.

**(41) ನೀವು ಕುರುಡರಾದರೇ ನಿಮಗೆ ಪಾಪವು ಇಲ್ಲದೇ ಹೋಗುತ್ತದೆ ಆದರೇ, ನೋಡುತ್ತಿದ್ದೇವೆಂದು ನೀವು ಈಗ ಹೇಳುತ್ತಿದ್ದೀರಿ ಆದಕಾರಣ ನಿಮ್ಮ ಪಾಪವು ನಿಂತಿದೆ ಎಂದು ಹೇಳಿದನು.**

ಮೇಲೆ ಹೇಳಿರುವ 39ನೇ ವಾಕ್ಯದಲ್ಲಿ ದೈವ ಭಾವವಿರುವವರಿಗೆ, ದೈವ ಭಾವವಿಲ್ಲದವರಿಗೆ ಇರುವ ವ್ಯತ್ಯಾಸವನ್ನು ಏಸು ಹೇಳಿದ್ದಾನೆ. ದೈವಭಾವ ಇರುವವನು ಕುರುಡನಾದರೂ ತನ್ನನ್ನು ನೋಡಬಲ್ಲನೆಂದು, ದೈವ ಭಾವ ಇಲ್ಲದವನು ತನ್ನನ್ನು ನೋಡುತ್ತಿರುವ ದೃಷ್ಟಿಯಿರುವವನಾದರು ತನ್ನನ್ನು ಗ್ರಹಿಸದ ಕುರುಡನೆಂದು ಹೇಳಿದ್ದಾನೆ. ಆದರೇ ಈಗ 41ನೇ ವಾಕ್ಯದಲ್ಲಿ **ಪ್ರಪಂಚ ಭಾವದಿಂದ** ಮಾತನಾಡಿದವರನ್ನು ಕುರಿತು ಹೇಳುವುದರಲ್ಲಿ ವಿವರವಾಗಿ ಅರ್ಥವಾಗುವಂತೆ

ಹೇಳಿದ್ದಾನೆ. ಪ್ರಪಂಚ ಭಾವವಿರುವವನು "ನಾನು ನೋಡುತ್ತಿದ್ದೇನೆ" ಎಂದು ಅನ್ನುತ್ತಿದ್ದಾನೆ. ಆದ್ದರಿಂದ ಆ ವಿಷಯದಲ್ಲಿನ ಕರ್ಮ ಅವನಿಗೆ ಅಂಟಿಕೊಳ್ಳುತ್ತಿದೆ. ದೇವರ ವಿಷಯದಲ್ಲಿ ಮನುಷ್ಯ ನೋಡಬಹುದು, ನೋಡದೇ ಹೋಗಬಹುದು. ಆ ವಿಷಯದಲ್ಲಿ ಮನುಷ್ಯನಿಗೆ ದೇವರು ದೃಷ್ಟಿ ನೀಡಿದ್ದಾನೆ. ಆದರೇ ಕೆಲವರು ಆ ದೃಷ್ಟಿಯನ್ನು ವಿನಿಯೋಗಿಸಿಕೊಂಡು ದೇವರನ್ನು ತಿಳಿದುಕೊಳ್ಳುತ್ತಿದ್ದಾರೆ. ಕೆಲವರು ಆ ದೃಷ್ಟಿಯನ್ನು ವಿನಿಯೋಗಿಸಿಕೊಳ್ಳದೆ ದೃಷ್ಟಿಯಿದ್ದರೂ ಕುರುಡರಾಗಿ ಇದ್ದಾರೆ. ಅದೇ ಪ್ರಪಂಚ ವಿಷಯದೊಳಗೆ ಬಂದು ನೋಡಿದರೇ ಪ್ರಪಂಚ ವಿಷಯದಲ್ಲಿ ಪ್ರತಿ ಮನುಷ್ಯ ಕುರುಡನೇ. ವಾಸ್ತವವಾಗಿ ಪ್ರಪಂಚ ವಿಷಯಗಳು ಯಾರೂ ಮಾಡುತ್ತಿಲ್ಲ. ಅವನಿಗೆ ತಿಳಿಯುವ ದೃಷ್ಟಿಯಾಗಲೀ, ಆಲಿಸುವುದಾಗಲೀ ಯಾವುದೂ ಇಲ್ಲ. ವಾಸ್ತವವಾಗಿ ಯಾವುದು ಇಲ್ಲದಿದ್ದರೂ ತನಗೆ ದೃಷ್ಟಿ ಇರುವವನಹಾಗೆ 'ನಾನು ನೋಡುತ್ತಿದ್ದೇನೆ' ಎಂದು ಅನ್ನುತ್ತಿದ್ದಾನೆ. ಆದ್ದರಿಂದ ಆ ವಿಷಯದಲ್ಲಿನ ಪಾಪವು ಅವನಿಗೆ ಅಂಟಿಕೊಳ್ಳುತ್ತಿದೆ. ವಾಸ್ತವವಾಗಿ ಕುರುಡನಾಗಿ ಇದ್ದರೂ ನಾನು ನೋಡುತ್ತಿದ್ದೇನೆ ಎಂದು ಅಂದುಕೊಳ್ಳುವುದರಿಂದ ಆತನಿಗೆ ಪಾಪವು ಅಂಟಿಕೊಳ್ಳುತ್ತಿದೆ. ಪ್ರಪಂಚ ವಿಷಯಗಳಲ್ಲಿ ತನ್ನ ಕುರುಡುತನವನ್ನು ತಾನು ತಿಳಿದು "ನಾನು ಏನೂ ನೋಡಲಿಲ್ಲವೆಂಬ **ಸತ್ಯವನ್ನು** ತಿಳಿದುಕೊಂಡರೇ ಅಂದರೇ ಅವರು ಕುರುಡರಾದರೆ ಪಾಪವು ಇಲ್ಲದೇ ಹೋಗುತ್ತದೆ" ಎಂದು ಹೇಳುವುದು ನಡೆದಿದೆ.

ದೈವಜ್ಞಾನ ತಿಳಿಯದವರು ಪ್ರಪಂಚ ವಿಷಯಗಳಲ್ಲಿ ತಮಗೆ ದೃಷ್ಟಿ ಇಲ್ಲ, ಕೇವಲ ದೇವರ ವಿಷಯಗಳಲ್ಲಿ ಮಾತ್ರವೇ ದೇವರು ದೃಷ್ಟಿ ನೀಡಿದ್ದಾನೆಂದು ತಿಳಿಯದವರಂತೆ ಇರುವುದರಿಂದ ಅವರಿಗೆ ಏಸು ಹೇಳಿರುವ ಮೇಲಿನ ವಾಕ್ಯವು ಏನೂ ಅರ್ಥವಾಗಲಿಲ್ಲವೆಂದು ಹೇಳಬಹುದು. ಈ ವಾಕ್ಯವು ಅರ್ಥ ವಾಗಬೇಕೆಂದರೇ ಮೊದಲು ಪ್ರತಿ ಮನುಷ್ಯನಲ್ಲಿನ ಜೀವಿಯು ಶರೀರದಲ್ಲಿ ಕುರುಡನಂತೆ ಇದ್ದಾನಾ ಅಥವಾ ದೃಷ್ಟಿ ಇರುವವನಂತೆ ಇದ್ದಾನಾ ತಿಳಿಯಬೇಕಾಗಿರುತ್ತದೆ. ಆ ಲೆಕ್ಕ ಪ್ರಕಾರ ನೋಡಿದರೇ ಪ್ರತಿ ಶರೀರದಲ್ಲಿನ ಜೀವಿಯು ಪೂರ್ತಿ ಎಲ್ಲ ವಿಷಯಗಳಲ್ಲಿ ಕುರುಡನಾಗಿ ಇದ್ದಾನೆ. ಶರೀರದಲ್ಲಿ

ಪ್ರತಿ ಜೀವಿಯು ಶರೀರವು ನನ್ನದೇಯೆಂದು ಅಂದುಕೊಳ್ಳುತ್ತಾ, ಎಲ್ಲಾ ನಾನೇ ಮಾಡುತ್ತಿದ್ದೇನೆಂದು ಅಂದುಕೊಳ್ಳುತ್ತಿದ್ದಾನೆ. ವಾಸ್ತವವಾಗಿ ನೋಡಿದರೇ, ವಾಸ್ತವವನ್ನು ಹೇಳಿದರೇ ಶರೀರದಲ್ಲಿ ಜೀವಿಗೆ ಯಾವ ಸ್ವಾತಂತ್ರ್ಯ ಇಲ್ಲ. ಶರೀರಕ್ಕೆ ಅಧಿಪತಿ (ಯಜಮಾನ) ಶರೀರದಲ್ಲಿ **ಆತ್ಮ** ಇದ್ದಾನೆ. ಆತ್ಮ ಯಾವಾಗಲೂ ಶರೀರದಲ್ಲಿ ಕೆಲಸ ಮಾಡುತ್ತಿದೆ. ವಾಸ್ತವವಾಗಿ ಜೀವಿಯು ಶರೀರದಲ್ಲಿ ಯಾವ ಒಂದು ಕೆಲಸವನ್ನು ಕೂಡಾ ಮಾಡಲಿಲ್ಲ. ಹಾಗೆಯೇ ಜೀವಿಗೆ ದೃಷ್ಠಿ ಇಲ್ಲ, ಕೇಳುವಿಕೆ ಇಲ್ಲ. ಎಲ್ಲ ವಿಧಗಳಲ್ಲಿ ಕುರುಡನು, ಕಿವುಡನು, ಅಂಗವಿಕಲನು. ಶರೀರದಲ್ಲಿ ಬುದ್ಧಿ ಪಕ್ಕದಲ್ಲೇ ನಿವಾಸವಿರುವುದರಿಂದ ಬುದ್ಧಿಗೆ ಸೇರುವ ಪ್ರತಿ ವಿಷಯವು ತನಗೆ ತಿಳಿಯುತ್ತಿದೆ ಹೊರತು ಜೀವಿಯು ಸ್ವತಃವಾಗಿ ಯಾವುದನ್ನು ತಿಳಿಯಲಾರನು. ತನಗೆ ಬುದ್ಧಿ ಮೂಲಕ ತಿಳಿದ ವಿಷಯವನ್ನು ತಾನೇ ಸ್ವತಃವಾಗಿ ತಿಳಿದಿದ್ದೇನೆಂದು ಅಂದುಕೊಳ್ಳುತ್ತಿದ್ದಾನೆ. ತಾನು ಸ್ವತಃವಾಗಿ ಯಾವುದನ್ನು ನೋಡದಿದ್ದರೂ ಎಲ್ಲವನ್ನು ನಾನು ನೋಡಿದ್ದೇನೆ ಎಂದು ಅಂದುಕೊಳ್ಳುತ್ತಿದ್ದಾನೆ. ಹಾಗೆಯೇ ಆತ್ಮ ಪ್ರತಿ ಕೆಲಸವನ್ನು ಶರೀರದಲ್ಲಿ ಮಾಡುತ್ತಿರುವಾಗ ಜೀವಿಯು ಆ ಕೆಲಸಗಳೆಲ್ಲವನ್ನೂ ನಾನೇ ಮಾಡುತ್ತಿದ್ದೇನೆಂದು ಅನ್ನುತ್ತಿದ್ದಾನೆ. ಆಗ ಆ ಕೆಲಸದಲ್ಲಿ ಇರುವ ಕರ್ಮವನ್ನು ತಾನೇ ಮಾಡಿದಂತೆ ಒಪ್ಪಿಕೊಳ್ಳುವುದರಿಂದ ಆ ಕೆಲಸದಲ್ಲಿ ಬಂದಿರುವ ಪಾಪವನ್ನು ತಾನೇ ಅನುಭವಿಸಬೇಕಾಗಿ ಬರುತ್ತಿದೆ.

### 41) ಯೋಹಾನ್ ಸುವಾರ್ತೆ 10ನೇ ಅಧ್ಯಾಯ, 18ನೇ ವಚನ.

**(18) ಯಾರೂ ನನ್ನ ಪ್ರಾಣವನ್ನು ತೆಗೆದುಕೊಳ್ಳಲಾರನು. ನನ್ನಷ್ಟಕ್ಕೆ ನಾನೇ ಅದನ್ನು ಇಡುತ್ತಿದ್ದೇನೆ. ಅದನ್ನು ಇಡುವುದಕ್ಕೆ ನನಗೆ ಅಧಿಕಾರವಿದೆ. ಅದನ್ನು ಪುನಃ ತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರವಿದೆ. ನನ್ನ ತಂದೆಯಿಂದ ಈ ಆಜ್ಞೆ ಪಡೆದಿದ್ದೇನೆ ಎಂದನು.**

ಸಾಧಾರಣ ಮನುಷ್ಯನಲ್ಲಿನ ಪ್ರಾಣವು ಯಾವಾಗ ಹೋಗುತ್ತದೋ ಯಾರಿಗೂ ತಿಳಿದಿಲ್ಲ. ಪ್ರಾಣ ಹೋದರೇ ಮತ್ತೆ ಬರುವುದಿಲ್ಲ. ಇದು ಎಲ್ಲರ

ಮರಣದಲ್ಲಿ ನೋಡುತ್ತಾ ಇದ್ದೇವೆ. ಪ್ರಾಣವು ಹೋದರೇ ಜೀವಿಯು ಕೂಡಾ ಶರೀರವನ್ನು ಬಿಟ್ಟು ಹೋಗುವನು. ಇಲ್ಲಿ ಬಹಳ ಜನರಿಗೆ ತಿಳಿಯದ ವಿಷಯವೇನೆಂದರೇ! ಮನುಷ್ಯನಲ್ಲಿನ **ಪ್ರಾಣವು ಬೇರೆ, ಜೀವಿಯು ಬೇರೆ** ಎಂದು ತಿಳಿದಿಲ್ಲ. ಜೀವಿಯೇ ಪ್ರಾಣವೆಂದು ಬಹಳ ಜನ ಅಂದುಕೊಳ್ಳುವುದು ನಡೆಯುತ್ತಿದೆ. ಮೇಲೆ ಹೇಳಿರುವ ವಾಕ್ಯದಲ್ಲಿ **"ಯಾರೂ ಸಹ ನನ್ನ ಪ್ರಾಣವನ್ನು ತೆಗೆದುಕೊಳ್ಳುವುದಿಲ್ಲ"** ಎಂದು ಇದೆ. 'ನನ್ನ ಪ್ರಾಣವನ್ನು' ಎಂದಾಗ ಏಸು ಬೇರೆ, ಏಸುವಿನ ಪ್ರಾಣವು ಬೇರೆಯೆಂದು ತಿಳಿಯುತ್ತಿದೆ. ಏಸು ಶರೀರದಲ್ಲಿನ ಹಾಗೆ ಯಾರ ಪ್ರಾಣ ಅವರಿಗಿರುವಾಗ, ಮನುಷ್ಯ ಸ್ವತಂತ್ರವಾಗಿ ಪ್ರಾಣವನ್ನು ಪಕ್ಕಕ್ಕಿಡುವುದಾಗಲೀ, ಪುನಃ ತೆಗೆದುಕೊಳ್ಳುವುದಾಗಲೀ ಮಾಡಲಿಲ್ಲ. ಶರೀರದಲ್ಲಿ ಪ್ರಾಣ, ಬುದ್ಧಿ, ಮನಸ್ಸು ಎಷ್ಟೋ ಅಂತರೇಂದ್ರಿಯಗಳಿವೆ. ಶರೀರದ ಒಳಗೆ ಇರುವುದೇನೇ ಆಗಲೀ, ಮನುಷ್ಯನ ಹಿಡಿತದಲ್ಲಿಲ್ಲದೇ, ಆತ್ಮ ಅಧೀನದಲ್ಲಿ ಇರುತ್ತದೆ. ಆದ್ದರಿಂದ ಮನುಷ್ಯ ಪ್ರಾಣವನ್ನು ಪಕ್ಕಕ್ಕಿಡುವುದಾಗಲೀ, ಮತ್ತೆ ಅದನ್ನು ಎಲ್ಲಿಗೆ ಕಳುಹಿಸಬೇಕೆಂಬ ವಿಷಯವನ್ನಾಗಲೀ ಆತ್ಮ ತನ್ನ ಕೆಲಸವಾಗಿ ಮಾಡುತ್ತದೆ. **ಜೀವಿಗು** ಅವನ ಶರೀರದಲ್ಲಿನ ಪ್ರಾಣಕ್ಕು ಯಾವ ಸಂಬಂಧ ಇರುವುದಿಲ್ಲ. ಹಾಗೇ ಪ್ರಾಣಕ್ಕು **ಆತ್ಮಕ್ಕು** ಸಂಬಂಧವಿರುತ್ತದೆ.

ಏಸು ಸಾಧಾರಣ ಜೀವಿಯಲ್ಲ. ಆತನು ಆತ್ಮವಾಗಿದ್ದಾನೆ. ಆದ್ದರಿಂದ ತನ್ನ ಪ್ರಾಣವನ್ನು ತನ್ನಷ್ಟಕ್ಕೆ ತಾನೇ ಪಕ್ಕಕ್ಕಿಡುತ್ತಿದ್ದಾನೆ. ಆತನ ಪ್ರಾಣವನ್ನು ಯಾರು ತೆಗೆದುಕೊಳ್ಳಲಾರನು. ಆದ್ದರಿಂದ **'ಏಸು ಯಾರ ಕೈಯಲ್ಲೂ ಸಾಯುವುದಿಲ್ಲ'** ಎಂಬ ವಿಷಯವು ತಿಳಿಯುತ್ತಿದೆ. ಏಸು ಮರಣಿಸಿದರೇ ತನ್ನ ಪ್ರಾಣವನ್ನು ತಾನೇ ಪಕ್ಕದಲ್ಲಿ ಇಡಬೇಕಾಗುತ್ತದೆ. ಶರೀರದಲ್ಲಿಯೇ ಒಂದು ಕಡೆ ಇಟ್ಟಿರುವ ಪ್ರಾಣವನ್ನು ಪುನಃ ಆತನೇ ತೆಗೆದುಕೊಳ್ಳುತ್ತಾನೆ. ಜೀವಿಯು ಯಾರೂ ಈ ಕೆಲಸವನ್ನು ಮಾಡಲಾರನು. ಆತ್ಮ ಮಾತ್ರ ಈ ಕೆಲಸವನ್ನು ಮಾಡಬಲ್ಲನು. ಆ ಕೆಲಸವನ್ನು ಮಾಡುವ ಅಧಿಕಾರವನ್ನು ಪರಿಶುದ್ಧಾತ್ಮನಾದ ದೇವರು ಆತ್ಮಕ್ಕೆ ಕೊಟ್ಟಿದ್ದಾನೆ. ಆದ್ದರಿಂದ ಈ ವಾಕ್ಯದಲ್ಲಿ **"ಯಾರೂ ಸಹ ನನ್ನ ಪ್ರಾಣವನ್ನು ತೆಗೆದುಕೊಳ್ಳಲಾರನು. ನನ್ನಷ್ಟಕ್ಕೆ ನಾನೇ ಅದನ್ನು ಇಡುತ್ತಿದ್ದೇನೆ.**

**ಅದನ್ನು ಇಡುವುದಕ್ಕೆ ನನಗೆ ಅಧಿಕಾರವಿದೆ. ಅದನ್ನು ಪುನಃ ತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರವಿದೆ. ನನ್ನ ತಂದೆಯಿಂದ ಈ ಆಜ್ಞೆ ಹೊಂದಿದ್ದೇನೆ ಎಂದನು."** ಈ ರೀತಿಯಾಗಿ ಮೊದಲೇ ಹೇಳಿರುವುದರಿಂದ ಏಸಯ್ಯನನ್ನು ಶಿಲುಬೆಗೆ ಹಾಕಿದ ಸಮಯದಲ್ಲಿ ತನ್ನ ಪ್ರಾಣವನ್ನು ಶರೀರದಲ್ಲಿಯೇ ಅಣಗಿರುವ ಹಾಗೆ ಮಾಡಿ, ಹೊರಗಿನ ಮನುಷ್ಯರಿಗೆ ಏಸು ಮರಣಿಸಿದಹಾಗೆ ಕಾಣಿಸಿದ್ದಾನೆ. ಶುಕ್ರವಾರ ಸಂಜೆ ಸಮಯದಲ್ಲಿ ಮರಣಿಸಿದ ಹಾಗೆ ಕಂಡ ಆತ ಭಾನುವಾರ ಬೆಳಗಿನ ಜಾವದಲ್ಲಿ ಬದುಕಿ ಹೊರಗೆ ಬಂದಿದ್ದಾನೆ. ಆ ರೀತಿಯಾಗಿ ಪ್ರಾಣವಿಲ್ಲದೇ ಮಾಡಿಕೊಳ್ಳುವುದಕ್ಕೆ ಅಂದರೇ ಪಕ್ಕದಲ್ಲಿ ಇಡುವುದಕ್ಕಾಗಲೀ, ಪುನಃ ತೆಗೆದುಕೊಳ್ಳುವುದಕ್ಕಾಗಲೀ, ಆತನಿಗೆ ಪರಮಾತ್ಮ ಅಧಿಕಾರ ಕೊಟ್ಟಿದೆ. ಇತರರ ಪ್ರಾಣವನ್ನು ತೆಗೆಯುವುದಕ್ಕು, ಎರಡನೆಯ ಜನ್ಮಕ್ಕೆ ಕಳುಹಿಸುವುದಕ್ಕು ಆತ್ಮಕ್ಕೆ ಅಧಿಕಾರ ಇದೆ. ಏಸು ಆತ್ಮ ಆಗಿರುವುದರಿಂದ ಆತನು ತನ್ನ ಪ್ರಾಣವನ್ನು ಪಕ್ಕದಲ್ಲಿಟ್ಟು ಮರಣಿಸುವುದಕ್ಕಾಗಲೀ, ಪುನಃ ಅದೇ ಶರೀರದಲ್ಲಿ ಬದುಕಿ ಏಳುವುದಕ್ಕಾಗಲೀ ಅಧಿಕಾರವನ್ನು ಹೊಂದಿದ್ದಾನೆ. ಆ ಅಧಿಕಾರವನ್ನು ತನ್ನ ತಂದೆಯಾದ ಪರಿಶುದ್ಧಾತ್ಮನಿಂದ ಕುಮಾರನಾದ ಆತ್ಮಕ್ಕೆ ಏರ್ಪಟ್ಟಿದೆ.

**42) ಯೋಹಾನ್ ಸುವಾರ್ತೆ 10ನೇ ಅಧ್ಯಾಯ, 30ನೇ ವಚನ.**

## (30) ನಾನು ನನ್ನ ತಂದೆಯು ಏಕವಾಗಿದ್ದೇವೆಂದು ಅವರೊಂದಿಗೆ ಹೇಳಿದನು.

ಜೀವಿಯು ಹುಟ್ಟುವುದಕ್ಕೆ ಆತ್ಮ ತಂದೆಯಾಗಿದೆ. ಹಾಗೆಯೇ ಆತ್ಮ ಹುಟ್ಟುವುದಕ್ಕೆ ಪರಮಾತ್ಮ ಕಾರಣವಾಗಿದೆ. ಆದ್ದರಿಂದ ಮನುಷ್ಯರಿಗೆ ತಂದೆ ಆತ್ಮ ಆಗಿರುವಾಗ, ಆತ್ಮಗೆ ತಂದೆ ಪರಮಾತ್ಮ ಎಂದು ಹೇಳಬಹುದು. ಏಸು ಆತ್ಮವಾಗಿ ಇರುವುದರಿಂದ ಆತನನ್ನು ದೇವರ ಕುಮಾರನನ್ನಾಗಿ ಹೇಳಬಹುದು. ಆದರೇ ಕುಮಾರನಾಗಿ ಇರುವವನು **ಯಾವಾಗಲೂ ತಂದೆಯ ಮೇಲೆ ಗಮನವನ್ನು** ಹೊಂದಿದ್ದರೇ ಆಗ ಕುಮಾರನು ತಂದೆಯೊಂದಿಗೆ ಏಕವಾಗಿದ್ದಾನೆಂದು ಹೇಳಬಹುದು. ಇಲ್ಲಿ ಏಸು ತನ್ನ ತಂದೆಯಾದ ಪರಿಶುದ್ಧಾತ್ಮದ ಮೇಲೆ ಗಮನ

ಹೊಂದಿರುವುದರಿಂದ ಆತನು **'ನಾನೂ ನನ್ನ ತಂದೆ ಏಕವಾಗಿದ್ದೇವೆಂದು'** ಹೇಳಿದ್ದಾನೆ.

**43) ಯೋಹಾನ್ ಸುವಾರ್ತೆ 11ನೇ ಅಧ್ಯಾಯ, 25ನೇ ವಚನ.**

**(25) ಪುನರುತ್ಥಾನವು ಜೀವವೂ ನಾನೇ, ನನ್ನಲ್ಲಿ ವಿಶ್ವಾಸವಿಡುವವನು ಸತ್ತು ಹೋದರು ಬದುಕುವನು.**

ಪುನರುತ್ಥಾನ ಎಂದರೇ ಜನ್ಮಿಸುವುದು. ಜೀವವು ಎಂದರೇ ಜನ್ಮಿಸದೆ ಮೋಕ್ಷ ಹೊಂದುವುದು ಎಂದು ಅರ್ಥ. ಜನನವು, ಮೋಕ್ಷವು ಎರಡು ಆತ್ಮವೇ ಆಗಿರುವುದರಿಂದ "ಏಸಯ್ಯನಲ್ಲಿ ವಿಶ್ವಾಸವಿಡುವವನು ಮರಣಿಸಿದ ನಂತರ ಪುನಃ ಜನ್ಮಿಸದೆ **ಮೋಕ್ಷವನ್ನು** ಹೊಂದುವನು" ಎಂದು ಹೇಳಿದ್ದಾನೆ.

**44) ಯೋಹಾನ್ ಸುವಾರ್ತೆ 11ನೇ ಅಧ್ಯಾಯ, 26ನೇ ವಚನ.**

**(26) ಬದುಕಿ ನನ್ನಲ್ಲಿ ವಿಶ್ವಾಸವಿಡುವ ಪ್ರತಿಯೊಬ್ಬನು ಎಂದಿಗೂ ಸಾಯುವು ದಿಲ್ಲ.**

ಒಂದು ಬಾರಿ ಮೋಕ್ಷವನ್ನು ಹೊಂದಿದವನು ಎಂದಿಗೂ ಶಾಶ್ವತ ಜೀವನದಲ್ಲಿ ಇರುತ್ತಾನೆ ಆದರೇ, ಆತನು ಎಂದಿಗೂ ಸಾಯುವುದು ನಡೆಯುವುದಿಲ್ಲ. ಆದ್ದರಿಂದ "ದೇವರ ಮೇಲೆ ವಿಶ್ವಾಸವಿಡುವ ಪ್ರತಿಯೊಬ್ಬನು **ಮೋಕ್ಷವನ್ನು** ಹೊಂದಿ ಪುನಃ ಸಾಯುವುದು ಇರುವುದಿಲ್ಲವೆಂದು" ಹೇಳಿದ್ದಾನೆ.

**45) ಯೋಹಾನ್ ಸುವಾರ್ತೆ 12ನೇ ಅಧ್ಯಾಯ, 25ನೇ ವಚನ.**

**(25) ತನ್ನ ಪ್ರಾಣವನ್ನು ಪ್ರೀತಿಸುವವನು ಅದನ್ನು ಕಳೆದುಕೊಳ್ಳುವನು. ಈ ಲೋಕದಲ್ಲಿ ತನ್ನ ಪ್ರಾಣವನ್ನು ದ್ವೇಷಿಸುವವನು ನಿತ್ಯ ಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುತ್ತಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

'ಇಹಲೋಕ ಜೀವನವನ್ನು ಪ್ರೀತಿಸುವವನು ತನ್ನ ಪ್ರಾಣವನ್ನು ಕಳೆದುಕೊಳ್ಳುವನು' ಎಂದು ಇದೆ ಅಲ್ಲವೇ! ಅದರ ವಿವರವೇನೆಂದರೇ! ಮನುಷ್ಯ ಅಂದರೇ ಜೀವಿಯು ಪ್ರಾಣದೊಂದಿಗೆ ಜೀವಿಸುತ್ತಿದ್ದಾನೆ. ಇಹಲೋಕದಲ್ಲಿ ಜೀವನಕ್ಕಾಗಿ ತನ್ನ ಪ್ರಾಣವನ್ನು ಯಾರು ಪ್ರೀತಿಸುತ್ತಾನೋ ಅವನು ಇಹಲೋಕ ದಲ್ಲಿ ಶಾಶ್ವತವಾಗಿ ಬದುಕಲಾರನು ಆದಕಾರಣ ಅವನ ಪ್ರಾಣವನ್ನು ಅವನು ಕಳೆದುಕೊಳ್ಳುತ್ತಿದ್ದಾನೆ. ಇನ್ನೂ ವಿವರವಾಗಿ ಅರ್ಥವಾಗಬೇಕೆಂದರೇ ಮನುಷ್ಯ ಭೂಮಿ ಮೇಲೆ ಹುಟ್ಟಿ ಕೆಲವು ವರ್ಷಗಳು  ಮಾತ್ರ ಬದುಕುತ್ತಿದ್ದಾನೆ. ಹಾಗೆ ಬದುಕುವುದಕ್ಕೆ ಆತನಿಗೆ ಅತನ ಶರೀರದಲ್ಲಿ 'ಪ್ರಾಣ' ಎಂಬ ಗಾಳಿ ಅಗತ್ಯವಾಗಿ ಇದೆ. ಮನುಷ್ಯ ಸತ್ತುಹೋದಾಗ ಆತನಲ್ಲಿನ ಪ್ರಾಣವು ಹೋಗುತ್ತಿದೆ. ಪ್ರಾಣವು ಹೋದಾಗಲೇ ಆತನು ಸತ್ತುಹೋಗಿದ್ದಾನೆ ಎಂದು ಅನ್ನುತ್ತಿದ್ದಾರೆ. ಒಂದು ಬಾರಿ ಹೋದ ಪ್ರಾಣ ಹೊರಗೆ ಗಾಳಿಯಲ್ಲಿ ಬೆರೆತು ಹೋಗುತ್ತದೆ ಆದರೇ ಪುನಃ ಅದು ಬರುವುದಿಲ್ಲ. ಮನುಷ್ಯ ಮೊದಲ ಜನ್ಮವನ್ನು ಬಿಟ್ಟು ಎರಡನೆ ಜನ್ಮಕ್ಕೆ ಹೋದರೇ ಆಗ ಅವನಿಗೆ ಹೊಸ ಪ್ರಾಣವು ಬರುತ್ತಿದೆ ಆದರೇ, ಹಳೆಯ ಪ್ರಾಣ ಬರುವುದಿಲ್ಲ. ಆದ್ದರಿಂದ ಲೋಕದಲ್ಲಿ ಜೀವಿಸಬೇಕೆಂದು ಕೊಂಡು ತನ್ನ ಪ್ರಾಣವನ್ನು ಪ್ರೀತಿಸುವವನು ಅದನ್ನು ಕಳೆದುಕೊಳ್ಳುವುದು ನಡೆಯುತ್ತಿದೆ. ಪ್ರತಿ ಮನುಷ್ಯ ಎಲ್ಲದಕ್ಕಿಂತಲೂ ಹೆಚ್ಚಾಗಿ ತನ್ನ ಪ್ರಾಣವನ್ನೇ ಪ್ರೀತಿಸುತ್ತಿದ್ದಾನೆ. ಅದರಿಂದಲೇ ನಾನು ಇನ್ನೂ ಸ್ವಲ್ಪ ಕಾಲ ಬದುಕಬೇಕೆಂದು ಕೊಳ್ಳುತ್ತಾನೆ ಆದರೇ, ಸಾಯಬೇಕೆಂದು ಅಂದುಕೊಳ್ಳುವುದಿಲ್ಲ. ಆದ್ದರಿಂದ ಪ್ರತಿ ಮನುಷ್ಯನಿಗೂ ಅವನ **ಪ್ರಾಣ**ದ ಮೇಲೆ ಅವನಿಗೆ ಹೆಚ್ಚು ಪ್ರೀತಿ ಇರುವುದು ಸಹಜ.

ಈ ಲೋಕದಲ್ಲಿ ಬದುಕಬಾರದೆಂದು ಮೋಕ್ಷವನ್ನು ಹೊಂದಬೇ ಕೆಂದುಕೊಳ್ಳುವವನು ತನ್ನ ಪ್ರಾಣವನ್ನು ದ್ವೇಷಿಸುವವನಾಗಿ ಇದ್ದಾನೆ. ಯಾರಾದರೇ ಇಹಲೋಕ ಜೀವನವನ್ನು ಇಷ್ಟಪಡುವುದಿಲ್ಲವೋ ಅವನು ತನ್ನ ಪ್ರಾಣವನ್ನು ದ್ವೇಷಿಸಿದವನಾಗಿ ಇರುತ್ತಾನೆ. ಅಂದರೇ ಅವನಿಗೆ **ಪ್ರಾಣಪ್ರೀತಿ** ಯಾವುದೂ ಇರುವುದಿಲ್ಲವೆಂದು ಅರ್ಥ. ಅಂಥವನು ಜನ್ಮಜನ್ಮಕ್ಕು ಬಿಟ್ಟು ಹೋಗುವ ಪ್ರಾಣ

ಇಲ್ಲದವನಾಗಿ, ಮೋಕ್ಷವನ್ನು ಹೊಂದಿ ಸ್ಥಿರಸ್ಥಾಯಿಯಾಗಿ ಇರುವ ಪ್ರಾಣವನ್ನು ಹೊಂದುವನು. ಅಂದರೇ ಮರಣವಿಲ್ಲದ ಜೀವನವನ್ನು ಹೊಂದುವನೆಂದು ಅರ್ಥ. ಅಂಥವನು ತನ್ನ ಪ್ರಾಣವನ್ನು ಯಾವಾಗಲೂ ಕಾಪಾಡಿಕೊಳ್ಳುತ್ತಾನೆಂದು ವಾಕ್ಯದಲ್ಲಿ ಹೇಳಿದ್ದಾನೆ. ಬದುಕಿರುವವನಿಗೆ ಇರುವ ಹಾಗೆ ಪ್ರತ್ಯೇಕವಾಗಿ ಪ್ರಾಣವಿಲ್ಲದೇ ಹೋದರೂ ನಮಗೆ ಅರ್ಥವಾಗುವುದಕ್ಕೆ **ಶಾಶ್ವತ ಪ್ರಾಣವಿರುವ ಹಾಗೆ** ಹೇಳಿದ್ದಾರೆ. ಮೋಕ್ಷವನ್ನು ಹೊಂದಿದವನು ಅಥವಾ ಪರಲೋಕವನ್ನು ಹೊಂದಿದವನು ಜನನ ಮರಣಗಳಿಲ್ಲದೇ ಶಾಶ್ವತವಾಗಿ ಒಂದೇ ಸ್ಥಿತಿಯಲ್ಲಿ ಇರುತ್ತಾನೆಂದು ತಿಳಿಯಬೇಕು.

### 46) ಯೋಹಾನ್ ಸುವಾರ್ತೆ 12ನೇ ಅಧ್ಯಾಯ, 40ನೇ ವಚನ.

**(40) ಅವರು ಕಣ್ಣುಗಳಿಂದ ನೋಡಿ, ಹೃದಯದಿಂದ ಗ್ರಹಿಸಿ ಮನಸ್ಸು ಬದಲಾಯಿಸಿಕೊಂಡು ನನ್ನಿಂದ ಸ್ವಸ್ಥತೆ ಪಡದಂತೆ ಆತನು ಅವರ ಕಣ್ಣುಗಳಿಗೆ ಅಂಧತ್ವವನ್ನುಂಟುಮಾಡಿ, ಅವರ ಹೃದಯವನ್ನು ಕಠಿಣಗೊಳಿಸಿದನು.**

ದೇವರು ಮನುಷ್ಯನಾಗಿ ಬಂದು ಪ್ರಜೆಗಳಿಗೆ ಅವಶ್ಯವಾದ ಜ್ಞಾನವನ್ನು ಹೇಳಿದರೇ ಹೇಳುವವನನ್ನು ಕಣ್ಣುಗಳಿಂದ ನೋಡಿ, ಹೇಳುವ ಮಾತುಗಳನ್ನು ಹೃದಯದಿಂದ ಗ್ರಹಿಸಿ ಮಾರು ಮನಸ್ಸು ಹೊಂದಿ, ಆತನಿಂದ ಕರ್ಮಗಳನ್ನು ಕಳೆದುಕೊಂಡು ಬಾಧೆಗಳಿಂದ ವಿಮುಕ್ತಿ ಹೊಂದದಂತೆ ಶರೀರದಲ್ಲಿ ದೇವರಾದ ಆತ್ಮ ಅವರ ಕಣ್ಣುಗಳಿಗೆ ಅಂಧತ್ವವನ್ನು, ಅವರ ಹೃದಯಕ್ಕೆ ಕಠಿನತ್ವವನ್ನು ಉಂಟುಮಾಡಿದ್ದಾನೆ. ಈ ವಾಕ್ಯದಲ್ಲಿ ಮುಖ್ಯವಾಗಿ ತಿಳಿಯಬೇಕಾಗಿರುವುದು ಏನೆಂದರೇ! ಸೃಷ್ಠಿಕರ್ತನಾದ ಪರಿಶುದ್ಧಾತ್ಮ (ಪರಮಾತ್ಮ) ಇರುವಾಗ, ಆತನು ಸೃಷ್ಠಿಸಿರುವ ಆತ್ಮ ಎಲ್ಲರ ಶರೀರದಲ್ಲಿದ್ದು, ಎಲ್ಲರನ್ನು ನಡೆಸುತ್ತಿದೆ. ಸೃಷ್ಠಿಕರ್ತನಾದ ಪರಿಶುದ್ಧಾತ್ಮಗೆ ಆತ್ಮ ಕುಮಾರನಂಥವನೇ ಆದರೂ ಮನುಷ್ಯನಿಗೆ ಜ್ಞಾನವನ್ನು ಬೋಧಿಸುವುದಕ್ಕೆ ಮನುಷ್ಯನಾಗಿ ಪರಿಶುದ್ಧಾತ್ಮವೇ ಬಂದು ಹುಟ್ಟುತ್ತಿದೆ. ಹಾಗೆ

ಹುಟ್ಟಿರುವವನು ಪರಿಶುದ್ಧಾತ್ಮನೇ ಆದರೂ ಆತನನ್ನು ದೇವರು ಎಂದು ಹೇಳದೇ ದೇವರ ಕುಮಾರನಾಗಿ ಹೇಳುವುದಾಗಿದೆ. ಇದನ್ನು ಅನುಸರಿಸಿ ಶರೀರದಲ್ಲಿ ಆತ್ಮವಾಗಿ ಇರುವವನು ಪರಿಶುದ್ಧಾತ್ಮಗೆ ಕುಮಾರನೇ ಆಗುತ್ತಾನೆ. ಹಾಗೆಯೇ ಮನುಷ್ಯನಾಗಿ ಬಂದಿರುವ ಪರಿಶುದ್ಧಾತ್ಮ ಅವತಾರವು ಕೂಡಾ ಪರಿಶುದ್ಧಾತ್ಮ ಕುಮಾರನಾಗಿಯೇ ಹೇಳಲಾಗುತ್ತಿದೆ. ಮನುಷ್ಯನಾಗಿ ಬಂದಿರುವವನು ಹೇಳಿರುವ ಮಾತುಗಳನ್ನು ನೋಡಿದರೂ, ಕೇಳಿದರೂ ಆತನ ಮಾತುಗಳನ್ನು ಗ್ರಹಿಸದೆ ಇರುವ ಹಾಗೆ ಮನಸ್ಸು ಬದಲಾಯಿಸಿಕೊಂಡು, ಕರ್ಮ ನಿರ್ಮೂಲನೆ ಮಾಡಿಕೊಳ್ಳದ ಹಾಗೆ ಶರೀರದಲ್ಲಿ ಆತ್ಮವಾಗಿ ಇರುವವನು ಅಜ್ಞಾನ ಮನುಷ್ಯನ ಕಣ್ಣುಗಳಿಗೆ ಅಂಧತ್ವವನ್ನು, ಅವನ ಹೃದಯವು ಕಠಿನತ್ವವನ್ನು ಹೊಂದಿರುವ ಹಾಗೆ ಮಾಡುತ್ತಿದ್ದಾನೆ.

ಪರಿಶುದ್ಧಾತ್ಮ ಸೃಷ್ಟಿಕರ್ತನಾದ ದೇವರಾಗಿ ಇದ್ದು ಮನುಷ್ಯನಿಗೆ ಶರೀರದಲ್ಲಿಯೇ ಆತ್ಮ ರೂಪದಲ್ಲಿ ಇರುವ ಕುಮಾರನನ್ನು ಸೃಷ್ಟಿಸಿ ಮನುಷ್ಯನಲ್ಲಿ ಇರುವುದಲ್ಲದೇ ಅಜ್ಞಾನದಲ್ಲಿರುವ ಮನುಷ್ಯನಿಗೆ ಜ್ಞಾನವನ್ನು ತಿಳಿಸುವ ನಿಮಿತ್ತ ಮನುಷ್ಯನಾಗಿರುವ ಆತ್ಮನನ್ನು ಮತ್ತೊಬ್ಬ ಕುಮಾರನನ್ನಾಗಿ ಸೃಷ್ಟಿಸಿದ್ದಾನೆ. ಮನುಷ್ಯ ಶರೀರದಲ್ಲಿರುವ ಆತ್ಮ ಯಾವಾಗಲೂ ಇರುವಾಗ, ಮನುಷ್ಯನ ರೂಪದಲ್ಲಿರುವ **ಆತ್ಮ** ಆಗಾಗ ಭೂಮಿ ಮೇಲೆ ಜ್ಞಾನವನ್ನು ಬೋಧಿಸುವುದಕ್ಕೆ ಬರುತ್ತಿರುತ್ತಾನೆ. ಪರಿಶುದ್ಧಾತ್ಮನ ಮೇಲೆ ಶ್ರದ್ಧೆ ಇಲ್ಲದವನಿಗೆ, ಪರಿಶುದ್ಧಾತ್ಮನಾದ ದೇವರ ಮೇಲೆ ಅಸೂಯೆ ಭಾವವಿರುವವನಿಗೆ ಮನುಷ್ಯನಾಗಿ ಬಂದಿರುವ ಆತ್ಮ ದೈವಜ್ಞಾನವನ್ನು ಹೇಳಿದರೂ, ಕೇಳಿಸಿಕೊಂಡಿರುವ ಜ್ಞಾನದ ಮೇಲೆ ಶ್ರದ್ಧೆ ಇಲ್ಲದ ಮನುಷ್ಯನಿಗೆ ಅರ್ಥವಾಗದಂತೆ ಅವನ ಹೃದಯವು (ಬುದ್ಧಿ) ಗ್ರಹಿಸಿಕೊಳ್ಳದ ಹಾಗೆ ಶರೀರದಲ್ಲಿರುವ ಆತ್ಮ ಮಾಡುತ್ತಿದ್ದಾನೆ. ಪರಿಶುದ್ಧಾತ್ಮನ ಮೇಲೆ **ಶ್ರದ್ಧೆ, ಭಕ್ತಿ** ಇರುವವನಿಗೆ ಶರೀರದಲ್ಲಿರುವ ಆತ್ಮ, ಶರೀರವಾಗಿರುವ ಆತ್ಮ ಹೇಳಿರುವ ಮಾತುಗಳನ್ನು ಅರ್ಥವಾಗುವ ಹಾಗೆ, ಅವನ ಹೃದಯವು ಗ್ರಹಿಸುವ ಹಾಗೆ ಮಾಡುತ್ತದೆ. ಪರಿಶುದ್ಧಾತ್ಮನಾದ ದೇವರಿಂದ ಸೃಷ್ಟಿಸಲ್ಪಟ್ಟಿರುವ ಶರೀರದಲ್ಲಿನ ಆತ್ಮವಾಗಿರುವ ಕುಮಾರನನ್ನು, ಶರೀರವಾಗಿ ಪ್ರತ್ಯೇಕವಾಗಿ ಬಂದಿರುವ ಎರಡನೆ

ಕುಮಾರನನ್ನು ತಿಳಿಯದೆ ಹೋದರೇ ದೇವರಾದ ಪರಿಶುದ್ಧಾತ್ಮನ ಒಂದು ನಿಜ ಜ್ಞಾನವು ಅರ್ಥವಾಗುವುದಿಲ್ಲ.

**47) ಯೋಹಾನ್ ಸುವಾರ್ತೆ 12ನೇ ಅಧ್ಯಾಯ, 47, 48 ವಚನಗಳು.**

**(47) ಯಾರಾದರೂ ನನ್ನ ಮಾತುಗಳನ್ನು ಕೇಳಿಯೂ ಅವುಗಳನ್ನು ಕೈಗೊಳ್ಳದ ಪಕ್ಷದಲ್ಲಿ ನಾನು ಆತನಿಗೆ ತೀರ್ಪು ನಿರ್ಣಯಿಸುವುದಿಲ್ಲ. ನಾನು ಲೋಕಕ್ಕೆ ತೀರ್ಪು ನಿರ್ಣಯಿಸುವುದಕ್ಕೆ ಬರಲಿಲ್ಲ ಆದರೇ, ಲೋಕವನ್ನು ರಕ್ಷಿಸುವುದಕ್ಕೇ ಬಂದಿದ್ದೇನೆ.**

**(48) ನನ್ನನ್ನು ನಿರಾಕರಿಸಿ, ನನ್ನ ಮಾತುಗಳನ್ನು ಅಂಗೀಕರಿಸದವನಿಗೆ ತೀರ್ಪು ನಿರ್ಣಯಿಸುವವನೊಬ್ಬನು ಇದ್ದಾನೆ. ನಾನು ಹೇಳಿರುವ ಮಾತೇ ಅವನಿಗೆ ಅಂತ್ಯ ದಿನದಂದು ತೀರ್ಪು ನಿರ್ಣಯಿಸುತ್ತದೆ.**

ಈ ವಾಕ್ಯವನ್ನು ಹೇಳಿರುವವನು ಮನುಷ್ಯ ರೂಪದಲ್ಲಿರುವ ಆತ್ಮ ಎಂದು ಹೇಳಬಹುದು. ದೇವರು ಮನುಷ್ಯನಾಗಿ ಬಂದಾಗ ಆತನು ಹೇಳಿದ ಜ್ಞಾನವನ್ನು ಕೇಳಿಯೂ, ಜ್ಞಾನವನ್ನು ಗ್ರಹಿಸದೆ ಅಶ್ರದ್ಧೆಯಿಂದ ಬಿಟ್ಟು ಹಾಕಿದವನಿಗೆ, ಅವನು ಮರಣಿಸಿದಾಗ ಪಾಪಪುಣ್ಯಗಳನ್ನು ನಿರ್ಣಯಿಸಿ ಜನ್ಮವನ್ನು ಉಂಟುಮಾಡುವ ಕೆಲಸವನ್ನು ಮನುಷ್ಯ ರೂಪದಲ್ಲಿ ಬಂದಿರುವವನು ಮಾಡುವುದಿಲ್ಲ. ಮನುಷ್ಯನ ರೂಪದಲ್ಲಿ ಬಂದು ಜ್ಞಾನವನ್ನು ತಿಳಿಸುವ ಆತ್ಮ ಸಾಯುವ ಮನುಷ್ಯರಿಗೆ ಜನ್ಮವನ್ನು ನಿರ್ಣಯಿಸುವ ತೀರ್ಪನ್ನು ನಿರ್ಣಯಿಸುವುದಕ್ಕೆ ಬರಲಿಲ್ಲ. ಮನುಷ್ಯ ರೂಪದಲ್ಲಿ ಬಂದಿರುವ ದೇವರು (ಆತ್ಮ) ಪ್ರಜೆಗಳಿಗೆ ತನ್ನ ಜ್ಞಾನವನ್ನು ತಿಳಿಸಿ ರಕ್ಷಿಸುವುದಕ್ಕೆ ಬಂದಿದ್ದಾನೆ. ಮನುಷ್ಯನಾಗಿ ಬಂದಿರುವ ಆತ್ಮ ಹೇಳುವ ಮಾತುಗಳನ್ನು ಕೇಳಿ ಅಂಗೀಕರಿಸದವ ನನ್ನು, ಮನುಷ್ಯನಾಗಿ ಬಂದಿರುವವನನ್ನು ನೋಡಿ ಆತನನ್ನು ದೊಡ್ಡವನೆಂದು

ಅಂಗೀಕರಿಸದವನನ್ನು, ಅವನ ಮರಣದಲ್ಲಿ ತೀರ್ಪು ನಿರ್ಣಯಿಸಿ ಜನ್ಮವನ್ನು ನಿರ್ಣಯಿಸಿ ಕಳುಹಿಸುವವನು ಮತ್ತೊಬ್ಬನಿದ್ದಾನೆ. ಹಾಗೆ ತೀರ್ಪು ನಿರ್ಣಯಿಸುವವನು ಶರೀರದಲ್ಲಿ ಯಾವಾಗಲೂ ಇರುವ ಆತ್ಮವೆಂದು ತಿಳಿಯಬೇಕು. ಮನುಷ್ಯನ ರೂಪದಲ್ಲಿ ಬಂದಿರುವ ಆತ್ಮ ಹೇಳಿರುವ ಜ್ಞಾನವನ್ನು ಅನುಸರಿಸಿ ಮನುಷ್ಯನ ಶರೀರದಲ್ಲಿರುವ ಆತ್ಮ ಮರಣ ದಿನದಂದು ಜನ್ಮಗಳ ನಿರ್ಣಯವನ್ನು ನಿರ್ಣಯಿಸಿ ಕಳುಹಿಸುತ್ತದೆ. **ಶರೀರದಲ್ಲಿನ ಆತ್ಮ ಕಾರ್ಯವನ್ನು, ಶರೀರ ರೂಪದಲ್ಲಿ ಬಂದಿರುವ ಆತ್ಮ (ಭಗವಂತನ) ಕಾರ್ಯವನ್ನು ಬಂದಿರುವ ಆತ್ಮ (ಭಗವಂತನ) ಕಾರ್ಯವನ್ನು ತಿಳಿಯದೇ ಹೋದರೇ ಪರಿಶುದ್ಧಾತ್ಮವಾದ ದೇವರು ತಿಳಿಯುವುದಿಲ್ಲ.**

**48) ಯೋಹಾನ್ ಸುವಾರ್ತೆ 12ನೇ ಅಧ್ಯಾಯ, 49, 50ನೇ ವಚನಗಳು.**

**(49) ಏಕೆಂದರೇ! ನನ್ನಷ್ಟಕ್ಕೆ ನಾನೇ ಮಾತನಾಡಲಿಲ್ಲ. ನಾನು ಏನನ್ನ ಬೇಕೋ, ಏನು ಮಾತನಾಡಬೇಕೋ ಅದನ್ನು ಕುರಿತು ನನ್ನನ್ನು ಕಳುಹಿಸಿರುವ ತಂದೆಯೇ ನನಗೆ ಆಜ್ಞೆ ಕೊಟ್ಟಿದ್ದಾನೆ.**

**(50) ಮತ್ತು ಆತನ ಆಜ್ಞೆ ನಿತ್ಯ ಜೀವನವೆಂದು ನನಗೆ ತಿಳಿದಿದೆ. ಆದಕಾರಣ ನಾನು ಹೇಳುವ ಸಂಗತಿಗಳನ್ನು ತಂದೆ ನನ್ನೊಂದಿಗೆ ಹೇಳಿರುವ ಪ್ರಕಾರ ಹೇಳುತ್ತಿದ್ದೇನೆಂದನು.**

ಇಲ್ಲಿ ಹೇಳಿರುವ ಈ ವಾಕ್ಯವನ್ನು ಶರೀರ ರೂಪದಲ್ಲಿ ಮನುಷ್ಯನಾಗಿ ಬಂದಿರುವ **ಆತ್ಮ (ಭಗವಂತನು)** ಹೇಳಿರುವ ಮಾತೆಂದು ತಿಳಿಯಬೇಕು. ಮನುಷ್ಯನ ರೂಪದಲ್ಲಿ ಬಂದಿರುವ ದೇವರು ಆದ ಏಸು ಈ ಸಮಾಚಾರವನ್ನು ಹೇಳಿದ್ದಾನೆ. ದೇವರು ಮನುಷ್ಯನಾಗಿ ಯಾವಾಗ ಬಂದರೂ ಆತನು ಹೇಳುವ ಜ್ಞಾನವೆಲ್ಲವೂ ಪರಿಶುದ್ಧಾತ್ಮದ್ದೇ ಆಗಿರುತ್ತದೆ. ಅಂದರೇ ಪರಿಶುದ್ಧಾತ್ಮ ತನ್ನಿಂದ ಹೇಳಿಸುವ ಜ್ಞಾನವೆಂದು ಮನುಷ್ಯನ ರೂಪದಲ್ಲಿ ಬಂದಿರುವವನು ಹೇಳುತ್ತಿದ್ದಾನೆ. ಮನುಷ್ಯ ರೂಪದಲ್ಲಿ ಬಂದಿರುವ ಆತ್ಮ ಅಂದರೇ ಭಗವಂತನು ಹೇಳುವ ಜ್ಞಾನವು **ನಿತ್ಯ ಜೀವನವಾದ ಮೋಕ್ಷವನ್ನು** ಉಂಟುಮಾಡುವುದಾಗಿ ಇರುತ್ತದೇ.

ಇದರಲ್ಲಿ ರಹಸ್ಯವೇನೆಂದರೇ! ಮನುಷ್ಯನ ರೂಪವಾಗಿ ಬಂದವನು ದೇವರೆಂದು ತಿಳಿಯದಿದ್ದರೂ ಮಾತನಾಡುವವನು ಪರಿಶುದ್ಧಾತ್ಮನೇಯೆಂದು ತಿಳಿಯುವಂತೆ ಮನುಷ್ಯನಾಗಿ ಬಂದವನು **"ನಾನು ಹೇಳುವ ಸಂಗತಿಗಳೆಲ್ಲವೂ ನನ್ನ ತಂದೆ ನನ್ನೊಂದಿಗೆ ಹೇಳಿರುವ ಪ್ರಕಾರ ಹೇಳುತ್ತಿದ್ದೇನೆಂದು"** ಹೇಳಲಾಗಿದೆ. ಈ ಮಾತಿನಿಂದ ಮಾತನಾಡುವವನು ಪರಿಶುದ್ಧಾತ್ಮನೇಯೆಂದು ತಿಳಿಯಬಹುದು. ಆದರೂ ಆಧ್ಯಾತ್ಮಿಕ ಸಿದ್ಧಾಂತದ ಪ್ರಕಾರ ಪರಿಶುದ್ಧಾತ್ಮ ತಂದೆಯೆಂದು, ಮನುಷ್ಯನಾಗಿ ಬಂದಿರುವ ಆತ್ಮ ಕುಮಾರನೆಂದು ಹೇಳದೆ ತಪ್ಪುವುದಿಲ್ಲ.

**49) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 7ನೇ ವಚನ.**

## (7) ನೀವು ನನ್ನನ್ನು ಅರಿತಿದ್ದರೇ ನನ್ನ ತಂದೆಯನ್ನು ಅರಿತಿರುತ್ತೀರಿ. ಈಗಿನಿಂದ ನೀವು ಆತನನ್ನು ಅರಿಯುತ್ತೀರ, ಆತನನ್ನು ನೋಡಿದ್ದೀರೆಂದು ಹೇಳಿದನು.

ಈ ವಾಕ್ಯವು ಇದಕ್ಕು ಮೊದಲು ಹೇಳಿರುವ (ಯೋ, 12-49, 50) ವಾಕ್ಯದ ಪ್ರಕಾರವೇ ಇದೆ. ಅಲ್ಲಿ ನಾನು ಹೇಳಿದಂತೆ ತಂದೆ, ಕುಮಾರನೆಂದು ಬೇರೆಬೇರೆಯಾಗಿ ಹೇಳಿದ್ದರೂ, ಆಧ್ಯಾತ್ಮಿಕ ರೀತಿ ಹಾಗೆ ಮಾತನಾಡಬೇಕಾಗಿರುವುದೇ ವಿನಃ ಇಬ್ಬರೂ ಒಂದೇಯೆಂದು ಹೇಳಿದ್ದೇನೆ. ನಾನು ಹೇಳಿದ ಹಾಗೆಯೇ **"ನನ್ನನ್ನು ತಿಳಿದಿದ್ದರೇ ನನ್ನ ತಂದೆಯನ್ನು ತಿಳಿದಿರುತ್ತೀರಿ"** ಎಂದಿದ್ದಾನೆ. ದೇವರು ಮನುಷ್ಯನಾಗಿ ಬಂದರೇ ಬಂದವನನ್ನು ದೇವರ ಕುಮಾರನು ಎಂದರೂ, ವಾಸ್ತವವಾಗಿ ತಂದೆಯೇ ಕುಮಾರನಾಗಿದ್ದಾನೆಂದು, **"ಕುಮಾರನನ್ನು ತಿಳಿದರೇ ತಂದೆಯನ್ನು ತಿಳಿದಂತೆಯೇ"** ಎಂದು ವಾಕ್ಯದಲ್ಲಿ ಹೇಳಿದ್ದಾರೆ.

**50) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 8, 9 ವಚನಗಳು.**

## (8) ಪ್ರಭುವೇ, ತಂದೆಯನ್ನು ನಮಗೆ ತೋರಿಸು, ನಮಗಷ್ಟೇ ಸಾಕು ಎಂದು ಆತನೊಂದಿಗೆ ಹೇಳಿದಾಗ

**(9) ನಾನಿಷ್ಟು ಕಾಲ ನಿಮ್ಮ ಬಳಿ ಇದ್ದರೂ ನೀವು ನನ್ನನ್ನು ತಿಳಿಯಲಿಲ್ಲವೇ? ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ ಆದಕಾರಣ ತಂದೆಯನ್ನು ನಮಗೆ ತೋರಿಸೆಂದು ಹೇಗೆ ಹೇಳುತ್ತಿದ್ದೀರ?**

ಈ ವಾಕ್ಯದಲ್ಲಿ ಕಾಣಿಸುವ ಆಕಾರವಿರುವವನು **ಪರಿಶುದ್ಧಾತ್ಮಯೆಂದು** ತಿಳಿಯುವಂತೆ ಇದೆ. ಆದ್ದರಿಂದ **"ನನ್ನನ್ನು ನೋಡುವವನು ತಂದೆಯನ್ನು ನೋಡಿದ್ದಾನೆ"** ಎಂದು ಹೇಳಿದನು.

**51) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 10ನೇ ವಚನ.**

**(10) ತಂದೆಯಲ್ಲಿ ನಾನೂ, ನನ್ನಲ್ಲಿ ತಂದೆಯೂ ಇದ್ದೇವೆಂದು ನೀವು ನಂಬುತ್ತಿಲ್ಲವೇ? ನಾನು ನಿಮ್ಮೊಂದಿಗೆ ಹೇಳುತ್ತಿರುವ ಮಾತುಗಳು ನನ್ನಷ್ಟಕ್ಕೆ ನಾನೇ ಹೇಳುತ್ತಿಲ್ಲ. ತಂದೆ ನನ್ನಲ್ಲಿ ನಿವಾಸಿಸುತ್ತಾ ತನ್ನ ಕಾರ್ಯಗಳು ಮಾಡುತ್ತಿದ್ದಾನೆ.**

ಒಬ್ಬ ವ್ಯಕ್ತಿ ಮಾರುವೇಷದಲ್ಲಿ ಇರುವಾಗ ಆತನು ಮತ್ತು ಆತನ ಜೊತೆ ವೇಷವು ಬೆರೆತಿದೆ ಅಲ್ಲವೇ! ಆ ವಿಧವಾಗಿ ನೋಡಿದರೇ ಒಬ್ಬ ಧನಿಕನು ಭಿಕ್ಷುಕನ ವೇಷದಲ್ಲಿ ಇರುವಾಗ ಧನಿಕನು+ಭಿಕ್ಷಕನು ಬೆರೆತಿದ್ದಾರೆ. ಒಳಗೆ ಧನಿಕನಿದ್ದರೂ ಭಿಕ್ಷಕನ ವೇಷ ಮೇಲ್ನೋಟಕ್ಕೆ ಇರುವುದರಿಂದ ಮೇಲ್ನೋಟಕ್ಕೆ ಧನಿಕನು ಕಾಣಿಸದೆ ಭಿಕ್ಷುಕನೇ ಕಾಣಿಸುತ್ತಿರುತ್ತಾನೆ. ಭಿಕ್ಷುಕನು ಬಜಾರಿಗೆ ಹೋಗಿ ಭಿಕ್ಷೆ ಕೇಳಿದರೂ ಆ ಮಾತುಗಳಿಂದ ಕೇಳುವವನು ಧನಿಕನೇ. ಕಾಣಿಸದ ಧನಿಕನು ಕಾಣಿಸುವ ಭಿಕ್ಷುಕನಲ್ಲಿದ್ದು ಧನಿಕನು ತನ್ನ ಕೆಲಸವನ್ನು ತಾನು ಮಾಡುತ್ತಿದ್ದಾನೆ. ಭಿಕ್ಷುಕನ ಒಳಗೆ ಧನಿಕನು, ಧನಿಕನ ಒಳಗೆ ಭಿಕ್ಷುಕನ ಮಾತುಗಳು ಇರುವುದರಿಂದ ಧನಿಕನಲ್ಲಿ ಭಿಕ್ಷುಕನು, ಭಿಕ್ಷುಕನಲ್ಲಿ ಧನಿಕನು ಬೆರೆತಿದ್ದಾರೆಂದು ಹೇಳಬಹುದು. ಮೇಲ್ನೋಟಕ್ಕೆ ಕಾಣಿಸುವವನಿಗಿಂತ ಒಳಗೆ ಇರುವವನೇ

ಮುಖ್ಯವಾದ್ದರಿಂದ ಮೇಲ್ನೋಟಕ್ಕೆ ಕಾಣಿಸುವವನ ಕೆಲಸಗಳೆಲ್ಲವೂ ಒಳಗಿರುವವನವೇಯೆಂದು ಹೇಳಬಹುದು. ಮೇಲ್ನೋಟಕ್ಕೆ ಕಾಣಿಸುವವನದ್ದು ವೇಷವೇ ಹೊರತು ಅವನು ಒಳಗಿನವನೇ. ವಾಸ್ತವವಾಗಿಯೇ ಭಿಕ್ಷುಕನನ್ನು ಒಂದು ವಿಧವಾಗಿ ಧನಿಕನೇಯೆಂದು ಹೇಳಬಹುದು. ಹಾಗೆಯೇ 'ಮಾನವ ಆಕಾರ' ಎಂಬ ವೇಷವನ್ನು ಹಾಕಿಕೊಂಡ ಪರಮಾತ್ಮನೇ ನಿಜವಾದವನೆಂದು, ಮೇಲಿನ ಆಕಾರವು ತಾತ್ಕಾಲಿಕವೇಯೆಂದು, ಒಳಗಿನ ಆತ್ಮವೇ ಶಾಶ್ವತವೆಂದು ತಿಳಿಯಬೇಕು. ಅರ್ಥವಾಗುವಂತೆ ಹೇಳಿದರೇ **"ಏಸು ಎಂಬ ಮನುಷ್ಯನಲ್ಲಿ ಇರುವವನು ಪರಿಶುದ್ಧಾತ್ಮನೇಯೆಂದು"** ಹೇಳಬಹುದು. ಆದ್ದರಿಂದ ಆತನು ಸ್ವತಃವಾಗಿ "ನನ್ನಲ್ಲಿ ತಂದೆಯು, ತಂದೆಯಲ್ಲಿ ನಾನು ಬೆರೆತಿದ್ದೇವೆಂದು" ಹೇಳಿದ್ದಾನೆ.

## 52) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 6ನೇ ವಚನ.

## (6) ನಾನೇ ಮಾರ್ಗವು, ಸತ್ಯವು, ಜೀವವು. ನನ್ನ ಮುಖಾಂತರವೇ ಹೊರತುಪಡಿಸಿ ಯಾರೂ ತಂದೆಯ ಬಳಿಗೆ ಬರಲಾರನು.

ಉದಾಹರಣೆಯಾಗಿ ಹೇಳಿಕೊಂಡರೇ ಧನಿಕನನ್ನು ತಿಳಿಯುವುದಕ್ಕೆ ಮಾರ್ಗವು ಭಿಕ್ಷುಕನೇ. ಭಿಕ್ಷುಕನನ್ನು ಹಿಡಿದುಕೊಂಡರೆ ಧನಿಕನು ತಿಳಿಯುತ್ತಾನೆ. ಧನಿಕನನ್ನು ತಿಳಿದುಕೊಂಡರೇ ಧನಿಕನ ಬಳಿಯಿರುವ ಧನವು ದೊರೆಯುತ್ತದೆ. ಹಾಗೆಯೇ ದೇವರನ್ನು ತಿಳಿಯುವುದಕ್ಕೆ ಆಧಾರ ಇಲ್ಲವೇ ಮಾರ್ಗವು ಮನುಷ್ಯನಾಗಿ ಬಂದಿರುವವನು. ಮನುಷ್ಯನಾಗಿ ಬಂದಿರುವವನನ್ನು ತಿಳಿದುಕೊಂಡರೇ ಅವನೊಳಗಿರುವ ದೇವರು ತಿಳಿಯುತ್ತಾನೆ. ದೇವರನ್ನು ತಿಳಿದುಕೊಂಡರೇ ಆತನಲ್ಲಿರುವ ನಿತ್ಯ ಜೀವವು ಲಭಿಸುತ್ತದೆ. ಆದ್ದರಿಂದ ಏಸು ಒಂದು ಸಂದರ್ಭದಲ್ಲಿ **"ನಾನೇ ಮಾರ್ಗವು, ನಾನೇ ಸತ್ಯವು, ನಾನೇ ಜೀವವು"** ಎಂದಿದ್ದಾನೆ. "ನಾನೇ ಮಾರ್ಗವು" ಅಂದರೇ **ನನ್ನ ಮುಖಾಂತರವೇ ದೇವರನ್ನು ತಿಳಿಯಬೇಕೆಂದು ಏಸು ಹೇಳಿದ್ದಾನೆ**. ಹಾಗೆಯೇ 'ನಾನೇ ಸತ್ಯವು' ಅಂದರೇ **ನಾನೇ ನಿಜವಾದ ದೇವರು** ಎಂದು ಕೂಡಾ ಹೇಳಿದ್ದಾನೆ. ಅಷ್ಟೇ ಅಲ್ಲದೇ

**'ನಾನೇ ನಿತ್ಯಜೀವವೆಂದು'** ಕೂಡಾ ಹೇಳಿದ್ದಾನೆ. ಹಾಗೆ ಹೇಳುವುದಕ್ಕೆ ಕಾರಣವೇನೆಂದರೇ! ನಿಜ ದೇವರು ಏಸು ಹೆಸರಿನಿಂದ ಶರೀರ ಧರಿಸಿದ್ದು ನನ್ನನ್ನು ತಿಳಿದುಕೊಂಡರೇ ತಪ್ಪದೇ ಪರಲೋಕ ಲಭ್ಯವಾಗುತ್ತದೆಂದು, ಲೋಕ ವಲ್ಲದ ಪರಲೋಕದಲ್ಲಿ ಶಾಶ್ವತ ಜೀವನವಿರುತ್ತದೆಂದು, ಮರಣವು ಇರುವು ದಿಲ್ಲವೆಂದು ಹೇಳಿದ್ದಾನೆ.

**53) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 16ನೇ ವಚನ.**

**(16) ನಾನು ತಂದೆಯನ್ನು ಬೇಡಿಕೊಳ್ಳುತ್ತೇನೆ. ನಿಮ್ಮ ಹತ್ತಿರ ಯಾವಾಗಲೂ ಇರುವುದಕ್ಕಾಗಿ ಆತನು ಬೇರೊಬ್ಬ ಆದರಣಕರ್ತ ನನ್ನು ಅಂದರೇ ಸತ್ಯಸ್ವರೂಪಿಯಾದ ಆತ್ಮನನ್ನು ನಿಮಗೆ ಅನುಗ್ರಹಿ ಸುತ್ತಾನೆ.**

ಪರಿಶುದ್ಧಾತ್ಮ ಶಾಶ್ವತವಾಗಿ ಮನುಷ್ಯ ರೂಪದಲ್ಲಿ ಪ್ರಜೆಗಳ ಮಧ್ಯದಲ್ಲಿ ಇರುವುದಿಲ್ಲ. ಆಗಾಗ ಅಗತ್ಯ ಬಂದಾಗ ತನ್ನ ವೇಷವನ್ನು ಬದಲಾಯಿಸಿಕೊಂಡು ಮತ್ತೆ ಪ್ರಜೆಗಳ ಮಧ್ಯದೊಳಗೆ ಬರುತ್ತಿರುತ್ತಾನೆ. ಏಸುವಾಗಿ ಬಂದಾಗ ಪ್ರಜೆಗಳ ಮಧ್ಯದಲ್ಲಿ ಕೇವಲ ಮೂವತ್ತುಮೂರು ವರ್ಷಗಳು ಜೀವಿಸಿದ್ದರೇ, ಅದರಲ್ಲಿ ಪ್ರಜೆಗಳಿಗೆ ಜ್ಞಾನವನ್ನು ಬೋಧಿಸಿರುವುದು ಕೇವಲ ಮೂರು ವರ್ಷಗಳೇ. ಮೂರು ವರ್ಷಗಳು ಕೂಡಾ ಪೂರ್ತಿಯಾಗುವ ಮೊದಲೇ ಎರಡು ವರ್ಷಗಳ ಮೂರು ತಿಂಗಳಿಗೇ ಆತನು ಪ್ರಜೆಗಳ ಮಧ್ಯೆ ಇಲ್ಲದೇ ಹೋಗುವುದು ನಡೆದಿದೆ. ಹಾಗಲ್ಲದೇ ಎರಡನೆ ಬಾರಿ ಪ್ರಜೆಗಳ ಮಧ್ಯದೊಳಗೆ ಬಂದಾಗ ಏಸು ಜೀವಿಸಿರುವ ಕಾಲಕ್ಕಿಂತಲೂ ಹೆಚ್ಚು ಕಾಲವಿದ್ದು ಜ್ಞಾನವನ್ನು ಬೋಧಿಸುವಂತೆ ತಂದೆಯನ್ನು ಬೇಡಿಕೊಳ್ಳುವೆನು ಎಂದು ಹೇಳಿದ್ದಾನೆ. ಬರುವವನು ಆತನೇ, ಬರುವವನನ್ನು ಬೇಡಿಕೊಳ್ಳುತ್ತೇನೆಂದು ಹೇಳುವವನು ಆತನೇ. ಬೇರೊಂದು ಸತ್ಯಸ್ವರೂಪಿಯಾದ ಆತ್ಮನನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆಂದು ಹೇಳುವವನು ಆತನೇ. **ಇರುವುದು ಒಬ್ಬನೇ ಒಬ್ಬನು.** ಹೇಳುವವನು ಒಬ್ಬನೇ, ಕೇಳುವವನು ಒಬ್ಬನೇ, ಬರುವವನು

ಒಬ್ಬನೇ. ಒಬ್ಬನೇ ಎಂಬ ವಿಷಯವು ತಿಳಿಯದೆ ಹೋದರೇ ಹೇಳುವವನು ಬೇರೆ, ಕೇಳುವವನು ಬೇರೆ, ಬರುವವನು ಬೇರೆ ಎನ್ನುವಂತೆ ಬೇರೆಬೇರೆಯಾಗಿ ಕಾಣಿಸುತ್ತದೆ. **ಎಲ್ಲಾ ಪಾತ್ರಗಳು ಒಬ್ಬನವೇಯೆಂದು** ತಿಳಿಯದೆ ಹೋದರೇ ಎದುರಲ್ಲಿ ಮನುಷ್ಯನ ರೂಪದಲ್ಲಿರುವ ದೇವರು ತಿಳಿಯುವುದಿಲ್ಲ, ಬೇಡಿಕೊಳ್ಳುವ ದೇವರು ತಿಳಿಯುವುದಿಲ್ಲ, ಬರುವ ದೇವರೂ ತಿಳಿಯುವುದಿಲ್ಲ. ತಂದೆಯನ್ನು ಬೇಡಿಕೊಳ್ಳುವ ಕುಮಾರನಾದ ಏಸು ಯಾರೋ ಅವನೇ, **ಅವನೇ ಮುಂಬರುವ ಆದರಣಕರ್ತನೆಂದು, ಬರುವ ಆದರಣಕರ್ತನೇ ಪರಿಶುದ್ಧಾತ್ಮನಾದ ಸತ್ಯಸ್ವರೂಪಿ ಯಾದವನೆಂದು ತಿಳಿಯಬೇಕು.**

**54) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 17ನೇ ವಚನ.**

**(17) ಲೋಕವು ಆತನನ್ನು ನೋಡುವುದಿಲ್ಲ. ಆತನನ್ನು ತಿಳಿಯುವುದಿಲ್ಲ ಆದಕಾರಣ ಆತನನ್ನು ಹೊಂದುವುದಿಲ್ಲ. ನೀವು ಆತನನ್ನು ತಿಳಿಯುತ್ತೀರಿ. ಆತನು ನಿಮ್ಮೊಂದಿಗೆ ಕೂಡಾ ನಿವಾಸಿಸು ತ್ತಾನೆ, ನಿಮ್ಮಲ್ಲಿ ಇರುತ್ತಾನೆ.**

ಲೋಕವು ಅಂದರೇ ಭೂಮಿ ಮೇಲೆ ಕರ್ಮಗಳನ್ನು ಅನುಭವಿಸುವವರು ಎಂದು ಹೇಳಬಹುದು. ಕರ್ಮಗಳನ್ನು ಅನುಭವಿಸುವ ಮನುಷ್ಯರು ದೇವರು ಮನುಷ್ಯನಾಗಿ ಬಂದರೇ ಆತನನ್ನು ನೋಡುವುದಿಲ್ಲ. ಆತನನ್ನು ತಿಳಿಯಲಾರರು. ಆತನನ್ನು ಯಾವ ಮಾತ್ರವೂ ಗುರುತಿಸದವರು ಆತನನ್ನು ಹೊಂದಲಾರರು. ದೈವಜ್ಞಾನವನ್ನು ಮನುಷ್ಯನಾಗಿ ಬಂದಿರುವ ದೇವರನ್ನು ಯಾವ ಮಾತ್ರ ಗುರುತಿಸಲಾರರು. ತಿಳಿದುಕೊಳ್ಳಬೇಕೆನ್ನುವ ಪ್ರಯತ್ನವನ್ನು ಕೂಡಾ ಮಾಡುವುದಿಲ್ಲ. ನನ್ನ ನಂತರ ಆದರಣಕರ್ತನಾಗಿ ಬರುವ ಮನುಷ್ಯನ ರೂಪದಲ್ಲಿರುವ ದೇವರನ್ನು ನೀವು ಮಾತ್ರ ತಿಳಿಯಬಲ್ಲಿರಿ. ಏಕೆಂದರೇ! ಈಗ ನನ್ನ ಮೂಲಕ ತಿಳಿದ ಜ್ಞಾನವು ಸ್ವಲ್ಪ ನಿಮ್ಮ ಹತ್ತಿರ ಇರುವುದರಿಂದ ನೀವು ಆತನನ್ನು ತಿಳಿಯಬಲ್ಲಿರಿ. ಆತನನ್ನು ತಿಳಿದುಕೊಂಡರೂ ನಿಮ್ಮೊಂದಿಗೆ ಆತನು ನಿವಾಸಿಸುತ್ತಾನೆ. **ಆದರಣ**

**ಕರ್ತನನ್ನು ತಿಳಿದುಕೊಂಡ ನೀವು ಆತನೊಂದಿಗೆ ನಿವಾಸ ಇರುವುದಲ್ಲದೇ ಆತನು ನಿಮ್ಮೊಳಗೆ ಆತ್ಮವಾಗಿ ಇದ್ದಾನೆಂದು ತಿಳಿಯಬಲ್ಲದು.**

## 55) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 20ನೇ ವಚನ.

## (20) ನಾನು ನನ್ನ ತಂದೆಯಲ್ಲಿಯು, ನೀವು ನನ್ನಲ್ಲಿಯು, ನಾನು ನಿಮ್ಮಲ್ಲಿಯು ಇದ್ದೇವೆಂದು ಆ ದಿನದಂದು ನೀವು ಅರಿತುಕೊಳ್ಳುವಿರಿ.

ಈ ವಾಕ್ಯವು ತಿಳಿಯುವುದಕ್ಕು ಮೊದಲು ದೇವರ ವಾಸ್ತವ ರೂಪವನ್ನು ತಿಳಿಯಬೇಕಾಗಿರುತ್ತದೆ. ದೇವರು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟು ಪ್ರಪಂಚವೆಲ್ಲಾ ವ್ಯಾಪಿಸಿದ್ದಾನೆ. ಇರುವುದು ಒಂದೇ ದೇವರಾದರೂ ಜೀವಾತ್ಮ, ಆತ್ಮ, ಪರಮಾತ್ಮ ಎಂಬ ಮೂರು ಆತ್ಮಗಳ ವಿಭಜನೆಯಾಗಿ ಇದ್ದಾನೆ. **ಜೀವಾತ್ಮ ಸರ್ವ ಜೀವರಾಶಿಗಳ ಶರೀರಗಳಲ್ಲಿ ಒಂದುಕಡೆ ಇದ್ದರೇ, ಆತ್ಮ ಎಲ್ಲ ಶರೀರಗಳಲ್ಲಿ ಶರೀರವೆಲ್ಲಾ ವ್ಯಾಪಿಸಿದೆ. ಪರಮಾತ್ಮ ಶರೀರಗಳ ಒಳಗೆ, ಶರೀರಗಳ ಹೊರಗೆ ಅಣುವಣುವು ಎಲ್ಲೆಡೆ ವ್ಯಾಪಿಸಿದೆ.** ಈ ವಿಷಯವನ್ನು ಯಾರಾದರೇ ತಿಳಿಯಬಲ್ಲನೋ ಅವನು ಸಂಪೂರ್ಣ ಜ್ಞಾನಿ ಆದಂತೇಯೆಂದು ಹೇಳಬಹುದು. ಪರಮಾತ್ಮ ಎನ್ನಲ್ಪಡುವವನು ಸೃಷ್ಠಿಕರ್ತನಾದ ದೇವರು ತನ್ನ ಜ್ಞಾನವನ್ನು ಪ್ರಜೆಗಳಿಗೆ ತಿಳಿಸುವ ನಿಮಿತ್ತ ಮನುಷ್ಯನ ರೂಪದಲ್ಲಿ ಬಂದು ತನ್ನನ್ನು ಕುಮಾರನನ್ನಾಗಿ, ಪರಮಾತ್ಮನನ್ನು ತಂದೆಯನ್ನಾಗಿ ಹೇಳುತ್ತಿದ್ದಾನೆ. ಇದೆಲ್ಲವೂ ವಿಭಜನೆ ಲೆಕ್ಕಕ್ಕಾಗಿ ಹೇಳುವುದೇ ವಿನಹಾ ಕುಮಾರನಾಗಿ ಇರುವವನು, ತಂದೆಯಾಗಿ ಇರುವವನು ಇಬ್ಬರೂ ಒಬ್ಬನೇಯೆಂದು ಹೇಳಬಹುದು. ದೇವರು ಜ್ಞಾನವನ್ನು ಬೋಧಿಸುವ ನಿಮಿತ್ತ **'ಕುಮಾರನು'** ಎಂಬ ವೇಷದಲ್ಲಿ ಬಂದರೇ, ಬಂದವನು ಒಂದು ಜೀವಿತ ಅವಧಿಯಲ್ಲಿ ಭೂಮಿ ಮೇಲೆ ಇದ್ದು ಜ್ಞಾನವನ್ನು ಬೋಧಿಸಿ ಹೋಗುತ್ತಾನೆ. ಇದು ಜ್ಞಾನವನ್ನು ಬೋಧಿಸುವ ಪದ್ಧತಿಯಾದರೇ, ಮತ್ತೊಂದು ಪದ್ಧತಿ ಪ್ರಕಾರ ಜೀವಿಗಳನ್ನು ಹುಟ್ಟಿಸುವುದಕ್ಕು, ಮರಣಿಸುವಂತೆ ಮಾಡುವುದಕ್ಕು, ಜೀವಿಸುವಂತೆ ಮಾಡುವುದಕ್ಕು ಒಂದು ಆತ್ಮವನ್ನು ತನ್ನಿಂದ ಕಳುಹಿಸಿದ್ದಾನೆ. ಹಾಗೆ ಜೀವರಾಶಿಗಳ ಶರೀರಗಳನ್ನು ನಡೆಸುವ ಆತ್ಮವನ್ನು

ಕೂಡಾ ಒಂದು ವಿಧವಾಗಿ ದೇವರಿಗೆ (ಪರಿಶುದ್ಧಾತ್ಮಗೆ) ಕುಮಾರನು ಎಂದೇ ಹೇಳುತ್ತಿದ್ದಾರೆ. ಆತ್ಮನಾದವನು ಪರಮಾತ್ಮನಲ್ಲಿರುವಾಗ, ಜೀವಾತ್ಮನಾದವನು ಆತ್ಮದ ಒಂದು ಆವರಣದಲ್ಲಿ ಇದ್ದಾನೆ. ಇದೇ ವಿಷಯವನ್ನೇ ಹೇಳುತ್ತಾ ಆತ್ಮವಾಗಿರುವ ನಾನು **'ನನ್ನ ತಂದೆಯಾದ ಪರಮಾತ್ಮನಲ್ಲಿ ಇದ್ದೇನೆಂದು'** ಹೇಳುವುದಕ್ಕೆ ಬದಲಾಗಿ **'ನಾನು ನನ್ನ ತಂದೆಯಲ್ಲಿ ಇದ್ದೇನೆಂದು'** ಹೇಳಿದ್ದಾನೆ. ಜೀವಿಯು ಆತ್ಮ ಆವಹಿಸಿರುವ ಶರೀರದಲ್ಲಿ ಇರುವುದರಿಂದ ಜೀವಾತ್ಮಗಳಾದ ನೀವು 'ಆತ್ಮನಾದ ನನ್ನಲ್ಲಿ ಇದ್ದೀರೆಂದು' ವಾಕ್ಯದಲ್ಲಿ ಹೇಳಿದ್ದಾರೆ. ಹಾಗೆಯೇ ಆತ್ಮವಾಗಿ ಶರೀರವೆಲ್ಲಾ ವ್ಯಾಪಿಸಿ ಶರೀರದಲ್ಲಿ ಒಂದುಕಡೆ ಇರುವ ನಿಮ್ಮಲ್ಲಿ ಕೂಡಾ ವ್ಯಾಪಿಸಿದ್ದೇನೆಂದು ಹೇಳುತ್ತಾ **"ನಾನು ನಿಮ್ಮಲ್ಲಿಯು ಇದ್ದೇನೆಂದು ನೀವು ಆತ್ಮಗಳ ಜ್ಞಾನವನ್ನು ತಿಳಿದುಕೊಂಡ ದಿನ ತಿಳಿಯಬಲ್ಲಿರಿ ಎಂದು"** ಹೇಳಿದ್ದಾನೆ. ಮೂರು ಆತ್ಮ ವಿಷಯವು ತಿಳಿಯದೆ ಹೋದರೇ ಯಾರು ಯಾರಲ್ಲಿ ಇದ್ದಾರೋ ತಿಳಿಯುವುದಿಲ್ಲ. ಆದ್ದರಿಂದ **ಮನುಷ್ಯ ಜೀವನದಲ್ಲಿ ಮುಖ್ಯವಾಗಿ ದೇವರು ಮೂರು ಆತ್ಮಗಳಾಗಿ ಇರುವ ತ್ರೈತ ಸಿದ್ಧಾಂತವನ್ನು ತಿಳಿಯಬೇಕು.**

**56) ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 25, 26ನೇ ವಚನಗಳು.**

**(25) ನಾನು ನಿಮ್ಮ ಹತ್ತಿರ ಇದ್ದಾಗಲೇ ಈ ಮಾತುಗಳನ್ನು ನಿಮಗೆ ಹೇಳಿದ್ದೇನೆ.**

**(26) ಆದರಣಕರ್ತ ಎಂದರೇ ತಂದೆ ನನ್ನ ನಾಮದಲ್ಲಿ ಕಳುಹಿಸಿ ಕೊಡುವ ಪರಿಶುದ್ಧಾತ್ಮ ಸಮಸ್ತವನ್ನು ನಿಮಗೆ ಬೋಧಿಸಿ ನಾನು ನಿಮ್ಮೊಂದಿಗೆ ಹೇಳಿರುವ ಸಂಗತಿಗಳೆಲ್ಲವನ್ನು ನಿಮಗೆ ಜ್ಞಾಪಕ ಮಾಡುತ್ತಾನೆ.**

ಏಸು ಒಂದು ಸಂದರ್ಭದಲ್ಲಿ ತನ್ನ ಶಿಷ್ಯರಿಗೆ ಹೇಳುತ್ತಾ, ನಾನು ನಿಮ್ಮ ಹತ್ತಿರ ಇದ್ದಾಗಲೇ ಈ ಮಾತುಗಳನ್ನು ಹೇಳಿದೆನು ಎಂದಿದ್ದಾನೆ. ಅಷ್ಟೇ

ಅಲ್ಲದೇ ಏಸು ಗತಿಸಿಹೋದ ನಂತರ ಇನ್ನೊಬ್ಬ ಆದರಣಕರ್ತ ನಿಮ್ಮ ಬಳಿಗೆ ಬರುವನೆಂದಿದ್ದಾನೆ. **ಏಸಯ್ಯನ ಹಾಗೆ ಬಂದಿರುವ ಆದರಣಕರ್ತ ಏಸು ಹೇಳಿರುವ ಸಂಗತಿಗಳೆಲ್ಲವನ್ನು ಪುನಃ ಜ್ಞಾಪಕ ಮಾಡುವುದಲ್ಲದೇ ಏಸು ಹೇಳದ ವಿಷಯಗಳನ್ನು ಕೂಡಾ ಸಮಸ್ತ ಜ್ಞಾನವನ್ನು ಬೋಧಿಸುವನು** ಎಂದು ಹೇಳಿದ್ದಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! **'ಆದರಣಕರ್ತ'** ಎಂಬ ಹೆಸರನ್ನು ಏಸಯ್ಯನೇ ಹೇಳಿದ್ದಾನೆ. ಅಷ್ಟಕ್ಕು ಆದರಣಕರ್ತ ಎಂದರೇ ಏನೆಂದು ಅದಕ್ಕೆ ವಿವರವನ್ನು ಹೇಳುತ್ತಾ **ತಂದೆ ನನ್ನ ನಾಮದಲ್ಲಿ ಕಳುಹಿಸಿಕೊಡುವ ಪರಿಶುದ್ಧಾತ್ಮ ಎಂದು** ಹೇಳಿದ್ದಾನೆ. ಇಲ್ಲಿ ಚೆನ್ನಾಗಿ ಗಮನಿಸಿದರೆ ಆತನು ಹೇಳಿರುವ ವಾಕ್ಯದಲ್ಲಿ ಮೊದಲು ತಂದೆಯೆಂದು ಇದೆ ಮತ್ತು ಕೊನೆಯಲ್ಲಿ ಪರಿಶುದ್ಧಾತ್ಮ ಯೆಂದು ಇದೆ. ಏಸು ತಂದೆ ಪರಿಶುದ್ಧಾತ್ಮಯೆಂದೇ ಹೇಳಬಹುದು. ಅದೂ ಮಾರುವೇಷದಲ್ಲಿ ಇರುವವನನ್ನು ಕುಮಾರನೆಂದು, ವೇಷವಿಲ್ಲದವನನ್ನು ತಂದೆ ಎಂದು ಕರೆಯುತ್ತಿದ್ದೇವೆ. ವಾಸ್ತವವಾಗಿ ಇಬ್ಬರೂ ಒಬ್ಬರೇ ಆಗುತ್ತಾರೆ. 'ನನ್ನ ಹೆಸರಿನಲ್ಲಿ ಕಳುಹಿಸಿಕೊಡುವ' ಎಂದು ಮಧ್ಯದಲ್ಲಿ ಹೇಳಿದ್ದಾನೆ. **ಪ್ರಜೆಗಳನ್ನು ಜ್ಞಾನದಿಂದ ಆದರಿಸಿ ಅವರ ಕರ್ಮಗಳನ್ನು ಇಲ್ಲದಂತೆ ಹೋಗುವ ಹಾಗೆ ಮಾಡುವವನನ್ನು ಆದರಣಕರ್ತ ಎಂದು ಅನ್ನುತ್ತಿದ್ದೇವೆ.** ದೇವರು ಆದರಣಕರ್ತ ಎಂಬ ಹೆಸರಿನಲ್ಲಿ ಕಳುಹಿಸುವುದು ದೇವರನ್ನೇಯೆಂದು ಹೇಳುವ ವಾಕ್ಯವೇ **"**ತಂದೆ ನನ್ನ ನಾಮದಲ್ಲಿ ಕಳುಹಿಸಿಕೊಡುವ ಪರಿಶುದ್ಧಾತ್ಮಯೆಂದು**"** ಹೇಳಿದ್ದಾನೆ. ದೇವರು ರೂಪವನ್ನು ತಗುಲಿಸಿಕೊಂಡು **"ಆದರಣಕರ್ತ ಎಂಬ ಹೆಸರಿರುವ ಮುಸುಗಿನಲ್ಲಿ ದೇವರೇ ಬಂದು ಆತನ ಜ್ಞಾನವನ್ನು ಆತನೇ ಹೇಳುತ್ತಿದ್ದಾನೆ"** ಎಂದು ತಿಳಿಯುತ್ತಿದೆ. ಈ ವಿಷಯವು ತಿಳಿಯದವರಿಗು ಕೂಡಾ ತಿಳಿಯುವಂತೆ ಈ ವಾಕ್ಯವನ್ನು ಹೇಳಿದ್ದಾನೆ ಎಂದು ತಿಳಿಯಬೇಕು.

**57) ಯೋಹಾನ್ ಸುವಾರ್ತೆ 15ನೇ ಅಧ್ಯಾಯ, 23ನೇ ವಚನ.**

**(23) ನನ್ನನ್ನು ದ್ವೇಷಿಸುವವನು ನನ್ನ ತಂದೆಯನ್ನು ಕೂಡಾ ದ್ವೇಷಿಸುತ್ತಿದ್ದಾನೆ.**

ನಾನು ಮೊದಲಿನಿಂದ ಹೇಳುತ್ತಲೇ ಇದ್ದೇನೆ. ಏಸು ಬೇರೆ, ಏಸು ಆಕಾರವು ದೇವರಿಗೆ ಒಂದು ವೇಷವು, ವೇಷಕ್ಕೆ ಹೆಸರಿನಂಥದ್ದು. ವಾಸ್ತವವಾಗಿ ಮನುಷ್ಯನ ರೂಪದಲ್ಲಿ ಬಂದು ಏಸು ಎಂದು ಕರೆಯಲ್ಪಡುವವನು ಪರಿಶುದ್ಧಾತ್ಮ ಹೊರತುಪಡಿಸಿ ಯಾರೂ ಅಲ್ಲ. ಆದ್ದರಿಂದ ಏಸಯ್ಯನನ್ನು ದೂಷಿಸಿದರೇ ದೇವರಾದ ಪರಮಾತ್ಮನನ್ನು ದೂಷಿಸಿದಂತೆಯೇ ಆಗುತ್ತದೆ. ಆದರಣಕರ್ತ ಏಸು ನಂತರ ಬರುವವನೇ ಅಲ್ಲ. ಏಸು ಕೂಡಾ ಆದರಣಕರ್ತನೇ. ದೇವರು ಯಾವಾಗ ಮನುಷ್ಯನ ಅವತಾರದಲ್ಲಿ ಬಂದರೂ ಆತನನ್ನು ಆದರಣಕರ್ತ ಎಂದೇ ಹೇಳಬೇಕು. **ಕರ್ಮ ನಿರ್ಮೂಲನೆ ಮಾಡುವ ಜ್ಞಾನವನ್ನು ಬೋಧಿಸುತ್ತಾ, ಪ್ರಜೆಗಳನ್ನು ಆದರಿಸುವವನು ಆದರಣಕರ್ತ ಆಗುತ್ತಾನೆ.** ಕರ್ಮಗಳನ್ನು ಸುಡುವ ಬೋಧನೆಗಳು ಹೇಳುವವನು ದೇವರೇ ಆಗಿರುವುದರಿಂದ ಆದರಣಕರ್ತ ಯಾರಾದರೇ ಅವನು ಪರಿಶುದ್ಧಾತ್ಮನೇಯೆಂದು ಹೇಳಬಹುದು. ಆದರೇ ಭೂಮಿ ಮೇಲಕ್ಕೆ ಮನುಷ್ಯನಾಗಿ ಬಂದಿರುವ ದೇವರನ್ನು ತಿಳಿಯುವುದು ಬಹಳ ಕಷ್ಟವಾದ ಕೆಲಸ. ಆದ್ದರಿಂದ ಕ್ರೈಸ್ಥ ಮತದಲ್ಲಿ ಈ ದಿನ ನಾವು ಜ್ಞಾನಿಗಳು ಎನ್ನುವವರು ಕೂಡಾ ಈ ದಿನ ಏಸಯ್ಯನನ್ನು ಸೋದರನನ್ನಾಗಿ ಹೇಳುತ್ತಿದ್ದಾರೆ. ಆತನು ಯಾರಿಗೂ ಸೋದರನಲ್ಲ. ಏಸುವಾಗಿ ಬಂದರೂ, ಇನ್ನೂ ಯಾವ ಹೆಸರಿನಿಂದ ಬಂದರೂ ಆತನು ಪರಿಶುದ್ಧಾತ್ಮನೇ ಆಗುವುದರಿಂದ ಎಲ್ಲರಿಗೂ ತಂದೆಯಾ ಗುತ್ತಾನೆ ಹೊರತು ಸೋದರನಲ್ಲ.

**58) ಯೋಹಾನ್ ಸುವಾರ್ತೆ 15ನೇ ಅಧ್ಯಾಯ, 24, 25 ವಚನಗಳು.**

**(24) ಯಾರೂ ಮಾಡದ ಕಾರ್ಯಗಳನ್ನು ನಾನು ಅವರ ಮಧ್ಯೆ ಮಾಡದೇ ಇದ್ದ ಪಕ್ಷದಲ್ಲಿ ಅವರಿಗೆ ಪಾಪವು ಇಲ್ಲದೇ ಹೋಗುತ್ತದೆ. ಈಗಾದರೇ ನನ್ನನ್ನು, ನನ್ನ ತಂದೆಯನ್ನು ನೋಡಿ ದ್ವೇಷಿಸುತ್ತಿದ್ದಾರೆ.**

**(25) ಆದರೇ ನನ್ನನ್ನು ನಿರ್ಹೇತುಕವಾಗಿ ದ್ವೇಷಿಸಿದ್ದಾರೆ.**

ಭೂಮಿ ಮೇಲೆ **ಯಾರೂ ಮಾಡದ ಕೆಲಸ** ಏನೆಂದರೇ! **'ಒಬ್ಬ ಮನುಷ್ಯನ ಪಾಪವನ್ನು ಕ್ಷಮಿಸಿ ಇಲ್ಲದೇ ಮಾಡುವುದು'**. ಎಲ್ಲರಿಗೂ ಸಾಟಿ ಮನುಷ್ಯನಾಗಿ ಕಾಣಿಸುವ ನಾನು ಇತರರ ಕರ್ಮಗಳನ್ನು ಕ್ಷಮಿಸುವ ಕಾರ್ಯಗಳನ್ನು ಮಾಡದೆ ಇದ್ದರೇ ಅವರಿಗೆ ಪಾಪವು ಬರುತ್ತಿರಲಿಲ್ಲ ಎಂದು ಏಸು ಹೇಳಿದ್ದಾನೆ. ಎಲ್ಲರಿಗೂ ತಿಳಿಯುವ ಹಾಗೆ ಕೆಲವರ ಪಾಪಗಳನ್ನು ಏಸು ಕ್ಷಮಿಸಿರುವುದರಿಂದ ಅದನ್ನು ನೋಡಿ ಸಹಿಸಿಕೊಳ್ಳಲಾರದ ಮನುಷ್ಯರು, ಆತನ ದೊಡ್ಡತನವನ್ನು ಗುರುತಿಸದವರು ಏಸಯ್ಯನನ್ನು ದ್ವೇಷಿಸುವುದು ನಡೆದಿದೆ. ಏಸಯ್ಯನನ್ನು ದ್ವೇಷಿಸುವುದರಿಂದ ಪರಿಶುದ್ಧಾತ್ಮನನ್ನು ದ್ವೇಷಿಸಿದಂತಾಗುತ್ತಿದೆ. ಪ್ರಜೆಗಳು **ಸರಿಯಾದ ಕಾರಣ**ವಿಲ್ಲದೇನೇ ಆತನನ್ನು ದ್ವೇಷಿಸುವುದರಿಂದ ಅವರಿಗೆ ಪಾಪವು ಬರುವುದು ನಡೆದಿದೆ.

**59) ಯೋಹಾನ್ ಸುವಾರ್ತೆ 15ನೇ ಅಧ್ಯಾಯ, 26, 27ನೇ ವಚನಗಳು.**

**(26) ತಂದೆ ಹತ್ತಿರದಿಂದ ನಿಮ್ಮ ಹತ್ತಿರಕ್ಕೆ ನಾನು ಕಳುಹಿಸಿಕೊಡುವ ಆದರಣಕರ್ತ ಅಂದರೇ ತಂದೆ ಹತ್ತಿರದಿಂದ ಹೊರಡುವ ಸತ್ಯ ಸ್ವರೂಪಿಯಾದ ಆತ್ಮ ಬಂದಾಗ ಆತನು ನನ್ನನ್ನು ಕುರಿತು ಸಾಕ್ಷ್ಯವನ್ನು ಕೊಡುತ್ತಾನೆ.**

**(27) ನೀವು ಮೊದಲಿನಿಂದಲೂ ನನ್ನ ಹತ್ತಿರ ಇದ್ದೀರ ಆದಕಾರಣ, ನೀವು ಸಹ ಸಾಕ್ಷ್ಯವನ್ನು ಕೊಡುತ್ತೀರ.**

ಆದರಣಕರ್ತ (ಭಗವಂತ) ನಾಗಿ ಬಂದವನು ಏಸು. ಏಸು ತಂದೆ ಬಳಿಯಿಂದ ಮನುಷ್ಯರ ಬಳಿಗೆ ಮತ್ತೊಬ್ಬ ಆದರಣಕರ್ತನನ್ನು ಕಳುಹಿಸುತ್ತೇನೆಂದು ಹೇಳಿದ್ದಾನೆ. ಇಲ್ಲಿ ಆಧ್ಯಾತ್ಮಿಕ ವಿಧಾನದ ಪ್ರಕಾರ ಹೇಳಬೇಕಾಗಿರುವುದು ಹೇಳಿದ್ದಾರೆ ಹೊರತು ವಾಸ್ತವವನ್ನು ಹೇಳಿದರೇ ತಂದೆ ಹತ್ತಿರ ಮತ್ತೊಬ್ಬ ಆದರಣಕರ್ತ ಎನ್ನುವವನು ಯಾರೂ ಇಲ್ಲ. **ಇರುವುದು ಒಂದೇ ದೇವರೇ.** ಆತನೇ ಆಗಾಗ ಆದರಣಕರ್ತನಾಗಿ ಮಾರುವೇಷದಲ್ಲಿ ಬಂದು ಹೋಗುತ್ತಿದ್ದಾನೆ ಹೊರತು

ಈತನು ಕಳುಹಿಸುವುದು ಇಲ್ಲ, ಆತನು ಬರುವುದು ಇಲ್ಲ. ಈತನು ಆತನು ಇಬ್ಬರೂ ಒಬ್ಬರೇ ಆಗಿರುವಾಗ ಕಳುಹಿಸುವವನು ಆತನೇ ಬರುವವನು ಆತನೇ. ವಾಕ್ಯದಲ್ಲಿ **"ಸತ್ಯ ಸ್ವರೂಪಿಯಾದ ಆತ್ಮ ಆದರಣಕರ್ತನಾಗಿ ಬಂದಾಗ ನನ್ನನ್ನು ಕುರಿತು ಸಾಕ್ಷ್ಯವನ್ನು ಕೊಡುತ್ತಾನೆ"** ಎಂದು ಏಸು ಹೇಳಿದ್ದಾನೆ. ಬಂದವನು ಹೋದವನೇ ಆಗಿರುವಾಗ, ಬಂದವನು ಹೋದವನನ್ನು ಕುರಿತು ಹೇಳುವುದರಲ್ಲಿ ಆಶ್ಚರ್ಯವಿಲ್ಲ. ಬಂದಿರುವ ಆದರಣಕರ್ತ ಏಸಯ್ಯನನ್ನು ಕುರಿತು ಹೇಳಿದಾಗ ಏಸು ಹತ್ತಿರವಿದ್ದ ಶಿಷ್ಯರಿಗೆ ಏಸು ತಪ್ಪದೇ ಜ್ಞಾಪಕ ಬರುತ್ತಾನೆ. ಆದಕಾರಣ ಏಸು ಹತ್ತಿರವಿದ್ದ ಆತನ ಶಿಷ್ಯರು ಕೂಡಾ ಏಸುವನ್ನು ಕುರಿತು ಏಸು ಇದ್ದದ್ದು ವಾಸ್ತವವೇಯೆಂದು, ಆತನು ಜ್ಞಾನವನ್ನು ಹೇಳಿ ಹೋಗಿರುವುದು ವಾಸ್ತವವೇ ಯೆಂದು ಹೇಳುವರು.

### 60) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 7ನೇ ವಚನ.

**(7) ನಾನು ಹೊರಟು ಹೋಗುವುದರಿಂದ ನಿಮಗೆ ಪ್ರಯೋಜನ. ನಾನು ಹೋಗದ ಪಕ್ಷದಲ್ಲಿ ಆದರಣಕರ್ತ ನಿಮ್ಮ ಹತ್ತಿರ ಬರುವುದಿಲ್ಲ. ನಾನು ಹೋದ ಪಕ್ಷದಲ್ಲಿ ಆತನನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ.**

ಒಂದು ನಾಟಕದಲ್ಲಿ ಒಬ್ಬನೇ ವ್ಯಕ್ತಿ ಎರಡು ಪಾತ್ರಗಳನ್ನು ಪೋಷಿಸಿ ನಟಿಸುತ್ತಿರುತ್ತಾನೆ. ಒಂದು ಪಾತ್ರ ಹೋದ ನಂತರ ಮತ್ತೊಂದು ಪಾತ್ರ ರಂಗಸ್ಥಳದ ಮೇಲಕ್ಕೆ ಬರಬೇಕಾಗಿದೆ. ಆದರೇ ಎರಡು ಪಾತ್ರಗಳಲ್ಲಿ ಒಬ್ಬರೇ ನಟಿಸುತ್ತಿರುವು ದರಿಂದ ಒಂದು ಪಾತ್ರ ತೆರೆ ಹಿಂದಕ್ಕೆ ಹೋದರೇ ಆ ಪಾತ್ರದಲ್ಲಿರುವ ವ್ಯಕ್ತಿಯೇ ಮತ್ತೊಂದು ಪಾತ್ರದಲ್ಲಿ ತೆರೆಯ ಮುಂದಕ್ಕೆ ಬರಬಲ್ಲನು. ಮೊದಲನೆ ಪಾತ್ರ ಒಳಗೆ ಹೋಗದೇ ಎರಡನೆಯ ಪಾತ್ರ ಬರುವುದಕ್ಕೆ ಸಾಧ್ಯವಿಲ್ಲ. ಎರಡು ಪಾತ್ರಗಳು ಒಂದೇ ವ್ಯಕ್ತಿಯವು ಆಗಿರುವುದರಿಂದ ಹಾಗೆ ನಡೆಯಬೇಕಾಗಿರುವುದೇ. ಅದೇ ವಿಧವಾಗಿ ಏಸು ಪಾತ್ರದಲ್ಲಿ ಬಂದವನೇ ಪುನಃ ಎರಡನೆ ಪಾತ್ರವಾಗಿ ಭೂಮಿ ಮೇಲಕ್ಕೆ ಬರಬೇಕಾಗಿದೆ. ಆದ್ದರಿಂದ ಮನುಷ್ಯರ ಮುಂದಿನಿಂದ ಏಸು ಕಾಣಿಸದೆ ಹೋದರೇ ಪುನಃ ಎರಡನೆ ಪಾತ್ರವಾಗಿ ಏಸು ಪಾತ್ರದಲ್ಲಿ

ಬಂದವನೇ ಬರಬೇಕಾಗಿರುತ್ತದೆ. ಪರಿಶುದ್ಧಾತ್ಮ ಆದವನು **'ಏಸು'** ಎಂಬ ಪಾತ್ರದಲ್ಲಿ ಪ್ರಜೆಗಳ ಮುಂದಕ್ಕೆ ಬಂದಿರುವುದರಿಂದ ಆತನು ಪ್ರಜೆಗಳೊಂದಿಗೆ ಬೆರೆತಿರುವುದಕ್ಕೆ ಮತ್ತೊಂದು ಬಾರಿ ಬರಬೇಕಾಗಿ ಬಂದರೇ ಏಸಯ್ಯನಾಗಿ ಕಾಣಿಸಿಕೊಳ್ಳದೇ ಪ್ರಜೆಗಳ ಮುಂದಿನಿಂದ ಹೋಗಿ ಹೊಸ ಪಾತ್ರದಲ್ಲಿ, ಹೊಸ ಹೆಸರಿನಿಂದ, ಹೊಸ ವೇಷದಲ್ಲಿ ಆತನೇ ಪುನಃ ಬರಬೇಕಾಗಿರುತ್ತದೆ. ಆದ್ದರಿಂದ ಏಸು ಪ್ರಜೆಗಳೊಂದಿಗೆ ಈ ವಿಧವಾಗಿ ಹೇಳಿದ್ದಾನೆ. **"ನಾನು ಹೊರಟು ಹೋಗುವುದರಿಂದ ನಿಮಗೆ ಪ್ರಯೋಜನೆ ಉಂಟಾಗುತ್ತದೆ. ನಾನು ಹೋಗದ ಪಕ್ಷದಲ್ಲಿ ಆದರಣಕರ್ತ ನಿಮ್ಮ ಹತ್ತಿರಕ್ಕೆ ಬರುವುದಿಲ್ಲ"** ಎಂದು ಹೇಳಿದ್ದಾನೆ. ನಾನೇ ಪುನಃ ಆದರಣಕರ್ತನಾಗಿ ಬರುತ್ತೇನೆಂದು ಹೇಳದೇ **'ನಾನು ಹೋದ ನಂತರ ಮುಂಬರುವ ಆತನನ್ನು ನಿಮ್ಮ ಹತ್ತಿರಕ್ಕೆ ಕಳುಹಿಸುತ್ತೇನೆ'** ಎಂದು ಹೇಳಿದ್ದಾನೆ. **ಬುದ್ಧಿ ವಿಚಕ್ಷಣ** ಹೊಂದಿರುವವನು ಹೋಗುವವನು ಪುನಃ ಬರುವವನು ಇಬ್ಬರೂ ಒಬ್ಬರೇಯೆಂದು ಸುಲಭವಾಗಿ ಈ ವಾಕ್ಯದಿಂದ ತಿಳಿಯಬಲ್ಲನು.

### 61) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 8ನೇ ವಚನ.

## (8) ಆತನು ಬಂದು ಪಾಪವನ್ನು ಕುರಿತಾಗಿಯೂ, ನೀತಿಯನ್ನು ಕುರಿತಾಗಿಯೂ, ತೀರ್ಪನ್ನು ಕುರಿತಾಗಿಯು ಲೋಕವನ್ನು ಒಪ್ಪಿ ಕೊಳ್ಳುವ ಹಾಗೆ ಮಾಡುತ್ತಾನೆ.

ಏಸಯ್ಯನಾಗಿ ಬಂದಿರುವ ಪಾತ್ರ ತೆರೆಯ ಹಿಂದಕ್ಕೆ ಕಾಣಿಸದೇ ಹೋದ ನಂತರ ಎರಡನೆಯ ವೇಷದಲ್ಲಿ, ಎರಡನೆಯ ಅವತಾರದಲ್ಲಿ ಆದರಣಕರ್ತನಾಗಿ ಬರುತ್ತಾನೆ. ಆದರಣಕರ್ತಯೆನ್ನುವುದು ದೇವರ ಅವತಾರವನ್ನು ತಿಳಿಸುವ ಪದವೇ ಹೊರತು ಬಂದವನ ಹೆಸರಲ್ಲ. ಆದರಣಕರ್ತನಾಗಿ ಬಂದವನು ಪ್ರಪಂಚದಲ್ಲಿ ಯಾವ ಹೆಸರಿನಿಂದಾದರೂ ಇರಬಹುದು. ಆದ್ದರಿಂದ ಈತನೇ ದೇವರ ಅವತಾರವೆಂದು, ಈತನೇ ಆದರಣಕರ್ತನೆಂದು ಯಾರೂ ಕಂಡು

ಕೊಂಡು ಹೇಳಲಾರರು. ಆದರಣಕರ್ತನಾಗಿ ಬರುವವನ ಆಕಾರವಾಗಲೀ, ಹೆಸರಾಗಲೀ ಯಾರಿಗೂ ತಿಳಿಯದು ಆದರೇ, ಆತನ ಕ್ರಿಯೆಗಳನ್ನು ನೋಡಿ ತಿಳಿದುಕೊಳ್ಳುವುದಕ್ಕೆ ಸ್ವಲ್ಪ ಅವಕಾಶವಿದೆ. **ಆದರಣಕರ್ತ** ಭೂಮಿ ಮೇಲಕ್ಕೆ ಬಂದರೇ ಆತನು ಮನುಷ್ಯರ ಪಾಪಗಳನ್ನು ಕುರಿತು ಹೇಳುತ್ತಾನೆ. ಮನುಷ್ಯ ಪಾಪವನ್ನು ಹೇಗೆ ಸಂಪಾಧಿಸಿಕೊಳ್ಳುತ್ತಿದ್ದಾನೋ ಅದು ಮರಣ ಕಾಲದವರೆಗು ಎಲ್ಲಿ ಶೇಖರಣೆಯಾಗಿರುತ್ತದೋ, ಪಾಪದಿಂದ ಉಂಟಾಗುವ ಫಲಿತವೇನೋ ಒಟ್ಟಾರೆ ಕರ್ಮ ವಿಧಾನವೆಲ್ಲವೂ ತಿಳಿಸುತ್ತಾನೆ. ಮನುಷ್ಯ ಸಂಪಾಧಿಸಿಕೊಂಡ ಪಾಪ ಹೋಗಬೇಕೆಂದರೇ ದೈವಜ್ಞಾನ ಒಂದೇ ಅಗತ್ಯವಾಗುತ್ತದೆಂದು, ಪಾಪಗಳು ಕಟ್ಟಿಗೆಗಳಂಥವೆಂದು, ಜ್ಞಾನವು ಅಗ್ನಿಯಂಥದೆಂದು ಜ್ಞಾನದಿಂದ ಮಾತ್ರವೇ ಪಾಪಗಳನ್ನು ಅನುಭವಿಸದೇ ತಪ್ಪಿಸಿಕೊಳ್ಳಬಹುದೆಂದು, ದೈವಜ್ಞಾನವನ್ನು ಹೇಗೆ ಹೊಂದಬಹುದೋ ಅದನ್ನು ಕುರಿತು ಸಂಪೂರ್ಣವಾಗಿ ತಿಳಿಸುತ್ತಾನೆ. ಜೀವನದಲ್ಲಿ ದೈವಜ್ಞಾನವನ್ನು ಸಂಪಾದಿಸಿಕೊಳ್ಳದವನಿಗೆ ಮಾಡಿಕೊಂಡ ಪಾಪವೆಲ್ಲವೂ ಮರಣದವರೆಗು ಹಾಗೆಯೇ ಇರುತ್ತದೆ. **ಅವನು ಮರಣಿಸಿದ ನಂತರ ಅದೇ ದಿನವೆ, ಅದೇ ನಿಮಿಷವೆ, ಅದೇ ಕ್ಷಣವೆ ಪುನಃ ಹುಟ್ಟಬೇಕಾಗಿರುತ್ತದೆ.** ಮರಣಿಸಿದ ದಿನವನ್ನು ಅಂತಿಮ ದಿನ ಎನ್ನುತ್ತೇವೆ. ಜೀವನದಲ್ಲಿ ಯಾವುದು ಅಂತಿಮ ದಿನವೋ ಅದೇ ಪ್ರಥಮ ದಿನವಾಗಿ ಕೂಡಾ ಬದಲಾಗುತ್ತದೆ. ಮರಣಿಸಿದ ಸೆಕೆಂಡಿನಲ್ಲಿಯೇ ಎರಡನೆಯ ಜನ್ಮಕ್ಕೆ ಹೋಗಬೇಕಾಗಿರುತ್ತದೆ. ಆಗ ಮರಣಕ್ಕು ಜನ್ಮಕ್ಕು ಸಂಧಿಕಾಲವು ಒಂದು ಸೆಕೆಂಡಿನಲ್ಲಿ ಹತ್ತನೆ ಒಂದು ಭಾಗದಷ್ಟು ಕಾಲವೇ ಎಂದು ಹೇಳಬಹುದು. ಆ ಸ್ವಲ್ಪಹೊತ್ತಿನ ಕಾಲದಲ್ಲಿ ಮರಣಿಸಿದವನಿಗೆ ಅವನು ಮಾಡಿಕೊಂಡ ಪಾಪಪುಣ್ಯಗಳನ್ನು ಅನುಸರಿಸಿ ಆತ್ಮ ತೀರ್ಪು ನಿರ್ಣಯಿಸುತ್ತದೆ. ಆ ತೀರ್ಪಿನಲ್ಲಿ ಅವನು ಎರಡನೆ ಜನ್ಮದಲ್ಲಿ ಏನು ತಿನ್ನಬೇಕು, ಏನು ಕುಡಿಯಬೇಕು, ಏನು ಅನುಭವಿಸಬೇಕು ಎಂಬ ವಿಷಯಗಳನ್ನು ಕ್ಷಣಕ್ಷಣವೂ ನಡೆಯಬೇಕಾಗಿರುವುದನ್ನು ಆತ್ಮ ನಿರ್ಣಯಿಸಿ ಕಳುಹಿಸುತ್ತದೆ. ಮರಣದಲ್ಲಿ ನಡೆದಿರುವ ತೀರ್ಪನ್ನು ಅನುಸರಿಸಿ ಹುಟ್ಟಿದವನ ಜೀವನ ಸಾಗುತ್ತಿರುತ್ತದೆ. ಯಾರು ಹೇಗೆ ಬದುಕಬೇಕೋ ಅಂತಿಮ ದಿನ ತೀರ್ಪಿನಲ್ಲಿ ನಿರ್ಣಯ

ಮಾಡಲ್ಪಡುತ್ತದೆ. ಮರಣಿಸಿದವನೊಂದಿಗೆ ಇದ್ದ ಆತ್ಮವೇ ಮನುಷ್ಯ ಚಿಕ್ಕಂದಿನಿಂದ ಮಾಡಿಕೊಂಡ ಕರ್ಮಗಳನ್ನು ಅನುಸರಿಸಿ ನ್ಯಾಯಬದ್ಧವಾಗಿ ತೀರ್ಪು ನಿರ್ಣಯಿಸುತ್ತದೆ. ಆಗ ಇದ್ದದ್ದು ಇದ್ದ ಹಾಗೆಯೇ ಲೆಕ್ಕಿಸಲ್ಪಟ್ಟು ನಡೆಯಬೇಕಾಗಿರುವವು ನಿರ್ಣಯ ಮಾಡಲಾಗುತ್ತದೆ. ಆ ನಿರ್ಣಯವನ್ನು ಯಾರೂ ಅತಿಕ್ರಮಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದ್ದೇ.

**62) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 12ನೇ ವಚನ.**

**(12) ನಾನು ನಿಮ್ಮೊಂದಿಗೆ ಹೇಳಬೇಕಾಗಿರುವವು ಇನ್ನೂ ಅನೇಕ ಸಂಗತಿಗಳು ಇವೆ ಆದರೇ, ಈಗ ನೀವು ಅವುಗಳನ್ನು ಸಹಿಸಲಾರಿರಿ.**

ದೇವರು ಮನುಷ್ಯನಾಗಿ ಬಂದರೂ, ಬಂದು ಜ್ಞಾನವನ್ನು ಪ್ರಜೆಗಳಿಗೆ ಬೋಧಿಸಿದರೂ ಪ್ರಜೆಗಳ ಮನೋಭಾವವನ್ನು ಅನುಸರಿಸಿ ಆಲೋಚಿಸಿ ಬೋಧಿಸಬೇಕಾಗಿದೆ. ದೈವಜ್ಞಾನವನ್ನಾದರೂ ಸಮಯ, ಸಂದರ್ಭವನ್ನು ಅನುಸರಿಸಿ ಬೋಧಿಸಬೇಕಾಗಿರುತ್ತದೆ. ಮದುವೆಯಾಗುವ ಹೆಣ್ಣಿನ ಬಳಿಗೆ ಹೋಗಿ ನೀನು ನನ್ನ ಹೆಂಡತಿ ಎಂದರೇ ಆಕೆ ಒಪ್ಪಿಕೊಳ್ಳುವುದಿಲ್ಲ. ಒಪ್ಪಿಕೊಳ್ಳದೇ ಹೋಗುವುದಲ್ಲದೆ ಹೊಡೆದಾಟಕ್ಕೆ ಬರುತ್ತಾಳೆ. ಅದೇ ವಿಷಯವನ್ನು ಮದುವೆಯಾದ ನಂತರ ನೀನು ನನ್ನ ಹೆಂಡತಿ ಎಂದರೇ ಆಕೆ ಸಂತೋಷಿಸುತ್ತಾಳೆ ಆದರೆ ಹೊಡೆದಾಟಕ್ಕೆ ಬರುವುದಿಲ್ಲ. ನಡೆಯುವ ಸತ್ಯವನ್ನು ಮೊದಲೇ ಹೇಳಿದರೂ ಸಹಿಸದವರು ದೈವಜ್ಞಾನವನ್ನು ಹೇಳಿದರೇ ಅವರು ಅರ್ಥಮಾಡಿಕೊಳ್ಳದೇ ಎದುರು ತಿರುಗಿ ಮಾತನಾಡುವ ಅವಕಾಶವಿದೆ. ಆದ್ದರಿಂದ ದೇವರು ಮನುಷ್ಯನಾಗಿ ಭೂಮಿ ಮೇಲಕ್ಕೆ ಬಂದರೂ ಆತನು ಸಹ ಸತ್ಯವನ್ನು ಆಲೋಚಿಸಿ ಹೇಳಬೇಕಾಗಿ ಬಂದಿದೆ. ಉದಾಹರಣೆಗೆ ರಾವಣಬ್ರಹ್ಮ ದೇವರ ಅವತಾರವೇ ಆದರೂ ಆ ಮಾತನ್ನು ಈಗ ಹೇಳಿದರೇ ಸ್ವಲ್ಪ ಮಟ್ಟಿಗೆ ಕೇಳಿಸಿಕೊಳ್ಳುವವರು ಇದ್ದಾರೆ. ಅದೇ ವಿಷಯವನ್ನೇ ಐವತ್ತು ವರ್ಷಗಳ ಹಿಂದೆ ಹೇಳಿದ್ದರೇ ಪ್ರಜೆಗಳು ಒಪ್ಪಿಕೊಳ್ಳುತ್ತಿರಲಿಲ್ಲ. ರಾವಣನು ದುರ್ಮಾರ್ಗನೆಂದು, ರಾಕ್ಷಸನೆಂದು ಎದುರು ಹೇಳುತ್ತಿದ್ದರು. ಆದ್ದರಿಂದ ಜ್ಞಾನವನ್ನು ಕೂಡಾ ಮುಂದೆ ಹಿಂದೆ ಮಾಡಿ

ಹೇಳಬೇಕಾಗಿರುತ್ತದೆ. ಏಸು ಕೂಡಾ ತನ್ನ ಶಿಷ್ಯರೊಂದಿಗೆ **"ನಾನು ನಿಮ್ಮೊಂದಿಗೆ ಹೇಳಬೇಕಾಗಿರುವವು ಇನ್ನೂ ಅನೇಕ ಸಂಗತಿಗಳು ಇವೆ. ಈಗ ಅವುಗಳನ್ನು ನೀವು ಸಹಿಸುವುದಿಲ್ಲ"** ಎಂದು ಹೇಳಿದ್ದಾನೆ. ಏಸುವಿಗೆ ತಾನು ಮನುಷ್ಯರ ಮಧ್ಯದಿಂದ ಹೋಗಬೇಕಾಗಿರುವ ಕಾಲವು ಹತ್ತಿರ ಬಂದಿದೆಯೆಂದು ತಿಳಿದವನಾಗಿ ನಾನು ಹೇಳದ ವಿಷಯಗಳನ್ನು ಮುಂಬರುವ ಆದರಣಕರ್ತ ಹೇಳುತ್ತಾನೆಂದು ಮೊದಲೇ ತನ್ನ ಶಿಷ್ಯರಿಗೆ ಹೇಳಿದ್ದಾನೆ.

**63) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 13ನೇ ವಚನ.**

**(13) ಆತನು ಅಂದರೇ ಸತ್ಯ ಸ್ವರೂಪಿಯಾದ ಆತ್ಮ ಬಂದಾಗ ನಿಮ್ಮನ್ನು ಸರ್ವಸತ್ಯದೊಳಗೆ ನಡೆಸುತ್ತಾನೆ. ಆತನು ತನ್ನಷ್ಟಕ್ಕೆ ತಾನೇ ಏನೂ ಬೋಧಿಸದೆ ಯಾವುಗಳನ್ನು ಕೇಳುತ್ತಾನೋ ಅವುಗಳನ್ನು ಬೋಧಿಸಿ ಸಂಭವಿಸುವ ಸಂಗತಿಗಳನ್ನು ನಿಮಗೆ ತಿಳಿಸುತ್ತಾನೆ.**

ಇದು ಏಸುಪ್ರಭು ಮುಂಬರುವ ಆದರಣಕರ್ತನನ್ನು ಕುರಿತು ಮೊದಲೇ ಹೇಳಿರುವ ವಾಕ್ಯವು. **'ಸತ್ಯ ಸ್ವರೂಪಿಯಾದ ಆತ್ಮ'** ಅಂದರೇ **'ಜ್ಞಾನ ಸ್ವರೂಪವಾದ ದೇವರು'** ಎಂದು ಅರ್ಥ. ಏಸು ಹೋದ ನಂತರ ಬರುವ ದೇವರು **'ಸರ್ವಸತ್ಯದೊಳಗೆ ನಡೆಸುತ್ತಾನೆ'** ಎಂದು ಹೇಳಿದ್ದಾನೆ. ಎಲ್ಲಾ ಸತ್ಯವಾದ ವಿಷಯಗಳನ್ನೇ ಹೇಳುತ್ತಾನೆಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ಮನುಷ್ಯನಾಗಿ ಬಂದಿರುವ ದೇವರು ಮನುಷ್ಯನಾಗಿಯೇ ಪ್ರವರ್ತಿಸುತ್ತಾನೆ. ಆದ್ದರಿಂದ ಮನುಷ್ಯನಾಗಿ ತಾನು **'ಸ್ವತಃವಾಗಿ ಏನೂ ಬೋಧಿಸದೆ, ತಾನು ಕೇಳಿರುವ ಸಂಗತಿಗಳನ್ನೇ ಬೋಧಿಸುತ್ತಾನೆ'** ಎಂದು ಹೇಳಿದ್ದಾನೆ. ಯಾರು ಹೇಳಿದಾಗ ಕೇಳಿರುವವೆಂದು ಪ್ರಶ್ನಿಸಿಕೊಂಡು ನೋಡಿದರೇ ಇರುವುದು ಒಬ್ಬನೇ, ಬಂದಿರುವವನು ಒಬ್ಬನೇ ಆದಕಾರಣ ಹೇಳಬೇಕಾಗಿರುವವನು ಕೂಡಾ ಒಬ್ಬನೇ. ಆದ್ದರಿಂದ ದೇವರು ಹೇಳಿರುವ ವಿಷಯಗಳನ್ನೇ ಹೊರಗೆ ಕಾಣಿಸುವ ಮನುಷ್ಯ ಕೂಡಾ ಹೇಳುತ್ತಾನೆಂದು ತಿಳಿಯುತ್ತಿದೆ. ದೇವರ ಜ್ಞಾನವು ದೇವರೇ

ಹೇಳಬೇಕಾಗಿದೆ. ಮನುಷ್ಯರು ಹೇಳಲಾರರು ಎಂಬ ಮಾತಿಗೆ ಅನುಗುಣವಾಗಿ ಕೇಳಿರುವ ವಿಷಯಗಳನ್ನೇ ಹೇಳುತ್ತಾನೆಂದು ಅಂದನು.

**64) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 14, 15ನೇ ವಚನಗಳು.**

**(14) ಆತನು ನನ್ನನ್ನು ತೆಗೆದುಕೊಂಡು ನಿಮಗೆ ತಿಳಿಸುತ್ತಾನೆ ಆದಕಾರಣ ನನ್ನನ್ನು ಮಹಿಮೆ ಗೊಳಿಸುವನು.**

**(15) ತಂದೆಗೆ ಸಂಬಂಧಿಸಿರುವವೆಲ್ಲವೂ ನನ್ನವು. ಆದ್ದರಿಂದ ಆತನು ನನ್ನವುಗಳನ್ನು ತೆಗೆದುಕೊಂಡು ನಿಮಗೆ ತಿಳಿಸುತ್ತಾನೆಂದು ನಾನು ಹೇಳಿದೆನು.**

ಈ ವಾಕ್ಯವನ್ನು ನೋಡಿದರೇ ಸ್ವಲ್ಪ ಅರ್ಥವಾಗಿ, ಸ್ವಲ್ಪ ಅರ್ಥವಾಗದೆ ಮನುಷ್ಯರೊಂದಿಗೆ ಕಣ್ಣಾಮುಚ್ಚಾಲೆಯಾಟ ಆಡಿದಂತಿದೆ. ಆತನು ಅಂದರೇ ಹೊಸದಾಗಿ ಬಂದಿರುವ 'ಸತ್ಯ ಸ್ವರೂಪಿಯಾದ ಆತ್ಮ ತಾನು ಕೇಳಿರುವವನ್ನೇ ಬೋಧಿಸುವನೆಂದು' ಹೇಳಿದ್ದಾನೆ. ಅಷ್ಟರಲ್ಲಿಯೇ 'ನನ್ನವುಗಳನ್ನು ತೆಗೆದುಕೊಂಡು ನಿಮಗೆ ತಿಳಿಸುತ್ತಾನೆ' ಎಂದು ಹೇಳಿದ್ದಾನೆ. ಮೊದಲೇನೋ 'ನಾನು ಹೇಳದ ವಾಕ್ಯಗಳು ಕೂಡಾ ಹೇಳುತ್ತಾನೆಂದು' ಹೇಳಿದ್ದಾನೆ. ಇವಾಗೇನೋ 'ನನ್ನಲ್ಲಿರುವವು ಗಳನ್ನೇ ತೆಗೆದುಕೊಂಡು ನಿಮಗೆ ತಿಳಿಸುತ್ತಾನೆ' ಎಂದು ಹೇಳಿದ್ದಾನೆ. ಸಕ್ರಮವಾಗಿ ಹೇಳಿದರೇನೇ ಅರ್ಥವಾಗದ ಪ್ರಜೆಗಳಿಗೆ ಹೀಗೆ ಗೊಂದಲ ಪಡಿಸಿ ಹೇಳಿದರೆ ಸತ್ಯವನ್ನು ಗ್ರಹಿಸಿಕೊಳ್ಳುತ್ತಾರಾ? ಎಂದು ನೋಡಿದರೆ ಹಾಗೆ ಹೇಳುವುದಕ್ಕು ಕೂಡಾ ಒಂದು ಕಾರಣವಿದೆ ಎಂದು ತಿಳಿಯುತ್ತಿದೆ. ಅದೇನೆಂದರೇ! **ದೇವರ ಜ್ಞಾನವನ್ನು ತಿಳಿಯಬೇಕೆನ್ನುವವರಿಗೇ ತನ್ನ ಜ್ಞಾನವು ಅರ್ಥವಾಗುವಂತೆ, ಜ್ಞಾನದ ಮೇಲೆ ಶ್ರದ್ಧೆ ಇಲ್ಲದವನಿಗೆ ಅರ್ಥವಾಗದಂತೆ** ಹೀಗೆ ಹಿಂದೆ ಮುಂದೆ ಮಾಡಿ ಹೇಳುತ್ತಿದ್ದಾನೆಂದು ಅರ್ಥವಾಗುತ್ತಿದೆ. ಏಸುವನ್ನು ಮಹಿಮೆಗೊಳಿಸುವುದಕ್ಕೆ ಮುಂಬರುವ ಆದರಣಕರ್ತ ಏಸು ಹೇಳಿರುವ ವಿಷಯಗಳನ್ನೇ ಹೇಳುತ್ತಾನೆಂದು ಹೇಳಿದ್ದಾನೆ. ಅಷ್ಟರಲ್ಲಿಯೇ 'ತಂದೆಗೆ ಸಂಬಂಧಿಸಿರುವವೆಲ್ಲವೂ ನನ್ನವೇಯೆಂದು'

ಹೇಳಿದ್ದಾನೆ. ತಂದೆ ಎಂದರೇ ದೇವರಾದ ಪರಿಶುದ್ಧಾತ್ಮ ಎಂದು ಅರ್ಥ. ದೇವರು ಹೇಳುವ ಜ್ಞಾನವೆಲ್ಲವೂ ನನ್ನದೇಯೆಂದು, ನನ್ನವುಗಳನ್ನೇ ಬಂದಿರುವ ಆತನು ಹೇಳುತ್ತಾನೆಂದು ಹೇಳಿರುವುದರಿಂದ ಪರಿಶುದ್ಧಾತ್ಮನೇ ಏಸು ಎಂದೂ, ಏಸವೇ ಪರಿಶುದ್ಧಾತ್ಮಯೆಂದು ತಿಳಿಯುತ್ತಿದೆ. **'ನಾನೇ ದೇವರು'** ಎನ್ನದೇ ಇನ್ನೊಂದು ವಿಧವಾಗಿ **'ದೇವರ ಮಾತುಗಳೆಲ್ಲಾ ನನ್ನವೇಯೆಂದು'** ಹೇಳಲಾಗಿದೆ.

## 65) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 16ನೇ ವಚನ.

## (16) ಸ್ವಲ್ಪ ಕಾಲವಾದ ನಂತರ ನೀವಿನ್ನು ನನ್ನನ್ನು ನೋಡುವುದಿಲ್ಲ. ಮತ್ತೆ ಸ್ವಲ್ಪ ಕಾಲಕ್ಕೆ ನನ್ನನ್ನು ನೋಡುತ್ತೀರೆಂದು ಹೇಳಿದನು.

ಏಸು ತನ್ನ ಶಿಷ್ಯರಿಗೆ ಸ್ವಲ್ಪ ಕಾಲದ ನಂತರ **'ನೀವಿನ್ನು ನನ್ನನ್ನು ನೋಡುವುದಿಲ್ಲ'** ಎಂದು ಹೇಳಿದ್ದಾನೆ. ಆ ಮಾತಿಗೆ ಅರ್ಥ ಆತನು ಪ್ರಜೆಗಳ ಮಧ್ಯದಲ್ಲಿ ಇಲ್ಲದೇ ಹೋಗುತ್ತಾನೆಂದು, ಆದ್ದರಿಂದ ಆತನು ಸ್ವಲ್ಪ ಕಾಲದ ನಂತರ ಕಾಣಿಸುವುದಿಲ್ಲವೆಂದು ಅರ್ಥವಾಗುತ್ತಿದೆ. 'ಮತ್ತೆ ಸ್ವಲ್ಪ ಕಾಲದ ನಂತರ ನನ್ನನ್ನು ನೋಡುತ್ತೀರೆಂದು' ಹೇಳಿದ್ದಾನೆ. ಏಸು ತಾನು ಏಸುವಾಗಿ ಕಾಣಿಸುವು ದಿಲ್ಲವೆಂದು, ಏಸು ಶರೀರವನ್ನು ಬಿಟ್ಟು ಹೋಗುತ್ತಾನೆಂದು ಆದ್ದರಿಂದ ಆತನನ್ನು ನೋಡಲಾರರೆಂದು ಅರ್ಥವಾಗುತ್ತಿದೆ. ಆದರೇ ಕೂಡಲೇ ಸ್ವಲ್ಪ ಕಾಲದ ನಂತರ ಪುನಃ ನನ್ನನ್ನು ನೋಡುತ್ತೀರೆಂದು ಹೇಳುವುದರಲ್ಲಿ ಅರ್ಥವೇನೋ ತಿಳಿಯದೇ ತಲೆ ಹಿಡಿದುಕೊಳ್ಳಬೇಕಾದ್ದೇ. **'ನಾನು ಕಾಣಿಸದಂತೆ ಹೋಗುತ್ತೇನೆಂದು'** ಹೇಳಿದ ನಂತರ **'ಪುನಃ ನನ್ನನ್ನು ನೋಡುತ್ತೀರಿ',** 'ನಾನು ಕಾಣಿಸುತ್ತೇನೆ' ಎನ್ನುವುದರಲ್ಲಿ ಆತನು ಸ್ವಲ್ಪ ಕಾಲ ಎಲ್ಲಾದರೂ ಬಚ್ಚಿಟ್ಟುಕೊಂಡು ಸ್ವಲ್ಪ ಕಾಲದ ನಂತರ ಹೊರಗೆ ಬಂದು ಕಾಣಿಸುತ್ತಾನಾ ಎಂದು ಕೆಲವರು ಕೇಳಬಲ್ಲರು. ಏಸು ಇದಕ್ಕು ಮೊದಲು ಕೂಡಾ "ನಾನು ಹೋಗುತ್ತೇನೆ, ನಾನು ಹೋಗದೇ ಹೊಸದಾಗಿ ಬರುವ ಆದರಣಕರ್ತ ನಿಮ್ಮ ಹತ್ತಿರ ಬರುವುದಿಲ್ಲ. ನಾನು ಹೋಗಿ ಆತನನ್ನು ಕಳುಹಿಸುತ್ತೇನೆ" ಎಂದು ಹೇಳಿದ್ದಾನೆ. ಸರಿ! ಅದೇ ಮಾತಿನ ಪ್ರಕಾರ

ಏಸು ಹೋಗಿದ್ದಾನೆ ಅಂದುಕೊಳ್ಳೋಣ. ಆದ್ದರಿಂದ ಸ್ವಲ್ಪ ಕಾಲವಾದ ನಂತರ 'ನಾನು ಕಾಣಿಸುವುದಿಲ್ಲ' ಎಂದಿದ್ದಾನೆ. ಬರುವ ಆದರಣಕರ್ತ ಕೂಡಾ ಏಸುವೇ ಆಗುವುದರಿಂದ ಸ್ವಲ್ಪ ಕಾಲದ ನಂತರ ನನ್ನನ್ನು ನೋಡಬಲ್ಲಿರೆಂದು ಹೇಳಿದ್ದಾನೆ. ಹೋಗುವವನು, ಪುನಃ ಬರುವವನು ಇಬ್ಬರೂ ಒಬ್ಬರೇಯೆಂದು ಹೇಳಿದರೇ ಮೇಲಿನ ವಾಕ್ಯಕ್ಕೆ ಅರ್ಥ ಸರಿ ಹೋಗುತ್ತದೆ ಆದರೆ, ಹೋಗುವವನಾದ ಏಸು, ಬರುವವನಾದ ಆದರಣಕರ್ತ ಇಬ್ಬರೂ ಒಬ್ಬರೇಯೆಂದು, ಆದ್ದರಿಂದ ಯಾರನ್ನು ನೋಡಿದರೂ ಒಬ್ಬನನ್ನು ನೋಡಿದಂತೆಯೇ ಆಗುತ್ತದೆಂದು, ಆದ್ದರಿಂದ ಏಸು ಮೇಲಿನ ವಾಕ್ಯವನ್ನು ಹೇಳಿದ್ದಾನೆಂದು ತಿಳಿಯುತ್ತಿದೆ.

**(66) ಯೋಹಾನ್ ಸುವಾರ್ತೆ 16ನೇ ಅಧ್ಯಾಯ, 17, 18, 19, 20, 21, 22 ವಚನಗಳು.**

**(17) ಆಗ ಆತನ ಶಿಷ್ಯರಲ್ಲಿ ಕೆಲವರು ಸ್ವಲ್ಪ ಕಾಲವಾದ ನಂತರ ನನ್ನನ್ನು ನೋಡುವುದಿಲ್ಲ. ಮತ್ತೆ ಸ್ವಲ್ಪ ಕಾಲಕ್ಕೆ ನನ್ನನ್ನು ನೋಡುತ್ತೀರ. ನಾನು ತಂದೆ ಬಳಿಗೆ ಹೋಗುತ್ತಿದ್ದೇನೆಂದೂ ಆತನು ನಮ್ಮೊಂದಿಗೆ ಹೇಳುತ್ತಿರುವ ಮಾತು ಏನೆಂದು ಒಬ್ಬನೊಂದಿಗೆ ಮತ್ತೊಬ್ಬರು ಹೇಳಿಕೊಂಡರು.**

**18) ಸ್ವಲ್ಪ ಕಾಲವೆಂದು ಆತನು ಹೇಳುತ್ತಿರುವುದೇನು? ಆತನು ಹೇಳುತ್ತಿರುವ ಸಂಗತಿ ನಮಗೆ ತಿಳಿಯದೆಂದು ಹೇಳಿಕೊಂಡರು.**

**19) ಅವರು ತನ್ನನ್ನು ಕೇಳಲು ಬಯಸುತ್ತಿದ್ದಾರೆಂದು ಏಸು ತಿಳಿದು ಅವರೊಂದಿಗೆ ಹೀಗೆಂದನು. 'ಸ್ವಲ್ಪ ಕಾಲವಾದ ನಂತರ ನೀವು ನನ್ನನ್ನು ನೋಡುವುದಿಲ್ಲ. ಮತ್ತೆ ಸ್ವಲ್ಪ ಕಾಲಕ್ಕೆ ನನ್ನನ್ನು ನೋಡುತ್ತೀರೆಂದು ನಾನು ಹೇಳಿರುವ ಮಾತನ್ನು ಕುರಿತು ನೀವು ಒಬ್ಬನೊಂದಿಗೆ ಮತ್ತೊಬ್ಬನು ಆಲೋಚಿಸಿ ಕೊಳ್ಳುತ್ತಿದ್ದೀರಾ?**

**20) ನೀವು ದುಖಿಃಸುವಿರಿ ಆದರೇ ಲೋಕವು ಸಂತೋಷಿಸುತ್ತದೆ. ನೀವು ದುಃಖಿಸುತ್ತೀರ ಆದರೇ ನಿಮ್ಮ ದುಃಖವು ಸಂತೋಷ ವಾಗುತ್ತದೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

**21) ಸ್ತ್ರೀ ಪ್ರಸವಿಸುವಾಗ ಆಕೆ ಘಳಿಗೆ ಬಂದಿರುವುದರಿಂದ ಆಕೆ ವೇದನೆ ಪಡುತ್ತಾಳೆ. ಆದರೇ ಶಿಶುವು ಜನ್ಮಿಸುತ್ತಲೇ ಲೋಕದಲ್ಲಿ ನರನು ಒಬ್ಬನು ಹುಟ್ಟಿದ್ದಾನೆನ್ನುವ ಸಂತೋಷದಿಂದ ಆಕೆ ಆವೇದನೆ ಯನ್ನು ಪುನಃ ನೆನಪಿಸಿಕೊಳ್ಳುವುದಿಲ್ಲ.**

**22) ಹಾಗೆಯೇ ನೀವೂ ಸಹ ಈಗ ದುಃಖಿಸುತ್ತಿದ್ದೀರ ಆದರೇ ನಿಮ್ಮನ್ನು ಪುನಃ ನೋಡುತ್ತೇನೆ. ಆಗ ನಿಮ್ಮ ಹೃದಯವು ಸಂತೋಷಿಸುತ್ತದೆ. ನಿಮ್ಮ ಸಂತೋಷವನ್ನು ಯಾರೂ ನಿಮ್ಮ ಬಳಿಯಿಂದ ತೆಗೆದುಹಾಕುವುದಿಲ್ಲ.**

ಇಲ್ಲಿ ಹೇಳಿರುವ ಆರು ವಾಕ್ಯಗಳನ್ನು ನೋಡಿದರೇ ಏಸು ಸ್ವಲ್ಪ ಕಾಲವಾದ ನಂತರ **"ನೀವು ನನ್ನನ್ನು ನೋಡುವುದಿಲ್ಲ. ಮತ್ತೆ ಸ್ವಲ್ಪ ಕಾಲಕ್ಕೆ ನನ್ನನ್ನು ನೋಡುತ್ತೀರೆಂದು"** ಹೇಳಿರುವ ಮಾತು ಅಲ್ಲಿನ ಪ್ರಜೆಗಳಿಗೆ ಅರ್ಥವಾಗದೇ ಹೋದಾಗ ಅದನ್ನು ಗ್ರಹಿಸಿದ ಏಸು ಅವರ ಅನುಮಾನವನ್ನು ಇಲ್ಲದೇ ಮಾಡುವುದಕ್ಕೆ ಪ್ರಸವಿಸುವ ಸ್ತ್ರೀಯನ್ನು ಉಪಮಾನವಾಗಿ ಹೇಳಿ ಆಕೆಯ ಹಾಗೆ ನೀವು ಸಹ ಪುನಃ ನಾನು ನಿಮ್ಮ ಬಳಿಗೆ ಬಂದಿದ್ದೇನೆಂದು ಹೇಳಿದ್ದಾನೆ. ನಾನಿಲ್ಲದೇ ಹೋಗುವುದು ನಿಮಗೆ ಸ್ವಲ್ಪ ಬಾಧೆಯಾದರೂ ನಂತರ ನನ್ನ ಬರುವಿಕೆಯಿಂದ ಆ ಬಾಧೆಯನ್ನು ಮರೆತು ಹೋಗುತ್ತೀರೆಂದು ಏಸು ಅಲ್ಲಿರುವ ವರಿಗೆ ಹೇಳಿದ್ದಾನೆಂದು ಮೇಲಿನ ವಾಕ್ಯಗಳಲ್ಲಿ ತಿಳಿಯುತ್ತಿದೆ.

**67) ಯೋಹಾನ್ ಸುವಾರ್ತೆ, 16ನೇ ಅಧ್ಯಾಯ, 25ನೇ ವಚನ.**

**25) ಈ ಸಂಗತಿಗಳು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ. ಆದರೇ ಎಂದಿಗೂ ಗೂಢಾರ್ಥವಾಗಿ ನಿಮ್ಮೊಂದಿಗೆ ಮಾತನಾಡದೇ ತಂದೆಯನ್ನು ಕುರಿತು ಸ್ಪಷ್ಟವಾಗಿ ತಿಳಿಸುವ ಘಳಿಗೆ ಬರುತ್ತಿದೆ.**

ಇದಕ್ಕು ಮೊದಲು ಹೇಳಿರುವ ವಾಕ್ಯಗಳು ನಿಗೂಢವಾಗಿ ಇವೆಯೆಂದು, ಮನುಷ್ಯರು ಅವುಗಳನ್ನು ಅರ್ಥ ಮಾಡಿಕೊಳ್ಳದೇ ತಬ್ಬಿಬ್ಬಾಗುವರೆಂದು ಹೇಳಿದ್ದೇವೆ. ಅದೇ ಮಾತನ್ನೇ ಏಸು ಹೇಳುತ್ತಾ ತಾನು ನಿಗೂಢವಾಗಿ ಅರ್ಥವಾಗದೇ ಹೇಳಿರುವುದು ನಿಜವೆಂದು ಒಪ್ಪಿಕೊಳ್ಳುತ್ತಾ **"ಮುಂಬರುವ ಕಾಲದಲ್ಲಿ ನಾನು ಹಾಗೆ ಹೇಳುವುದಿಲ್ಲ. ನಿಮಗೆ ಪ್ರತಿಯೊಂದೂ ಸ್ಪಷ್ಟವಾಗಿ ತಿಳಿಯುವಹಾಗೆ ಹೇಳುತ್ತೇನೆ"** ಎಂದು ಹೇಳಿದ್ದಾನೆ. ವಾಸ್ತವವಾಗಿ ಈ ವಾಕ್ಯವು ಕೂಡಾ ನಿಗೂಢವಾಗಿಯೇ ಇದೆಯೆಂದು ಹೇಳಬಹುದು. ನಾನು ಸ್ವಲ್ಪ ಕಾಲಕ್ಕೆ ಹೋಗುತ್ತಿದ್ದೇನೆಂದು ನಂತರ ಪರಿಶುದ್ಧಾತ್ಮದೊಂದಿಗೆ ಕೂಡಿರುವ ಆದರಣಕರ್ತ ಬರುತ್ತಾನೆಂದು, ಆತನು ಪ್ರತಿಯೊಂದನ್ನೂ ವಿಶಧಪಡಿಸಿ ಹೇಳುತ್ತಾನೆಂದು ಹೇಳಿರುವ ಏಸು, ನಾನು ಹೋಗದೇ ಆದರಣಕರ್ತ ಬರುವುದಿಲ್ಲವೆಂದು ಹೇಳಿರುವ ಏಸು, ನನ್ನ ಪಯಣ ನಿಮಗೆ ಬಾಧೆಯಾಗಿದ್ದರೂ, ನಂತರ ಬಂದಿರುವವನನ್ನು ನೋಡಿ ಸಂತಸಪಡುವಿರೆಂದು ಹೇಳಿರುವ ಏಸು, **"ಈಗಲೂ ಸಹ ನಾನು ಇಲ್ಲಿಯ ತನಕ ನಿಗೂಢವಾಗಿ ಹೇಳಿದ್ದೇನೆ. ಪುನಃ ನಾನು ಬಂದ ನಂತರ ಎಲ್ಲವನ್ನೂ ಅರ್ಥವಾಗುವ ಹಾಗೆ ಸ್ಪಷ್ಟವಾಗಿ ತಿಳಿಸುತ್ತೇನೆ"** ಎಂದು ಅನ್ನುತ್ತಿದ್ದಾನೆ. ಈ ಮಾತುಗಳನ್ನು ಅನುಸರಿಸಿ ಬರುವವನು ಬೇರೊಬ್ಬ ಆದರಣಕರ್ತನಾ ಇಲ್ಲವೇ ಈತನೇ ಪುನಃ ಬರುತ್ತಾನಾ? ಎಂಬ ಅನುಮಾನವು ಉಂಟಾಗುತ್ತಿದೆ. ಇಲ್ಲಿ ಈ ವಾಕ್ಯವು ಕೂಡಾ ಸಂದಿಗ್ಧವನ್ನೇ ಉಂಟುಮಾಡುತ್ತಿದೆ.

*****

**14) ಯೋಹಾನ್ ಪ್ರಕಟನೆ, 9ನೇ ಅಧ್ಯಾಯ, 4, 5, 6 ವಚನಗಳು.**

**(4) ನೊಸಲಿನಲ್ಲಿ ದೇವರ ಮುದ್ರೆ ಇಲ್ಲದ ಮನುಷ್ಯರಿಗೇ ಹೊರತು ಭೂಮಿ ಮೇಲಿರುವ, ಹುಲ್ಲಿಗಾದರೂ, ಯಾವ ಗಿಡಗಳಿಗಾದರೂ ಮತ್ತು ಯಾವ ವೃಕ್ಷಕ್ಕಾದರೂ, ಹಾನಿ ಉಂಟುಮಾಡಬಾರದೆಂದು ಅವುಗಳಿಗೆ ಆಜ್ಞೆ ಕೊಡಲಾಗಿದೆ.**

**(5) ಮತ್ತು ಅವರನ್ನು ಕೊಲ್ಲುವುದಕ್ಕೆ ಅಧಿಕಾರ ಕೊಟ್ಟಿಲ್ಲ, ಆದರೇ ಐದು ತಿಂಗಳವರೆಗು ಬಾಧಿಸುವುದಕ್ಕೆ ಅವುಗಳಿಗೆ ಅಧಿಕಾರ ಕೊಡಲಾಗಿದೆ. ಅವುಗಳಿಂದ ಉಂಟಾಗುವ ಬಾಧೆ ಚೇಳು ಮನುಷ್ಯನನ್ನು ಕುಟುಕಿದಾಗಿರುವ ಬಾಧೆಯ ಹಾಗೆ ಇರುತ್ತದೆ.**

**(6) ಆ ದಿನಗಳಲ್ಲಿ ಮನುಷ್ಯರು ಮರಣವನ್ನು ಹುಡುಕುತ್ತಾರೆ ಆದರೇ ಅದು ಅವರಿಗೆ ದೊರೆಯುವುದೇ ಇಲ್ಲ. ಸಾಯಬೇಕೆಂದು ಆಸೆ ಪಡುತ್ತಾರೆ ಆದರೇ ಮರಣವು ಅವರ ಹತ್ತಿರದಿಂದ ಓಡಿಹೋಗುತ್ತದೆ.**

ಈ ವಾಕ್ಯಗಳಿಂತಲೂ ಮೊದಲಿದ್ದ ಮೂರನೆಯ ವಾಕ್ಯದಲ್ಲಿ ಹೀಗಿದೆ. **(9–3)"ಹೊಗೆಯಿಂದ ಮಿಡತೆಗಳು ಭೂಮಿ ಮೇಲಕ್ಕೆ ಬಂದವು. ಭೂಮಿಯಲ್ಲಿರುವ ಚೇಳುಗಳಿಗೆ ಬಲವಿದ್ದ ಹಾಗೆ ಅವುಗಳಿಗೆ ಬಲವನ್ನು ಕೊಡಲಾಗಿದೆ"** ಎಂದು ಹೇಳಿದ್ದಾರೆ. ಹೊಗೆಯಿಂದ ಮಿಡತೆಗಳು ಬಂದವು ಎಂದಿದ್ದಾರೆ. ಇಲ್ಲಿ ಹೊಗೆ ಎಂದರೇ ಕಟ್ಟಿಗೆಗಳು ಉರಿಯುವುದರಿಂದ ಬರುವ ಹೊಗೆಯಂಥದ್ದು ಅಲ್ಲ. ಚಳಿಗಾಲ ಮುಂಜಾನೆ ವೇಳೆ ಸೂರ್ಯನು ಕಾಣಿಸದೇ ಆಕಾಶದಲ್ಲಿ ತುಂಬಿಕೊಂಡ ಹೊಗೆ ಮಂಜಿನಂಥ ಮೇಘವು ಎಂದು ತಿಳಿಯಬೇಕು. ಅಂತಹ ಮೇಘವು

ಸೂರ್ಯರಶ್ಮಿ ಕಡಿಮೆಯಾಗಿ ಕತ್ತಲೆಯಂತಿರುತ್ತದೆ. ಹೊಗೆ ಮೇಘವೊಂದರ ಮಸುಕು ಕತ್ತಲೆಯಿಂದ ಮಿಡತೆಗಳ ಗುಂಪುಗಳು ಬರುತ್ತವೆ. ಮಿಡತೆಗಳು ಗುಂಪು ಗುಂಪುಗಳಾಗಿ ಸೈನ್ಯದ ಹಾಗೆ ಭೂಮಿ ಮೇಲಕ್ಕೆ ಬರುವುದರಿಂದ ಅವುಗಳನ್ನು **'ಮಿಡತೆಗಳ ದಂಡು'** ಎಂದು ಪೂರ್ವವು ಕರೆಯುತ್ತಿದ್ದರು. ಇದ್ದಕ್ಕಿದ್ದ ಹಾಗೆ ಬರುವ ಮಿಡತೆ ದಂಡುಗಳು ಎಲ್ಲಿಂದ ಹುಟ್ಟಿಬರುತ್ತಿವೆಯೋ ಯಾರ ಊಹೆಗೂ ತಿಳಿಯದು. ವಾಸ್ತವವಾಗಿ ಮಿಡತೆ ದಂಡುಗಳು ಆಕಾಶದಲ್ಲಿರುವ ಮೇಘದಿಂದ ಬರುತ್ತಿವೆ. ಹೊಗೆಯಂತಹ ಮೇಘದಿಂದ ಬರುವ ಅವುಗಳ ಜನ್ಮ ಯಾರಿಗೂ ತಿಳಿದಿಲ್ಲ. ಅವು ಎಲ್ಲಿ ಹುಟ್ಟಿವೆಯೋ, ಎಲ್ಲಿ ಬೆಳೆದಿವೆಯೋ ತಿಳಿಯದೇ ಮಾಯೆಯಂತೆ ಅವು ಶೂನ್ಯದಲ್ಲಿ ಇರುವ ಹೊಗೆಯಿಂದ ಬರುತ್ತಿವೆ. ಹಾಗೆ ಬರುವವು ಕೆಲವು ನೂರರ ಸಂಖ್ಯೆಯಲ್ಲಿ, ಸಾವಿರ ಸಂಖ್ಯೆಯಲ್ಲಿ, ಲಕ್ಷಗಳ ಸಂಖ್ಯೆಯಲ್ಲಿ ಕೂಡಾ ಇರಬಹುದು.

ಹಾಗೆ ಬಂದಿರುವ ಮಿಡತೆ ದಂಡಿನಲ್ಲಿ ಮನುಷ್ಯರನ್ನು ಪೀಡಿಸುವ ಅನೇಕ ರೋಗಗಳು ಇರುತ್ತವೆ. ಅಷ್ಟೇ ಅಲ್ಲದೇ ಅವು ನೋಡುವುದಕ್ಕೆ ಮಿಡತೆಗಳೇ ಆದರೂ ದೇವರು ಕಳುಹಿಸಿರುವ ದೂತರ ಸೈನ್ಯವಾಗಿ ಇವೆ. ಮಾನವರನ್ನು ಪೀಡಿಸುವುದಕ್ಕೆ ದೇವರು ಆ ಮಿಡತೆಗಳ ದಂಡಿಗೆ ಆಜ್ಞೆ ಕೊಟ್ಟಿದ್ದಾನೆ. ದೇವರು ಕೊಟ್ಟಿರುವ ಆಜ್ಞೆಯಿಂದ ಮಿಡತೆಗಳ ಸೈನ್ಯವು ಮನುಷ್ಯರ ಮೇಲೆ ಅವುಗಳ ಪ್ರಭಾವವನ್ನು ತೋರಿಸುತ್ತಿರುತ್ತವೆ. ಅವು ಕಾಣಿಸದ ಜಾಗದಿಂದ ಬಂದ ಹಾಗೆ ಕಾಣಿಸದೆ ಇದ್ದು, ಅವು ಮನುಷ್ಯರನ್ನು ಕಚ್ಚಬಲ್ಲವು. ರೋಗಗಳ ರೂಪದಲ್ಲಿ ಶರೀರದಲ್ಲಿ ತೂರಿ ಮನುಷ್ಯರನ್ನು ಬಾಧಿಸಬಲ್ಲವು. ಭೂಮಿಯಲ್ಲಿ ಚೇಳುಗಳಿಗಿರುವಷ್ಟು ವಿಷ ಬಲವು ಅವುಗಳಿಗೆ ದೇವರು ಕೊಟ್ಟಿದ್ದಾನೆ. ಮನುಷ್ಯರು ಪಾಪ ಬಾಧೆಗಳನ್ನು ಅನುಭವಿಸುವುದಕ್ಕೆ ಕಾಣಿಸದ ಲೋಕದಿಂದ ಕಾಣಿಸುವ ಲೋಕದೊಳಗೆ ಬಂದಿರುವ ಮಿಡತೆಗಳ ದಂಡಿನಿಂದ ಮನುಷ್ಯರು ಅನೇಕ ಬಾಧೆಗಳು ಪಡಬೇಕಾಗಿದೆ. ಭೂಮಿ ಮೇಲಿರುವ ಮನುಷ್ಯರಿಗೆ ಹೊರತುಪಡಿಸಿ ಹುಲ್ಲಿಗಾಗಲೀ, ಗಿಡಗಳಿಗಾಗಲೀ, ವೃಕ್ಷಗಳಿಗಾಗಲೀ ಹಾನಿ ಉಂಟು ಮಾಡಬಾರದೆಂದು ಮಿಡತೆಗಳ ದಂಡುಗೆ ಆಜ್ಞೆ ಕೊಡಲಾಗಿದೆ. ಸಾಮಾನ್ಯವಾಗಿ ಮಿಡತೆಗಳು

ಎಂದರೇ ಹುಲ್ಲಿಗೆ, ಗಿಡಗಳಿಗೆ, ವೃಕ್ಷಗಳಿಗೆ ಹಾನಿ ಮಾಡುವವೆಂದು ಅಂದುಕೊಳ್ಳುತ್ತಾರೆ. ಆದರೆ ಈ ಮಿಡುತೆಗಳ ದಂಡು ಮನುಷ್ಯರಿಗೆ ಹೊರತುಪಡಿಸಿ ಹುಲ್ಲಿಗೆ, ಗಿಡಗಳಿಗೆ, ವೃಕ್ಷಗಳಿಗೆ ಹಾನಿ ಉಂಟುಮಾಡುವುದಿಲ್ಲವೆಂದು ವಾಕ್ಯದಿಂದ ತಿಳಿಯುತ್ತಿದೆ. ಅವುಗಳ ಜನ್ಮ ಏನು, ಅವುಗಳ ಆಹಾರವೇನು, ಎಂದು ತಿಳಿಯದ ಮನುಷ್ಯರಿಗೆ ಅವುಗಳ ಕೆಲಸ ಏನು? ಎಂದು ಕೂಡಾ ತಿಳಿದಿಲ್ಲ.

ಆದರೇ ಇಲ್ಲಿ ಹೇಳಿರುವ ನಾಲ್ಕು ವಾಕ್ಯಗಳನ್ನು ಅನುಸರಿಸಿ ನೋಡಿದಾಗ ಮಿಡತೆಗಳ ರೂಪದಲ್ಲಿ ಇರುವ ದೇವದೂತರ ದಂಡು (ಸೈನ್ಯವು) ಕೇವಲ ಮನುಷ್ಯರನ್ನು ಬಾಧಿಸುವುದಕ್ಕೇ ಎಂದು ವಾಕ್ಯದಿಂದ ತಿಳಿಯುತ್ತಿದೆ. ಮಿಡತೆಗಳ ರೂಪದಲ್ಲಿ ಬಂದಿರುವ ದೇವದೂತರ ಸೈನ್ಯಕ್ಕೆ ಮನುಷ್ಯರನ್ನು ಐದು ತಿಂಗಳವರೆಗು ಬಾಧಿಸುವ ಅಧಿಕಾರವಿದೆ ಆದರೇ, ಮನುಷ್ಯರನ್ನು ಸಾಯಿಸುವ ಅಧಿಕಾರ ಅವುಗಳಿಗೆ ಕೊಡಲಿಲ್ಲ. ಮಿಡತೆಗಳು ಕಾಣಿಸದೆ ಕಚ್ಚಿದರೆ ಅವು ರೋಗ ರೂಪದಲ್ಲಿ ಚೇಳು ಮನುಷ್ಯನನ್ನು ಕಚ್ಚಿದಾಗಿರುವ ಬಾಧೆಯಂತೆ ಇರುತ್ತದೆ. ಮನುಷ್ಯನ ಕರ್ಮವನ್ನು ಅನುಸರಿಸಿ ಚಿಕ್ಕ ಬಾಧೆಯಿಂದ ಚೇಳಿನ ವಿಷದ ಬಾಧೆ ಇರುವಷ್ಟು ಬಾಧೆವರೆಗು ಇರಬಹುದು. ಆದರೇ ಆ ಬಾಧೆಯಿಂದ ತಪ್ಪಿಸುವವರು ಯಾರೂ ಇಲ್ಲದೇ ತಪ್ಪದೇ ಅನುಭವಿಸಬೇಕಾಗಿ ಇರುತ್ತದೆ. ಬಾಧೆ ಹೆಚ್ಚಾದಾಗ, ಬಾಧೆಯನ್ನು ಭರಿಸಲಾರದೇ ಮನುಷ್ಯರು ಸಾವನ್ನು ಕೋರುತ್ತಾರೆಂದು ವಾಕ್ಯದಲ್ಲಿ ಹೇಳಿದ್ದಾರೆ. ಆದರೇ ಅವರು ಬಾಧೆ ಪಡಬೇಕಾಗಿರುವುದೇ ಹೊರತು ಸಾವು ಅವರ ಸನಿಹಕ್ಕೆ ಬಾರದೇ ದೂರ ಹೋಗುತ್ತದೆಂದು ಕೂಡಾ ಹೇಳಿದ್ದಾರೆ. ಏಕೆಂದರೇ! ದೇವದೂತರಾದ ಮಿಡತೆಗಳ ಬಾಧೆಗಳು ಮನುಷ್ಯರು ಅನುಭವಿಸಬೇಕಾಗಿರುವವೇ ಹೊರತು, ಅವರನ್ನು ಸಾಯಿಸುವುದಕ್ಕೆ ಅಧಿಕಾರ ಕೊಟ್ಟಿಲ್ಲವೆಂದು ಮೊದಲೇ ವಾಕ್ಯದಲ್ಲಿ ಹೇಳಿದ್ದಾರೆ.

ಕಾಣಿಸದ ಹೊಗೆ ಮೇಘದಿಂದ ಬಂದಿರುವ ಮಿಡತೆಗಳು ನೂರು ಬಾರಿ ಬಂದರೇ ಒಂದು ಬಾರಿ ಕಾಣಿಸುತ್ತವೆ. ಕಾಣಿಸದ ವಿಧವಾಗಿ ಬಂದು ಅವುಗಳ ಪ್ರಭಾವವನ್ನು ಅನೇಕ ರೀತಿಯಲ್ಲಿ ಮನುಷ್ಯರ ಮೇಲೆ ತೋರಿಸುತ್ತಿರುತ್ತವೆ.

ಅವುಗಳಿಂದ ರೋಗದ ರೂಪದಲ್ಲಾಗಲೀ, ಇನ್ನು ಯಾವ ರೂಪದಲ್ಲಾಗಲೀ ಹಾನಿ ಉಂಟಾಗಬಹುದು. ಅವುಗಳಿಂದ ಉಂಟಾಗುವ ಹಾನಿ ಮನುಷ್ಯರಿಗೇ ಎಂದು ನಿರ್ಣಯಿಸಿ ಹೇಳಲ್ಪಟ್ಟಿದೆ. ಹಾನಿ ಎಂದರೇ ಅದು ಯಾವ ರೂಪದಲ್ಲಾದರೂ ಇರಬಹುದು. ಬಂದಿರುವ ಹಾನಿಯಿಂದ ಮನುಷ್ಯ ಬಾಧೆ ಪಡುತ್ತಾನೆಂದು ವಾಕ್ಯದಲ್ಲಿ ಹೇಳಿದ್ದಾರೆ. ಆಜ್ಞೆ ಕೊಡಲ್ಪಟ್ಟಿರುವ ಅವುಗಳಿಂದ ಉಂಟಾಗುವ ಬಾಧೆಯಿಂದ ಮನುಷ್ಯ ಮರಣವನ್ನು ಹುಡುಕುತ್ತಾನೆ ಆದರೇ, ಅದು ಅವರಿಗೆ ಸಿಗುವುದೇ ಇಲ್ಲ ಎಂದು ಹೇಳಿದ್ದಾರೆ. ಸಹಿಸಲಾರದ ಬಾಧೆಯಿಂದ ಸಾಯಬೇಕೆಂದು ಆಸೆ ಪಟ್ಟರೂ, ಅವರಿಂದ ಮರಣವು ದೂರವಾಗಿ ಓಡಿಹೋಗುತ್ತದೆ. ಈ ವಿಧವಾಗಿ ಪ್ರಜೆಗಳ ಬಗ್ಗೆ ದೇವರು ಕಳುಹಿಸಿರುವ 'ಕಾಣಿಸದ ಮಿಡತೆಗಳು' ಎಂಬ ದೂತರಿಂದ ಕಾಣಿಸುವ ಅನೇಕ ಬಾಧೆಗಳು ಮನುಷ್ಯರಿಗೆ ಉಂಟಾಗುತ್ತಿದ್ದರೂ ಮನುಷ್ಯ ಬಾಧೆಗಳನ್ನು ಅನುಭವಿಸುತ್ತಾ ಆ ಬಾಧೆಗಳಿಗೆ ಕಾರಣ ಏನು? ಎಂದು ಸ್ವಲ್ಪವಾದರೂ ಆಲೋಚಿಸುತ್ತಿಲ್ಲ. ದೇವರ ವಾಕ್ಯಗಳಿಂದ ಬಾಧೆಗಳಿಂದ ಹೊರಬೀಳುವುದಿಲ್ಲ.

ಪ್ರಪಂಚದಲ್ಲಿ ಇಲ್ಲದ ರೋಗಗಳು ಬಂದು ಸೇರುತ್ತಿವೆಯೆಂದರೇ ಅವು ಎಲ್ಲಿಂದ ಹುಟ್ಟಿಬರುತ್ತಿವೆಂದು ಮನುಷ್ಯ ಆಲೋಚಿಸುತ್ತಿಲ್ಲ. ಒಂದು ಹೊಸ ರೋಗವು ಬಂದರೇ ಅದು ಹೊಸದೆಂದು ತಿಳಿಯುವುದಕ್ಕೆ ಸ್ವಲ್ಪ ಕಾಲ ಬೇಕಾದರೇ, ಅದಕ್ಕೆ ಔಷಧಿಯನ್ನು ಕಂಡುಹಿಡಿಯುವುದಕ್ಕೆ ಮತ್ತೆ ಸ್ವಲ್ಪ ಕಾಲ ಬೇಕಾಗುತ್ತದೆ. ಕೊನೆಗೆ ಹೊಸ ರೋಗಕ್ಕೆ ಔಷಧಿ ಕಂಡುಹಿಡಿದ ವರ್ಷಕ್ಕೇ ಮತ್ತೊಂದು ಅಂತ್ಯಸಿಗದ ಹೊಸದಾದ ರೋಗವು ಬಂದು ಮನುಷ್ಯರಲ್ಲಿ ಸೇರುತ್ತಿದೆ. ಹೀಗೆ ಕೆಲವು ರೋಗಗಳು ಬರುತ್ತಾ ಇದ್ದರೇ, ನಿಜಕ್ಕು ರೋಗ ವಲ್ಲದಂತಹ ಬಾಧೆಗಳು ಮನುಷ್ಯರನ್ನು ಅನುಭವಿಸುವಹಾಗೆ ಮಾಡುತ್ತಿವೆ. ರೋಗ ನಿರ್ಧಾರಣೆಗೆ ದೊರೆಯದ ಎಷ್ಟೋ ವ್ಯಾಧಿಗಳು, ಬಾಧೆಗಳು ಇವೆ. ಕಾಣಿಸದ ಶಕ್ತಿಗಳಿಂದ ಕೆಲವು ಬಾಧೆಗಳು ಉಂಟಾಗುತ್ತಿವೆಯೆಂದು ಕೆಲವರಿಗೆ ತಿಳಿದರೂ, ಅವುಗಳನ್ನು ಹೇಗೆ ಎದುರಿಸಬೇಕೋ ಯಾರಿಗೂ ತಿಳಿದಿಲ್ಲ. ಸೂಕ್ಷ್ಮ ರೂಪದಲ್ಲಿ ಕಾಣಿಸದೆ ಇರುವ ದೂತರಿಂದ ಉಂಟಾಗುವ ಬಾಧೆಗಳನ್ನು,

ರೋಗಗಳನ್ನು ತಿಳಿಯಲಾರದೇ ಮೂಕವಾಗಿ ಅನುಭವಿಸುವುದು ಬಿಟ್ಟರೇ ಬೇರೆ ಮಾರ್ಗವಿಲ್ಲ. **ಇಂತಹ ಬಾಧೆಗಳೆಲ್ಲವುಗಳಿಂದ ತಪ್ಪಿಸಿಕೊಳ್ಳಬೇಕೆಂದರೇ, ದೇವರು ತನ್ನ ದೂತರಿಗೆ ಹೇಳಿದ ಹಾಗೆ ಮನುಷ್ಯರು ದೇವರಿಗೆ, ದೇವರ ಶಕ್ತಿಗೆ ಗುರುತಾಗಿರುವ ದೇವರ ಮುದ್ರೆಯನ್ನು ಧರಿಸುವುದು ಒಂದೇ ಉಪಾಯವು. ದೇವರ ಮುದ್ರೆ ಧರಿಸದವರನ್ನೇ ಪೀಡಿಸಿರೆಂದು ತನ್ನ ದೂತರಿಗೆ ದೇವರು ಆಜ್ಞಾಪಿಸಿದ್ದಾನೆ.** ಕಾಣಿಸುವ ಮಿಡತೆಗಳಾಗಿ ಇರುವವು ಹುಲ್ಲಿಗೆ, ಗಿಡಗಳಿಗೆ, ವೃಕ್ಷಗಳಿಗೆ ಹಾನಿ ಎಂದು ಎಲ್ಲರೂ ಅಂದುಕೊಂಡರೂ, ವಾಕ್ಯದಲ್ಲಿ **"ಹಣೆಯಲ್ಲಿ ದೇವರ ಮುದ್ರೆ ಧರಿಸದವರನ್ನು ಮಾತ್ರವೇ ಬಾಧಿಸಿರೆಂದು ದೇವರು ಕಾಣಿಸದ ಮಿಡತೆಗಳ ರೂಪದಲ್ಲಿರುವ ತನ್ನ ದೂತರಿಗೆ ಆಜ್ಞೆ ಕೊಟ್ಟಹಾಗೆ ಇದೆ."** ದೇವರ ಮುದ್ರೆಯನ್ನು ಕುರಿತು ಅಂತಿಮ ದೈವಗ್ರಂಥದಲ್ಲಿ ಸೂರಾ 5, ಎರಡನೆಯ ಆಯತ್‌ನಲ್ಲಿ, ಹಾಗೇ ಸೂರಾ 22, 32ನೇ ಆಯತ್‌ನಲ್ಲಿ ಹೇಳಿದ್ದಾರೆ. ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಅಕ್ಷರ ಪರಬ್ರಹ್ಮ ಯೋಗದಲ್ಲಿ ದೇವರ ಮುದ್ರೆಯನ್ನು ಸೂಚನೆಯಾಗಿ ಹೇಳಿದ್ದಾರೆ. ನಮ್ಮ ರಚನೆಗಳಲ್ಲಿನ **"ದೇವರ ಮುದ್ರೆ"** ಎಂಬ ಗ್ರಂಥದಲ್ಲಿ ದೇವರ ಮುದ್ರೆ ಹೇಗೆ ಇರುತ್ತದೋ ಸವಿವರವಾಗಿ ಹೇಳಿದ್ದೇವೆ. ಇತರರು ಹೇಳಿರುವುದು ನಾವೇಕೆ ಕೇಳಬೇಕು? ಎಂದು ಅಂದುಕೊಳ್ಳದೇ ಇಂದಿಗಾದರೂ ದೇವರ ಮೇಲೆ ವಿಶ್ವಾಸವಿಟ್ಟು, ದೇವರ ಮುದ್ರೆಯನ್ನು ಧರಿಸಿರಿ. ದೇವರು, ದೇವರ ಮುದ್ರೆ ಒಂದು ಮತಕ್ಕೆ ಸಂಬಂಧಿಸಿರುವುದಲ್ಲ. ಮೂರು ದೈವಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ದೇವರ ಮುದ್ರೆಯನ್ನು ಧರಿಸದೆ ಹೋದರೇ ಉಂಟಾಗುವ ವಿಪತ್ತನ್ನು ಕುರಿತು ಬೈಬಲ್ ಗ್ರಂಥದಲ್ಲಿ 'ಪ್ರಕಟನೆ' ಗಳಲ್ಲಿ ಹೇಳಿದ್ದರೂ, ಕ್ರೈಸ್ಥರು ದೇವರ ಮುದ್ರೆಯನ್ನು ಧರಿಸದೆ ಅದಕ್ಕೆ ದೂರವಾಗಿ ಇರುವುದು ಅಜ್ಞಾನವಲ್ಲದೆ ಏನಾಗುತ್ತದೆ, ದೇವರ ವಿಶ್ವಾಸದಲ್ಲಿನ ಲೋಪವಲ್ಲದೆ ಮತ್ತೇನಾಗುತ್ತದೆ. **ನನ್ನ ಮಾತು ಕೇಳಿ ಎಲ್ಲ ಮತಗಳು ಇಲ್ಲಿಯತನಕ ತಿಳಿಯದ 'ದೇವರ ಮುದ್ರೆ'ಯನ್ನು ಧರಿಸಿರಿ. ಬಾಧೆಗಳಿಂದ 'ರಕ್ಷಣೆ' ಪಡೆಯಿರಿ.**

***** ಸಮಾಪ್ತಿ *****

# ಮೂರು ಬೆರಳುಗಳು

ಏಸು ಚಿತ್ರಪಟಗಳು ಅಪರೂಪವಾಗಿ ಆಗಾಗ ಎಲ್ಲಾದರೂ ಕಾಣಿಸುತ್ತಿರುತ್ತವೆ. ಆಗ ಏಸು ಚಿತ್ರವನ್ನು ಗಮನಿಸಿದರೇ **"ಆತನ ಬಲಗೈಯಲ್ಲಿ ತೋರಿಸುತ್ತಿರುವ ಮೂರು ಬೆರಳುಗಳು'** ಮುಖ್ಯವಾಗಿ ಕಾಣಿಸುತ್ತವೆ. ಏಸು ತನ್ನ ಜೀವಿತ ಕಾಲದಲ್ಲಿ ಸುಮಾರು ಮೂರು ವರ್ಷಗಳು ದೈವಜ್ಞಾನವನ್ನು ಹೇಳಿ ಹೋಗಿದ್ದಾನೆ. ಆತನು ಹೋದ ನಂತರ ಕೂಡಾ ಆತನ ಚಿತ್ರ ಪಟದಲ್ಲಿ ಪ್ರಜೆಗಳಿಗೆ ಜ್ಞಾನವನ್ನು ಬೋಧಿಸಿದ ಹಾಗೆಯೇ ಕಾಣಿಸುತ್ತಿದ್ದಾನೆ. ಯಾರ ಕಣ್ಣಿಗೆ ಹೇಗೆ ಕಾಣಿಸಿದರೂ, ನನ್ನ ಕಣ್ಣಿಗೆ ಕಾಣಿಸಿರುವ ದೃಶ್ಯದಲ್ಲಿ ನನ್ನ ಬುದ್ಧಿ ಗ್ರಹಿಸಿಕೊಂಡಿರುವುದು ಆತನು ಹೇಳಿರುವ ಜ್ಞಾನದಲ್ಲಿ ಸಾರಾಂಶವಾದ ವಾಕ್ಯವು ತಿಳಿಯುತ್ತಿದೆ. ಪ್ರಥಮ ದೈವಗ್ರಂಥದಲ್ಲಿ **ಕ್ಷರನು, ಅಕ್ಷರನು, ಪುರುಷೋತ್ತಮನು** ಎಂದು ದೇವರನ್ನು ಮೂವರಾಗಿ ಹೇಳಿದ ಹಾಗೆ, ಅಂತಿಮ ದೈವಗ್ರಂಥದಲ್ಲಿ **"ನಡೆಸಲ್ಪಡುವವನು, ನಡೆಸುವವನು, ಸಾಕ್ಷಿಯಾಗಿ ಇರುವವನು"** ಎಂದು ದೇವರನ್ನು ಮೂವರಾಗಿ ಹೇಳಿದಂತೆ, ದ್ವಿತೀಯ ದೈವಗ್ರಂಥದಲ್ಲಿ **"ಕುಮಾರನು, ತಂದೆ, ಪರಿಶುದ್ಧಾತ್ಮ"** ಎಂದು ಹೇಳಿದ್ದಾರೆ. ದೇವರ ಮೂರು ಅಂಶಗಳನ್ನು ಭಗವದ್ಗೀತೆ, ಬೈಬಲ್, ಖುರ್ಆನ್‌ಗಳಲ್ಲಿ ಒಂದೇ ಜ್ಞಾನವಾಗಿ ಹೇಳಿದ್ದಾರೆ. ಮೂರು ದೈವಗ್ರಂಥಗಳಲ್ಲಿಯೂ ಬಹಳ ಮುಖ್ಯವಾದ ಜ್ಞಾನವು ದೇವರವೊಂದು ಮೂರು ಅಂಶಗಳನ್ನು ತಿಳಿಯುವುದೇ. ದೇವರ ಮೂರು ಅಂಶಗಳು ತಿಳಿದ ದಿನ, ದೇವರ ಜ್ಞಾನವು ಸಂಪೂರ್ಣವಾಗಿ ಅರ್ಥವಾದಂತಾಗುತ್ತದೆ.

ಆದರೇ ಭಗವದ್ಗೀತೆ ಓದಿರುವ ಹಿಂದೂಗಳಿಗೆ ಕ್ಷರನು, ಅಕ್ಷರನೆನ್ನಲ್ಪಡುವ **ಜೀವಾತ್ಮ, ಆತ್ಮ,** ಯಾರೋ ತಿಳಿದಿಲ್ಲ. ಹಾಗೇ ಬೈಬಲ್‌ನಲ್ಲಿ ಹೇಳಿರುವ **ಕುಮಾರನು, ತಂದೆ** ಎನ್ನುವ ಇಬ್ಬರು ಯಾರೋ ಕ್ರೈಸ್ತರಿಗೆ ತಿಳಿಯುತ್ತಿಲ್ಲ. ಅದೇ ವಿಧವಾಗಿ **ನಡೆಸಲ್ಪಡುವವನು, ನಡೆಸುವವನು** ಯಾರೋ ಮುಸ್ಲೀಮರಿಗೆ ತಿಳಿದಿಲ್ಲ. ನಾನು ಬರೆದಿರುವ ಭಗವದ್ಗೀತೆಯಲ್ಲಿ ಶರೀರದಲ್ಲಿ ನಾಶವಾಗುವವನು,

ನಾಶವಾಗದವನು ಆದ **ಜೀವಿಯು, ದೇವರು** ಯಾರೋ ಹಿಂದೂಗಳಿಗೆ ತಿಳಿದಿಲ್ಲವೆಂದು ಹೇಳಿದ್ದೇನೆ. ಹಾಗೇ ನಾನು ಬರೆದಿರುವ ಬೈಬಲ್ ವಾಕ್ಯಗಳಲ್ಲಿ **ಕುಮಾರನು, ತಂದೆ** ಎನ್ನಲ್ಪಡುವ ಇಬ್ಬರು ಕುಮಾರರ ವಿವರವು ಕ್ರೈಸ್ಥರಿಗೆ ತಿಳಿದಿಲ್ಲವೆಂದು ಹೇಳಿದ್ದೇನೆ. ಹಾಗೆಯೇ ನಾನು ಬರೆದಿರುವ ಖುರ್ಆನ್‌ನಲ್ಲಿ **"ವಜ್ರ ವಾಕ್ಯಗಳು"** ಎಂಬ ಗ್ರಂಥದಲ್ಲಿ **ಇಬ್ಬರು ಅಲ್ಲಾಹ್‌ರ**ನ್ನು ಕುರಿತು ಮುಸ್ಲೀಮರಿಗೆ ತಿಳಿದಿಲ್ಲವೆಂದು ಹೇಳಿದ್ದೇನೆ. ಮೂರು ಮತಗಳವರಿಗೆ ಅವರ ಗ್ರಂಥಗಳಲ್ಲಿನ ಮುಖ್ಯ ಸಾರಾಂಶವಾದ ದೇವರವೊಂದು ಮೊದಲ ಎರಡು ಭಾಗಗಳನ್ನು ಕುರಿತು ಸ್ವಲ್ಪವಾದರೂ ತಿಳಿದಿಲ್ಲ. ಎಲ್ಲರಿಗೂ ತಿಳಿದಿರುವುದು 'ದೇವರು' ಎನ್ನುವ ಮಾತು ಮಾತ್ರವೇ. ಎಲ್ಲರೂ ಅವರಿಗೆ ತಿಳಿಯದೇ ಮೂರನೆಯ ಭಾಗವಾದ ಭಗವದ್ಗೀತೆಯಲ್ಲಿ **ಪುರುಷೋತ್ತಮನಾಗಿ** ಇರುವವನನ್ನು, ಬೈಬಲ್‌ನಲ್ಲಿ **ಪರಿಶುದ್ಧಾತ್ಮನನ್ನು**, ಖುರ್ಆನ್‌ನಲ್ಲಿ ಸಾಕ್ಷಿಯಾಗಿರುವ **ಅಲ್ಲಾಹ್‌ನನ್ನು** ಆರಾಧಿಸುತ್ತಿದ್ದಾರೆ. ಎಲ್ಲಾ ಆರಾಧನೆಗಳಿಗೆ, ಎಲ್ಲಾ ಧರ್ಮಗಳಿಗೆ ಅತೀತನಾದ ಮೂರನೆಯವನಾದ ದೇವರನ್ನು ಆರಾಧಿಸುವುದು ಸರಿಯಾದ ಕೆಲಸವಲ್ಲ ಎಂದು ದೇವರೇ ಹೇಳಿದ್ದಾನೆ. ಆದರೂ ಎಲ್ಲರೂ **"ಯಾವ ಅಕ್ಕರೆ ಇಲ್ಲದ ದೇವರನ್ನು"** ಆರಾಧಿಸುತ್ತಿದ್ದಾರೆ. ಆತನಿಗೆ ನಮ್ಮ ಆರಾಧನೆಗಳು ಅಕ್ಕರೆ ಇಲ್ಲವೆಂದು, ನಮಗೆ ತಿಳಿಯದೇ ಹೋಗುವುದು ಮನುಷ್ಯರ ಅಜ್ಞಾನವೇಯೆಂದು ಹೇಳಬಹುದು.

ಈಗ ಕ್ರೈಸ್ಥರ ವಿಷಯಕ್ಕೆ ಬಂದರೇ ಅವರ ಗ್ರಂಥದಲ್ಲಿ ಹೇಳಿರುವ **"ಇಬ್ಬರು ಕುಮಾರರ"** ವಿಷಯವು ಅವರಿಗೆ ತಿಳಿಯದೇ ಹೋಗಿದೆ. ಕುಮಾರರೆಂದು ಹೇಳಿದರೇ ಅವರು **'ಒಬ್ಬನೇ ಕುಮಾರನು'** ಎಂದು ಹೇಳುತ್ತಿದ್ದಾರೆ. ಇಬ್ಬರು ಕುಮಾರರ ಜ್ಞಾನವು ಸ್ವಲ್ಪವಾದರೂ ತಿಳಿದಿಲ್ಲ. **ಶಾಶ್ವತ ಕುಮಾರನು, ತಾತ್ಕಾಲಿಕ ಕುಮಾರನು** ಎಂಬ ಇಬ್ಬರು ಕುಮಾರರು ಇದ್ದಾರೆಂದು ತಿಳಿಯದೇ ಹೋಗಿದೆ.

ಅವರನ್ನೇ **ಕುಮಾರನು, ಅದ್ವಿತೀಯ ಕುಮಾರನು** ಎಂದು ಎರಡು ವಿಧಗಳು ಬೈಬಲ್ ಗ್ರಂಥದಲ್ಲಿ ಹೇಳಿದ್ದರೂ ಯಾರು ಕುಮಾರನೋ, ಯಾರು ಅದ್ವಿತೀಯ ಕುಮಾರನೋ ಏನೂ ತಿಳಿಯದಂತೆ ಹೋಗಿದೆ. ಯಾವ ಮತದಲ್ಲಿ ಯಾವ ಮನುಷ್ಯನಿಗಾದರೂ **ತಂದೆಯಾದ ದೇವರು, ತಾತನಾದ ದೇವರು ಇಬ್ಬರು ದೇವರುಗಳಿದ್ದಾರೆಂದು ತಿಳಿದಿಲ್ಲ**. ಇರುವ ಸತ್ಯವನ್ನು ಶಾಸ್ತ್ರಬದ್ಧವಾಗಿ ಗ್ರಂಥದಲ್ಲಿ ತೋರಿಸಿದರೂ, ಅರ್ಥವಾದರೂ ನಂಬಲಾರದ ಸ್ಥಿತಿಯಲ್ಲಿ ಕೆಲವರಿರುವಾಗ, ಕೆಲವರು ಅರ್ಥವಾಗದ ಸ್ಥಿತಿಯಲ್ಲಿ ಇಬ್ಬರು ದೇವರುಗಳು ಇಲ್ಲವೇ ಇಲ್ಲವೆಂದು ಹೇಳುತ್ತಿದ್ದಾರೆ. ಇರುವುದು ಒಬ್ಬನೇ ದೇವರೆಂದು ಹೇಳುತ್ತಿದ್ದಾರೆ. ದೈವಗ್ರಂಥಗಳಲ್ಲಿ ಕೂಡಾ ನೀವು ಆರಾಧಿಸಬೇಕಾದ ದೇವರು ಒಬ್ಬನೇಯೆಂದು ಹೇಳಿದ್ದಾರೆ. ಆದರೇ ಆ ಒಬ್ಬ ದೇವರು ತಂದೆನಾ, ತಾತನಾ ಎಂದು ತಿಳಿಯದಂತೆ ಹೋಗಿದೆ.

ದೈವಜ್ಞಾನ ಸ್ವಲ್ಪ ತಿಳಿದವರು, ದೈವಗ್ರಂಥಗಳನ್ನು ಓದಿದವರು ಅವರಿಗೆ ಅರ್ಥವಾದ ದಾರಿಯಲ್ಲಿ ಒಬ್ಬ ದೇವರನ್ನೇ ಆರಾಧಿಸುತ್ತಿದ್ದರೂ, ಆರಾಧಿಸಬೇಕಾದ ತಂದೆ ದೇವರನ್ನು ಬಿಟ್ಟು, ಆರಾಧಿಸಬಾರದ ತಾತ ದೇವರನ್ನು ಆರಾಧಿಸುತ್ತಿದ್ದಾರೆ. **ತಂದೆ ದೇವರು, ತಾತ ದೇವರು** ಅಂದರೇ ಅದೇನೋ ಹೊಸ ಪ್ರಪಂಚದಲ್ಲಿನ ಮಾತಿನ ಹಾಗೆ ಕಾಣಿಸುತ್ತಿದೆ. ಆ ವಿಷಯವು ತಮ್ಮ ತಮ್ಮ ದೈವಗ್ರಂಥಗಳಲ್ಲಿ ಇದೆಯೆಂದು ತಿಳಿಯಲಾರದೇ ಹೋಗುತ್ತಿದ್ದಾರೆ. ಅವರಿಗೆ ಸತ್ಯಸಮೇತವಾದ ಜ್ಞಾನವು ಅರ್ಥವಾಗದೆ ಹೋಗುವುದಲ್ಲದೆ ತಮಗೆ ಸತ್ಯವನ್ನು ಹೇಳಿರುವವರ ಮೇಲಕ್ಕೆ ಎದುರು ತಿರುಗಿ ನೀವು ಹೇಳಿರುವುದು ಜ್ಞಾನವೇ ಅಲ್ಲವೆನ್ನುತ್ತಿದ್ದಾರೆ. ಈಗ ನಾನು ಬರೆದ ಬೈಬಲ್ ಸಮಾಚಾರದಲ್ಲಿರುವ **ಮನುಷ್ಯ ಕುಮಾರನು, ದೇವರ ಕುಮಾರನು** ಎಂಬ ಇಬ್ಬರ ಕುಮಾರರು ಇದ್ದಾರೆಂದು, ಅವರನ್ನು ಬಿಟ್ಟು ತಾತ ಸ್ಥಾನದಲ್ಲಿರುವ ಪರಿಶುದ್ಧಾತ್ಮನನ್ನು, ಪ್ರಾರ್ಥಿಸಬಾರದು, ಆರಾಧಿಸಬಾರದು ಎಂದು ಹೇಳಿದರೇ ಇಷ್ಟು ದಿನಗಳು ಪರಿಶುದ್ಧಾತ್ಮನನ್ನು

ದೇವರೆಂದು ಹೇಳುತ್ತಾ, ದೇವರನ್ನು ಆರಾಧಿಸುವವರಿಗೆ ಅರ್ಥವಾಗದ ಸ್ಥಿತಿ ಏರ್ಪಟ್ಟಿದೆ. ಏಸು ತನ್ನ ಬೋಧನೆಗಳಲ್ಲಿ ಇಬ್ಬರು ಕುಮಾರರನ್ನು, ಪರಿಶುದ್ಧಾತ್ಮನವೊಂದು ಸ್ಥಿತಿಯನ್ನು ದೊಡ್ಡದಾಗಿ ಬೋಧಿಸಿರುವುದೆ ಅಲ್ಲದೇ ಆತನು ಹೋದ ನಂತರ ಕೂಡಾ ಆತನ ಚಿತ್ರಪಟದಲ್ಲಿ **"ಇಬ್ಬರು ಕುಮಾರರನ್ನು ಅವರಿಗೆ ತಂದೆಯಾದ ಪರಿಶುದ್ಧಾತ್ಮ"ವನ್ನು** ಕುರಿತು ಹೇಳಿದ ಹಾಗೆಯೇ ತನ್ನ ಕೈಬೆರಳುಗಳ ಮೂಲಕ ತೋರಿಸುತ್ತಿರುವ ಹಾಗೆ ಕಾಣಿಸುತ್ತಿದೆ. ಏಸು ಬಲಗೈಯನ್ನು ಎತ್ತಿ ತೋರಿಸುತ್ತಾ ತೋರುಬೆರಳನ್ನು, ಅದರ ಪಕ್ಕದಲ್ಲಿರುವ ಬೆರಳನ್ನು ಸೇರಿಸಿ ಎರಡು ಬೆರಳುಗಳನ್ನು ತೋರಿಸುತ್ತಿದ್ದಾನೆ. ಹಾಗೆಯೇ ಆ ಎರಡು ಬೆರಳುಗಳ ಪಕ್ಕದಲ್ಲಿ ಕೆಳಗಿನ ಭಾಗದಲ್ಲಿರುವ ಹೆಬ್ಬೆರಳನ್ನು ಕೂಡಾ ತೋರಿಸುತ್ತಿದ್ದಾನೆ. ಈ ವಿಧವಾಗಿ ತೋರಿಸುವುದರಲ್ಲಿ ಹೆಬ್ಬೆರಳನ್ನು ಪರಿಶುದ್ಧಾತ್ಮ ವಾಗಿ ಹೇಳಿದ ಹಾಗೆ ನನ್ನ ಬುದ್ಧಿಗೆ ಗ್ರಾಹಿತವಾಗುತ್ತಿದೆ. ಬುದ್ಧಿಗೆ ಗ್ರಾಹಿತ ಶಕ್ತಿಯನ್ನು ಕೊಡುವವನು ದೇವರೇ ಆಗಿರುವುದರಿಂದ ಸತ್ಯವಾದ ಜ್ಞಾನದ ಪ್ರಕಾರ, ಪರಿಶುದ್ಧಾತ್ಮ ನಂತರ ತಂದೆ, ಕುಮಾರನಾಗಿ ಇರುವ ಇಬ್ಬರನ್ನು ಎರಡು ಬೆರಳುಗಳಿಂದ ತೋರಿಸುತ್ತಿದ್ದಾನೆ. ಆ ಎರಡು ಬೆರಳುಗಳು ತಂದೆ, ಮಗನನ್ನು ತೋರಿಸುವಂತಿದ್ದರೂ ಇಬ್ಬರು ಕುಮಾರರಾಗಿ ತಿಳಿಯುವ ಹಾಗೆ ಮಾಡಿದ್ದಾರೆ. ಅವರೇ ಶಾಶ್ವತ, ಅಶಾಶ್ವತ ಕುಮಾರರೆಂದು ತಿಳಿಯುತ್ತಿದೆ. ಈ **'ಇಬ್ಬರು ಕುಮಾರರು ತಿಳಿಯದೇ ಪರಿಶುದ್ಧಾತ್ಮ ತಿಳಿಯಲ್ಪಡುವುದಿಲ್ಲ'** ಎಂದು ಗ್ರಂಥದ ವೊಂದು ಸಾರಾಂಶದಲ್ಲಿ ತಿಳಿದಿದೆ. ಮಾನವ ಸಮಾಜವು ಒಟ್ಟಾರೆ ತಿಳಿಯಬೇಕಾಗಿರುವ ಆಧ್ಯಾತ್ಮಿಕ ರಹಸ್ಯವು **"ಇಬ್ಬರು ಕುಮಾರರ ವಿಷಯವೇ"** ಎಂದು ಪ್ರತಿ ಮನುಷ್ಯ ತಿಳಿಯಬೇಕು. ಈ ವಿಷಯವನ್ನು ಗುರುತು ಮಾಡುತ್ತಿರುವಂತೆ ಪಕ್ಕದ ಪುಟದಲ್ಲಿರುವ ಏಸು ಚಿತ್ರದಲ್ಲಿನ ಆತನ ಮೂರು ಬೆರಳುಗಳನ್ನು ನೋಡಿರಿ.



# ಶುಭ ಶುಕ್ರವಾರವಾ–ಅಶುಭ ಶುಕ್ರವಾರವಾ

ಮನುಷ್ಯನಿಗೆ ಸಂತೋಷ ಉಂಟಾಗುವ ಸಂಘಟನೆಗಳು, ದುಃಖ ಉಂಟಾಗುವ ಸಂಘಟನೆಗಳು ಕೆಲವು ಜೀವನದಲ್ಲಿ ಬರುತ್ತಿರುತ್ತವೆ. ಸಂತೋಷದಲ್ಲಿ ವಿಕಾಸವನ್ನು ಹೊಂದಿರುವುದು, ದುಃಖದಲ್ಲಿ ಕುಗ್ಗಿಹೋಗಿ ಇರುವುದು ನಡೆಯುತ್ತಿರುತ್ತದೆ. ದುಃಖವಿರುವಾಗ ಅನ್ನ ಪಾನೀಯಗಳ ಮೇಲೆ ಕೂಡಾ ಗಮನ ಇರುವುದಿಲ್ಲ, ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಅದೇ ಸಂತೋಷ ಸಂಘಟನೆಯಲ್ಲಿ ಒಳ್ಳೆಯ ಆಹಾರವನ್ನು ತೆಗೆದುಕೊಳ್ಳುವುದು, ಒಳ್ಳೆಯ ಬಟ್ಟೆಗಳನ್ನು ಧರಿಸುವುದು ನಡೆಯುತ್ತಿರುತ್ತದೆ. 'ನರಕಾಸುರ ವಧೆ' ನಡೆದ ದಿನದಲ್ಲಿ ದುರ್ಮಾರ್ಗನು ಸತ್ತುಹೋಗಿದ್ದಾನೆ, ಕೊಲ್ಲಲ್ಪಟ್ಟಿದ್ದಾನೆ ಎಂದು ಪಟಾಕಿಗಳನ್ನು ಸುಟ್ಟು, ದೀಪಾವಳಿ ಹಬ್ಬ ಮಾಡಿಕೊಳ್ಳುವುದು ನಡೆಯುತ್ತಿದೆ. ಪೂರ್ವವು ಏಸುವನ್ನು ನ್ಯಾಯ ಸ್ಥಾನದಲ್ಲಿ ನಿಲ್ಲಿಸಿ, ಆತನಿಗೆ ಮರಣ ಶಿಕ್ಷೆ ಜಾರಿ ಮಾಡಿಸಿರುವ ಶಾಸ್ತ್ರಿಗಳು, ಫರಿಸಯ್ಯರು, ಪಂಡಿತರು ಆದವರು ತಮಗೆ ಪೈಪೋಟಿಯಾಗಿದ್ದ ಏಸು ಸತ್ತು ಹೋಗಿರುವುದಕ್ಕೆ ಸಂತೋಷಿಸಿ, ಪ್ರತಿ ವರ್ಷ ಏಸು ಸತ್ತು ಹೊದ ಶುಕ್ರವಾರ ದಿನವನ್ನು ಶುಭ ಶುಕ್ರವಾರವಾಗಿ ಲೆಕ್ಕಿಸಿ ಹಬ್ಬ ಮಾಡಿಕೊಳ್ಳುತ್ತಿದ್ದರು. ಆ ದಿನವು ಅವರಿಗೆ ಸಂತೋಷಕರವಾದ ದಿನವಾದ್ದರಿಂದ ಹಾಗೆ ಹಬ್ಬದ ಕಾರ್ಯವನ್ನು ಮಾಡುತ್ತಿದ್ದರು. ಅಂದಿನಿಂದ ಇಂದಿನವರೆಗು ಆ ಹಬ್ಬ 'ಶುಭ ಶುಕ್ರವಾರ' ಎಂಬ ಹೆಸರಿನಿಂದ ನಡೆಯುತ್ತಲೇ ಇದೆ.

ಏಸು ದೊಡ್ಡತನ ತಿಳಿಯದ ಮೊದಲ ದಿನಗಳಲ್ಲಿ ಶಾಸ್ತ್ರಿಗಳು, ಪಂಡಿತರು ಹಬ್ಬ ಮಾಡಿಕೊಳ್ಳುವುದು ನೋಡಿ ಉಳಿದವರೆಲ್ಲರೂ ಹಬ್ಬ ಮಾಡಿಕೊಳ್ಳುತ್ತಿದ್ದರು. ಆ ದಿನ ಏಸುಪ್ರಭುವಿನ ಬೆಲೆ, ಆತನ ಜ್ಞಾನ ತಿಳಿಯದ ದಿನಗಳಲ್ಲಿ ಹಾಗೆ ನಡೆದಿದೆ. ಪ್ರಸ್ತುತ ಕಾಲದಲ್ಲಿ ಏಸು ಜ್ಞಾನವನ್ನು ತಿಳಿದವರು ಕೂಡಾ ಏಸು ಸತ್ತುಹೋದ ದಿನವನ್ನು ಶುಭ ಶುಕ್ರವಾರವೆಂದು ಹೇಳಿಕೊಳ್ಳುತ್ತಾ ಹಬ್ಬ ಮಾಡಿಕೊಳ್ಳುವುದು ನಡೆಯುತ್ತಿದೆ. ಶುಭದಿನವಾಗಲೀ, ಒಳ್ಳೆಯದು ನಡೆದ ದಿನವಾಗಲೀ ಸಂತೋಷದಿಂದ ಹಬ್ಬ ಮಾಡಿಕೊಳ್ಳಬಹುದು ಆದರೇ, ಏಸು

ಸತ್ತುಹೋದ ದಿನವು ಆತನ ಭಕ್ತರಿಗೆ ಬಾಧಕರವಾದ ದಿನವಾಗಿ ಇದ್ದು, ಆತನ ಮರಣ ನೆನಪುಮಾಡಿಕೊಂಡು ದುಃಖಿಸುವುದು ಹೋಗಿ, ಸಂತೋಷವಾಗಿ ಹೊಸ ಬಟ್ಟೆಗಳು ಧರಿಸಿ, ಒಳ್ಳೆಯ ಆಹಾರವನ್ನು ತೆಗೆದುಕೊಳ್ಳುತ್ತಾ, ಹಬ್ಬ ಮಾಡಿಕೊಳ್ಳುವುದನ್ನು ನೋಡಿದರೇ ಕ್ರೈಸ್ಥರೆಂದು ಹೆಸರಿಟ್ಟುಕೊಂಡು, ಏಸೇ ನಮ್ಮ ದೇವರೆಂದು ಹೇಳುವವರು ಆ ಕೆಲಸವನ್ನು ಮಾಡುವುದು ಆಶ್ಚರ್ಯವಾಗಿ ಇದೆ.

ವಾಸ್ತವವಾಗಿ ಏಸು ಕೊಲ್ಲಲ್ಪಟ್ಟ ಆ ದಿನವನ್ನು 'ಅಶುಭ ದಿನ' ವಾಗಿ ತಿಳಿದು, ಬಾಧೆಯನ್ನು ವ್ಯಕ್ತಪಡಿಸುತ್ತಾ, ಆಹಾರ ಪಾನೀಯಗಳನ್ನು ತೆಗೆದುಕೊಳ್ಳದೇ ದಿಗಿಲು ಪಡುವುದು ಬಿಟ್ಟು, ಸಂತೋಷವಾಗಿ ಹಬ್ಬ ಮಾಡಿಕೊಳ್ಳುತ್ತಾ, ಅದೇನೋ ಶುಭಕರವಾದ ಒಳ್ಳೆಯ ದಿನ ಅನ್ನುವಂತೆ 'ಶುಭ ಶುಕ್ರವಾರ' ಎಂದು ಹೇಳಿಕೊಳ್ಳುವುದು ನಿಜವಾಗಿ ವಿಚಿತ್ರವಾಗಿದೆ ಅಲ್ಲವೇ! ಏಸುವನ್ನು ಮನೆ ದೇವರಾಗಿ ಹೇಳಿಕೊಳ್ಳುವವರು ಕೂಡಾ ಹಬ್ಬ ಮಾಡಿಕೊಳ್ಳುತ್ತಿದ್ದಾರೆಂದರೇ ಅವರಿಗೆ ಏಸುವಿನ ಬೆಲೆ ತಿಳಿದಿಲ್ಲವೆಂದು ಹೇಳದೇ ತಪ್ಪುವುದಿಲ್ಲ. ನಿಜವಾಗಿ ಏಸುವನ್ನು ದೊಡ್ಡದಾಗಿ ಆರಾಧಿಸುವವರು ಆ ದಿನವನ್ನು ಅಶುಭ ಶುಕ್ರವಾರವಾಗಿ ಲೆಕ್ಕಿಸಬೇಕು, ವಿಚಕ್ಷಣ ಇಲ್ಲದೇ ಪ್ರವರ್ತಿಸುವ ಪ್ರಜೆಗಳಿಗೆ ಬೋಧಕರಾದವರು ಅಶುಭ ಶುಕ್ರವಾರವನ್ನು ಕುರಿತು ಬೋಧಿಸಿ ಯಾರೂ ಹಬ್ಬ ಮಾಡಿಕೊಳ್ಳದಂತೆ ಹೇಳಬೇಕಾಗಿರುವ ಜವಾಬ್ದಾರಿ ಬೋಧಕರಿಗೆ ಇದೆ. ಸತ್ತ ದಿನಕ್ಕು, ಹುಟ್ಟಿರುವ ದಿನಕ್ಕು ವ್ಯತ್ಯಾಸ ತಿಳಿಯದೆ ಬದುಕುವವರಿಗೆ ದೇವರ ಜ್ಞಾನದಲ್ಲಿನ ಔನ್ನತ್ಯವು ಕೂಡಾ ಏನೂ ತಿಳಿದಿಲ್ಲ. ನಮ್ಮ ಮನೆಯಲ್ಲಿ ಕುಟುಂಬದ ದೊಡ್ಡವರು ಸತ್ತುಹೋದರೇ ಆ ಕುಟುಂಬದವರೆಲ್ಲರೂ ಅತ್ತು ಬಾಧೆಪಡುತ್ತಾರೆ. ಹಾಗಿರುವಾಗ ಮನೆಯವರಿಗಿಂತ ಹೆಚ್ಚಾಗಿ ಗೌರವಿಸಬೇಕಾಗಿರುವ ಏಸು ಸತ್ತುಹೋದಾಗ ಅದಕ್ಕಾಗಿ ಮನೆ ಯಜಮಾನನಿಗಿಂತಲೂ ಹೆಚ್ಚು ಬಾಧೆಪಡಬೇಕಾಗಿರುತ್ತದೆ. ಹಾಗೆ ಬಾಧೆಪಡದೆ, ಶುಭ ದಿನವೆಂದು ಹೇಳುತ್ತಾ ಹಬ್ಬ ಮಾಡಿಕೊಳ್ಳುವುದು ದೊಡ್ಡ ತಪ್ಪು ಮಾಡಿದಂತಾಗುತ್ತದೆ. **"ತಾಯಿ ತಂದೆಯರನ್ನಾದರೂ, ಹೆಂಡತಿ**

**ಮಕ್ಕಳನ್ನಾದರೂ, ಅಣ್ಣ ತಮ್ಮಂದಿರನ್ನಾದರೂ ನನಗಿಂತಲೂ ಹೆಚ್ಚು ಪ್ರೀತಿಸುವವನು ನನ್ನ ದಯೆಗೆ ಪಾತ್ರನಲ್ಲ"** ಎಂದು ಏಸು ಹೇಳಿರುವಾಗ, ಮನೆಯಲ್ಲಿನವರು ಸತ್ತು ಹೋದಾಗ ಅವರಿಗಾಗಿ ಅತ್ತವರು, ಏಸು ಮರಣಕ್ಕೆ ಬಾಧೆಪಡದೆ ಹಬ್ಬ ಮಾಡಿಕೊಂಡರೇ ಏಸು ದಯೆಗೆ ಪಾತ್ರರು ಹೇಗೆ ಆಗುತ್ತಾರೆ? ಆದ್ದರಿಂದ ಇಂದಿನಿಂದಾದರೂ ಎಲ್ಲರೂ ಹೇಳಿಕೊಳ್ಳುವ ಶುಭ ಶುಕ್ರವಾರವನ್ನು, ಅಶುಭ ಶುಕ್ರವಾರವಾಗಿ ಹೇಳಿಕೊಳ್ಳೋಣ. ಆ ದಿನವನ್ನು ಬಹಳ ಕೆಟ್ಟದಿನವಾಗಿ ಭಾವಿಸಿ, ಹಬ್ಬ ಮಾಡಿಕೊಳ್ಳದೇ ದುಃಖದಲ್ಲಿ ಮುಳುಗಿರುವುದರಿಂದ ಏಸುವನ್ನು ಗೌರವಿಸಿದಂತಾಗುತ್ತದೆ. ಹಾಗಲ್ಲದೇ ಹೋದರೇ **"ತುಟಿಗಳಿಂದ ದೊಡ್ಡದಾಗಿ ಹೇಳಿಕೊಂಡು, ಹೃದಯದಲ್ಲಿ ದೂರವಾಗಿ ಇಟ್ಟಂತಾಗುತ್ತದೆ."** ನೀವು ಏಸುವನ್ನು ಗೌರವಿಸಿದರೇ, ಪ್ರೀತಿಸಿದರೇ, ಆರಾಧಿಸಿದರೇ, ಪ್ರಾರ್ಥಿಸಿದರೇ ಶುಭ ಶುಕ್ರವಾರ ವನ್ನು ಅಶುಭ ಶುಕ್ರವಾರವಾಗಿ ಹೇಳಿ ಪ್ರಚಾರ ಮಾಡಿ, ಎಲ್ಲರಿಗೂ ಅರ್ಥವಾಗುವಹಾಗೆ ಮಾಡಿರಿ. ಆಗಲೇ ನೀವು ಏಸುವಿಗೆ ನಿಜವಾದ ಭಕ್ತನು ಆಗುತ್ತೀಯ. ಶುಭ ಶುಕ್ರವಾರವನ್ನು ಬಿಟ್ಟು ಹಾಕುವುದರಿಂದ ನಿನಗೆ ಏನೂ ಕೆಟ್ಟದ್ದು ನಡೆಯುವುದಿಲ್ಲ, ಒಳ್ಳೆಯದೇ ನಡೆಯುತ್ತದೆ.

ಇಂತಿ

**ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

*****

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರವು ಎಷ್ಟು ಅವಶ್ಯವೋ, ಹಾಗೆಯೇ ಒಂದು ವಿಷಯವನ್ನು ಖಂಡಿಸುವುದಕ್ಕೆ ಶಾಸ್ತ್ರವು ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರಜನ ಹೇಳಿದರೂ ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರಜನ ಅಲ್ಲಗಳೆದರೂ ಅದು ಅಸತ್ಯವಲ್ಲ.**

# ಒಂದು ಹಿಂದೂ ಲೇಖನ



**ಮೊದಲನೆಯದಾಗಿ ಸ್ವಾಮಿಯವರಿಗೆ ಸವಿನಯ ಸಾಷ್ಟಾಂಗ ಪ್ರಣಾಮಗಳು....**

ಜೈ ಶ್ರೀರಾಮ! ನನ್ನ ಹೆಸರು ಪಿಟ್ಟಲ ತಿರುಮಲೇಶ, ವಯಸ್ಸು 36, ಊರು ನಲ್ಗೊಂಡ ಜಿಲ್ಲೆ, ತೆಲಂಗಾಣ, ವೃತ್ತಿ ಉದ್ಯೋಗವು, ಕುಲ ಮುದಿರಾಜು (ಬೇಡರ ಕುಲ), ಮತ ಹಿಂದೂಮತ, ತಂದೆಯ ವೃತ್ತಿ ಮೊದಲು ವ್ಯಯಸಾಯ ನಂತರ ರಿಕ್ಷಾ ತುಳಿಯುತ್ತಿದ್ದನು, ತಾಯಿ ವೃತ್ತಿ ಹಣ್ಣುಗಳನ್ನು ಮಾರುವುದು, ಪ್ರಪಂಚ ಓದು MSc, BEd (Mathematics).

ಅಯ್ಯಾ! ನನ್ನ ಆಧ್ಯಾತ್ಮಿಕ ಪರಿಚಯವು ಸ್ವಲ್ಪವಾದರೂ ಈ ಸಮಾಜಕ್ಕೆ ಒಳಿತು ಮಾಡುತ್ತದೆಂಬ ಉದ್ದೇಶದಿಂದ ಈ ಲೇಖನವನ್ನು ನಿಮಗೆ ಬರೆಯಬೇಕಾಗಿ ಬಂದಿದೆ. ನಿಮ್ಮ ರಚನೆಯಾದ **"ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು"** ಎಂಬ ಗ್ರಂಥವನ್ನು ಓದಿದ ನಂತರ, ಈ ಲೇಖನ ಬರೆಯಬೇಕೆಂದು ಅನಿಸಿತು. ಒಬ್ಬ ಹಿಂದೂ (ಇಂದೂ) ಸ್ವಾಮೀಜಿಯವರು ಹೀಗೆ ಬೈಬಲ್ ಕುರಿತು ಗ್ರಂಥ ಬರೆಯುವುದು ಅತ್ಯಂತ ಸಾಹಸಕರವಾದ ಕಾರ್ಯವಾಗಿ ಸಾಧಾರಣ ಮನುಷ್ಯರಾದ ನಮಗೆ ಅನಿಸುತ್ತಿದೆ. ಏಕೆಂದರೇ! ಒಬ್ಬ ಸ್ವಾಮೀಜಿ 'ಭಗವದ್ಗೀತೆ' ಬರೆಯಬಹುದು ಆದರೇ, 'ಬೈಬಲ್' ಗ್ರಂಥ ಬರೆಯುವುದೇನೆಂದು ಯಾರಾದರೂ ಅಂದುಕೊಳ್ಳುತ್ತಾರೆ. ಆದರೇ ಇದಕ್ಕು ಮೊದಲೇ ನಿಮ್ಮ ರಚನೆಗಳಾದ ಭಗವದ್ಗೀತೆ, ಖುರಾನ್ ಓದಿದ್ದೇನೆ. ನಿಮ್ಮ ರಚನೆಯ ಮೂಲಕ ಪ್ರಸ್ತುತ ಬೈಬಲ್ ಜ್ಞಾನವು ಕೂಡಾ ತಿಳಿದುಕೊಂಡಿದ್ದೇನೆ. ಒಟ್ಟಾರೆ ಮೂರು ಮತಗಳವೊಂದು ಮೂರು ಮೂಲ ದೈವಗ್ರಂಥಗಳಲ್ಲಿನ ದೈವಜ್ಞಾನವನ್ನು ನಿಮ್ಮ ಮೂಲಕವೇ ಗ್ರಹಿಸಿಕೊಂಡಿದ್ದೇನೆ. ಸಮಾಜದಲ್ಲಿ ಇರುವ ಪ್ರಸ್ತುತ ಸ್ಥಿತಿ ತಿಳಿದು, ಈ ಲೇಖನ ಮೂಲಕ ಒಳ್ಳೆಯದು ನಡೆಯಬೇಕೆಂಬ ಸದುದ್ದೇಶದಿಂದ ನಮ್ಮ ಅಭಿಪ್ರಾಯ ವನ್ನು ಸ್ವಲ್ಪ ತಿಳಿಸುತ್ತಿದ್ದೇವೆ.

ನಾನು ಮೊದಲು ಓದಿರುವ ಗ್ರಂಥವು **"ತ್ರೈತಾಕಾರ ರಹಸ್ಯ."** ಬೆರ್ಮುಡಾ ಟ್ರಯಾಂಗಿಲ್‌ಗೆ ಹೋದ ವಿಮಾನಗಳು, ಹಡಗುಗಳು ಯಾಕೆ, ಹೇಗೆ ಅದೃಶ್ಯ ವಾಗುತ್ತಿವೆಯೆಂಬ ಅತಿ ರಹಸ್ಯವನ್ನು ಈ ಗ್ರಂಥದ ಮೂಲಕ ತಿಳಿದು ಕೊಂಡು, ಹಾಲಿವುಡ್ ಸಿನಿಮಾವನ್ನೇ ತಲೆಯೊಡೆಯುವ ವಿಧವಾಗಿ ಇರುವ ಆ ವಿಚಿತ್ರ ವಾಸ್ತವವನ್ನು ಗ್ರಹಿಸಿ ಎಷ್ಟೋ ಸಂತೋಷಿಸಿದ್ದೇನೆ. ಆ ನಂತರ **"ದೆವ್ವಗಳ–ಭೂತಗಳ ಯಥಾರ್ಥ ಸಂಘಟನೆಗಳು"** ಗ್ರಂಥವನ್ನು ಓದಿ 'ಸೂಕ್ಷ್ಮ ಪ್ರಪಂಚ' ವನ್ನು ಕುರಿತು ಶಾಸ್ತ್ರಬದ್ಧವಾದ ಸಮಾಚಾರ ತಿಳಿದಿದ್ದರಿಂದ **ದೇವರ ಪ್ರಭುತ್ವ, ದೈವಕಾನೂನು** ಯಾವ

ವಿಧವಾಗಿ ಇವೆಯೋ ಅರ್ಥವಾಗಿ ಅತ್ಯಂತ ಆಶ್ಚರ್ಯವನ್ನೊಂದಿ, ಇಂದಿಗಾದರೂ ಇಂತಹ ಅದ್ಭುತ ರಹಸ್ಯವನ್ನು ತಿಳಿಸಿರುವುದಕ್ಕೆ ನನ್ನ ದೇವರಿಗೆ ಸಂತೋಷವಾಗಿ ಕೃತಜ್ಞತೆಗಳು ತಿಳಿಸುತ್ತಿದ್ದೇನೆ. ನಂತರ **"ಸತ್ಯಾನ್ವೇಷಿ ಕಥೆ"" "ಶ್ರೀಕೃಷ್ಣನು ದೇವರಾ! ಭಗವಂತನಾ!!"** ಎಂಬ ಗ್ರಂಥಗಳನ್ನು ಓದಿದ್ದೇನೆ. ಶ್ರೀಕೃಷ್ಣನು ದೇವರಾ ಭಗವಂತನಾ ಗ್ರಂಥದಲ್ಲಿನ ಸಮಾಚಾರದ ಮೂಲಕ ಒಂದು ದೊಡ್ಡ ಅತೀ ರಹಸ್ಯವನ್ನು ತಿಳಿದುಕೊಂಡು ಅತ್ಯಂತ ಆನಂದಭರಿತನಾಗಿದ್ದೇನೆ. ಈಗ ನನ್ನ ಜನ್ಮಕ್ಕೆ ಗಮನ, ಗಮ್ಯ ದೊರೆತಿದೆ ಎಂದು ಸಂತೋಷದಿಂದ ಶ್ರೀಕೃಷ್ಣ ಮಂದಿರ, ಪ್ರಬೋಧಾಶ್ರಮ, ಚಿನ್ನಪೊಡಮಲ ದಲ್ಲಿನ ಶ್ರೀಕೃಷ್ಣಭಗವಂತನನ್ನು ದರ್ಶಿಸಿಕೊಂಡು ಹೇಳಲಾಗದಷ್ಟು ಆನಂದವನ್ನು ಪಡೆದಿದ್ದೇನೆ. ಜುಲೈ 2012 ರಲ್ಲಿ ಪ್ರಬೋಧಾಶ್ರಮವನ್ನು ದರ್ಶಿಸಿದಾಗಿನಿಂದ ಇಂದಿನವರೆಗು ನಿಮ್ಮ ಮೂಲಕ ಬೆಳಕಿಗೆ ಬಂದಿರುವ 93 ಗ್ರಂಥಗಳನ್ನು, 150 ಕ್ಕೂ ಹೆಚ್ಚಾಗಿ ಪ್ರವಚನಗಳಲ್ಲಿನ ದೈವಜ್ಞಾನ ಸಮಾಚಾರವನ್ನು ಗ್ರಹಿಸಿ, ನಿತ್ಯ ಆನಂದದಿಂದ ಪುಳಕಿಸುತ್ತಿದ್ದೇನೆ.

**"ದೇವಾಲಯ ರಹಸ್ಯಗಳು"** ಗ್ರಂಥದ ಮೂಲಕ ದೇವಾಲಯ ವಿಶಿಷ್ಠತೆ, ಪ್ರತ್ಯೇಕತೆಯನ್ನು, **"ಇಂದೂ ಸಂಪ್ರದಾಯಗಳು"** ಗ್ರಂಥದ ಮೂಲಕ ಅಡಗಿ ಹೋಗಿರುವ ಜ್ಞಾನ ಆಚಾರ ಸಂಪ್ರದಾಯಗಳ ವಾಸ್ತವ ಅರ್ಥವನ್ನು, ಗ್ರಹಿಸಿದೆನು. **"ನಮ್ಮ ಹಬ್ಬಗಳು"** ಗ್ರಂಥದ ಮೂಲಕ "ಹಬ್ಬ"ದಲ್ಲಿರುವ 'ಹಬ್ಬ' ಒಂದರ ಪ್ರತ್ಯೇಕತೆ ತಿಳಿಯುವುದೇ ಅಲ್ಲದೇ ಹಬ್ಬಗಳ ಮೂಲ ಉದ್ದೇಶವನ್ನು, ನಮ್ಮ ಹಿರಿಯರ ಮುಂದಾಲೋಚನೆಯ ಪ್ರಣಾಳಿಕಾ ಬದ್ಧ ಆಲೋಚನೆಯಲ್ಲಿನ ಆಂತರ್ಯವನ್ನು ಗ್ರಹಿಸಿದ್ದೇನೆ. ಈ ಗ್ರಂಥದಲ್ಲಿ ನೀವು ಹೇಳಿದ ಹಾಗೆಯೇ ಮೊದಲು ಆಧ್ಯಾತ್ಮಿಕತೆಯ ವಿಕಾಸದ ನಂತರ ವ್ಯಕ್ತಿಗತ ವಿಕಾಸವು, ಆ ನಂತರವೇ ಸಾಮಾಜಿಕ ವಿಕಾಸವು ನಡೆಯುತ್ತದೆನ್ನುವುದು ಖಂಡಿತವಾಗಿ 100% ಸತ್ಯ. ನಿಮ್ಮ ಮೂಲಕ ಬೆಳಕಿಗೆ ಬಂದಿರುವ ಪ್ರತಿ ಗ್ರಂಥವು ಒಂದು ಜ್ಞಾನ ಗನಿ. ಪ್ರತಿ ಬೋಧನೆಯು ಒಂದು ಧರ್ಮ ನಿಧಿ. ನಿಮ್ಮ ಮಾತುಗಳು ಮಾನವ ಜಾತಿಗೇ ಅಲ್ಲದೇ ಸರ್ವ ಜೀವರಾಶಿಗಳಿಗೂ ಶ್ರೇಯೋದಾಯಕವು. ಇದು ಕಳೆದ ಆರು ವರ್ಷಗಳಿಂದ ನಾನು ಗ್ರಹಿಸಿ, ಅನುಭವಿಸಿ ಹೇಳುತ್ತಿರುವ ಸತ್ಯವು.

ಚಕ್ರವರ್ತಿಯಷ್ಟು ದೊಡ್ಡವರಾದ ನಿಮ್ಮ ಮೇಲೆ ಕೂಡಾ ಸ್ವಮತವಾದ ಹಿಂದೂಮತಸ್ಥರೇ ಕೀಳಾದ ಮಾತುಗಳು ಹೇಳಿರುವುದರಿಂದ ಎಷ್ಟೋ ಬಾಧೆ ಭರಿತನಾದೆನು. ಆದರೆ ವಾಸ್ತವ ವಿಷಯಗಳು ಪ್ರತಿ ಒಬ್ಬರಿಗು ತಿಳಿಯಬೇಕೆನ್ನುವ

ಆಲೋಚನೆಯಿಂದ, ಈ ಲೇಖನ ಮೂಲಕ ಪ್ರಜೆಗಳೊಂದಿಗೆ ಸ್ವಲ್ಪ ಸಮಾಚಾರವನ್ನು ಹಂಚಿಕೊಳ್ಳುತ್ತಿದ್ದೇನೆ.

ಶ್ರೀಕೃಷ್ಣನ ನಿಜಭಾವವನ್ನು ತಿಳಿಸಿರುವುದು **ತ್ರೈತಸಿದ್ಧಾಂತ ಭಗವದ್ಗೀತೆ**. ಜಿಬ್ರಯೇಲ್ (ಸೂರ್ಯನ) ಮೂಲಕ ಮಹಮ್ಮದ್ ಪ್ರವಕ್ತಗೆ ಸೇರಿದ ದೈವಜ್ಞಾನವನ್ನು, ಈ ಲೋಕಕ್ಕೆ ಅರ್ಥವಾಗುವ ಹಾಗೆ ಮಾಡಿರುವವು ಸ್ವಾಮಿಯವರ ಗ್ರಂಥಗಳಾದ **"ಅಂತಿಮ ದೈವಗ್ರಂಥದಲ್ಲಿನ ಜ್ಞಾನ ವಾಕ್ಯಗಳು (704) ಪುಟಗಳು", "ಅಂತಿಮ ದೈವಗ್ರಂಥದಲ್ಲಿನ ವಜ್ರ ವಾಕ್ಯಗಳು (736) ಪುಟಗಳು"**, ಏಸುಪ್ರಭು ಹೇಳಿರುವ ಸುವಾರ್ತೆಗಳಲ್ಲಿನ ನಿಜ ಜ್ಞಾನವನ್ನು ಹೇಳಿರುವುದು ಯೋಗೀಶ್ವರರವರ ಗ್ರಂಥವು **"ದ್ವಿತೀಯ ದೈವಗ್ರಂಥದಲ್ಲಿನ ರತ್ನ ವಾಕ್ಯಗಳು (352 ಪುಟಗಳು)"**.

ಮತ ದ್ವೇಷದಿಂದ ರೊಚ್ಚಿಗೆಬ್ಬಿಸುವ ಗುಜ್ಜ ಬುದ್ಧಿಯಿರುವವರಿಗೆ, ಕರುಣೆಯಿಲ್ಲದ ಕರ್ಕೋಟಕ ಮತ ರಾಕ್ಷಸರಿಗೆ, ಹೆಸರಲ್ಲಿ ಹೊರತು ಆಚರಣೆಯಲ್ಲಿ ಇಲ್ಲದ ಅಸಂಪೂರ್ಣ ಜ್ಞಾನಿಗಳಾದ ಮತ ಹುಚ್ಚರಿಗೆ, ಆಶ್ರಮದ ಬೆಲೆ ತಿಳಿಯದ ರಾಕ್ಷಸ ರಾಜಕೀಯ ಗಣಕ್ಕೆ, ಕುಲಕಜ್ಜಿಯಿಂದ, ಮತ ಹುಚ್ಚಿನಿಂದ ಸಮಾಜವನ್ನು ತಪ್ಪುದಾರಿ ಹಿಡಿಸುತ್ತಿರುವ ಸುಳ್ಳು ಬೋಧಕರಿಗೆ, ಹೇತು ತಿಳಿಯದ ಹೇತುವಾದಿಗಳಿಗೆ, ಸತ್ಯ ತಿಳಿಯದ ಸತ್ಯಶೋಧಕ ಸಂಘಗಳಿಗೆ, ದೇವರು, ಆತ್ಮ, ಪೂಜೆ, ಜ್ಞಾನ ಎನ್ನುತ್ತಾ ಸಮಾಜವನ್ನು ಮೂಢ ಭಕ್ತಿಯೊಳಗೆ ತಳ್ಳಿ ಹಾಕುತ್ತಿರುವ ಪ್ರಪಂಚ ಹಿರಿಯರಿಗೆ ನನ್ನದೊಂದೇ ಬೇಡಿಕೆ, ದಯೆಮಾಡಿ ಒಂದು ಸಲ **"ತ್ರೈತ ಸಿದ್ಧಾಂತ"** ವೊಂದರ ಹಿರಿಮೆಯನ್ನು ತಿಳಿಯುವುದಕ್ಕೆ ಸ್ವಾಮಿಯವರ ಗ್ರಂಥಗಳಲ್ಲಿ ಯಾವ ಒಂದು ಗ್ರಂಥವನ್ನಾದರೂ ಪೂರ್ತಿಯಾಗಿ ಓದಿ, ಅದು ಏನು ಹೇಳುತ್ತಿದೆಯೋ ಶ್ರದ್ಧೆಯಿಂದ ಬುದ್ಧಿಯಿಂದ ತಿಳಿದುಕೊಳ್ಳಿ. ಸ್ವಾಮಿಯವರು ಬರೆದ ಒಂದು ವಾಕ್ಯವನ್ನು ಗಮನಿಸಿರಿ.

**"ಮತಗಳು ನಿಷೇಧವು, ನಿಷಿದ್ಧವು. ಕುಲಗಳು ಅಹೇತುಕವು, ಅಶಾಸ್ತ್ರೀಯವು. ಭಗವದ್ಗೀತೆ, ಬೈಬಲ್, ಖುರ್‌ಆನ್ ಮೂರು ಒಂದೇ ದೈವಗ್ರಂಥಗಳಲ್ಲಿನ ಭಾಗಗಳೇ. ನಿಮ್ಮ ಮನೋಭಾವವು ಕುಲ ಮತಗಳಿಗೆ ಅತೀತವಾದರೇ ಕೂಡಲೇ "ಪ್ರಬೋಧ ಸೇವಾಸಮಿತಿ"ಯಲ್ಲಿ ಸದಸ್ಯರಾಗಿ ಸೇರಿರಿ. ದೇವರು ನಿಮ್ಮನ್ನು ಜ್ಞಾನಿಗಳಾಗಿ ಮಾಡಬೇಕೆಂದು ಕೋರುತ್ತಿರುವ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು"**

ಮೇಲಿನ ವಾಕ್ಯವನ್ನು ಪ್ರವಚನೆ ಮಾಡುವುದೇ ಅಲ್ಲ, ಕುಲಾಂತರ ಮತಾಂತರ ವಿವಾಹಗಳು ಮಾಡಿ ಸ್ವಂತ ಅನುಭವದಿಂದ ಆಚರಿಸಿ ತೋರಿಸಿದ್ದಾರೆ ಸ್ವಾಮಿಯವರು.

ಅಂತಹ ದೊಡ್ಡ ಸ್ವಾಮಿಯವರ ಮೇಲೆ ಮತ ವಿದ್ವೇಷವು, ವಿಷಪೂರ್ಣ ಬರಹಗಳಾ? ಮನುಷ್ಯರೇ, ವಿಚಕ್ಷಣೆಯಿಂದ ಒಂದುಸಾರಿ ನಿಮಗೆ ನೀವೇ ಆಲೋಚಿಸಿರಿ.

ಸ್ವಾಮಿಯವರ ಗ್ರಂಥಗಳು ವೇಮನ ಪದ್ಯಗಳಲ್ಲಿನ ವಾಸ್ತವಿಕ ದೈವಜ್ಞಾನವನ್ನು ತಿಳಿಸಿವೆ. ವೀರಬ್ರಹ್ಮಯ್ಯನವರ ಆತ್ಮಜ್ಞಾನ ತತ್ತ್ವಗಳಲ್ಲಿನ ನಿಜ ಅಂತರ್ಯವನ್ನು ಹೇಳಿವೆ. ಆತ್ಮಲಿಂಗ ಶತಕದಲ್ಲಿನ ಆಧ್ಯಾತ್ಮಿಕ ಸಮಾಚಾರವನ್ನು ಸೂಚಿಸಿವೆ. ಈ ಲೋಕಕ್ಕೆ ತಿಳಿಯದ ಎಷ್ಟೋ ದೊಡ್ಡ ಆಧ್ಯಾತ್ಮಿಕ ರಹಸ್ಯಗಳು, ಮಾನವ ಜಾತಿಯ ಆಧ್ಯಾತ್ಮಿಕ ಅಭಿವೃದ್ಧಿಗೆ ದೈವಜ್ಞಾನ ಸಮಾಚಾರ ಆತನ ಮೂಲಕವೇ ತಿಳಿದಿದೆ. ಆತನ ಗ್ರಂಥಗಳ ಜ್ಞಾನವನ್ನು ಗ್ರಹಿಸಿರುವ ಎಷ್ಟೋ ಜನ ನಾಸ್ತಿಕರು ಪ್ರಸ್ತುತ ನಿಜವಾದ ಆಸ್ತಿಕರು ಆಗಿದ್ದಾರೆ. ಮೂಢರು ಸಹಿತ ಹೇತುವಾದಿಗಳಾಗಿದ್ದಾರೆ. ಮೂಢ ಭಕ್ತರು ಶಾಸ್ತ್ರೀಯ ವಿಧಾನದಿಂದ ಕೂಡಿರುವ ಆಧ್ಯಾತ್ಮಿಕ ಶಾಸ್ತ್ರ ನಿಪುಣರಾಗಿದ್ದಾರೆ. **ಉಗ್ರವಾದಿಗಳು** ಸಹಿತ ಬದಲಾಗಿ ದೈವಜ್ಞಾನಿಗಳಾಗಿದ್ದಾರೆ.

ಆತನ ಜ್ಞಾನವನ್ನು ತಿಳಿದುಕೊಂಡ

**ಒಬ್ಬ ಹಿಂದೂ – ನಿಜವಾದ ಇಂದೂ (ನಿಜವಾದ ಜ್ಞಾನಿ)**

**ಒಬ್ಬ ಕ್ರೈಸ್ಥವನು – ವಾಸ್ತವ ಕ್ರೈಸ್ಥವನು (ವಾಸ್ತವ ದೈವ ವಿಶ್ವಾಸಿ)**

**ಒಬ್ಬ ಮುಸ್ಲೀಮ್ – ಸತ್ಯವಾದ ಮುಸ್ಲೀಮ್ (ಸತ್ಯವಾದ ದೈವ ವಿಧೇಯನು)**

ಆತನ ಗ್ರಂಥಗಳು ಕರ್ಮ ನಿರ್ಮೂಲನೆ, ಪಾಪ ಕ್ಷಮಾಪಣೆ, ದೇವರ ಕ್ಷಮಾಶೀಲತೆ ಇರುವ ದೈವಜ್ಞಾನ ನಿಧಿಗಳು. ಭಕ್ತಿ ವಿಶ್ವಾಸಗಳಿಂದ ಆತನ ಗ್ರಂಥವನ್ನು ಬಾಧೆಯನ್ನುಂಟುಮಾಡುವ ಶರೀರ ಭಾಗದ ಮೇಲೆ ಇಟ್ಟುಕೊಂಡರೂ, ಆ ಬಾಧೆಗೆ ಕಾರಣವಾದ ಕರ್ಮವನ್ನು ನಾಶ ಮಾಡುವವರೆಗು, ಹಾಗೆಯೇ ಯಾವ ಆಧಾರವು ಇಲ್ಲದೇ ಅಂಟಿಕೊಂಡು, ಮನುಷ್ಯರಿಗೆ ಉಪಶಮನವನ್ನು ಉಂಟುಮಾಡುತ್ತಿವೆ. ಇದು ಆಶ್ಚರ್ಯವನ್ನುಂಟುಮಾಡಿದರೂ, ವಾಸ್ತವ ಅನುಭವದಿಂದ ಹೇಳುತ್ತಿರುವ ಕರ್ಣಕಠೋರ ಸತ್ಯವು.

ಆತನ ರಚನೆಗಳ ಮೂಲಕವೇ ಈ ಲೋಕಕ್ಕೆ ತ್ರೈತಾಯುಗ ದೇವರ ಅವತಾರವಾದ **'ಭಗವಾನ್ ರಾವಣಬ್ರಹ್ಮ'** ಕುರಿತಾದ ವಾಸ್ತವ (ಸತ್ಯ) ತಿಳಿದಿದೆ. ಎಲ್ಲರೂ ಹೇಳುತ್ತಿರುವ ಸೀತಾದೇವಿ ಕೂಡಾ ಮಾತಿನಿಂದ ರಾವಣಬ್ರಹ್ಮನನ್ನು ನಿಂಧಿಸಲಿಲ್ಲ. ಸೀತಾಪಹರಣ ಸಮಯಕ್ಕೆ ರಾವಣಬ್ರಹ್ಮನ ವಯಸ್ಸೆಷ್ಟೋ ಇಂದಿಗು

ಕೂಡಾ ರಾಮಾಯಣ ಬರೆದ ಆರ್ಯರು ಯಾಕೆ ಹೇಳಲಾರದೇ ಇದ್ದಾರೆ? ಈ ಒಂದು ಪ್ರಶ್ನೆಗೆ ಸಮಾಧಾನ ತಿಳಿದರೇ ರಾಮಾಯಣ ಒಂದರ ಅಂದಿನ ನಿಜವಾದ ಬಚ್ಚಿಟ್ಟ ಕಟ್ಟು ಕಥೆಗಳು ಹೊರಗೆ ಬರುತ್ತವೆ. ಹೆಂಡತಿಯಾದ ಮಂಡೋದರಿ ದೇವಿ, ಮೇಘನಾಥ ಪುತ್ರ ಸಮೇತನಾಗಿ ಅಶೋಕವನದಲ್ಲಿ ಸೀತಾದೇವಿಯನ್ನು ಸಂದರ್ಶಿಸಿದರೇ, ರಾವಣ ಬ್ರಹ್ಮನನ್ನು ಅನ್ನಬಾರದ ಮಾತುಗಳನ್ನಾಡಿ, ದುರ್ಮಾರ್ಗ ನನ್ನಾಗಿ ಚಿತ್ರೀಕರಿಸಿದ್ದಾರೆ ಯಾಕೆ? ವೃದ್ಧಾಪ್ಯ ವಯಸ್ಸಿನಲ್ಲಿ ರಾವಣಬ್ರಹ್ಮ ಸ್ವಯಂವರಕ್ಕೆ ಹೋಗದಿದ್ದರೂ, ಕೈಲಾಸ ಶಿಖರವನ್ನೇ ಸುಲಭವಾಗಿ ಎತ್ತಿ ತೋರಿಸಿರುವ ಆತನು, ಮೊಮ್ಮಗಳ ವಯಸ್ಸಿರುವ ಸೀತಾ ಸ್ವಯಂವರದಲ್ಲಿ ಶಿವಧನಸ್ಸನ್ನು ಎತ್ತಲಾರದೇ ಭಂಗಪಟ್ಟಿದ್ದಾನಾ? ಎಷ್ಟು ನಾಚಿಗೇಡು! ಪುತ್ರಿಕಾ ವಾತ್ಸಲ್ಯದಿಂದ ಸೀತಾದೇವಿಯ ಯೋಗಕ್ಷೇಮಕ್ಕಾಗಿ, ಆಕೆಯನ್ನು ತಾಕದೇ ತನ್ನ ಶ್ರೀಲಂಕ ಸುಭಿಕ್ಷ ರಾಜ್ಯಕ್ಕೆ ಕರೆದುಕೊಂಡುಹೋದರೇ, ಆತನನ್ನು ಕಾಮಾಂಧನು, ಮೋಹಾವೇಷನು ಎಂದು ಸುಳ್ಳು ಪ್ರಚಾರ ಮಾಡುತ್ತೀರಾ? ತಾಕಿದರೇನೇ ಸುಟ್ಟು ಹೋಗುತ್ತಾರೆಂದು ಹೇಳಿರುವ ನೀವೇ ಸೀತಾ ದೇವಿಯನ್ನು ಕರೆದುಕೊಂಡು ಹೋಗಿ ರಾವಣಬ್ರಹ್ಮ ಏನು ಮಾಡಿದ್ದಾ ನೆಂದು ಈ ಕುಸಂಸ್ಕಾರರು, ಕೆಲವು ಸ್ವಾರ್ಥವರರು ಆತನ ಮೇಲೆ ಪ್ರಣಾಳಿಕ ಬದ್ಧ ಕುತಂತ್ರಗಳನ್ನು ಹೂಡಿದ್ದಾರೆ? ಈಗಲಾದರೂ ಈ ಸಮಾಜವು ವಾಸ್ತವ ಶ್ರೀರಾವಣಾಯಣವನ್ನು ತಿಳಿಯಬೇಕು. ಸೀತೆ ಬಾಧೆಗಳು ತೀರುವುದು, ಭಗವಾನ್ ರಾವಣಬ್ರಹ್ಮ ಅವತಾರ ಸಮಾಪ್ತಯಂಥ ರಹಸ್ಯಗಳು ತಿಳಿದ ಮಂಡೋದರಿ ದೇವಿ ತನ್ನ ರಾಜ್ಯ ಪ್ರಜೆಗಳಿಗೆ ಸೀತಾದೇವಿಯ ಶ್ರೇಯಸ್ಸನ್ನು ಬಯಸಿ ಆಕೆಯನ್ನು ಲಂಕೆಗೆ ಕರೆದುಕೊಂಡು ಬಂದ್ದಿದ್ದಾನೆಂದು ಹೇಳುತ್ತಿದ್ದಳಂತೆ. ದೊಡ್ಡವರಾದ ಶ್ರೀ ಭಗವಾನ್ ರಾವಣಬ್ರಹ್ಮ, ಶ್ರೀಮತಿ ಮಂಡೋದರಿ ದೇವಿಯರ ಚಿತ್ರಪಟವನ್ನು ಕಣ್ಣಾರೆ ವೀಕ್ಷಿಸಬೇಕೆಂದು ನಮ್ಮ ಅಭಿಲಾಷೆ.

Face value ಇಲ್ಲದವರು Facebook ನಲ್ಲಿ, You (ನೀನು) ಯಾರೋ ತಿಳಿಯದವರು YouTube ನಲ್ಲಿ ಅನವಶ್ಯಕ ವ್ಯರ್ಥ ವಿಷಯಗಳನ್ನು ಹೇಳಿ, ದೈವದೂಷಣೆ ಮಾಡಿ ಯುಗಯುಗಗಳ ಕರ್ಮವನ್ನು ಅಂಟಿಸಿಕೊಳ್ಳಬೇಡಿ. ಸಾಧ್ಯವಾದರೇ ಕೇಳಿರಿ, ಇಲ್ಲದಿದ್ದರೇ ಕೇಳಬೇಡಿ. ಅಷ್ಟೇ ಹೊರತು ಧರ್ಮವು Definition ಕೂಡಾ ತಿಳಿಯದ, ಧರ್ಮಗಳು ಎಷ್ಟೋ ಕೂಡಾ ತಿಳಿಯದವರು Public TV ಛಾನಲ್‌ಗಳಿಗೆ ಬರುವುದಿಲ್ಲವೆ, ಬಹಿರಂಗ ಚರ್ಚೆಗಳಿಗೆ ಬರುವುದಿಲ್ಲವೆ ಎಂದು ಮತದ್ವೇಷವನ್ನು ಕಕ್ಕಬೇಡಿ.

ತ್ರೈತ ಸಿದ್ಧಾಂತ ಎನ್ನುವುದು ನಿಜವಾದ ಪ್ರಮಾಣ. ಈ ಅಳತೆಯಿಂದಲೇ ಉಳಿದ ರಾದ್ಧಾಂತಗಳನ್ನು ಅಳೆಯುವುದು. ಮತಗಳ ಜ್ಞಾನ ಬೆಲೆ ಏನೋ, ಮತದ್ವೇಷ ಸ್ಥಾಯಿ ಏನೋ ಹಾಗೆಯೇ ದೈವಜ್ಞಾನಶಕ್ತಿ ಏನೋ ತ್ರೈತಸಿದ್ಧಾಂತ ಜ್ಞಾನದ ಮೂಲಕವೇ ಈ ಲೋಕಕ್ಕೆ ತಿಳಿಯುತ್ತದೆ. ಏನು ನಡೆದರೂ ದೇವರ ಅನುಮತಿಯಿಂದಲೇ ನಡೆಯುತ್ತದೆನ್ನುವುದು ಪ್ರಬೋಧ ಸೇವಾ ಸಮಿತಿ ಮತ್ತು ಉಳಿದ ಐದು ಅನುಬಂಧ ಸೋದರ ಸಂಸ್ಥೆಗಳ ಪ್ರಗಾಢ ನಂಬಿಕೆ.

ಪ್ರಪಂಚ, ಪರಮಾತ್ಮ ಭಾವನೆಯವೊಂದು ವಿಭಜನೆ ತಿಳಿದರೇನೇ ಯಾವುದು ಆಧ್ಯಾತ್ಮಿಕ, ಯಾವುದು ಪ್ರಾಪಂಚಿಕ ಎಂದು ತಿಳಿಯುತ್ತದೆ. **ಆಧ್ಯಾತ್ಮಿಕ ವಿಕಾಸವನ್ನುಂಟು ಮಾಡುವ ಏಕೈಕ ಸಂಸ್ಥೆ ಪ್ರಬೋಧಾಶ್ರಮವು**. ಉಳಿದೆಲ್ಲವೂ ವ್ಯಕ್ತಿತ್ವ ವಿಕಾಸ ತರಗತಿಗಳಿಗೋ, ಸಮಾಜ ಅಭಿವೃದ್ಧಿಗೋ ಕೆಲಸ ಮಾಡುತ್ತಿವೆ. ಆದರೇ ಆಧ್ಯಾತ್ಮಿಕ ವಿಕಾಸ ಎನ್ನುವುದು ನಡೆಯದೆ ವ್ಯಕ್ತತ್ವ ವಿಕಾಸ, ಸಾಮಾಜಿಕ ವಿಕಾಸ ನಡೆಯುವುದಿಲ್ಲ ವೆಂದು ಪ್ರತಿ ಒಬ್ಬರೂ ಗುರುತಿಟ್ಟುಕೊಳ್ಳಬೇಕು.

ಯೋಗೀಶ್ವರರ ಜ್ಞಾನವು ಕುಲಮತ ರಹಿತವಾದುದು, ಅದಕ್ಕೇ ಆತನ ಹತ್ತಿರಕ್ಕೆ ವಿವಿಧ ಮತಸ್ಥರಾದ ಹಿಂದೂಗಳು, ಮುಸ್ಲೀಮ್‌ರು, ಕ್ರೈಸ್ಥರು ಮತ ಸಾಮರಸ್ಯದಿಂದ ಬಂದು ವಾಸ್ತವ ದೈವಜ್ಞಾನವನ್ನು ತಿಳಿದುಕೊಂಡು ಸಂತೋಷಿ ಸುತ್ತಿದ್ದಾರೆ. ಬ್ರಹ್ಮಯ್ಯನವರು ಹೇಳಿದ ಹಾಗೆ ಮೂರು ಮತಗಳನ್ನು ಒಂದು (ಏಕ) ಮಾಡುತ್ತಿದ್ದಾರೆ. ಹೌದು! ಬ್ರಹ್ಮಯ್ಯನವರ ಏಷ್ಯ ಕಾಲಜ್ಞಾನದಲ್ಲಿ ಹೇಳಿದ ಹಾಗೆ **"ಮಹಾ ದೇವತೆಗಳೆಲ್ಲರೂ ಆನಂಧಾಶ್ರಮ ಬಳಿಯೇ ಇದ್ದಾರೆ."** ದೇವತೆಗಳು ಬಂದು ತಮ್ಮ ತಂದೆಯ ಜ್ಞಾನ ತಿಳಿದುಕೊಂಡು ಸಂತೋಷದಿಂದ ರೋಮಾಂಚನ ಗೊಂಡು ಮಾತನಾಡುತ್ತಿದ್ದಾರೆ. **"ಪ್ರಬೋಧಾಶ್ರಮವು ಉನ್ನತವಾದ ಜ್ಞಾನ ಇರುವುದು. ಪ್ರಬೋಧಾಶ್ರಮದವರ ಆದಿಗುಣವೆಲ್ಲ ಶಯನಾಧಿಪತಿಗೆ ಇವೆ. ಶಯನಾಧಿಪತಿಯೇ ಆನಂದ ಗುರುವು. ಆನಂದ ಗುರುವು ನಿಮಗೂ ಗುರುವೇ, ನನಗೂ ಗುರುವೇ"** ಅಂತಹ ಸ್ವತಃವಾಗಿ ಬ್ರಹ್ಮಯ್ಯನವರು ಹೇಳಿರುವ ಇಂತಹ ವಾಕ್ಯ ಸಂದೇಶಗಳು ಸ್ವಾಮಿಯವರ ಗ್ರಂಥಗಳಲ್ಲಿ ಇವೆ. ಬುದ್ಧಿ ವಿಚಕ್ಷಣದಿಂದ, ದೈವ ಭಯದಿಂದ, ಶ್ರದ್ಧೆಯಿಂದ ಗ್ರಹಿಸಿರಿ.

ಭಗವದ್ಗೀತೆಯೇ ಓದದವರು ಹಿಂದೂ ಧರ್ಮ ರಕ್ಷಕರಾ? ಚರಿತ್ರೆಯಲ್ಲಿ ನಡೆದ ಅನ್ಯಾಯ ತಿಳಿಯದ ಮೂರ್ಖರು ಹಿಂದೂ ಮತವನ್ನು ಉದ್ಧರಿಸುತ್ತಾರಾ! "ಆದಿಯಲ್ಲಿನ ರಹಸ್ಯವು", "ಸೃಷ್ಠಿ ರಹಸ್ಯವು" ತಿಳಿಯದೇ ಸಮ ಸಮಾಜವನ್ನು

ನಿರ್ಮಿಸಬಲ್ಲರಾ? ಮತ ದ್ವೇಷದಿಂದ ಅಲ್ಲದೇ, ಸಹನೆಯಿಂದ ಸಮಯವನ್ನು ವೆಚ್ಚಿಸಿ ಸ್ವಾಮಿಯವರ ಗ್ರಂಥಗಳಲ್ಲಿನ, ಬೋಧನೆಗಳಲ್ಲಿನ ಒಳ್ಳೆಯದನ್ನು ಗ್ರಹಿಸಿರಿ, ನಿಮಗೆ ಕೆಟ್ಟದು ಎಂದು ಅನಿಸಿದರೇ ಬಿಟ್ಟು ಹಾಕಿ. ಎಲ್ಲರೂ ನಂಬಬೇಕೆಂದು ಕಡ್ಡಾಯವೇನು ಇಲ್ಲ ಅಲ್ಲವೇ!

ಮಾನವ ಜಾತಿಗೆ ಎಷ್ಟೋ ಒಳಿತು ಮಾಡುತ್ತಿರುವ, ಹೇತುಬದ್ಧವಾದ ಶಾಸ್ತ್ರೀಯವಾದ ಆಧ್ಯಾತ್ಮಿಕ ಚೈತನ್ಯವನ್ನು ಉಂಟುಮಾಡುತ್ತಿರುವ **ಜೀವಾತ್ಮ, ಆತ್ಮ, ಪರಮಾತ್ಮ** ಮೂರು ಆತ್ಮಗಳ ವಿವರಣೆಯಿಂದ **ಬ್ರಹ್ಮ, ಕರ್ಮ, ಭಕ್ತಿಯೋಗ** ರಹಸ್ಯಗಳನ್ನು ತಿಳಿಸುತ್ತಿರುವ **ತ್ರೈತ ಸಿದ್ಧಾಂತ ಗ್ರಂಥಗಳು, ತ್ರೈತಜ್ಞಾನ ಬೋಧನೆಗಳು** ಪ್ರಸ್ತುತ ಸಮಾಜಕ್ಕೆ ಅತ್ಯಂತ ಅಗತ್ಯವು.

UNO, World Peace Council, Police Acts, IPC, CrPc, Prison Acts, CBI, CBCID, Intelligence Reports, ACB, Human Rights Watch, Woman Rights, SC ST Attrocities Act, Indian Trusts Act, MuslimLaw, Christian Law, Labour Acts, Central Government GOs, State Govrnment GOs, Election Commission, Indian Constitution, Indian Courts, RTI Act, Information Technology Act 2000 ಇಂಥವೆಲ್ಲವು ವಾಸ್ತವವಾಗಿ ಪ್ರಜೆಗಳ ಸಂಕ್ಷೇಮಕ್ಕಾಗಿಯೇ ಇವೆ. ನಿಜವಾಗಿ 'ಪ್ರಜೆಗಳು' ಅಂದರೇ ಯಾರೋ, ಅವರ ಸುರಕ್ಷತೆಗಾಗಿ ವಾಸ್ತವವಾಗಿ ಒಳಿತು ಮಾಡುವ ಜ್ಞಾನವು ಏನೋ, ತಿಳಿಸಬೇಕಾಗಿರುವ ಹೊಣೆ ಆಧ್ಯಾತ್ಮಿಕ ಸಂಸ್ಥೆಗಳದ್ದು. ಅಂತಹ ಜವಾಬ್ದಾರಿ ಇರುವ ಸಂಸ್ಥೆಗಳಲ್ಲಿ ಮೊದಲ ಸ್ಥಾನದಲ್ಲಿ ಇರುವುದು ಪ್ರಬೋಧಾಶ್ರಮವು (ಮತ್ತು ಅದರ ಅನುಬಂಧ ಸೋದರ ಸಂಸ್ಥೆಗಳು ಆರು). ಎಲ್ಲದಕ್ಕೂ ಮೀರಿ **"ದೈವಕಾನೂನು, ದೈವಪರಿಪಾಲನೆ"** ಎನ್ನುವುದು ಕೂಡಾ ಒಂದು ಇದೆ ಎಂದು ನಾವು ಮರೆಯಬಾರದು.

ಮೂರು ಮೂಲ ದೈವಗ್ರಂಥಗಳ ಸಾರಾಂಶ ಮೂರು ಆತ್ಮಗಳನ್ನು ತಿಳಿಯುವುದೇ. ದೈವಜ್ಞಾನವಿಲ್ಲದ ಜೀವನ ವ್ಯರ್ಥ. ದೇವರು ಮನುಷ್ಯನಿಗೆ ಜನ್ಮಕೊಟ್ಟಿರು ವುದು ನಿಜ ದೈವಜ್ಞಾನವನ್ನು ತಿಳಿಯುವುದಕ್ಕೇ. ಕುಲಮತಗಳಿಗೆ ಅತೀತವಾದುದು ದೈವಜ್ಞಾನವು. ಅದಕ್ಕೇ ಯೋಗೀಶ್ವರರು ಶ್ರೀಕೃಷ್ಣ ಭಗವಾನನು ಮಾತ್ರವೇ ಹೇಳಿರುವ 'ಪ್ರಥಮ ದೈವಗ್ರಂಥ ಭಗವದ್ಗೀತೆ' ಯಲ್ಲಿನ ನಿಜ ಭಾವವನ್ನು, ಜಿಬ್ರಯೇಲ್ ಹೇಳಿರುವ ಜ್ಞಾನವನ್ನು ಗ್ರಹಿಸಿಕೊಂಡ ಮುಹಮ್ಮದ್ ಪ್ರವಕ್ತ ಮೂಲಕ ಬಂದಿರುವ ಅಂತಿಮ

ದೈವಗ್ರಂಥ ಖುರಾನ್‌ನಲ್ಲಿನ ಜ್ಞಾನ, ವಜ್ರ ಆಯತ್‌ಗಳನ್ನು, ಕಲಿಯುಗ ದೈವವಾದ ಏಸುಪ್ರಭು ಸುವಾರ್ತೆಗಳ ಜ್ಞಾನವನ್ನು "ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು" ಗ್ರಂಥದ ಮೂಲಕ ನಿಜವಾದುದು, ಆಚರಣೆಗೆ ಯೋಗ್ಯವಾದುದು ಆಗಿರುವ ನಿಜವಾದ ವಾಸ್ತವ ದೈವಜ್ಞಾನವನ್ನು ಗ್ರಂಥಗಳ ಮೂಲಕ, ಬೋಧನೆಗಳ ಮೂಲಕ ತಿಳಿಸುತ್ತಿದ್ದಾರೆ. ಆತನು ಹೇಳಿದಹಾಗೆ ಜ್ಞಾನವನ್ನು ತಿಳಿದುಕೊಂಡು 'ದೇವರ ಮುದ್ರೆ' ಧರಿಸಿ ಕರ್ಮ ನಿರ್ಮೂಲನೆ ಇಲ್ಲವೇ ಪಾಪಕ್ಷಮಾಪಣೆ (ರಕ್ಷಣೆ) ಇಲ್ಲವೇ, ದೇವರ (ಅಲ್ಲಾಹ್) ಕ್ಷಮಾಶೀಲತೆ ಹೊಂದಿರಿ. ಶ್ರದ್ಧೆಯಿಂದ ಕೇಳಿ ಗ್ರಹಿಸಿ ಆಚರಿಸಿದರೇ ಅದೃಷ್ಟ, ಕೇಳದಿದ್ದರೇ ನಿಮ್ಮ ಕರ್ಮ. ಎಲ್ಲಾ ದೇವರ ಇಷ್ಟದ ಪ್ರಕಾರವೇ, ದೇವರಿಗೆ ತಿಳಿದೇ ನಡೆಯುತ್ತದೆ.

**ಹಿಂದೂಗಳು, ಯಾವ ದೇವರನ್ನು ಆರಾಧಿಸಬೇಕೋ**
**ಮುಸ್ಲೀಮ್‌ರು, ಇಬ್ಬರು ಅಲ್ಲಾಹ್‌ರು (ಇಬ್ಬರು ಸೃಷ್ಟಿಕರ್ತರು) ಅಂದರೇ ಯಾರೋ**
**ಕ್ರೈಸ್ಥವರು, ಇಬ್ಬರು ಕುಮಾರರು ಅಂದರೇ ಯಾರೋ** ತಿಳಿಯಿರಿ.

'ಮನುಷ್ಯ ದೇವರಲ್ಲ ಆದರೇ, ದೇವರು ಮನುಷ್ಯನಾಗಿ ಬರಬಹುದು.' ಮನುಷ್ಯನ ರೂಪದಲ್ಲಿರುವ ಆ ದೇವರನ್ನು ಗುರುತುಹಿಡಿಯಬೇಕೆಂದರೇ ಮೊದಲು ಆತನ ಜ್ಞಾನ ನಮ್ಮಲ್ಲಿ ಇರಬೇಕು. ದೇವರನ್ನು ಗುರುತಿಸುವುದಕ್ಕೆ ಹಿರಿಯರು ಹೇಳಿರುವ ಎರಡು ಸೂತ್ರಗಳನ್ನು ಅನ್ವಯಿಸಿಕೊಳ್ಳಬೇಕು. **"ಸಾವಿರ ವಿಧಗಳಮರು ವೇಮನ ಪದ್ಯದಲ್ಲಿ"** ಎಂದಂತೆ, **"ತ್ರೈತ ಗ್ರಂಥಗಳಮರು ಒಂಭತ್ತು ಸಾವಿರ"**. **"ಶ್ರದ್ಧಾವಾನ್ ಲಭತೇ ಜ್ಞಾನಮ್"** ಪ್ರಕಾರ ಶ್ರದ್ಧೆ, ಬುದ್ಧಿ ಇರುವವರೇ ತ್ರೈತ ಜ್ಞಾನವನ್ನು ಅರ್ಥ ಮಾಡಿಕೊಳ್ಳಬಲ್ಲರು.

ಈಗಲಾದರೂ ಕುಲಮತಗಳ ಮೇಲಿನ ಗಮನವನ್ನು ಬಿಟ್ಟು ವಾಸ್ತವ ದೈವ ಜ್ಞಾನವನ್ನು ತಿಳಿಯಿರಿ. ಈಗ ತಿಳಿದುಕೊಳ್ಳದೆ ಹೋದರೇ ಮತ್ತೆ ಎಂದಿಗೂ ತಿಳಿಯಲಾರರು.  Time is Short, Do it Now.

ನಮಗೆ ಇನ್ನಷ್ಟು ದೈವಜ್ಞಾನ ಸಮಾಚಾರವನ್ನು ತಿಳಿಸಬೇಕೆಂದು, ಯೋಗೀಶ್ವರರ ಪಾದಪದ್ಮಗಳಿಗೆ ಸುಪರಿಮಳ, ಸುಗಂಧ, ಸುಮಗಳನ್ನು ಅರ್ಪಿಸುತ್ತಾ, ನನ್ನ ಪೂರ್ಣ ಬುದ್ಧಿಯಿಂದ, ನನ್ನ ಪೂರ್ಣ ಮನಸ್ಸಿನಿಂದ, ನನ್ನ ಪೂರ್ಣ ಜೀವಾತ್ಮದಿಂದ ಆತನಾದ ಆತನಿಗೆ ಶತಕೋಟಿ ಸವಿನಯ ಸಾಷ್ಟಾಂಗ ಪ್ರಣಾಮಗಳು.

ಇಂತಿ
ನಿಮ್ಮ ವಿಧೇಯನು
**ತಿರುಮಲೇಶ**